ಆಧುನಿಕ ಭಾರತದ ನಿರ್ಮಾಪಕರು

# ದಿವಾನ್ ರಂಗಾಚಾರ್ಲು

ನಿ. ಶ್ರೀ. ಚಂದ್ರಶೇಖರ

# ಈ ಮಾಲೆಯನ್ನು ಕುರಿತು

ನಮ್ಮ ರಾಷ್ಟ್ರೀಯ ಪುನರುಜ್ಜೀವನ ಕಾರ್ಯದಲ್ಲಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸಿರುವಂತಹ ಭಾರತದ ಖ್ಯಾತ ಪುತ್ರ ಪುತ್ರಿಯರ ಜೀವನ ಚರಿತ್ರೆಗಳನ್ನು ಪ್ರಕಟಿಸುವುದು "ಆಧುನಿಕ ಭಾರತದ ನಿರ್ಮಾಪಕರ ಮಾಲೆಯ" ಉದ್ದೇಶವಾಗಿದೆ.

ಈ ಮಹಾವ್ಯಕ್ತಿಗಳ ಬಗ್ಗೆ ಕೆಲವು ಮುಖ್ಯ ಸಂಗತಿಗಳನ್ನಾದರೂ ತಿಳಿದು ಕೊಳ್ಳುವುದು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ತೀರಾ ಅಗತ್ಯ. ಆದರೆ ಸಪ್ರಮಾಣವಾದ, ಅಧಿಕಾರಯುಕ್ತವಾದ ಜೀವನಚರಿತ್ರೆಗಳು ಈ ಮಹಾ ಪುರುಷರ ಪೈಕಿ ಕೆಲವರನ್ನು ಬಿಟ್ಟು ಮಿಕ್ಕವರ ವಿಷಯದಲ್ಲಿ ಬಂದಿಲ್ಲ. ಈ ಲೋಪವನ್ನು ನಿವಾರಿಸಲು ಸಾಧ್ಯವಾಗುವಂತೆ ಈ ಮಾಲೆಯನ್ನು ರೂಪಿಸಲಾಗಿದೆ. ವಿಷಯವನ್ನು ಚೆನ್ನಾಗಿ ಬಲ್ಲ ಹಾಗೂ ಸಮರ್ಥರಾದಂತಹ ವ್ಯಕ್ತಿಗಳಿಂದ ನಮ್ಮ ಖ್ಯಾತ ಮುಖಂಡರ ಸರಳ ಹಾಗೂ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನು ಬರೆಸಲಾಗುತ್ತಿದೆ. ಈ ಪುಸ್ತಕಗಳು ಒಂದೊಂದೂ ಸಹ 200 ರಿಂದ 250 ಪುಟಗಳಿರುತ್ತದೆ. ಸಮಗ್ರವೂ ವಿಸ್ತಾರವೂ ಆದ ಈ ಮಹಾವ್ಯಕ್ತಿಗಳ ಜೀವನಚರಿತ್ರೆಗಳ ಸ್ಥಾನವನ್ನು ಈ ಪುಸ್ತಕಗಳು ತೆಗೆದುಕೊಳ್ಳುವುದಿಲ್ಲ.

ಈ ಜೀವನ ಚರಿತ್ರೆಗಳನ್ನು ಒಂದು ಕಾಲಕ್ರಮವಾಗಿ ವಿಂಗಡಿಸಿ ಒಂದು ಕ್ರಮದಲ್ಲಿ ಪ್ರಕಟಿಸುವುದು ಅಪೇಕ್ಷಣೀಯವಾದಾಗ್ಯೂ ಅದು ಸಾಧ್ಯವಾಗದು. ಈ ಕೃತಿಗಳನ್ನು ಬರೆಯುವ ಕೆಲಸವನ್ನು ವಿಷಯವನ್ನು ಚೆನ್ನಾಗಿ ಬಲ್ಲ ವ್ಯಕ್ತಿಗಳಿಗೆ ವಹಿಸಿಕೊಡಬೇಕಾಗುತ್ತದೆ. ಆದರಿಂದ ಐತಿಹಾಸಿಕ ಅನುಕ್ರಮವನ್ನು ಅನುಸರಿಸದೇ ಇರಲು ಸಾಧ್ಯವಿದೆ. ಆದಾಗ್ಯೂ ಅಲ್ಪ ಕಾಲಾವಧಿಯೊಳಗಾಗಿ ರಾಷ್ಟ್ರ ಜೀವನದಲ್ಲಿ ಪ್ರಮುಖರಾಗಿದ್ದ ಎಲ್ಲ ಮುಖಂಡರ ಜೀವನಚರಿತ್ರೆಗಳನ್ನೂ ಈ ಮಾಲೆಯಲ್ಲಿ ತರಲಾಗುವುದೆಂದು ಆಶಿಸಲಾಗಿದೆ.

ಶ್ರೀ ರಂಗನಾಥ ರಾಮಚಂದ್ರ ದಿವಾಕರ ಅವರು ಈ ಮಾಲೆಯ ಪ್ರಧಾನ ಸಂಪಾದಕರು.

ಚಿಟ್ಟಪುಣ್ಯಂ ವೀರವಳ್ಳಿ ರಂಗಾಚಾರ್ಲು ಅವರು 1881ರಲ್ಲಿ ಬ್ರಿಟಿಷರು ಮೈಸೂರನ್ನು ಮಹಾರಾಜರಿಗೆ ವಹಿಸಿಕೊಟ್ಟ ಅನಂತರ ನೇಮಕವಾದ ಸಂಸ್ಥಾನದ ಪ್ರಪ್ರಥಮ ದಿವಾನರು. ಅವರು ವಿದ್ಯಾರ್ಥಿಗಳಾಗಿ ವಿಶೇಷ ಪ್ರಶಸ್ತಿಗಳಿಸಿದರು. 1831ರಲ್ಲಿ ಜನ್ಮತಾಳಿದ ರಂಗಾಚಾರ್ಲುರವರು 1850ರಲ್ಲಿ ಮದರಾಸ್ ಸರ್ಕಾರದ ಅಧಿಕಾರಿಗಳಾಗಿ ನಿಯುಮಿತರಾದರು. ತಮ್ಮ ಅಸಾಧಾರಣ ಪ್ರತಿಭೆಯಿಂದಲೂ, ಕುಶಾಗ್ರಮತಿಯಿಂದಲೂ ಮದರಾಸ್ ಸರ್ಕಾರದಲ್ಲಿ ಉನ್ನತ ಹುದ್ದೆಗಳಿಗೆ ಅವರು ಏರಿದರು. ಮದರಾಸಿನಿಂದ ಮೈಸೂರು ಸರ್ಕಾರಕ್ಕೆ ನಿಯೋಜಿಸಲ್ಪಟ್ಟು ಅರಮನೆಯ ನಿಯಂತ್ರಣಾಧಿಕಾರಿಗಳೂ, ಮಹಾರಾಜರ ಸಹಾಯಕ ಪೋಷಕರೂ, ಕಂದಾಯ ಇಲಾಖಾ ಕಾರ್ಯದರ್ಶಿಗಳೂ ಆಗಿ ಅವರು ಸೇವೆ ಸಲ್ಲಿಸಿದರು. 1881ರಲ್ಲಿ ಅವರು ಮೈಸೂರಿನ ದಿವಾನರಾಗಿ ನೇಮಕಗೊಂಡರು.

ರಂಗಾಚಾರ್ಲುರವರು ಜನವರಿ 1883ರಲ್ಲಿ ನಿಧನಹೊಂದುವ ವೇಳೆಗೆ ಮೈಸೂರು ದೇಶೀಯ ಸಂಸ್ಥಾನಗಳಲ್ಲಿ ಅತ್ಯಂತ ಪ್ರಗತಿಪರ ಹಾಗೂ ಉಛ್ರಾಯ ಸ್ಥಿತಿಗೆ ಬಂದ ಸಂಸ್ಥಾನಗಳಲ್ಲೊಂದೆಂಬ ಖ್ಯಾತಿಗಳಿಸಿತ್ತು. ಪರಂಪರಾಗತವಾಗಿ ಊಳಿಗಮಾನ್ಯ ಪದ್ಧತಿಯನ್ನು ಪಡೆದ ಪ್ರದೇಶವೊಂದರಲ್ಲಿ ಪ್ರಜಾಸತ್ತಾತ್ಮಕ ವಿಧಾನವನ್ನು ಜಾರಿಗೆ ತಂದುದೂ, ಅಂತಹ ಪ್ರದೇಶದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದುದೂ ಅವರ ಇನ್ನೊಂದು ಮಹತ್ಸಾಧನೆಯಾಗಿದೆ. ಅವರ ಕಾಲದಲ್ಲಿದ್ದ ಅಸಾಧಾರಣ ವ್ಯಕ್ತಿಗಳ ಪೈಕಿ ರಂಗಾಚಾರ್ಲುರವರೂ ಒಬ್ಬರು. ದೇಶಾಭಿಮಾನಿಗಳೂ, ದೂರದರ್ಶಿಗಳೂ ಆಗಿದ್ದ ರಂಗಾಚಾರ್ಲುರವರು ಆಧುನಿಕ ಭಾರತದ ಶಿಲ್ಪಿಗಳಲ್ಲಿ ಗೌರವಾನ್ವಿತವಾದ ಸ್ಥಾನವನ್ನು ಅಲಂಕರಿಸಿದ್ದಾರೆ.

ಒಬ್ಬ ಮಹಾವ್ಯಕ್ತಿಯ ಶೀಲ ಸ್ವಭಾವಗಳ ಸೂಕ್ಷ್ಮ ಒಳನೋಟವನ್ನು ನೀಡುವ ಈ ಜೀವನಚರಿತ್ರೆಯು ಓದುಗರಲ್ಲಿ ವಿಶೇಷವಾದ ಆಸಕ್ತಿಯನ್ನು ಮೂಡಿಸುವುದರಲ್ಲಿ ಸಂಶಯವಿಲ್ಲ.

—O—



ರಂಗಾಚಾರ್ಲು

ಆಧುನಿಕ ಭಾರತದ ನಿರ್ಮಾಪಕರು

# ದಿವಾನ್ ರಂಗಾಚಾರ್ಲು

ನಿ. ಶ್ರೀ. ಚಂದ್ರಶೇಖರ



ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಸಚಿವಾಲಯ
ಭಾರತಸರಕಾರ

ಫೆಬ್ರವರಿ 1975 (February 1975)
ಮಾಘ 1897 (Magha 1897)

Dewan Rangacharlu
(Kannada)



ಬೆಲೆ: ಎಂಟು ರೂಪಾಯಿಗಳು
Price: Rs 8-00.

ಮುಖ್ಯಾಧಿಕಾರಿಗಳು, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಪಾಟಿಯಾಲ ಹೌಸ್, ನವದೆಹಲಿ-1, ಇವರಿಂದ ಪ್ರಕಟಿತ: ಪ್ರಧಾನ್ ಪ್ರಿಂಟರ್ಸ್, ಬೆಂಗಳೂರು-2 ಇವರಿಂದ ಮುದ್ರಿತ.

ಮೈಸೂರು ಸಂಸ್ಥಾನದ ಹಂಗಾಮಿ ದಿವಾನರಾಗಿದ್ದ
ಈ ಲೇಖಕನ ಪೂಜ್ಯ ಮಾತಾಮಹರಾದ
ದಿವಂಗತ ಸರ್ ಎಂ. ಎನ್. ಕೃಷ್ಣರಾಯರ
ಪವಿತ್ರ ನೆನಪಿಗಾಗಿ ಈ ಪುಸ್ತಕವನ್ನು ಭಕ್ತಿಪೂರ್ವಕವಾಗಿ
ಅರ್ಪಿಸಲಾಗಿದೆ.

## ವಿಷಯ ಸೂಚಿಕೆ

# ಕನ್ನಡ ಗ್ರಂಥಕ್ಕೆ ಮುನ್ನುಡಿ

ದಿವಾನ್ ರಂಗಾಚಾರ್ಲುರವರ ವಿಷಯದಲ್ಲಿ ನಾನು ಇಂಗ್ಲಿಷಿನಲ್ಲಿ ಬರೆದ ಜೀವನಚರಿತ್ರೆಯನ್ನು ಭಾರತ ಸರ್ಕಾರದ ಪ್ರಕಾಶನ ವಿಭಾಗದವರು ಪ್ರಕಟಿಸಿ ಎರಡು ವರ್ಷಗಳಾಗಿವೆ. ಇಂಗ್ಲಿಷ್ ಪುಸ್ತಕದ ಕನ್ನಡ ಭಾಷಾಂತರವನ್ನು ಪ್ರಕಟಿಸಬೇಕೆಂದು ತಾವು ಅಭಿಪ್ರಾಯವುಳ್ಳವರಾಗಿರುವರೆಂದೂ, ಭಾಷಾಂತರವನ್ನು ನಾನು ಕೈಗೊಳ್ಳುವುದಾದರೆ ಅದನ್ನು ನನಗೆ ವಹಿಸುವುದಾಗಿಯೂ ಸುಮಾರು ಒಂದು ವರ್ಷದ ಹಿಂದೆ ಪ್ರಕಾಶನ ವಿಭಾಗದವರು ನನ್ನನ್ನುಕೇಳಿದರು. ದಿವಾನ್ ರಂಗಾಚಾರ್ಲುರವರ ಜೀವನಚರಿತ್ರೆಯನ್ನು ಕನ್ನಡದಲ್ಲಿ ಬರೆಯುವ ಕಾರ್ಯವನ್ನು ನಾನು ಸಂತೋಷದಿಂದ ಒಪ್ಪಿಕೊಂಡೆ.

ಈ ಪುಸ್ತಕವು ಇಂಗ್ಲಿಷ್ ಗ್ರಂಥದ ಭಾಷಾಂತರವಲ್ಲ. ಅದರಲ್ಲಿರುವ ವಿಷಯಗಳನ್ನೂ, ಅದರಲ್ಲಿಲ್ಲದ ವಿಷಯುಗಳನ್ನೂ ಒಳಗೊಂಡು ಈ ಜೀವನ ಚರಿತ್ರೆ ರೂಪಗೊಂಡಿದೆ. ಇಂಗ್ಲಿಷ್ ಭಾಷೆಯ ಓಟ ಅಂತರ್ಧರ್ಮ ನುಡಿಗಟ್ಟುಗಳಿಗೂ, ಕನ್ನಡ ಭಾಷೆಯ ಓಟ ಅಂತರ್ಧರ್ಮ ನುಡಿಗಟ್ಟುಗಳಿಗೂ ವಿಶೇಷವಾದ ವ್ಯತ್ಯಾಸವಿದೆ. ಅಕ್ಷರಶಃ ಭಾಷಾಂತರ ಕೃತಕವಾಗುತ್ತದೆ, ಬಹುಶಃ ವಿಕೃತಿಯಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದ ದೊರಕಿದ ಸಾಮಗ್ರಿಯನ್ನು ಉಪಯೋಗಿಸಿಕೊಂಡು, ಇಂಗ್ಲಿಷ್‌ಗ್ರಂಥದಲ್ಲಿ ನಿರೂಪಿತವಾದ ವೃತ್ತಾಂತ ಅಭಿಪ್ರಾಯಗಳನ್ನಾವುವನ್ನೂ ಬಿಡದೇ ಈ ಕನ್ನಡ ಜೀವನಚರಿತ್ರೆಯನ್ನು ಬರೆಯಲಾಗಿದೆ.

ಬೆಂಗಳೂರಿನ ಹಿರಿಯ ವಕೀಲರೂ, ಗೌರವಾರ್ಹರೂ ಆದ ಶ್ರೀ ಎಂ. ಪಿ. ಸೋಮಶೇಖರರಾಯರು, ತಮ್ಮ ಪೂಜ್ಯ ತಂದೆಯವರೂ, ಕನ್ನಡದಲ್ಲಿ ಪ್ರಸಿದ್ಧ ಲೇಖಕರೂ ಆದ ಕೀರ್ತಿಶೇಷ ಎಂ. ಎಸ್. ಪುಟ್ಟಣ್ಣನವರು ರಂಗಾಚಾರ್ಲುರವರ ಜೀವನಚರಿತ್ರೆಯನ್ನು ಆರಂಭಿಸಿ ಬರೆದಿದ್ದ 60 ಪುಟಗಳನ್ನು ನನ್ನ ಅವಗಾಹನೆಗೆ ಕೊಟ್ಟಿದ್ದಾರೆ. ಎಂ. ಎಸ್. ಪುಟ್ಟಣ್ಣನವರ ಅಪೂರ್ಣವಾದ ಈ ಹಸ್ತಪ್ರತಿಯಲ್ಲಿ ರಂಗಾಚಾರ್ಲುರವರ ಬಗೆಗೆ ಅನೇಕ ವಿಷಯಗಳಿವೆ. ಎಂ. ಎಸ್.

ಪುಟ್ಟಣ್ಣನವರು ರಂಗಾಚಾರ್ಲುರವರ ಆಪ್ತರಾಗಿದ್ದವರು. ಆದ್ದರಿಂದ ಈ ಹಸ್ತಪ್ರತಿಯಲ್ಲಿ ನಿರೂಪಿತವಾಗಿರುವ ವಿಷಯಗಳು ಅಮೂಲ್ಯವಾದವು. ಅಲ್ಲದೇ ಮೇಜರ್ ಇಲಿಯಟ್‌ರವರು ಮೈಸೂರಿನ ಮುಖ್ಯ ಆಡಳಿತಗಾರರಿಗೆ ಅರಮನೆಯ ಪುನರ್ವ್ಯವಸ್ಥೆ, ಮಹಾರಾಜರ ಸಾಲದ ಏರ್ಪಾಡು ಮುಂತಾದ ವಿಷಯಗಳಲ್ಲಿ ಸಲ್ಲಿಸಿದ ವರದಿಗಳನ್ನೂ, ಮೈಸೂರಿನ ಮುಖ್ಯ ಆಡಳಿತಗಾರರಿಗೂ—ಭಾರತ ಸರ್ಕಾರಕ್ಕೂ, ಮೇಜರ್ ಇಲಿಯಟ್‌ರವರಿಗೂ—ಮುಖ್ಯ ಆಡಳಿತಗಾರರಿಗೂ ನಡೆದ ಪತ್ರವ್ಯವಹಾರವನ್ನೂ ಒಳಗೊಂಡು 1869ರಲ್ಲಿ ಪ್ರಕಟವಾದ ಗ್ರಂಥವನ್ನು ಶ್ರೀ ಸೋಮಶೇಖರರಾಯರು ನನ್ನ ಅವಗಾಹನೆಗೆ ಕೊಟ್ಟಿದ್ದಾರೆ. ಈ ಹಿರಿಯರು ತೋರಿಸಿದ ಪ್ರೀತಿ ಅಭಿಮಾನಗಳಿಗೂ ಅವರು ಈ ಅಮೂಲ್ಯವಾದ ಸಾಮಗ್ರಿಗಳನ್ನು ನನಗೆ ಕೊಟ್ಟುದಕ್ಕಾಗಿಯೂ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಶ್ರೀ ಸೋಮಶೇಖರರಾಯರು ತಾತಯ್ಯ ಸ್ಮಾರಕ ಸಂಚಿಕೆಯಲ್ಲಿ ಕೀರ್ತಿಶೇಷ ಎಂ. ವೆಂಕಟಕೃಷ್ಣಯ್ಯನವರ ವಿಷಯದಲ್ಲಿ ಬರೆದ ಲೇಖನದಲ್ಲಿ ರಂಗಾಚಾರ್ಲುರವರಿಗೆ ಸಂಬಂಧಪಟ್ಟ ಹಲವು ವಿಷಯಗಳಿವೆ. ಅವನ್ನು ನಾನು ಉಪಯೋಗಿಸಿಕೊಂಡಿದ್ದೇನೆ.

ಗೋಖಲೆ ಸಾರ್ವಜನಿಕ ಸಂಸ್ಥೆಯವರು ತಮ್ಮ ಗ್ರಂಥಭಂಡಾರದಲ್ಲಿರುವ ಕನ್ನಡದ ಅತ್ಯಂತ ಹಳೆಯ ಪತ್ರಿಕೆಗಳಲ್ಲೊಂದಾದ "ಕರ್ಣಾಟಕ ಪ್ರಕಾಶಿಕಾ" ಪತ್ರಿಕೆಯ ಸಂಚಿಕೆಗಳನ್ನು ನೋಡಲು ನನಗೆ ಅವಕಾಶ ಕೊಟ್ಟಿರುವರು. ಅದಕ್ಕಾಗಿ ಆ ಸಂಸ್ಥೆಗೂ ಅದರ ವ್ಯವಸ್ಥಾಪಕರಾದ ಶ್ರೀ ಎಸ್. ವೆಂಕಟಾಚಲಪತಿಯವರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಕೊನೆಯಲ್ಲಿರುವ ಅನುಬಂಧದಲ್ಲಿ ರಂಗಾಚಾರ್ಲುರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಎರಡು ಭಾಷಣಗಳನ್ನು ಸೇರಿಸಲಾಗಿದೆ. ಅವುಗಳ ಭಾಷಾಂತರದಲ್ಲಿ ನನ್ನ ಮಿತ್ರರಾದ, ಆಚಾರ್ಯ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿರುವ ಎಸ್. ಜಿ. ಚಂದ್ರಶೇಖರಯ್ಯನವರು ನನಗೆ ಸಹಾಯಮಾಡಿದ್ದಾರೆ. ಅವರಿಗೆ ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಮೈಸೂರು ವಿಧಾನಮಂಡಲದ ಕಾರ್ಯಾಲಯದಲ್ಲಿರುವ ಕನ್ನಡ ವರದಿಗಾರರಾದ ಶ್ರೀ ಎಸ್. ಶ್ರೀನಿವಾಸಮೂರ್ತಿಯವರಿಗೆ ನಾನು ಈ ಪುಸ್ತಕವನ್ನು

ಹೇಳಿ ಬರೆಯಿಸಿದ್ದೇನೆ. ಅವರು ತಮ್ಮ ಕಾರ್ಯದಲ್ಲಿ ತೋರಿಸಿದ ತಾಳ್ಮೆ ಶ್ರದ್ಧೆಗಳಿಗಾಗಿಯೂ, ಈ ಗ್ರಂಥದ ಕರಡುಪ್ರತಿಯನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿಕೊಟ್ಟುದಕ್ಕಾಗಿಯೂ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಗ್ರಂಥವನ್ನು ರಚಿಸುವ ಕಾರ್ಯವನ್ನು ನನಗೆ ವಹಿಸಿದ್ದಕ್ಕಾಗಿ ಭಾರತಸರ್ಕಾರದ ಪ್ರಕಾಶನ ವಿಭಾಗದವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ನಿ. ಶ್ರೀ. ಚಂದ್ರಶೇಖರ

ಬೆಂಗಳೂರು
ಶ್ರಾವಣ ಶುದ್ಧ ಪಾಡ್ಯಮಿ,
ಸೋಮವಾರ
ಸಾಧಾರಣ ನಾಮ ಸಂವತ್ಸರ
3—8—1970

—0—

# ಇಂಗ್ಲಿಷ್ ಗ್ರಂಥಕ್ಕೆ ಮುನ್ನುಡಿ

ಮೈಸೂರು ಸಂಸ್ಥಾನವನ್ನು 1881ರಲ್ಲಿ ಬ್ರಿಟಿಷರು ಮೈಸೂರಿನ ರಾಜಮನೆತನಕ್ಕೆ ಹಿಂದಿರುಗಿಸಿದ ಮೇಲೆ ಅದರ ಪ್ರಥಮ ದಿವಾನರಾಗಿ ಚೆಟ್ಟಿಪುಣ್ಯಂ ವೀರವಲ್ಲಿ ರಂಗಾಚಾರ್ಲುರವರು ನಿಯಮಿತರಾದರು. ಅವರು ಬಹು ಸಮರ್ಥರಾದ ಆಡಳಿತಗಾರರು. ರಾಜ್ಯದ ಆಯವ್ಯಯವನ್ನು ನಿರ್ವಹಿಸುವುದರಲ್ಲಿಯೂ, ಅದರ ಹಣಕಾಸಿನ ಆಡಳಿತವನ್ನು ನಡೆಸುವುದರಲ್ಲಿಯೂ ಅವರಿಗೆ ವಿಶೇಷವಾದ ಸಾಮರ್ಥ್ಯವಿದ್ದಿತು. ಅವರು ಈ ದೇಶದ ಗತಕಾಲದ ಹಿರಿಮೆಯನ್ನು ಚೆನ್ನಾಗಿ ಅರಿತುಕೊಂಡಿದ್ದರು. ಅದರ ಬಗೆಗೆ ಅವರಿಗೆ ವಿಶೇಷವಾದ ಅಭಿಮಾನವಿದ್ದಿತು. ಅವರು ಕಲ್ಪಿಸಿಕೊಂಡಿದ್ದ ಈ ದೇಶದ ಭವಿಶವ್ಯದ ಚಿತ್ರ ಅವರಿಗೆ ಸತತವಾದ ಸ್ಫೂರ್ತಿಯ ನೆಲೆಯಾಗಿದ್ದಿತು. ಅವರು ದಿವಾನರಾಗಿದ್ದ ಕಾಲದಲ್ಲಿ ಇತರ ಕೆಲವು ಭಾರತೀಯ ಸಂಸ್ಥಾನಗಳಲ್ಲಿ ಬಹು ಸಮರ್ಥರಾದ ದಿವಾನರಿದ್ದರು. ಆದರೆ ಆ ದಿವಾನರಿಗಿರದಿದ್ದ ಒಂದು ವೈಶಿಷ್ಟ್ಯ ರಂಗಾಚಾರ್ಲುರವರಿಗಿದ್ದಿತು. ಅವರಿಗೆ ಪ್ರಜಾಪ್ರಭುತ್ವದಲ್ಲಿಯೂ, ಪ್ರಜಾಪ್ರತಿನಿಧಿಸಂಸ್ಥೆಗಳಲ್ಲಿಯೂ ಇದ್ದ ಗಾಢವಾದ ವಿಶ್ವಾಸವೇ ಆ ವೈಶಿಷ್ಟ್ಯ. ರಂಗಾಚಾರ್ಲುರವರು ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು 1881ರಲ್ಲಿ ಸ್ಥಾಪಿಸಿದರು. ಅಭೂತಪೂರ್ವವಾದ ಸಮಸ್ಯೆಗಳನ್ನು ಆಗತಾನೆ ಪುನರ್ಜನ್ಮ ಪಡೆದಿದ್ದ ಸಂಸ್ಥಾನವು ಅವರು ದಿವಾನರಾಗಿದ್ದಾಗ ಎದುರಿಸುತ್ತಿದ್ದಿತು.

ಈ ಜೀವನಚರಿತ್ರೆಗೆ ಅಗತ್ಯವಾದ ಸಾಮಗ್ರಿ ಅಷ್ಟೇನೂ ವಿಪುಲವಾಗಿಲ್ಲ. ಸಂಸ್ಥಾನದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಪೂರ್ಣವೂ ನಿಸ್ಪಷ್ಟವೂ ಆದ ಚಿತ್ರ ಆ ಕಾಲಕ್ಕೆ ಸಂಬಂಧಪಟ್ಟ ಚರಿತ್ರೆಗಳಲ್ಲಿ ದೊರಕುತ್ತದೆ. ಆದರೆ ರಂಗಾಚಾರ್ಲುರವರ ವೈಯುಕ್ತಿಕ ಜೀವನದ ಬಗೆಗೆ ವಿವರಗಳು ದೊರಕುವದು ಕಷ್ಟವಾಯಿತು. ಹಲವು ಕಡೆಗಳಿಂದ ಈ ವಿವರಗಳನ್ನು ಸಂಗ್ರಹಿಸಬೇಕಾಯಿತು.

ಮೈಸೂರಿನ ದಿವಾನರಾಗಿದ್ದ ಪ್ರಧಾನಶಿರೋಮಣಿ ನ್ಯಾಪತಿ ಮಾಧವರಾಯರೂ, ಮೈಸೂರು ಸರ್ಕಾರದ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರೂ, ಭರತಪುರದ ದಿವಾನರೂ ಆಗಿದ್ದ ಶ್ರೀ ಎ. ವಿ. ರಾಮನಾಥನ್‌ರವರೂ, ರಂಗಾ

ಚಾರ್ಲುರವರು ಆಡಳಿತ ಕ್ಷೇತ್ರದಲ್ಲಿ ಸಾಧಿಸಿದ ಮಹತ್ಸಾಧನೆಗಳ ಬಗೆಗೆ ಅನೇಕ ವಿಷಯಗಳನ್ನು ತಿಳಿಯಪಡಿಸಿದ್ದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಮೈಸೂರು ಅರಮನೆಯಲ್ಲಿ ಹಣಕಾಸಿನ ಇಲಾಖೆಯಲ್ಲಿ ಬಹುಕಾಲ ಸೇವೆ ಸಲ್ಲಿಸಿದವರೂ, ರಂಗಾಚಾರ್ಲುರವರ ಮನೆತನಕ್ಕೆ ಆಪ್ತರೂ ಆದ ಶ್ರೀ ಎ. ನರಸಿಂಹಾಚಾರ್ಯರು ದಿವಾನ್ ರಂಗಾಚಾರ್ಲುರವರ ವೈಯಕ್ತಿಕ ಜೀವನದ ವಿಷಯದಲ್ಲಿ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಅವರಿಗೆ ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ರಂಗಾಚಾರ್ಲುರವರ ಮೊಮ್ಮಕ್ಕಳಾದ ಸರ್ವಶ್ರೀ ಎಂ. ಶ್ರೀನಿವಾಸಾಚಾರ್ಲು, ಸಿ. ಚಕ್ರವರ್ತಿ, ಸಿ. ಕೃಷ್ಣಸ್ವಾಮಿ ಮತ್ತು ಸಿ. ವರದನ್ ಇವರು ರಂಗಾಚಾರ್ಲುರವರ ಜೀವನದ ವಿವಿಧ ಮುಖಗಳನ್ನು ಕುರಿತು ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಇಲ್ಲದೇ ಇವರು 1897ರಲ್ಲಿ ಪ್ರಕಟವಾದ ಸಿ. ಪರಮೇಶ್ವರನ್ ಪಿಳ್ಳೆಯವರಿಂದ ರಚಿತವಾದ "ಪ್ರಾತಿನಿಧಿಕ ಭಾರತೀಯರು" ಎಂಬ ಪುಸ್ತಕವನ್ನು ನನ್ನ ಉಪಯೋಗಕ್ಕಾಗಿ ಕೊಟ್ಟಿದ್ದಾರೆ. ಈ ಪುಸ್ತಕದಲ್ಲಿ ರಂಗಾಚಾರ್ಲುರವರ ಬಗೆಗೆ ಪ್ರಕಟವಾದ ಜೀವನ ವೃತ್ತಾಂತವಿದೆ. ಅವರ ವಿಷಯದಲ್ಲಿ ಪ್ರಕಟವಾದ ಮೊದಲ ಜೀವನ ವೃತ್ತಾಂತಗಳ ಪೈಕಿ ಅದು ಒಂದಾಗಿದೆ. ರಂಗಾಚಾರ್ಲುರವರ ಭಾವಚಿತ್ರಗಳ ವಿಷಮಚಿತ್ರ (ನೆಗೆಟಿವ್) ಗಳನ್ನೂ, ಅವರ ಪತ್ರವ್ಯವಹಾರವನ್ನೂ ನನ್ನ ಉಪಯೋಗಕ್ಕಾಗಿ ಅವರು ಕೊಟ್ಟಿದ್ದಾರೆ. ಈ ಉಪಕಾರಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ರಂಗಾಚಾರ್ಲುರವರ ಮುಮ್ಮಕ್ಕಳಾದ ಶ್ರೀ ಎಂ. ರಾಮಚಂದ್ರನ್‌ರವರು 1874ರಲ್ಲಿ ಲಂಡನ್ನಿನಲ್ಲಿ ಪ್ರಕಟವಾದ ರಂಗಾಚಾರ್ಲುರವರ, "ಮೈಸೂರಿನಲ್ಲಿ 50 ವರ್ಷಗಳ ಬ್ರಿಟಿಷರ ಆಡಳಿತ" ಎಂಬ ಗ್ರಂಥದ ಪ್ರತಿಯನ್ನು ನನ್ನ ಉಪಯೋಗಕ್ಕಾಗಿ ಕೊಟ್ಟಿದ್ದಾರೆ. ಈ ಹಿಂದೆ ಸೂಚಿಸಿದ ಮಹನೀಯರೊಂದಿಗೆ ನನ್ನ ಭೇಟಿಯನ್ನು ಏರ್ಪಡಿಸಲು ಅವರು ವಿಶೇಷವಾಗಿ ಶ್ರಮವಹಿಸಿದ್ದಾರೆ. ಅವರ ಈ ಸಹಕಾರಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ರಂಗಾಚಾರ್ಲುರವರ ಪ್ರಪ್ರಥಮ ಜೀವನಚರಿತ್ರೆಯನ್ನು 1911ರಲ್ಲಿ ಶ್ರೀ ಡಿ. ವಿ. ಗುಂಡಪ್ಪನವರು ಕನ್ನಡದಲ್ಲಿ ಬರೆದರು. ಅದೇ ಸಮಯದಲ್ಲಿ ಇಂಗ್ಲಿಷ್‌ನಲ್ಲಿ ಅವರ ಜೀವನವೃತ್ತಾಂತದ ಬಗೆಗೆ ಒಂದು ಸಣ್ಣ ಪುಸ್ತಕವನ್ನು ಅವರು

ಪ್ರಕಟಿಸಿದರು. ಕರ್ನಾಟಕ ಪ್ರಕಟಣಾಲಯದವರು ಶ್ರೀ ಡಿ. ವಿ. ಗುಂಡಪ್ಪನವರ "ದಿವಾನ್ ರಂಗಾಚಾರ್ಲು" ಕನ್ನಡ ಗ್ರಂಥದ ಮುದ್ರಣಾಲಯದ ಪ್ರತಿಯನ್ನು ನನ್ನ ಉಪಯೋಗಕ್ಕಾಗಿ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕವನ್ನು ಬರೆಯುವಾಗ ಪರಿಶೀಲಿಸಿದ ಅನೇಕ ಗ್ರಂಥಗಳು ಗೋಖಲೆ ಸಾರ್ವಜನಿಕ ಸಂಸ್ಥೆಯ ಪುಸ್ತಕ ಭಂಡಾರದಲ್ಲಿವೆ. ಅವನ್ನು ಪರಿಶೀಲಿಸಲು ಅವಕಾಶಕೊಟ್ಟಿದ್ದಕ್ಕಾಗಿ ಆ ಸಂಸ್ಥೆಗೆ ನಾನು ಕೃತಜ್ಞನಾಗಿದ್ದೇನೆ. ಈ ಪುಸ್ತಕವನ್ನು ಬರೆಯುವಾಗ ಪರಿಶೀಲಿಸಿದ ಪುಸ್ತಕಗಳ ಸೂಚಿಯನ್ನು ಗ್ರಂಥದ ಕೊನೆಯಲ್ಲಿ ಕೊಡಲಾಗಿದೆ.

ಯಾರ ಜೀವನವೃತ್ತಾಂತವನ್ನು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆಯೋ ಅವರು ಯಾವ ದೇಶದಲ್ಲಿ ಯಾವ ಕಾಲದಲ್ಲಿ ಹುಟ್ಟಿದ್ದರೂ ಸಹ ಅಸಾಧಾರಣವಾದ ವ್ಯಕ್ತಿಯೆಂದೇ ಪರಿಗಣಿಸಲ್ಪಡುತ್ತಿದ್ದರು. ಆದ್ದರಿಂದ ಈ ಪುಸ್ತಕವನ್ನು ಬರೆಯುವಾಗ ಈ ಲೇಖಕನಿಗೆ ಹರ್ಷ ಪ್ರಸನ್ನತೆಗಳು ಲಭ್ಯವಾಗಿವೆ. ಈ ಪುಸ್ತಕವನ್ನು ಓದುವವರಲ್ಲಿ ಸ್ವಲ್ಪಮಟ್ಟಿಗಾದರೂ ಆ ಭಾವನೆಗಳು ಉಂಟಾಗುವಂತಾದರೆ ಅದನ್ನು ಬರೆದುದು ಸಾರ್ಥಕವೆಂದು ಎಣಿಸಬಹುದು.

ಈ ಪುಸ್ತಕವನ್ನು ನನ್ನ ಸ್ನೇಹಿತರಾದ ಶ್ರೀ ಕೆ. ಶ್ರೀನಿವಾಸಯ್ಯನವರು ನಾನು ಹೇಳುತ್ತಾ ಹೋದಂತೆ ಬರೆದುಕೊಂಡಿದ್ದಾರೆ. ಅಲ್ಲದೇ ಅದರ ಬಗೆಗೆ ತಮ್ಮ ಸಲಹೆ ಸೂಚನೆಗಳನ್ನೂ ಅವರು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗದವರು ಈ ಪುಸ್ತಕವನ್ನು ಬರೆಯುವ ಕಾರ್ಯವನ್ನು ನನಗೆ ವಹಿಸಿದ್ದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಆ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಯು. ಎಸ್. ಮೋಹನರಾಯರಿಗೆ ಅವರು ಈ ಗ್ರಂಥವನ್ನು ರಚಿಸುವುದರಲ್ಲಿ ಕೊಟ್ಟ ಸಲಹೆ ಸೂಚನೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ. ಈ ಗ್ರಂಥಮಾಲೆಯ ಪ್ರಧಾನ ಸಂಪಾದಕರಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರರವರಿಗೆ ಈ ಪುಸ್ತಕವನ್ನು ಬರೆಯುವಾಗ ಕೊಟ್ಟ ಸಲಹೆ ಸೂಚನೆಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು — ಎಸ್. ಎಸ್. ಚಂದ್ರಶೇಖರ

30ನೇ ಜೂನ್ 1966

# ಪೀಠಿಕೆ

ಒಬ್ಬ ವ್ಯಕ್ತಿಯ ಅಥವಾ ದೇಶದ ಎಲ್ಲಾ ಸತ್ವಪೂರ್ಣ ಪ್ರಗತಿಯೂ ಆ ವ್ಯಕ್ತಿಯ ಅಥವಾ ಆ ದೇಶದ ಅಂತಶ್ಚೇತನದಿಂದ ಮಾತ್ರ ಹೊರಹೊಮ್ಮಬಲ್ಲದು.

ಅಲಾನ್ ಆಕ್ಟೇವಿಯನ್ ಹ್ಯೂಮ್

## (i)

ಹದಿನೇಳನೆಯ ಶತಮಾನದಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಹತ್ತೊಂಭತ್ತನೆಯ ಶತಮಾನದ ಪೂರ್ವಾರ್ಧದ ವೇಳೆಗೆ ಈ ದೇಶದಲ್ಲಿ ತಮ್ಮ ಏಕ ಚಕ್ರಾಧಿಪತ್ಯವನ್ನು ಸ್ಥಾಪಿಸಿಕೊಂಡರು. ಪರಕೀಯರ ಪ್ರಭುತ್ವವನ್ನು ಕಿತ್ತೊಗೆಯುವ ಕೊನೆಯ ಮಹಾಪ್ರಯತ್ನ 1857ರ ವಿಪ್ಲವವಾಗಿದ್ದಿತು. ಪ್ಲಾಸಿ ಕದನದ ಶತಾಬ್ದಿಯ ಸಮಯಕ್ಕೆ ಮಹತ್ತರವಾದ ಘಟನೆಗಳು ನಡೆದು ವಿದೇಶೀಯರ ಪ್ರಭುತ್ವ ನಾಮಾವಶೇಷವಾಗುವುದೆಂಬ ನಿರೀಕ್ಷೆ ಜನರ ಮನಸ್ಸಿನಲ್ಲಿ ತುಂಬಿದ್ದಿತು. ಯಾರು 1857ರ ಸ್ವಾತಂತ್ರ್ಯ ಸಂಗ್ರಾಮದ ಆದ್ಯಪ್ರವರ್ತಕರಾಗಿ, ಮುಖಂಡರಾಗಿ ನಿಂತರೋ ಅವರು ಜನರ ಮನಸ್ಸಿನಲ್ಲಿ ಈ ಭಾವನೆಯನ್ನು ಬಿತ್ತಿದರು.

ಆದರೆ ಈ ಘಟನೆಗಳು ನಡೆದು ಒಂದು ಶತಮಾನದ ಮೇಲೆ ಆಗಿಹೋಗಿದೆ. ವಿಪ್ಲವದ ಧಗೆ ದೇಶವನ್ನೆಲ್ಲಾ ಆವರಿಸಿದ್ದಾಗ ಯಾವ ಉದ್ರೇಕ, ಆವೇಶಗಳು ತಾಂಡವವಾಡುತ್ತಿದ್ದವೋ ಅವು ಈಗ ಶಮನವಾಗಿವೆ. ನಮ್ಮ ದೃಷ್ಟಿಯನ್ನು ಹಿಂದೆ ಸರಿಸಿ ಚರಿತ್ರೆಯಲ್ಲಿ 1857ರ ವಿಪ್ಲವದ ಸ್ಥಾನವೇನು ಎಂದು ಅರಿಯುವ ಪ್ರಯತ್ನವನ್ನು ಈಗ ನಾವು ಮಾಡಬಹುದು. ಹೀಗೆ ವಿಮರ್ಶೆ ಮಾಡಿದಾಗ ನಮಗೆ ಕಂಡುಬರುವುದೇನು? ಯಾರು ಹಿಂದಿನ ರಾಜ್ಯವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನಗಳಲ್ಲಿದ್ದರೋ ಸಮಾಜದಲ್ಲಿ ಬಲಿಷ್ಠರಾಗಿ, ಸ್ಥಾನಮಾನಗಳನ್ನು ಹೊಂದಿ ಐಶ್ವರ್ಯ, ದರ್ಪಗಳಿಂದ ಮೆರೆಯುತ್ತಿದ್ದರೋ ಅವರು ಪರಕೀಯರ ಪ್ರಭುತ್ವದಿಂದ ಅವುಗಳನ್ನು ಕಳೆದುಕೊಂಡರು. ಅವರ ಅಸಮಾಧಾನ ಕ್ರೋಧಗಳೇ ಈ ವಿಪ್ಲವಕ್ಕೆ ಸಿಡಿಮದ್ದಾದವು. ಕಾಲಚಕ್ರ ಉರುಳಿ ಹಳೆಯ ವ್ಯವಸ್ಥೆಯನ್ನು ಧೂಳೀಪಟ ಮಾಡುತ್ತಿದ್ದಾಗ ಅದರ ಗತಿಯನ್ನು ತಡೆಯುವ ನಿರರ್ಥಕ ಪ್ರಯತ್ನ ನಡೆ

ಯಿತು. ಹೊಸಯುಗ ಜನ್ಮವೆತ್ತುವಾಗ ಹಳೆಯ ಯುಗ ತಾನು ಕಾಲಗರ್ಭದಲ್ಲಿ ಸೇರುವುದಕ್ಕೆ ಮುಂಚೆ ತನ್ನ ಉಳಿವಿಗಾಗಿ ಕೊನೆಯ ಪ್ರಯತ್ನವೊಂದನ್ನು ಮಾಡಿತು.

ಬ್ರಿಟಿಷರು ಈ ದಂಗೆಯನ್ನು ನಿರ್ದಯವಾಗಿ ದಮನಿಸಿದರು. ರಕ್ತದ ಮಡುವಿನಲ್ಲಿ ದಂಗೆ ನುಚ್ಚುನೂರಾಯಿತು. ಭಾರತೀಯರಿಗೂ ಬ್ರಿಟಿಷರಿಗೂ ಈ ದಂಗೆ ಮರೆಯಲಾಗದ ಕಹಿ ನೆನಪಾಗಿದೆ. ಈ ಎರಡು ಜನಾಂಗಗಳ ಮಧ್ಯೆ ಇದರಿಂದುಂಟಾದ ವಿರಸ ಪೂರ್ಣವಾಗಿ ಹೋಗಲೇ ಇಲ್ಲ. ಪರಸ್ಪರ ವಿಶ್ವಾಸವುಂಟಾಗುವ ಸಂಭವವಾದರೂ ಹೇಗೆ?

1857ರ ಮಹಾವಿಪ್ಲವದಿಂದ ಈಸ್ಟ್ ಇಂಡಿಯಾ ಕಂಪನಿಯ ಪ್ರಭುತ್ವ ಕೊನೆಗೊಂಡಿತು. ಬ್ರಿಟಿಷ್ ಮಹಾರಾಣಿ ಈ ದೇಶದ ಆಡಳಿತವನ್ನು ನೇರವಾಗಿ ವಹಿಸಿಕೊಂಡರು. ಆ ಸಮಯದಲ್ಲಿ ಅವರು ಮಾಡಿದ ಘೋಷಣೆ ಇತಿಹಾಸ ಪ್ರಸಿದ್ಧವಾಗಿದೆ. ಈ ದೇಶದ ಮತ ಆಚಾರ ಪದ್ಧತಿಗಳ ವಿಷಯದಲ್ಲಿ ಸರ್ಕಾರವು ಪ್ರವೇಶಿಸುವುದಿಲ್ಲವೆಂದೂ, ಬ್ರಿಟಿಷರ ನೇರವಾದ ಆಳ್ವಿಕೆಗೊಳಪಟ್ಟ ಪ್ರದೇಶವನ್ನು ವಿಸ್ತರಿಸುವುದಿಲ್ಲವೆಂದೂ, ದೇಶೀಯ ರಾಜ್ಯಗಳ ಅಸ್ತಿತ್ವಕ್ಕೆ ಭಂಗತರುವುದಿಲ್ಲವೆಂದೂ, ಜಾತಿಮತಗಳ ಕಾರಣದಿಂದಾಗಿ ಯಾರನ್ನೂ ಸರ್ಕಾರದ ಹುದ್ದೆಗೆ ಅನರ್ಹರೆಂದು ಪರಿಗಣಿಸಲಾಗುವುದಿಲ್ಲವೆಂದೂ ಈ ಪ್ರಸಿದ್ಧಪತ್ರಿಕೆಯಲ್ಲಿ ಘೋಷಿಸಿದ್ದಲ್ಲದೇ, ದಂಗೆಯಲ್ಲಿ ಪಾಲುಗೊಂಡವರಿಗೆ ದಂಡನೆ ವಿಧಿಸುವುದಿಲ್ಲವೆಂಬ ಆಶ್ವಾಸನೆಯನ್ನು ಕೊಡಲಾಯಿತು. ಈ ಘೋಷಣೆಯಿಂದ ದೇಶದಲ್ಲಿ ಶಾಂತಿ, ಭದ್ರತೆಗಳ ಹೊಸಯುಗ ಪ್ರಾರಂಭವಾಯಿತು.

ಈ ಮಹಾವಿಪ್ಲವದಿಂದ ದೇಶದ ದೃಷ್ಟಿ ವಿಸ್ಮೃತಿಗೊಳಗಾಗಿದ್ದ ತನ್ನ ಗತ ಕಾಲದ ವೈಭವದೆಡೆಗೆ ಹರಿಯಿತು. ಆಗಿನ ಮಹತ್ಸಾಧನೆಗಳ ನೆನಪಿನಿಂದ ಜನರಲ್ಲಿ ಸ್ವಾಭಿಮಾನ ಮೂಡಿತು.

ಈ ವಿಪ್ಲವಕ್ಕೆ ಎರಡು ದಶಕಗಳ ಹಿಂದೆ ದೇಶದ ಭವಿತವ್ಯಕ್ಕೆ ಸಂಬಂಧಿಸಿದ ಬಹು ಮುಖ್ಯವಾದ ವಿಷಯವೊಂದು ಚರ್ಚೆಗೆ ಬಂದಿತು. ಆಧುನಿಕ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕೇ ಅಥವಾ ಪರಂಪರಾನುಗತವಾಗಿ ಬಂದ ಶಿಕ್ಷಣ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕೇ ಎನ್ನುವ ವಿಷಯದಲ್ಲಿ ಪಕ್ಷ ಪ್ರತಿಪಕ್ಷಗಳು ಉಂಟಾಗಿ ವಿಕೋಪವಾದ ವಾಗ್ವಾದ ನಡೆಯಿತು. ರಾಜಾ ರಾಮ

ಮೋಹನರಾಯರು ವಿಜ್ಞಾನವನ್ನೂ, ಆಂಗ್ಲಭಾಷೆಯನ್ನೂ ಬೋಧಿಸಬೇಕೆಂದು ವಾದಿಸಿದರು. ಭಾರತಸರ್ಕಾರದ ಸದಸ್ಯರಾಗಿದ್ದ ಮೆಕಾಲೆ ಅವರು ಆಧುನಿಕ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರುವುದೇ ಸೂಕ್ತವೆಂದು ತೀರ್ಮಾನಿಸಿ 7ನೇ ಮಾರ್ಚಿ 1835ರಲ್ಲಿ ಆ ತೀರ್ಮಾನವನ್ನು ಪ್ರಕಟಿಸಿದರು.

ಹೀಗೆ ಪಾಶ್ಚಾತ್ಯ ಸಂಸ್ಕೃತಿಯು ಈ ದೇಶದ ಜನಜೀವನದ ಮೇಲೆ ಪ್ರಭಾವ ಬೀರಲು ಅವಕಾಶವಾಯಿತು. ಪ್ರಗತಿಪರ ವಿಚಾರಗಳು ಜನರಲ್ಲಿ ಹರಡತೊಡಗಿದಂತೆ ಪರಂಪರಾನುಗತವಾಗಿ ಬಂದ ಆಚಾರ ವಿಚಾರಗಳ ಬಗೆಗೆ ಜನರ ನಂಬಿಕೆ ಸಡಿಲವಾಗತೊಡಗಿತು. ದೇಶದಲ್ಲಿ ನವಚೇತನದ ಸಂಚಾರವಾಗಿ, ಹೊಸ ಆಸೆ ಆಕಾಂಕ್ಷೆಗಳು ತಲೆದೋರಿದವು. ಸನಾತನಧರ್ಮದ ಪುನರುಜ್ಜೀವನಕ್ಕಾಗಿ ಪರಿಷ್ಕರಣಕ್ಕಾಗಿ ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಾಸಮಾಜಗಳು ಹುಟ್ಟಿದವು. ಮಹರ್ಷಿ ದೇವೇಂದ್ರನಾಥಟಾಗೂರರು, ಕೇಶವಚಂದ್ರಸೇನರು ಸ್ವಾಮಿ ದಯಾನಂದಸರಸ್ವತಿಗಳು, ಮಹದೇವ ಗೋವಿಂದ ರಾನಡೆಯವರು ಈ ಸಂಸ್ಥೆಗಳ ನೇತೃತ್ವ ವಹಿಸಿ ದೇಶದ ಧರ್ಮ ಸಂಸ್ಕೃತಿಗಳ ಪುನರುತ್ಥಾನದ ಮಹಾಕಾರ್ಯವನ್ನು ಕೈಗೊಂಡರು.

ರಾಜಾ ರಾಮಮೋಹನರಾಯರು ಬ್ರಹ್ಮಸಮಾಜವನ್ನು 1828 ರಲ್ಲಿ ಸ್ಥಾಪಿಸಿದರು. ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದವನು ಈಶ್ವರನೊಬ್ಬನೇ. ಅವನೇ ಜಗತ್ಪ್ರಭುವು. ಇರುವವರು ಹಲವು ದೇವರುಗಳಲ್ಲ ಒಬ್ಬನೇ. ವೇದೋಪನಿಷತ್ತುಗಳ ಸಾರಸರ್ವಸ್ವವಾದ ಈ ತತ್ತ್ವವನ್ನು ಜನಸಾಮಾನ್ಯರಲ್ಲಿ ಪ್ರಚಾರಗೊಳಿಸುವುದೇ ಈ ಸಂಸ್ಥೆಯನ್ನು ಸ್ಥಾಪಿಸುವುದರಲ್ಲಿ ಅವರ ಉದ್ದೇಶವಾಗಿದ್ದಿತು. ಮಹರ್ಷಿ ದೇವೇಂದ್ರನಾಥ ಟಾಗೂರರು ಈ ಸಂಸ್ಥೆಯ ಕಾರ್ಯಕ್ಷೇತ್ರವನ್ನು ಬಹುವಾಗಿ ವಿಸ್ತರಿಸಿದರು. ಕೇಶವಚಂದ್ರಸೇನರನ್ನು ಸಮಾಜದ ಕಾರ್ಯವನ್ನು ನಡೆಸುವುದಕ್ಕೆ ಅವರು ನಿಯಮಿಸಿಕೊಂಡರು. ಮಹರ್ಷಿಗಳಿಗೂ ಕೇಶವಚಂದ್ರಸೇನರಿಗೂ ಕೆಲವುಕಾಲದ ಅನಂತರ ಅಭಿಪ್ರಾಯಭೇದ ಉಂಟಾಯಿತು. ಸೇನರು 1869 ರಲ್ಲಿ ಭಾರತ ಬ್ರಹ್ಮ ಸಮಾಜ ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿದರು.

ಈ ಕಾಲದಲ್ಲಿಯೇ ಹಲವರು ಪ್ರತಿಭಾವಂತರು ಶ್ರುತಿಸ್ಮೃತಿಗಳನ್ನೂ, ಧರ್ಮಶಾಸ್ತ್ರಗಳನ್ನೂ, ಮಹಾಭಾರತ ರಾಮಾಯಣಗಳನ್ನೂ, ಪ್ರಾಚೀನ ಕಾವ್ಯ

ನಾಟಕಗಳನ್ನೂ ಅಧ್ಯಯನ ಮಾಡಿದರು. ಪಾಶ್ಚಾತ್ಯ ಸಂಸ್ಕೃತಿಗೆ ಪ್ರಾಣಸ್ವರೂಪವಾದ ಮಾನವತಾವಾದವನ್ನೂ, ಪ್ರಜಾಸ್ವಾತಂತ್ರ್ಯತತ್ವವನ್ನೂ ಅವರು ಕರಗತ ಮಾಡಿಕೊಂಡರು. ತಿರುವಾಂಕೂರಿನ ಮಹಾರಾಜರಾದ ರಾಮವರ್ಮರು, ಕೃಷ್ಣಮೋಹನ ಬ್ಯಾನರ್ಜಿ, ರಂಗನಾಥಶಾಸ್ತ್ರಿ, ರಾಜೇಂದ್ರಲಾಲ ಮಿತ್ರ, ಮಧುಸೂದನದತ್ತ, ಬಾಹುದಾಜಿ ಮತ್ತು ಬಂಕಿಂಚಂದ್ರ ಚಟರ್ಜಿ ಈ ಗುಂಪಿಗೆ ಸೇರಿದವರು.

ಅರ್ಥಹೀನ ಆಚಾರ, ಅಂಧ ನಂಬಿಕೆಗಳು ಬೇರೂರಿ ಶಿಥಿಲವಾಗುತ್ತಿದ್ದ ಸಾಮಾಜಿಕ ವ್ಯವಸ್ಥೆಯನ್ನು ಜೀರ್ಣೋದ್ಧಾರ ಮಾಡುವ ಪ್ರಯತ್ನ ದೇಶದಲ್ಲಿ ಮತ್ತೊಂದು ಕಡೆ ನಡೆಯತೊಡಗಿತು. ಈಶ್ವರಚಂದ್ರ ವಿದ್ಯಾಸಾಗರರು, ತೆಲಾಂಗರು, ಸೊರಾಬ್ಜಿ ಶಾಪುರ್ಜಿ ಬೆಂಗಾಲಿ ಮತ್ತು ಕುರ್ಸೆನ್‌ದಾಸ್ ಮುಲ್ಜಿ ದೇಶದ ವಿವಿಧ ಪ್ರದೇಶಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಸುಧಾರಣೆಯ ಕಾರ್ಯದ ಮುಖಂಡತ್ವವನ್ನು ವಹಿಸಿದರು.

ಬ್ರಿಟಿಷರು ಈ ದೇಶದಲ್ಲಿ ತಮ್ಮ ರೀತಿಯ ನ್ಯಾಯವ್ಯವಸ್ಥೆಯನ್ನು ಸ್ಥಾಪಿಸಿದರು. ಹಿಂದೂ ಮತ್ತು ಮುಸ್ಲಿಂ ಧರ್ಮಶಾಸ್ತ್ರಗಳಿಂದ ಭಿನ್ನವಾದವು ಆ ನ್ಯಾಯವ್ಯವಸ್ಥೆಯ ಮೂಲ ತತ್ವಗಳು. ಈ ಹೊಸ ನ್ಯಾಯವ್ಯವಸ್ಥೆಯ ಮೂಲ ತತ್ವಗಳನ್ನು ಅಭ್ಯಸಿಸಿ ಅವುಗಳಲ್ಲಿ ಪಾರಂಗತರಾಗಿ ಬಹು ಮೇಧಾವಿಗಳಾದ ನ್ಯಾಯಶಾಸ್ತ್ರಜ್ಞರೆಂಬ ಹೆಸರನ್ನು ದ್ವಾರಕಾನಾಥ ಮಿತ್ರ, ಸರ್ ಮುತ್ತುಸ್ವಾಮಿ ಅಯ್ಯರ್, ವಿಶ್ವನಾಥ ನಾರಾಯಣ ಮಾಂಡಲಿಕ, ಕಾಶಿನಾಥ ತ್ರಯಂಬಕ ತೆಲಾಂಗ್, ಮಹದೇವ ಗೋವಿಂದ ರಾನಡೆ ಮತ್ತು ಬದ್ರುದ್ದೀನ್ ತಯಾಬ್ಜಿ ಸಂಪಾದಿಸಿದರು. ಇವರ ಪೈಕಿ ಮಿತ್ರ, ತೆಲಾಂಗ್, ಸರ್ ಮುತ್ತುಸಾಮಿ ಅಯ್ಯರ್, ರಾನಡೆ ಮತ್ತು ತಯಾಬ್ಜಿ ಶ್ರೇಷ್ಠನ್ಯಾಯಸ್ಥಾನಗಳಲ್ಲಿ ನ್ಯಾಯಾಧೀಶರಾಗಿ ನಿಯಮಿತರಾದರು. ಈ ರೀತಿ ಶ್ರೇಷ್ಠನ್ಯಾಯಸ್ಥಾನದ ನ್ಯಾಯಾಧೀಶರಾದ ಭಾರತೀಯರಲ್ಲಿ ಇವರೇ ಮೊದಲಿಗರು.

ರಾಜಕೀಯ ಕ್ಷೇತ್ರದಲ್ಲಿಯೂ ನವಜಾಗ್ರತಿ ಇದೇ ಕಾಲದಲ್ಲಿ ಉಂಟಾಯಿತು. ಜನರಲ್ಲಿ ರಾಜಕೀಯ ಪ್ರಜ್ಞೆಯನ್ನೂ ಸ್ವಾತಂತ್ರ್ಯಾಭಿಮಾನವನ್ನೂ ಮೂಡಿಸುವ ಮಹತ್ಪ್ರಯತ್ನ ನಡೆಯಿತು. ದಾದಾಭಾಯಿ ನವರೋಜಿ, ದಿನ್‌ಶಾ ವಾಚಾ, ಉಮೇಶಚಂದ್ರ ಬ್ಯಾನರ್ಜಿ ಮತ್ತು ಗಾಜುಲು ಲಕ್ಷ್ಮೀನರಸು ಚೆಟ್ಟಿ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಈ ಚಳುವಳಿಯ ಮುಖಂಡರಾದರು.

ದೇಶೀಯ ಸಂಸ್ಥಾನಗಳಲ್ಲಿ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ಶಾಂತಿ ನೆಮ್ಮದಿಗಳನ್ನು ಸ್ಥಾಪಿಸಿ ಆರ್ಥಿಕ ವ್ಯವಸ್ಥೆಯನ್ನು ಹದಗೊಳಿಸಿ, ಅವುಗಳ ಅಭಿವೃದ್ಧಿಗೆ ಭದ್ರವಾದ ಬುನಾದಿಯನ್ನು ಹಾಕಿದ ಸಮರ್ಥರಾದ ಆಡಳಿತಗಾರರೂ ಇದೇ ಕಾಲದಲ್ಲಿ ಪ್ರಕಾಶಕ್ಕೆ ಬಂದರು. ರಾಜಾ ಸರ್ ಟಿ. ಮಾಧವರಾವ್, ಸರ್ ಸಾಲಾರ್ ಜಂಗ್, ಸರ್ ದಿನಕರರಾವ್, ಸರ್ ಅಮರಾವತಿ ಶೇಷಯ್ಯ ಶಾಸ್ತ್ರಿ, ವೆಂಬಾಕಂ ರಾಮಯ್ಯಂಗಾರ್ ಮತ್ತು ರಂಗಾಚಾರ್ಲು ಹೀಗೆ ಸಮರ್ಥರಾದ ಆಡಳಿತಗಾರರೆಂದು ಕೀರ್ತಿಗಳಿಸಿದರು.

ಹೀಗೆ ಧಾರ್ಮಿಕ ಸಾಮಾಜಿಕ ಸುಧಾರಕರೂ, ರಾಜಕೀಯ ಮುಖಂಡರೂ, ವಿದ್ವಾಂಸರೂ, ಪ್ರತಿಭಾಸಂಪನ್ನರಾದ ಗ್ರಂಥಕರ್ತರೂ, ನ್ಯಾಯಶಾಸ್ತ್ರನಿಪುಣರೂ ಮತ್ತು ಸಮರ್ಥರಾದ ಆಡಳಿತಗಾರರೂ ಹತ್ತೊಂಭತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡು ದೇಶದ ಸಾಂಸ್ಕೃತಿಕ, ಸಾಮಾಜಿಕ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ನವೋದಯಕ್ಕೆ ಅಧ್ವರ್ಯುಗಳಾಗಿ ನಿಂತರು. ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಈ ದೇಶದಲ್ಲಿ ಜಾರಿಗೆ ತಂದ ಮೂರು ದಶಕಗಳಲ್ಲಿ ಈ ಪ್ರತಿಭಾನ್ವಿತ ಭಾರತೀಯರ ತಂಡ ಸಿದ್ಧವಾಯಿತು. ವಿಪ್ಲವ ಆಂತರ್ಯುದ್ಧಗಳಿಂದ ರಾಜಕೀಯ, ಸಾಮಾಜಿಕ ವ್ಯವಸ್ಥೆಗಳು ಕುಸಿದುಬಿದ್ದರೂ ದೇಶದ ಅಂತಸ್ಸತ್ವ ಕುಂದಿರಲಿಲ್ಲ ವೆಂಬುದಕ್ಕೆ ಇದು ಸಾಕ್ಷಿಯಾಗಿದೆ.

ದೇಶೀಯ ಸಂಸ್ಥಾನಗಳ ಆಡಳಿತವನ್ನು ಸುವ್ಯವಸ್ಥೆಗೊಳಿಸಿ ಅವುಗಳ ಆರ್ಥಿಕ ಪ್ರಗತಿಗೆ ತಳಹದಿಯನ್ನು ಹಾಕಿದ ದಿವಾನರ ಕಾರ್ಯ ಎಲ್ಲರ ಗಮನಕ್ಕೂ ಕೂಡಲೇ ಬರುವಂತಹುದಲ್ಲ. ಆದರೆ ರಾಷ್ಟ್ರೋದ್ಧಾರ ಕಾರ್ಯದಲ್ಲಿ ಅವರ ಪಾತ್ರ ನಾನಾ ಕ್ಷೇತ್ರಗಳಲ್ಲಿ ದುಡಿದ ಮುಖಂಡರ ಕಾರ್ಯಕ್ಕಿಂತ ಯಾವರೀತಿಯಲ್ಲಿಯೂ ಕಡಿಮೆ ಯಾದುದಲ್ಲ. ಪರಕೀಯರ ಪ್ರಭುತ್ವವು ಪರಮೋಚ್ಛ್ರಾಯ ಸ್ಥಿತಿಯಲ್ಲಿದ್ದ ಆ ಕಾಲ ದಲ್ಲಿ ಭಾರತೀಯರ ಆಡಳಿತ ಸಾಮರ್ಥ್ಯವನ್ನು ಅವರು ತೋರಿಸಿಕೊಟ್ಟರು.

ರಾಜಾ ಸರ್ ಟಿ. ಮಾಧವರಾವ್ ಅವರು ತಿರುವಾಂಕೂರು, ಇಂದೂರು, ಬರೋಡಗಳ ದಿವಾನರಾಗಿದ್ದರು. ಅವರು ತಿರುವಾಂಕೂರಿನ ದಿವಾನರಾದ ಸಂದರ್ಭ ಬಹು ಸ್ವಾರಸ್ಯವಾಗಿದೆ. ಆಗ ಮಹಾರಾಜರಾಗಿದ್ದವರು ಸಮರ್ಥರಲ್ಲ. ದಿವಾನರಾಗಿದ್ದವನಿಗೆ ಆಡಳಿತ ಸಾಮರ್ಥ್ಯ ಸಾಲದು. ಸರ್ಕಾರದ ಅಧಿಕಾರಿಗಳಲ್ಲಿ

ಲಂಚರುಷವತ್ತುಗಳನ್ನು ಮುಟ್ಟದಿದ್ದವರು ವಿರಳ. ಅವರ ಸಂಬಳಗಳು ಒಂದು ವರ್ಷಕ್ಕೆ ಮೇಲೆ ಸಂದಾಯವಾಗಿರಲಿಲ್ಲ. ಖಜಾನೆ ಬರಿದಾಗಿತ್ತು. ಬ್ರಿಟಿಷರಿಗೆ ಕೊಡಬೇಕಾಗಿದ್ದ ಪೊಗದಿ ಪಾವತಿಯಾಗದೇ ನಿಂತಿತ್ತು. ವಾಣಿಜ್ಯ, ಕೈಗಾರಿಕೆಗಳು ನಿಂತುಹೋಗಿದ್ದವು. ಭಾರತದ ವೈಸ್‌ರಾಯ್ ಲಾರ್ಡ್ ಡಾಲ್‌ಹೌಸಿಯ ವಕ್ರದೃಷ್ಟಿ ತಿರುವಾಂಕೂರಿನ ಮೇಲೆ ಬಿದ್ದಿತ್ತು. ಆ ಸಂಸ್ಥಾನವನ್ನು ಬ್ರಿಟಿಷರ ನೇರವಾದ ಆಳ್ವಿಕೆಗೆ ಒಳಪಡಿಸುವ ಉದ್ದೇಶದಿಂದ ಮದ್ರಾಸ್ ಸರ್ಕಾರದೊಂದಿಗೆ ಸಂಧಾನಮಾಡಲು ಅವನು ಉದಕಮಂಡಲಕ್ಕೆ ಬಂದಿದ್ದನು. ಈ ಪರಿಸ್ಥಿತಿಯಲ್ಲಿ ತಿರುವಾಂಕೂರಿನ ಮಹಾರಾಜರು ಮಾಧವರಾಯರ ಸಹಾಯವನ್ನು ಕೋರಿದರು. ಮಾಧವರಾಯರು ಮದ್ರಾಸ್ ಸರ್ಕಾರದೊಂದಿಗೆ ಸಂಧಾನಮಾಡಿ ರಾಜ್ಯದ ಸ್ಥಿತಿಯನ್ನು ಸುಧಾರಿಸಲು ಏಳು ವರ್ಷಗಳ ಕಾಲಾವಧಿಯನ್ನು ಕೊಡುವಂತೆ ಒಪ್ಪಿಸಿದರು. 1857ರಲ್ಲಿ ತಿರುವಾಂಕೂರು ಸಂಸ್ಥಾನದ ದಿವಾನರಾದಾಗ ಅವರಿಗೆ ಮೂವತ್ತು ವರ್ಷ. ಅವರು ರಾಜ್ಯದ ವಾಣಿಜ್ಯ ಉದ್ಯಮಗಳಿಗೆ ಕುಠಾರಪ್ರಾಯವಾಗಿದ್ದ ಅನೇಕ ಬಗೆಯ ಸುಂಕಗಳನ್ನು ಕಡಿಮೆಮಾಡಿದರು, ಕೆಲವು ಸಂದರ್ಭಗಳಲ್ಲಿ ಅವನ್ನು ತೆಗೆದುಹಾಕಿದರು. ಮೆಣಸು ತಂಬಾಕುಗಳ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಇದ್ದ ಸರ್ವಸ್ವಾಮ್ಯ ಪದ್ಧತಿಯನ್ನು ಅವರು ರದ್ದುಮಾಡಿದರು. ಈ ಕ್ರಮಗಳಿಂದ ದೇಶದ ವ್ಯಾಪಾರೋದ್ಯಮಗಳು ಬೆಳೆದು ಅಭಿವೃದ್ಧಿಗೆ ಬರಲು ಅವಕಾಶವಾಯಿತು. ಅನಂತರ ಅವರು ಸಂಸ್ಥಾನದ ತೆರಿಗೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸುಧಾರಿಸಿದರು. ನೂರಕ್ಕಿಂತ ಹೆಚ್ಚು ಸಣ್ಣ ತೆರಿಗೆಗಳನ್ನು ಅವರು ತೆಗೆದುಹಾಕಿದರು. ಅರಾಜಕತೆ ತಾಂಡವವಾಡುತ್ತಿದ್ದ ಕಡೆ ಅವರು ಸುವ್ಯವಸ್ಥೆಯನ್ನು ಸ್ಥಾಪಿಸಿದರು. ಜನರು ನಿರ್ಭೀತಿಯಿಂದ ತಮ್ಮ ಉದ್ಯೋಗಗಳನ್ನು ಮಾಡಿಕೊಂಡು ಭೂಮಿಕಾಣಿ, ಮನೆ ಮಠಗಳನ್ನು ನೋಡಿಕೊಂಡಿರುವಂತೆ ಇದರಿಂದ ಅವಕಾಶವಾಯಿತು.. ಮುಖ್ಯವಾಗಿ ಪರಂಪರಾನುಗತವಾಗಿ ದರೋಡೆಯನ್ನು ವೃತ್ತಿಯನ್ನಾಗಿ ಇಟ್ಟುಕೊಂಡಿದ್ದವರನ್ನು ಅವರು ಅಡಗಿಸಿದರು. ಮಾಧವರಾಯರ ಸಮರ್ಥಆಡಳಿತದಿಂದ1872ರಲ್ಲಿ ಅವರು ಅಧಿಕಾರ ಬಿಡುವಾಗ ತಿರುವಾಂಕೂರು ಭಾರತದಲ್ಲೇ ಪ್ರಗತಿಪರವಾದ ಸಂಸ್ಥಾನಗಳಲ್ಲೊಂದು ಎಂಬ ಕೀರ್ತಿ ಪಡೆಯುವಂತಾಯಿತು.

ಸರ್ ಸಾಲಾರ್‌ಜಂಗರು 1853ರಲ್ಲಿ ಹೈದರಾಬಾದಿನ ಪ್ರಧಾನಮಂತ್ರಿಗಳಾದಾಗ ಅವರಿಗೆ ಇಪ್ಪತ್ತನಾಲ್ಕುವರ್ಷ ವಯಸ್ಸು. ಅವರ ಮನೆತನದಲ್ಲಿ ಪ್ರಧಾನ ಮಂತ್ರಿತ್ವ ಪರಂಪರಾನುಗತವಾಗಿ ಬಂದಿದ್ದಿತು. ಅವರಿಗೆ ಆ ಸ್ಥಾನಕ್ಕೆ ಬರಲು ಇಷ್ಟವಿರಲಿಲ್ಲ. ಸಂಸ್ಥಾನದಲ್ಲಿ ಪರಿಸ್ಥಿತಿ ಬಹು ವಿಷಮವಾಗಿದ್ದಿತು. ಆದರೆ ಅವರೇ ತಮ್ಮ ಸ್ನೇಹಿತರೊಬ್ಬರಿಗೆ ಬರೆದ ಪತ್ರದಲ್ಲಿ ಹೇಳಿರುವಂತೆ ಅವರು ಪ್ರಧಾನಮಂತ್ರಿತ್ವವನ್ನು ಒಪ್ಪಿಕೊಳ್ಳದಿದ್ದರೆ ರಾಜಾಗ್ರಹಕ್ಕೆ ಗುರಿಯಾಗಿ ಅವರೂ ಅವರ ಮನೆತನವೂ ಸಂಪೂರ್ಣವಾಗಿ ನಾಶವಾಗಿಹೋಗುವ ಪರಿಸ್ಥಿತಿ ಇದ್ದಿತು. ಆದ್ದರಿಂದ ಅವರು ಪ್ರಧಾನಮಂತ್ರಿಗಳಾಗಿ ಅಧಿಕಾರವನ್ನು ಸ್ವೀಕರಿಸಿದರು.

ಆಗ ರಾಜ್ಯದಲ್ಲಿ ಭೂಕಂದಾಯವನ್ನು ವಸೂಲ್ಮಾಡುವ ವ್ಯವಸ್ಥೆ ಹದಗೆಟ್ಟಿದ್ದಿತು. ಖಜಾನೆಯಲ್ಲಿ ಹಣವಿರಲಿಲ್ಲ. ಬೀರಾರು, ರಾಯಚೂರು ದೋಬ್ ಮತ್ತು ಮುಲದುರ್ಗ ಜಿಲ್ಲೆಗಳನ್ನು ಆಗತಾನೇ ಈಸ್ಟ್ ಇಂಡಿಯಾ ಕಂಪನಿಗೆ ವಹಿಸಿಕೊಡಲಾಗಿದ್ದಿತು. ಈ ಜಿಲ್ಲೆಗಳ ಸ್ವಾಮ್ಯವನ್ನು ಪಡೆದಿದ್ದ ಜಹಗೀರುದಾರನು ಅವನ್ನು ಕಂಪನಿಗೆ ಬಿಟ್ಟುಕೊಡಬೇಕಾಗಿ ಬಂದಿತು. ಅದರಿಂದಾದ ನಷ್ಟವನ್ನು ಹೈದರಾಬಾದ್ ಸರ್ಕಾರ ತುಂಬಿಕೊಡಬೇಕೆಂದು ಅವರು ಒತ್ತಾಯ ಮಾಡುತ್ತಿದ್ದರು. ನೈಜಾಮರ ಬಂಧುಗಳ ಮಾಶಾಸನವನ್ನು ಕೊಡುವುದಕ್ಕೆಕೂಡ ಹಣವಿರಲಿಲ್ಲ. ನೈಜಾಮರ ಆಭರಣಗಳನ್ನೆಲ್ಲಾ ಒತ್ತೆ ಇಡಲಾಗಿತ್ತು. ಇಂಗ್ಲೆಂಡಿಗೆ ಅವನ್ನು ಸಾಗಿಸಲಾಗಿತು. ಸಂಸ್ಥಾನದ ಸಾಲ ಸುಮಾರು ಮೂರು ಕೋಟಿ ರೂಪಾಯಿಗಳಷ್ಟಿದ್ದಿತು. ತಾಲ್ಲೂಕುದಾರರು ಕಂದಾಯವನ್ನು ವಸೂಲು ಮಾಡುವಾಗ ಸರ್ಕಾರಕ್ಕೆ ಸಲ್ಲಿಸಬೇಕಾದುದರಲ್ಲಿ $\frac{1}{4}$ ರಿಂದ $\frac{1}{3}$ ಭಾಗದಷ್ಟು ತಾವೇ ತೆಗೆದುಕೊಂಡುಬಿಡುತ್ತಿದ್ದರು. ಸಂಸ್ಥಾನದ ಜನಜೀವನದಲ್ಲಿ ಹಸ್ತಕ್ಷೇಪ ಮಾಡುತ್ತ ಮೆರೆಯುತ್ತಿದ್ದ ಅರಬ್ಬರ ಪ್ರಭಾವವನ್ನು ಮುರಿಯಬೇಕಾಗಿದ್ದಿತು. ನೈಜಾಮರ ಸೈನ್ಯದಲ್ಲಿದ್ದ ಅರಬ್ಬೀ ತುಕ್ಕಡಿಗಳು ಪ್ರಬಲವಾಗಿ, ಯಾರ ಅಂಕೆ ಶಿಕ್ಷೆಗಳಿಗೂ ಒಳಗಾಗದೇ ರಾಜ್ಯದಲ್ಲಿ ಶಾಂತಿಶಿಸ್ತುಗಳಿಗೆ ಭಂಗವನ್ನು ತರುತ್ತಿದ್ದವು. ಇಂತಹ ಪರಿಸ್ಥಿತಿಯನ್ನು ಸಾಲಾರ್‌ಜಂಗರು ಹತೋಟಿಗೆ ತರಲು ಶ್ರಮಿಸುತ್ತಿದ್ದಾಗ 1857ರ ಬಂಡಾಯ ದೇಶವನ್ನೇ ಅಲ್ಲೋಲಕಲ್ಲೋಲ ಮಾಡಿತು. ಹೈದರಾಬಾದಿನ ಬೀದಿಬೀದಿಗಳಲ್ಲಿ ಜನರು ಗುಂಪು ಸೇರಿ ಬಂಡಾಯಕ್ಕೆ ನೈಜಾಮರು ಸೇರಬೇಕೆಂದು ಭೋರ್ಗರೆದರು. ಇಂತಹ ವಿಷಮ ಸನ್ನಿವೇಶದಲ್ಲಿ ನೈಜಾಮರಾಗಿದ್ದ ನಸೀರುದ್ದೌಲ ಅವರು ಕಾಲವಾಗಿಹೋದರು.

ಹೈದರಾಬಾದ್ ಒಂದಾಯಕ್ಕೆ ಸೇರಿದ್ದರೆ ಮಧ್ಯಭಾರತ, ದಕ್ಷಿಣಭಾರತಗಳಲ್ಲಿ ಕೂಡ ಒಂದಾಯದ ಕಿಚ್ಚು ಹರಡಿ ಆ ಪ್ರದೇಶಗಳು ಉರಿದುಹೋಗುತ್ತಿದ್ದವು. ನೈಜಾಮರು ಒಂದಾಯಕ್ಕೆ ಸೇರಿದರೆ ಸರ್ವನಾಶವಾದಂತೆಯೇ ಎಂದು ಬೊಂಬಾಯಿ ರಾಜ್ಯಪಾಲರು ಹೈದರಾಬಾದಿನ ಬ್ರಿಟಿಷ್ ರಾಜಪ್ರತಿನಿಧಿಗೆ ತಂತಿ ಕಳುಹಿಸಿದರು.

ಸ್ಥೈರ್ಯಕ್ಕೆ, ಸಮಚಿತ್ತಕ್ಕೆ ಹೆಸರಾಗಿದ್ದ ಸಾಲಾರ್ ಜಂಗರು ಹೈದರಾಬಾದ್ ಒಂದಾಯಕ್ಕೆ ಸೇರಲು ಅವಕಾಶ ಕೊಡಲಿಲ್ಲ.

ಹೈದರಾಬಾದ್ ಸಂಸ್ಥಾನದ ಉಳಿವಿಗೇ ಕಾರಣರಾದ ಅವರು ಪ್ರತಿಯೊಂದು ಹೆಜ್ಜೆಯಲ್ಲೂ ವಿರೋಧವನ್ನು ಎದುರಿಸಬೇಕಾಯಿತು. ಆಡಳಿತದ ಎಲ್ಲ ಇಲಾಖೆಗಳಲ್ಲಿಯೂ ಸುಧಾರಣೆ ಮಾಡಿ, ಆರ್ಥಿಕಸ್ಥಿತಿಯನ್ನು ಸಂಪೂರ್ಣವಾಗಿ ಉತ್ತಮಪಡಿಸಿ, ಅರಾಜಕತೆ ತಾಂಡವವಾಡುತ್ತಿದ್ದ ಕಡೆ ಶಾಂತಿ ಶಿಸ್ತುಗಳನ್ನು ಸ್ಥಾಪಿಸಿದ ಅವರ ಸಾಮರ್ಥ್ಯ, ವಿಚಕ್ಷಣತೆಗಳ ಬಗೆಗೆ ಹೈದರಾಬಾದಿನಲ್ಲಿ ಇಂಗ್ಲಿಷ್ ರಾಜಪ್ರತಿನಿಧಿಯಾಗಿದ್ದ ಸ್ಯಾಂಡರ್ಸ್ ಹೀಗೆ ಹೇಳಿದ್ದಾರೆ :—

"ನನ್ನ ಹಿಂದೆ 1820ರಲ್ಲಿ ರಾಜಪ್ರತಿನಿಧಿಯಾಗಿದ್ದ ಸರ್ ಚಾರ್ಲ್ಸ್ ಮೆಟ್‌ಕಾಫ್ ತಮ್ಮ ವರದಿಗಳಲ್ಲಿ ವರ್ಣಿಸಿರುವ ಹೈದರಾಬಾದಿಗೂ, 1860ರಲ್ಲಿ ನಾನು ಮೊದಲಬಾರಿ ನೋಡಿದ ಹೈದರಾಬಾದಿಗೂ, ಸ್ಟುಯರ್ಟ್ ರಾಜರ ಕಾಲದ ಇಂಗ್ಲೆಂಡಿಗೂ ಈಗಿನಕಾಲದ ಇಂಗ್ಲೆಂಡಿಗೂ ಇರುವ ವ್ಯತ್ಯಾಸವಿದೆ. ಇದಕ್ಕೆ ಕಾರಣ ಸರ್ ಸಾಲಾರ್ ಜಂಗ್‌ರ ಜನೋಪಕಾರಿಯಾದ ಆಡಳಿತ ರೀತಿ ಮತ್ತು ಆರ್ಥಿಕ ವಿಚಕ್ಷಣತೆಗಳು ಮತ್ತು ಅವರಿಗೆ ನನ್ನ ಹಿಂದಿದ್ದ ಬ್ರಿಟಿಷ್ ರಾಜಪ್ರತಿನಿಧಿಗಳು ಕೊಟ್ಟ ಬೆಂಬಲ." ಸಾಲಾರ್ ಜಂಗರು ಹಣಕಾಸಿನ ಆಡಳಿತದಲ್ಲಿ ಅವರನ್ನು ಮೀರಿಸಿದವರು ಭಾರತದಲ್ಲಿ 19ನೆಯ ಶತಮಾನದಲ್ಲಿ ಮತ್ತಾರೂ ಇರಲಿಲ್ಲವೆಂಬ ಪ್ರಖ್ಯಾತಿಯನ್ನು ಗಳಿಸಿದ್ದರು.

ಒಂದುಕಡೆ ಮತ್ಸರಗ್ರಸ್ತರೂ, ಪ್ರಬಲರೂ ಆದ ಶತ್ರುಗಳು ಅವರಿಗೆ ಅಡಿಗಡಿಗೆ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿದ್ದರು. ಅವರ ಪ್ರಾಣವನ್ನೇ [illegible] ತೆಗೆದುಕೊಳ್ಳಬೇಕೆಂಬ ಪ್ರಯತ್ನಗಳಾದವು. ಹಲವು ಬಾರಿ ಅವರು ಗುಂಡಿನೇಟಿನಿಂದ ಪಾರಾದರು. ಇನ್ನೊಂದೆಡೆ ಪ್ರಭುವಾದ ನೈಜಾಮರು ತಮ್ಮ ಪ್ರಧಾನ

ಮಂತ್ರಿ ತಮಗಿಂತ ಎಲ್ಲಿ ಪ್ರಬಲರಾಗಿಬಿಡುವರೋ ಎಂದು ಅಸೂಯಾಪರರಾಗಿ ಆಡಳಿತದಲ್ಲಿ ಅನಾವಶ್ಯಕವಾಗಿ ಪ್ರವೇಶಿಸುತ್ತಾ ಅವರನ್ನು ಕ್ಲೇಶಪಡಿಸುತ್ತಿದ್ದರು. ಸಾಲಾರ್‌ಜಂಗರು ತಮ್ಮ ಮನೆಯ ಹೆಬ್ಬಾಗಿಲಿನಿಂದ ಹೊರಗೆ ಹೋಗಬೇಕಾದರೆ ನೈಜಾಮರ ಅನುಮತಿ ಆವಶ್ಯಕವಾಗಿದ್ದಿತು. ಹೈದರಾಬಾದ್ ಊರಿನ ಹೊರಗಿನ ತಮ್ಮ ಗ್ರೀಷ್ಮ ಕುಟೀರದಲ್ಲಿ ಒಂದು ಕೂಟವನ್ನೊ, ಆಮೋದಕರ ಪ್ರಸಂಗವನ್ನೋ ಏರ್ಪಡಿಸಬೇಕಾದರೆ ಅವರು ತಮ್ಮ ಪ್ರಭುವಿನ ಅನುಮತಿಯನ್ನು ಪಡೆಯಬೇಕಾಗಿದ್ದಿತು. ಬ್ರಿಟಿಷ್ ಸೈನಿಕರ ಕವಾಯತ್ತನ್ನು ವೀಕ್ಷಿಸಲು, ಬ್ರಿಟಿಷ್ ರಾಜಪ್ರತಿನಿಧಿಯನ್ನು ನೋಡಲು ನೈಜಾಮರ ಅಪ್ಪಣೆ ಅಗತ್ಯವಾಗಿದ್ದಿತು. ಇಂತಹ ಸಂದರ್ಭಗಳಲ್ಲಿ ಅನೇಕ ಬಾರಿ. ನೈಜಾಮರು ಅನುಮತಿ ನಿರಾಕರಿಸಿದ್ದುಂಟು. ಸಾಲಾರ್‌ಜಂಗರಿಗೆ ತಮ್ಮ ಪ್ರಭುವಾದ ನೈಜಾಮರ ವಿಷಯದಲ್ಲಿ ಇದ್ದ ನಿಷ್ಠೆ ಅಖಂಡವಾದುದು. ಆದರೆ ನೈಜಾಮರಾದರೋ ಅವರ ವಿಷಯದಲ್ಲಿ ಸಂಶಯಗ್ರಸ್ತರಾಗಿಯೇ, ಅಸಮಾಧಾನದಿಂದಲೇ, ಪ್ರತಿಕೂಲವಾಗಿಯೇ ನಡೆದುಕೊಳ್ಳುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ಹೈದರಾಬಾದಿನ ಮುಖ್ಯಮಂತ್ರಿಗಳಾಗಿದ್ದ ಮೂವತ್ತು ವರ್ಷಗಳ ತಮ್ಮ ಅಧಿಕಾರಾವಧಿಯಲ್ಲಿ ಅದರ ಬಹುಮುಖವಾದ ಪ್ರಗತಿಗೆ ಕಾರಣರಾದ ಕೀರ್ತಿ ಸರ್ ಸಾಲಾರ್‌ಜಂಗರಿಗೆ ಸಲ್ಲತಕ್ಕದ್ದು.

ಸಂಸ್ಕೃತಭಾಷೆಯಲ್ಲಿ ಮಹಾವಿದ್ವಾಂಸರೆಂದು ಪ್ರಖ್ಯಾತರಾಗಿ, ಅದರ ಪುನರುದ್ಧಾರಕ್ಕಾಗಿ ಶ್ರಮಿಸಿದ ಸರ್ ಮೋನಿಯರ್ ವಿಲಿಯಮ್ಸ್‌ರು, ಸರ್ ಸಾಲಾರ್ ಜಂಗ್ ಸರ್ ಟಿ. ಮಾಧವರಾಯರಂತಹ ವ್ಯಕ್ತಿಗಳು ಈ ದೇಶದಲ್ಲಿ ಎರಡು ಮೂರು ಶತಮಾನಗಳಿಗೊಮ್ಮೆ ಮಾತ್ರ ಹುಟ್ಟಬಲ್ಲರು ಎಂದು ಹೇಳಿದ್ದಾರೆ. ಸರ್. ದಿನಕರರಾವ್, ಪೆಂಬಾಕಂ ರಾಮಯ್ಯಂಗಾರ್ ಶ್ರೇಷ್ಠರಾದ ರಾಜನೀತಿಜ್ಞರೆಂಬ ಕೀರ್ತಿಯನ್ನು ಸಂಪಾದಿಸಿದ್ದರು. ಸರ್ ಶೇಷಯ್ಯಶಾಸ್ತ್ರಿಗಳು ಆಡಳಿತವನ್ನು ನಿರ್ವಹಿಸುವುದರಲ್ಲಿ ಇವರಾರಿಗೂ ಕಡಿಮೆಯಾಗಿರಲಿಲ್ಲ.

ದೇಶದ ಚರಿತ್ರೆಯ ಸಂಧಿಕಾಲದಲ್ಲಿ ಈ ಪುಣ್ಯಪುರುಷರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು.

(ii)

ದಿವಾನ್ ರಂಗಾಚಾರ್ಲು ಮದ್ರಾಸ್ ಪ್ರಾಂತ್ಯದಲ್ಲಿ ಜನಿಸಿದರು. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಆ ಪ್ರದೇಶದಲ್ಲಿ ಕಂಡುಬಂದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಈಗ ಪರಿಚಯಮಾಡಿ ಕೊಳ್ಳೋಣ. ಇದರಿಂದ ರಂಗಾಚಾರ್ಲುರವರು ಬೆಳೆದ ಸಾಮಾಜಿಕ, ರಾಜಕೀಯ ವಾತಾವರಣದ ಪರಿಚಯವಾಗುತ್ತದೆ.

ವ್ಯಾಪಾರದಲ್ಲಿ ಬಹಳ ಐಶ್ವರ್ಯ ಗಳಿಸಿ ವಣಿಕಶ್ರೇಷ್ಠರಾಗಿದ್ದ ಗಾಜಲು ಲಕ್ಷ್ಮೀನರಸು ಚೆಟ್ಟರು, ಮದ್ರಾಸ್ ಪ್ರಾಂತ್ಯದ ರಾಜಕೀಯ ಜಾಗೃತಿಗೆ ಕಾರಣರಾದ ಮಹಾವ್ಯಕ್ತಿಗಳು. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಅಂತರ್ಯುದ್ಧ ಪ್ರಾರಂಭವಾದಾಗ ಆ ದೇಶದ ದಕ್ಷಿಣಪ್ರದೇಶದಲ್ಲಿ ಬೆಳೆಯುತ್ತಿದ್ದ ಹತ್ತಿಯು ರಫ್ತು ಇಂಗ್ಲೆಂಡಿಗೆ ನಿಂತಿತು ಇದರಿಂದ ಇಂಗ್ಲೆಂಡಿನಲ್ಲಿ ಭಾರತದ ಹತ್ತಿಗೆ ಬೇಡಿಕೆ ಪ್ರಬಲವಾಯಿತು. ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಈ ದೇಶದಿಂದ ರಫ್ತಾಗತೊಡಗಿತು. ಆಗ ಆ ವ್ಯಾಪಾರದಲ್ಲಿ ಬಹಳ ಹಣವನ್ನು ಗಾಜಲು ಸಂಪಾದಿಸಿದರು. ಹೀಗೆ ಶ್ರೀಮಂತರಾದ ಮೇಲೆ ಅವರು ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸಿದರು. ದೇಶದ ರಾಜಕೀಯ ಪ್ರಗತಿಗಾಗಿ ಶ್ರಮಿಸತೊಡಗಿದರು.

ಈ ಕಾಲದಲ್ಲಿ ಯೂರೋಪಿನಿಂದ ಬಂದ ಕ್ರೈಸ್ತಧರ್ಮಪ್ರಚಾರಕರು ಮದ್ರಾಸ್ ರಾಜ್ಯದಲ್ಲಿ ಜನರನ್ನು ಕ್ರೈಸ್ತಮತಕ್ಕೆ ಸೇರಿಸುವ ಕಾರ್ಯವನ್ನು ಬಹು ರಭಸದಿಂದ ಸಾಗಿಸುತ್ತಿದ್ದರು. ಸರ್ಕಾರದಲ್ಲಿ ಅಧಿಕಾರಿಗಳಾಗಿದ್ದ ಬ್ರಿಟಿಷರ ಪೂರ್ಣ ಬೆಂಬಲ ಅವರಿಗಿದ್ದಿತು. ಕ್ರೈಸ್ತಧರ್ಮಸಂಸ್ಥೆಗಳು ನಡೆಸುತ್ತಿದ್ದ ಶಾಲೆಗಳಲ್ಲಿ ಓದುತ್ತಿದ್ದ ಅನೇಕ ಯುವಕರನ್ನು ಹೀಗೆ ಅವರು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸಿದ್ದರು. ಸರ್ಕಾರದ ಕೆಲಸವನ್ನು ಕೊಡುವುದರಲ್ಲಿ ಕ್ರೈಸ್ತಧರ್ಮಾನುಯಾಯಿಗಳಿಗೆ ಮತಾಂತರಗೊಂಡವರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದ್ದಿತು. ಸ್ವಧರ್ಮವನ್ನು ಬಿಡದೇ ಇದ್ದ ಜನರನ್ನು ಸರ್ಕಾರೀ ಕೆಲಸಗಳಿಗೆ ನೇಮಕ ಮಾಡುವಾಗ ಕಡೆಗಣಿಸಲಾಗುತ್ತಿದ್ದಿತು.

1844ರಲ್ಲಿ ಗಾಜಲು ಅವರು “ಕ್ರೆಸೆಂಟ್” ಎಂಬ ಆಂಗ್ಲ ಪತ್ರಿಕೆಯನ್ನು ಪ್ರಾರಂಭಿಸಿದರು. ಅದರ ಉದ್ದೇಶ ಕ್ರೈಸ್ತಧರ್ಮಪ್ರಚಾರಕರ ಪ್ರಾಬಲ್ಯವನ್ನು

ಕುಗ್ಗಿಸುವುದು, ಭಾರತೀಯರ ಹಕ್ಕುಬಾಧ್ಯತೆಗಳನ್ನು ಎತ್ತಿಹಿಡಿಯುವುದು. ಈ ಪತ್ರಿಕೆಯ ನಿರ್ಭಯ ಟೀಕೆಗಳಿಂದ, ಆಡಳಿತದಲ್ಲಿ ಪ್ರಬಲರಾಗಿ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಕ್ರೈಸ್ತಮತಪ್ರಚಾರಕ್ಕೆ ಬೆಂಬಲ ಕೊಡುತ್ತಿದ್ದ ಅಧಿಕಾರಿಗಳು ಹೆದರುವಂತಾಯಿತು.

ಮದ್ರಾಸ್ ಸರ್ಕಾರದವರು ಕ್ರೈಸ್ತರಾಗಿ ಮತಾಂತರಗೊಂಡ ಹಿಂದುಗಳು ಅವಿಭಕ್ತ ಕುಟುಂಬದ ಸ್ವತ್ತಿನಲ್ಲಿ ಹಕ್ಕನ್ನು ಕಳೆದುಕೊಳ್ಳದಿರುವಂತೆ ಶಾಸನವನ್ನು ಮಾಡಬೇಕೆಂದು ತೀರ್ಮಾನಿಸಿದ್ದರು. ಈ ತೀರ್ಮಾನವು ಸಾರ್ವಜನಿಕರಲ್ಲಿ ವಿಶೇಷವಾದ ಅಸಮಾಧಾನವನ್ನುಂಟುಮಾಡಿತು.

ಈ ಬಗ್ಗೆ ಮಸೂದೆಯನ್ನು ಮದ್ರಾಸ್ ಸರ್ಕಾರದವರು ಸಿದ್ಧಪಡಿಸಿದ್ದರು. ಗಾಜಲುರವರು ಈ ಮಸೂದೆಯ ವಿರುದ್ಧ ಚಳುವಳಿಯನ್ನು ಪ್ರಾರಂಭಿಸಿದರು. ಬ್ರಿಟಿಷ್‌ಸರ್ಕಾರಕ್ಕೆ ಈ ಮಸೂದೆಯ ವಿರುದ್ಧವಾಗಿ ಮನವಿಯನ್ನು ಸಲ್ಲಿಸಲಾಯಿತು. ಬ್ರಿಟಿಷ್‌ಸರ್ಕಾರ ಈ ಮನವಿಯನ್ನು ಸ್ವೀಕರಿಸಿತು. ಬ್ರಿಟಿಷ್ ಸರ್ಕಾರವೂ ಮದ್ರಾಸ್‌ಸರ್ಕಾರವೂ ಈ ವಿಷಯವನ್ನು ಚರ್ಚಿಸಿ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದ್ದ ವಿಧಿಗಳನ್ನು ಮಸೂದೆಯಿಂದ ತೆಗೆದುಹಾಕಿದರು.

ಕ್ರೈಸ್ತಧರ್ಮಪ್ರಚಾರಕರು ತಮ್ಮ ಮತಗ್ರಂಥವಾದ ಬೈಬಲನ್ನು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಪಠ್ಯಪುಸ್ತಕವನ್ನಾಗಿ ಮಾಡಿಸಬೇಕೆಂದು ಪ್ರಯತ್ನಮಾಡಿದರು. ಇದರ ವಿರುದ್ಧವೂ ಗಾಜಲುರವರು ಚಳುವಳಿಯನ್ನು ಪ್ರಾರಂಭಿಸಿದರು. ಈಸ್ಟ್‌ಇಂಡಿಯಾ ಕಂಪನಿಯ ಆಡಳಿತ ನಿರ್ವಾಹಕರ ಮಂಡಲಿಗೆ ಈ ವಿಷಯದಲ್ಲಿ ಮನವಿಯನ್ನು ಸಲ್ಲಿಸಲಾಯಿತು. ಮದ್ರಾಸಿನ ರಾಜ್ಯಪಾಲರು ಈ ಮನವಿಯಲ್ಲಿ ಮಾಡಿದ ಆಪಾದನೆಗಳು ನಿಜವಲ್ಲವೆಂದೂ, ಸರ್ಕಾರದ ಕಾಗದ ಪತ್ರಗಳನ್ನು ಗುಟ್ಟಾಗಿ ಹೊರಸಾಗಿಸಿ, ಅಲ್ಲಿ ಇಲ್ಲಿ ಭಾಗಗಳನ್ನು ತೆಗೆದುಕೊಂಡು ಅವುಗಳ ಆಧಾರದ ಮೇಲೆ ಈ ರೀತಿ ದೂರಲಾಗಿದೆ ಎಂದೂ ಹೇಳಿದ್ದರಿಂದ ಆ ಮನವಿಯನ್ನು ತಳ್ಳಿಹಾಕಲಾಯಿತು. 1853ರಲ್ಲಿ ಸರ್ಕಾರಿ ಶಾಲೆಗಳಲ್ಲಿ ಬೈಬಲನ್ನು ಪಠ್ಯಪುಸ್ತಕವನ್ನಾಗಿ ಮಾಡಲು ಮತ್ತೆ ಪ್ರಯತ್ನಿಸಲಾಯಿತು. ಜಾರ್ಜ್ ನಾರ್ಟನ್, ಜಾನ್ ಬ್ರೂಸ್ ನಾರ್ಟನ್ ಮತ್ತು ಗಾಜಲುರವರು ಚಳುವಳಿ ನಡೆಸಿ ಈ ಪ್ರಯತ್ನವನ್ನು ವಿಫಲಗೊಳಿಸಿದರು

1852 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾಗಿದ್ದ ಡ್ಯಾನ್‌ಬಿ ಸೈಮೂರ್ ಭಾರತಕ್ಕೆ ಭೇಟಿಕೊಟ್ಟರು. ಅವರು ಮದ್ರಾಸಿಗೆ ಬಂದಾಗ ಗಾಜಲು ರವರ ಅತಿಥಿಗಳಾಗಿದ್ದರು. ಆಗ ಗಾಜಲುರವರು ಈ ದೇಶೀಯರ ಪೌರ ಹಕ್ಕುಗಳನ್ನೂ, ಧಾರ್ಮಿಕ ಸ್ವಾತಂತ್ರ್ಯವನ್ನೂ ಸರ್ಕಾರವು ಹೇಗೆ ಅತಿಕ್ರಮಿಸುತ್ತಿದೆ ಎಂಬುದನ್ನು ಸೈಮೂರರಿಗೆ ವಿವರಿಸಿದರು. ಮುಖ್ಯವಾಗಿ ಗಾಜಲುರವರು ಹೆಚ್ಚಿನ ಭೂಕಂದಾಯವನ್ನು ಹಾಕಿ ಅದನ್ನು ಕೊಡಲಾಗದಿದ್ದಾಗ ಸರ್ಕಾರವು ರೈತಾಪಿವರ್ಗದವರನ್ನು ಚಿತ್ರಹಿಂಸೆಗೆ ಗುರಿಮಾಡುತ್ತಿರುವುದನ್ನು ಅವರ ಗಮನಕ್ಕೆ ತಂದರು. ಅವರು ಮದ್ರಾಸ್ ಪ್ರಾಂತ್ಯದ ಒಳಪ್ರದೇಶಗಳಲ್ಲಿ ಸೈಮೂರರ ಸಂಚಾರವನ್ನು ಏರ್ಪಡಿಸಿ ಸರ್ಕಾರ ಭೂಕಂದಾಯದ ಬಾಕಿ ವಸೂಲಿಗೆ ಅನುಸರಿಸುತ್ತಿದ್ದ ಕ್ರಮಗಳನ್ನು ಅವರು ಕಣ್ಣಾರ ನೋಡುವಂತೆ ಮಾಡಿದರು. ಸೈಮೂರರು ಕಂಡಿದ್ದರ ವರ್ಣನೆ ಹೀಗಿದೆ:—"ಜನರನ್ನು ತಾಲ್ಲೂಕು ಕಛೇರಿಯ ಮುಂದೆ ನಿಲ್ಲಿಸಿ ಅವರ ಬೆನ್ನುಗಳ ಮೇಲೆ ದೊಡ್ಡ ಕಲ್ಲುಗಳನ್ನು ಹೊರಿಸಲಾಗಿದ್ದಿತು. ಉರಿಬಿಸಿಲಿನ ಬೇಗೆ ಅವರನ್ನು ದಹಿಸುತ್ತಿದ್ದಿತು. ಯಾವ ದೇಹದಂಡನೆಯನ್ನು ಅವರ ಪೂರ್ವಿಕರು ಶಾಸ್ತ್ರಪ್ರಣೀತವೆಂದು ಪ್ರಾಯಶ್ಚಿತ್ತರೂಪವಾಗಿ ಮಾಡುತ್ತಿದ್ದರೋ ಅದನ್ನು ಇಂದು ಅವರು ಶಿಕ್ಷೆಯಾಗಿ ಅನುಭವಿಸುತ್ತಿದ್ದರು. ಕೆಲವರ ಹೆಬ್ಬೆಟ್ಟುಗಳನ್ನು ಲೋಹಪೀಡಕದಿಂದ ಹಿಸುಕಿ ಹಿಂಸಿಸಲಾಗುತ್ತಿದ್ದಿತು. ಮತ್ತೆ ಕೆಲವರನ್ನು ತಲೆ ಕಾಲು ಸೇರುವ ಹಾಗೆ ಮರಗಳಿಗೂ ಕಂಬಗಳಿಗೂ ಕಟ್ಟಿಹಾಕಲಾಗಿದ್ದಿತು. ಇದೆಲ್ಲಾ ತಹಶೀಲ್‌ದಾರನ ಕಣ್ಣ ಮುಂದೆ ನಡೆಯುತ್ತಿದ್ದರೂ, ನೋವಿನಿಂದ ನರಳುತ್ತಿದ್ದ ಆ ನತದೃಷ್ಟರ ಕಡೆ ದೃಷ್ಟಿ ಹರಿಸದೇ ತನ್ನ ಕಛೇರಿಯನ್ನು ನಿರ್ಲಿಪ್ತನಾಗಿ ಆತನು ನಡೆಸುತ್ತಿದ್ದನು."

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಸೈಮೂರರು ಕಂದಾಯದ ಬಾಕಿ ವಸೂಲಿಗೆ ಅನುಸರಿಸುತ್ತಿದ್ದ ಈ ಕ್ರೂರ ದಂಡನೆಯನ್ನು ಕುರಿತು ಮಾತನಾಡಿದರು. ಈ ವಿಷಯದ ಪರಿಶೀಲನೆಗೆ ಒಂದು ವಿಚಾರಣಾ ಸಮಿತಿಯನ್ನು ನಿಯಮಿಸಲಾಯಿತು. ಅದು ಹೇರಳವಾದ ಸಾಕ್ಷ್ಯ ಸಾಹಿತ್ಯವನ್ನು ಸಂಗ್ರಹಿಸಿತು. 14ನೇ ಏಪ್ರಿಲ್ 1856ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿಗೆ ಈ ವಿಷಯದಲ್ಲಿ ಒಂದು ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಎಲ್ಲ ಚಳುವಳಿಯ ಪರಿಣಾಮವಾಗಿ ಪಾರ್ಲಿಮೆಂಟ್ ಕಂದಾಯದ ಬಾಕಿ ವಸೂಲಿಗಾಗಿ ಅನುಸರಿಸುತ್ತಿದ್ದ ಕ್ರೂರ ವಿಧಾನಗಳನ್ನು ಖಂಡಿಸಿ ನಿರ್ಣಯಮಾಡಿತು.

1852 ರಲ್ಲಿ ಗಾಜಲುರವರು "ಮದ್ರಾಸ್ ದೇಶೀಯರ ಸಂಘ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಉದ್ದೇಶ ದೇಶೀಯರ ಕುಂದು ಕೊರತೆಗಳನ್ನು ಸರ್ಕಾರದ ಗಮನಕ್ಕೆ ತರುವುದು. ಗಾಜಲುರವರು ಅದರ ಮೊದಲನೆಯ ಅಧ್ಯಕ್ಷರಾದರು. ಪ್ರಮುಖರಾದ ವರ್ತಕರೂ, ಪ್ರಭಾವಶಾಲಿಗಳಾದ ಸಾರ್ವಜನಿಕ ಮುಖಂಡರೂ ಅದರ ಸದಸ್ಯರಾಗಿದ್ದರು. ಪಾರ್ಲಿಮೆಂಟಿಗೆ ಈ ಸಂಘ ಮನವಿಯೊಂದನ್ನು ಒಪ್ಪಿಸಿತು. ಅದರಲ್ಲಿ ಈ ರೀತಿ ಹೇಳಿದೆ:– "ಕರಭಾರ ಹೆಚ್ಚಾಗಿದೆ. ಕಂಪನಿಯ ನ್ಯಾಯಸ್ಥಾನಗಳಲ್ಲಿ ನ್ಯಾಯನಿರ್ಣಯ ನಿಧಾನ ನಾಗುತ್ತಿದೆ. ಕರವನ್ನು ಸಂಗ್ರಹಿಸುವುದರಲ್ಲಿ ಅಧಿಕಾರಿಗಳು ಜನರಿಗೆ ಅನಾವಶ್ಯ ಕವಾಗಿ ಕಿರುಕುಳ ಕೊಡುತ್ತಿದ್ದಾರೆ. ನ್ಯಾಯನಿರ್ಣಯ ನಿಧಾನವಾಗುತ್ತಿರುವು ದಲ್ಲದೇ ಅದರ ವಿತರಣೆಯಲ್ಲಿ ವಿಚಕ್ಷಣತೆ ಸಾಲದು. ಅದನ್ನು ದೊರಕಿಸಿಕೊಳ್ಳು ವುದಕ್ಕೆ ಖರ್ಚು ಜಾಸ್ತಿ. ಇವೇ ಈ ಅರ್ಜಿದಾರರ ಮುಖ್ಯ ದೂರುಗಳಾಗಿವೆ. ರಸ್ತೆಗಳ ಸೇತುವೆಗಳ ನಿರ್ಮಾಣ, ಕಾಲುವೆ ನಾಲೆಗಳನ್ನು ಕಟ್ಟಿ ಜಮೀನುಗಳಿಗೆ ನೀರೊದಗಿಸುವ ನೀರಾವರಿ ಯೋಜನೆಗಳು, ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಅನುಕೂಲ ಇವು ಮುಖ್ಯವಾಗಿ ನಡೆಯಬೇಕಾದ ಕಾರ್ಯಗಳಾಗಿವೆ. ಸರ್ಕಾರದ ಖರ್ಚನ್ನು ಕಡಿಮೆ ಮಾಡುವುದು ಆವಶ್ಯಕವಾಗಿದೆ."

ಜನರ ಸುಖ ಸಂತೋಷಗಳಿಗೆ ಇನ್ನೂ ಹೆಚ್ಚಿನ ಸಾಧಕವಾಗುವಂತೆ, ದೇಶದ ಅಭಿವೃದ್ಧಿಗೆ ಅನುಕೂಲವಾಗುವಂತೆ ರಾಜ್ಯವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಮನವಿಯಲ್ಲಿ ಸೂಚಿಸಲಾಗಿದ್ದಿತು. "ಭಾರತದ ಆಡಳಿತಸೂತ್ರಗಳು ಈಸ್ಟ್ ಇಂಡಿಯಾ ಕಂಪನಿಯ ಕೈಯಲ್ಲಿಯೇ ಇರಲಿ, ಬೇರೆ ಬಗೆಯ ಏರ್ಪಾಡೇ ಆಗಲಿ ಹೊಸ ವ್ಯವಸ್ಥೆಯನ್ನು ಆಗಾಗ ದೇಶದ ಹಿತದೃಷ್ಟಿಯಿಂದ ಬದಲಾವಣೆ ಮಾಡು ವುದಕ್ಕೆ ಉತ್ತಮಪಡಿಸುವುದಕ್ಕೆ ಅವಕಾಶವಿರಬೇಕು. ದೇಶದ ಆಂತರಿಕ ಆಡಳಿತವ್ಯವಸ್ಥೆಯ ಬಗೆಗೆ ಸಾಧ್ಯವಾದರೆ ಮೂರುವರ್ಷಕ್ಕೊಮ್ಮೆ ಇಲ್ಲದಿದ್ದರೆ ಐದುವರ್ಷಕ್ಕೊಮ್ಮೆಯಾದರೂ ಸಾರ್ವಜನಿಕ ವಿಚಾರಣೆಯೂ, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಯೂ ಆಗುವಂತೆ ಏರ್ಪಡಿಸಬೇಕು."

"ಇದರಿಂದ ಬ್ರಿಟಿಷ್ ಸಾಮ್ರಾಜ್ಯದ ದೂರ ದೂರದ ಪ್ರದೇಶಗಳಲ್ಲಿರುವ ಜನರು ತಮ್ಮ ಕುಂದುಕೊರತೆಗಳೇನೆಂಬುದನ್ನು ಮನವಿಮಾಡಿಕೊಂಡು ಅವುಗಳ ಪರಿಹಾರವನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ. ಅಲ್ಲದೇ ಈ

ರೀತಿಯು ಇಂಗ್ಲೆಂಡಿನಲ್ಲಿರುವ ಮೇಲಧಿಕಾರಿಗಳ ಸತತವಾದ ದಬ್ಬ ಮೇಲ್ವಿಚಾರಣೆ ಯಿಂದ ಈ ಪ್ರದೇಶಗಳ ಸರ್ಕಾರಗಳು ತಮ್ಮ ಕಾರ್ಯಗಳನ್ನು ಜನಗಳ ಶ್ರದ್ಧೆ ಯಿಂದ ಸಂಗಾತಾನಂತಾಗುತ್ತದೆ'' ಎಂದು ಮನವಿಯಲ್ಲಿ ಹೇಳಲಾಗಿದೆ

ಗಾಜಲುರವರು ಮದ್ರಾಸ್ ಪ್ರಾಂತ್ಯದ ರಾಜಕೀಯದಲ್ಲಿ ಮಾತ್ರ ಆಸಕ್ತರಾಗಿರಲಿಲ್ಲ. ಬ್ರಿಟಿಷರು ಮೈಸೂರು ರಾಜ್ಯವನ್ನು ಹಿಂದಿನ ರಾಜವಂಶಕ್ಕೆ ಹಿಂದಿರುಗಿಸಬೇಕೆಂದು ಅವರು ಪ್ರತಿಪಾದಿಸಿದರು. ಮೈಸೂರಿಗೆ ಹೋಗಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದತ್ತುಸ್ವೀಕಾರಮಾಡಿ ರಾಜ್ಯಾಡಳಿತವನ್ನು ಮತ್ತೆ ಪಡೆಯುವ ಹೋರಾಟವನ್ನು ಮುಂದುವರಿಸಬೇಕೆಂದು ಸಲಹೆಯನ್ನು ಕೊಟ್ಟರು

1868ರಲ್ಲಿ ಗಾಜಲುರವರು ವಿಧಿವಶರಾದರು. ಅನಂತರ ಮದ್ರಾಸ ದೇಶೀಯರ ಸಂಘದ ಚಟುವಟಿಕೆಗಳು ನಿಂತುಹೋದವು. ಸ್ವಲ್ಪಕಾಲದ ಅನಂತರ ಆ ಸಂಘವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನವನ್ನು ಮಾಡಲಾಯಿತು. ಆದರೆ ಆ ವೇಳೆಗೆ ಮದ್ರಾಸ್ ರಾಜ್ಯಪಾಲರಾಗಿದ್ದ ಸರ್ ಮೌಂಟ್ ಸ್ಟುವರ್ಟ್ ಗ್ರ್ಯಾಂಟ್‌ಡಫ್ ಅವರು ಜನಗಳ ಆಶೋತ್ತರಗಳನ್ನು ಪ್ರತಿನಿಧಿಸುವ ಸಂಸ್ಥೆಗಳನ್ನು ದಮನಮಾಡುವ ನೀತಿಯನ್ನು ಅನುಸರಿಸಲಾರಂಭಿಸಿದ್ದರು. ಆದ್ದರಿಂದ ಸರ್ಕಾರದ ಅಧಿಕಾರಿಗಳಾಗಿದ್ದ ಈ ಸಂಸ್ಥೆಯ ಅನೇಕ ಸದಸ್ಯರು ಅದನ್ನು ಬಿಟ್ಟು ಹೋಗಬೇಕಾಯಿತು. ಹೀಗೆ ಈ ಸಂಸ್ಥೆಯನ್ನು ಪುನಶ್ಚೇತನಗೊಳಿಸುವ ಪ್ರಯತ್ನವು ವಿಫಲವಾಯಿತು. ಈ ಸಂಸ್ಥೆ ಸಂಪೂರ್ಣವಾಗಿ ನಿಂತುಹೋಯಿತು.

ಸರ್ಕಾರದ ದಬ್ಬಾಳಿಕೆ ದಿನದಿನಕ್ಕೆ ತೀವ್ರವಾಗುತ್ತಾ ಅಸಹನೀಯವೆನಿಸುವ ಪರಿಸ್ಥಿತಿ ಒದಗಿತು. ಜನಗಳಲ್ಲಿ ಅಸಮಾಧಾನ ಹರಡಿತು. ಅವರು ಪ್ರಕ್ಷುಬ್ಧಗೊಂಡರು. ಇಂತಹ ಸನ್ನಿವೇಶದಲ್ಲಿ ಪ್ರಾತಿನಿಧಿಕವಾದ ಒಂದು ಸಂಸ್ಥೆಯನ್ನು ಅಸ್ತಿತ್ವಕ್ಕೆ ತರುವ ಅಗತ್ಯವನ್ನು ಸಾರ್ವಜನಿಕ ಮುಖಂಡರು ಕಂಡುಕೊಂಡರು. ಹೀಗೆ 1884ರಲ್ಲಿ ಮದ್ರಾಸ್ ಮಹಾಜನ ಸಭೆಯನ್ನು ಸ್ಥಾಪಿಸಲಾಯಿತು.

ಸೇಲಂ ರಾಮಸ್ವಾಮಿ ಮೊದಲಿಯಾರ್ ಜಿಲ್ಲಾ ಮುನ್ಸೀಫರಾಗಿ ಕೆಲಸ ಮಾಡುತ್ತಿದ್ದರು. ನ್ಯಾಯವಾದಿಯಾಗಿ ಕೀರ್ತಿಗಳಿಸಿದ ಇವರು ಬಹು ಚಿಕ್ಕ ವಯಸ್ಸಿನಲ್ಲಿಯೇ ಜಿಲ್ಲಾ ಮುನ್ಸೀಫರಾದರು. ಕೆಲವು ಕಾಲದ ಅನಂತರ ನ್ಯಾಯಾ

ಧೀಶರ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸಾರ್ವಜನಿಕ ಸೇವೆಯನ್ನು ಕೈಗೊಂಡರು. ಇವರು ಮದ್ರಾಸ್ ಮಹಾಜನ ಸಭೆಯ ಪ್ರಮುಖ ಸದಸ್ಯರಲ್ಲೊಬ್ಬರಾಗಿದ್ದರು. ಅವರ ದಕ್ಷ ಮಾರ್ಗದರ್ಶನದಲ್ಲಿ ಆ ಸಂಸ್ಥೆಯ ಕಾರ್ಯಕ್ಷೇತ್ರವು ವಿಶಾಲವಾಗಿ ಅದು ತನ್ನ ಕಾರ್ಯವನ್ನು ಹೆಚ್ಚು ಯಶಸ್ವಿಯಾಗಿ ಮಾಡಲು ಅವಕಾಶವಾಯಿತು. ಮಹಾಜನ ಸಭೆ ಮದ್ರಾಸ್ ಪ್ರಾಂತ್ಯದ ರಾಜಕೀಯ ಜೀವನವನ್ನು ಬಹುಕಾಲ ರೂಪಿಸಿತು. ರಾಜಾ ಸರ್ ಟಿ. ಮಾಧವರಾವ್, ಪೂಂಡಿ ರಂಗನಾಥ ಮೊದಲಿಯಾರ್, ಸಿ. ಶಂಕರನ್‌ನಾಯರ್, ಎಸ್ ಸುಬ್ರಹ್ಮಣ್ಯ ಅಯ್ಯರ್, ಟಿ. ರಂಗಾಚಾರಿ ಮತ್ತು ದಿವಾನ್ ಬಹದ್ದೂರ್ ರಘುನಾಥರಾವ್ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾ ಇದ್ದರು. ಆ ಕಾಲದಲ್ಲಿ ಪ್ರಾಂತ್ಯದ ಸಾರ್ವಜನಿಕ ಜೀವನದಲ್ಲಿ ಇವರು ಮುಖಂಡರಾಗಿದ್ದರು.

1885ರಲ್ಲಿ ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದವು. ಈ ಸಂದರ್ಭದಲ್ಲಿ ಭಾರತದೇಶದಿಂದ ಮುಖಂಡರು ಅಲ್ಲಿಗೆ ಹೋಗಿ, ಇಲ್ಲಿಯ ಸಾರ್ವಜನಿಕರ ಕುಂದುಕೊರತೆಗಳೇನೆಂಬುದನ್ನು ಅಲ್ಲಿಯ ಜನರಿಗೆ ಮನವರಿಕೆ ಮಾಡಿಕೊಡಬೇಕೆಂದು ತೀರ್ಮಾನಿಸಲಾಯಿತು. ಬೊಂಬಾಯಿ, ಬಂಗಾಳ ಮತ್ತು ಮದ್ರಾಸ್ ಪ್ರಾಂತ್ಯಗಳಿಂದ ಈ ಕಾರ್ಯಕ್ಕಾಗಿ ಪ್ರತಿನಿಧಿಗಳನ್ನು ಆರಿಸಲಾಯಿತು. ಸೇಲಂ ರಾಮಸ್ವಾಮಿ ಮೊದಲಿಯಾರ್‌ರವರು ಮದ್ರಾಸ್ ಪ್ರಾಂತ್ಯದಿಂದ ಹೀಗೆ ಆಯ್ಕೆಯಾದರು. ಬ್ರಿಟನ್ನಿನಲ್ಲಿ ಸಾರ್ವಜನಿಕ ಸಂಸ್ಥೆಗಳಲ್ಲಿ ಭಾರತದ ಪರಿಸ್ಥಿತಿಯ ಬಗ್ಗೆ ಅವರು ಭಾಷಣಗಳನ್ನು ಮಾಡಿದರು. ಈ ದೇಶದ ಜನರ ಕುಂದುಕೊರತೆಗಳ ಪರಿಚಯುವನ್ನು ಅಲ್ಲಿಯ ಸಾರ್ವಜನಿಕರಿಗೆ ಅವರು ಮಾಡಿಕೊಟ್ಟರು.

1886ರಲ್ಲಿ ಅಸ್ತಿತ್ವಕ್ಕೆ ಬಂದ ಸಾರ್ವಜನಿಕ ಸೇವಾ ಆಯೋಗದ ಸದಸ್ಯರಾಗಿ ಅವರನ್ನು ಭಾರತ ಸರ್ಕಾರದವರು ನಿಯಮಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಲಾಪಗಳಲ್ಲಿಯೂ ಅವರು ಭಾಗವಹಿಸಿದರು. ಆ ಸಂಸ್ಥೆಯ ಅಧ್ಯಕ್ಷರಾಗಬೇಕೆಂದು ಅವರನ್ನು ಕೇಳಿಕೊಳ್ಳಲಾಯಿತು. ಆ ಪದವಿಗೆ ತಕ್ಕ ಅರ್ಹತೆಯನ್ನು ತಾವು ಸಂಪಾದಿಸಿಲ್ಲವೆಂದು ನಮ್ರತೆಯಿಂದ ಸೂಚಿಸಿ ಆ ಪದವಿಯನ್ನು ಅಲಂಕರಿಸಲು ಅವರು ಒಪ್ಪಲಿಲ್ಲ. ಹೀಗೆ ಬಹುವಿಧವಾದ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡಿ ಸಾರ್ವಜನಿಕ ಹಿತಕ್ಕಾಗಿ ಅಹರ್ನಿಶಿ ದುಡಿದ ಈ ಪುಣ್ಯಾತ್ಮರ ಸೇವಾ

ಯೋಗವನ್ನು ಬಹುಕಾಲ ಪಡೆಯುವ ಅದೃಷ್ಟ ದೇಶಕ್ಕೆ ಇರಲಿಲ್ಲ. ಸೇಲಂ ರಾಮಸ್ವಾಮಿ ಮೊದಲಿಯಾರ್ ಅವರು ತಮ್ಮ ನಲವತ್ತನೆಯ ವಯಸ್ಸಿನಲ್ಲಿಯೇ ದಿವಂಗತರಾದರು.

ಆ ಕಾಲದಲ್ಲಿ ಈ ದೇಶದಲ್ಲಿ ನೆಲೆಸಿದ್ದ ಇಂಗ್ಲಿಷರಲ್ಲಿ ಕೆಲವರು ಜನಗಳ ಆಶೋತ್ತರಗಳಿಗೆ ಪ್ರಬಲವಾದ ಬೆಂಬಲವನ್ನು ಕೊಟ್ಟರು, ರಾಜಕೀಯ ಚಳುವಳಿಗೆ ಸಹಾಯವನ್ನು ಮಾಡಿದರು. ಮದ್ರಾಸಿನಲ್ಲಿ ವಕೀಲರಾಗಿದ್ದ ಜಾನ್ ಬ್ರೂಸ್ ನಾರ್ಟನ್ ಇಂತಹ ಇಂಗ್ಲಿಷರ ಪೈಕಿ ಒಬ್ಬರು.

ಈ ಕಾಲದ ರಾಜಕೀಯ, ಸಾಮಾಜಿಕ ಧ್ಯೇಯೋದ್ದೇಶಗಳೂ, ಆಶೋತ್ತರಗಳೂ ರಂಗಾಚಾರ್ಲುರವರ ತಲೆಮಾರಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿದವು. ರಂಗಾಚಾರ್ಲುರವರಿಗೆ ಅವರ ಜೀವನದಲ್ಲಿ ಈ ಭಾವನೆಗಳು ಸತತವಾದ ಸ್ಫೂರ್ತಿಯ ನೆಲೆಯಾಗಿದ್ದವು. ಮುಂದೆ ಅವರು ಸಾಧಿಸಿದ ಅನೇಕ ಕಾರ್ಯಗಳ ಮೇಲೆ ಈ ಧ್ಯೇಯೋದ್ದೇಶಗಳ ಪ್ರಭಾವವನ್ನು ಕಾಣಬಹುದು.

## (iii)

ರಂಗಾಚಾರ್ಲುರವರು 1831 ನೆಯ ಇಸವಿಯಲ್ಲಿ ಹುಟ್ಟಿದರು. ಅದೇ ವರ್ಷದಲ್ಲಿಯೇ ಬ್ರಿಟಿಷರು ಮೈಸೂರು ಸಂಸ್ಥಾನದ ಆಡಳಿತವನ್ನು ನೇರವಾಗಿ ವಹಿಸಿಕೊಂಡರು. ಅವರು ಜನಿಸುವುದಕ್ಕೆ ಕೇವಲ 32 ವರ್ಷಗಳ ಹಿಂದೆ ಟಿಪ್ಪು ಸುಲ್ತಾನನನ್ನು ಬ್ರಿಟಿಷರು ಮೈಸೂರಿನ ನಾಲ್ಕನೆಯ ಯುದ್ಧದಲ್ಲಿ ಪರಾಭವಗೊಳಿಸಿದ್ದರು. ತನ್ನ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ, ಒಳಗೆ ನುಗ್ಗಿ ಬಂದ ಶತ್ರುಗಳನ್ನು ಎದುರಿಸುತ್ತಾ ಅವನು ಅಸುವನ್ನು ನೀಗಿದ್ದನು. ಅವನ ಮರಣದಿಂದ ವಿಸ್ತಾರವೂ ಸಮೃದ್ಧವೂ ಆದ ಮೈಸೂರು ರಾಜ್ಯ ಬ್ರಿಟಿಷರ ಕೈವಶವಾಗಿದ್ದಿತು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಸ್ತಿತ್ವಕ್ಕೆ ಕುಠಾರಪ್ರಾಯವಾದ ವಿಪ್ಲವ 1857ರಲ್ಲಿ ಸಂಭವಿಸಿದಾಗ ರಂಗಾಚಾರ್ಲುರವರಿಗೆ ಇಪ್ಪತ್ತಾರು ವರ್ಷ. ಅವರು ಮೈಸೂರು ಸಂಸ್ಥಾನಕ್ಕೆ ಬಂದಾಗ ಆಗತಾನೆ ಮುಮ್ಮಡಿ ಕೃಷ್ಣರಾಜ ಒಡೆಯರವರ ಸುಮಾರು ಐದು ದಶಕಗಳ ಅರಸುತನ ಕೊನೆಗೊಂಡಿತ್ತು, ಬ್ರಿಟಿಷರು ಮೈಸೂರಿನ ಆಡಳಿತ ವಹಿಸಿಕೊಂಡು [illegible]

ನಲವತ್ತು ವರ್ಷಗಳಾಗಿದ್ದವು. ಆ ಕಾಲವು ಭಾರತೀಯರು ಸರ್ಕಾರದಲ್ಲಿ ಉಚ್ಚ ಸ್ಥಾನ ಗಳಿಸುವುದಕ್ಕೆ ಅಂತಹ ಪ್ರಶಸ್ತವಾದ ಕಾಲವೇನೂ ಆಗಿರಲಿಲ್ಲ.

1881ರಲ್ಲಿ ಬ್ರಿಟಿಷರು ಮೈಸೂರು ರಾಜ್ಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರ ಚಾಮರಾಜೇಂದ್ರಒಡೆಯರಿಗೆ ವಹಿಸಿಕೊಟ್ಟಾಗ ರಂಗಾಚಾರ್ಲುರವರು ಸಂಸ್ಥಾನದ ಪ್ರಥಮ ದಿವಾನರಾಗಿ ನಿಯಮಿತರಾದರು. ಅವರು ದಿವಾನರಾಗಿದ್ದ ಅವಧಿ ಎರಡು ವರ್ಷಕ್ಕೂ ಕಡಿಮೆ. ಅಧಿಕಾರ ಸೂತ್ರಗಳನ್ನು ಅವರು ವಹಿಸಿಕೊಂಡಾಗ ಸಂಸ್ಥಾನ ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಿತು. ಧಾತು ಈಶ್ವರ ಕ್ಷಾಮದಿಂದ ಹತ್ತಿರ ಹತ್ತಿರ ಹತ್ತುಲಕ್ಷ ಜನ ಅನ್ನ ನೀರುಗಳಿಲ್ಲದೇ ಕಾಲವಾಗಿದ್ದರು.

ವ್ಯವಸಾಯ, ವಾಣಿಜ್ಯ, ಕೈಗಾರಿಕೆಗಳು ಮತ್ತೆ ತಲೆಯೆತ್ತುವುದು ಸಾಧ್ಯವಿಲ್ಲವೆಂಬಂತೆ ನಿಂತುಹೋಗಿದ್ದವು. ಸಂಸ್ಥಾನದ ಹಣಕಾಸಿನ ಸ್ಥಿತಿ ಹದಗೆಟ್ಟು ಹೋಗಿದ್ದಿತು.

ಎಂತಹವರನ್ನಾದರೂ ಎದೆಗೆಡಿಸುವ ಇಂತಹ ಸನ್ನಿವೇಶದಲ್ಲಿ ರಾಜ್ಯಾಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡ ರಂಗಾಚಾರ್ಲುರವರ ಸಂಕಲ್ಪಬಲ ಅಭೇದ್ಯವಾದುದು. ಅದೇ ಸಂಸ್ಥಾನಕ್ಕೆ ಶ್ರೀರಕ್ಷೆಯಾಯಿತು. ಎರಡು ವರ್ಷಕ್ಕೂ ಕಡಿಮೆಯಾಗಿದ್ದ ತಮ್ಮ ಅಧಿಕಾರಾವಧಿಯಲ್ಲಿ ಅವರು ಹಣಕಾಸಿನ ಆಡಳಿತದಲ್ಲಿ ಬಿಗಿಯನ್ನೂ ಶಿಸ್ತನ್ನೂ ತಂದುದಲ್ಲದೇ, ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಭದ್ರತೆಯನ್ನು ಕಲ್ಪಿಸಿದರು. ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವಂತಹ ಪ್ರಗತಿಪರ ಆಡಳಿತಕ್ಕೆ ಅವರು ಭದ್ರವಾದ ಅಸ್ತಿಭಾರವನ್ನು ಹಾಕಿದರು.

ಅವರ ಚಾರಿತ್ರ್ಯಶುದ್ಧಿ ಲೋಕಪ್ರಸಿದ್ಧವಾದುದು. ಅವರು ತಮ್ಮ ಅಧಿಕಾರಾವಧಿಯಲ್ಲಿ ಆಡಳಿತದ ನೈತಿಕಪುಟ್ಟವನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದರು. ಮದ್ರಾಸ್‌ರಾಜ್ಯದಲ್ಲಿ ಒಂದು ಸಣ್ಣ ಹುದ್ದೆಯಲ್ಲಿದ್ದು ಅಜ್ಞಾತರಾಗಿದ್ದಾಗ ಅವರು ಭ್ರಷ್ಟಾಚಾರದ ವಿಷಯದಲ್ಲಿ ಒಂದು ಸಣ್ಣ ಪುಸ್ತಕವನ್ನು ಪ್ರಕಟಿಸಿದರು. ಆದರಿಂದ ಅವರು ದೊಡ್ಡ ಅಧಿಕಾರಸ್ಥಾನಗಳಲ್ಲಿದ್ದ ಪ್ರಭಾವಶಾಲಿಗಳಾದ ವ್ಯಕ್ತಿಗಳ ಕೋಪವನ್ನು ಎದುರಿಸಬೇಕಾಗಿ ಬಂದರೂ ಧೃತಿಗೆಡಲಿಲ್ಲ.

ದಿವಾನರಾದ ಮೇಲೆ ರಾಜ್ಯಾಡಳಿತದಲ್ಲಿ ಎಲ್ಲಿ ಭ್ರಷ್ಟಾಚಾರ ಕಂಡುಬಂದರೂ ಅದನ್ನು ಸಂಪೂರ್ಣವಾಗಿ ತೊಡೆದುಹಾಕಲು ಅವರು ಪ್ರಯತ್ನಿಸಿದರು.

ರಂಗಾಚಾರ್ಲುರವರು ಮಹಾಧೈರ್ಯಶಾಲಿಗಳು. ಆತ್ಮಸಾಕ್ಷಿಗೆ ಸರಿಯಾಗಿ ಕಂಡುಬಂದುದನ್ನು ಏನೇ ಕಷ್ಟ ಬರಲಿ ಮಾಡುವ ಮನೋದಾರ್ಢ್ಯ ಅವರಿಗಿದ್ದಿತು. ಅವರು ದಿವಾನರಾದುದು ಆಗ ದೊಡ್ಡ ಅಧಿಕಾರಸ್ಥಾನದಲ್ಲಿದ್ದ ಬ್ರಿಟಿಷರು, ದಕ್ಷರೂ ಸಮರ್ಥರೂ ಆದ ಭಾರತೀಯರಿಗೆ ಕೊಡುತ್ತಿದ್ದ ಪ್ರೋತ್ಸಾಹಕ್ಕೆ ನಿದರ್ಶನವಾಗಿದೆ. ಹಾಗೆಯೇ ಅದು ರಂಗಾಚಾರ್ಲುರವರ ವ್ಯಕ್ತಿತ್ವದ ಹಿರಿಮೆಯನ್ನೂ, ಚಾರಿತ್ರ್ಯದ ಘನತೆಯನ್ನೂ ಎತ್ತಿತೋರಿಸುವುದಾಗಿದೆ.

ಅವರು ದಕ್ಷವೂ, ಪ್ರಗತಿಪರವೂ, ಪ್ರಾಮಾಣಿಕವೂ ಆದ ಆಡಳಿತ ವ್ಯವಸ್ಥೆಯನ್ನು ನಿರ್ಮಿಸುವ ಮಹಾಪ್ರಯತ್ನದಲ್ಲಿದ್ದಾಗಲೇ ವಿಧಿವಶರಾದರು. ಅವರ ಶಕ್ತಿಸಾಮರ್ಥ್ಯಗಳಿಂದ ದೇಶಕ್ಕೆ ತುಂಬಾ ಒಳಿತಾಗುವ ಕಾಲದಲ್ಲಿಯೇ ವಿಧಿ ಅವರ ಬಾಳನ್ನು ಮೊಟಕು ಮಾಡಿತು. ಆದರೆ ಅವರು ಸಂಸ್ಥಾನದ ಆಡಳಿತ ವ್ಯವಸ್ಥೆಗೆ ಹಾಕಿದ ಅಸ್ತಿಭಾರ ಸ್ಥಿರವಾಗಿ ನಿಂತಿದೆ.

ಆ ಕಾಲದಲ್ಲಿ ಬಹಳ ಸಮರ್ಥರಾದ ಇತರ ದಿವಾನರೂ ಇದ್ದರು. ಆದರೆ ರಂಗಾಚಾರ್ಲುರವರ ವೈಶಿಷ್ಟ್ಯ ಅವರಿಗೆ ಪ್ರಜಾಪ್ರಭುತ್ವದಲ್ಲಿದ್ದ ಅಚಲವಾದ ವಿಶ್ವಾಸ, ಜನಸಾಮಾನ್ಯರ ವಿಷಯದಲ್ಲಿ ಅವರಿಗಿದ್ದ ಗಾಢವಾದ ಪ್ರೀತಿ. ಅವರು 1881ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪಿಸಿದರು. ಅಂತಹ ಸಭೆ ದೇಶದ ಮತ್ತೆ ಇನ್ನಾವ ಭಾಗದಲ್ಲಿಯೂ ಅಸ್ತಿತ್ವದಲ್ಲಿರಲಿಲ್ಲ. ಅಷ್ಟೇ ಅಲ್ಲ, ಪ್ರಜಾಪ್ರತಿನಿಧಿಗಳನ್ನೊಳಗೊಂಡ ಇಂತಹ ಸಭೆಯನ್ನು ಸ್ಥಾಪಿಸಬೇಕೆಂಬ ಪ್ರಯತ್ನ ಕೂಡ ಬ್ರಿಟಿಷ್ ಪ್ರಾಂತ್ಯಗಳಲ್ಲಿಯಾಗಲಿ ದೇಶೀಯ ಸಂಸ್ಥಾನಗಳಲ್ಲಿಯಾಗಲಿ ನಡೆದಿರಲಿಲ್ಲ.

ರಂಗಾಚಾರ್ಲುರವರು ನಿಧನರಾಗಿ ಈಗ್ಗೆ 87 ವರ್ಷಗಳು ಸಂದಿವೆ. ಪ್ರಾಮಾಣಿಕತೆ ಚಾರಿತ್ರ್ಯ ಶುದ್ಧಿಗಳಿಂದ, ಸಾರ್ವಜನಿಕ ಸೇವಾತತ್ಪರತೆಯಿಂದ ಅವರು ಎಲ್ಲ ಜನಸೇವಕರಿಗೆ ಆದರ್ಶಪ್ರಾಯರು. ಮುಂದಿನ ಪುಟಗಳಲ್ಲಿ ಅವರ ಕಾಲದ ಪರಿಚಯವನ್ನೂ ಅವರ ಜೀವನವೃತ್ತಾಂತವನ್ನೂ ಕೊಡುವ ಪ್ರಯತ್ನವನ್ನು ಮಾಡಲಾಗಿದೆ.

## ಅಧ್ಯಾಯ 1

# ಬಾಲ್ಯ

ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಗುಂಟೂರಿನ ಸಮೀಪದಲ್ಲಿ ವೀರವಲ್ಲಿ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ರಂಗಾಚಾರ್ಲುರವರ ಹಿರಿಯರು ವಾಸಿಸುತ್ತಿದ್ದರು. ಶ್ರೀವೈಷ್ಣವ ಬ್ರಾಹ್ಮಣರಾದ ಈ ಕುಟುಂಬ ಯಾವ ಅನುಕೂಲವೂ ಇಲ್ಲದೆ ಬಡತನದ ಬೇಗೆಯಿಂದ ನರಳುತ್ತಿದ್ದಿತು. ಜೀವನೋಪಾಯಕ್ಕೆ ಮಾರ್ಗವಾದೀತೆಂಬ ಆಶೆಯಿಂದ ಈ ಕುಟುಂಬ ತಮಿಳುನಾಡಿನಲ್ಲಿರುವ ಚೆಂಗಲ್‌ಪೇಟೆ ಪಟ್ಟಣಕ್ಕೆ ಎರಡು ಮೈಲಿ ದೂರದಲ್ಲಿರುವ ವೆಂಬಾಕಂ ಎಂಬ ಗ್ರಾಮದಲ್ಲಿದ್ದ ತಮ್ಮ ಬಂಧುಗಳ ಆಸರೆಯನ್ನು ಹೊಂದಿ, ಅಲ್ಲಿಗೆ ಒಂದು ಮೈಲಿ ದೂರದಲ್ಲಿರುವ ಚಿಟ್ಟಪುಣ್ಯ ಎಂಬ ಗ್ರಾಮದಲ್ಲಿ ಬಂದು ನೆಲಸಿತು. ಫಲವತ್ತಾದ ಭೂಮಿ, ಜಲವಸತಿ ಇರುವ ಈ ಗ್ರಾಮ ಅವರಿಗೆ ಆಶ್ರಯವನ್ನಿತ್ತಿತು. ವೀರವಲ್ಲಿಯಿಂದ ಬಂದವರಾದ್ದರಿಂದ ಈ ಕುಟುಂಬ ವೀರವಲ್ಲಿ ಎಂಬುದನ್ನು ತನ್ನ ಮನೆತನದ ಹೆಸರಾಗಿ ಇಟ್ಟುಕೊಂಡಿತು.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಈ ವೀರವಲ್ಲಿ ಮನೆತನಕ್ಕೆ ಸೇರಿದವರಾದ ನರಸಿಂಹಾಚಾರ್ಯರು ಎಂಬುವರು ಆ ಪ್ರದೇಶವಲ್ಲಿ ಪ್ರಸಿದ್ಧರಾಗಿದ್ದರು. ಅವರು ಬಹಳ ನೇಮ, ನಿಷ್ಠೆಗಳಿಂದ ಬಾಳುತ್ತಿದ್ದರು. ಅರುಣೋದಯಕ್ಕೆ ಮುಂಚೆಯೇ ಎದ್ದು ಹಳ್ಳಿಯ ತಟಾಕಕ್ಕೆ ಹೋಗಿ ಅವರು ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಮನೆಗೆ ಬರುವರು. ಅನಂತರ ದೇವರ ಪೂಜೆಗೆ ಕುಳಿತರೆ ಸೂರ್ಯ ನೆತ್ತಿಯ ಮೇಲೆ ಬಂದಾಗಲೇ ಅವರು ಹೊರಗೆ ಬರುವುದು. ಅನಂತರ ಸಾತ್ವಿಕವಾದ ಆಹಾರ. ಸಾಯಂಕಾಲ ರಾಮಾಯಣ ಪ್ರವಚನ. ಹೀಗೆ ಸಾಗುತ್ತಿತ್ತು ಅವರ ದಿನಚರಿ. ಅವರಿಗೆ ಶೇಷಮ್ಮ ಎಂಬ ಪತ್ನಿ ಇದ್ದರು.

ನರಸಿಂಹಾಚಾರ್ಯರಿಗೆ ಅಲ್ಪಸ್ವಲ್ಪ ಭೂಮಿಕಾಣಿ ಇದ್ದಿತು. ಅವರ ಸಂಸಾರದ ಮಿತವಾದ ಖರ್ಚುವೆಚ್ಚಗಳಿಗೆ ಅದರ ಉತ್ಪತ್ತಿ ಸಾಕಾಗುತ್ತಿತ್ತು. ಹೊರಗಿನ

ಪ್ರಪಂಚದ ವ್ಯವಹಾರಗಳ ಸಂಪರ್ಕವಿಲ್ಲದೆ ಬಾಳುತ್ತಿದ್ದ ನರಸಿಂಹಾಚಾರ್ಯರ ಜೀವನ ಶಾಂತವಾಗಿ ಸಾಗುತ್ತಿತ್ತು.

ರಾಘವಾಚಾರ್ಯರು ನರಸಿಂಹಾಚಾರ್ಯರ ಜ್ಯೇಷ್ಠ ಪುತ್ರರು. ಚೆಂಗಲ್‌ಪೇಟೆಗೆ ಎರಡು, ಮೂರು ಮೈಲಿ ದೂರದಲ್ಲಿ ಕೊಳತ್ತೂರು ಎಂಬ ಹಳ್ಳಿ ಇದೆ. ಆ ಊರಿನ ಒಬ್ಬ ವೈದಿಕರ ಮಗಳನ್ನು ರಾಘವಾಚಾರ್ಯರು ಮದುವೆಯಾದರು. ಅವರ ಹೆಂಡತಿಯ ಮನೆಯವರೂ ಬಡವರೇ. ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು, ಒಂದು ಹೆಣ್ಣು ಮಗು. ರಂಗಾಚಾರ್ಲುರವರು ಇವರಿಗೆ ದ್ವಿತೀಯ ಪುತ್ರರಾಗಿ 1831ರಲ್ಲಿ ಜನಿಸಿದರು.

ರಂಗಾಚಾರ್ಲುರವರ ಅಣ್ಣ ನರಸಿಂಹಾಚಾರ್ಲು. ಅವರು ಹೊಸೂರಿನ ತಹಶೀಲದಾರರಾಗಿದ್ದರು. ಪರಮ ಸಾತ್ವಿಕರೂ, ಆಧ್ಯಾತ್ಮ ಪ್ರವೃತ್ತಿಯುಳ್ಳವರೂ ಆದ ಇವರು ಜನರ ವಿಶೇಷ ಭಕ್ತಿ, ಗೌರವಗಳಿಗೆ ಪಾತ್ರರಾಗಿದ್ದರು. ರಂಗಾಚಾರ್ಲು ರವರ ತಮ್ಮ ಶ್ರೀನಿವಾಸಯ್ಯಂಗಾರ್ಯರು ತಿರುಚಿರಾಪಳ್ಳಿಯಲ್ಲಿ ಸರ್ಕಾರದ ಕೆಲಸ ದಲ್ಲಿದ್ದರು. ರಂಗಾಚಾರ್ಲುರವರಿಗೆ ಲಕ್ಷಮ್ಮ ಎಂಬ ಹೆಸರಿನ ಒಬ್ಬ ತಂಗಿ ಇದ್ದರು.

ರಂಗಾಚಾರ್ಲುರವರ ಹೆಸರಿನ ಕೊನೆಯಲ್ಲಿ "ಚಾರ್ಲು" ಎಂಬ ಪದ ಇದೆಯಷ್ಟೆ. ಅವರ ಮನೆತನ ಆಂಧ್ರ ಪ್ರದೇಶದ ವೀರವಲ್ಲಿ ಗ್ರಾಮದಿಂದ ಬಂದುದರ ಕುರುಹು ಇದೆಂದು ಹೇಳಬಹುದು. ರಂಗಾಚಾರ್ಲುರವರ ಮನೆತನವೂ, ಅವರ ಬಂಧುಗಳೂ ಬಡವರಾಗಿದ್ದರೂ ಬುದ್ಧಿವಂತರು, ಸಾಮರ್ಥ್ಯಶಾಲಿಗಳು. ತಿರುವಾಂ ಕೂರಿನ ದಿವಾನರಾಗಿದ್ದ ವೆಂಬಾಕಂ ರಾಮಯ್ಯಂಗಾರ್, ಮದ್ರಾಸಿನ ಪ್ರಸಿದ್ಧ ವಕೀಲರಾಗಿದ್ದ ಸರ್. ವಿ. ಭಾಷ್ಯಂ ಅಯ್ಯಂಗಾರ್ ಇವರು ರಂಗಾಚಾರ್ಲುರವರಿಗೆ ಬಹು ಹತ್ತಿರದ ಸಂಬಂಧಿಗಳು.

ರಂಗಾಚಾರ್ಲುರವರ ತಂದೆಯವರಾದ ರಾಘವಾಚಾರ್ಯರು ಚೆಂಗಲ್‌ಪೇಟೆಯ ಜಿಲ್ಲಾಧಿಕಾರಿಯ ಕಛೇರಿಯಲ್ಲಿ ಗುಮಾಸ್ತರಾಗಿದ್ದರು. ಅವರಿಗೆ ಬರುತ್ತಿದ್ದ ಸಂಬಳ ಕಡಿಮೆ. ಅವರ ಸಂಸಾರ ದೊಡ್ಡದು. ಅಷ್ಟರಲ್ಲಿಯೇ ಸಂಸಾರದ ಖರ್ಚು ತೂಗಿ ಸುವುದು ಕಷ್ಟವಾಗಿದ್ದಿತು. ಒಮ್ಮೆ ರಂಗಾಚಾರ್ಲುರವರು ಸಣ್ಣ ಮಗುವಾಗಿದ್ದಾಗ, ಅವರ ತಾಯಿಯು ಹಿರಿಯ ಮಗನಾದ ನರಸಿಂಹಾಚಾರ್ಲುರವರನ್ನೂ, ಕೈಕೂಸಾ ಗಿದ್ದ ಇವರನ್ನೂ ಕರೆದುಕೊಂಡು ಎತ್ತಿನ ಗಾಡಿಯಲ್ಲಿ ಪ್ರಯಾಣಕ್ಕೆ ಹೊರಟರು.

*

ಗಾಡಿ ತಲೆಕೆಳಗಾಯಿತು. ಮಗುವಿನ ಮೇಲೆ ಅದರ ಚಕ್ರ ಹರಿಯುವುದರಲ್ಲಿದ್ದಿತು. ಅಷ್ಟರಲ್ಲಿ ನರಸಿಂಹಾಚಾರ್ಲುರವರು ಧಾವಿಸಿ ಬಂದು ಮಗುವನ್ನು ಎತ್ತಿಕೊಂಡರು. ಹೀಗೆ ಚಿಕ್ಕ ವಯಸ್ಸಿನಲ್ಲಿ ರಂಗಾಚಾರ್ಲುರವರು ಅಪಾಯದಿಂದ ಪಾರಾದರು.

ಮನೆಯ ಹತ್ತಿರವಿದ್ದ ಕೂಲಿಮಠದಲ್ಲಿಯೇ ರಂಗಾಚಾರ್ಲುರವರ ವಿದ್ಯಾಭ್ಯಾಸ ಪ್ರಾರಂಭವಾಯಿತು. ಅವರು ಓನಾಮ ಕಲಿತದ್ದು ಅಲ್ಲಿಯೇ. ಅವರ ಮನೆಯಲ್ಲಿದ್ದ ವೃದ್ಧೆಯೊಬ್ಬಳು ಅವರಿಗೆ ನಡೆನುಡಿಗಳನ್ನೂ, ಶುಚಿಸಭ್ಯತೆಗಳನ್ನೂ ಕಲಿಸಿದಳು.

ರಾಘವಾಚಾರ್ಯರಿಗೆ ತಮ್ಮ ಗಂಡು ಮಕ್ಕಳಿಗೆ ಇಂಗ್ಲೀಷ್ ಕಲಿಸಬೇಕೆಂದು ಅಭಿಲಾಷೆ. ಆದರೆ ಅದಕ್ಕೆ ತಕ್ಕ ಅನುಕೂಲ ಇರಲಿಲ್ಲ. ಅವರ ಸಹೋದರರಲ್ಲಿ ಒಬ್ಬರು ಗತಿಸಿದಾಗ ಅವರಿಗೆ 800 ರೂಪಾಯಿಗಳನ್ನು ಬಿಟ್ಟು ಹೋದರು. ಕೆಲವು ಕಾಲದ ಅನಂತರ ಮದ್ರಾಸಿನಲ್ಲಿ ಚೆನ್ನಕೇಶವ ದೇವಸ್ಥಾನದಲ್ಲಿ ಅವರಿಗೆ ಅರ್ಚಕರ ಕೆಲಸವನ್ನು ವೆಂಬಾಕಂ ರಾಘವಾಚಾರ್ಯ ಎಂಬುವರು ಮಾಡಿಸಿಕೊಟ್ಟರು. ಇದಾದ ಸ್ವಲ್ಪ ದಿನಗಳಾದ ಮೇಲೆ ಸರ್ಕಾರದ ಕಛೇರಿಯಲ್ಲಿ ಅವರಿಗೆ ಗುಮಾಸ್ತರ ಕೆಲಸವಾಯಿತು. ಹೀಗೆ ಅನಿರೀಕ್ಷಿತವಾದ ಧನಾಗಮನದಿಂದಲೂ, ಮದ್ರಾಸಿನಲ್ಲಿ ಕೆಲಸವಾದುದರಿಂದಲೂ ರಾಘವಾಚಾರ್ಯರಿಗೆ ತಮ್ಮ ಮಕ್ಕಳಿಗೆ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಅವಕಾಶವಾಯಿತು.

ಮೊದಲು ರಂಗಾಚಾರ್ಲುರವರನ್ನೂ, ಅವರ ಅಣ್ಣನವರಾದ ನರಸಿಂಹಾಚಾರ್ಲುರವರನ್ನೂ ಪಚ್ಚಯ್ಯಪ್ಪ ಶಾಲೆಗೆ ಸೇರಿಸಲಾಯಿತು. ಆಗ ರಂಗಾಚಾರ್ಲುರವರಿಗೆ 9 ವರ್ಷ ವಯಸ್ಸು. ಅವರ ಉಪನಯನವೂ ಆಗಲೇ ಆಯಿತು.

ಮದ್ರಾಸಿಗೆ ಬಂದ ರಾಘವಾಚಾರ್ಯರ ಕುಟುಂಬಕ್ಕೆ ಆಶ್ರಯದಾತರಾಗಿ ವೆಂಬಾಕಂ ರಾಘವಾಚಾರ್ಯರು ನಿಂತರು. ಅವರು ಪೋಲೀಸ್ ರಾಘವಾಚಾರ್ಯ ಎಂದು ಪ್ರಸಿದ್ಧರಾಗಿದ್ದರು. ಚಿಕ್ಕ ವಯಸ್ಸಿನಲ್ಲಿ ತಮ್ಮ ತಾಯಿಯನ್ನು ಕಳೆದುಕೊಂಡ ಅವರು ಮದ್ರಾಸಿನಲ್ಲಿ ಹಡಗು ವ್ಯಾಪಾರ ಮಾಡುತ್ತಿದ್ದ ತಮ್ಮ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಆತನು ಅವರಿಗೆ ಇಂಗ್ಲೀಷನ್ನು ಕಲಿಸಿದನು. ಇವರು ಮೊದಲು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಶಿರಸ್ತೇದಾರರರಾಗಿ ನಿಯಮಿತರಾದರು. ತಮ್ಮ ಕೆಲಸ

ವನ್ನು ಬಹು ದಕ್ಷತೆಯಿಂದಲೂ, ಶ್ರದ್ಧೆಯಿಂದಲೂ ನಿರ್ವಹಿಸಿದ್ದರಿಂದ ಅವರನ್ನು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಲಾಯಿತು. ಆ ಕಾಲದಲ್ಲಿ ಇಂತಹ ದೊಡ್ಡ ಹುದ್ದೆಗೆ ಬಂದ ದೇಶೀಯರ ಪೈಕಿ ಇವರೇ ಮೊದಲಿಗರು. ಪೋಲೀಸ್ ರಾಘವಾಚಾರ್ಯರೆಂದು ಪ್ರಸಿದ್ಧರಾದ ಇವರು ನರಸಿಂಹಾಚಾರ್ಯರ ತಂಗಿಯ ಮಗ.

ರಂಗಾಚಾರ್ಲುರವರು ಪಚ್ಚಯ್ಯಪ್ಪ ಶಾಲೆಗೆ ಸೇರಿದ ಮೂರನೆಯ ವರ್ಷವೇ ಅವರ ಕುಟುಂಬಕ್ಕೆ ಆಶ್ರಯದಾತರಾಗಿದ್ದ ಪೋಲೀಸ್ ರಾಘವಾಚಾರ್ಯರು ನಿಧನ ರಾದರು. ಇದರಿಂದ ಆ ಕುಟುಂಬಕ್ಕೆ ದೊಡ್ಡ ಆಘಾತವಾಯಿತು. ಈ ಆಘಾತದಿಂದ ಚೇತರಿಸಿಕೊಳ್ಳುವಷ್ಟರಲ್ಲಿಯೇ ರಾಘವಾಚಾರ್ಯರು ದೈವಾಧೀನರಾದರು. ಆಗ ರಂಗಾ ಚಾರ್ಲುರವರಿಗೆ 13 ವರ್ಷ. ರಾಘವಾಚಾರ್ಯರು ಸಾಯುವಾಗ 500 ರೂಪಾಯಿ ಗಳ ಸಾಲವನ್ನು ಬೇರೆ ಬಿಟ್ಟು ಹೋದರು. ಹೀಗೆ ನಿರ್ಗತಿಕರಾಗಿ ನಿಂತ ಇವರ ಸಂಸಾರಕ್ಕೆ ರಂಗಾಚಾರ್ಲುರವರ ಚಿಕ್ಕಪ್ಪನವರಾದ ರಾಮಯ್ಯಂಗಾರ್ಯರು ಆಶ್ರಯ ವನ್ನು ಕೊಟ್ಟರು.

ರಂಗಾಚಾರ್ಲುರವರು ಪಚ್ಚಯ್ಯಪ್ಪ ಶಾಲೆಯಲ್ಲಿದ್ದಾಗ ಪ್ರಿಯಜ್ಞಾನ ಮೊದಲಿ ಯಾರ್ ಎಂಬ ಉಪಾಧ್ಯಾಯರು ಅವರಲ್ಲಿ ವಿಶೇಷವಾದ ಪ್ರೀತಿ ವಿಶ್ವಾಸಗಳನ್ನು ತೋರಿಸಿದರು. ರಂಗಾಚಾರ್ಲುರವರಿಗೂ ಅವರ ವಿಷಯದಲ್ಲಿ ಬಹಳವಾದ ಭಕ್ತಿ ಗೌರವಗಳು ಉಂಟಾದವು. ಅವರ ಪಾಠ ಪ್ರವಚನಗಳ ರೀತಿ ರಂಗಾಚಾರ್ಲು ಅವರ ಮನಸ್ಸಿಗೆ ಬಹಳವಾಗಿ ಹಿಡಿಸಿತು. ಮುಂದೆ ದೊಡ್ಡ ಅಧಿಕಾರ ಸ್ಥಾನ ಗಳಿಗೆ ಅವರು ಬಂದಾಗ ಪ್ರಿಯಜ್ಞಾನ ಮೊದಲಿಯಾರರು ಆದರ್ಶ ಗುರುಗಳೆಂದು ಸಂದರ್ಭ ಒದಗಿದಾಗಲೆಲ್ಲಾ ಹೇಳುತ್ತಿದ್ದರು. ಪ್ರಿಯಜ್ಞಾನ ಮೊದಲಿಯಾರರು ನಿವೃತ್ತರಾದ ಮೇಲೆ ರಂಗಾಚಾರ್ಲುರವರು ಅವರಿಗೆ ಧನ ಸಹಾಯವನ್ನು ಮಾಡು ತ್ತಿದ್ದರು.

1843ರಲ್ಲಿ ರಂಗಾಚಾರ್ಲುರವರು ಮದ್ರಾಸ್ ಹೈಸ್ಕೂಲನ್ನು ಸೇರಿದರು. ಈ ಶಾಲೆಯ ಮುಖ್ಯಸ್ಥ ಇ. ಬಿ. ಪವೆಲ್ ದಕ್ಷಿಣ ಭಾರತದಲ್ಲಿ ಇಂಗ್ಲೀಷ್ ಪ್ರಚಾರಕ್ಕೆ ಆದ್ಯಪ್ರವರ್ತಕರಲ್ಲೊಬ್ಬರು. ರಾಮಯ್ಯಂಗಾರ್ಯರು ರಂಗಾಚಾರ್ಲುರವರನ್ನೂ, ಅವರ ಅಣ್ಣಂದಿರಾದ ನರಸಿಂಹಾಚಾರ್ಲುರವರನ್ನೂ ಪವೆಲ್ ಅವರ ಬಳಿಗೆ ಕರೆದುಕೊಂಡು ಹೋಗಿ ಈ ಬಾಲಕರ ತಂದೆ ಈಚೆಗೆ ನಿಧನರಾದರೆಂದೂ, ಅವರು ಬಹಳ ಬಡವ

ರೆಂದೂ ಹೇಳಿ ಶಾಲೆಗೆ ಸೇರಿಸಿದರು. ಪವೆಲ್‌ರು ಈ ಇಬ್ಬರು ಹುಡುಗರ ವಿಷಯದಲ್ಲಿ ಬಹಳ ಸಹಾನುಭೂತಿಯನ್ನು ತೋರಿಸಿ ತಾವೇ ಸ್ವಂತವಾಗಿ ಹಣವನ್ನು ಕೊಟ್ಟು ಸಹಾಯಮಾಡುವುದಾಗಿ ಮಾತು ಕೊಟ್ಟರು. ಕೆಲವು ಕಾಲದ ಅನಂತರ ರಂಗಾಚಾರ್ಲುರವರಿಗೆ ತಿಂಗಳಿಗೆ 7 ರೂಪಾಯಿ, ನರಸಿಂಹಾಚಾರ್ಲುರವರಿಗೆ ತಿಂಗಳಿಗೆ 7 ರೂಪಾಯಿ ವ್ಯಾಸಂಗ ವೇತನವನ್ನು ಅವರು ಮಾಡಿಸಿಕೊಟ್ಟರು.

ಶಾಲೆಯಲ್ಲಿ ರಂಗಾಚಾರ್ಲು ಅವರಿಗೆ ಪಾಠಕ್ಕಿಂತ ಆಟದಲ್ಲಿ ಆಸಕ್ತಿ ಹೆಚ್ಚು. ಆದರೆ ಹುಡುಗ ಬುದ್ಧಿಶಾಲಿ. ಹೆಚ್ಚು ಶ್ರಮಪಡದೆ ತನ್ನ ಜತೆಗೆ ಓದುತ್ತಿದ್ದವರನ್ನೆಲ್ಲಾ ಪಾಠ ಪ್ರವಚನಗಳಲ್ಲಿ ಮೀರಿಸುತ್ತಿದ್ದ. ತರಗತಿಯಲ್ಲಿ ಮೊದಲನೆಯ ಸ್ಥಾನವನ್ನು ಯಾರಿಗೂ ಬಿಟ್ಟುಕೊಡುತ್ತಿರಲಿಲ್ಲ. ರಂಗಾಚಾರ್ಲು ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿ, ದೊಡ್ಡವರು ಚದುರಂಗ ಆಡುವುದನ್ನು ಬಹಳ ಆಸಕ್ತಿಯಿಂದ ವೀಕ್ಷಿಸುತ್ತಿದ್ದರು. ಹೀಗೇ ನೋಡಿ ಆಟವನ್ನು ಕಲಿತರು. ಅದರಲ್ಲಿ ವಿಶೇಷವಾದ ಜಾಣ್ಮೆಯನ್ನು ಸಂಪಾದಿಸಿಕೊಂಡರು. ಈ ಆಟವನ್ನು ಆಡುವುದಕ್ಕೆ ದೊಡ್ಡವರು ಕುಳಿತಾಗ ಈ ಬಾಲಕನನ್ನು ಕರೆದು ಅವನ ಸಲಹೆಯನ್ನು ಕೇಳುತ್ತಿದ್ದರು. ಅವರಿಗೆ ಕಾಯಿ ನಡೆಸುವುದಕ್ಕೆ ಹೇಳಿಕೊಟ್ಟು ಅವರು ಗೆಲ್ಲುವಂತೆ ಈ ಹುಡುಗ ಮಾಡುತ್ತಿದ್ದನು. ಹೀಗೆ ಚದುರಂಗದ ಆಟಕ್ಕೆ ಕೂಡುತ್ತಿದ್ದ ಹಿರಿಯರೆಲ್ಲರೂ ಈ ಬಾಲಕನನ್ನು ಹುಡುಕಿ ಕರೆದುಕೊಂಡು ಬಂದು ತಮ್ಮ ಹತ್ತಿರ ಕೂರಿಸಿಕೊಳ್ಳುತ್ತಿದ್ದರು. ಸ್ವಲ್ಪ ದಿನಗಳ ಮೇಲೆ ರಂಗಾಚಾರ್ಲು ತಾವೇ, ತಮಗಿಂತ ದೊಡ್ಡವರೊಂದಿಗೆ ಚದುರಂಗವನ್ನು ಆಡುತ್ತಿದ್ದರು. ಅದಲ್ಲದೆ ಅವರು ಇಸ್ಪೀಟ್ ಆಟವನ್ನು ಕಲಿತ್ತಿದ್ದರು. ಈ ಆಟಗಳಲ್ಲಿ ಬಿಡಿಕಾಸುಗಳನ್ನು ಗೆಲ್ಲುತ್ತಿದ್ದರು. ಈ ಗೆದ್ದ ಹಣವನ್ನು ಖರ್ಚುಮಾಡಿ ಮಿಠಾಯಿಗಳನ್ನೂ, ಇತರ ತಿಂಡಿಗಳನ್ನೂ ಕೊಂಡು ನಲಿಯುತ್ತಿದ್ದರು. ದೊಡ್ಡವರಾದ ಮೇಲೂ ಅವರಿಗೆ ಚದುರಂಗದ ವಿಷಯದಲ್ಲಿ ಹೆಚ್ಚಿನ ಆಸಕ್ತಿ, ಅಭಿಮಾನ ಇದ್ದವೆಂದು ಹೇಳುತ್ತಾರೆ.

ಬಾಲಕನಾಗಿದ್ದಾಗ ರಂಗಾಚಾರ್ಲು ಯಾವ ಮರವನ್ನು ಕಂಡರೂ ಹತ್ತದೆ ಬಿಡುತ್ತಿರಲಿಲ್ಲ. ಗೋಲಿ, ಕಣ್ಣುಮುಚ್ಚಾಲೆ, ಹುಚ್ಚಂಜಗಲಿ ಮುಂತಾದ ಆಟಗಳನ್ನು ತನಗಿಂತ ದೊಡ್ಡವರೊಂದಿಗೆ ಆಡಿ ಅವರನ್ನು ಸೋಲಿಸುತ್ತಿದ್ದನು. ಸುಟಿಯಾಗಿಯೂ, ಚಟುವಟಿಕೆಯಾಗಿಯೂ ಇದ್ದ ಈ ಬಾಲಕ ಎಲ್ಲರ ಪ್ರೀತ್ಯಾದರಗಳನ್ನು ಬೇಗ ಸಂಪಾದಿಸಿಕೊಳ್ಳುತ್ತಿದ್ದನು.

ಶಾಲೆಯಲ್ಲಿ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದು, ಪಾಠದಲ್ಲಿ ಮುಂದಾಗಿದ್ದ ರಂಗಾಚಾರ್ಲುರವರ ವಿಷಯವನ್ನು ಪವೆಲ್‌ರವರು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ 1845–46ನೆಯ ಸಾಲಿಗೆ ಸಲ್ಲಿಸಿದ 5ನೇ ವಾರ್ಷಿಕ ವರದಿಯಲ್ಲಿ ಪ್ರಸ್ತಾಪಿಸಿದ್ದಲ್ಲದೆ ಅವರ ಉತ್ತರ ಪತ್ರಿಕೆಗಳನ್ನು ಕಳುಹಿಸಿಕೊಟ್ಟರು. ಆ ವರದಿಯಲ್ಲಿ ರಂಗಾಚಾರ್ಲುರವರ ವಿಷಯವನ್ನು ಅವರು ಹೀಗೆ ಹೇಳಿದ್ದಾರೆ :— "ಮೂರನೆಯ ತರಗತಿಯಲ್ಲಿರುವ ರಂಗಾಚಾರ್ಲು ವಿಶೇಷ ಅರ್ಹತೆಯನ್ನು ಪಾಠ ಪ್ರವಚನಗಳಲ್ಲಿ ಪ್ರದರ್ಶಿಸಿದ್ದಾನೆ. ಚರಿತ್ರೆ, ಸಾಹಿತ್ಯಗಳಲ್ಲಲ್ಲದೆ, ಗಣಿತದಲ್ಲೂ ಅವನು ತರಗತಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದ್ದಾನೆ. ತನಗಿಂತ ಮೇಲಿನ ತರಗತಿಗಳಲ್ಲಿರುವ ವಿದ್ಯಾರ್ಥಿಗಳೊಂದಿಗೆ ಗಣಿತದಲ್ಲಿ ಸ್ಪರ್ಧಿಸಿ ಅವರನ್ನು ಮೀರಿಸಿದ್ದಾನೆ. ಓದಿನಲ್ಲಿ ಅವನು ತೋರಿರುವ ಪ್ರಗತಿ ಪ್ರಶಂಸಾರ್ಹವಾದುದು. ವಿಶ್ವವಿದ್ಯಾನಿಲಯದ ಕಾರ್ಯಕಾರೀ ಸಮಿತಿಗೆ ಈ ವಿದ್ಯಾರ್ಥಿಯ ಪ್ರಗತಿಯನ್ನು ವರದಿ ಮಾಡಲು ನನಗೆ ಸಂತೋಷವಾಗುತ್ತದೆ. ಪರೀಕ್ಷೆಯಲ್ಲಿ ಅವನು ಬರೆದಿರುವ ಉತ್ತರಗಳು ಅದರಲ್ಲೂ ಇಂಗ್ಲೀಷಿನ ಪ್ರಬಂಧ ಗಮನಾರ್ಹವಾದುದು." 1849ನೆಯ ಇಸವಿಯವರೆಗೆ ರಂಗಾಚಾರ್ಲು ಮದ್ರಾಸ್ ಪ್ರೌಢಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಆ ವರ್ಷ ಫಸ್ಟ್ ಪ್ರೊಫಿಷಿಯಂಟ್ ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆಯಾದರು. ಅವರು ಆ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ತೀರ್ಮಾನಿಸಿದಾಗ ಪವೆಲ್‌ರವರು ಅವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ:— "ನೀನು ನಮ್ಮ ಶಾಲೆಯ ಪರವಾಗಿ ಈ ಸ್ಪರ್ಧೆಗೆ ಸೇರಬೇಕೆಂದು ತೀರ್ಮಾನಿಸಿರುವುದಕ್ಕೆ ನಿನಗೆ ನಾನು ಆಭಾರಿಯಾಗಿದ್ದೇನೆ. ನಿನಗೆ ಶಕ್ತಿ ಸಾಮರ್ಥ್ಯಗಳಿವೆ, ವಿವೇಚನೆ ಇದೆ. ನೀನು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ."

ಅವರು ಈ ಪರೀಕ್ಷೆಗೆ ಅಭ್ಯಾಸ ಮಾಡಿದ ವಿಷಯಗಳು ಈ ಕೆಳಗೆ ಕಂಡಂತಿವೆ :—

(1) ಇಂಗ್ಲೀಷ್ ಸಾಹಿತ್ಯ ಮತ್ತು ವ್ಯಾಕರಣ
(2) ಭೂಗೋಳ ಶಾಸ್ತ್ರ
(3) ರೋಂ ಮತ್ತು ಇಂಗ್ಲೆಂಡ್‌ಗಳ ಸಂಕ್ಷಿಪ್ತ ಇತಿಹಾಸ
(4) ಆಧುನಿಕ ಯೂರೋಪಿನ ಇತಿಹಾಸ
(5) ಭಾರತ ದೇಶದ ಇತಿಹಾಸ

(6) ಮೂಲಭೂತ ತತ್ವಗಳು
(7) ಇತಿಹಾಸ ತತ್ವದರ್ಶನ
(8) ಪ್ರಸಿದ್ಧ ಇಂಗ್ಲೀಷ್ ಲೇಖಕ ಬೇಕನ್‌ನ ಪ್ರಬಂಧಗಳು
(9) ಶೇಕ್ಸ್‌ಪಿಯರ್ ಮಹಾಕವಿಯ ಜೂಲಿಯಸ್ ಸೀಸರ್ ಮತ್ತು ಹ್ಯಾಮ್ಲೆಟ್ ನಾಟಕಗಳು; ಆತನ ಇತರ ಕೆಲವು ನಾಟಕಗಳ ಭಾಗಗಳು.
(10) ಅರ್ಥಶಾಸ್ತ್ರ ಸಂವಾದವೆಂಬ ಗ್ರಂಥ.
(11) ಅಬೆರ್‌ಕ್ರೊಂಬಿ ಎಂಬಾತನು ಬರೆದ ಬುದ್ಧಿ ಶಕ್ತಿಯ ಮೇಲಿನ ವಿದ್ವತ್ಪ್ರಬಂಧ.
(12) ಗಣಿತ – ಅಂಕಗಣಿತ, ಬೀಜಗಣಿತ, ಯೂಕ್ಲಿಡನ ರೇಖಾ ಗಣಿತ, ತ್ರಿಕೋಣಮಿತಿ ಮತ್ತು ಇವುಗಳಿಗೆ ಸಂಬಂಧಿಸಿದ ಇತರ ವಿಷಯಗಳು.
(13) ವಿಜ್ಞಾನ - ಖನಿಜಶಾಸ್ತ್ರ, ರಸಾಯನ ಶಾಸ್ತ್ರ, ಖಗೋಳ ಶಾಸ್ತ್ರ ಮತ್ತು ಇತರ ಭೌತ ಶಾಸ್ತ್ರಗಳು.

ಲಾರ್ಡ್ ಎಲ್‌ಫಿನ್‌ಸ್ಟೋನ್ ಮದ್ರಾಸ್ ಆಧಿಪತ್ಯದ ಗೌರ್ನರರಾಗಿದ್ದವರ ಪೈಕಿ ಬಹು ಪ್ರಸಿದ್ಧನಾದವನು. ಆವನು ಸಲ್ಲಿಸಿದ ಸೇವೆಯ ನೆನಪಿಗಾಗಿ ಮದ್ರಾಸಿನ ಸಾರ್ವಜನಿಕರು ಒಂದು ಮಾಸಿಕ ವ್ಯಾಸಂಗ ವೇತನವನ್ನೂ, ಒಂದು ವಾರ್ಷಿಕ ಬಹುಮಾನವನ್ನೂ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿ ಇಂಗ್ಲೀಷ್ ಪ್ರಬಂಧ ಸ್ಪರ್ಧೆಯಲ್ಲಿ ಮೊದಲನೆಯ ಸ್ಥಾನವನ್ನು ಗಳಿಸಿದ ವಿದ್ಯಾರ್ಥಿಗೆ ಕೊಡ ತಕ್ಕದ್ದೆಂದು ಏರ್ಪಡಿಸಿದ್ದರು. 1849ನೆಯ ಇಸವಿಯಲ್ಲಿ ಈ ಪ್ರಬಂಧ ಸ್ಪರ್ಧೆಗೆ ಆರಿಸಿದ ವಿಷಯ "ಬೇರೆ ಬೇರೆ ಜನಾಂಗಗಳ ಪರಸ್ಪರ ಸಂಪರ್ಕವು ಒಂದೊಂದು ಜನಾಂಗದ ಪ್ರಗತಿಯ ಮೇಲೆ ಯಾವ ರೀತಿ ಪರಿಣಾಮ ಮಾಡುತ್ತದೆ" ಎಂಬುದಾಗಿದ್ದಿತು. ರಂಗಾಚಾರ್ಲುರವರು ಈ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನವನ್ನು ಗಳಿಸಿ ಐದು ಚಿನ್ನದ ಮೊಹರುಗಳನ್ನು ಪಡೆದರು. ಆವರು ಬರೆದ ಪ್ರಬಂಧದ ಕೆಲವು ಅಂಶಗಳು ಹೀಗಿವೆ :— "ಮಾನವನು ಜಗತ್ತಿನಲ್ಲಿ ಅತಿಶ್ರೇಷ್ಠನು. ಜೀವದ ಇತರ ಆವಿಷ್ಕಾರಗಳು ಪ್ರಗತಿಯನ್ನು ಹೊಂದದಯೇ ಲಯವಾಗುತ್ತವೆ. ಆದರೆ ಮಾನವನು ಅನಾಗರಿಕನಾಗಿದ್ದವನು ನಾಗರಿಕನಾಗಿ ಪ್ರಗತಿ ಪಥದಲ್ಲಿ ಮುನ್ನಡೆ

ಯುತ್ತಿದ್ದಾನೆ. ಅವನು ಪ್ರಕೃತಿಯ ಶಕ್ತಿಗಳನ್ನು ತನ್ನ ವಶ ಮಾಡಿಕೊಳ್ಳುತ್ತಾನೆ. ಅವನು ತನ್ನ ಬುದ್ಧಿಶಕ್ತಿ, ಭಾಷಾಶಕ್ತಿ ಮತ್ತು ಭಾವನಾಶಕ್ತಿಗಳಿಂದ ನಾಗರಿಕತೆಯನ್ನು ಸೃಷ್ಟಿಸುತ್ತಾನೆ. ಗುಂಪಾಗಿ ಬದುಕಬೇಕೆಂಬ ಮಾನವ ಪ್ರವೃತ್ತಿಯೇ ನಾಗರಿಕತೆಯ ಉದಯಕ್ಕೆ ಕಾರಣ. ಇದಕ್ಕಾಗಿಯೇ ಮಾನವ ಸಮಾಜವೆಂಬ ಸಂಸ್ಥೆಯನ್ನು ಕಟ್ಟುವುದು. ಸಮಾಜದಲ್ಲಿರುವ ವಿವಿಧ ವ್ಯಕ್ತಿಗಳ ಅನೇಕ ಬಗೆಯ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳುವುದರಿಂದ ಒಟ್ಟು ಸಮಾಜದ ಪ್ರಗತಿ ಸಾಧ್ಯವಾಗುತ್ತದೆ. ಹಾಗೆಯೇ ಪ್ರಪಂಚದಲ್ಲಿರುವ ಎಲ್ಲ ಜನಾಂಗಗಳೂ ಸಹಕರಿಸಿದರೆ, ಒಟ್ಟು ಮಾನವ ಕುಲಕ್ಕೇ ಪ್ರಯೋಜನವಾಗುತ್ತದೆ.

ವಿವಿಧ ದೇಶಗಳು, ವಿವಿಧ ಬಗೆಯ ಐಶ್ವರ್ಯವನ್ನು ಹೊಂದಿವೆ. ಎಲ್ಲ ದೇಶಗಳಲ್ಲೂ ಸ್ನೇಹ ಸೌಹಾರ್ದಗಳು ಬೆಳೆದರೆ ಅವುಗಳೆಲ್ಲಾ ಈ ಬಗೆಬಗೆಯ ಸಂಪತ್ತನ್ನು ಅನುಭವಿಸಬಹುದು.

ಪ್ರತಿ ಜನಾಂಗಕ್ಕೂ ಒಂದು ವಿಜ್ಞಾನದಲ್ಲಿಯೋ, ಒಂದು ಕಲೆಯಲ್ಲಿಯೋ ವಿಶೇಷವಾದ ಸಾಮರ್ಥ್ಯವಿರುತ್ತದೆ. ಆದ್ದರಿಂದ ಎಲ್ಲ ಜನಾಂಗಗಳೂ ಸಹಕರಿಸಿದರೆ ಎಲ್ಲ ವಿಜ್ಞಾನಗಳಲ್ಲಿಯೂ, ಎಲ್ಲ ಕಲೆಗಳಲ್ಲಿಯೂ ಎಲ್ಲರೂ ಪ್ರಗತಿಯನ್ನು ಹೊಂದಬಹುದು.

ಒಂದು ದೇಶ ಇನ್ನೊಂದು ದೇಶದೊಂದಿಗೆ ಸಂಪರ್ಕವನ್ನು ಮೂರು ಬಗೆಗಳಲ್ಲಿ ಬೆಳೆಸಬಹುದು. ಈ ಮೂರು ಬಗೆಗಳಾವುವೆಂದರೆ—(1) ವ್ಯಾಪಾರ (2) ರಾಜಕೀಯ ಸಂಬಂಧ (ಉದಾಹರಣೆಗೆ ಬ್ರಿಟಿಷರಿಗೆ ಭಾರತದೊಂದಿಗೆ ಉಂಟಾಗಿರುವ ರಾಜಕೀಯ ಸಂಬಂಧ) ಮತ್ತು (3) ವಿದೇಶೀಯರು ಒಂದು ದೇಶವನ್ನು ಆಕ್ರಮಿಸಿ ಅಲ್ಲಿ ನೆಲಸುವುದು. (ಉದಾಹರಣೆಗೆ ಮುಸಲ್ಮಾನರು ಭಾರತದಲ್ಲಿ ನೆಲಸಿರುವುದು.)

ಈ ಮೂರು ಬಗೆಯ ಸಂಪರ್ಕಗಳಿಂದ ಉಂಟಾಗುವ ಅನುಕೂಲಗಳು ಆಯಾ ದೇಶದ ನಾಗರಿಕತೆಯನ್ನು ಅನುಸರಿಸಿ ಬೇರೆ ಬೇರೆಯಾಗಿರುತ್ತವೆ. ವ್ಯಾಪಾರದಿಂದ ಉಂಟಾಗುವ ಬದಲಾವಣೆ ಬಹಳ ಸ್ವಲ್ಪವಾದುದು. ಒಂದು ದೇಶದ ಜನ ಇನ್ನೊಂದು ದೇಶದ ಜನವನ್ನು ಗೆದ್ದು, ಅವರ ಮಧ್ಯದಲ್ಲಿ ನೆಲಸಿದರೆ ಬೇಗ ಅವರ ಪರಸ್ಪರ ಪ್ರಭಾವವು ಅಳಿಸಿ ಹೋಗುತ್ತದೆ. ಅವರು ಒಂದೇ ಮಟ್ಟಕ್ಕೆ

ಇಳಿಯುವರು. ಆದರೆ ಎರಡು ದೇಶಗಳೂ, ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಂಡು, ಸ್ನೇಹವನ್ನು ಬೆಳೆಸಿಕೊಂಡರೆ ಅದರಿಂದ ಉಂಟಾಗುವ ಅನುಕೂಲಗಳು ಮಹತ್ತರವಾಗಿದ್ದು ಚಿರಕಾಲ ನಿಲ್ಲುವುವಾಗಿರುತ್ತವೆ.

ಒಂದು ದೇಶದ ಪ್ರಗತಿಯನ್ನು ಅದರ ಬಡಜನರ ಏಳಿಗೆ ನೆಮ್ಮದಿಗಳಿಂದಲೂ, ವಿಜ್ಞಾನ ಕಲೆಗಳ ಪ್ರಾಚುರ್ಯದಿಂದಲೂ, ಸಾಮಾನ್ಯ ಜನರ ಬುದ್ಧಿಶಕ್ತಿ ಉದ್ಯೋಗಶೀಲತೆಗಳಿಂದಲೂ ನಿರ್ಧರಿಸಬಹುದು.

ಪ್ರತಿ ದೇಶಕ್ಕೂ ಅದರದೇ ವಿಶಿಷ್ಟ ನೈಸರ್ಗಿಕ ಸಂಪತ್ತು ಇರುತ್ತದೆ. ಅದರ ಜನಕ್ಕೆ ವಿಶಿಷ್ಟವಾದ ಶಕ್ತಿ ಸಾಮರ್ಥ್ಯಗಳಿರುತ್ತವೆ. ಎಲ್ಲ ದೇಶಗಳ ಪರಸ್ಪರ ಸಂಪರ್ಕದಿಂದ ಒಂದೊಂದು ದೇಶವೂ, ಇತರ ದೇಶಗಳಿಂದ ಹೊಸ ವಿಷಯಗಳನ್ನೂ ನಡೆ, ನುಡಿ, ನೈತಿಕ ಮಟ್ಟ ಮುಂತಾದವುಗಳಿಗೆ ಸಂಬಂಧಿಸಿದಂತೆ ಹೊಸ ತತ್ವಗಳನ್ನೂ ಕಲಿಯಬಹುದು, ಸ್ವಾರ್ಥವನ್ನೂ, ದ್ವೇಷವನ್ನೂ ತ್ಯಜಿಸಿ ಪರಸ್ಪರ ಸೌಹಾರ್ದ, ಸಹಕಾರಗಳನ್ನು ಊರ್ಜಿತಗೊಳಿಸಬಹುದು.

ಆದರೆ ಬ್ರಿಟಿಷರ ಸಂಬಂಧದಿಂದ ಈ ದೇಶಕ್ಕೆ ಉಂಟಾಗಿರುವ ಪ್ರಯೋಜನ ಎಷ್ಟು ಅಲ್ಪವಾದುದೆಂಬುದನ್ನು ನೆನಸಿಕೊಂಡರೆ ವಿಷಾದವಾಗುತ್ತದೆ. ನಮ್ಮ ದೇಶದ ವ್ಯವಸಾಯ, ನೂರಾರು ವರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇಂದೂ ಇದೆ. ಮಸ್ಲಿನ್ ಮುಂತಾದ ಬಹು ನವಿರಾದ ಬಟ್ಟೆಗಳ ತಯಾರಿಕೆ ಕ್ಷಯಿಸುತ್ತಿದೆ. ಪಾಶ್ಚಾತ್ಯ ವಿದ್ಯಾಭ್ಯಾಸ ಜನಸಾಮಾನ್ಯರಲ್ಲಿ ಹರಡಿಲ್ಲ.

ಬ್ರಿಟಿಷ್ ಸರ್ಕಾರವು ಸತತವಾಗಿ ಯುದ್ಧಗಳಲ್ಲಿ ನಿರತವಾಗಿದ್ದುದರಿಂದಲೂ, ದೇಶದಲ್ಲಿ ಕ್ಷೋಭೆ, ಅಶಾಂತತೆಗಳು ಹರಡಿದ್ದರಿಂದಲೂ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗಲಿಲ್ಲವೆಂಬ ಕಾರಣವನ್ನು ಕೊಡಬಹುದು. ಈಗ ಸಿಂಧುವಿನಿಂದ ಕನ್ಯಾಕುಮಾರಿಯವರೆಗೆ ಬ್ರಿಟಿಷ್ ಆಧಿಪತ್ಯವನ್ನು ಸ್ಥಾಪಿಸಲಾಗಿದೆ. ದೇಶದ ಎಲ್ಲ ಕಡೆಗಳಲ್ಲೂ ಶಾಂತಿ ನೆಲೆಸಿದೆ. ಯೂರೋಪನ್ನು ಅನಾಗರಿಕತೆಯಿಂದ ನಾಗರಿಕತೆಗೆ ಒಯ್ದ ಮುದ್ರಣ ಕಲೆ ಈ ದೇಶದಲ್ಲೂ ಪ್ರಚಾರಕ್ಕೆ ಬಂದಿದೆ. ಈ ಎಲ್ಲ ಕಾರಣಗಳಿಂದಾಗಿ ಈ ದೇಶದಲ್ಲಿ ವ್ಯವಸಾಯದ ಅಭಿವೃದ್ಧಿಯೂ, ವೃತ್ತಿಗಳ ಬೆಳವಣಿಗೆಯೂ, ವ್ಯಾಪಾರ ವಾಣಿಜ್ಯಗಳ ಪ್ರಗತಿಯೂ, ವಿದ್ಯಾಪ್ರಚಾರವೂ ಆಗುವುದೆಂದು ನಿರೀಕ್ಷಿಸಬಹುದು."

ಈ ಪ್ರಬಂಧದಲ್ಲಿ ಸೂಕ್ಷ್ಮವಾದ ವಿಮರ್ಶನಾ ಶಕ್ತಿಯೂ, ಆಳವಾದ ವಿಚಾರ ಶಕ್ತಿಯೂ, ಚಾರಿತ್ರಿಕ ದೃಷ್ಟಿಯೂ ಕಂಡು ಬರುತ್ತವೆ. ಬ್ರಿಟಿಷ್ ಆಡಳಿತದ ನ್ಯೂನತೆಗಳನ್ನು ಧೈರ್ಯವಾಗಿ ಎತ್ತಿ ತೋರಿಸಲಾಗಿದೆ. ಈ ಪ್ರಬಂಧದಲ್ಲಿ ವಿಷಯ ಗಳನ್ನು ಬಹು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಪರಿಪಕ್ವವಾದ ವಿಚಾರಶಕ್ತಿಯು ಅದರಲ್ಲಿ ಕಂಡುಬರುತ್ತದೆ. 18 ವರ್ಷದ ವಿದ್ಯಾರ್ಥಿಯೊಬ್ಬನು ಇಂತಹ ಪ್ರಬಂಧವನ್ನು ಬರೆದನೆಂಬುದು ನಿಜವಾಗಿಯೂ ಆಶ್ಚರ್ಯಕರವಾದ ವಿಷಯ.

ವಿದ್ಯಾಭ್ಯಾಸವನ್ನು ಪಡೆದ ಭಾಗ್ಯವಿರುವ ಕೆಲವರು ಆ ಭಾಗ್ಯವಿಲ್ಲ ದವರಿಗೆ ಸಲ್ಲಿಸಬೇಕಾದ ಸೇವೆಯನ್ನು ಕುರಿತು ಪವೆಲ್‌ರು ಯಾವಾಗಲೂ ಒತ್ತಿ ಹೇಳುತ್ತಿದ್ದರು. "ಪ್ರತಿಯೊಬ್ಬ ವಿದ್ಯಾವಂತನಾದ ದೇಶೀಯನೂ ತನ್ನಷ್ಟು ಅದೃಷ್ಟ ಶಾಲಿಗಳಲ್ಲದ ಇತರ ದೇಶೀಯರಿಗೆ ತಾನು ಪ್ರತ್ಯಕ್ಷವಾಗಿಯೋ, ಪರೋಕ್ಷ ವಾಗಿಯೋ ಶಿಕ್ಷಕನಾಗಿರುವನೆಂದು ಎಣಿಸತಕ್ಕದ್ದು. ಜೀವನದಲ್ಲಿ ತನಗೆ ಯಶಸ್ಸು ದೊರಕಿದಂತೆ, ಆ ಕಾರಣದಿಂದ ತನ್ನ ಪ್ರಭಾವ ಹೆಚ್ಚುತ್ತಾ ಹೋದಂತೆ ಯಾವ ಅನುಕೂಲ್ಯಗಳನ್ನೂ ಪಡೆದಿದ್ದರಿಂದ ತನಗಿರುವ ಸ್ಥಾನ ಮಾನವನ್ನು ಹೊಂದಲಾ ಯಿತೋ ಮಿಕ್ಕವರಿಗೂ ಅದೇ ಅನುಕೂಲ್ಯಗಳು ದೊರೆಯುವಂತೆ ಅವನು ಪ್ರಯತ್ನಿಸ ಬೇಕು." ಪವೆಲ್ ಅವರು ಮದ್ರಾಸ್ ಪ್ರೌಢಶಾಲೆಯ ಅಧ್ಯಕ್ಷರಾಗಿದ್ದಾಗ ಪ್ರತಿಭಾ ವಂತರಾದ ವಿದ್ಯಾರ್ಥಿಗಳ ಒಂದು ತಂಡವೇ ತಯಾರಾಯಿತು. ಈ ಮದ್ರಾಸ್ ಪ್ರೌಢಶಾಲೆಯೇ ಮುಂದೆ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜ್ ಆಗಿ ಬೆಳೆಯಿತು. ರಾಜಾ ಸರ್. ಟಿ. ಮಾಧವರಾವ್, ವೆಂಬಾಕಂ ರಾಮಯ್ಯಂಗಾರ್, ಸರ್. ಟಿ. ಮುತ್ತು ಸ್ವಾಮಿ ಅಯ್ಯರ್, ಮದ್ರಾಸ್ ಶ್ರೇಷ್ಠ ನ್ಯಾಯಸ್ಥಾನದ ಮೊದಲನೆಯ ಭಾರತೀಯ ವಕೀಲರೂ, ಮದ್ರಾಸ್ ವಿಧಾನ ಪರಿಷತ್ತಿನ ಮೊದಲನೆಯ ಭಾರತೀಯ ಸದಸ್ಯರೂ ಆಗಿದ್ದ ಷಡಗೋಪಾಚಾರ್ಲುರವರು, ತಿರುವಾಂಕೂರಿನ ಮುಖ್ಯ ನ್ಯಾಯಸ್ಥಾನದ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಪಿ. ಸದಾಶಿವ ಪಿಳ್ಳೆ, ಇವರುಗಳು ಪವೆಲ್‌ರವರ ಶಿಷ್ಯರಾಗಿದ್ದರು. ರಾಜಾ ಸರ್. ಟಿ. ಮಾಧವರಾವ್, ಷಡಗೋಪಾಚಾರ್ಲು, ಸದಾಶಿವ ಪಿಳ್ಳೆ, ದೊಡ್ಡ ವಿದ್ವಾಂಸರೆಂದು ಪ್ರಖ್ಯಾತರಾದ ದೀನದಯಾಳು ನಾಯ್ಡು, ರಾಮಯ್ಯಂಗಾರ್ ಮತ್ತು ಪ್ರಸಿದ್ಧ ಶಿಕ್ಷಣವೇತ್ತರಾಗಿದ್ದ ಬ್ಯಾಸಿಲ್ ಲವರಿ ಇವರು ಏಪ್ರಿಲ್ 1841ರಲ್ಲಿ ಪ್ರೌಢಶಾಲೆ ಪ್ರಾರಂಭವಾದಾಗ ಅದರ ವಿದ್ಯಾರ್ಥಿಗಳಾಗಿದ್ದರು. ಮದ್ರಾಸ್ ಉಚ್ಚ ನ್ಯಾಯಸ್ಥಾನದ ಅಧಿಕೃತ ಭಾಷಾಂತರಕಾರರಾಗಿದ್ದ ರಂಗನಾಥ ಶಾಸ್ತ್ರಿಯವರೂ, ಪವೆಲ್‌ರ ಶಿಷ್ಯರಾಗಿದ್ದರು. ಶಾಸ್ತ್ರಿಯವರು ಮದ್ರಾಸಿನ ಸಣ್ಣ

ಮೊಕದ್ದಮೆಗಳ ನ್ಯಾಯಸ್ಥಾನದ ನ್ಯಾಯಾಧೀಶರಾಗಿದ್ದರು. ಅಲ್ಲದೆ ಅವರು 14 ಭಾಷೆಗಳಲ್ಲಿ ಪರಿಣತರಾಗಿದ್ದರು. ಅವರು ಶಾಲೆಯ ಶಿಕ್ಷಕರಾಗಿ ಸ್ವಲ್ಪ ಕಾಲ ಕೆಲಸ ಮಾಡುತ್ತಿದ್ದಾಗ ಸರ್. ಟಿ. ಮಾಧವರಾಯರು ಅವರ ಶಿಷ್ಯರಾಗಿದ್ದರು.

ಪವೆಲ್‌ರವರಿಗೆ ತಮ್ಮ ಶಿಷ್ಯರು ತಮ್ಮ ಪಾಠಪ್ರವಚನಗಳಲ್ಲಲ್ಲದೆ ಇತರ ವಿಷಯಗಳಲ್ಲಿಯೂ ಆಸಕ್ತಿ ಬೆಳೆಸಿಕೊಂಡು ಬುದ್ಧಿವಂತರಾಗಬೇಕೆಂಬ ಬಯಕೆ ಯಿದ್ದಿತು. ವಿದ್ಯಾರ್ಥಿದೆಶೆಯಲ್ಲಿ ಮನಸ್ಸು ಕೋಮಲವಾಗಿದ್ದಾಗ ಸರಿಯಾದ ವಾತಾ ವರಣವನ್ನು ಕಲ್ಪಿಸಿ, ವಿದ್ಯಾರ್ಥಿಗಳ ಬೌದ್ಧಿಕ ಬೆಳೆವಣಿಗೆಗೆ ತಕ್ಕ ಮಾರ್ಗದರ್ಶನ ವನ್ನು ಕೊಡುವುದರಿಂದ, ಅವರ ಭವಿಷ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ದಂತಾಗುವದೆಂದು ಪವೆಲ್‌ರು ಪೂರ್ಣವಾಗಿ ಅರಿತಿದ್ದರು. ಅವರು ವಿದ್ಯಾರ್ಥಿಗಳ ವಿಷಯದಲ್ಲಿ ತೋರುತ್ತಿದ್ದ ಶ್ರದ್ಧೆ, ಆಸಕ್ತಿಗಳಿಗೆ ಒಂದು ಉದಾಹರಣೆಯನ್ನು ಕೊಡ ಬಹುದು. ಮದ್ರಾಸ್ ಶ್ರೇಷ್ಠ ನ್ಯಾಯಸ್ಥಾನದ ಮೊದಲನೆಯ ಭಾರತೀಯ ನ್ಯಾಯಾಧೀಶರಾಗಿ ನಿಯಮಿತರಾದ ಸರ್. ಟಿ. ಮುತ್ತುಸ್ವಾಮಿ ಅಯ್ಯರ್‌ರವರು ಪವೆಲ್‌ರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದರು. ಶಾಲೆಯ ಕೆಲಸ ಮುಗಿದ ಮೇಲೆ ಪವೆಲ್‌ರು ಮುತ್ತುಸ್ವಾಮಿ ಅಯ್ಯರವರಿಗೆ ಖಗೋಳಶಾಸ್ತ್ರವನ್ನು ಹೇಳಿ ಕೊಡುತ್ತಿದ್ದರು. ಆ ಶಾಸ್ತ್ರದಲ್ಲಿ ಮುತ್ತುಸ್ವಾಮಿ ಅಯ್ಯರವರಿಗೆ ವಿಶೇಷವಾದ ಆಸಕ್ತಿ ಇದ್ದಿತು. ಎಷ್ಟೋ ದಿನ ರಾತ್ರಿ 9 ಗಂಟೆಯವರೆಗೂ ದಿನದ ವಾರ್ತೆಗಳನ್ನೂ, ಹುಡುಗನಿಗೆ ಬುದ್ಧಿ ಪ್ರಚೋದಕವಾದಂಥ ವಿಷಯಗಳನ್ನೂ ಕುರಿತು ಪವೆಲ್‌ರು ಅವ ನೊಡನೆ ಮಾತನಾಡುತ್ತಿದ್ದರು. ಹೀಗೆ ರಾತ್ರಿ ಹೊತ್ತಾದಾಗ ಪವೆಲ್‌ರು ಶಿಷ್ಯನನ್ನು ತಮ್ಮ ಗಾಡಿಯಲ್ಲಿ ಕೂರಿಸಿಕೊಂಡು ಮೈಲಾಪುರದಲ್ಲಿದ್ದ ಅವನ ಮನೆಗೆ ಬಿಟ್ಟು ಬರುತ್ತಿ ದ್ದರು. ಈ ಶಿಷ್ಯನ ವಿಷಯದಲ್ಲಿ ಅವರಿಗೆ ಪ್ರೀತಿ, ವಿಶ್ವಾಸಗಳು ಎಷ್ಟು ಇದ್ದವು ಎಂದರೆ ಅವನ ಮನೆಗೆ ಹೋಗಿ ಅವನ ತಿಂಗಳ ಖರ್ಚುವೆಚ್ಚಗಳನ್ನು ತನಿಖೆ ಮಾಡುತ್ತಿದ್ದರು. ಪವೆಲ್‌ರ ಬಳಿ ಶಿಷ್ಯರಾಗಿರುವುದು ಜೀವನದಲ್ಲಿ ಯಶಸ್ಸಿಗೆ ಪರಮ ಸಾಧನವೆಂಬ ನಂಬಿಕೆ ಆ ಕಾಲದಲ್ಲಿ ಅವರ ಶಿಷ್ಯರಲ್ಲೆಲ್ಲಾ ಬೇರೂರಿತ್ತು.

ರಂಗಾಚಾರ್ಲುರವರಿಗೆ ಪವೆಲ್‌ರ ವಿಷಯದಲ್ಲಿ ವಿಶೇಷವಾದ ಭಕ್ತಿಗೌರವ ಗಳಿದ್ದವು. ಅವರು ವಿದ್ಯಾವಂತರು ತಮ್ಮಷ್ಟು ಅದೃಷ್ಟವಂತರಲ್ಲದ ಇತರ ದೇಶೀ ಯರಿಗೆ ಸಹಾಯ ಮಾಡಬೇಕೆಂದು ಪವೆಲ್‌ರು ಹೇಳಿದ ಮಾತನ್ನು ಸದಾ ಜ್ಞಾಪಕದಲ್ಲಿ ಇರಿಸಿಕೊಂಡು ಅದರಂತೆ ನಡೆಯುತ್ತಿದ್ದರು. 1875ನೆಯ ಇಸವಿಯಲ್ಲಿ ಪವೆಲ್‌ರು

ಪ್ರೌಢಶಾಲೆಯ ಅಧ್ಯಕ್ಷ ಪದವಿಯಿಂದ ನಿವೃತ್ತರಾದರು. ಆಗ ಮದ್ರಾಸಿನಲ್ಲಿ ಅವರ ಗೌರವಾರ್ಥವಾಗಿ ಒಂದು ಸಾರ್ವಜನಿಕ ಸಭೆ ನಡೆಯಿತು. ರಂಗಾಚಾರ್ಲು ಆ ಸಭೆಯಲ್ಲಿ ಮಾತನಾಡಿದರು. ತಮ್ಮ ಗುರುಗಳ ವಿಷಯದಲ್ಲಿ ರಂಗಾಚಾರ್ಲು ಈ ರೀತಿ ಹೇಳಿದ್ದಾರೆ :— "ಅವರ (ಪವೆಲ್‌ರವರ) ಶಿಕ್ಷಣ ವಿಧಾನದ, ಅವರು ಶಿಷ್ಯರ ಮನಸ್ಸಿನಲ್ಲಿ ಬೆಳೆಸಿದ ಕರ್ತವ್ಯ ಶ್ರದ್ಧೆಯ ಫಲ, ಆ ಶಿಷ್ಯರು ಜೀವನದಲ್ಲಿ ಪಡೆದಿರುವ ಯಶಸ್ಸಿನಿಂದ ವ್ಯಕ್ತವಾಗುತ್ತದೆ. ಈ ಶಿಷ್ಯರಲ್ಲಿ ಅನೇಕರು ಸರ್ಕಾರದ ಎಲ್ಲ ಇಲಾಖೆಗಳಲ್ಲೂ ಅಗ್ರಸ್ಥಾನಗಳಲ್ಲಿದ್ದಾರೆ. ಕೆಲವರು ಅತ್ಯುನ್ನತ ಸ್ಥಾನಗಳನ್ನು ಹೊಂದಿದ್ದಾರೆ. ಅವರ ಶಕ್ತಿ ಸಾಮರ್ಥ್ಯಗಳಿಗಿಂತ ಅವರ ಕರ್ತವ್ಯ ಶ್ರದ್ಧೆಯೇ ಅವರು ಗಳಿಸಿರುವ ಮನ್ನಣೆಗೆ ಕಾರಣವೆಂದು ಹೇಳಬಹುದು. ನಮ್ಮ ಜನರ ಬೌದ್ಧಿಕ ಪ್ರಗತಿಯನ್ನು ಇಂಗ್ಲೀಷ್ ವಿದ್ಯಾಭ್ಯಾಸದಿಂದ ಸಾಧಿಸುವ ಮೊದಲ ಪ್ರಯತ್ನಗಳು ನಡೆದಂದಿನಿಂದ ಕಾಲು ಶತಮಾನ ಅವ್ಯಾಹತವಾಗಿ ಅವರು ದುಡಿದಿದ್ದಾರೆ. ಅವರು ತಮ್ಮ ಈ ಪ್ರಯತ್ನದಿಂದ ದೇಶದಲ್ಲಿ ದೊಡ್ಡ ಬದಲಾವಣೆಯನ್ನೇ ಉಂಟು ಮಾಡಿದ್ದಾರೆ. ಹೀಗೆ ಅವರು ನಮ್ಮ ರಾಷ್ಟ್ರೋದ್ಧಾರಕರ ಶ್ರೇಣಿಗೆ ಸೇರಿದ್ದಾರೆ. ಒಂದು ತಲೆಮಾರಿನ ನೀತಿ ನಡತೆಗಳನ್ನೂ, ಬೌದ್ಧಿಕ ಆಸೆ ಆಕಾಂಕ್ಷೆಗಳನ್ನೂ ಅವರು ರೂಪಿಸಿದ್ದಾರೆ. ಹೀಗೆ ನಮ್ಮ ಜನರ ಭವಿಷ್ಯತ್ತಿನ ಪ್ರಗತಿಗೆ ಭದ್ರವಾದ ಬುನಾದಿಯನ್ನು ಅವರು ಹಾಕಿದ್ದಾರೆ."

ರಂಗಾಚಾರ್ಲುರವರು ಪ್ರೊಫಿಷಿಯಂಟ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಅವರ ವಿದ್ಯಾಭ್ಯಾಸ ಮುಕ್ತಾಯವಾಯಿತು. ಅಂದಿನ ಎಲ್ಲ ವಿದ್ಯಾವಂತರಂತೆ ಅವರು ಸರ್ಕಾರದ ಕೆಲಸಕ್ಕಾಗಿ ಪ್ರಯತ್ನಿಸಬೇಕಾಯಿತು. ಅವರಿಗೆ 14ನೇ ವಯಸ್ಸಿನಲ್ಲಿಯೇ ಮದುವೆಯಾಗಿದ್ದದ್ದರಿಂದ ಅವರು ಉದ್ಯೋಗಕ್ಕೆ ಸೇರುವುದಕ್ಕೆ ಮುಂಚೆಯೇ ಅವರ ಮೇಲೆ ಸಂಸಾರದಜವಾಬ್ದಾರಿ ಬಿದ್ದಿದ್ದಿತು.

ಅಧ್ಯಾಯ 2

# ಮೊದಲ ಹೆಜ್ಜೆಗಳು

ರಂಗಾಚಾರ್ಲುರವರ ಮೇಧಾಶಕ್ತಿ, ಅವರು ತಮ್ಮ ವ್ಯಾಸಂಗದಲ್ಲಿ ತೋರಿದ ಪರಿಶ್ರಮ, ಅದರಲ್ಲಿ ಅವರು ಗಳಿಸಿದ ಯಶಸ್ಸು ಮದ್ರಾಸ್ ಸರ್ಕಾರದ ಕೆಲವು ಉನ್ನತ ಅಧಿಕಾರಿಗಳ ಗಮನ ಸೆಳೆಯಿತು. ಜಿ. ಎನ್. ಟೈಲರ್, ಎಲ್‌ಫಿನ್‌ಸ್ಟೋನ್ ಸ್ಮಾರಕ ನಿಧಿಯ ಕಾರ್ಯದರ್ಶಿಗಳಾಗಿದ್ದರು. ಈ ನಿಧಿಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ರಂಗಾಚಾರ್ಲು ಪ್ರಥಮ ಬಹುಮಾನ ಗಳಿಸಿದರಷ್ಟೆ. ಅವರ ಪ್ರಬಂಧವನ್ನು ಟೈಲರ್‌ರವರು ಬಹಳವಾಗಿ ಮೆಚ್ಚಿಕೊಂಡಿದ್ದರು. ಟೈಲರ್‌ರವರು ಮದ್ರಾಸ್ ಸರ್ಕಾರದಲ್ಲಿ ಅಧಿಕಾರಿಗಳಾಗಿದ್ದ ಎಲ್ಲಿಸ್ ಎಂಬುವರಿಗೆ, ರಂಗಾಚಾರ್ಲು ರವರಿಗೆ ಸರ್ಕಾರದಲ್ಲಿ ಒಂದು ಕೆಲಸವನ್ನು ಕೊಡಿಸಬೇಕೆಂದು ಶಿಫಾರಸು ಮಾಡಿ ದರು. ಎಲ್ಲಿಸ್‌ರವರು ರಂಗಾಚಾರ್ಲುರವರಿಗೆ ಮದ್ರಾಸ್ ಜಿಲ್ಲಾಧಿಕಾರಿಗಳ ಕಛೇರಿ ಯಲ್ಲಿ ತಾತ್ಕಾಲಿಕವಾಗಿ ಹುಜೂರ್ ಉಪಲೆಕ್ಕಪರೀಕ್ಷಕರಾಗಿ ಕೆಲಸವನ್ನು ಮಾಡಿಸಿ ಕೊಟ್ಟರು. 1850ನೇ ಇಸವಿ ಮೇ 6ನೇ ತಾರೀಕಿನಲ್ಲಿ ಈ ಹುದ್ದೆಗೆ ರಂಗಾಚಾರ್ಲು ರವರು ಸೇರಿದರು. ಅವರ ಸಂಬಳ ತಿಂಗಳಿಗೆ 35 ರೂಪಾಯಿ. ಅದೇ ವರ್ಷ ಸರ್ಕಾರಿ ಅಧಿಕಾರಿಗಳಿಗೆ ಗೊತ್ತುಪಡಿಸಿದ್ದ ಪರೀಕ್ಷೆಗೆ ಕಟ್ಟಿ ಅದರಲ್ಲಿ ತೇರ್ಗಡೆಯಾದರು. ಅವರ ಹಂಗಾಮಿ ಹುದ್ದೆಯ ಅವಧಿ ಮುಗಿಯುವುದರಲ್ಲಿಯೇ 1850ನೆಯ ಇಸವಿ ಆಗಸ್ಟ್ 20ನೆಯ ತಾರೀಕಿನಲ್ಲಿ ಚಂಗಲ್‌ಪೇಟೆ ಜಿಲ್ಲಾಧಿ ಕಾರಿಯ ಕಚೇರಿಯಲ್ಲಿ ಉಪಮುನ್ಷಿಯಾಗಿ ಖಾಯಂ ಹುದ್ದೆಗೆ ಅವರು ನಿಯಮಿತ ರಾದರು. ಅವರ ಸಂಬಳ ತಿಂಗಳಿಗೆ 14 ರೂಪಾಯಿ !

ರಂಗಾಚಾರ್ಲು ಸರ್ಕಾರದ ಕೆಲಸಕ್ಕೆ ಸೇರಿದಾಗ ಅವರಿಗೆ ಕೇವಲ 19 ವರ್ಷ. ಅವರಿಗೆ ಅದಕ್ಕೆ ಮುಂಚೆಯೇ 14ನೆಯ ವಯಸ್ಸಿನಲ್ಲಿ ಮದುವೆಯಾಗಿದ್ದಿತು. ರಂಗಾಚಾರ್ಲುರವರ ತಂದೆ ನಿಧನರಾದಾಗ ಶಿರಸ್ತೆದಾರ್ ವರದಾಚಾರ್ಯರೆಂಬುವರು ಅವರ ಕುಟುಂಬಕ್ಕೆ ಸಹಾಯ ಮಾಡಿದರು. ಅವರ ಮಗಳು ಅಲಮೇಲಮ್ಮನವರೇ ರಂಗಾಚಾರ್ಲುರವರ ಧರ್ಮ ಪತ್ನಿ. ರಂಗಾಚಾರ್ಲುರವರ ಮಾವ ಸರ್ಕಾರದಲ್ಲಿ

ದೊಡ್ಡ ಅಧಿಕಾರಿಗಳಾಗಿದ್ದರು. ಅವರು ಐಶ್ವರ್ಯವಂತರು. ರಂಗಾಚಾರ್ಲು ರವರ ಕುಟುಂಬದವರಾದರೂ ಬಡವರು. ಆದರೆ ತಮ್ಮ ಹೆಂಡತಿಯ ಮನೆಯವರ ಅಧಿಕಾರ, ಐಶ್ವರ್ಯಗಳಿಂದ ಪ್ರಭಾವಿತರಾಗಿ ರಂಗಾಚಾರ್ಲುರವರು ತಮ್ಮ ಸ್ವತಂತ್ರ ಪ್ರವೃತ್ತಿಯನ್ನು ಕಳೆದುಕೊಳ್ಳಲಿಲ್ಲ. ಅವರು ಜೀವನದಲ್ಲಿ ತಾವು ಅನುಸರಿಸ ಬೇಕೆಂದು ನಿರ್ಧರಿಸಿದ ಮಾರ್ಗದಿಂದ ವಿಚಲಿತರಾಗಲಿಲ್ಲ.

ರಂಗಾಚಾರ್ಲುರವರಿಗೆ ಖಾಯಂ ಹುದ್ದೆಯಾದ ಒಂದು ತಿಂಗಳಲ್ಲಿಯೇ 50 ರೂಪಾಯಿ ಸಂಬಳದ ಮೇಲೆ ಇಂಗ್ಲೀಷ್ ದಫ್ತರ್ ಅಧಿಕಾರಿಯಾಗಿ ಸೇಲಂಗೆ ವರ್ಗ ವಾಯಿತು. ಮುಂದಿನ ವರ್ಷ ಚಂಗಲ್‌ಪೇಟೆಯಲ್ಲಿ ಉಪಲೆಕ್ಕಪರೀಕ್ಷಕರಾಗಿ ಅವರು ನಿಯಮಿತರಾದರು. 1852ರಲ್ಲಿ ಮುಖ್ಯ ಗುಮಾಸ್ತ ಮತ್ತು ಭಾಷಾಂತರ ಕಾರರಾಗಿ ಅವರಿಗೆ ಬಡ್ತಿ ಕೊಡಲಾಯಿತು.

1855ನೇ ಇಸವಿಯಲ್ಲಿ ಅವರು ಸರಕಾರಿ ಅಧಿಕಾರಿಗಳಿಗೆ ಗೊತ್ತುಪಡಿಸಿದ್ದ ಇನ್ನೊಂದು ಪರೀಕ್ಷೆಗೆ ಕುಳಿತು ಮೊದಲನೆಯ ಸ್ಥಾನವನ್ನು ಗಳಿಸಿದರು. ಅಲ್ಲದೆ ಈ ಪರೀಕ್ಷೆಯಲ್ಲಿ ವಿಶೇಷ ಅರ್ಹತೆಯನ್ನು ತೋರಿಸಿದ ಕಾರಣ 500 ರೂಪಾಯಿಗಳ ಬಹುಮಾನವನ್ನು ಪಡೆದರು. ಈ ಪರೀಕ್ಷೆಯಲ್ಲಿ ಪರೀಕ್ಷಕರಾಗಿದ್ದವರು ಅದಕ್ಕೆ ಗೊತ್ತುಪಡಿಸಿದ್ದ ವಿವಿಧ ವಿಷಯಗಳಲ್ಲಿ ರಂಗಾಚಾರ್ಲುರವರಿಗೆ ಇದ್ದ ಗಾಢವಾದ ಜ್ಞಾನವನ್ನು ಮೆಚ್ಚಿಕೊಂಡರು. ಅವರ ಅಸಾಧಾರಣ ಜ್ಞಾಪಕಶಕ್ತಿಯಿಂದ ಪರೀಕ್ಷಕರು ಆಶ್ಚರ್ಯಗೊಂಡರು. ಪ್ರೊಫಿಷಿಯಂಟ್ ಪರೀಕ್ಷೆಗೆ ಓದಿದಹಲವು ವಿಷಯ ಗಳು ಈ ಪರೀಕ್ಷೆಗೂ ಗೊತ್ತಾಗಿದ್ದವು. ಆ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆರು ವರ್ಷಗಳಾದರೂ ಈ ವಿಷಯಗಳ ಬಗೆಗೆ ರಂಗಾಚಾರ್ಲುರವರ ಜ್ಞಾಪಕಶಕ್ತಿ ಸ್ವಲ್ಪವೂ ಮಾಸಿರಲಿಲ್ಲ. ಅದೇ ವರ್ಷ ಜುಲೈ ತಿಂಗಳಲ್ಲಿ ರಂಗಾಚಾರ್ಲುರವರು ಮದ್ರಾಸಿನ ಲಾ ಕಾಲೇಜನ್ನು ಸೇರಿದರು. ಆದರೆ ಅವರು ವಕೀಲಿ ಪರೀಕ್ಷೆಯನ್ನು ಮುಗಿಸಿಕೊಳ್ಳಲಾಗಲಿಲ್ಲ. 1856ನೆಯ ಇಸವಿಯಲ್ಲಿ ಅವರು ಸಿವಿಲ್ ಕೋರ್ಟ್ ಪ್ಲೀಡರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. 1856ನೆಯ ಇಸವಿ ಮಾರ್ಚ್ 2ನೇ ತಾರೀಕಿನಲ್ಲಿ ಅವರನ್ನು ಸೈದಾಪೇಟೆಯ ತಹಶೀಲ್ದಾರರನ್ನಾಗಿ ನಿಯಮಿಸಲಾಯಿತು. ಈ ಸ್ಥಾನದಲ್ಲಿ ಅವರು ಎರಡು ವರ್ಷ ಇದ್ದರು.

ಸರ್ಕಾರದ ಕೆಲಸಕ್ಕೆ ಸೇರಿದ ಆರು ವರ್ಷಗಳಲ್ಲಿಯೇ ರಂಗಾಚಾರ್ಲುರವರು ಒಂದು ತಾಲ್ಲೂಕಿನ ಮುಖ್ಯಾಧಿಕಾರಿಯ ಹುದ್ದೆಯನ್ನು ಗಳಿಸಿದ್ದರು. ಆಗ ಅವರಿಗೆ

25 ವರ್ಷ ಮಾತ್ರ. ಅವರ ನಿರ್ವಾಹಶಕ್ತಿಯನ್ನೂ, ಕಾರ್ಯದಕ್ಷತೆಯನ್ನೂ ಅವರ ಮೇಲಧಿಕಾರಿಗಳು ಮೆಚ್ಚಿಕೊಂಡಿದ್ದರು. ಆದ್ದರಿಂದ ಈ ಮೇಲಧಿಕಾರಿಗಳಿಗೆ ಅವರು ಕಛೇರಿಯ ಜಡಕಾಗದ ಪತ್ರಗಳ ತನಿಖೆಯಲ್ಲಿ ತಮ್ಮ ಶಕ್ತಿಯನ್ನು ವ್ಯಯ ಮಾಡುವ ಬದಲು ಹೊರಗಿನ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸುವುದೇ ಯುಕ್ತವೆಂದು ತೋರಿತು. ಜನಜೀವನದೊಂದಿಗೆ ನೇರವಾಗಿ ಸಂಪರ್ಕವಿರುವ ಶಿರಸ್ತೇದಾರರ ಕೆಲಸದಲ್ಲಿ ಅವರ ಸಹಜ ಶಕ್ತಿ, ಸಾಮರ್ಥ್ಯಗಳು ಚೆನ್ನಾಗಿ ಪ್ರಕಾಶಿಸುವುವೆಂದು ಅವರು ಭಾವಿಸಿದರು. ಈ ಕಾರಣದಿಂದಲೇ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಶಿರಸ್ತೇದಾರರ ಹುದ್ದೆಯನ್ನು ಅವರಿಗೆ ಕೊಟ್ಟರು.

ಈ ಕಾಲದಲ್ಲಿಯೇ ರಂಗಾಚಾರ್ಲುರವರು "ಭೂಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಲಂಚರುಷವತ್ತುಗಳು" ಎಂಬ ಒಂದು ಸಣ್ಣ ಪುಸ್ತಕವನ್ನೂ, "ಚಂಗಲ್‌ಪೇಟೆ ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಮಿರಾಸಿ ಹಕ್ಕುಗಳು" ಎಂಬ ಇನ್ನೊಂದು ಸಣ್ಣ ಪುಸ್ತಕವನ್ನೂ ಪ್ರಕಟಿಸಿದರು. ಭೂಕಂದಾಯ ಇಲಾಖೆಯ ವಿಷಯವನ್ನು ಅವರು ಆಮೂಲಾಗ್ರವಾಗಿ ತಿಳಿದುಕೊಂಡಿದ್ದರು. ಅಲ್ಲಿ ತಾನೇತಾನಾಗಿ ಲಂಚರುಷವತ್ತು ಬೇರು ಬಿಟ್ಟಿರುವುದನ್ನೂ, ಅದರಿಂದ ಜನರಿಗೆ ಆಗುತ್ತಿದ್ದ ತೊಂದರೆ, ಕಿರುಕುಳಗಳನ್ನೂ ಅವರು ಚೆನ್ನಾಗಿ ಅರಿತುಕೊಂಡಿದ್ದರು.

ಅವರು ಇಲಾಖೆಯನ್ನೆಲ್ಲಾ ಆವರಿಸಿದ್ದ ಈ ದುಷ್ಟಪದ್ಧತಿಯನ್ನು ತಮ್ಮ ಪುಸ್ತಕದಲ್ಲಿ ನಿರ್ಭೀತಿಯಿಂದ ಖಂಡಿಸಿದರು. ತಮ್ಮ ಹತ್ತಿರದ ಸಂಬಂಧಿಗಳಲ್ಲಿ ಲಂಚರುಷವತ್ತುಗಳಿಗೆ ಕೈ ಒಡ್ಡುತ್ತಿದ್ದವರನ್ನೂ ಅವರು ಖಂಡಿಸಿದರು. ಅಧಿಕಾರ ವರ್ಗದವರು ಈ ಪುಸ್ತಕದ ಪ್ರಕಟನೆಯಿಂದ ಸಿಟ್ಟಿಗೆದ್ದರು. ರಂಗಾಚಾರ್ಲುರವರು ಈ ಪುಸ್ತಕವನ್ನು ತಮ್ಮ ಸ್ವಂತ ಹೆಸರಿನಲ್ಲಿ ಪ್ರಕಟಿಸಿರಲಿಲ್ಲ. ಅದನ್ನು ಅವರು ಮೊದಲು ಖಾಸಗಿ ಹಂಚಿಕೆಗಾಗಿ ಅಚ್ಚು ಮಾಡಿಸಿದ್ದರು. ಎರಡು ವರ್ಷಗಳ ತರುವಾಯ ಸಾರ್ವಜನಿಕರಿಗೆ ಅದು ದೊರಕುವಂತೆ ಪ್ರಕಟಪಡಿಸಿದರು. ಆಗ ಅದರ ಮೇಲೆ ಲೇಖನ ಬರೆದವರು ಭೂಕಂದಾಯ ಇಲಾಖೆಯ ದೇಶೀಯ ಅಧಿಕಾರಿ ಎಂದು ಅಚ್ಚು ಹಾಕಿಸಿದರು. ದೇಶೀಯರ ಬೌದ್ಧಿಕ, ನೈತಿಕ, ಸಾಮಾಜಿಕ ಅಭಿವೃದ್ಧಿಯಲ್ಲಿ ಗಾಢವಾದ ಆಸಕ್ತಿಯುಳ್ಳ ದೊಡ್ಡ ಮನುಷ್ಯರೊಬ್ಬರ ಪ್ರೇರಣೆಯಿಂದ ಈ ಪುಸ್ತಕವನ್ನು ಸಾರ್ವಜನಿಕರಿಗಾಗಿ ಪ್ರಕಟಿಸಿದೆ ಎಂದು ಅದರಲ್ಲಿ ಹೇಳಲಾಗಿದ್ದಿತು. ಬಹುಶಃ ಈ ದೊಡ್ಡ ಮನುಷ್ಯರು ಜಿ. ಎನ್. ಟೈಲರ್‌ರವರು. ಈ ಪುಸ್ತಕದ

ಪ್ರಕಟಣೆಯಿಂದ ರೊಚ್ಚಿಗೆದ್ದ ರಂಗಚಾರ್ಲುರವರ ಶತ್ರುಗಳು, ಭಯಭೀತರಾಗಿ ರಂಗಾಚಾರ್ಲುರವರು ತಮ್ಮ ಹೆಸರನ್ನು ಹಾಕದೇ ಗುಪ್ತನಾಮದಿಂದ ಅದನ್ನು ಪ್ರಕಟ ಪಡಿಸಿದರು ಎಂದು ಹೇಳಲಾರಂಭಿಸಿದರು. ರಂಗಾಚಾರ್ಲುರವರಾದರೋ ತಾವೇ ಆ ಗ್ರಂಥವನ್ನು ಬರೆದುದು ಎಂದು ಘಂಟಾಘೋಷವಾಗಿ ಸಾರಿದ್ದಲ್ಲದೇ ಅದರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ನ್ಯಾಯವೆಂದು ಸಮರ್ಥಿಸಿದರು. ಅವರು ಈ ಗ್ರಂಥದಲ್ಲಿ ಸರ್ಕಾರದ ಆಡಳಿತ ಯಂತ್ರದಲ್ಲಿ ಬೇರೂರಿದ್ದ ಭ್ರಷ್ಟಾಚಾರದ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಇಂದಿಗೂ ಅನ್ವಯಿಸತಕ್ಕವಾಗಿವೆ. ಭ್ರಷ್ಟಾಚಾರ ಮತ್ತು ಲಂಚರುಷವತ್ತುಗಳು ಸರ್ಕಾರದ ಇಲಾಖೆಗಳಲ್ಲಿ ತಲೆದೋರುವುದಕ್ಕೆ ಕಾರಣಗಳನ್ನು ಅವರು ಕೊಟ್ಟಿದ್ದಾರೆ. ಈ ಕಾರಣಗಳಾವುವೆಂದರೆ— (1) ಅತೃಪ್ತಿಕರವಾದ ಸಂಬಳ ಸಾರಿಗೆಗಳು (2) ವಿದ್ಯಾವಂತರೂ, ಯೋಗ್ಯರೂ ಆದ ಮೇಲಧಿಕಾರಿಗಳ ಅಭಾವ, (3) ಭೂಕಂದಾಯ ವ್ಯವಸ್ಥೆಯಲ್ಲಿ ಕಂಡುಬರುವ ದೋಷಗಳು ಮತ್ತು (4) ಆಡಳಿತಾಧಿಕಾರಿಗಳು ಮಾಡುವ ತಪ್ಪುಗಳು. ಸರ್ಕಾರದ ಅಧಿಕಾರಿಗಳಲ್ಲಿ ಲಂಚರುಷವತ್ತುಗಳು ಕಂಡುಬಂದರೆ ಸರ್ಕಾರಿ ವ್ಯವಸ್ಥೆಯೇ ದೋಷಪೂರ್ಣವಾಗಿದೆಯೆಂದು ಅರ್ಥವಾಗುತ್ತದೆ. ಆಡಳಿತ ನಿರ್ವಹಣೆ ಸರಿಯಾಗಿದ್ದರೆ ಭ್ರಷ್ಟಾಚಾರಕ್ಕೆ ಅವಕಾಶವಿರುವುದಿಲ್ಲ. ಲಂಚವನ್ನು ಕೊಡುವವನ ಮತ್ತು ತೆಗೆದುಕೊಳ್ಳುವವನ ನೈತಿಕ ಮಟ್ಟ ಅಧೋಗತಿಗೆ ಇಳಿಯುವುದಲ್ಲದೆ ಜನಸಾಮಾನ್ಯರ ಪ್ರಾಮಾಣಿಕತೆಯೂ, ನ್ಯಾಯ ಧರ್ಮ ಶ್ರದ್ಧೆಯೂ ಆದರಿಂದ ಕ್ಷೀಣವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಲಂಚರುಷವತ್ತುಗಳನ್ನು ನಿರ್ಮೂಲ ಮಾಡಲು ಈ ಕೆಳಕಂಡ ಮಾರ್ಗಗಳನ್ನು ಅವರು ಸೂಚಿಸಿದ್ದಾರೆ—

(1) ಸರ್ಕಾರದ ಅಧಿಕಾರಿಗಳನ್ನು ನಿಯಮಿಸಬೇಕಾದರೆ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಮಾತ್ರ ಪರಿಗಣಿಸತಕ್ಕದ್ದು.

(2) ಜಾತಿ, ಕುಲ, ಮತ, ಇವುಗಳ ಆಧಾರದ ಮೇಲೆ ಸರ್ಕಾರಿ ಅಧಿಕಾರಿಗಳನ್ನು ನಿಯಮಿಸತಕ್ಕದ್ದಲ್ಲ.

(3) ಪ್ರಾಮಾಣಿಕತೆಯನ್ನೂ, ಸಾಮರ್ಥ್ಯವನ್ನೂ ತೋರುವ ಅಧಿಕಾರಿಗಳಿಗೆ ಬಡ್ತಿಯನ್ನು ಕೊಡಬೇಕು ಅಥವಾ ಸಂಬಳವನ್ನು ಹೆಚ್ಚಿಸಬೇಕು. ಯಾವ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಶ್ರದ್ಧೆಯನ್ನು ತೋರದೆ, ಬೇಜವಾಬ್ದಾರಿಯಾಗಿ

ನಡೆದುಕೊಳ್ಳುತ್ತಾರೋ ಅವರಿಗೆ ಬಡ್ತಿಯನ್ನು ಕೊಡದೆ, ಸಂಬಳವನ್ನು ಹೆಚ್ಚಿಸದೆ ದಂಡಿಸಬೇಕು.

(4) ಅಧಿಕಾರಿಗಳನ್ನು ಅನಾವಶ್ಯಕವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಮಾಡಕೂಡದು, ಕಿರುಕುಳವನ್ನು ಕೊಡಕೂಡದು.

(5) ಸರ್ಕಾರಿ ಅಧಿಕಾರಿಗಳಿಗೆ ಪ್ರತಿವರ್ಷವೂ ಅವರ ಸಂಬಳದ ಮೊತ್ತವನ್ನು ಅವರು ಒಂದು ಮಟ್ಟವನ್ನು ಮುಟ್ಟುವವರೆಗೆ ಹೆಚ್ಚಿಸುತ್ತಾ ಹೋಗುವ ಕ್ರಮ ವಿದೆಯಷ್ಟೆ. ಒಬ್ಬ ಸರ್ಕಾರಿ ಅಧಿಕಾರಿಯ ಕೆಲಸವು ತೃಪ್ತಿಕರವಾಗಿದ್ದರೆ ಈ ರೀತಿ ಸಂಬಳದ ಹೆಚ್ಚುವರಿಯನ್ನು ಯಾವ ತೊಂದರೆಯೂ ಇಲ್ಲದೆ ಸಲ್ಲಿಸಬೇಕು.

(6) ಸರ್ಕಾರದ ಕೆಲಸದಲ್ಲಿರುವ ವ್ಯಕ್ತಿಯ ಸಂಬಳ ಸಾರಿಗೆಗಳು ಎಷ್ಟು ಕಾಲ ಅವನು ಸೇವೆ ಸಲ್ಲಿಸಿದರೂ ಒಂದೇ ಮಟ್ಟದಲ್ಲಿ ಇದ್ದುಬಿಟ್ಟರೆ ಅವನಲ್ಲಿ ಅತೃಪ್ತಿ ಮೂಡುವುದಲ್ಲದೆ ಅವನಿಗೆ ಕೆಲಸದಲ್ಲಿ ಉತ್ಸಾಹ ಕುಂದುತ್ತದೆ. ಸರ್ಕಾರದ ಅಧಿಕಾರಿಗಳು ತಮ್ಮ ಕಛೇರಿಯ ಕಾಗದ ಪತ್ರಗಳನ್ನು ನೋಡುವುದರಲ್ಲಿ ತಮ್ಮ ಗುಮಾಸ್ತರು ಅಥವಾ ಕೈಕೆಳಗಿನ ಅಧಿಕಾರಿಗಳು ಹೇಳಿದಂತೆಯೇ ನಡೆದುಕೊಳ್ಳು ವುದು ಅಸಾಧುವಾದುದು. ಅವರು ತಾವೇ ಕಛೇರಿಯ ಕಾಗದ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ತಮ್ಮ ಕಛೇರಿಯಲ್ಲಿ ಏನು ಕಾರ್ಯಗಳು ನಡೆಯುತ್ತಿವೆ ಎಂಬುದರ ಬಗೆಗೆ ಸರಿಯಾಗಿ ಮೇಲ್ವಿಚಾರಣೆಯನ್ನು ಮಾಡಬೇಕು. ತಮ್ಮ ಕೈಕೆಳಗಿನ ಅಧಿಕಾರಿಗಳ ಅವಲಂಬನೆಯಿಲ್ಲದೇ ಸ್ವತಂತ್ರವಾಗಿ ಮೇಲಧಿಕಾರಿಗಳು ಕೆಲಸ ಮಾಡಲಾರರು ಎಂಬ ಪರಿಸ್ಥಿತಿ ಉಂಟಾದರೆ ಈ ಕೆಳಗಿನ ಅಧಿಕಾರಿಗಳು ಲಂಚರುಷವತ್ತುಗಳಿಗೆ ಕೈಹಾಕುವುದೂ, ಭ್ರಷ್ಟಾಚಾರಕ್ಕೆ ತುತ್ತಾಗುವುದೂ ಆಶ್ಚರ್ಯವೇನಲ್ಲ.

(7) ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕರು (ಅಂದರೆ ಅವರ ಮುಖಂಡರು) ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗೆಗೂ ಜಾಗರೂಕರಾಗಿರಬೇಕು. ಅವರು ಸಾರ್ವಜನಿಕ ಸಭೆಗಳಲ್ಲಿಯೂ, ವೃತ್ತಪತ್ರಿಕೆಗಳಲ್ಲಿಯೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ತಾವು ತಪ್ಪಿದರೆ ಸಾರ್ವಜನಿಕ ಅಭಿಪ್ರಾಯದ ಚಾಟಿ ಏಟು ತಮಗೆ ಬೀಳುವುದೆಂಬ ಭಯ ಸರ್ಕಾರದ ಅಧಿಕಾರಿಗಳಿಗೆ ಇರಬೇಕು. ಆಗಲೇ ಆಡಳಿತಯಂತ್ರ ದಕ್ಷವಾಗಿ ಕೆಲಸ ಮಾಡುವುದು.

ರಂಗಾಚಾರ್ಲುರವರು ಮುಖ್ಯವಾದ ಎಲ್ಲ ಪಟ್ಟಣಗಳಲ್ಲಿಯೂ ಪ್ರಜಾಕೂಟಗಳನ್ನು ಏರ್ಪಡಿಸಬೇಕೆಂತಲೂ, ಸಾರ್ವಜನಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲೂ, ಬ್ರಿಟಿಷ್ ಸರ್ಕಾರದ ಬಗೆಗೆ ಸರಿಯಾದ ಅಭಿಪ್ರಾಯಗಳನ್ನು ಜನರಲ್ಲಿ ಹರಡಲೂ, ಸರ್ಕಾರಿ ಅಧಿಕಾರಿಗಳಲ್ಲಿ ಕಂಡು ಬರುವ ತಪ್ಪುಗಳನ್ನು ತಿದ್ದಲೂ ಒಂದು ದೇಶೀಯ ಪತ್ರಿಕೆಯನ್ನು ಪ್ರಾರಂಭಿಸಬೇಕೆಂತಲೂ ಈ ಪುಸ್ತಕದಲ್ಲಿ ಹೇಳಿದ್ದಾರೆ.

ಲಂಚರುಷವತ್ತುಗಳಿಗೆ ಕೈಒಡ್ಡುವುದನ್ನು ಆಗಿನ ಕಾಲದಲ್ಲಿ ಒಂದು ದೊಡ್ಡ ಅಪರಾಧವಾಗಿ ಗಣಿಸುತ್ತಿರಲಿಲ್ಲ. ವಾಸ್ತವವಾಗಿ ಮೇಲ್ಸಂಪಾದನೆಯ ವಿಷಯದಲ್ಲಿ ಬಹು ಮಂದಿ ಅಧಿಕಾರಿಗಳು ಹೆಮ್ಮೆಪಡುತ್ತಿದ್ದರು. ಇಂತಹ ಸನ್ನಿವೇಶದಲ್ಲಿಯೂ ರಂಗಾಚಾರ್ಲುರವರು ಬೆಳೆಸಿಕೊಂಡಿದ್ದ ನೀತಿ ನಿಷ್ಠೆಯೂ ಋಜುತೆಯೂ, ಪ್ರಾಮಾಣಿಕತೆಯೂ ಅವರ ಶೀಲೋನ್ನತಿಯನ್ನು ತೋರುತ್ತವೆ. ಈ ಸಂದರ್ಭದಲ್ಲಿ ಒಂದು ಸ್ವಾರಸ್ಯವಾದ ಪ್ರಸಂಗವನ್ನು ನಿರೂಪಿಸಬಹುದು. ಅವರು ಮದ್ರಾಸ್ ಸರ್ಕಾರದಲ್ಲಿ ಶಿರಸ್ತೇದಾರರಾಗಿದ್ದಾಗ ಜಿಲ್ಲಾಧಿಕಾರಿಗಳೊಂದಿಗೆ ಜಮಾಬಂದಿಗೆ ಹೋದರು. ಜಮಾಬಂದಿಯ ಪ್ರವಾಸ ಮಾಡುತ್ತಿದ್ದಾಗ ಅವರು ಭೇಟಿಕೊಟ್ಟ ಒಂದು ಸ್ಥಳದಲ್ಲಿ ಅಲ್ಲಿಯ ತಹಶೀಲ್ದಾರರು ಅವರಿಗೆ ನಜರನ್ನು ಒಪ್ಪಿಸಲು ಬಂದರು. (ನಜರೆಂದರೆ ಲಂಚಕ್ಕೆ ಇನ್ನೊಂದು ಹೆಸರು) ಲೆಕ್ಕ ಪತ್ರಗಳನ್ನು ತನಿಖೆ ಮಾಡುವಾಗ ಆ ಅಧಿಕಾರಿಯು ಮಾಡಿದ ಅಪವ್ಯಯವನ್ನೂ, ದುರ್ವಿನಿಯೋಗವನ್ನೂ ಅವರು ಲಕ್ಷಿಸದೇ ಇರಬೇಕೆಂಬುದೇ ನಜರನ್ನು ಕೊಡಲು ಬಂದ ಉದ್ದೇಶ. ರಂಗಾಚಾರ್ಲುರವರಿಗೆ ವಿಪರೀತ ಕೋಪ ಬಂದಿತು. ಆ ತಹಶೀಲ್ದಾರರನ್ನು ಬಯ್ದು ಕಳುಹಿಸಿಬಿಟ್ಟರು. ತಹಶೀಲ್ದಾರರ ಸ್ನೇಹಿತರು ಅವರಿಗೆ ಶಿರಸ್ತೆದಾರರು ಬಹಳ ಸಮರ್ಥರಾದವರು, ಅವರಿಗೆ ನೀವು ಕೊಟ್ಟ ನಜರು ಸಾಲದಾಯಿತೇನೋ, ಅದಕ್ಕೆ ಅವರಿಗೆ ಕೋಪ ಬಂದಿತು ಎಂದು ಹಿತೋಪದೇಶ ಮಾಡಿದರು. ಅವರು ಕೊಡಲು ಹೋಗಿದ್ದ ಎರಡರಷ್ಟು ಮೊತ್ತವನ್ನು ಕೊಡಬೇಕೆಂದು ಸಲಹೆ ಕೊಟ್ಟರು. ತಹಶೀಲ್ದಾರರು ಆ ಮೊಬಲಗನ್ನು ರಂಗಾಚಾರ್ಲುರವರು ರಾತ್ರಿ ಮಲಗುವುದಕ್ಕೆ ಮುಂಚೆ ಅವರ ಹಾಸಿಗೆಯ ದಿಂಬಿನ ಕೆಳಗೆ ಬಚ್ಚಿಟ್ಟರು. ಬೆಳಗ್ಗೆ ರಂಗಾಚಾರ್ಲುರವರು ಎದ್ದ ಮೇಲೆ ಹಾಸಿಗೆಯನ್ನು ಸುತ್ತಿದಾಗ ದಿಂಬಿನ ಕೆಳಗಿನಿಂದ ರೂಪಾಯಿಗಳು ಚೆಲ್ಲಾಪಿಲ್ಲಿಯಾಗಿ ಹರಡಿದವು. ಅವರಿಗೆ ಕೂಡಲೇ ಈ ತಂತ್ರವನ್ನು ಮಾಡಿರುವವರು ಯಾರು ಎಂದು ಗೊತ್ತಾಯಿತು. ತಹಶೀಲ್ದಾರರಿಗೆ ಹೇಳಿ ಕಳುಹಿಸಿ, ಅವರು ಬಂದ ಕೂಡಲೇ ಚೆನ್ನಾಗಿ ಬಯ್ದರು. ತಹಶೀಲ್ದಾರರು ಅಲ್ಲೇ ಕುಸಿದುಬಿದ್ದರು. ಅವರು

*

ರಂಗಾಚಾರ್ಲುರವರಿಗೆ ತಮ್ಮ ವಿಷಯ ಜಿಲ್ಲಾಧಿಕಾರಿಗಳಿಗೆ ದೂರು ಹೇಳಬೇಡಿರಿ ಎಂದು ಬೇಡಿಕೊಂಡರು. ಅವರಿಂದ ಆಶ್ವಾಸನೆ ಪಡೆದ ಮೇಲೆ ಆ ದುಡ್ಡನ್ನು ತೆಗೆದುಕೊಂಡು ಹಿಂದಿರುಗಿದರು.

ಒಂದು ಬಾರಿ ಮದ್ರಾಸ್ ಸರ್ಕಾರವು ಎಲ್ಲಾ ಶಿರಸ್ತೇದಾರರಿಗೂ ಒಂದು ಸುತ್ತೋಲೆಯನ್ನು ಕಳುಹಿಸಿತು. ಈ ಸುತ್ತೋಲೆಯಲ್ಲಿ ತಹಶೀಲ್ದಾರರು ಕಂದಾಯದ ಬಾಕಿ ವಸೂಲಿಯಲ್ಲಿ ಸಾಕಷ್ಟು ಚುರುಕಾಗಿ ಕೆಲಸ ಮಾಡಲಿಲ್ಲವೆಂದು ಆಕ್ಷೇಪಿಸಲಾಗಿದ್ದಿತು. ಸೈದಾಪೇಟೆಯಲ್ಲಿ ತಹಶೀಲ್ದಾರರಾಗಿದ್ದ ರಂಗಾಚಾರ್ಲು ರವರಿಗೂ ಆ ಸುತ್ತೋಲೆಯನ್ನು ಕಳುಹಿಸಲಾಗಿದ್ದಿತು. ಆದರೆ ಅವರು ಎಲ್ಲಾ ಕಂದಾಯವನ್ನೂ ವಸೂಲ್ಮಾಡಿದ್ದರು, ಬಾಕಿ ಉಳಿಸಿರಲಿಲ್ಲ. ಆದ್ದರಿಂದ ತಮ್ಮ ಕರ್ತವ್ಯ ನಿರ್ವಹಣೆಯ ಬಗೆಗೆ ಆಕ್ಷೇಪಣೆ ಮಾಡುವುದಕ್ಕೆ ಅವಕಾಶವಿರಲಿಲ್ಲವೆಂಬುದು ಅವರ ಅಭಿಪ್ರಾಯವಾಗಿದ್ದಿತು. ಅವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ತಾವು ಎಲ್ಲಾ ಕಂದಾಯದ ಬಾಕಿಯನ್ನೂ ವಸೂಲ್ಮಾಡಿರುವುದರಿಂದ ಈ ಆಕ್ಷೇಪಣೆ ತಮಗೆ ಅನ್ವಯಿಸತಕ್ಕದ್ದಲ್ಲವೆಂದು ಸೂಚಿಸಿದರು. ಸರ್ಕಾರ ಅವರ ನಿಲುವನ್ನು ಒಪ್ಪಿದ್ದಲ್ಲದೆ ಅವರ ಕಾರ್ಯದಕ್ಷತೆಯನ್ನು ಮೆಚ್ಚಿ ಪತ್ರ ಬರೆಯಿತು.

1857ರಲ್ಲಿ ರಂಗಾಚಾರ್ಲುರವರು ಮತ್ತೆ ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಲು ಪ್ರಯತ್ನಿಸಿದರು. ಆದರೆ ಅವರ ಆ ಪ್ರಯತ್ನ ಯಶಸ್ವಿಯಾಗಲಿಲ್ಲ. ಇದೇ ಕಾಲದಲ್ಲಿ ಅವರು ಲಷ್ಕರಿ ಅಥವಾ ಸೈನ್ಯದ ಠಾಣೆಗಳ ಮೇಲೆ ಒಂದು ಲೇಖನವನ್ನು ಬರೆದರು.

1857ನೇ ಇಸವಿ ಜುಲೈನಲ್ಲಿ ಅವರನ್ನು ನೆಲ್ಲೂರಿನ ನಾಯಬ್ ಶಿರಸ್ತೇದಾರರನ್ನಾಗಿ ನಿಯಮಿಸಲಾಯಿತು. ಈ ಹುದ್ದೆ ಅವರಿಗೆ ದೊರಕುವುದಕ್ಕೆ ಟೈಲರ್‌ರವರ ಪ್ರಯತ್ನವೇ ಕಾರಣ. 1859ನೇ ಇಸವಿ ಮಾರ್ಚಿಯಲ್ಲಿ ಅವರನ್ನು ರಾಜಮಹೇಂದ್ರಿಗೆ ಉಪಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲಾಯಿತು.

ರಂಗಾಚಾರ್ಲುರವರಲ್ಲಿ ವಿಶೇಷ ಪ್ರೀತಿ, ಅಭಿಮಾನಗಳನ್ನು ಬೆಳೆಸಿಕೊಂಡಿದ್ದ ಟೈಲರ್‌ರವರನ್ನು ಇದಾದ ಸ್ವಲ್ಪ ಕಾಲದಲ್ಲಿಯೇ ಮದ್ರಾಸ್ ಇನಾಂದಾರಿ ತನಿಖೆ ಆಯೋಗದ ಅಧ್ಯಕ್ಷರನ್ನಾಗಿ ನಿಯಮಿಸಲಾಯಿತು. ಅವರು ರಂಗಾಚಾರ್ಲುರವರನ್ನು ತಿಂಗಳಿಗೆ 600 ರೂಪಾಯಿಗಳ ಸಂಬಳ ಮತ್ತು 100 ರೂಪಾಯಿಗಳ ವಿಶೇಷ

ವೇತನದ ಮೇಲೆ ತಮ್ಮ ಸಹಾಯಕರನ್ನಾಗಿ ನಿಯಮಿಸಿಕೊಂಡರು. ಈ ದೇಶದಲ್ಲಿ ಇನಾಂದಾರಿಗಳನ್ನು ತನಿಖೆ ಮಾಡಲು ನಿಯಮಿತವಾದ ಮೊದಲ ಆಯೋಗ ಇದು. ಇನಾಂದಾರರ ಮತ್ತು ಸರ್ಕಾರದ ಹಕ್ಕು ಬಾಧ್ಯತೆಗಳನ್ನು ನಿರ್ಧರಿಸುವುದೇ ಅದರ ಕರ್ತವ್ಯವಾಗಿದ್ದಿತು. ಈ ಕಾರ್ಯದಲ್ಲಿ ಅದು ಜಟಿಲವಾದ ಸಮಸ್ಯೆಗಳನ್ನು ಎದುರಿಸ ಬೇಕಾಗಿದ್ದಿತು. ಆದ್ದರಿಂದ ತನ್ನ ಕಾರ್ಯನಿರ್ವಾಹದಲ್ಲಿ ಅದು ವಿಶೇಷ ಜಾಗರೂಕತೆ ಯನ್ನು ತೋರಿಸಬೇಕಾಗಿದ್ದಿತು. ರಂಗಾಚಾರ್ಲುರವರು ತಮಗೆ ವಹಿಸಿದ ಕಾರ್ಯ ವನ್ನು ಬಹು ಶ್ರದ್ಧೆಯಿಂದಲೂ, ಜಾಣ್ಮೆಯಿಂದಲೂ ನಿರ್ವಹಿಸಿದರು. ಇದರಿಂದ ಅವರು ಟೈಲರ್ ಮತ್ತು ಇತರ ದೊಡ್ಡ ಅಧಿಕಾರಿಗಳ ಮೆಚ್ಚುಗೆಯನ್ನು ಗಳಿಸಿಕೊಂಡರು.

1864ನೆಯ ಇಸವಿಯಲ್ಲಿ ಭಾರತದ ರೈಲ್ವೆ ವ್ಯವಸ್ಥೆಯ ಸ್ಥಿತಿಗತಿಗಳ ವಿಷಯ ತನಿಖೆ ಮಾಡಲು ರಚಿಸಿದ ಆಯೋಗಕ್ಕೆ ಟೈಲರ್‌ರವರನ್ನು ಅಧ್ಯಕ್ಷರನ್ನಾಗಿ ನಿಯಮಿಸ ಲಾಯಿತು. ಅವರು ರಂಗಾಚಾರ್ಲುರವರನ್ನು ತಮ್ಮ ಸಹಾಯಕರನ್ನಾಗಿ ತೆಗೆದು ಕೊಂಡರು. ಹೀಗೆ 5 ವರ್ಷಗಳ ಅನಂತರ ಟೈಲರ್ ಮತ್ತು ರಂಗಾಚಾರ್ಲುರವರು ಮತ್ತೆ ಸಹೋದ್ಯೋಗಿಗಳಾದರು. ರಂಗಾಚಾರ್ಲುರವರು ರೈಲ್ವೆ ಆಯೋಗದಲ್ಲಿ ಅಧಿಕಾರಿಗಳಾಗಿ ತಮ್ಮ ಕರ್ತವ್ಯವನ್ನು ವಿಶೇಷ ಶ್ರದ್ಧೆ, ದಕ್ಷತೆಗಳಿಂದ ನಿರ್ವ ಹಿಸಿದರು. ಅವರ ಕಾರ್ಯದಕ್ಷತೆಯನ್ನೂ, ಸಾಮರ್ಥ್ಯವನ್ನೂ ಟೈಲರ್‌ರವರು, ಸರ್ ಚಾರ್ಲೆಸ್ ಟ್ರೆವಿಲಿಯನ್‌ರವರು ಮತ್ತು ಇತರ ಉನ್ನತ ಅಧಿಕಾರಿಗಳು ಬಹು ವಾಗಿ ಮೆಚ್ಚಿಕೊಂಡರು. ಈ ಆಯೋಗದ ಕಾರ್ಯ ಮುಗಿದ ಮೇಲೆ ರಂಗಾಚಾರ್ಲು ರವರು ಮದ್ರಾಸಿಗೆ ಹಿಂದಿರುಗಿದರು. ಟೈಲರ್‌ರವರು ಬರೆದ ಒಂದು ಕಾಗದದಲ್ಲಿ ರಂಗಾಚಾರ್ಲುರವರ ವಿಷಯ ಹೀಗೆ ಹೇಳಿದ್ದಾರೆ :—

"ಅವರು ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಸರ್ಕಾರದ ಕೆಲಸಕ್ಕೆ ಸೇರಿದಾಗಿನಿಂದ ಅವರಿಗೂ ನನಗೂ ಬಹು ನಿಕಟವಾದ ಸಂಬಂಧವಿದ್ದಿತು. ನಮ್ಮಲ್ಲಿ ಬೆಳೆದು ಬಂದ ಪರಸ್ಪರ ಗೌರವ ಕೊನೆಯವರೆಗೂ ಅಚ್ಚಳಿಯದೇ ಉಳಿಯಿತು. ಅವರಿಗೆ ಉದ್ಯೋಗವನ್ನು ದೊರಕಿಸಿ ಕೊಡುವುದಕ್ಕೂ, ಅದರಲ್ಲಿ ಪ್ರಗತಿ ಸಾಧಿಸು ವುದಕ್ಕೂ ನಾನು ಸಹಾಯ ಮಾಡಿರಬಹುದು. ಆದರೆ ಅವರ ಸತತ ನಿಷ್ಠೆಯಿಂದ ನನ್ನಿಂದಾದ ಉಪಕಾರದ ಹೊರೆಯನ್ನು ತೀರಿಸಿಬಿಟ್ಟಿದ್ದಾರೆ. ಅವರಿಗೆ ದೇಶೀಯರ ಸ್ವಭಾವದ ಗಾಢವಾದ ಪರಿಚಯವೂ, ಬಹು ಪಕ್ವವಾದ ವಿವೇಚನಾಶಕ್ತಿಯೂ ಒಳ್ಳೆಯ ಕಾರ್ಯಶಕ್ತಿಯೂ ಇದ್ದವು. ಅಲ್ಲದೇ ಅವರು ಪೂರ್ಣ ಮನಸ್ಸಿನಿಂದ ದಕ್ಷ

ಸಹಕಾರವನ್ನು ಕೊಡುತ್ತಿದ್ದರು. ಇವೆಲ್ಲದರ ಪರಿಪೂರ್ಣ ಉಪಯೋಗವನ್ನು ನಾನು ಯಾವಾಗಲೂ ಮಾಡಿಕೊಳ್ಳಬಹುದಾಗಿದ್ದಿತು. ಒಂದು ಮಾತಿನಲ್ಲಿ ಹೇಳು ವುದಾದರೆ ನಾನು ಮತ್ತು ಅವರು ಸೇರಿ ಮಾಡಿದ ಕಾರ್ಯಗಳಲ್ಲಿ ನಾನು ಏನು ಯಶಸ್ಸು ಗಳಿಸಿದೆನೋ ಅದಕ್ಕೆ ಅವರು ಕೊಟ್ಟ ಸತತ ಸಹಕಾರವೇ ಕಾರಣ."

ಟ್ರೈಲರ್‌ರವರಿಗೆ ರಂಗಾಚಾರ್ಲುರವರ ವಿಷಯದಲ್ಲಿ ವಿಶೇಷವಾದ ಗೌರವ ಬೆಳೆ ಯಿತು. ಅವರು ವೈಸರಾಯರ ಸಭೆಯಲ್ಲಿ ಮದ್ರಾಸ್ ಆಧಿಪತ್ಯದ ಸದಸ್ಯರಾಗಿ ದ್ದಾಗ ಅಲ್ಲಿ ಚರ್ಚೆಯಾಗಲಿದ್ದ ಮುಖ್ಯವಾದ ವಿಷಯಗಳ ಬಗೆಗೆ ಅವರು ರಂಗಾ ಚಾರ್ಲುರವರೊಡನೆ ಸಮಾಲೋಚನೆ ಮಾಡುತ್ತಿದ್ದರು. ಆ ಶಾಸನ ಸಭೆಯಲ್ಲಿ ಮಸೂದೆಗಳ ಚರ್ಚೆಯಾದಾಗ ಅವರು ರಂಗಾಚಾರ್ಲುರವರ ಅಭಿಪ್ರಾಯಗಳನ್ನು ಉದಾಹರಿಸುತ್ತಿದ್ದರು.

ರೈಲ್ವೆ ತನಿಖಾ ಆಯೋಗದ ಕಾರ್ಯ ಮುಗಿಸಿಕೊಂಡು ರಂಗಾಚಾರ್ಲುರವರು ಮದ್ರಾಸಿಗೆ ಹಿಂದಿರುಗಿದ ಮೇಲೆ ಅವರನ್ನು ಮದ್ರಾಸ್ ರೈಲ್ವೆ ಕಂಪನಿಯ ಕಮಿಷನ ರನ್ನಾಗಿ ನಿಯಮಿಸಲಾಯಿತು. ಮದ್ರಾಸ್ ಸರ್ಕಾರವು ನಾಣ್ಯ ಚಲಾವಣೆ ಇಲಾಖೆ ಯನ್ನು ಹೊಸದಾಗಿ ಸ್ಥಾಪಿಸಿತು. ಈ ಇಲಾಖೆಯಲ್ಲಿ ಖಜಾನೆಯ ಉಪಮುಖ್ಯಸ್ಥ ರನ್ನಾಗಿ ರಂಗಾಚಾರ್ಲುರವರನ್ನು ನಿಯಮಿಸಿ ಕಲ್ಲೀಕೋಟೆಗೆ 15ನೇ ನವೆಂಬರ್ 1864ರಲ್ಲಿ ಕಳುಹಿಸಲಾಯಿತು. ಆಗ ಅವರು ಕಲ್ಲೀಕೋಟೆಯಲ್ಲಿ ಜಿಲ್ಲಾಧಿಕಾರಿ ಗಳಾಗಿದ್ದ ಬ್ಯಾಲರ್ಡರವರ ಕೈಕೆಳಗೆ ಕೆಲಸಮಾಡಿ ಅವರ ಮೆಚ್ಚುಗೆಯನ್ನು ಗಳಿಸಿದರು. ಬ್ಯಾಲರ್ಡರವರು ತಿರುವಾಂಕೂರು, ಕೊಚ್ಚಿನ್‌ಗಳಲ್ಲಿ ಬ್ರಿಟಿಷ್ ಸರ್ಕಾರದ ರೆಸಿಡೆಂಟ್‌ರಾಗಿ ಅನಂತರ ನಿಯಮಿತರಾದರು.

ರಂಗಾಚಾರ್ಲುರವರು ರೈಲ್ವೆ ಆಯೋಗವನ್ನು ಸೇರಿದಾಗ ಕಾರ್ಯನಿಮಿತ್ತವಾಗಿ ಕಲ್ಕತ್ತೆಗೆ ಸಮುದ್ರ ಪ್ರಯಾಣ ಮಾಡಬೇಕಾಗಿ ಬಂದಿತು. ಅವರ ಬಂಧುಮಿತ್ರರೂ, ಕುಲಸ್ಥರೂ ಇದನ್ನು ತೀವ್ರವಾಗಿ ವಿರೋಧಿಸಿದರು. ಧರ್ಮಶಾಸ್ತ್ರಗಳಂತೆ ಸಮುದ್ರ ಪ್ರಯಾಣವು ನಿಷಿದ್ಧವಾಗಿದ್ದಿತು. ದೀರ್ಘಾಲೋಚನೆಯ ಅನಂತರ ರಂಗಾಚಾರ್ಲುರವರು ಇಂತಹ ಸಮುದ್ರ ಪ್ರಯಾಣವು ಹಿಂದೂ ಧರ್ಮಕ್ಕೆ ವಿರುದ್ಧ ವಾದುದಲ್ಲವೆಂಬ ನಿರ್ಣಯಕ್ಕೆ ಬಂದರು. ಅವರ ಹಿತೈಷಿಗಳು ಹೀಗೆ ಪ್ರಯಾಣ ಮಾಡತಕ್ಕದ್ದಲ್ಲವೆಂದು ಪ್ರತಿಭಟಿಸಿದರು. ಕುಲಸ್ಥರು ಸಾಮಾಜಿಕ ಬಹಿಷ್ಕಾರದ

ಬೆದರಿಕೆಯನ್ನು ಹಾಕಿದರು. ಆದರೆ ರಂಗಾಚಾರ್ಲುರವರು ಇದಾವುದರಿಂದಲೂ ವಿಚಲಿತರಾಗಲಿಲ್ಲ.

ಅವರು ಪ್ರಯಾಣವನ್ನು ಮುಗಿಸಿಕೊಂಡು ಬಂದ ಮೇಲೆ ಅವರಿಗೆ ವಿಪರೀತ ಜ್ವರ ಬಂದಿದ್ದಿತಂತೆ. ಅವರ ಬಂಧುಗಳು ಅವರು ಮನೆಯನ್ನು ಪ್ರವೇಶಿಸಲು ಅವಕಾಶ ಕೊಡಲಿಲ್ಲ. ಮನೆಯ ಕೈಸಾಲೆಯಲ್ಲಿ ನಿಲ್ಲಿಸಿ ಸ್ನಾನ ಮಾಡಿಸಿದರು. ಅವರು ಅಲ್ಲಿಯೇ ಹತ್ತು ದಿನಗಳು ಇರಬೇಕಾಯಿತು. ಅನಂತರವೇ ಅವರಿಗೆ ಗೃಹ ಪ್ರವೇಶಕ್ಕೆ ಅವಕಾಶವನ್ನು ಕೊಡಲಾಯಿತು. ಆದರೆ ಅವರ ಕಷ್ಟ ಇಲ್ಲಿಗೇ ಮುಕ್ತಾಯವಾಗಲಿಲ್ಲ. ಅವರನ್ನೂ ಮತ್ತು ಅವರ ಮನೆಯವರನ್ನೂ ಸಾಮಾಜಿಕ ಬಹಿಷ್ಕಾರಕ್ಕೆ ಗುರಿ ಮಾಡಲಾಯಿತು. ಬಂಧುಗಳು ಅವರ ಮನೆಗೆ ಬರುವುದನ್ನು ನಿಲ್ಲಿಸಿಬಿಟ್ಟರು. ಸಮಾಜದಲ್ಲಿ ಪ್ರತಿಷ್ಠಿತರಾಗಿದ್ದ ಸಂಪ್ರದಾಯಸ್ಥರು ರಂಗಾಚಾರ್ಲು ಮತ್ತು ಅವರ ಮನೆಯವರನ್ನು ಎಲ್ಲ ರೀತಿಗಳಲ್ಲೂ ಗೋಳುಹುಯ್ದುಕೊಂಡರು. ಇದಾವುದರಿಂದಲೂ ರಂಗಾಚಾರ್ಲುರವರು ಅಂಜಲಿಲ್ಲ, ಕುಗ್ಗಲಿಲ್ಲ. ಕಾಲ ಕಳೆದಂತೆ ಅವರ ಚಾರಿತ್ರ್ಯ ಶುದ್ಧಿಯೂ, ತತ್ವ ನಿಷ್ಠೆಯೂ ಅವರ ಕುಲಬಾಂಧವರಿಗೆ ಅರಿವಾಗುತ್ತಾ ಬಂದಿತು. ಅವರ ಸಮುದ್ರ ಪ್ರಯಾಣದಿಂದ ಸಮಾಜದಲ್ಲಿ ಉಂಟಾದ ಕ್ಷೋಭೆ ಶಮನವಾಯಿತು. ಸಂಪ್ರದಾಯಸ್ಥವರ್ಗವೂ ಕೂಡ ಅವರಲ್ಲಿ ಗೌರವಾದರಗಳನ್ನು ತೋರಿಸಲಾರಂಭಿಸಿತು.

ರಂಗಾಚಾರ್ಲುರವರಿಗೆ ದೇಶದ ಆರ್ಥಿಕ ಪ್ರಗತಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯಿದ್ದಿತು. ಅದರಲ್ಲಿಯೂ ವ್ಯವಸಾಯದ ವಿಷಯದಲ್ಲಿ ಅವರಿಗೆ ಬಹುವಾದ ಅಕ್ಕರೆಯಿದ್ದಿತು. 1856ರಲ್ಲಿ ಚಂಗಲ್‌ಪೇಟೆಯಲ್ಲಿ ವ್ಯವಸಾಯದ ಪ್ರದರ್ಶನವೊಂದನ್ನು ಏರ್ಪಡಿಸಲಾಗಿದ್ದಿತು. ಅಲ್ಲಿಗೆ ಅವರು ಭತ್ತದ ಮಾದರಿಗಳನ್ನು ಕಳುಹಿಸಿಕೊಟ್ಟರು. ಅವಕ್ಕೆ 20 ರೂಪಾಯಿ ಬಹುಮಾನವನ್ನು ಕೊಡಲಾಯಿತು. 1867ರಲ್ಲಿ ಕಲ್ಲೀಕೋಟೆಯಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ಅಲ್ಲಿಗೆ ಅವರು ಕೈಗೆಲಸದ ಸಾಮಾನುಗಳನ್ನು ಕಳುಹಿಸಿಕೊಟ್ಟರು. ಅದಕ್ಕೂ ಅವರಿಗೆ ಬಹುಮಾನ ಬಂದಿತು. ಕಲ್ಲೀಕೋಟೆಯ ಸುತ್ತುಮುತ್ತಲಿನ ಪ್ರದೇಶದ ಕಾಡುಗಳಲ್ಲಿ ದೊರಕುತ್ತಿದ್ದ ವಿವಿಧ ಮರಗಳಿಂದ ಒಂದು ಬೀರುವನ್ನು ಅವರು ಮಾಡಿಸಿದ್ದರು. ಅದರಂತೆಯೇ ಕರ್ಪೂರದ ಮರದಿಂದ ಒಂದು ಪೆಟ್ಟಿಗೆಯನ್ನು ಮಾಡಿಸಿದ್ದರು.

ರಂಗಾಚಾರ್ಲುರವರು ಮದ್ರಾಸಿನ ಗೌರ್ನರಿಗೆ ಒಂದು ಮನವಿಯನ್ನು ಸಲ್ಲಿಸಿದರು. ಅದಕ್ಕೆ ಕೊಟ್ಟ ಉತ್ತರದಲ್ಲಿ ಗೌರ್ನರ್‌ರವರು ಅವರ ಸಾಮರ್ಥ್ಯವನ್ನೂ ಕಾರ್ಯಶ್ರದ್ಧೆಯನ್ನೂ ಶ್ಲಾಘಿಸಿದರು. ರಂಗಾಚಾರ್ಲುರವರು ಕಲ್ಲೀಕೋಟೆಯಲ್ಲಿ ಅಧಿಕಾರಿಗಳಾಗಿದ್ದಾಗ ಮೊದಲ ಬಾರಿಗೆ ಕುಮಾರಪುರಂ ಶೇಷಾದ್ರಿ ಅಯ್ಯರವರನ್ನು ಕಂಡರು. ಶೇಷಾದ್ರಿ ಅಯ್ಯರವರು ಆಗ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭಾಷಾಂತರಕಾರರಾಗಿದ್ದರು. ರಂಗಾಚಾರ್ಲುರವರು ಶೇಷಾದ್ರಿ ಅಯ್ಯರವರ ಬುದ್ಧಿಶಕ್ತಿಯನ್ನೂ, ಸಾಮರ್ಥ್ಯವನ್ನೂ ಗುರುತಿಸಿ ಮೆಚ್ಚಿಕೊಂಡರು. ರಂಗಾಚಾರ್ಲುರವರು ಮೈಸೂರು ಸಂಸ್ಥಾನಕ್ಕೆ ಬಂದ ಮೇಲೆ ಶೇಷಾದ್ರಿ ಅಯ್ಯರವರಿಗೆ ಅಷ್ಟಗ್ರಾಮದ ವಿಭಾಗದ ಮೇಲ್ವಿಚಾರಕರ ಕಛೇರಿಯಲ್ಲಿ ನ್ಯಾಯ ಇಲಾಖೆಯ ಶಿರಸ್ತೇದಾರರಾಗಿ ಕೆಲಸ ಮಾಡಿಸಿಕೊಟ್ಟರು. ರಂಗಾಚಾರ್ಲುರವರು ಮೈಸೂರು ಸರ್ಕಾರದ ಅಧಿಕಾರಿಗಳಾಗಿ ಬಂದ ಆರು ತಿಂಗಳಲ್ಲಿಯೇ ಶೇಷಾದ್ರಿ ಅಯ್ಯರವರೂ ಬಂದರು. ರಂಗಾಚಾರ್ಲುರವರು ಕೊಟ್ಟ ನೆರವು, ಪ್ರೋತ್ಸಾಹಗಳಿಂದ ಅವರು ಸರ್ಕಾರದ ಉದ್ಯೋಗದಲ್ಲಿ ಬಹು ಬೇಗ ಪ್ರಗತಿಯನ್ನು ಸಾಧಿಸಿದರು. ರಂಗಾಚಾರ್ಲುರವರ ಅನಂತರ ಅವರೇ ಸಂಸ್ಥಾನದ ದಿವಾನರಾದರು.

ರಂಗಾಚಾರ್ಲು ಹಂಗಾಮಿ ಹುಜೂರು ಉಪಕರಣಿಕರಾಗಿ 35 ರೂಪಾಯಿಗಳ ಸಂಬಳದ ಮೇಲೆ ಸರ್ಕಾರದ ಕೆಲಸಕ್ಕೆ ಸೇರಿದ್ದವರು ಕೇವಲ ಒಂಬತ್ತು ವರ್ಷಗಳಲ್ಲಿ ಉಪಜಿಲ್ಲಾಧಿಕಾರಿಗಳ ಸ್ಥಾನಕ್ಕೆ ಏರಿದರು. ಇನಾಂ ಆಯೋಗದಲ್ಲಿಯೂ, ರೈಲ್ವೆ ಆಯೋಗದಲ್ಲಿಯೂ ಈ ಅವಧಿಯಲ್ಲಿ ಬಹು ಉತ್ತಮವಾದ ಸೇವೆಯನ್ನು ಅವರು ಸಲ್ಲಿಸಿದರು. ಈ ಒಂಬತ್ತು ವರ್ಷಗಳ ಸತತ ಕಾರ್ಯಭಾರದಿಂದ ದೇಶದ ಅಭಿವೃದ್ಧಿಯ ವಿಷಯದಲ್ಲಿ ಅವರಿಗಿದ್ದ ಉತ್ಸಾಹ ಕುಗ್ಗಿರಲಿಲ್ಲ. ದೇಶದ ಭವಿಷ್ಯದ ಬಗೆಗೆ ಅವರು ಕಾಣುತ್ತಿದ್ದ ಕನಸುಗಳು ಅಚ್ಚಳಿಯದೇ ಉಳಿದಿದ್ದವು. ಸರ್ಕಾರದ ಅಧಿಕಾರಿಯ ಜೀವನವು ಗಾಣಕ್ಕೆ ಕಟ್ಟಿದ ಎತ್ತಿನ ಜೀವನದಂತೆ. ಬೆಳಗ್ಗೆಯಿಂದ ಸಂಜೆಯವರೆಗೆ ಒಂದೇ ಬಗೆಯ ಕಾರ್ಯವನ್ನು ಮಾಡುತ್ತಾ ಇರುವುದರಿಂದ ಅವನ ದೃಷ್ಟಿಯು ಸಂಕುಚಿತವಾಗಿ ಅವನ ಮನಸ್ಸು ಬರಡಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಂತಹ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿಯ ಚೇತನ ಉಡುಗಿ ಅವನ ವ್ಯಕ್ತಿತ್ವದ ಪ್ರಭಾವ ಕ್ರಮೇಣ ಕಡಿಮೆಯಾಗುವುದು ಅಸಂಭವವಲ್ಲ. ಆದರೆ ರಂಗಾಚಾರ್ಲುರವರು ತಮ್ಮ ಮನಶ್ಯಕ್ತಿಯನ್ನೂ, ವ್ಯಕ್ತಿತ್ವವನ್ನೂ ಕಾಪಾಡಿಕೊಂಡು ಬಂದರು. ಇದೇನೂ ಕಡಿಮೆಯಾದ ಸಾಧನೆ ಅಲ್ಲ.

ಅಧ್ಯಾಯ 3

# ಚಾರಿತ್ರಿಕ ಹಿನ್ನೆಲೆ

ಮೈಸೂರಿನ ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು 27 ನೆಯ ಮಾರ್ಚ್ 1868 ರಲ್ಲಿ ದೈವಾಧೀನರಾದರು, ಅವರ ಮರಣದ ಸುದ್ದಿ ಮುಟ್ಟಿದೊಡನೆಯೇ ಬ್ರಿಟಿಷರು ಸೈನ್ಯವನ್ನು ರಾಜಧಾನಿಯಾದ ಮೈಸೂರಿಗೆ ಕಳುಹಿಸಿದರು. ಅವರು ಅರಮನೆಯ ಸುತ್ತಮುತ್ತ ಬಲವಾದ ಪಹರೆಯನ್ನಿಟ್ಟು ಖಜಾನೆಗೆ ಬೀಗ ಮುದ್ರೆ ಹಾಕಿದರು. ಮಹಾರಾಜರ ಚರ, ಸ್ಥಿರ ಸ್ವತ್ತುಗಳ ಪೂರ್ಣ ಪಟ್ಟಿಯನ್ನು ತಯಾರಿಸುವುದೂ, ಅವರ ಸಾಲಗಳನ್ನು ತೀರಿಸುವುದಕ್ಕೆ ವ್ಯವಸ್ಥೆ ಮಾಡುವುದೂ, ಅರಮನೆಯ ಖರ್ಚು ವೆಚ್ಚಗಳನ್ನು ಕೂಲಂಕಷವಾಗಿ ಪರಿಶೀಲಿಸುವುದೂ ಅಗತ್ಯವೆಂದು ಬ್ರಿಟಿಷ್ ಅಧಿಕಾರಿಗಳಿಗೆ ಕಂಡುಬಂದಿತು. ಮೇಜರ್ ಇಲಿಯಟ್ ರವರನ್ನು ಈ ಕಾರ್ಯಕ್ಕೆ ನಿಯಮಿಸಲಾಯಿತು. ಮೈಸೂರು ಸಂಸ್ಥಾನದ ಆಡಳಿತಗಾರರಾಗಿದ್ದ ಬೌರಿಂಗ್ ಅವರು ಭಾರತ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ಪತ್ರ ಬರೆದರು. ಅದರಲ್ಲಿ ‘ ಇದು ಬಹು ಪ್ರಯಾಸಕರವಾದ ಕಾರ್ಯ. ಅರಮನೆಯ ಖರ್ಚು ವೆಚ್ಚಗಳನ್ನು ತನಿಖೆ ಮಾಡುವುದಕ್ಕೂ, ಮಹಾರಾಜರ ಚರ ಸ್ಥಿರ ಸ್ವತ್ತುಗಳ ಪಟ್ಟಿಯನ್ನು ತಯಾರಿಸುವುದಕ್ಕೂ ಮೇಜರ್ ಇಲಿಯಟ್‌ರವರಿಗೆ ತುಂಬಾ ಸಮರ್ಥರಾದ ಒಬ್ಬ ದೇಶೀಯ ಅಧಿಕಾರಿಯ ಸಲಹೆ ಸೂಚನೆಗಳು ಈ ಸಂದರ್ಭದಲ್ಲಿ ಅಗತ್ಯ ” ಎಂದಿದ್ದಾರೆ.ಬೌರಿಂಗ್‌ರವರು 5ನೇ ಮೇ 1868ರಲ್ಲಿ ಭಾರತ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ :- “ ಮದ್ರಾಸ್ ಸರ್ಕಾರ ನನ್ನ ಪ್ರಾರ್ಥನೆಯಂತೆ ಆ ಆಧಿಪತ್ಯದ ಉಪಜಿಲ್ಲಾಧಿಕಾರಿಗಳಲ್ಲೊಬ್ಬರಾದ ರಂಗಾಚಾರ್ಲುರವರನ್ನು ಮೇಜರ್ ಇಲಿಯಟ್‌ರವರು ನಿರ್ವಹಿಸಬೇಕಾದ ಕಷ್ಟಸಾಧ್ಯವಾದ ಕೆಲಸದಲ್ಲಿ ಸಹಾಯ ಮಾಡಲು ಕಳುಹಿಸುವುದಕ್ಕೆ ಒಪ್ಪಿದೆ. ಅವರು ಮದ್ರಾಸಿನ ಇನಾಂ ತನಿಖೆಯ ಆಯೋಗದಲ್ಲಿ ದೀರ್ಘಕಾಲ ಕೆಲಸಮಾಡಿದ್ದಾರೆ. ಅವರ ವಿಶೇಷ ಕಾರ್ಯ ಸಾಮರ್ಥ್ಯದ ಬಗೆಗೂ ಶೀಲೋನ್ನತಿಯ ಬಗೆಗೂ, ಆಯೋಗದ ಅಧ್ಯಕ್ಷರು ಶಿಫಾರಸು ಮಾಡುವರೆಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ. ಆದ್ದರಿಂದ ಸರ್ಕಾರವನ್ನು, ರಂಗಾಚಾರ್ಲುರವರನ್ನು ಈ ಕೆಲಸದಲ್ಲಿ ಸ್ಥಿರಪಡಿಸಬೇಕೆಂದು ನಿಸ್ಸಂಕೋಚವಾಗಿ ನಾನು ಪ್ರಾರ್ಥಿಸುತ್ತೇನೆ.” ಭಾರತ ಸರ್ಕಾರದವರು 23 ನೇ ಮೇ 1868 ರಲ್ಲಿ ರಂಗಾಚಾರ್ಲುರವರನ್ನು ಮೇಜರ್ ಇಲಿಯಟ್‌ರವರ

ಸಹಾಯಕರನ್ನಾಗಿ ನಿಯಮಿಸಿದರು. ಹೀಗೆ ಮದ್ರಾಸ್ ಆಧಿಪತ್ಯದಲ್ಲಿ 18 ವರ್ಷ ಸರ್ಕಾರದ ಅಧಿಕಾರಿಯಾಗಿ ಕೆಲಸ ಮಾಡಿದ ರಂಗಾಚಾರ್ಲುರವರನ್ನು ವಿಧಿವಿಲಾಸ ಮೈಸೂರಿಗೆ ಕರೆದುಕೊಂಡು ಬಂದಿತು. ತಮ್ಮ ಆಯುಷ್ಯದ ಉಳಿದ ಭಾಗವನ್ನು ಅವರು ಮೈಸೂರಿನ ಸೇವೆಯಲ್ಲಿ ಕಳೆದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ದತ್ತುಪುತ್ರ ಚಾಮರಾಜೇಂದ್ರ ಒಡೆಯರಿಗೆ ಬ್ರಿಟಿಷರು ಮೈಸೂರು ರಾಜ್ಯವನ್ನು 1881 ರಲ್ಲಿ ಹಿಂದಿರುಗಿಸಿದಾಗ ರಂಗಾಚಾರ್ಲುರವರೇ ಅದರ ಪ್ರಪ್ರಥಮ ದಿವಾನ ರಾದರು.

ಈಗ 1799 ರಲ್ಲಿ ಟಿಪ್ಪೂಸುಲ್ತಾನರ ಪತನವಾದ ಮೇಲಿನ ಮೈಸೂರಿನ ಇತಿಹಾಸದ ಸಂಕ್ಷಿಪ್ತವಾದ ಪರಿಚಯವನ್ನು ಮಾಡಿಕೊಳ್ಳೋಣ. ರಂಗಾಚಾರ್ಲು ರವರು ದಿವಾನರಾಗಿ ಸಾಧಿಸಿದ ಮಹತ್ಕಾರ್ಯಗಳ ಚಾರಿತ್ರಿಕ ಹಿನ್ನೆಲೆ ಏನು ಎಂಬುದು ಇದರಿಂದ ಗೊತ್ತಾಗುತ್ತದೆ.

ಮೈಸೂರು ರಾಜಮನೆತನದ ಇತಿಹಾಸ ಬಹು ಪ್ರಾಚೀನವಾದುದು. ಕ್ರಿ.ಶ. 14 ನೆಯ ಶತಮಾನದ ಅಂತ್ಯದಲ್ಲಿ ದ್ವಾರಕಾನಗರದಿಂದ ಯಾದವ ಕುಲ ಸಂಜಾತರಾದ ವಿಜಯ ಮತ್ತು ಕೃಷ್ಣರೆಂಬ ಅಣ್ಣತಮ್ಮಂದಿರಿಬ್ಬರು ಮೈಸೂರಿಗೆ ಬಂದರು. ಶೌರ್ಯ ಸಾಹಸಗಳನ್ನು ಮೆರೆದು, ಆಚಂದ್ರಾರ್ಕವಾಗಿ ತಮ್ಮ ಹೆಸರನ್ನು ನಿಲ್ಲಿಸಬೇಕೆಂದು, ಹೊಸ ರಾಜ್ಯವನ್ನು ಕಟ್ಟಬೇಕೆಂದು ಕನಸು ಕಾಣುತ್ತಾ ಅವರು ದೂರದ ದ್ವಾರಕಿಯಿಂದ ಈಗಿನ ಮೈಸೂರು ನಗರಕ್ಕೆ ಆಗ್ನೇಯದಲ್ಲಿ ಸ್ವಲ್ಪ ದೂರದಲ್ಲಿದ್ದ ಹದಿನಾಡೆಂಬ ಪಾಳೆಯಪಟ್ಟಿಗೆ ಬಂದರು. ಅಲ್ಲಿಯ ದೊರೆಗೆ ಹುಚ್ಚು ಹಿಡಿದು ಎಲ್ಲೋ ಗೊತ್ತು ಗುರಿಯಿಲ್ಲದೇ ಹೊರಟು ಹೋಗಿದ್ದ. ಹದಿನಾಡಿನ ದೊರೆಗೆ ಒಬ್ಬಳೇ ಮಗಳು. ಕೆಳಜಾತಿಯ ಕಾರುಗಹಳ್ಳಿಯ ಪಾಳೆಯಗಾರನು ಆಕೆಯನ್ನು ಮದುವೆಯಾಗಬೇಕೆಂದು ನಿಸ್ಸಹಾಯರಾದ ಹದಿನಾಡಿನ ರಾಜಮನೆತನ ದವರನ್ನು ಬಲವಾಗಿ ಒತ್ತಾಯ ಮಾಡುತ್ತಿದ್ದನು. ಅವನ ಹಿಂಸೆ ತಡೆಯಲಾರದೆ ಈ ಮದುವೆಗೆ ಅವರು ಒಪ್ಪಿಗೆಯನ್ನು ಕೊಟ್ಟಿದ್ದರು. ಯಾದವ ರಾಜಪುತ್ರರಾದ ವಿಜಯ ಮತ್ತು ಕೃಷ್ಣರು ಈ ಸಂಗತಿಯನ್ನು ತಿಳಿದು ಹದಿನಾಡಿನ ಅರಮನೆಯಲ್ಲಿ ತಮ್ಮ ಹಿಂಬಾಲಕರೊಂದಿಗೆ ಅಡಗಿಕೊಂಡರು. ಕಾರುಗಹಳ್ಳಿಯ ಪಾಳೆಯಗಾರನು ತನ್ನ ಪರಿವಾರದೊಂದಿಗೆ ಅಲ್ಲಿಗೆ ಭೋಜನಕ್ಕಾಗಿ ಬಂದನು. ಅವನು ಊಟಕ್ಕೆ ಕುಳಿತಿರುವಾಗ ಯಾದವ ರಾಜಕುಮಾರರು ಅವನ ಮೇಲೆ ಬಿದ್ದು ಅವನನ್ನು

ಕೊಂದರು. ಕಾರುಗಹಳ್ಳಿಗೆ ಧಾವಿಸಿ ಅದನ್ನು ವಶಪಡಿಸಿಕೊಂಡರು. ಅವರು ಹದಿನಾಡಿಗೆ ಹಿಂದಿರುಗಿದಾಗ ರಾಜಕುಮಾರಿಯು ವಿಜಯನನ್ನು ಮದುವೆಯಾಗಲು ಬಹು ಸಂತೋಷದಿಂದ ಒಪ್ಪಿದಳು. ವಿಜಯ ಅಥವಾ ಯದುರಾಯ ಹದಿನಾಡು ಮತ್ತು ಕಾರುಗಹಳ್ಳಿಯ ಅರಸನಾದನು. ಅವನು " ಒಡೆಯರ್ " ಎಂಬ ಪ್ರಶಸ್ತಿಯನ್ನು ತನ್ನ ಹೆಸರಿಗೆ ಸೇರಿಸಿಕೊಂಡನು. ಇಂದಿಗೂ ಮೈಸೂರಿನ ಅರಸರನ್ನು " ಒಡೆಯರ್ " ಎಂದೇ ಕರೆಯುವರು.

ಮೈಸೂರು ಅರಸು ಮನೆತನ ಬಹು ಸಮರ್ಥರೂ, ಕೀರ್ತಿಶಾಲಿಗಳೂ ಆದ ದೊರೆಗಳನ್ನು ದೇಶಕ್ಕೆ ಕಾಣಿಕೆಯಾಗಿ ಕೊಟ್ಟಿದೆ. ಮೊದಲನೆಯ ರಾಜ ಒಡೆಯರು (1578–1617) ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ವಿಜಯನಗರದ ರಾಜಪ್ರತಿನಿಧಿ ಶ್ರೀರಂಗರಾಯನನ್ನು ಸೋಲಿಸಿ ಅವನ ರತ್ನಖಚಿತ ಸಿಂಹಾಸನವನ್ನು ಏರಿದರು. ಇವರ ವಿಷಯದಲ್ಲಿ ಒಂದು ಕಥೆಯುಂಟು. ಮೈಸೂರು ಅರಸರು ನಂಜನಗೂಡಿನಲ್ಲಿರುವ ಶ್ರೀಕಂಠೇಶ್ವರ ಸ್ವಾಮಿಯ ಭಕ್ತರು. ಆ ದೇವರಿಗೆ ನಡೆದುಕೊಳ್ಳುವರು. ಇದು ನೂರಾರು ವರ್ಷಗಳಿಂದ ರಾಜಮನೆತನದಲ್ಲಿ ಪದ್ಧತಿಯಾಗಿದೆ. ರಾಜ ಒಡೆಯರು ನಂಜುಂಡೇಶ್ವರನ ಪರಮ ಭಕ್ತರು. ಅವರ ಶತ್ರುಗಳು ದೇವಸ್ಥಾನದ ಅರ್ಚಕನಿಗೆ ಹಣದಾಸೆ ತೋರಿಸಿ ರಾಜ ಒಡೆಯರಿಗೆ ಕೊಡುವ ತೀರ್ಥದಲ್ಲಿ ವಿಷ ಬೆರೆಸುವಂತೆ ಒಪ್ಪಿಸಿದರು. ಪ್ರಭುಗಳು ದೇವಸ್ಥಾನಕ್ಕೆ ಆಗಮಿಸಿದರು. ಪೂಜೆ, ಮಂಗಳಾರತಿಗಳು ಆದ ಮೇಲೆ ತೀರ್ಥ ಕೊಡಲು ಪೂಜಾರಿ ಬಂದನು. ರಾಜ ಒಡೆಯರು ಭಕ್ತಿಯಿಂದ ಕೈ ನೀಡಿದರು. ಪೂಜಾರಿ ಗಡಗಡನೆ ನಡುಗಲಾರಂಭಿಸಿದನು. ಆಶ್ಚರ್ಯಚಕಿತರಾದ ಪ್ರಭುಗಳು ಅವನನ್ನು ಹೀಗೇಕೆ ವರ್ತಿಸುತ್ತಿದ್ದೀಯೆ ಎಂದು ಕೇಳಿದರು. ಪೂಜಾರಿಯು ತೊದಲುತ್ತಾ ತನ್ನ ವರ್ತನೆಗೆ ಕಾರಣವನ್ನು ಅವರಿಗೆ ತಿಳಿಸಿಬಿಟ್ಟನು. ಪ್ರಭುಗಳು ಅವನನ್ನು ಕೇಳಿದರು : "ನಮಗೆ ಈಗ ತೀರ್ಥವೆಂದು ಕೊಡಲು ಬಂದಿರೋ ? ವಿಷವೆಂದು ಕೊಡಲು ಬಂದಿರೋ ?" ಪೂಜಾರಿ " ಮಹಾಸ್ವಾಮಿ, ನಾನು ತೀರ್ಥವೆಂದು ಕೊಡಲು ಬಂದೆ." ರಾಜ ಒಡೆಯರು ಕಣ್ಣುಮುಚ್ಚಿ ಶ್ರೀಕಂಠೇಶ್ವರನನ್ನು ಧ್ಯಾನಿಸಿ "ಅಯ್ಯಾ ಪೂಜಾರಿಯೇ ತೀರ್ಥವನ್ನು ಕೊಡು" ಎಂದು ಕೇಳಿದರು. ವಿಧಿ ಇಲ್ಲದೆ ಆ ಪೂಜಾರಿ, ವಿಷ ಬೆರಸಿದ ತೀರ್ಥವನ್ನು ಕೊಟ್ಟನು. ರಾಜ ಒಡೆಯರು ಅದನ್ನು ಸೇವಿಸಿಬಿಟ್ಟರು. ಅವರ ಅಂಗೈ ಮೇಲೆ ವಿಷದ ಕಲೆ ಉಳಿಯಿತು. ಆದರೆ ಅವರಿಗೆ ವಿಷದ ಪರಿಣಾಮ ಏನೂ ಆಗಲಿಲ್ಲ.

ರಣಧೀರ ಕಂಠೀರವ ನರಸರಾಜ ಒಡೆಯರು 1638 ರಿಂದ 1659ರವರೆಗೆ ಮೈಸೂರಿನ ಅರಸರಾಗಿದ್ದರು. ಅವರ ಧೈರ್ಯ ಪರಾಕ್ರಮಗಳು ಜನಜನಿತವಾದವು. ಒಡ್ಯಾಣದಂತೆ ಸೊಂಟದ ಸುತ್ತಲೂ ಅವರು ಧರಿಸುತ್ತಿದ್ದ ವಿಜಯನಾರಸಿಂಹವೆಂಬ ಖಡ್ಗ ಇಂದಿಗೂ ಮೈಸೂರು ಅರಮನೆಯಲ್ಲಿದೆ.

ಚಿಕ್ಕದೇವರಾಜ ಒಡೆಯರು 1672 ರಿಂದ 1704 ರವರಗೆ ಮೈಸೂರಿನ ಪ್ರಭುಗಳಾಗಿದ್ದರು. ಈ ಕಾಲದಲ್ಲಿಯೇ ಔರಂಗಜೇಬನು ಮೊಗಲರ ಸಾಮ್ರಾಜ್ಯವನ್ನು ಆಳುತ್ತಿದ್ದನು. ಚಿಕ್ಕ ದೇವರಾಜರು ಬಹು ಸಮರ್ಥರಾದ ಆಡಳಿತಗಾರರು ಶತ್ರುಭಯಂಕರರು. ಅವರು ರಾಜ್ಯಾಡಳಿತವನ್ನು 18 ಇಲಾಖೆಗಳನ್ನಾಗಿ ವಿಂಗಡಿಸಿ ಒಂದೊಂದು ಇಲಾಖೆಯಲ್ಲಿ ಶಿಸ್ತಿನಿಂದ ಕಾರ್ಯವೆಸಗುವಂತೆ ವ್ಯವಸ್ಥೆ ಮಾಡಿದರು. ಹಳೆಯ ಮೈಸೂರಿನ ಸರ್ಕಾರದ ಕಚೇರಿಗೆ ಇತ್ತೀಚಿನವರಗೆ ಜನ "ಅಠಾರಾ ಕಛೇರಿ" ಎಂದು ಕರೆಯುತ್ತಿದ್ದರು. ಚಿಕ್ಕ ದೇವರಾಜರು ಏರ್ಪಡಿಸಿದ ರಾಜ್ಯ ವ್ಯವಸ್ಥೆ ನೂರೈವತ್ತು ವರ್ಷಗಳ ಕಾಲ ಹೆಚ್ಚು ಕಡಿಮೆ ಹಾಗೆಯೇ ನಡೆದುಕೊಂಡು ಬಂದಿತು.

ಔರಂಗಜೇಬನು ಚಿಕ್ಕ ದೇವರಾಜರಿಗೆ ಜಗದೇಕಮಲ್ಲ ಎಂಬ ಬಿರುದನ್ನು ಕೊಟ್ಟನು. ದಂತದ ಸಿಂಹಾಸನವನ್ನು ಮೆಚ್ಚುಗೆಯ ಗುರುತಾಗಿ ಅರ್ಪಿಸಿದನು. ಚಿಕ್ಕ ದೇವರಾಜರು ಕನ್ನಡ ಸಾಹಿತ್ಯಾಭಿವೃದ್ಧಿಗೆ ವಿಶೇಷವಾದ ಪ್ರೋತ್ಸಾಹ ಕೊಟ್ಟರು, ತಾವೇ ಆ ಭಾಷೆಯಲ್ಲಿ ಗ್ರಂಥ ರಚನೆ ಮಾಡಿದರು.

ಚಿಕ್ಕದೇವರಾಜರಾದ ಮೇಲೆ ಬಂದ ಅರಸರು ಸಮರ್ಥರಲ್ಲ. ಆದ್ದರಿಂದ ರಾಜ್ಯಾಧಿಕಾರ ಕ್ರಮೇಣ ಪ್ರಬಲರಾದ ಅಧಿಕಾರಿಗಳ ಕೈವಶವಾಯಿತು. ಸೈನ್ಯದ ಮುಖ್ಯಸ್ಥನಾದ ದೇವರಾಜನೂ ಅವನಿಗೆ ವಾವೆಯಲ್ಲಿ ಸಹೋದರನಾದ ನಂಜರಾಜನೂ ಸರ್ವಾಧಿಕಾರಿಗಳಾದರು. ನಂಜರಾಜ ಗತಿಸಿದ ಅನಂತರ ದೇವರಾಜನ ತಮ್ಮ ಕರಾಚುರಿ ನಂಜರಾಜಯ್ಯ ಅವನ ಸ್ಥಾನಕ್ಕೆ ಬಂದನು. 1749ರಲ್ಲಿ ಕರಾಚುರಿ ನಂಜರಾಜಯ್ಯ ದೇವನಹಳ್ಳಿಗೆ ಮುತ್ತಿಗೆ ಹಾಕಿದನು. ಆ ಸಂದರ್ಭದಲ್ಲಿ ಅನಾಮಧೇಯನಾದ ಕುದುರೆ ಸವಾರನೊಬ್ಬ ಅವನ ಸೈನ್ಯವನ್ನು ಸೇರಿದನು. ಇವನೇ ಮುಂದೆ ಪ್ರಸಿದ್ಧನಾದ ಹೈದರಾಲಿ. ನಂಜರಾಜಯ್ಯನ ಆಶ್ರಯದಲ್ಲಿ ಹೈದರಾಲಿ ಬಹುಬೇಗ ಮುಂದೆ ಬಂದನು. ಕೊನೆಗೆ ಅವನು ರಾಜ್ಯಾಡಳಿತದ ಸೂತ್ರಗಳನ್ನು ವಶಪಡಿಸಿಕೊಂಡು ನಿಜಾಮನಿಗೂ, ಮರಾಟರಿಗೂ, ಬ್ರಿಟಿಷರಿಗೂ, ಸಿಂಹಸ್ವಪ್ನವಾಗಿ

ಬಾಳಿದನು. 1761 ರಿಂದ 1782 ರವರೆಗೆ ಹೈದರಾಲಿ ಮೈಸೂರಿನ ಸರ್ವಾಧಿಕಾರಿಯಾಗಿದ್ದನು. ಅವನ ಕಾಲದಲ್ಲಿ ಹಿಂದಿನ ರಾಜಮನೆತನದ ಅರಸರನ್ನು ಮೈಸೂರು ಪ್ರಭುಗಳೆಂದೇನೋ ಗಣಿಸಲಾಗುತ್ತಿತ್ತು. ಆದರೆ ಅವರು ಹೈದರನ ಆಜ್ಞಾನುವರ್ತಿಗಳಾಗಿ ಹೆಸರಿಗೆ ಮಾತ್ರ ರಾಜರಾಗಿ ಇರುತ್ತಿದ್ದರು. ಅವನು ಮೈಸೂರು ರಾಜ್ಯವನ್ನು ವಿಶೇಷವಾಗಿ ವಿಸ್ತರಿಸಿದನು. ಮೈಸೂರು ದಕ್ಷಿಣ ದೇಶದಲ್ಲೆಲ್ಲಾ ಅತ್ಯಂತ ಪ್ರಬಲ ರಾಜ್ಯವಾಗಿ ಅವನ ಕಾಲದಲ್ಲಿ ಮೆರೆಯಿತು. ಹೈದರ್ ಓದು ಬರಹ ಬಾರದವನು. ಸರ್ಕಾರದ ಕಾಗದ ಪತ್ರಗಳ ಮೇಲೆ ತನ್ನ ರುಜುವನ್ನು ತಲೆಕೆಳಗಾಗಿ ಮಾಡುತ್ತಿದ್ದನು. ಅವನ ಕೈಕೆಳಗೆ ಕೆಲಸ ಮಾಡುತ್ತಿದ್ದವನೊಬ್ಬನು ಹೀಗೇಕೆ ತಲೆಕೆಳಗಾಗಿ ರುಜು ಮಾಡುತ್ತಿದ್ದೀರಿ ಎಂದು ಕೇಳಿದನು. ಆಗ ಹೈದರಾಲಿ, ಉತ್ತರ ಹೇಳಿದನಂತೆ, "ಅಲ್ಲಿ ಏನು ನೋಡುತ್ತೀಯೆ, ನನ್ನ ಲಲಾಟದ ಮೇಲಿನ ಬ್ರಹ್ಮಲಿಖಿತವನ್ನು ನೋಡು" ಎಂದು.

ಹೈದರಾಲಿಯು ಮದ್ರಾಸಿನಲ್ಲಿ ಬ್ರಿಟಿಷರ ಮೇಲೆ ಯುದ್ಧ ಮಾಡುತ್ತಿದ್ದಾಗ ಬೆನ್ನುಫಣಿ ಎದ್ದು ಇದ್ದಕ್ಕಿದ್ದಂತೆ ತೀರಿಕೊಂಡನು. ಅವನ ಜೊತೆಯಲ್ಲಿಯೇ ಇದ್ದ ಮಂತ್ರಿ ಪೂರ್ಣಯ್ಯನವರು ಅವನ ಮರಣದ ಸುದ್ದಿ ತಟ್ಟನೆ ಗೊತ್ತಾದರೆ ಸೈನ್ಯ ಎದೆಗುಂದಿ ಚದುರಿ ಹೋಗಬಹುದೆಂದು, ಆ ಸುದ್ದಿಯನ್ನು ಮುಚ್ಚಿಟ್ಟರು. ಕೂಡಲೇ ಮಂಗಳೂರಿನಲ್ಲಿದ್ದ ಟಿಪ್ಪೂ ಸುಲ್ತಾನನಿಗೆ ಈ ವರ್ತಮಾನವನ್ನು ಮುಟ್ಟಿಸಿದರು. ಟಿಪ್ಪೂ ಸುಲ್ತಾನ ಮಂಗಳೂರಿನಿಂದ ಹಗಲು ರಾತ್ರಿ ಎನ್ನದೆ ಪ್ರಯಾಣ ಮಾಡಿ ಬಂದು ಸೈನ್ಯದ ನಾಯಕತ್ವವನ್ನು ವಹಿಸಿಕೊಂಡನು, ರಾಜ್ಯಾಧಿಕಾರವನ್ನು ವಶಪಡಿಸಿಕೊಂಡನು. 1782ರಲ್ಲಿ ಅಧಿಕಾರಕ್ಕೆ ಬಂದ ಟಿಪ್ಪೂ ಸುಲ್ತಾನನು ಹಿಂದಿನ ರಾಜವಂಶದವರು ನಾಮಮಾತ್ರ ಅರಸಾಗಿರುವುದನ್ನೂ ತಪ್ಪಿಸಿಬಿಟ್ಟನು. ತಾನೇ ಮೈಸೂರಿನ ಅರಸನೆಂದು ಘೋಷಿಸಿದನು. ಧೈರ್ಯಶಾಲಿಯಾದರೂ ವಿವೇಕಿಯಲ್ಲದ ಟಿಪ್ಪೂ ರಾಜ್ಯದ ಒಳಗೂ, ಹೊರಗೂ ಶತ್ರುಗಳನ್ನು ಬೆಳಸಿಕೊಂಡನು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರು, ಮರಾಟರು ಮತ್ತು ನಿಜಾಮರು ಒಟ್ಟು ಸೇರಿ ಟಿಪ್ಪೂವನ್ನು ಸೋಲಿಸಿದರು. ಶ್ರೀರಂಗಪಟ್ಟಣಕ್ಕೆ ಶತ್ರು ಸೈನ್ಯ ಮುತ್ತಿಗೆ ಹಾಕಿದಾಗ ಅದರ ವಿರುದ್ಧ ಹೋರಾಡುತ್ತಾ ಕೋಟೆಯ ಹೆಬ್ಬಾಗಿಲಿನ ಬಳಿ ಟಿಪ್ಪೂವು ಅಸು ನೀಗಿದನು.

ಮಹಾರಾಣಿ ಲಕ್ಷ್ಮಮ್ಮಣ್ಣಿ ಮೈಸೂರಿನ ದೊರೆಗಳಾಗಿದ್ದ ಚಿಕ್ಕ ಕೃಷ್ಣರಾಜ ಒಡೆಯರ (1734—1766) ಪತ್ನಿ. ಟಿಪ್ಪೂ ಸುಲ್ತಾನನನ್ನು ಪದಚ್ಯುತಗೊಳಿಸಿ

ಹಿಂದಿನ ರಾಜವಂಶಕ್ಕೆ ಸಿಂಹಾಸನವನ್ನು ದೊರಕಿಸಿಕೊಡಬೇಕೆಂಬ ಗುಪ್ತ ಚಳುವಳಿಗೆ ಅವರೇ ಮುಖ್ಯಸ್ಥರು. ಟಿಪ್ಪುವಿನ ಅಧಿಕಾರ, ಕೀರ್ತಿಗಳು ಪರಾಕಾಷ್ಠ ದೆಶೆಯಲ್ಲಿದ್ದಾಗಲೂ ಆಕೆ ಬ್ರಿಟಿಷರೊಡನೆ ಸಂಧಾನ ನಡೆಸುತ್ತಿದ್ದರು. ಅವರ ರಾಯಭಾರಿಗಳು ಮದರಾಸಿಗೆ ಓಡಾಡುತ್ತಾ ಗುಪ್ತ ಪತ್ರಗಳನ್ನು ಸಾಗಿಸುತ್ತಿದ್ದರು. ದೀರ್ಘ ಕಾಲ ಜೀವಿಸಿದ್ದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಮೈಸೂರು ಅರಸು ಮನೆತನದ ಹೀನಸ್ಥಿತಿಯನ್ನೂ, ರಾಜ್ಯ ಅನ್ಯಾಕ್ರಾಂತವಾಗಿದ್ದುದನ್ನೂ ನೋಡಿ ದುಃಖಿಸುತ್ತಾ ಕೂಡದೆ, ಧೃಢಮನಸ್ಸಿನಿಂದ ರಾಜ್ಯ ಪ್ರಾಪ್ತಿಯ ಬಗೆಗೆ ದೀರ್ಘ ಪ್ರಯತ್ನ ನಡೆಸಿ ಕೊನೆಯಲ್ಲಿ ಟಿಪ್ಪೂಸುಲ್ತಾನನ ಪತನವಾದ ಮೇಲೆ ಮೈಸೂರು ರಾಜ್ಯವನ್ನು 1799ರಲ್ಲಿ ಯದುವಂಶಕ್ಕೆ ಹಿಂದಿರುಗಿಸಿದಾಗ ಶ್ರೀರಂಗಪಟ್ಟಣದ ಕೌಲಿಗೆ ಸಹಿ ಹಾಕಿದರು.

ಟಿಪ್ಪೂ ಸುಲ್ತಾನನ ಪರಾಜಯದಿಂದ ವಿಶಾಲವೂ, ಸಂಪತ್‌ಸಮೃದ್ಧವೂ ಆದ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು. ಭಾರತದ ಗೌರ್ನರ್ ಜನರಲ್ ಆಗಿದ್ದ ಮಾರ್ಕ್ವಿಸ್ ವೆಲ್ಲೆಸ್ಲಿ ಮೈಸೂರಿನ ಭವಿಷ್ಯವನ್ನು ನಿರ್ಧರಿಸಬೇಕಾಯಿತು. ಟಿಪ್ಪುವಿನ ಜ್ಯೇಷ್ಠಪುತ್ರ ಫಾತೆ ಹೈದರನನ್ನು ಮೈಸೂರು ಸಿಂಹಾಸನದ ಮೇಲೆ ಕೂರಿಸುವುದೆಂತಲೂ, ಅವನು ಬ್ರಿಟಿಷರಿಗೆ ಪೊಗದಿಯನ್ನು ಕೊಡತಕ್ಕದ್ದೆಂತಲೂ, ರಾಜ್ಯದ ಭದ್ರತೆಯನ್ನು ಕಾಪಾಡಲು ಬ್ರಿಟಿಷರಿಗೆ ಅಗತ್ಯವೆಂದು ಕಂಡು ಬಂದ ಕೋಟೆ ಕಿಲ್ಲೆಗಳಲ್ಲಿ ಅವರ ಸೈನ್ಯ ಇರತಕ್ಕದ್ದೆಂತಲೂ, ಇದರಿಂದ ರಾಜ್ಯದಲ್ಲಿ ಶಿಸ್ತು ಶಾಂತಿಗಳನ್ನು ಪುನರ್‌ಸ್ಥಾಪಿಸಲು ಸಾಧ್ಯವಾಗುವುದೆಂತಲೂ, ಪೂರ್ಣಯ್ಯನವರು ಸೂಚಿಸಿದರು. ಆದರೆ ವೆಲ್ಲೆಸ್ಲಿ ಟಿಪ್ಪುವಿನ ಮನೆತನಕ್ಕೆ ಸೇರಿದವರಿಗೆ ರಾಜ್ಯದ ಪ್ರಭುತ್ವವನ್ನು ಕೊಡುವುದಕ್ಕೆ ವಿರೋಧವಾಗಿದ್ದನು. ಮೈಸೂರಿನ ಹಳೆಯ ರಾಜ ಮನೆತನದ ಸ್ಥಿತಿಗತಿಗಳೇನು, ಆ ಮನೆತನಕ್ಕೆ ಸೇರಿದ ವ್ಯಕ್ತಿಗಳ ಗುಣ ನಡತೆಗಳೇನು ಎಂಬುದನ್ನರಿಯಲು ಅವನು ವ್ಯವಸ್ಥೆ ಮಾಡಿದನು. ನಾಲ್ಕನೆಯ ಜೂನ್ 1799ರ ವೇಳೆಗೆ ಮೈಸೂರಿನ ಹಿಂದಿನ ರಾಜಮನೆತನಕ್ಕೇ ರಾಜ್ಯವನ್ನು ಹಿಂದಿರುಗಿಸಬೇಕೆಂಬ ಧೃಢ ನಿರ್ಧಾರವನ್ನು ವೆಲ್ಲೆಸ್ಲಿ ಕೈಗೊಂಡಿದ್ದನು. ಆ ತಾರೀಖಿನಲ್ಲಿ ಅವನು ಬರೆದ ಪತ್ರದಲ್ಲಿ ಹೀಗೆಂದಿದ್ದಾನೆ :— “ಪುರಾತನವಾದ ಮೈಸೂರು ರಾಜಮನೆತನದ ಪ್ರತಿನಿಧಿಯನ್ನು ಸಿಂಹಾಸನದ ಮೇಲೆ ಕೊಡಿಸುವುದೂ, ಮೈಸೂರು ಯುದ್ಧದಲ್ಲಿ ನಮ್ಮೊಂದಿಗೆ ಸಹಕರಿಸಿದ ಮಿತ್ರ ರಾಜ್ಯಗಳಿಗೆ ಮೈಸೂರಿನ ಭಾಗಗಳನ್ನು ಹಂಚುವುದೂ, ಈ ಸಂದರ್ಭದಲ್ಲಿ ಮರಾಟರ ಆಶೋತ್ತರಗಳನ್ನು ತೃಪ್ತಿಪಡಿಸುವುದೂ

ನನಗೆ ಇಂದಿನ ಪರಿಸ್ಥಿತಿಯಲ್ಲಿ ಈ ರಾಜ್ಯವನ್ನು ಹೊಸದಾಗಿ ವ್ಯವಸ್ಥೆಗೊಳಿಸುವ ಸರ್ವೋತ್ತಮ ಮಾರ್ಗವೆಂದು ಕಾಣುತ್ತದೆ. ಸಾವಕಾಶ ಮಾಡದೆ ಈ ರೀತಿಯಲ್ಲಿ ಒಂದು ಯೋಜನೆ ತಯಾರಿಸಬೇಕೆಂದು ನಾನು ನಿರ್ಧರಿಸಿದ್ದೇನೆ. ನಾಳೆಯೊಳಗೆ ಕೌಲಿನ ಷರತ್ತಗಳನ್ನೂ, ಅದರೊಂದಿಗೆ ಈ ಉದ್ದೇಶವನ್ನು ಸಾಧಿಸುವ ಬಗೆಗೆ ಸೂಚನೆಗಳ ಪಟ್ಟಿಯನ್ನೂ ಕಳುಹಿಸಲಾಗುವುದೆಂದು ನಂಬುತ್ತೇನೆ.''

ಮೈಸೂರು ರಾಜ್ಯದ ಒಂದು ಭಾಗವನ್ನು ರಾಜಮನೆತನಕ್ಕೆ ಹಿಂದಿರುಗಿಸುವುದೆಂದೂ, ಉಳಿದ ಭಾಗವನ್ನು ಕಂಪನಿ, ನೈಜಾಮರು, ಮರಾಟರು ಹಂಚಿಕೊಳ್ಳುವುದೆಂದೂ, ವೆಲ್ಲೆಸ್ಲಿ ನಿರ್ಧರಿಸಿದನೆಂದು ಹೇಳಲಾಯಿತಷ್ಟೆ. ಈ ವ್ಯವಸ್ಥೆಯ ವಿವರಗಳನ್ನು ಪರಿಶೀಲಿಸಿ ತೀರ್ಮಾನಿಸುವುದಕ್ಕೆ ಐವರು ಬ್ರಿಟಿಷ್ ಅಧಿಕಾರಿಗಳ ಮಂಡಲಿಯನ್ನು ನಿಯಮಿಸಲಾಯಿತು.

ಈ ಮಂಡಲಿಯ ಸದಸ್ಯನಾದ ಲೆಫ್ಟಿನೆಂಟ್ ಕರ್ನಲ್ ಕರ್ಕ್‌ಪ್ಯಾಟ್ರಿಕ್ ಒಟ್ಟು ಮೈಸೂರು ರಾಜ್ಯವೇ ಮೈಸೂರು ರಾಜಮನೆತನಕ್ಕೆ ಸೇರಿದುದೆಂದೂ, ಅದನ್ನು ಆ ರಾಜಮನೆತನಕ್ಕೇ ಹಿಂದಿರುಗಿಸತಕ್ಕದ್ದೆಂದೂ, ಅನಂತರ ರಾಜಮನೆತನದ ಪುನರ್‌ಸ್ಥಾಪನೆಗೆ ಸಹಾಯ ಮಾಡಿದ ಬ್ರಿಟಿಷರು, ನೈಜಾಮು, ಮರಾಟರಿಗೆ ಪ್ರತಿಫಲವಾಗಿ ರಾಜ್ಯದ ಭಾಗಗಳನ್ನು ಮೈಸೂರು ರಾಜರು ಕೊಡತಕ್ಕದ್ದೆಂದೂ ಸಲಹೆ ಮಾಡಿದನು. ವೆಲ್ಲೆಸ್ಲಿಯು 5ನೇ ಜೂನ್ 1799 ರಲ್ಲಿ ಕರ್ಕ್‌ಪ್ಯಾಟ್ರಿಕ್‌ಗೆ ಒಂದು ಪತ್ರವನ್ನು ಬರೆದು ಈ ಸಲಹೆಯ ಬಗೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಅದರಲ್ಲಿ ಕರ್ಕ್‌ಪ್ಯಾಟ್ರಿಕ್ ಸೂಚಿಸಿದ ರೀತಿಯಲ್ಲಿ ರಾಜ್ಯದ ವ್ಯವಸ್ಥೆ ಮಾಡುವುದು ತನಗೆ ಸಮ್ಮತವಿಲ್ಲವೆಂದೂ, ಮೈಸೂರಿನ ರಾಜರಿಗೆ ಒಟ್ಟು ಮೈಸೂರು ರಾಜ್ಯವನ್ನೇ ಮೊದಲು ಬಿಟ್ಟುಕೊಟ್ಟು ಅನಂತರ ಅವರಿಂದ ಬ್ರಿಟಿಷರೂ ಅವರ ಮಿತ್ರ ರಾಜ್ಯಗಳೂ ತಮಗೆ ಬೇಕಾದ ಜಿಲ್ಲೆಗಳನ್ನು ತೆಗೆದುಕೊಳ್ಳುವ ಅಗತ್ಯವಿಲ್ಲವೆಂದೂ ಹೇಳಿದ್ದಾನೆ. ''ಅಲ್ಲದೇ ಮೈಸೂರು ರಾಜ್ಯವನ್ನು ನಾವು ಯುದ್ಧದಲ್ಲಿ ಗೆದ್ದಿದ್ದೇವೆ. ಆದ್ದರಿಂದ ಆ ರಾಜ್ಯದ ಮೇಲೆ ಪೂರ್ಣವಾದ ಹಕ್ಕು ನಮಗೆ ಪ್ರಾಪ್ತವಾಗಿದೆ. ಮೈಸೂರು ರಾಜರ ಅಧಿಕಾರವು ಅವರಿಗೆ ನಾವು ರಾಜ್ಯವನ್ನು ಬಿಟ್ಟುಕೊಡುವುದರಿಂದ ಪ್ರಾಪ್ತವಾಗತಕ್ಕದ್ದೇ ಸರಿಯಾದುದು. ಅನುಕೂಲ್ಯದ ದೃಷ್ಟಿಯಿಂದಲೂ, ಭವಿಷ್ಯದಲ್ಲಿ ಯಾವ ರೀತಿ ತೊಂದರೆಗಳು ಉದ್ಭವಿಸದಿರುವುದಕ್ಕೂ ಈ ರೀತಿಯ ವ್ಯವಸ್ಥೆ ಮಾಡುವುದು ಸೂಕ್ತ'' ಎಂದು ಅವನು ಹೇಳಿದ್ದಾನೆ.

ರೈಟ್ ಆನರಬಲ್ ಹೆನ್ರಿ ಡಂಡಾಸ್ ಅವರಿಗೆ 7 ನೇ ಜೂನ್ 1799ರಲ್ಲಿ ವೆಲ್ಲೆಸ್ಲಿಯು ಒಂದು ಪತ್ರವನ್ನು ಬರೆದು ಅದರಲ್ಲಿ ಮೈಸೂರು ರಾಜ್ಯವನ್ನು ಹಿಂದಿರುಗಿಸುವುದಕ್ಕೆ ಕಾರಣಗಳನ್ನು ಕೊಟ್ಟಿದ್ದಾನೆ. "ಮೈಸೂರು ರಾಜ್ಯವನ್ನು ಯುದ್ಧದಲ್ಲಿ ಗೆದ್ದು ಅದರ ಮೇಲೆ ಪೂರ್ಣಾಧಿಕಾರವನ್ನು ಸಂಪಾದಿಸಿದ್ದಾಗಿದೆ. ಈ ಹಕ್ಕನ್ನು ಚಲಾಯಿಸಿ ರಾಜ್ಯ ವ್ಯವಸ್ಥೆಯನ್ನು ಮಾಡುವಾಗ ನೀತಿಧರ್ಮಗಳ ದೃಷ್ಟಿಯಿಂದಲೂ, ನ್ಯಾಯಮಾನವತೆಗಳ ದೃಷ್ಟಿಯಿಂದಲೂ, ಜನತೆಯ ಹಿತದೃಷ್ಟಿಯಿಂದಲೂ, ಮೈಸೂರಿನ ಪುರಾತನವಾದ ರಾಜಮನೆತನದ ಉತ್ತರಾಧಿಕಾರಿಯನ್ನು ಸಿಂಹಾಸನಕ್ಕೆ ಏರಿಸಿ, ಯಾವ ಸ್ಥಾನ, ಮರ್ಯಾದೆಗಳನ್ನು ಆತನ ಪೂರ್ವಜರಿಂದ ಹೈದರಾಲಿಯು ಕಿತ್ತುಕೊಂಡನೋ, ಆತನಿಗೆ ಅವು ಪ್ರಾಪ್ತವಾಗುವಂತೆ ಮಾಡತಕ್ಕದು ಸರಿ ಎಂದು ನನಗೆ ತೋರುತ್ತದೆ. ಮೈಸೂರು ರಾಜಮನೆತನದ ಉತ್ತರಾಧಿಕಾರಿಯನ್ನು ಮೈಸೂರು ಸಿಂಹಾಸನದ ಮೇಲೆ ಕೂರಿಸಿದರೆ ಆತನು ನಮ್ಮ ವಿಷಯದಲ್ಲಿ ನಿಷ್ಠನಾಗಿರುವನು. ಏಕೆಂದರೆ ಟಿಪ್ಪುವಿನ ಮನೆತನದ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ನಮ್ಮ ಬೆಂಬಲವೇ ಅವನಿಗೆ ಸಾಧನ." ಹೀಗೆಂದು ಆ ಪತ್ರದಲ್ಲಿ ವೆಲ್ಲೆಸ್ಲಿ ಹೇಳಿದ್ದಾನೆ.

22ನೇ ಜೂನ್ 1799ರಲ್ಲಿ ಮೈಸೂರು ಕೌಲಿಗೆ ಸಹಿ ಹಾಕಲಾಯಿತು. ನೈಜಾಮನು 13ನೆಯ ಜುಲೈ 1799ರಲ್ಲಿ ಆ ಕೌಲಿಗೆ ಒಪ್ಪಿಗೆ ನೀಡಿದನು. ಮೈಸೂರು ರಾಜ್ಯವನ್ನು, ಮೈಸೂರು ರಾಜಮನೆತನಕ್ಕೆ ಹಿಂದಿರುಗಿಸಿದ ಸಂದರ್ಭವೂ ಅದಕ್ಕೆ ಕಾರಣವಾದ ಸನ್ನಿವೇಶಗಳೂ, ರಾಜ್ಯದ ಭವಿಷ್ಯತ್ತಿನ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಅವಶ್ಯಕವಾಗಿವೆ. ಆದ್ದರಿಂದ ಈ ವಿಷಯವನ್ನು ಇಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. ಖಾಸಾ ಚಾಮರಾಜ ಒಡೆಯರವರ (1776—1796) ಮಗ, 5 ವರ್ಷದ ಬಾಲಕ, ಕೃಷ್ಣರಾಜ ಒಡೆಯರವರನ್ನು ಮೈಸೂರಿನ ಪುರಾತನವಾದ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಬ್ರಿಟಿಷರು ಆರಿಸಿದರು. ಚಾಮರಾಜ ಒಡೆಯರು 1796ರಲ್ಲಿ ಸಿಡುಬು ಎದ್ದು ತೀರಿಕೊಂಡರು. ಆಗ ಟಿಪ್ಪೂ ಅವರ ಅರಮನೆಯನ್ನು ಕೊಳ್ಳೆ ಹೊಡೆದು ಅಲ್ಲಿದ್ದ ಸಾಮಾನುಗಳನ್ನೆಲ್ಲಾ ಸಾಗಿಸಿದನು. ಅಲ್ಲಿದ್ದವರ ಮೈಮೇಲಿದ್ದ ಆಭರಣಗಳನ್ನು ಕೂಡ ಅವನ ಹಸ್ತಕರು ಬಿಡಲಿಲ್ಲ. ಆಗ ಕೃಷ್ಣರಾಜ ಒಡೆಯರಿಗೆ ಎರಡು ವರ್ಷ. ಆ ಮಗುವಿನ ಕೈಗಳಿಗೆ ಚಿನ್ನದ ಕಡಗಗಳನ್ನು ಹಾಕಿದ್ದರು. ಅವನ್ನೂ ಕಿತ್ತುಕೊಳ್ಳಲು ಟಿಪ್ಪೂವಿನ ಹಸ್ತಕರು ಪ್ರಯತ್ನಿಸಿದಾಗ ಮಗು ಬಹಳವಾಗಿ ಅತ್ತಿತು. ಈ ಸಂದರ್ಭವನ್ನು ವರ್ಣಿಸುತ್ತಾ ಮೈಸೂರಿನ

ಚರಿತ್ರಕಾರನಾದ ವಿಲ್ಕ್ಸ್ "ಈ ದುಷ್ಟ ರಾಜನ ಹಸ್ತಕರಲ್ಲಿಯೂ ಕರುಣೆ ಸಂಪೂರ್ಣವಾಗಿ ಬತ್ತಿರಲಿಲ್ಲ. ಮಗು ಅಳುವುದನ್ನು ನೋಡಿ ಇಂತಹ ದುಷ್ಟಕಾರ್ಯವನ್ನು ಮಾಡಲು ಅವರೂ ಹಿಂದೆಗೆದರು" ಎಂದಿದ್ದಾನೆ. 30ನೇ ಜೂನ್ 1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಿಂಹಾಸನವನ್ನು ವಿಧ್ಯುಕ್ತವಾಗಿ ಆರೋಹಣ ಮಾಡಿದರು.

ಹೈದರಾಲಿ, ಟಿಪ್ಪೂಸುಲ್ತಾನರಿಗೆ ಮಂತ್ರಿಯಾಗಿ, ನಿಷ್ಠರೂ, ದಕ್ಷರೂ ಎಂದು ಪ್ರಖ್ಯಾತರಾಗಿದ್ದ ಪೂರ್ಣಯ್ಯನವರನ್ನು ರಾಜ್ಯದ ದಿವಾನರನ್ನಾಗಿ ನಿಯಮಿಸಲಾಯಿತು. ರಾಜರು ಪ್ರೌಢ ವಯಸ್ಕರಾಗುವವರೆಗೆ ಪೂರ್ಣಯ್ಯನವರು ಸಂಸ್ಥಾನದ ಆಡಳಿತವನ್ನು ನಿರ್ವಹಿಸಿದರು. ಅವರು 1799 ರಿಂದ 1811ರವರೆಗೆ ದಿವಾನರಾಗಿದ್ದರು. ಸಮರ್ಥ ಆಡಳಿತಗಾರರಾದ ಪೂರ್ಣಯ್ಯನವರ ಆಡಳಿತದಲ್ಲಿ ಸಂಸ್ಥಾನವು ಬಹು ಬೇಗ ಪ್ರಗತಿಯನ್ನು ಸಾಧಿಸಿತು. ಅಲ್ಲಲ್ಲಿ ಎದ್ದ ದಂಗೆಗಳನ್ನು ಅಡಗಿಸಿ ರಾಜ್ಯದಲ್ಲೆಲ್ಲಾ ಶಾಂತಿ ಸಮಾಧಾನಗಳು ನೆಲೆಸುವಂತೆ ಅವರು ಮಾಡಿದರು. ಆರ್ಥಿಕ ಸ್ಥಿತಿಯನ್ನು ಅವರು ಉತ್ತಮಪಡಿಸಿದರು. ರಾಜ್ಯದ ಆದಾಯ ವ್ಯಯಗಳನ್ನು ತಹಬಂದಿಗೆ ತಂದು ಹಣಕಾಸಿನ ಸ್ಥಿತಿ ಉತ್ತಮವಾಗಿರುವಂತೆ ಮಾಡಿದರು. ಆಡಳಿತ ಯಂತ್ರದಲ್ಲಿ ಅವರು ಬಿಗಿ ಶಿಸ್ತುಗಳನ್ನು ಸ್ಥಾಪಿಸಿದರು. ಹೀಗೆ ನಾನಾ ವಿಧಗಳಲ್ಲಿ ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಏರ್ಪಡಿಸಿ ದೇಶದ ಅಭಿವೃದ್ಧಿಗೆ ಸುಭದ್ರವಾದ ಬುನಾದಿಯನ್ನು ಅವರು ಕಲ್ಪಿಸಿದರು. ಅವರ ದಕ್ಷತೆ, ಆಡಳಿತ ಸಾಮರ್ಥ್ಯವನ್ನು ಬ್ರಿಟಿಷರು ಮೆಚ್ಚಿಕೊಂಡರು.

ರಾಜರು ಪ್ರೌಢವಯಸ್ಕರಾಗಿ ರಾಜ್ಯಭಾರವನ್ನು ವಹಿಸಿಕೊಂಡರು. ಆಗ ಅವರಿಗೂ ಪೂರ್ಣಯ್ಯನವರಿಗೂ ಅಭಿಪ್ರಾಯ ಭೇದ ಉಂಟಾಯಿತು. ಅವರಿಬ್ಬರ ಮನಸ್ತಾಪದ ಬೆಂಕಿಗೆ ತುಪ್ಪವನ್ನೆರದು ಅದು ಹೆಚ್ಚುವಂತೆ ಮಾಡುವ ಸ್ವಕಾರ್ಯ ದುರಂಧರರಿಗೆ ಆಸ್ಥಾನದಲ್ಲಿ ಕೊರತೆ ಏನೂ ಇರಲಿಲ್ಲ. ಪೂರ್ಣಯ್ಯನವರು ಸ್ವಲ್ಪ ಕಾಲದಲ್ಲಿಯೇ ನಿವೃತ್ತರಾದರು. ಅದಾದ ಸ್ವಲ್ಪ ದಿನಗಳಲ್ಲಿಯೇ ನಿಧನರಾದರು. 1807ನೆಯ ಇಸವಿಯಲ್ಲಿಯೇ ಅವರ ಮಹತ್ತರವಾದ ಸೇವೆಯನ್ನು ಮನ್ನಿಸಿ ರಾಜರು ಬ್ರಿಟಿಷರ ಒಪ್ಪಿಗೆಯನ್ನು ಪಡೆದು ಯಳಂದೂರನ್ನು ಅವರಿಗೆ ಜಹಗೀರಿಯಾಗಿ ಕೊಟ್ಟಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಾಡಳಿತ ಸೂತ್ರಗಳನ್ನೇನೋ ವಹಿಸಿಕೊಂಡರು. ಆದರೆ ರಾಜರ ಆಪ್ತರು, ಸಲಹೆಗಾರರು ಸಂಸ್ಥಾನದ ಹಿತದೃಷ್ಟಿಯಿಂದ

ವರ್ತಿಸುವವರಾಗಿರಲಿಲ್ಲ. ಸ್ವಾರ್ಥಸಾಧಕರು, ಹೊಗಳುಭಟ್ಟರು ಯುವಕರಾದ ಪ್ರಭುಗಳನ್ನು ಎಡೆಬಿಡದೆ ಅನುಸರಿಸತೊಡಗಿದರು. ಆಸ್ಥಾನದಲ್ಲಿ ಇಂತಹವರ ಪ್ರಾಬಲ್ಯದಿಂದ ಆಡಳಿತದಲ್ಲಿ ಕ್ರಮೇಣ ಬಿಗಿ ತಪ್ಪಿತು. ದೊರೆಗಳು ಬಹಳ ಉದಾರಿಗಳು. ಅವರ ದಾನ ಧರ್ಮಗಳಿಗೆ ಮಿತಿ ಇಲ್ಲದಾಯಿತು.

ಹೀಗೆ ಆಡಳಿತ ಯಂತ್ರದಲ್ಲಿ ಶೈಥಿಲ್ಯ ತೋರಿದ ಕಾಲದಲ್ಲಿಯೇ ಕಂದಾಯದ ವಸೂಲಿಗಾಗಿ ಕಠಿಣವಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಇದರಿಂದ ಜನರಲ್ಲಿ ಅಸಮಾಧಾನ ಹರಡಿ ಹೊಗೆಯಾಡಲಾರಂಭಿಸಿತು. 1830ರಲ್ಲಿ ನಗರದಲ್ಲಿ ಬೂದಿ ಬಸವಪ್ಪನಾಯಕನು ದಂಗೆ ಎದ್ದನು. ಅವನು ತಾನು ನಗರದ ರಾಜಮನೆತನಕ್ಕೆ ಸೇರಿದವನೆಂದು ಸುಳ್ಳು ವದಂತಿಯನ್ನು ಹಬ್ಬಿಸಿ ಅರಾಜಕತೆಯ ಕಿಚ್ಚನ್ನು ಹಚ್ಚಿದನು. ಬೆಂಗಳೂರು, ಚಿತ್ರದುರ್ಗ ವಿಭಾಗಗಳಿಗೆ ದಂಗೆ ಹರಡಿತು. ಬ್ರಿಟಿಷರು ರಾಜ್ಯ ರಕ್ಷಣೆಗಾಗಿ ಇಟ್ಟಿದ್ದ ಸೈನ್ಯಗಳನ್ನು ಈ ದಂಗೆಯನ್ನು ಅಡಗಿಸಿ ನಗರವನ್ನು ವಶಪಡಿಸಿಕೊಳ್ಳಲು ಉಪಯೋಗಿಸಬೇಕಾಯಿತು. ಮಹಾರಾಜರು ಪರಿಸ್ಥಿತಿಯನ್ನು ಹತೋಟಿಗೆ ತರಲು ಅಸಮರ್ಥರಾದುದರಿಂದ ಬ್ರಿಟಿಷರು ಸಂಸ್ಥಾನವನ್ನು ವಹಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಭಾರತದ ಗವರ್ನರ್ ಜನರಲ್‌ರವರಾದ ಲಾರ್ಡ್ ವಿಲಿಯಂ ಬೆಂಟಿಂಕರವರು ಬಂದರು. ಅವರು ಮಹಾರಾಜರಿಗೆ ಬರೆದ ಪತ್ರದಲ್ಲಿ ಈ ರೀತಿ ಹೇಳಿದ್ದಾರೆ: "ಮೇಲೆ ಹೇಳಿದ ಕೌಲಿನ ಷರತ್ತುಗಳಂತೆಯೂ, ಬ್ರಿಟಿಷ್ ಸರ್ಕಾರ ಮೈಸೂರಿನ ಸಂರಕ್ಷಣೆಯ ಜವಾಬ್ದಾರಿ ವಹಿಸಿರುವುದರಿಂದಲೂ, ಸಂಸ್ಥಾನವನ್ನು ರಕ್ಷಿಸಲೂ, ವಿವಿಧ ಪಂಗಡಗಳ ಹಿತಾಸಕ್ತಿಗಳು ಇನ್ನೂ ಹೆಚ್ಚಿನ ಅನರ್ಥ ಪರಂಪರೆಗೆ ಈಡಾಗದಿರುವಂತೆ ನೋಡಿಕೊಳ್ಳಲೂ ಸಂಸ್ಥಾನದ ಆಡಳಿತದಲ್ಲಿ ಪ್ರವೇಶಮಾಡುವುದು ಅಗತ್ಯವೆಂದು ನಿರ್ಧರಿಸಿದ್ದೇನೆ. ಈ ಉದ್ದೇಶವನ್ನು ಯಶಸ್ವಿಯಾಗಿ ಸಾಧಿಸಲು ಸಂಸ್ಥಾನದ ಸಮಸ್ತ ಆಡಳಿತವನ್ನು ಬ್ರಿಟಿಷ್ ಅಧಿಕಾರಿಗಳಿಗೆ ವರ್ಗಾಯಿಸುವುದು ಆವಶ್ಯಕವೆಂದು ನನಗೆ ಕಂಡುಬರುತ್ತದೆ. ಅದಕ್ಕಾಗಿ ಇಬ್ಬರು ಆಡಳಿತಗಾರರನ್ನು ನಿಯಮಿಸಲು ನಾನು ನಿರ್ಧರಿಸಿದ್ದೇನೆ. ಅವರು ಕೂಡಲೇ ಮೈಸೂರಿಗೆ ಪ್ರಯಾಣ ಬೆಳಸುವರು."

"ಆದ್ದರಿಂದ ನಾನು ಘನವೆತ್ತ ತಮಗೆ ಈಗ ವಿಧಿಪೂರ್ವಕವೂ, ಆಖೈರಾದುದೂ ಆದ ಈ ಸೂಚನೆಯನ್ನು ಕೊಡುತ್ತಿದ್ದೇನೆ. ತಾವು ಈ ಪತ್ರವನ್ನು ಅಂತಹ

ಸೂಚನೆಯೆಂದು ಪರಿಗಣಿಸಬೇಕು. ಅಂದರೆ ಕೌಲಿನಂತೆ ಅದರಲ್ಲಿ ಕಾಣಿಸಿದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ವಹಿಸಿಕೊಳ್ಳುವ ಬಗೆಗೆ ತಮಗೆ ಕೊಡಬೇಕಾದ ಸೂಚನೆಯೇ ಇದೆಂದು ತಾವು ಗಣಿಸಬೇಕು. ಘನವೆತ್ತ ತಾವು ಇದಕ್ಕೆ ಅಗತ್ಯವಾದ ಆಜ್ಞೆಗಳನ್ನೂ, ಘೋಷಣೆಗಳನ್ನೂ ಮೈಸೂರಿನ ಅಧಿಕಾರಿಗಳನ್ನು ಉದ್ದೇಶಿಸಿ ಮಾಡತಕ್ಕದ್ದೆಂದು ಪ್ರಾರ್ಥಿಸಿಕೊಳ್ಳುತ್ತೇನೆ."

"ಮೈಸೂರು ಸಂಸ್ಥಾನವನ್ನು ವರ್ಗಾಯಿಸುವ, ಬ್ರಿಟಿಷ್ ಆಡಳಿತಗಾರರಿಗೆ ಎಲ್ಲಾ ಇಲಾಖೆಗಳ ಮೇಲೂ ಸಮಸ್ತ ಅಧಿಕಾರವನ್ನು ಕೊಡುವ, ಅವರಿಗಿತ್ತಿರುವ ಆಜ್ಞೆಯಂತೆ ಅವರು ಅಧಿಕಾರವಹಿಸಿ ದೇಶದ ಆಡಳಿತ ನಿರ್ವಹಿಸುವಂತೆ ಅನುಕೂಲ ಕಲ್ಪಿಸುವ ಅಥವಾ ಇನ್ನು ಮುಂದೆ ಅವರಿಗೆ ಕೊಡಬಹುದಾದ ಆಜ್ಞೆಯಂತೆ, ಅವರು ನಡೆಯುವಂತೆ ಅನುವಾಗುವ ಘೋಷಣೆಗಳನ್ನೂ, ಆಜ್ಞೆಗಳನ್ನೂ ತಾವು ಮಾಡತಕ್ಕದ್ದು. ಘನವೆತ್ತ ತಾವು, ತಮಗೆ ಈ ಪತ್ರವನ್ನು ತಲುಪಿಸಿದ ಹತ್ತು ದಿವಸಗಳಲ್ಲಿ ಈ ರೀತಿ ಆಜ್ಞೆಗಳನ್ನೂ, ಘೋಷಣೆಗಳನ್ನೂ ಮಾಡತಕ್ಕದ್ದೆಂದು ಪ್ರಾರ್ಥಿಸಿಕೊಳ್ಳುತ್ತೇನೆ."

19ನೇ ಅಕ್ಟೋಬರ್ 1831 ರಲ್ಲಿ ದಸರಾ ಉತ್ಸವವನ್ನು ಆಚರಿಸುತ್ತಿದ್ದಾಗ ಈ ಪತ್ರ ಮಹಾರಾಜರ ಕೈಸೇರಿತು. ಅವರು ಪತ್ರದಲ್ಲಿ ಸೂಚಿಸಿದ್ದಂತೆ ಮೈಸೂರಿನ ಆಡಳಿತವನ್ನು ಬ್ರಿಟಿಷರಿಗೆ ಒಪ್ಪಿಸಿಕೊಟ್ಟರು. ಮೈಸೂರಿನ ಆಡಳಿತವನ್ನು ನಿರ್ವಹಿಸಲು ಇಬ್ಬರು ಬ್ರಿಟಿಷ್ ಆಡಳಿತಗಾರರನ್ನು ನಿಯಮಿಸಲಾಯಿತು. ಇವರಲ್ಲಿ ಹಿರಿಯ ಆಡಳಿತಗಾರನನ್ನು ಭಾರತ ಸರ್ಕಾರವೂ, ಕಿರಿಯ ಆಡಳಿತಗಾರನನ್ನು ಮದ್ರಾಸ್ ಸರ್ಕಾರವೂ ನಿಯಮಿಸಿದವು. ಹಿರಿಯ ಆಡಳಿತಗಾರನಿಗೂ ಕಿರಿಯ ಆಡಳಿತಗಾರನಿಗೂ ಮತಭೇದ ಉಂಟಾದಾಗ ಹಿರಿಯ ಆಡಳಿತಗಾರನ ಮಾತು ನಡೆಯತಕ್ಕದ್ದೆಂದು ಗೊತ್ತುಪಡಿಸಲಾಗಿತ್ತು. ಈ ಆಡಳಿತಗಾರರಿಗೆ ಹಣಕಾಸಿನ ವಿಷಯದಲ್ಲಿ ಸಹಾಯ ಮಾಡಲು ದಿವಾನರ ಹುದ್ದೆಯನ್ನು ಕಲ್ಪಿಸಲಾಯಿತು. 1834ರಲ್ಲಿ ಈ ದಿವಾನ ಹುದ್ದೆಯನ್ನು ತೆಗೆದುಹಾಕಲಾಯಿತು. ಇಬ್ಬರು ಬ್ರಿಟಿಷ್ ಆಡಳಿತಗಾರರಿಗೂ ಪದೇ ಪದೇ ಆಡಳಿತ ವಿಷಯದಲ್ಲಿ ಮತಭೇಧ ಉಂಟಾಗುತ್ತಿದ್ದುದರಿಂದ ಆ ವ್ಯವಸ್ಥೆ ಅಸಮರ್ಪಕವೆಂಬ ತೀರ್ಮಾನಕ್ಕೆ ಭಾರತ ಸರ್ಕಾರದವರು ಬಂದರು. 1834ರಲ್ಲಿ ಕರ್ನಲ್ ಮಾರಿಸನ್‌ರವರನ್ನು ಏಕೈಕ ಆಡಳಿತಗಾರನನ್ನಾಗಿ

ನಿಯಮಿಸಲಾಯಿತು. ಮಹಾರಾಜರ ಆಸ್ಥಾನದಲ್ಲಿ ಗವರ್ನರ್ ಜನರಲ್ಲರನ್ನು ಪ್ರತಿನಿಧಿಸಲು ಬ್ರಿಟಿಷ್ ರೆಸಿಡೆಂಟ್ ಹುದ್ದೆಯನ್ನು ಹಿಂದಿನಂತೆಯೇ ಮುಂದು ವರಿಸಲಾಯಿತು.

ಬ್ರಿಟಿಷರು ಮೈಸೂರು ದೇಶದ ಆಡಳಿತವನ್ನು ವಹಿಸಿಕೊಂಡಿದ್ದು ಸರಿಯೇ, ಅಲ್ಲವೇ ಎಂಬ ವಿಷಯದಲ್ಲಿ ವಾದವಿವಾದಗಳು ಬಹುಕಾಲ ಜರುಗಿದವು. ಲಾರ್ಡ್ ವಿಲಿಯಂ ಬೆಂಟಿಂಕ್‌ಗೇ ತಾನು ಮಾಡಿದ ಕಾರ್ಯ ನ್ಯಾಯಬದ್ಧವೇ ಎನ್ನುವ ವಿಷಯದಲ್ಲಿ ಸಂಶಯವಿತ್ತೆಂಬುದು ಅವನು 14ನೇ ಏಪ್ರಿಲ್ 1834ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರರ ಗುಪ್ತ ಸಮಿತಿಗೆ ಬರೆದ ಪತ್ರದಿಂದ ಗೊತ್ತಾಗುತ್ತದೆ. "ನಾನು ಹೇಳಿದಂತೆ ವ್ಯವಸ್ಥೆಯನ್ನು ಮಾಡುವುದರಿಂದ ನಾವು ಕೈಗೊಂಡ ಕ್ರಮ ಕೌಲಿನ ಷರತ್ತುಗಳಂತೆ ಕ್ರಮಬದ್ಧವೇ, ನ್ಯಾಯವೇ ಎಂಬ ವಿಷಯದಲ್ಲಿ ನನಗೆ ತೋರಿಬರುವ ಸಂಶಯವನ್ನು ನಿವಾರಿಸಲು ಕಾರಣವಾಗುತ್ತದೆ. ಸೈನಿಕ ಸಹಾಯದ್ರವ್ಯ ಸರಿಯಾಗಿ ಸಲ್ಲುವಂತೆ ಏರ್ಪಡಿಸಲು ಸಂಸ್ಥಾನವನ್ನು ವಹಿಸಿಕೊಳ್ಳಬಹುದೆಂದು ಕೌಲಿನಲ್ಲಿ ಹೇಳಿದೆ. ರಾಜರ ದುರಾಡಳಿತದ ಕಾರಣ ದಿಂದ ವಾಸ್ತವವಾಗಿ ನಾವು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಿದ್ದೇವೆ. ಸಹಾಯದ್ರವ್ಯ ನಿಂತುಹೋಗುವುದೆಂಬ ಭಯಕ್ಕೆ ಆಗ ಕಾರಣವಿರಲಿಲ್ಲ. ನಮಗೆ ಸಲ್ಲಬೇಕಾದ ದ್ರವ್ಯವನ್ನು ಪಡೆಯಲು ಅಗತ್ಯವಾದ ಸಂಸ್ಥಾನದ ಭಾಗ ಅಥವಾ ಭಾಗಗಳನ್ನು ನಾವು ವಹಿಸಿಕೊಳ್ಳಬಹುದೆಂದು ಕೌಲು ಹೇಳುತ್ತದೆ. ಕೌಲಿನಲ್ಲಿ ಹೇಳಿರುವ ಉದ್ದೇಶ ಸಾಧನೆಗೆ ರಾಜ್ಯದ ಒಂದು ಭಾಗವನ್ನು ವಹಿಸಿಕೊಂಡಿದ್ದರೂ ಸಾಕಾಗುತ್ತಿತ್ತೆಂಬುದು ನಿಸ್ಸಂಶಯವಾಗಿದ್ದರೂ ನಾವು ಒಟ್ಟು ರಾಜ್ಯವನ್ನೇ ವಶ ಪಡಿಸಿಕೊಂಡಿದ್ದೇವೆ. ಇನ್ನು ನ್ಯಾಯದ ವಿಷಯ. ರಾಜರಿಗೆ ದುರಾಡಳಿತ ಮುಂದುವರಿದಿದ್ದೇ ಆದರೆ ನಾವು ಈ ಕ್ರಮವನ್ನು ಕೈಗೊಳ್ಳುತ್ತೇವೆಂದು ಮೊದಲೇ ನಿಸ್ಸಂದಿಗ್ಧವಾಗಿ ಎಚ್ಚರಿಕೆಯನ್ನು ಕೊಟ್ಟಿದ್ದರೆ ಅವರ ವಿಷಯದಲ್ಲಿ ನಾವು ನ್ಯಾಯ ಸಮ್ಮತವಾಗಿ ನಡೆದುಕೊಂಡಂತಾಗುತ್ತಿತ್ತೆಂಬುದು ನನ್ನ ಅಭಿಪ್ರಾಯ."

ನಗರದಲ್ಲಿ ನಡೆದ ಗಲಭೆಗಳ ವಿಷಯದಲ್ಲಿ ಮದ್ರಾಸ್ ಸರ್ಕಾರವು ತನಗೆ ಕಳುಹಿಸಿದ ವರದಿಯ ಮೇಲೆ ತಾನು ದುಡುಕಿ ವರ್ತಿಸಿದನೆಂದು ಲಾರ್ಡ್ ವಿಲಿಯಂ ಬೆಂಟಿಂಕ್ ಭಾವಿಸಿದನೆಂಬುದಕ್ಕೆ ಆಧಾರಗಳಿವೆ.

ಬ್ರಿಟಿಷರು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಿದ್ದರಿಂದ ಮೈಸೂರು ಸಂಸ್ಥಾನದ ಅಸ್ತಿತ್ವವು ಕೊನೆಗೊಂಡಿತೇ ಅಥವಾ ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ಸ್ಥಾಪಿಸುವುದಕ್ಕೆ ತಾತ್ಕಾಲಿಕವಾಗಿ ಅವರು ರಾಜ್ಯವನ್ನು ವಹಿಸಿಕೊಂಡರೇ ಎಂಬ ಪ್ರಶ್ನೆ ಉದ್ಭವಿಸಿತು. ಹದಿನಾಲ್ಕನೆಯ ಏಪ್ರಿಲ್ 1834ರಲ್ಲಿ ಲಾರ್ಡ್ ವಿಲಿಯಂ ಬೆಂಟಿಂಕ್ ಬರೆದ ಜ್ಞಾಪಕ ಪತ್ರದಲ್ಲಿ ಈ ಪ್ರಶ್ನೆಗೆ ನೇರವಾದ ಉತ್ತರ ದೊರೆಯುತ್ತದೆ. "ಕಂಪನಿ ಸರ್ಕಾರವು ಮೈಸೂರು ದೇಶದ ಆಡಳಿತವನ್ನು ತನಗೋಸ್ಕರ ವಹಿಸಿಕೊಂಡಿದೆಯೋ? ಅಥವಾ ಆ ದೇಶದ ಆಡಳಿತವನ್ನು ರಾಜರಿಗಾಗಿ ನಿರ್ವಹಿಸುತ್ತಿದೆಯೋ? ಮೈಸೂರಿನ ಕೌಲು ರದ್ದಾಯಿತೇ ಅಥವಾ ಅದು ಇನ್ನೂ ಜಾರಿಯಲ್ಲಿದೆಯೋ? ರಾಜ್ಯದ ಆಡಳಿತವನ್ನು ಕಂಪನಿಯು ವಹಿಸಿಕೊಂಡು ರಾಜರ ಪರವಾಗಿ ಅದನ್ನು ನಿರ್ವಹಿಸುತ್ತಿದೆ, ಮೈಸೂರು ಕೌಲು ಜಾರಿಯಲ್ಲಿದೆ ಎಂಬುದೇ ಇದಕ್ಕೆ ನಿಸ್ಸಂದಿಗ್ಧವಾದ ಉತ್ತರ."

ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರ ಮಂಡಲಿಯು 25ನೇ ಸೆಪ್ಟೆಂಬರ್ 1835ರಲ್ಲಿ ಕಳುಹಿಸಿದ ಪತ್ರದಲ್ಲಿ ಗೌರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ರವರು ಹೇಳಿದ ಅಭಿಪ್ರಾಯವನ್ನೇ ಅನುಮೋದಿಸಿದೆ. ಮೈಸೂರಿನಲ್ಲಿ ಬಗಿತಪ್ಪಿದ್ದ ಆಡಳಿತದಲ್ಲಿ ಸುವ್ಯವಸ್ಥೆಯನ್ನು ಕಲ್ಪಿಸಿ, ಒಳ್ಳೆಯ ಆಡಳಿತ ರೂಪಿಸುವವರೆಗೆ ಬ್ರಿಟಿಷ್ ರಾಜ್ಯಭಾರ ಮುಂದುವರಿಯಬೇಕೆಂಬುದೇ ಅದರ ಉದ್ದೇಶವಾಗಿದ್ದಿತೆಂಬುದನ್ನು ಅದರಲ್ಲಿ ಸ್ಪಷ್ಟವಾಗಿ ಹೇಳಿದೆ. ಲೆವಿನ್ ಬೌರಿಂಗ್ ಈ ವಿಷಯದಲ್ಲಿ ಹೀಗೆ ಬರೆದಿದ್ದಾರೆ– "ಮೈಸೂರಿಗೂ, ಬ್ರಿಟಿಷ್ ಆಡಳಿತದಲ್ಲಿದ್ದ ಪ್ರದೇಶಗಳಿಗೂ ಎಷ್ಟೋ ವೇಳೆ ನ್ಯಾಯವ್ಯವಸ್ಥೆಗೆ ಸಂಬಂಧಿಸಿದಂತೆ ತೊಂದರೆಗಳುಂಟಾದರೂ ರಾಜರ ಪರಮಾಧಿಕಾರವನ್ನು ಎಲ್ಲ ಸಂದರ್ಭಗಳಲ್ಲಿಯೂ ಅಂಗೀಕರಿಸಲಾಯಿತು. ರಾಜರೊಂದಿಗೆ ಮಾಡಿಕೊಂಡಿದ್ದ ಕೌಲುಗಳಿಗೆ ಬದ್ಧರಾಗಿ ನಡೆದುಕೊಳ್ಳಲಾಯಿತು."

ಬ್ರಿಟಿಷ್ ಆಡಳಿತಗಾರರು ರಾಜ್ಯದ ಆಡಳಿತವನ್ನು ವಹಿಸಿಕೊಂಡ ಕೂಡಲೇ ಶಾಂತಿ ಸ್ಥಾಪನೆ ಮಾಡುವ, ಆಡಳಿತ ವ್ಯವಸ್ಥೆಯನ್ನು ಬಿಗಿಪಡಿಸಿ ಅದರಲ್ಲಿ ದಕ್ಷತೆಯನ್ನು ಕಲ್ಪಿಸುವ ಕಾರ್ಯವನ್ನು ಕೈಗೊಂಡರು. ಕರ್ನಲ್ ಮಾರಿಸನ್‌ರವರ ಅನಂತರ ಕರ್ನಲ್ ಮಾರ್ಕ್ ಕಬ್ಬನ್ ಅವರ ಸ್ಥಾನಕ್ಕೆ ಬಂದರು. ಅವರು 26 ವರ್ಷ ಮೈಸೂರಿನ ಆಡಳಿತವನ್ನು ನಿರ್ವಹಿಸಿದರು. ಅವರ ಕಾಲದಲ್ಲಿ

ಆಡಳಿತ ಯಂತ್ರದಲ್ಲಿ ಬಿಗಿಯನ್ನು ತಂದು ಶಿಸ್ತು, ದಕ್ಷತೆಗಳನ್ನು ಸ್ಥಾಪಿಸಲಾಯಿತು. ರಾಜ್ಯದಲ್ಲಿ ವ್ಯಾಪಾರೋದ್ಯಮಗಳು ಮತ್ತೆ ತಲೆ ಎತ್ತುವಂತಾದವು. ರಾಜ್ಯದಲ್ಲಿ ಆರ್ಥಿಕಾಭ್ಯುದಯ ಉಂಟಾಗಿ ಜನಗಳ ಜೀವನದಲ್ಲಿ ನೆಮ್ಮದಿ ಸಂತೋಷಗಳು ನೆಲೆಗೊಂಡವು. ಇವರಾದ ಅನಂತರ ಎಲ್. ಬಿ. ಬೌರಿಂಗ್ ಆಡಳಿತಗಾರರ ಸ್ಥಾನಕ್ಕೆ ಬಂದರು. ಅವರು 1862ರಿಂದ 1870ರವರೆಗೆ ಆಡಳಿತಗಾರರಾಗಿದ್ದರು. 1866–67ರಲ್ಲಿ ಒಂದು ವರ್ಷ ಮಾತ್ರ ಅವರು ಆ ಕಾರ್ಯದಿಂದ ವಿರಾಮ ಹೊಂದಿದ್ದರು. ಅವರ ಅಧಿಕಾರಾವಧಿಯಲ್ಲಿ ಆಡಳಿತ ಯಂತ್ರದಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ಮಾಡಲಾಯಿತು.

ಕಬ್ಬನ್‌ರವರ ಆಡಳಿತದಲ್ಲಿ ರಾಜ್ಯದ ಎಲ್ಲೆಡೆಯೂ ಒಳ್ಳೆಯ ಮಾರ್ಗಗಳನ್ನು ನಿರ್ಮಿಸಿ ಸಂಚಾರ ಸೌಲಭ್ಯವನ್ನು ಕಲ್ಪಿಸಲಾಯಿತು. ಹಣಕಾಸಿನ ಆಡಳಿತವನ್ನು ಸುವ್ಯವಸ್ಥೆಗೊಳಿಸಿ ಭದ್ರವಾದ ಅರ್ಥವ್ಯವಸ್ಥೆಗೆ ಸರಿಯಾದ ಅಡಿಪಾಯವನ್ನು ಹಾಕಲಾಯಿತು. ರಾಜ್ಯದ ಜನಸಂಖ್ಯೆ ಹೆಚ್ಚಿತು, ಸಂಪತ್ತು ಬೆಳೆಯಿತು. ಬೌರಿಂಗರಾದರೋ ಆಡಳಿತವನ್ನು ಸುವ್ಯವಸ್ಥೆಗೊಳಿಸುವ ಕಾರ್ಯವನ್ನು ಕೈಗೊಂಡರು. ಕಾನೂನಿನ ವ್ಯವಸ್ಥೆ, ಪೋಲಿಸ್, ಕಾರಾಗೃಹಗಳು, ಜಮೀನನ್ನು ಅಳತೆಮಾಡಿ ಕಂದಾಯವನ್ನು ನಿರ್ಧರಿಸುವುದು, ವಿದ್ಯಾಭ್ಯಾಸ, ಸಾರ್ವಜನಿಕ ಕಾಮಗಾರಿ ಇಲಾಖೆ, ನೀರಾವರಿ ಇಲಾಖೆ, ಅರಣ್ಯ ಇಲಾಖೆ, ವೈದ್ಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ ಮುಂತಾದ ಆಡಳಿತದ ಬಾಬುಗಳಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

ಪಂಜಾಬ್, ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳ ಆಡಳಿತದಲ್ಲಿ ಕಂಡುಬಂದ ಉತ್ತಮಾಂಶಗಳನ್ನೆಲ್ಲಾ ಅಳವಡಿಸಿ ಮೈಸೂರಿನ ಆಡಳಿತ ವ್ಯವಸ್ಥೆಗೆ ಬೌರಿಂಗ್‌ರು ಹೊಸ ರೂಪವನ್ನು ಕೊಟ್ಟರು. ಪಂಜಾಬಿನ ಆಡಳಿತ ವ್ಯವಸ್ಥೆಯಂತೆ ಸರ್ಕಾರದ ಇಲಾಖೆಗಳನ್ನೂ, ಆಡಳಿತದ ವಿವಿಧ ಹಂತಗಳನ್ನೂ ರೂಪಿಸಲಾಯಿತು. ಬೊಂಬಾಯಿನ ಭೂವ್ಯವಸ್ಥೆಯನ್ನು ಅನುಸರಿಸಿ ರಾಜ್ಯದ ಭೂವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಲಾಯಿತು. ಇನಾಮತಿಗಳ ವಿಷಯದಲ್ಲಿ ಮದ್ರಾಸ್ ಪ್ರಾಂತ್ಯದ ಕಟ್ಟುಪಾಡುಗಳನ್ನು ಅನುಸರಿಸಲಾಯಿತು. ಹಣಕಾಸಿನ ಇಲಾಖೆಯಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ಮಾಡಲಾಯಿತು. ಅದರಲ್ಲಿ ಭಾರತ

ಸರ್ಕಾರ ಅನುಸರಿಸುತ್ತಿದ್ದ ಲೆಕ್ಕದ ಪದ್ಧತಿಯನ್ನೂ, ತನಿಖೆ ಏರ್ಪಾಡನ್ನೂ ಜಾರಿಗೆ ತರಲಾಯಿತು.

ರಾಜ್ಯಾಡಳಿತದ ವಿವಿಧ ಬಾಬುಗಳಿಗೆ ಖರ್ಚುಮಾಡಿದ ಮೇಲೆ ಉಳಿದ ಹಣವನ್ನು ಹಾಗೆಯೇ ಉಳಿಸದೆ ಸಾರ್ವಜನಿಕರ ಅನುಕೂಲಕ್ಕಾಗಿ ಕೆರೆ, ಕಟ್ಟೆ, ರಸ್ತೆ, ಕಟ್ಟಡಗಳು ಮುಂತಾದವುಗಳನ್ನು ಕಟ್ಟುವುದಕ್ಕಾಗಿ ಉಪಯೋಗಿಸಲಾಯಿತು. 1862ರಲ್ಲಿ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳನ್ನು ಮೈಸೂರಿನಲ್ಲಿ ಜಾರಿಗೆ ತರಲಾಯಿತು. ಇದುವರೆಗೆ ಅಲ್ಲಿಯ ಶಾಸನಗಳು ಮೈಸೂರಿನಲ್ಲಿ ಜಾರಿಯಲ್ಲಿರಲಿಲ್ಲ. 1863ರಲ್ಲಿ ಜಮೀನುಗಳ ಅಳತೆಯನ್ನು ರಾಜ್ಯಾದ್ಯಂತ ಕೈಗೊಳ್ಳಲಾಯಿತು. ಭೂಕಂದಾಯದ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಲಾಯಿತು. ಜಮೀನುಗಳ ಮಾಲೀಕತ್ವದ ವಿಷಯ ದಾಖಲೆಗಳನ್ನು ಪರೀಕ್ಷಿಸಿ ಸರಿಯಾದ ಮಾಹಿತಿ ಏರ್ಪಡುವಂತೆ ಮಾಡಲಾಯಿತು. ಧಾರ್ಮಿಕ ಸಂಸ್ಥೆಗಳಿಗೂ, ವ್ಯಕ್ತಿಗಳಿಗೂ ಇನಾಮತಿ ಜಮೀನುಗಳ ಮೇಲೆ ಇದ್ದ ಹಕ್ಕನ್ನು ತನಿಖೆ ಮಾಡಲು ಒಂದು ಇನಾಮತಿಯ ಆಯೋಗವನ್ನು ನಿಯಮಿಸಲಾಯಿತು. ರಾಜ್ಯದಲ್ಲಿದ್ದ ನೀರಾವರಿ ಕಾಲುವೆಗಳನ್ನೂ, ಕಾಡುಗಳನ್ನೂ ಸಂರಕ್ಷಿಸುವ ಏರ್ಪಾಡುಗಳನ್ನು ಮಾಡಲಾಯಿತು. ರಾಜ್ಯದಲ್ಲೆಲ್ಲಾ ಹೊಸ ಮಾರ್ಗಗಳನ್ನು ನಿರ್ಮಿಸುವ ಕಾರ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲಾಯಿತು. ಸೇತುವೆಗಳನ್ನು ಕಟ್ಟಲಾಯಿತು. ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಲಾಯಿತು. ನಗರ ಸಭೆಗಳನ್ನು ಅಸ್ತಿತ್ವಕ್ಕೆ ತರಲಾಯಿತು. ಎಲ್ಲೆಲ್ಲೂ ವಿದ್ಯಾಭ್ಯಾಸವನ್ನು ಹರಡಲು ವ್ಯವಸ್ಥೆಯನ್ನು ಮಾಡಲಾಯಿತು. ಕಾರಾಗೃಹ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸುಧಾರಣೆ ಮಾಡಲಾಯಿತು.

ಹೀಗೆ ನಾನಾ ಆಡಳಿತ ಕ್ಷೇತ್ರಗಳಲ್ಲಿ ಅನೇಕ ಸುಧಾರಣೆಗಳನ್ನು ಬೌರಿಂಗರು ಮಾಡಿದರು. ಇದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅವಕಾಶವಾಯಿತು. 1870ರಲ್ಲಿ ಬೌರಿಂಗರು ನಿವೃತ್ತರಾದ ಮೇಲೆ ಕರ್ನಲ್ ರಿಚರ್ಡ್ ಮೀಡ್‌ರವರನ್ನು ಆಡಳಿತಗಾರರನ್ನಾಗಿ ನಿಯಮಿಸಲಾಯಿತು. ಇವರು ದಕ್ಷರೂ, ಅನುಭವಸ್ಥರೂ ಆದ ಆಡಳಿತಗಾರರೆಂಬ ಕೀರ್ತಿಯನ್ನು ಗಳಿಸಿದ್ದರು. ಅವರ ಆಡಳಿತದಲ್ಲಿ ರಾಜ್ಯದ ಮೂಲೆ, ಮೂಲೆಗಳಲ್ಲಿಯೂ ಮಾರ್ಗಗಳನ್ನು ನಿರ್ಮಿಸಲಾ

ಯಿತು. ಹಿಂದೆ ಕಷ್ಟಕರವಾದ ಸ್ಥಳಗಳಿಂದು ಕೈಬಿಟ್ಟಿದ್ದ ಕಡೆಗಳಲ್ಲಿಯೂ ಮಾರ್ಗ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು. ರೈಲು ಮಾರ್ಗಗಳನ್ನು ಹಾಕಲು ಯೋಜನೆ ಕೆಲಸವನ್ನು ಕೈಗೊಳ್ಳಲಾಯಿತು. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಶೀಘ್ರವಾದ ಪ್ರಗತಿಯಾಯಿತು.

ಇವರಾದ ಅನಂತರ ಸಿ. ಬಿ. ಸಾಂಡರ್ಸ್‌ರವರು ಆಡಳಿತಗಾರರಾಗಿ ಬಂದರು. ಇವರು ಕೆಲವು ಕಾಲ ಹೈದರಾಬಾದಿನಲ್ಲಿ ಬ್ರಿಟಿಷ್ ರಾಜಪ್ರತಿನಿಧಿಯಾಗಿದ್ದರು. ಇವರು ಕೇವಲ ಎರಡು ವರ್ಷಗಳ ಕಾಲ ಮಾತ್ರ ಆಡಳಿತಗಾರರಾಗಿದ್ದರು. ಇವರ ಕಾಲದಲ್ಲಿಯೇ ಧಾತು ಈಶ್ವರ ಕ್ಷಾಮಕ್ಕೆ ರಾಜ್ಯವು ಈಡಾದುದು. ಈ ಕ್ಷಾಮಕ್ಕೆ ಹೆಚ್ಚುಕಡಿಮೆ 10 ಲಕ್ಷ ಜನ ಬಲಿಯಾದರು. ದೇಶದ ಅರ್ಥವ್ಯವಸ್ಥೆ ಹದಗೆಟ್ಟಿತು. ಮಹಾರಾಜ ಚಾಮರಾಜೇಂದ್ರ ಒಡೆಯರ ಪೋಷಕರಾಗಿ ನಿಯಮಿಸಲ್ಪಟ್ಟಿದ್ದ ಗೋರ್ಡನ್‌ರವರನ್ನು ರಾಜ್ಯದ ಆಡಳಿತಗಾರರನ್ನಾಗಿಯೂ 1878ರಲ್ಲಿ ನಿಯಮಿಸಲಾಯಿತು. ಮಹಾರಾಜರು ರಾಜ್ಯಾಡಳಿತ ಸೂತ್ರವನ್ನು ವಹಿಸಿಕೊಳ್ಳುವ ಕಾಲ ಸಮೀಪಿಸುತ್ತಿದ್ದಿತು. ರಾಜ್ಯಾಡಳಿತವನ್ನು ಅವರಿಗೆ ವಹಿಸುವುದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಗೋರ್ಡನ್‌ರವರ ಮೇಲೆ ಬಿದ್ದಿತು.

ಈಗ ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸುವುದಕ್ಕೆ ಸಂಬಂಧಿಸಿದಂತೆ ನಡೆದ ಘಟನೆಗಳ ಪರಿಚಯವನ್ನು ಮಾಡಿಕೊಳ್ಳೋಣ. ಬ್ರಿಟಿಷ್ ರಾಜಪ್ರತಿನಿಧಿಯ ಹುದ್ದೆಯನ್ನು ಮೈಸೂರು ರಾಜ್ಯವನ್ನು ಬ್ರಿಟಿಷರು ವಹಿಸಿಕೊಂಡ ಮೇಲೂ ಮುಂದುವರಿಸಿಕೊಂಡು ಬಂದಿತೆಂಬ ವಿಷಯವನ್ನು ಹಿಂದೆ ಪ್ರಸ್ತಾಪಿಸಲಾಗಿದೆಯಷ್ಟೆ. ಈ ಹುದ್ದೆಯನ್ನು 1843ರಲ್ಲಿ ರದ್ದುಮಾಡಲಾಯಿತು. 1834ರಲ್ಲಿ ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಮೈಸೂರು, ಅಷ್ಟಗ್ರಾಮ ಮತ್ತು ಮಂಜರಾಬಾದ್ ಜಿಲ್ಲೆಗಳನ್ನು ಮಹಾರಾಜರಿಗೆ ಹಿಂದಿರುಗಿಸಿ ಸಂಸ್ಥಾನದ ಉಳಿದ ಭಾಗವನ್ನು ಬ್ರಿಟಿಷರು ತಮ್ಮ ವಶಕ್ಕೆ ಸಂಪೂರ್ಣವಾಗಿ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದರು. 1831ರಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಾಗ ತಾವೆಸಗಿದ ಅನ್ಯಾಯವನ್ನು ಸ್ವಲ್ಪಮಟ್ಟಿಗಾದರೂ ಸರಿಪಡಿಸುವ ಉದ್ದೇಶದಿಂದ ಅವರು ಈ ಸಲಹೆಯನ್ನು ಮಾಡಿದರೆಂದು ಊಹಿಸು

ವುದಕ್ಕೆ ಕಾರಣವಿದೆ. ವಾಸ್ತವವಾಗಿ ಅವರು ಇಂಗ್ಲೆಂಡಿಗೆ ಹಿಂದಿರುಗಿದ ಮೇಲೆ,
ಮೈಸೂರಿನ ಆಡಳಿತವನ್ನು ವಹಿಸಿಕೊಂಡಿದ್ದು ತಮ್ಮ ಅಂತಃಸಾಕ್ಷಿಯನ್ನು ಕ್ಷೋಭೆ
ಗೊಳಿಸುವಂತಹ ಕಾರ್ಯವಾಗಿತ್ತೆಂದೂ, ತಮ್ಮ ಅಧಿಕಾರ ಜೀವನದಲ್ಲಿ ಇಂತಹ
ಪ್ರಸಂಗ ಇದೊಂದೇ ಎಂದೂ ಹೇಳಿದ್ದಾರೆ. ಆದರೆ ಬೆಂಟಿಂಕ್‌ರವರು ರಾಜ್ಯದ ಕೆಲವು
ಜಿಲ್ಲೆಗಳನ್ನು ಮಹಾರಾಜರಿಗೆ ಹಿಂದಿರುಗಿಸಬೇಕೆಂದು ಮಾಡಿದ್ದ ಸಲಹೆಯನ್ನು
ಕಂಪನಿಯ ಆಡಳಿತಗಾರರ ಮಂಡಲಿ ಒಪ್ಪಲಿಲ್ಲ. ಮೈಸೂರು ಸಂಸ್ಥಾನವನ್ನು
ಒಡೆಯುವ ಯಾವ ಪ್ರಯತ್ನವೂ ಅದಕ್ಕೆ ಒಪ್ಪಿಗೆಯಾಗಿರಲಿಲ್ಲ.

ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸುವ ವಿಷಯ
ದಲ್ಲಿ ಬ್ರಿಟಿಷರ ನೀತಿ ಕಾಲ ಕಳೆದಂತೆ ಬದಲಾವಣೆಯಾಗತೊಡಗಿತು.
ಗೌರ್ನರ್ ಜನರಲ್ ಲಾರ್ಡ್ ಡಾಲ್‌ಹೌಸಿಯವರು ಬ್ರಿಟಿಷರು ಮೈಸೂರು
ಸಂಸ್ಥಾನವನ್ನು ಸಂಪೂರ್ಣವಾಗಿ ತಾವೇ ವಹಿಸಿಕೊಳ್ಳಬೇಕೆಂದು ಪ್ರತಿಪಾದಿಸಿ
ದರು. ಈ ವಿಷಯದಲ್ಲಿ ಅವರು ಹೀಗೆ ಬರೆದಿದ್ದಾರೆ—"ಮಹಾರಾಜರಿಗೆ 60 ವರ್ಷ
ವಯಸ್ಸಾಗಿದೆ. ಅವರಿಗೆ ಪುತ್ರ ಸಂತಾನವಿಲ್ಲ. ಪುತ್ರನನ್ನು ದತ್ತು ತೆಗೆದುಕೊಳ್ಳ
ಬೇಕೆಂದು ತಮಗೆ ಉದ್ದೇಶವಿದೆಯೆಂದು ಅವರು ಯಾವಾಗಲೂ ಹೇಳಿಲ್ಲ. ಆದ್ದರಿಂದ
ಯಾರು ಮೈಸೂರು ರಾಜ್ಯವನ್ನು ಅವರಿಗೆ ದಾನ ಮಾಡಿದರೋ ಆ ದಾತರಿಗೆ
ಅದು ಸೇರತಕ್ಕದ್ದಾಗಿದೆ." ಲಾರ್ಡ್ ಡಾಲ್‌ಹೌಸಿಯವರು ಯಾವ ಕೌಲುಗಳ
ಪ್ರಕಾರ ರಾಜ್ಯವನ್ನು ಮಹಾರಾಜರಿಗೆ ಕೊಡಲಾಯಿತೋ ಅವು ಮಹಾರಾಜರ
ಉತ್ತರಾಧಿಕಾರಿಗಳ ವಿಷಯದಲ್ಲಿ ಏನನ್ನೂ ಹೇಳಿಲ್ಲ. ಈ ಕೌಲು ಕೇವಲ ಮಹಾ
ರಾಜರಿಗೆ ಮಾತ್ರ ಸಂಬಂಧಿಸಿದ್ದು. ಆದ್ದರಿಂದ ರಾಜ್ಯವನ್ನು ಹಿಂದಿರುಗಿಸುವ
ಪ್ರಶ್ನೆ ಏಳುವುದಿಲ್ಲ ಎಂದಿದ್ದಾರೆ.

ಲಾರ್ಡ್ ಕ್ಯಾನಿಂಗ್‌ರವರು ದೇಶೀಯ ಸಂಸ್ಥಾನಗಳ ಅಸ್ತಿತ್ವಕ್ಕೆ ಭಂಗ
ತರಕೂಡದೆಂಬ ತತ್ವವನ್ನು ಪ್ರತಿಪಾದಿಸಿದರು. ಆದರೆ ಅವರು ಕೂಡ ಮೈಸೂರು
ಸಂಸ್ಥಾನವನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವ
ರಾಗಿದ್ದರು. ಜಹಗೀರುದಾರರಿಗಿಂತ ಮೇಲಿನ ಸ್ಥಾನಮಾನಗಳುಳ್ಳ ರಾಜ ಮಹಾ
ರಾಜರುಗಳಿಗೆ ದತ್ತು ಸ್ವೀಕಾರಮಾಡುವ ಅಧಿಕಾರವಿದೆಯೆಂದು ಅವರು ಘೋಷಿ
ಸಿದರು. ಆದರೆ ಈ ಘೋಷಣೆ ಮೈಸೂರು ಮಹಾರಾಜರಿಗೆ ಅನ್ವಯಿಸುವುದಿಲ್ಲ

ವೆಂದು ಅವರು ಹೇಳಿದರು. ಈ ಘೋಷಣೆಯನ್ನು ಮಾಡಿದ ಕಾಲದಲ್ಲಿ ಮಹಾರಾಜರು ರಾಜ್ಯವನ್ನು ತಾವೇ ಆಳುತ್ತಿರಲಿಲ್ಲವಾದ್ದರಿಂದ ಅದನ್ನು ಅವರಿಗೆ ಅನ್ವಯಿಸಲಾಗುವುದಿಲ್ಲವೆಂಬ ಕಾರಣವನ್ನು ಕೊಡಲಾಯಿತು. 1857ರ ವಿಪ್ಲವದ ಕಾಲದಲ್ಲಿ ಮಹಾರಾಜರು ಬ್ರಿಟಿಷರಿಗೆ ನಿಷ್ಠರಾಗಿ ನಡೆದುಕೊಂಡರು. ಇದರಿಂದ ಗೌರ್ನರ್ ಜನರಲ್‌ರವರು ಅವರ ವಿಷಯದಲ್ಲಿ ಮೆಚ್ಚಿಗೆ ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನದ ಮೇಲಿನ ಉಸ್ತುವಾರಿಯನ್ನು ಮದ್ರಾಸ್ ಸರ್ಕಾರಕ್ಕೆ ವರ್ಗಾಯಿಸಬೇಕೆಂಬ ಪ್ರಯತ್ನ ನಡೆದಾಗ ಮಹಾರಾಜರು ಅದನ್ನು ಪ್ರತಿಭಟಿಸಿದ್ದರು. ಆಗ ಲಾರ್ಡ್ ಕ್ಯಾನಿಂಗ್‌ರವರು ಮಹಾರಾಜರ ಪರವಾಗಿ ನಿಂತು ಆ ಆಜ್ಞೆಯನ್ನು ಹಿಂದೆ ತೆಗೆದುಕೊಳ್ಳುವ ಹಾಗೆ ಮಾಡಿದ್ದರು.

1857ರಲ್ಲಿ ವಿಪ್ಲವವಾದ ಮೇಲೆ ಬ್ರಿಟಿಷ್ ಮಹಾರಾಣಿಯವರು ಒಂದನೆಯ ನವೆಂಬರ್ 1858ರಿಂದ ಭಾರತ ದೇಶದ ಆಡಳಿತ ಸೂತ್ರಗಳನ್ನು ವಹಿಸಿಕೊಂಡರು. ಆ ಸಂದರ್ಭದಲ್ಲಿ ಅವರು ಮಾಡಿದ ಘೋಷಣೆಯಲ್ಲಿ ದೇಶೀಯ ರಾಜರುಗಳಿಗೆ ಅವರ ರಾಜ್ಯದ ಮೇಲಿದ್ದ ಹಕ್ಕುಗಳನ್ನು ಕಾಪಾಡಲಾಗುವುದೆಂದೂ, ಅವರ ಉತ್ತರಾಧಿಕಾರಿಗಳು ಅವರ ಅನಂತರ ಸಿಂಹಾಸನವನ್ನೇರುವ ಹಕ್ಕಿಗೆ ಚ್ಯುತಿ ಬರದಂತೆ ನಡೆದುಕೊಳ್ಳಲಾಗುವುದೆಂದೂ ಭರವಸೆಯನ್ನು ಕೊಡಲಾಗಿದ್ದಿತು. 23ನೆಯ ಫೆಬ್ರುವರಿ 1861ರಲ್ಲಿ ಮಹಾರಾಜರು ಲಾರ್ಡ್ ಕ್ಯಾನಿಂಗ್‌ರವರಿಗೆ ಮೈಸೂರು ಸಂಸ್ಥಾನವನ್ನು ತಮಗೆ ಹಿಂದಿರುಗಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿ ಒಂದು ಪತ್ರವನ್ನು ಬರೆದರು. ಲಾರ್ಡ್ ಕ್ಯಾನಿಂಗ್‌ರವರಿಗೆ ಮೈಸೂರಿನ ವಿಷಯದಲ್ಲಿ ಇದ್ದ ನಿಜವಾದ ಅಭಿಪ್ರಾಯದ ಅರಿವು ಮಹಾರಾಜರಿಗೆ ಇರಲಿಲ್ಲ. ಈ ಪತ್ರಕ್ಕೆ 11ನೇ ಮಾರ್ಚಿ 1862ರಲ್ಲಿ ಲಾರ್ಡ್ ಕ್ಯಾನಿಂಗ್‌ರವರು ಉತ್ತರವನ್ನು ಕಳುಹಿಸಿದರು. ಅವರು ಗೌರ್ನರ್ ಜನರಲ್ ಕೆಲಸದಿಂದ ನಿವೃತ್ತರಾಗಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸುವ ಒಂದು ದಿನದ ಮುಂಚೆ ಈ ಉತ್ತರವನ್ನು ಕಳುಹಿಸಿದ್ದರು. ಲಾರ್ಡ್ ಕ್ಯಾನಿಂಗ್‌ರವರು ಮಹಾರಾಜರ ಬೇಡಿಕೆಯನ್ನು ತಿರಸ್ಕರಿಸಿದರು. ಮೈಸೂರು ಕೌಲು ಬ್ರಿಟಿಷ್ ಸರ್ಕಾರದವರು ಮಹಾರಾಜರೊಂದಿಗೆ ವೈಯಕ್ತಿಕವಾಗಿ ಮಾಡಿಕೊಂಡಿದ್ದುದೆಂದೂ, ಬ್ರಿಟಿಷರು ತಾವು ಕೊಟ್ಟಿದ್ದನ್ನು ಹಿಂದೆ ತೆಗೆದುಕೊಳ್ಳುವುದಕ್ಕೆ ಅಧಿಕಾರವುಳ್ಳವರಾಗಿರುವರೆಂದೂ ಅವರು ಈ ಪತ್ರದಲ್ಲಿ ಹೇಳಿದರು. "ಬ್ರಿಟಿಷ್ ಸರ್ಕಾರ ನಿಮಗೆ ಮೊದಲು ಕೊಟ್ಟ ಹಕ್ಕನ್ನು ಮನ್ನಣೆ

ಮಾಡಿ ನಡೆದುಕೊಂಡಿದೆ. ಆದರೆ ಮೈಸೂರಿನ ಜನತೆಯ ಬಗೆಗೆ ಇದಕ್ಕಿರುವ ಹೊಣೆಗಾರಿಕೆಯನ್ನೂ, ಅವರ ಕ್ಷೇಮಾಭ್ಯುದಯಗಳ ಬಗೆಗೆ ಇದಕ್ಕಿರುವ ಜವಾಬ್ದಾರಿಯನ್ನೂ ಅರಿತು ಇದು ನಡೆದುಕೊಳ್ಳಬೇಕಾಗಿದೆ. ಈ ಹೊಣೆಗಾರಿಕೆಗೆ ತಪ್ಪಿ ಇದು ನಡೆಯಲಾಗದು" ಎಂದು ಅವರು ಆ ಪತ್ರದಲ್ಲಿ ಹೇಳಿದ್ದಾರೆ.

ಲಾರ್ಡ್ ಕ್ಯಾನಿಂಗ್‌ರವರಾದ ಮೇಲೆ ಭಾರತದ ಗೌರ್ನರ್ ಜನರಲ್ ಆಗಿ ಬಂದ ಲಾರ್ಡ್ ಎಲ್ಗಿನ್‌ರವರಿಗೆ ಮಹಾರಾಜರು ಮತ್ತೊಂದು ಪತ್ರವನ್ನು ಬರೆದರು. ಸಾರ್ವಭೌಮ ಸರ್ಕಾರದ ಅವಗಾಹನೆಗೆ ಅದನ್ನು ತರಲಾಯಿತು. 17ನೇ ಜುಲೈ 1864ರಲ್ಲಿ ಆ ಸರ್ಕಾರ ಮೈಸೂರನ್ನು ರಾಜಮನೆತನಕ್ಕೆ ಹಿಂದಿರುಗಿಸತಕ್ಕದ್ದಲ್ಲ ಎಂದು ತೀರ್ಮಾನ ಮಾಡಿತು. ಈ ತೀರ್ಮಾನದಿಂದ ಎದೆಗುಂದದೆ ಮಹಾರಾಜರು 25ನೇ ಜನವರಿ 1865ರಲ್ಲಿ ಲಾರ್ಡ್ ಎಲ್ಗಿನ್‌ರವರ ಸ್ಥಾನದಲ್ಲಿ ಭಾರತದ ಗೌರ್ನರ್ ಜನರಲ್ ಆಗಿ ನಿಯಮಿತರಾದ ಸರ್ (ಮುಂದೆ ಲಾರ್ಡ್) ಜಾನ್ ಲಾರೆನ್ಸ್‌ರವರಿಗೆ ಮನವಿಯನ್ನು ಮಾಡಿದರು. ಮತ್ತೆ ಒಂದನೆಯ ಫೆಬ್ರವರಿ 1865ರಲ್ಲಿ ಇನ್ನೊಂದು ಮನವಿಯನ್ನು ಮಾಡಿ ಅದರಲ್ಲಿ ಮೈಸೂರಿನ ಸಿಂಹಾಸನದ ಮೇಲೆ ತಮಗಿರುವ ಹಕ್ಕಿನ ಪ್ರಶ್ನೆಯನ್ನು ಬ್ರಿಟಿಷ್ ಮಹಾರಾಣಿಯ ಅವಗಾಹನೆಗೆ ನೇರವಾಗಿ ತರುವುದಾಗಿ ತಿಳಿಸಿದರು. ಈ ಮನವಿಯ ಪತ್ರಗಳನ್ನು ಲಾರ್ಡ್ ಜಾನ್ ಲಾರೆನ್ಸ್‌ರವರು ಸಾರ್ವಭೌಮ ಸರ್ಕಾರದ ಭಾರತ ಕಾರ್ಯದರ್ಶಿಗಳಿಗೆ ಕಳುಹಿಸಿದರು. ಈ ಸಂದರ್ಭದಲ್ಲಿ ಮಹಾರಾಜರಿಗೆ ಬರೆದ ಪತ್ರದಲ್ಲಿ ತಾವು ಅವರ ಬೇಡಿಕೆಗೆ ಬೆಂಬಲ ಕೊಡಲಾಗುವುದಿಲ್ಲವೆಂದು ಅವರು ತಿಳಿಸಿದರು.

ಈ ವೇಳೆಗೆ ಮಹಾರಾಜರು 70ರ ಗಡಿಯನ್ನು ದಾಟಿದ್ದರು. ಧರ್ಮಶಾಸ್ತ್ರಗಳಲ್ಲಿ ವಿಧಿಸಿದಂತೆ ದತ್ತು ಸ್ವೀಕಾರ ಮಾಡಲು ಅವರು ನಿರ್ಧರಿಸಿದರು. ಈ ದತ್ತಕಪುತ್ರ ತಮ್ಮ ಸ್ವಂತ ಆಸ್ತಿಪಾಸ್ತಿಗಳಿಗೆ ಹೇಗೆ ಹಕ್ಕುದಾರನಾಗುವನೋ ಹಾಗೆಯೇ ಮೈಸೂರು ಸಂಸ್ಥಾನಕ್ಕೂ ಉತ್ತರಾಧಿಕಾರಿಯಾಗತಕ್ಕದ್ದೆಂದು ಮಹಾರಾಜರ ಇಚ್ಛೆಯಾಗಿದ್ದಿತು. ತಮ್ಮ ಅಭಿಪ್ರಾಯವನ್ನು ಫೆಬ್ರವರಿ 1864ರಲ್ಲಿ ಗೌರ್ನರ್ ಜನರಲ್‌ರವರಿಗೆ ಅವರು ತಿಳಿಸಿದರು. ತಮ್ಮ ಸ್ವಂತ ಆಸ್ತಿಗೆ ಹಕ್ಕುದಾರನಾಗುವಲ್ಲಿ ದತ್ತು ಪುತ್ರನನ್ನು ಸ್ವೀಕಾರ ಮಾಡಲು ಮಹಾರಾಜರಿಗೆ ಹಕ್ಕುಂಟೆಂದೂ ಆದರೆ ಮೈಸೂರು ಸಂಸ್ಥಾನದ ಉತ್ತರಾಧಿಕಾರತ್ವ ಅವನಿಗೆ

ಪ್ರಾಪ್ತವಾಗುವುದಿಲ್ಲವೆಂದೂ ಗೌರ್ನರ್‌ಲ್ ಜನರಲ್‌ರವರು ಮಹಾರಾಜರಿಗೆ ತಿಳಿಸಿದರು. ಸಾರ್ವಭೌಮ ಸರ್ಕಾರವು ಗೌರ್ನರ್ ಜನರಲ್‌ರವರ ಈ ತೀರ್ಮಾನವನ್ನು ಎತ್ತಿ ಹಿಡಿಯಿತು. ಮಹಾರಾಜರು 18ನೇ ಜೂನ್ 1865ರಲ್ಲಿ $2\frac{1}{2}$ ವರ್ಷ ವಯಸ್ಸಿನ ಬಾಲಕ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದರು. ಈ ಬಾಲಕ ಚಿಕ್ಕ ಕೃಷ್ಣ ಅರಸು ಎಂಬುವರ ಮೂರನೆಯ ಮಗ. ಚಿಕ್ಕ ಕೃಷ್ಣ ಅರಸುರವರು ಮಹಾರಾಣಿ ಲಕ್ಷಮ್ಮಣ್ಣಿಯವರ ತಂದೆಯವರಾದ ಕಟ್ಟಿ ಗೋಪಾಲರಾಜ ಅರಸರವರ ವಂಶಕ್ಕೆ ದತ್ತು ಸ್ವೀಕಾರದಿಂದ ಸೇರಿದವರು.

ಸಾರ್ವಭೌಮ ಸರ್ಕಾರದಲ್ಲಿ ಭಾರತ ಕಾರ್ಯದರ್ಶಿಗಳಾಗಿದ್ದ ಸರ್ ಚಾರ್ಲ್ಸ್ ಉಡ್‌ರವರು 17ನೇ ಜುಲೈ 1863ರಲ್ಲಿ ಗೌರ್ನರ್‌ಲ್ ಜನರಲ್‌ರವರಿಗೆ ಕಳುಹಿಸಿದ ಪತ್ರದಲ್ಲಿ ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸುವ ಉದ್ದೇಶ ಬ್ರಿಟಿಷ್ ಸರ್ಕಾರಕ್ಕೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದರು. ಈ ವಿಷಯದಲ್ಲಿ ಮಹಾರಾಜರು ಮತ್ತು ಮೈಸೂರಿನ ಜನತೆಯು ಇಟ್ಟುಕೊಂಡಿದ್ದ ನಿರೀಕ್ಷೆ, ಆಸೆಗಳು ಈ ಪತ್ರದಿಂದ ಪೂರ್ಣವಾಗಿ ಭಗ್ನವಾದವು. ಒಮ್ಮೆ ಮಹಾರಾಜರ ರಾಜ್ಯವನ್ನು ಬ್ರಿಟಿಷರು ವಹಿಸಿಕೊಂಡ ಮೇಲೆ ಅದನ್ನು ಹಿಂದಿರುಗಿಸಬೇಕೆಂದು ವಿಧಿಸತಕ್ಕ ಯಾವ ಷರತ್ತುಗಳೂ 1799ರಲ್ಲಿ ಅಸ್ತಿತ್ವಕ್ಕೆ ಬಂದ ಶ್ರೀರಂಗಪಟ್ಟಣದ ಕೌಲಿನಲ್ಲಿ ಇಲ್ಲವೆಂದು ಅವರು ಈ ಪತ್ರದಲ್ಲಿ ಘಂಟಾಘೋಷವಾಗಿ ಹೇಳಿದರು.

1831ರಲ್ಲಿ ಮೈಸೂರಿನ ಆಡಳಿತವನ್ನು ವಹಿಸಿಕೊಂಡಾಗ ಮಹಾರಾಜರಿಗೆ ತಮ್ಮ ರಾಜ್ಯದ ಮೇಲೆ ಪೂರ್ಣಾಧಿಕಾರವಿದೆಯೆಂಬುದನ್ನು ಬ್ರಿಟಿಷರು ಒಪ್ಪಿಕೊಂಡಿದ್ದರು. ರಾಜ್ಯಾಡಳಿತದಲ್ಲಿ ತಲೆದೋರಿದ್ದ ಅವ್ಯವಸ್ಥೆಯನ್ನು ನಿವಾರಿಸಿ ದೇಶದಲ್ಲಿ ಶಾಂತಿ ಸಮಾಧಾನಗಳು ನೆಲೆಸಿದ ಮೇಲೆ ಆದನ್ನು ಮಹಾರಾಜರಿಗೆ ಹಿಂದಿರುಗಿಸತಕ್ಕದೆಂಬುದು ಅವರ ರಾಜ್ಯನೀತಿಯಾಗಿದ್ದಿತು. ಆದರೆ ಕಾಲಕಳೆದಂತೆ ಬ್ರಿಟಿಷ್ ಸರ್ಕಾರದ ಅಭಿಪ್ರಾಯ ಬದಲಾಗತೊಡಗಿತು. ಕೊನೆಗೆ ಮಹಾರಾಜರಿಗೆ ಅವರ ರಾಜ್ಯದ ಮೇಲೆ ಹಕ್ಕೇ ಇಲ್ಲ ಎಂಬ ನಿರ್ಧಾರಕ್ಕೆ ಆ ಸರ್ಕಾರ ಬಂದಿತು. ಹೀಗೆ ಬ್ರಿಟಿಷರು ತಾವು ಕೊಟ್ಟ ವಚನಕ್ಕೆ ಬದ್ಧರಾಗಿ ನಡೆಯದೆ ತದ್ವಿರುದ್ಧವಾಗಿ

ಮೈಸೂರು ಸಂಸ್ಥಾನವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದರು.

ಬ್ರಿಟಿಷ್ ಸರ್ಕಾರದ ಭಾರತ ಸಮಿತಿಯ 6 ಜನ ಸದಸ್ಯರು ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸಕೂಡದೆಂಬ ನಿರ್ಧಾರವು ಸರಿಯಾದುದಲ್ಲವೆಂದು ಪ್ರತಿಪಾದಿಸಿದರು. ಭಾರತ ದೇಶದಲ್ಲಿ ಬಹುಕಾಲ ದೊಡ್ಡ ದೊಡ್ಡ ಜವಾಬ್ದಾರಿ ಹುದ್ದೆಗಳಲ್ಲಿ ಇದ್ದವರು ಈ ಸದಸ್ಯರ ಪೈಕಿ ಇದ್ದರು. ಬ್ರಿಟಿಷ್ ಮಂತ್ರಿಸಂಪುಟದಲ್ಲಿಯೂ ಕೂಡ ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ನೀತಿಗೆ ವಿರೋಧವಾಗಿದ್ದ ಕೆಲವು ಮಂತ್ರಿಗಳಿದ್ದರು. ಈ ರೀತಿ ಭಾರತ ಸಮಿತಿಯಲ್ಲಿಯೂ, ಮಂತ್ರಿಸಂಪುಟದಲ್ಲಿಯೂ ಈ ತೀರ್ಮಾನಕ್ಕೆ ಪ್ರಬಲವಾದ ವಿರೋಧವಿದೆಯೆಂಬ ವಿಷಯದಲ್ಲಿ ವದಂತಿಗಳು ಹರಡತೊಡಗಿದವು. ಕ್ರಮೇಣ ಸಾರ್ವಜನಿಕರಲ್ಲಿ ಈ ವಿಷಯದಲ್ಲಿ ಆಸಕ್ತಿ ಬೆಳೆದು ಸರ್ಕಾರದ ನೀತಿ ನ್ಯಾಯಬದ್ಧವೇ ಎಂಬ ಪ್ರಶ್ನೆ ಕೇಳಬಂದಿತು.

ಈ ರೀತಿ ಮೈಸೂರಿನ ವಿಷಯದಲ್ಲಿ ಚರ್ಚೆಯಾಗುತ್ತಿದ್ದಾಗ ಬ್ರಿಟನ್ನಿನ ರಾಜಕೀಯದಲ್ಲಿ ಒಂದು ಮಹತ್ತರವಾದ ಬದಲಾವಣೆಯಾಯಿತು. 1859ನೇ ಇಸವಿಯಿಂದ ಆ ದೇಶದ ಮುಖ್ಯಮಂತ್ರಿಗಳಾಗಿದ್ದ ಲಾರ್ಡ್ ಪಾಮರ್‌ಸ್ಟನ್‌ರವರು 18ನೇ ಅಕ್ಟೋಬರ್ 1865ರಲ್ಲಿ ಗತಿಸಿದರು. 1866ರಲ್ಲಿ ಡಾರ್ಬಿ ಮಂತ್ರಿಮಂಡಲ ಅಧಿಕಾರಕ್ಕೆ ಬಂದಿತು. ಸರ್ ಚಾರ್ಲ್ಸ್ ಉಡ್‌ರವರ ಬದಲು ಲಾರ್ಡ್ ಕ್ರಾನ್‌ಬಾರ್ನ್‌ರವರು ಬ್ರಿಟಿಷ್ ಸರ್ಕಾರದಲ್ಲಿ ಭಾರತ ಕಾರ್ಯದರ್ಶಿಗಳಾದರು.

ಮೈಸೂರಿನ ವಿಷಯದಲ್ಲಿ ಬ್ರಿಟಿಷ್ ಸರ್ಕಾರವು ತಳೆದ ಧೋರಣೆಯಿಂದ ಈ ದೇಶದಲ್ಲಿ ಅಸಮಾಧಾನ ಉಂಟಾಯಿತು. 1858ರಲ್ಲಿ ಬ್ರಿಟಿಷ್ ಮಹಾರಾಣಿಯವರು ಮಾಡಿದ ಘೋಷಣೆಯಲ್ಲಿ ರಾಜಮಹಾರಾಜರುಗಳಿಗೆ ಅವರ ರಾಜ್ಯಗಳ ಮೇಲೆ ಇದ್ದ ಹಕ್ಕಿಗೆ ಭಂಗ ತರುವುದಿಲ್ಲವೆಂದೂ, ಅವರ ವಂಶೀಯರು ಉತ್ತರಾಧಿಕಾರಿಗಳಾಗುವ ಹಕ್ಕನ್ನು ಬ್ರಿಟಿಷ್ ಸರ್ಕಾರವು ಅಂಗೀಕರಿಸುವುದೆಂದೂ ಭರವಸೆ ಕೊಡಲಾಗಿದ್ದಿತು. ಲಾರ್ಡ್ ಕ್ಯಾನಿಂಗರು ರಾಜಮಹಾರಾಜರುಗಳ ದತ್ತು ಸ್ವೀಕಾರದ ಹಕ್ಕನ್ನು ಅಂಗೀಕರಿಸಿ ರಾಜಪತ್ರವನ್ನು ಹೊರಡಿಸಿದ್ದರು.

ಆದರೆ ಮೈಸೂರಿನ ಬಗೆಗೆ ಬ್ರಿಟಿಷ್ ಸರ್ಕಾರದ ನೀತಿಯಲ್ಲಿ ಉಂಟಾದ ಬದಲಾವಣೆ ಯಿಂದ ಈ ಮೊದಲು ಕೊಟ್ಟ ಆಶ್ವಾಸನೆಗಳ ಬೆಲೆಯೇನು ಎನ್ನುವ ವಿಷಯ ದಲ್ಲಿ ರಾಜಮಹಾರಾಜರುಗಳು ಸಂಶಯಕ್ಕೊಳಗಾದರು. ಅವರ ಮನಸ್ಸಿನಲ್ಲಿ ಭಯಭೀತಿಗಳು ತಲೆದೋರಿದವು. ದೇಶದ ಸಾರ್ವಜನಿಕ ಜೀವನದಲ್ಲಿ ಗಣ್ಯ ರಾಗಿದ್ದ ವಿಷ್ಣುನಾರಾಯಣ ಮಾಂಡಲಿಕರು "ದತ್ತು ಸ್ವೀಕಾರವೇ ರಾಜ್ಯದ ಸೇರ್ಪಡೆಯೇ" ಎಂಬ ತಮ್ಮ ಲೇಖನದಲ್ಲಿ ಈ ವಿಷಯವನ್ನು ಕುರಿತು ಹೀಗೆ ಬರೆದರು :–

"ಮೈಸೂರು ಕೌಲಿನಂತಹದನ್ನು ದಾನಪತ್ರವೆಂದು ಕರೆಯುವುದೆಂದ ರೇನು ? ಸೂರ್ಯ ಚಂದ್ರರು ಇರುವವರೆಗೆ ಈ ಕೌಲಿಗೆ ಬದ್ಧವಾಗಿ ಉಭಯ ಪಕ್ಷಗಳೂ ನಡೆಯಬೇಕು ಎಂಬ ಮಾತುಗಳಿಗೆ ಈ ಕೌಲು ಶಾಶ್ವತವಾಗಿ ಅನ್ವಯಿಸ ತಕ್ಕದ್ದು ಎಂಬುದು ಅರ್ಥವಲ್ಲ ಎನ್ನುವುದಕ್ಕಿಂತ ವಿಚಿತ್ರವಾದ ಮಾತುಂಟೇ ? ಇಂತಹ ತರ್ಕಾಭಾಸದಿಂದ ಭಾರತ ದೇಶೀಯರ ಮನಸ್ಸು ಅಸಹ್ಯ, ಅಸಮಾಧಾನ ಗಳಿಂದ ತಲ್ಲಣಗೊಂಡಿದೆ."

"ಒಂದು ನಿರ್ದಿಷ್ಟ ಕೌಲಿನಂತೆ ಮೈಸೂರಿನ ಮಹಾರಾಜರು ಆ ದೇಶದ ಮೇಲೆ ಪರಮಾಧಿಕಾರವನ್ನು ಪಡೆದಿದ್ದಾರೆ. ಅವರು ಕೌಲಿಗೆ ವಿರುದ್ಧವಾಗಿ ನಡೆದರೆ ಆ ಕೌಲಿನ ಷರತ್ತುಗಳಂತೆ ಅವರಿಗೆ ಏನು ದಂಡನೆಯನ್ನು ವಿಧಿಸಬೇಕೋ ಅದನ್ನು ವಿಧಿಸಬಹುದು. ಆದರೆ ಬ್ರಿಟಿಷ್ ಜನಾಂಗವು ನೆಲದ ದಾಹಕ್ಕೆ ತುತ್ತಾಗಿ ಕೌಲಿಗೆ ಬದ್ಧವಾಗಿ ನಡೆಯದೇ ಇರುವುದು ಆಧ್ಯಾತ್ಮಿಕ ಔನ್ನತ್ಯದಿಂದ ಇಳಿದು ಪ್ರಾಪಂಚಿಕ ಆಮಿಷಕ್ಕೆ ಒಳಗಾದಂತೆ, ಈಶ್ವರನೊಬ್ಬನೇ ಎಂದು ನಂಬಿದವರು ವಿಗ್ರಹಾರಾಧನೆಗೆ ತೊಡಗಿದಂತೆ ಅವನತಿಯ ಲಕ್ಷಣವಾಗಿದೆ. ಇದರಿಂದ ಕಾಲಾನುಕ್ರಮದಲ್ಲಿ ಪ್ರಭುಗಳೂ, ಪ್ರಜೆಗಳೂ ನೀತಿ ಭ್ರಷ್ಟರಾಗಿ ಭಾರತವೂ, ಇಂಗ್ಲೆಂಡ್ ದೇಶವೂ ಸರ್ವನಾಶವಾಗುವುದು ಖಂಡಿತ."

ದಾದಾಭಾಯಿ ನವರೋಜಿಯವರು, ಗಾಜಲು ಲಕ್ಷ್ಮೀನರಸ ಚೆಟ್ಟಿಯವರು ಮೈಸೂರು ಸಂಸ್ಥಾನವನ್ನು ಮಹಾರಾಜರಿಗೆ ಹಿಂದಿರುಗಿಸಬೇಕೆಂಬ ವಾದಕ್ಕೆ ಬೆಂಬಲಕೊಟ್ಟರು. ಸರ್ ಹೆನ್ರಿ ರಾಲಿನ್‌ಸನ್‌ರವರ ನೇತೃತ್ವದಲ್ಲಿ ಒಂದು

ನಿಯೋಗ ಭಾರತ ಕಾರ್ಯದರ್ಶಿಗಳಾದ ಲಾರ್ಡ್ ಕ್ರಾನ್‌ಬಾರ್ನ್‌ರವರನ್ನು ಕಂಡು ಮಹಾರಾಜರು ದತ್ತು ಸ್ವೀಕಾರ ಮಾಡಿರುವುದರಿಂದ ಪರಿಸ್ಥಿತಿ ಬದಲಾಯಿಸಿದೆ. ಆದ್ದರಿಂದ ಮೈಸೂರಿನ ಬಗೆಗೆ ಬ್ರಿಟಿಷ್ ಸರ್ಕಾರದ ನೀತಿ ಬದಲಾಗಬೇಕೆಂದು ಪ್ರಾರ್ಥಿಸಿತು. ಸರ್ ರಾಲಿನ್‌ಸನ್‌ರವರು ಭಾರತದಲ್ಲಿಯೂ, ಪರ್ಷಿಯಾ ದೇಶದಲ್ಲಿಯೂ ಬಹು ಜವಾಬ್ದಾರಿಯಾದ ಸ್ಥಾನಗಳಲ್ಲಿದ್ದವರು. ಅವರು ಈ ಸ್ಥಾನಗಳಲ್ಲಿದ್ದು ಮಹತ್ವವಾದ ಸೇವೆಯನ್ನು ಸಲ್ಲಿಸಿದ್ದವರು. ಅವರು ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರರಲ್ಲೊಬ್ಬರಾಗಿದ್ದರು, ಭಾರತ ಸಮಿತಿಯ ಸದಸ್ಯರಾಗಿದ್ದರು. ಈ ಮನವಿಯನ್ನು ಮಾಡಿದ ವರ್ಷದಲ್ಲೇ ಸ್ವಲ್ಪ ಕಾಲದ ಅನಂತರ ಭಾರತದಲ್ಲಿ ಮಹತ್ತರವಾದ ಸೇವೆಯನ್ನು ಸಲ್ಲಿಸಿದ ಪ್ರಮುಖರೂ, ಇಂಗ್ಲೆಂಡಿನ ಸಾರ್ವಜನಿಕ ಜೀವನದಲ್ಲಿ ಮುಖಂಡರಾಗಿದ್ದವರೂ ಆದ ಅನೇಕ ಜನರು ರುಜುಮಾಡಿದ್ದ ಮನವಿಯನ್ನು ಜಾನ್ ಸ್ಟುಯರ್ಟ್‌ಮಿಲ್‌ರವರು ಬ್ರಿಟನ್ನಿನ ಶಾಸನ ಸಭೆಯ ಕೆಳಮನೆಯಾದ "ಹೌಸ್ ಆಫ್ ಕಾಮನ್ಸ್"ಗೆ ಸಲ್ಲಿಸಿದರು.

ಈ ಮನವಿಯಲ್ಲಿ ಬ್ರಿಟಿಷ್ ಹಿತಾಸಕ್ತಿಗಳಿಗೂ, ಸಂಸ್ಥಾನದ ಜನರ ಕ್ಷೇಮಾಭ್ಯುದಯಗಳಿಗೆ ಸಾಧಕವಾಗುವಂತೆಯೂ ಎಲ್ಲ ರೀತಿಯ ಸಂರಕ್ಷಣೆಯನ್ನು ಒದಗಿಸಿ, ಶೀಘ್ರವಾಗಿ ಮೈಸೂರಿನಲ್ಲಿ ದೇಶೀಯ ಆಡಳಿತವನ್ನು ಪುನರ್‌ಸ್ಥಾಪಿಸಬೇಕೆಂದು ಪ್ರಾರ್ಥಿಸಲಾಗಿದ್ದಿತು. ಮಹಾರಾಜರು 4ನೇ ಜುಲೈ 1866 ರಲ್ಲಿ ಇನ್ನೊಂದು ಪತ್ರವನ್ನು ಭಾರತ ಸರ್ಕಾರಕ್ಕೆ ಕಳುಹಿಸಿದರು. ಅದರಲ್ಲಿ ತಮಗೂ, ತಮ್ಮ ದತ್ತು ಪುತ್ರನಿಗೂ ಮೈಸೂರು ಸಂಸ್ಥಾನದ ಮೇಲೆ ಇದ್ದ ಅಧಿಕಾರವನ್ನು ಬ್ರಿಟಿಷ್ ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡರು. ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸುವುದಿಲ್ಲವೆಂಬ ಬ್ರಿಟಿಷ್ ಸರ್ಕಾರದ ತೀರ್ಮಾನವನ್ನು ಒಳಗೊಂಡಿದ್ದ ಸರ್ ಚಾರ್ಲ್ಸ್ ವುಡ್‌ರವರ ರಾಜಪತ್ರದಿಂದ ಇಂಗ್ಲೆಂಡಿನಲ್ಲಿಯೂ ಭಾರತದಲ್ಲಿಯೂ ಉಂಟಾದ ಅಸಮಾಧಾನವನ್ನು ಹಿಂದೆ ನಿರೂಪಿಸಲಾಗಿದೆ. ಈ ಅಸಮಾಧಾನವು ಕಾಲಕಳೆದಂತೆ ಪ್ರಬಲವಾಯಿತು. ಬ್ರಿಟಿಷ್ ವೃತ್ತಪತ್ರಿಕೆಗಳು ಮಹಾರಾಜರ ಪರವಾಗಿ ವಾದಿಸಲಾರಂಭಿಸಿದವು.

ಜಾನ್ ಮಾರ್ಲೆಯವರು ಬ್ರಿಟಿಷ್ ಸಾರ್ವಜನಿಕ ಜೀವನದಲ್ಲಿ ಬಹಳ ಗೌರವಾನ್ವಿತರಾಗಿದ್ದ ವ್ಯಕ್ತಿಗಳು. ಅವರು ಮುಂದೆ ಬ್ರಿಟಿಷ್ ಸರ್ಕಾರದಲ್ಲಿ

ಭಾರತ ಕಾರ್ಯದರ್ಶಿಗಳೂ ಆದರು. ಅವರು "ಫಾರ್ಟ್‌ನೈಟ್‌ಲಿ ರಿವ್ಯೂ" ಎಂಬ ಪತ್ರಿಕೆಯಲ್ಲಿ 15ನೇ ಸೆಪ್ಟೆಂಬರ್ 1866ರಲ್ಲಿ ಈ ವಿಷಯದಲ್ಲಿ ಒಂದು ಲೇಖನವನ್ನು ಬರೆದರು. 17೨೨ರ ಕೌಲಿನ ಷರತ್ತುಗಳಂತೆಯೂ, ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಅನುಸರಿಸಬೇಕಾದ ರಾಜ್ಯನೀತಿಯ ದೃಷ್ಟಿಯಿಂದಲೂ ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸತಕ್ಕದ್ದು ಸರಿಯೆಂದು ಆ ಲೇಖನದಲ್ಲಿ ಅವರು ಪ್ರತಿಪಾದಿಸಿದರು. ಮೈಸೂರು ಸಂಸ್ಥಾನವನ್ನು ರಾಜಮನೆತನಕ್ಕೆ ಹಿಂದಿರುಗಿಸುವ ವಿಷಯವಾಗಿ ನಡೆದ ಸಾರ್ವಜನಿಕ ಚರ್ಚೆಯ ಮೇಲೆ ಮಾರ್ಲೆಯವರ ಈ ಲೇಖನ ಮಹತ್ತರವಾದ ಪ್ರಭಾವವನ್ನು ಬೀರಿತು.

ಬ್ರಿಟಿಷ್ ವೃತ್ತಪತ್ರಿಕೆಗಳು ಮೈಸೂರು ಮಹಾರಾಜರಿಗೆ ಸಂಸ್ಥಾನವನ್ನು ಹಿಂದಿರುಗಿಸತಕ್ಕದ್ದು ನ್ಯಾಯಸಮ್ಮತವೆಂದು ವಾದಿಸಿದುದರಿಂದಲೂ, ಬ್ರಿಟಿಷ್ ರಾಜಕೀಯ ಜೀವನದಲ್ಲಿ ವಿಶೇಷವಾದ ಗೌರವಘನತೆಗಳನ್ನು ಸಂಪಾದಿಸಿಕೊಂಡಿದ್ದ ಮಾರ್ಲೆಯವರು ಹೀಗೆ ಸಂಸ್ಥಾನವನ್ನು ಹಿಂದಿರುಗಿಸುವುದು ಸೂಕ್ತವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದುದರಿಂದಲೂ ಬ್ರಿಟನ್ನಿನ ಶಾಸನ ಸಭೆಯಾದ ಪಾರ್ಲಿಮೆಂಟಿನ ಮೇಲೆ ಗಾಢವಾದ ಪರಿಣಾಮ ಉಂಟಾಯಿತು. 22ನೇ ಫೆಬ್ರವರಿ 1867ರಲ್ಲಿ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಚರ್ಚೆ ನಡೆದು ಮೈಸೂರು ಸಂಸ್ಥಾನವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ದತ್ತು ಪುತ್ರರಾದ ಚಾಮರಾಜೇಂದ್ರ ಒಡೆಯರಿಗೆ ಹಿಂದಿರುಗಿಸತಕ್ಕದ್ದೆಂದು ತೀರ್ಮಾನವಾಯಿತು. ಕೃಷ್ಣರಾಜ ಒಡೆಯರ ಪ್ರತಿನಿಧಿಯಾಗಿ ಇಂಗ್ಲೆಂಡ್‌ನಲ್ಲಿದ್ದ ಡಾಕ್ಟರ್ ಕ್ಯಾಂಪ್‌ಬೆಲ್‌ರವರು ತಂತಿಯ ಮೂಲಕ ಈ ತೀರ್ಮಾನವನ್ನು ಮಹಾರಾಜರಿಗೆ ತಿಳಿಸಿದರು. "ಮಹಾರಾಜರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು. ಹೌಸ್ ಆಫ್ ಕಾಮನ್ಸ್ ನಿನ್ನೆ ತೀರ್ಮಾನಿಸಿತು. ಮೈಸೂರು ರಾಜ್ಯ ಭದ್ರ. ರಾಜಕುಮಾರರು ತಮ್ಮ ಅನಂತರ ಉತ್ತರಾಧಿಕಾರಿಗಳಾಗುವರು" ಎಂದು ಆ ತಂತಿಯಲ್ಲಿ ಅವರು ತಿಳಿಸಿದರು. ಹೌಸ್ ಆಫ್ ಕಾಮನ್ಸ್ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಗತ್ಯವಾದ ಕ್ರಮಗಳನ್ನು ಡಾರ್ಬಿ ಮಂತ್ರಿ ಸಂಪುಟ ಕೈಗೊಂಡಿತು. ಬ್ರಿಟಿಷ್ ಸರ್ಕಾರದಲ್ಲಿ ಭಾರತ ಕಾರ್ಯದರ್ಶಿಗಳಾಗಿದ್ದ ಸರ್ ಸ್ಟಾಫರ್ಡ್ ನಾರ್ತ್‌ಕೋಟ್‌ರವರು 16ನೇ ಏಪ್ರಿಲ್ 1867ರಲ್ಲಿ ಗೌರ್ನರ್ ಜನರಲ್‌ರವರಿಗೆ ಒಂದು ಪತ್ರವನ್ನು ಬರೆದು ಬ್ರಿಟಿಷ್ ಸರ್ಕಾರದ ತೀರ್ಮಾನವನ್ನು ತಿಳಿಸಿದರು.

ಆ ಪತ್ರದಲ್ಲಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಹಿಂದಿರುಗಿಸುವುದಿಲ್ಲವೆಂಬ ಮಾತನ್ನು ಹೇಳಿ ಮೈಸೂರಿನ ಭವಿಷ್ಯದ ವಿಷಯ ಈ ರೀತಿ ಹೇಳಿದ್ದಾರೆ:

"ಮೈಸೂರಿನ ಜನತೆಗೆ ಒಳ್ಳೆಯ ಆಡಳಿತ ದೊರಕುವಂತೆಯೂ, ಬ್ರಿಟಿಷ್ ಹಿತಾಸಕ್ತಿಗಳಿಗೆ ತಕ್ಕ ಸಂರಕ್ಷಣೆ ಒದಗುವಂತೆಯೂ ಏರ್ಪಡಿಸಿ, ಮೈಸೂರು ಸಿಂಹಾಸನದ ಮೇಲೆ ಭಾರತೀಯ ರಾಜವಂಶವನ್ನು ಮುಂದುವರಿಸಿಕೊಂಡು ಹೋಗುವುದೇ 1799 ರ ಕೌಲಿನ ಮೂಲೋದ್ದೇಶವೆಂಬುದನ್ನು ಮಹಾರಾಣಿಯವರ ಸರ್ಕಾರವು ಅಂಗೀಕರಿಸುತ್ತದೆ. ಇದಕ್ಕೆ 1799ರ ಕೌಲಿನ ಷರತ್ತುಗಳ ವಿವರವಾದ ವಿಮರ್ಶೆ ಏನೂ ಅಗತ್ಯವಿಲ್ಲ. ಮಹಾಘನವೆತ್ತ ಮಹಾರಾಣಿಯವರಿಗೆ ಇರುವ ಅಭಿಲಾಷೆಯೂ ಇದೇ ಆಗಿದೆ. ಅವರು ಸರ್ಕಾರದ ಈ ಅಭಿಪ್ರಾಯಗಳನ್ನು ಅನುಮೋದಿಸುವವರಾಗಿರುವರು. ಭಾರತದ ಯಾವ ಭಾಗಗಳು ಅವರ ನೇರವಾದ ಆಳ್ವಿಕೆಯಲ್ಲಿಲ್ಲವೊ ಅವು ದೇಶೀಯ ಪ್ರಭುಗಳ ಆಡಳಿತದಲ್ಲಿ ಮುಂದುವರಿಯತಕ್ಕದ್ದೆಂಬುದು, ಈ ಪ್ರಭುಗಳು ಮಹಾರಾಣಿಯವರ ಪ್ರತಿನಿಧಿಗಳೊಂದಿಗೆ ದೇಶದ ಸಾರ್ವತ್ರಿಕ ಏಳಿಗೆಗೆ ಸಹಕರಿಸತಕ್ಕದ್ದೆಂಬುದು ಅವರ ಮನೋಗತವಾಗಿದೆ. ಮಹಾರಾಜರ ಮನೆತನದ ಪ್ರಾಚೀನತೆಯನ್ನೂ, ಮೈಸೂರು ಸಂಸ್ಥಾನದೊಂದಿಗೆ ಅವರ ಸುದೀರ್ಘವಾದ ಸಂಬಂಧವನ್ನೂ, ಮಹಾರಾಜರಿಗೆ ಬ್ರಿಟಿಷ್ ಸರ್ಕಾರದ ವಿಷಯದಲ್ಲಿ ಇರುವ ಸುಸ್ಪಷ್ಟವಾದ ನಿಷ್ಠೆ, ಒಲವುಗಳನ್ನೂ ಗಮನಕ್ಕೆ ತೆಗೆದುಕೊಂಡು, ಮಹಾರಾಜರ ದತ್ತು ಪುತ್ರರನ್ನು ಸಿಂಹಾಸನದ ಮೇಲೆ ಕೂಡಿಸುವ ಮೂಲಕ ಮೈಸೂರು ರಾಜಮನೆತನಕ್ಕೆ ಆ ರಾಜ್ಯದ ಪ್ರಭುತ್ವವನ್ನು ವಹಿಸುವುದೇ ಮಹಾರಾಣಿಯವರ ಅಭಿಲಾಷೆಯಾಗಿದೆ. ಬದಲಾವಣೆಯಾದ ಸನ್ನಿವೇಶಗಳಿಗೆ ಸರಿಹೊಂದುವಂತೆ, 1799ರ ಕೌಲಿನ ಷರತ್ತುಗಳಿಗೆ ಅನುಗುಣವಾಗಿ ಈ ರೀತಿ ಮಾಡತಕ್ಕದ್ದು."

"ಮಹಾರಾಣಿಯವರ ಸರ್ಕಾರಕ್ಕೆ, ಬಹುಕಾಲ ಅವರ ನೇರವಾದ ಆಳ್ವಿಕೆಗೆ ಒಳಗಾದವರ ಯೋಗಕ್ಷೇಮದ ವಿಷಯದಲ್ಲಿ ವಿಶೇಷವಾದ ಆಸಕ್ತಿ ಇದೆ. ಅಲ್ಲದೇ ದೇಶೀಯ ಪ್ರಭುವಿನ ಆಡಳಿತಕ್ಕೆ ಅವರನ್ನು ಒಪ್ಪಿಸುವುದಕ್ಕೆ ಮುಂಚೆ ಆ

ಪ್ರಭುವಿಗೆ ಸರಿಯಾದ ಶಿಕ್ಷಣ ದೊರಕುವಂತೆ ಎಲ್ಲ ಪ್ರಯತ್ನಗಳನ್ನೂ ಮಾಡುವುದು ತನ್ನ ಕರ್ತವ್ಯವೆಂದು ಅದು ಭಾವಿಸಿದೆ. ಆ ಪ್ರಭುವಿನೊಂದಿಗೆ ಯಾವ ಮೂಲ ಸೂತ್ರಗಳನ್ನು ಅನುಸರಿಸಿ ಆಡಳಿತ ನಡೆಸಬೇಕೆಂಬ ಬಗೆಗೆ ಸ್ಪಷ್ಟವಾದ ಒಪ್ಪಂದವನ್ನು ಮಾಡಿಕೊಳ್ಳುವುದೂ, ಆ ಒಪ್ಪಂದಕ್ಕೆ ತಕ್ಕಂತೆ ನಡೆಯುವಂತೆ ಭರವಸೆಯನ್ನು ಪಡೆಯುವುದೂ ಅದೇರೀತಿ ತನ್ನ ಕರ್ತವ್ಯವೆಂದು ಅದು ಭಾವಿಸಿದೆ. ರಾಜ್ಯವನ್ನು ಹಿಂದಿರುಗಿಸುವ ಏರ್ಪಾಡಿಗೆ ಸಂಬಂಧಿಸಿದಂತೆ ಷರತ್ತುಗಳನ್ನು ರೂಪಿಸುವ ಮುನ್ನ ಈ ವಿಷಯಗಳನ್ನೆಲ್ಲಾ ಮಹಾರಾಣಿಯವರ ಸರ್ಕಾರವು ಗಣನೆಗೆ ತೆಗೆದುಕೊಳ್ಳತಕ್ಕದ್ದಾಗಿದೆ.”

ಮಹಾರಾಜರು ತಮ್ಮ ದತ್ತು ಪುತ್ರನು ಪ್ರಾಪ್ತ ವಯಸ್ಕನಾಗುವುದಕ್ಕೆ ಮುಂಚೆಯೇ ನಿಧನರಾದರೆ ಆಡಳಿತವನ್ನು ಆ ದತ್ತುಪುತ್ರನ ಹೆಸರಿನಲ್ಲಿಯೇ ನಡೆಸಿಕೊಂಡು ಹೋಗತಕ್ಕದ್ದೆಂದೂ, ಅದುವರೆಗೆ ಅನುಸರಿಸಿದ ರಾಜ್ಯವಿಧಾನವನ್ನೇ ಅನುಸರಿಸತಕ್ಕದ್ದೆಂದೂ ಈ ಪತ್ರದಲ್ಲಿ ಹೇಳಲಾಗಿದೆ. 1799 ರಿಂದ ಈಚೆಗೆ ಆದ ಮೈಸೂರಿನ ಸಂಪದಭ್ಯುದಯವನ್ನೂ, ಅದರಲ್ಲೂ 1831 ರಲ್ಲಿ ಲಾರ್ಡ್ ವಿಲಿಯಂ ಬೆಂಟಿಂಕರು ರಾಜ್ಯವನ್ನು ಬ್ರಿಟಿಷರ ನೇರವಾದ ಆಳ್ವಿಕೆಗೆ ತೆಗೆದುಕೊಂಡ ಮೇಲೆ ಅದರ ಆರ್ಥಿಕ ಸ್ಥಿತಿಯಲ್ಲಿ ಉಂಟಾದ ಅಭ್ಯುದಯವನ್ನೂ ಗಮನಕ್ಕೆ ತೆಗೆದುಕೊಂಡು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಬೇಕಾದ ಪೊಗದಿಯನ್ನು ಹೆಚ್ಚಿಸತಕ್ಕದ್ದೆಂದು ಬ್ರಿಟಿಷ್ ಸರ್ಕಾರವು ತೀರ್ಮಾನಿಸಿತು.

ಮೈಸೂರು ರಾಜ್ಯವನ್ನು ಹಿಂದಿರುಗಿ ಪಡೆಯಲು ಮುಮ್ಮಡಿ ಕೃಷ್ಣರಾಜ ಒಡೆಯರು ಎಂತಹ ಅಡ್ಡಿ ಆತಂಕಗಳು ಬಂದರೂ ಎದೆಗುಂದದೆ ಹೋರಾಟ ನಡೆಸಿ ಯಶಸ್ವಿಗಳಾದರು. ಆದರೆ ಬ್ರಿಟಿಷ್ ಸರ್ಕಾರವು ರಾಜ್ಯವನ್ನು ಅವರಿಗೆ ಹಿಂದಿರುಗಿಸುವುದಿಲ್ಲವೆಂದೂ ಅವರ ದತ್ತುಪುತ್ರನಿಗೆ ಪ್ರಾಪ್ತ ವಯಸ್ಕನಾದಾಗ ಅದನ್ನು ಹಿಂದಿರುಗಿಸತಕ್ಕದ್ದೆಂದೂ ತೀರ್ಮಾನ ಮಾಡಿತು. ಹೀಗೆ ಇಂತಹ ಸಂತೋಷದ ಸಮಯದಲ್ಲಿಯೂ ಮಹಾರಾಜರು ವಿಷಮಿಶ್ರಿತವಾದ ಅಮೃತವನ್ನು ಸೇವಿಸಬೇಕಾಗಿ ಬಂದಿತು. 16ನೇ ಜೂನ್ 1867ರಲ್ಲಿ ಗವರ್ನರ್ ಜನರಲ್‌ರವರು ಭಾರತ ಕಾರ್ಯದರ್ಶಿಗಳಾದ ನಾರ್ತ್‌ಕೋಟರ ಪತ್ರವನ್ನು ಮಹಾರಾಜರಿಗೆ ತಲುಪಿ

ಸಿದರು. 18ನೇ ಜುಲೈ 1867ರಲ್ಲಿ ಮಹಾರಾಜರು ತಮ್ಮ ಅರಮನೆಯಲ್ಲಿ ವಿಶೇಷ ದರ್ಬಾರನ್ನು ನಡೆಸಿದರು. ಚಾಮರಾಜೇಂದ್ರ ಒಡೆಯರವರು ಮೈಸೂರಿನ ಮುಂದಿನ ಅರಸರೆಂಬುದನ್ನು ಬ್ರಿಟಿಷ್ ಸರ್ಕಾರವು ಅಂಗೀಕರಿಸಿದ್ದನ್ನು ಆ ಸಭೆಯಲ್ಲಿ ಘೋಷಿಸಲಾಯಿತು. ಮೈಸೂರಿನ ಬ್ರಿಟಿಷ್ ಕಮಿಷನರವರು ಮಹಾರಾಜರಿಗೆ ತಮ್ಮ ಅಭಿನಂದನೆಗಳನ್ನು ಅರ್ಪಿಸಿದರು. ಚಾಮರಾಜೇಂದ್ರ ಒಡೆಯರವರನ್ನು ಈ ಸಭೆಗೆ ಸಕಲ ಮರ್ಯಾದೆಗಳೊಂದಿಗೆ ಕರೆತರಲಾಯಿತು. ನೆರೆದಿದ್ದ ಜನರು ಜಯ ಘೋಷವನ್ನು ಮಾಡಿದರು. ಕಮಿಷನರವರು ಅವರನ್ನು ಮಹಾರಾಜರ ತೊಡೆಯ ಮೇಲೆ ಕೂಡಿಸಿ ಮೈಸೂರಿನ ಮುಂದಿನ ದೊರೆಗಳೆಂದು ಘೋಷಿಸಿದರು.

ಸುದೀರ್ಘವಾದ ಹೋರಾಟದ ಅನಂತರ ಗಳಿಸಿದ ಈ ಯಶಸ್ಸಿನ ಸವಿಯನ್ನು ಅನುಭವಿಸಲು ಮಹಾರಾಜರು ಬಹುಕಾಲ ಬದುಕಿರಲಿಲ್ಲ. ಒಂದು ವರ್ಷದ ಒಳಗೇ ಅವರು ನಿಧನರಾದರು. ಅವರಿಗೆ ಕನ್ನಡ, ಪರ್ಷಿಯನ್, ಮರಾಠಿ ಮತ್ತು ಸಂಸ್ಕೃತ ಭಾಷೆಗಳು ಚೆನ್ನಾಗಿ ಬರುತ್ತಿದ್ದವು, ಹಿಂದೂಸ್ಥಾನಿಯ ಪರಿಚಯವಿದ್ದಿತು. ಅವರು ಕನ್ನಡದಲ್ಲಿ ಸೊಗಸಾಗಿ ಭಾಷಣ ಮಾಡಬಲ್ಲವರಾಗಿದ್ದರು. ಅವರ ಔದಾರ್ಯಕ್ಕೆ ಮಿತಿ ಇರಲಿಲ್ಲ. ಅವರು ಪುರಾಣ ಕಾಲದ ಅರಸರಂತೆ ದಾನ ಧರ್ಮಗಳನ್ನು ಮಾಡುತ್ತಿದ್ದರು. ಈಚಿನವರೆಗೆ ಅವರು ಕೊಟ್ಟ ಇನಾಂ ಗ್ರಾಮಗಳು ಜಹಗೀರಿಗಳು ಮೈಸೂರಿನಲ್ಲಿ ಎಲ್ಲೆಡೆಯೂ ಕಂಡುಬರುತ್ತಿದ್ದವು. ಅವರು ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟರು. ಸಂಗೀತದಲ್ಲಿ ಅವರಿಗೆ ವಿಶೇಷವಾದ ಅಭಿರುಚಿ ಇದ್ದಿತು. ಅವರ ಆಸ್ಥಾನದಲ್ಲಿ ಸಂಗೀತದಲ್ಲಿಯೂ ನಾನಾ ಭಾಷೆಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ ವಿದ್ವಾಂಸರಾದವರು ಇದ್ದರು. ದೇಶದ ಎಲ್ಲ ಕಡೆಗಳಿಂದ ರಾಜಾಶ್ರಯವನ್ನು ಬಯಸಿ ಇಂತಹ ವಿದ್ವಾಂಸರು ಬರುತ್ತಿದ್ದರು. ಮಹಾರಾಜರಿಂದ ಮನ್ನಣೆ, ಗೌರವ, ಬಹುಮಾನ ಪಡೆಯದೆ ಯಾರೂ ಹಿಂದಿರುಗುತ್ತಿರಲಿಲ್ಲ. ಅವರ ಔದಾರ್ಯ, ವಿದ್ವಜ್ಜನ ಪ್ರೋತ್ಸಾಹ, ಧರ್ಮಭೀರುತೆಗಳು ಜನಜನಿತವಾಗಿವೆ. ಇಂದಿಗೂ ಮೈಸೂರಿನ ಜನ ಅವರನ್ನು ಪ್ರೀತಿ, ಗೌರವಗಳಿಂದ ಸ್ಮರಿಸುತ್ತಾರೆ. ಮೈಸೂರು ರಾಜ್ಯವನ್ನು ಮತ್ತೆ ಪಡೆಯಲು ಅವರು ಮಾಡಿದ ಭಗೀರಥ ಪ್ರಯತ್ನ ಜನಮನದಲ್ಲಿ ಅವರಿಗೆ ಶಾಶ್ವತವಾದ ಸ್ಥಾನವನ್ನು ಕಲ್ಪಿಸಿದೆ. ಮೈಸೂರಿನ ಚರಿತ್ರೆಯಲ್ಲಿ ಅವರು ತಮ್ಮದೇ ಆದ ಸ್ಥಾನವನ್ನು ಹೊಂದಿದ್ದಾರೆ.

ಅಧ್ಯಾಯ 4

# ಗುರು ಮತ್ತು ರಾಜಶಿಷ್ಯ

ಗೌರ್‍ನರ್ ಜನರಲ್‌ರವರು 28ನೇ ಮಾರ್ಚಿ 1868ರಲ್ಲಿ ಒಂದು ಘೋಷಣೆಯನ್ನು ಮಾಡಿದರು. ಆ ಘೋಷಣೆಯಲ್ಲಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಗತಿಸಿದ್ದು ಭಾರತ ಸರ್ಕಾರಕ್ಕೆ ದುಃಖವನ್ನುಂಟುಮಾಡಿದೆಯೆಂದೂ, ಅವರ ದತ್ತು ಪುತ್ರರಾದ ಚಾಮರಾಜೇಂದ್ರ ಒಡೆಯರವರನ್ನು ಅವರ ಉತ್ತರಾಧಿಕಾರಿಗಳೆಂದೂ, ಮೈಸೂರು ಸಂಸ್ಥಾನದ ಪ್ರಭುಗಳೆಂದೂ ಬ್ರಿಟಿಷ್ ಸರ್ಕಾರವು ಅಂಗೀಕರಿಸುತ್ತದೆಯೆಂದೂ ನಿರೂಪಿಸಲಾಯಿತು.

ಚಾಮರಾಜೇಂದ್ರ ಒಡೆಯರವರು ಇನ್ನೂ ಬಾಲಕರಾಗಿರುವುದರಿಂದ ಅವರು ಪ್ರಾಪ್ತ ವಯಸ್ಕರಾಗುವವರೆಗೆ ಸಂಸ್ಥಾನದ ಆಡಳಿತವನ್ನು ಅವರ ಹೆಸರಿನಲ್ಲಿ ಬ್ರಿಟಿಷ್ ಸರ್ಕಾರವು ನಡೆಸಿಕೊಂಡು ಹೋಗತಕ್ಕದ್ದೆಂದೂ, ಅದುವರೆಗೆ ಅನುಸರಿಸಿದ ರಾಜ್ಯವಿಧಾನವನ್ನೇ ಮುಂದೆಯೂ ಅನುಸರಿಸತಕ್ಕದ್ದೆಂದೂ ಘೋಷಣೆಯಲ್ಲಿ ಸ್ಪಷ್ಟಪಡಿಸಲಾಯಿತು.

ಚಾಮರಾಜೇಂದ್ರ ಒಡೆಯರವರು ಪ್ರಾಪ್ತ ವಯಸ್ಕರಾದ ಮೇಲೆ ಅಂದರೆ ಅವರಿಗೆ 18 ವರ್ಷಗಳಾದ ಮೇಲೆ ಅವರು ವಹಿಸಕೊಳ್ಳಬೇಕಾದ ಉನ್ನತ ಸ್ಥಾನದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ತಕ್ಕ ಸಾಮರ್ಥ್ಯ ಅವರಲ್ಲಿ ಕಂಡುಬಂದರೆ ಆ ಸಮಯದಲ್ಲಿ ನಿರ್ಧರಿಸಬಹುದಾದ ಷರತ್ತುಗಳಿಗೆ ಒಳಪಟ್ಟು ರಾಜ್ಯಾಧಿಕಾರವನ್ನು ಅವರಿಗೆ ವಹಿಸಲಾಗುತ್ತದೆ ಎಂದು ಘೋಷಣೆಯಲ್ಲಿ ಹೇಳಲಾಯಿತು.

ಭಾರತ ಸರ್ಕಾರದ ವಿದೇಶಾಂಗ ಇಲಾಖೆಯು 30ನೇ ಮಾರ್ಚಿ 1868ರಲ್ಲಿ ಒಂದು ಘೋಷಣೆಯನ್ನು ಹೊರಡಿಸಿತು. ಅದರಲ್ಲಿ 28ನೇ ಮಾರ್ಚಿ 1868ರ ಘೋಷಣೆಯ ಕೊನೆಯ ಭಾಗದ ಬದಲು ಒಂದು ನಿಬಂಧನೆಯನ್ನು

ಸೇರಿಸಲಾಯಿತು. ಆ ನಿಬಂಧನೆಯಂತೆ ಅರಮನೆಯ ವ್ಯವಹಾರಗಳನ್ನೂ, ಮಹಾರಾಜರ ಮನೆತನದ ಸೌಖ್ಯ, ಘನತೆಗಳ ಸಂರಕ್ಷಣೆಯ ಜವಾಬ್ದಾರಿಯನ್ನೂ ಕಮಿಷನರವರೇ ವಹಿಸತಕ್ಕದ್ದೆಂದು ವಿಧಿಸಲಾಯಿತು. ಅಲ್ಲದೇ ಮಹಾರಾಜರು ಪ್ರಾಪ್ತವಯಸ್ಕರಾದ ಮೇಲೆ ಯಾವ ಷರತ್ತುಗಳಿಗೆ ಒಳಪಟ್ಟು ರಾಜ್ಯಾಡಳಿತವನ್ನು ನಿರ್ವಹಿಸತಕ್ಕದ್ದೆಂಬುದು ಆ ಕಾಲದಲ್ಲಿ ನಿರ್ಧರಿಸತಕ್ಕ ವಿಷಯವಾಗಿದೆ ಎಂದು ಆದರಲ್ಲಿ ಸ್ಪಷ್ಟಪಡಿಸಲಾಯಿತು.

ಭಾರತ ಸರ್ಕಾರವು ಹೊರಡಿಸಿದ ಘೋಷಣೆಯಲ್ಲಿ ಚಾಮರಾಜೇಂದ್ರ ಒಡೆಯರವರನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಉತ್ತರಾಧಿಕಾರಿಗಳಾಗಿಯೂ, ಮೈಸೂರು ಸಂಸ್ಥಾನದ ಪ್ರಭುಗಳಾಗಿಯೂ ಅಂಗೀಕರಿಸಲಾಯಿತು. ಅವರು ಪ್ರಾಪ್ತ ವಯಸ್ಕರಾಗುವವರೆಗೆ ರಾಜ್ಯಾಡಳಿತವನ್ನು ಬ್ರಿಟಿಷರೇ ನಿರ್ವಹಿಸ ತಕ್ಕದ್ದೆಂಬುದನ್ನು ಸ್ಪಷ್ಟಪಡಿಸಲಾಯಿತು. ಮಹಾರಾಜರು ಪ್ರಾಪ್ತ ವಯಸ್ಕರಾದ ಮೇಲೆ ಮೈಸೂರು ಸಿಂಹಾಸನವನ್ನು ಅವರು ಕೂಡಲೇ ಏರತಕ್ಕದ್ದೆಂದು ಘೋಷಣೆ ಯಲ್ಲಿ ಹೇಳಲಿಲ್ಲ. ಆ ಕಾಲದಲ್ಲಿ ಅವರಿಗೆ ರಾಜ್ಯಾಡಳಿತ ಸಾಮರ್ಥ್ಯ ಇದ್ದರೆ ಆಗ ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟು ಅವರು ಮೈಸೂರಿನ ಪ್ರಭು ಗಳಾಗಬಹುದೆಂದು ಆದರಲ್ಲಿ ಸ್ಪಷ್ಟಪಡಿಸಲಾಯಿತು. ಹೀಗೆ ಚಾಮರಾಜೇಂದ್ರ ಒಡೆಯರವರು ಮೈಸೂರಿನ ಅರಸರಾಗುವ ಬಗೆಗೆ ನಿಸ್ಸಂದಿಗ್ಧವಾದ ಘೋಷಣೆ ಯನ್ನು ಭಾರತ ಸರಕಾರವು ಮಾಡಲಿಲ್ಲವೆಂಬ ಸಂಶಯವು ಜನರ ಮನಸ್ಸಿನಲ್ಲಿ ಉದ್ಭವಿಸುವುದಕ್ಕೆ ಕಾರಣವಾಯಿತು.

ಬಾಲಕರಾದ ಚಾಮರಾಜೇಂದ್ರ ಒಡೆಯರ್‌ರವರು ಮೈಸೂರಿನ ಮುಂದಿನ ಅರಸರೆಂದು ಬ್ರಿಟಿಷ್ ಸರ್ಕಾರವು ಮಾಡಿದ ಘೋಷಣೆಯನ್ನು ಮೈಸೂರಿನ ಜನರು ವಿಶೇಷವಾದ ಆನಂದೋತ್ಸಾಹಗಳಿಂದ ಸ್ವಾಗತಿಸಿದರು. ಆದರೆ ಅವರು ಪ್ರಾಪ್ತ ವಯಸ್ಕರಾದಾಗ ವಾಸ್ತವವಾಗಿ ರಾಜ್ಯದ ಪ್ರಭುಗಳಾಗುವರೇ ಎಂಬ ವಿಷಯದಲ್ಲಿ ಜನರ ಮನಸ್ಸಿನಲ್ಲಿ ಸಂಶಯ ಮತ್ತು ಆತಂಕಗಳು ತಲೆದೋರಿದುವು. ಇದಕ್ಕೆ ಘೋಷಣೆಯಲ್ಲಿ ನಿರೂಪಿಸಿದ ಷರತ್ತುಗಳೇ ಕಾರಣ. ಜನರ ಮನಸ್ಸಿನಲ್ಲಿನ ಆತಂಕ ಸ್ಪಷ್ಟವಾಗಿ ಅಭಿವ್ಯಕ್ತವಾಗುವುದಕ್ಕೆ ಸ್ವಲ್ಪ ಕಾಲದಲ್ಲಿಯೇ ಅವಕಾಶವು ದೊರೆಯಿತು. ಚಾಮರಾಜೇಂದ್ರ ಒಡೆಯರ್‌ರವರು ಕೂಡಲೇ ವಿಧ್ಯುಕ್ತವಾಗಿ

ಸಿಂಹಾಸನಾರೋಹಣವನ್ನು ಮಾಡಬೇಕೇ ಅಥವಾ ಅದಕ್ಕಾಗಿ ಅವರು ಪ್ರಾಪ್ತ ವಯಸ್ಕರಾಗುವವರೆಗೆ ಕಾಯಬೇಕೇ ಎಂಬ ಪ್ರಶ್ನೆ ಉದ್ಭವಿಸಿತು. ದೂರದರ್ಶಿಗಳಾದ ರಂಗಾಚಾರ್ಲುರವರು ಈ ಪಟ್ಟಾಭಿಷೇಕವು ಕೂಡಲೇ ನಡೆಯತಕ್ಕದ್ದೆಂದೂ, ಮುಂದಿನ ನವರಾತ್ರಿಯಲ್ಲಿಯೇ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದೆಂದೂ ಅಭಿಪ್ರಾಯಪಟ್ಟರು. ಜನಗಳ ಸಂಶಯ ಸಾಧಾರವಾದುದೆಂಬುದಕ್ಕೆ ಇದೇ ನಿದರ್ಶನ. ರಂಗಾಚಾರ್ಲುರವರ ಅಭಿಮತದಂತೆ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರು 23ನೇ ಸೆಪ್ಟೆಂಬರ್ 1868ರಲ್ಲಿ ಸಿಂಹಾಸನಾರೋಹಣ ಮಾಡಿದರು.

ಮುಮ್ಮಡಿ ಕೃಷ್ಣರಾಜ ಒಡೆಯರವರ ಸಾಲದ ತೀರ್ಪಾಡಿಗಾಗಿಯೂ, ಅರಮನೆಯ ವ್ಯವಸ್ಥೆಯನ್ನು ಸರಿಪಡಿಸುವುದಕ್ಕಾಗಿಯೂ ಭಾರತ ಸರ್ಕಾರದವರು ಮೇಜರ್ ಇಲಿಯಟ್‌ರವರನ್ನು ನಿಯಮಿಸಿ ರಂಗಚಾರ್ಲುರವರನ್ನು ಅವರ ಸಹಾಯಕರನ್ನಾಗಿ ಗೊತ್ತುಪಡಿಸಿದ್ದರಷ್ಟೆ. ರಂಗಾಚಾರ್ಲುರವರು ಮೈಸೂರಿಗೆ ಬಂದಾಗ ಅವರಿಗೆ 37 ವರ್ಷಗಳು. ಅವರು ಮೈಸೂರಿಗೆ ಬಂದ ಮೇಲೆ ಬೌರಿಂಗ್‌ರವರನ್ನು ನೋಡಲು ಹೋಗಿದ್ದರು. ಈ ಮೊದಲಿನ ಸಂದರ್ಶನದಲ್ಲಿಯೇ ರಂಗಾಚಾರ್ಲುರವರು ಸಮರ್ಥರೆಂದೂ, ಮಹತ್ವಾಕಾಂಕ್ಷಿಗಳೆಂದೂ ಅಭಿಪ್ರಾಯ ಬೌರಿಂಗ್‌ರವರ ಮನಸ್ಸಿನಲ್ಲಿ ಮೂಡಿತು. ಮೇಜರ್ ಇಲಿಯಟ್‌ರವರೂ ರಂಗಾಚಾರ್ಲುರವರೂ ಮಾಡಬೇಕಾಗಿದ್ದ ಕೆಲಸ ಎಂತಹವರನ್ನೂ ಎದೆಗುಂದಿಸುವಂತಹದ್ದಾಗಿದ್ದಿತು. ಸೋಮಾರಿಗಳೂ, ಸ್ವಾರ್ಥಿಗಳೂ, ಸಮಯಸಾಧಕರೂ ಅರಮನೆಯಲ್ಲಿ ಬೇರೂರಿದ್ದರು. ಖರ್ಚುವೆಚ್ಚಗಳ ಬಗೆಗೆ ತನಿಖೆ ವಿಮರ್ಶೆಗಳನ್ನು ಮಾಡುವವರು ಇರಲಿಲ್ಲವೆಂದೇ ಹೇಳಬಹುದು. ಖಜಾನೆಯ ಹಣವನ್ನು ಅಲ್ಲಿನ ಅಧಿಕಾರಿಗಳು ತಮ್ಮ ಸ್ವಂತಕ್ಕಾಗಿ ಮನಬಂದಂತೆ ಉಪಯೋಗಿಸುತ್ತಿದ್ದರು. ಅರಮನೆಯ ದಿನದಿನದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಈ ಅಧಿಕಾರಿಗಳು ವಿಪರೀತ ಬಡ್ಡಿಯ ಮೇಲೆ ಸಾಲವನ್ನು ಮಾಡುತ್ತಿದ್ದರು. ಮಹಾರಾಜರ ಬಂಧುಗಳಾದರೋ ಅಮೂಲ್ಯವಾದ ಆಭರಣಗಳನ್ನು ಒತ್ತೆ ಇಟ್ಟು ಅಷ್ಟೋ ಇಷ್ಟೋ ಹಣವನ್ನು ತರುತ್ತಿದ್ದರು. ಹೀಗೆ ಅಲ್ಪ ಸ್ವಲ್ಪ ಹಣವನ್ನು ಅರಸುಗಳಿಗೆ ಕೊಟ್ಟು ಅಮೂಲ್ಯವಾದ ಆಭರಣಗಳನ್ನು ಅಡವಿಟ್ಟುಕೊಂಡು ಎಷ್ಟೋ ಜನ ಶ್ರೀಮಂತರಾದರು. ಅರಸು ಕುಲಕ್ಕೆ ಸೇರಿದ್ದ 619 ಜನರಿಗೆ ಅರಮನೆಯಿಂದ ಮಾಶಾಸನವನ್ನು

ಕೊಡಲಾಗುತ್ತಿದ್ದಿತು. ಆ ಬಂಧುವರ್ಗವನ್ನು ಬಿಟ್ಟು ಅರಮನೆಯ ಸಿಬ್ಬಂದಿವರ್ಗದಲ್ಲಿ 9,687 ಜನರಿದ್ದರು. ಈ ಸಿಬ್ಬಂದಿ ವರ್ಗದ ಸಂಬಳ ಸಾರಿಗೆಗಳಿಗೆ ತಿಂಗಳಿಗೆ 57,452 ರೂಪಾಯಿ ಅಥವಾ ವರ್ಷಕ್ಕೆ 6,89,424 ರೂಪಾಯಿ ಖರ್ಚಾಗುತ್ತಿದ್ದಿತು. ಸಂಗೀತಗಾರರು, ಆಯುರ್ವೇದ ಪಂಡಿತರು, ರಾಜಭಟರು, ನೃತ್ಯಗಾರರು, ವಿದೂಷಕರು, ದೀಪ ಹಿಡಿಯುವವರು, ಈ ರೀತಿ ಅರಮನೆಯ ಉದ್ಯೋಗದಲ್ಲಿ ನಾನಾ ಜನರು ಇದ್ದರು. ವಿದ್ವಜ್ಜನರ ಪ್ರೋತ್ಸಾಹಿಗಳೂ, ಸಂಗೀತ, ಕಲೆಗಳ ಆಶ್ರಯದಾತರೂ ಆದ ಮಹಾರಾಜರ ಆಸ್ಥಾನದಲ್ಲಿ ಮಾಶಾಸನ ಪಡೆಯುತ್ತಿದ್ದ ಅನೇಕ ಪಂಡಿತರಿದ್ದರು.

ಮೈಸೂರು ನಗರದ ಒಳಗೂ, ಅದರ ಸರಹದ್ದಿನಲ್ಲೂ ಮಹಾರಾಜರು ಆರು ಅನ್ನಛತ್ರಗಳನ್ನು ನಡೆಸುತ್ತಿದ್ದರು. ಇವುಗಳಲ್ಲಿ ನಾಲ್ಕು ಮೈಸೂರಿನಿಂದ ಹೊರಗೆ ಹೋಗುವ ನಾಲ್ಕು ಮುಖ್ಯವಾದ ರಸ್ತೆಗಳ ಬಳಿಯಲ್ಲಿ ಸ್ಥಾಪಿತವಾಗಿದ್ದವು. ಇನ್ನೆರಡು ಊರಿನ ಒಳಗೇ ಇದ್ದವು. ಅನೇಕ ಧರ್ಮ ಸಂಸ್ಥೆಗಳಿಗೆ ಮಹಾರಾಜರು ಕೊಡುಗೈಯಿಂದ ಸಹಾಯ ದ್ರವ್ಯವನ್ನು ಕೊಡುತ್ತಿದ್ದರು. ಮದ್ರಾಸಿನಲ್ಲಿದ್ದ ಅನಾಥಾಲಯವೂ, ಮೈಸೂರಿನಲ್ಲಿದ್ದ ರೋಮನ್ ಕ್ಯಾಥೊಲಿಕ್ ಇಗರ್ಜಿಯೂ ಈ ರೀತಿ ಸಹಾಯದ್ರವ್ಯವನ್ನು ಪಡೆಯುವ ಸಂಸ್ಥೆಗಳಾಗಿದ್ದವು. ಇದಲ್ಲದೇ ಮಹಾರಾಜರು ಒಂದು ಇಂಗ್ಲಿಷ್ ಶಾಲೆಯನ್ನೂ, ಒಂದು ಆಸ್ಪತ್ರೆಯನ್ನೂ ನಡೆಸುತ್ತಿದ್ದರು.

ಕೃಷ್ಣರಾಜ ಒಡೆಯರು ಗತಿಸಿದಾಗ ಅರಮನೆಯಲ್ಲಿ ಏಳು ಇಲಾಖೆಗಳಿದ್ದವು. 1. ಅರಮನೆ; 2. ಚಾರ್ ಕಛೇರಿ; 3. ಅಂಗರಕ್ಷಕರು; 4. ಜಿಲ್ಲಾ ಕಛೇರಿ; 5. ಖಿಲ್ಲೆ ಕಛೇರಿ; 6. ಷಾಗಿರ್ದ್ ಪೇಷಾ ಕಛೇರಿ 7. ಖಜಾನೆಗಳೇ ಈ ಇಲಾಖೆಗಳು.

ಮೇಜರ್ ಇಲಿಯಟ್‌ರವರೂ, ರಂಗಾಚಾರ್ಲುರವರೂ ಮಾಡಬೇಕಾದ ಕಾರ್ಯಗಳು ಮೂರು ಬಗೆಯದಾಗಿದ್ದವು. ಅವು ಯಾವುವೆಂದರೆ ಮಹಾರಾಜ ಸಾಲಗಳನ್ನು ತೀರಿಸುವುದು, ಅವರ ಚರಸ್ಥಿರ ಸ್ವತ್ತುಗಳ ಪಟ್ಟಿಯನ್ನು ಮಾಡುವುದು ಮತ್ತು ಅರಮನೆಯಲ್ಲಿದ್ದ ಇಲಾಖೆಗಳನ್ನು ಪುನರ್ವ್ಯವಸ್ಥೆಗೊಳಿಸಿ ಅವುಗಳ ಗಾತ್ರವನ್ನು ಕಡಿಮೆ ಮಾಡುವುದು.

ಕೂಲಂಕಷವಾಗಿ ಮಹಾರಾಜರು ಮಾಡಿದ ಸಾಲಗಳನ್ನು ಪರಿಶೀಲಿಸಿ ಅವರ ಸಾಲಗಳ ತೀರ್ಪಾಡಿಗಾಗಿ 12,50,460 ರೂಪಾಯಿಗಳನ್ನು ಕೊಡಲಾಯಿತು. ಮೇಜರ್ ಇಲಿಯಟ್‌ರವರು ಸರ್ಕಾರಕ್ಕೆ ಮಾಡಿದ ವರದಿಯಲ್ಲಿ ಈ ಸಾಲಗಳ ಪಟ್ಟಿಯನ್ನು ಸೇರಿಸಿದ್ದಾರೆ. ಈ ಪಟ್ಟಿಯಲ್ಲಿರುವ ಅಂಶಗಳು ಇಂದಿಗೂ ಕುತೂಹಲವನ್ನು ಹುಟ್ಟಿಸತಕ್ಕಂತಹವಾಗಿವೆ. ಸೌದೆ ನಾಗಯ್ಯ ಎಂಬುವನು ಸೌದೆ ಮತ್ತು ಇತರ ಪದಾರ್ಥಗಳ ಸರಬರಾಜಿಗಾಗಿ ತನಗೆ 5810-00 ರೂಪಾಯಿ ಬಾಕಿ ತೀರ್ಮಾನವಾಗಬೇಕು ಎಂದು ಕೇಳಿದ್ದನು. ಅರಮನೆಗೆ ಸರಬರಾಜು ಮಾಡಿದ್ದ ಹೂವುಗಳ ಬಾಕಿ 1125-00 ರೂಪಾಯಿ ಇದ್ದಿತು. ಹಣ್ಣುಗಳಿಗೆ ಕೊಡಬೇಕಾದದು 2000-00 ರೂಪಾಯಿ ಬಾಕಿ ಇದ್ದಿತು. ಅರಮನೆಗೆ ಸರಬರಾಜು ಮಾಡಿದ ಸುಣ್ಣದ ಬಾಕಿ 7-8-0 ರೂಪಾಯಿ ಇದ್ದಿತು.

ಅರಮನೆಯ ಚರಸ್ಥಿರ ಸ್ವತ್ತುಗಳ ಪಟ್ಟಿಯನ್ನು ತಯಾರು ಮಾಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ನಗರದಲ್ಲಿಯೂ ಇತರ ಕಡೆಗಳಲ್ಲಿಯೂ ಇದ್ದ ಅರಮನೆಗಳು, ಮನೆಗಳು, ಜಮೀನುಗಳು, ತೋಟಗಳು ಮತ್ತು ಹುಲ್ಲುಗಾವಲುಗಳ ವಿವರವಾದ ಪಟ್ಟಿಯನ್ನು ತಯಾರಿಸಲಾಯಿತು. ಅಲ್ಲದೇ ಅರಮನೆಯಲ್ಲಿಯೂ ಇತರ ಕಡೆಗಳಲ್ಲಿಯೂ ಇದ್ದ ಪಾತ್ರೆ ಪಡಗಗಳು ಚಿನ್ನ ಬೆಳ್ಳಿ ಮತ್ತು ಆಭರಣಗಳ ಲೆಕ್ಕವನ್ನು ಮಾಡಲಾಯಿತು. ಅವುಗಳನ್ನು ಸುರಕ್ಷಿತವಾಗಿ ಇರಿಸಲು ಏರ್ಪಡಿಸಲಾಯಿತು. ಅವುಗಳ ಒಟ್ಟು ಬೆಲೆಯೇ 33,79,691½ ರೂಪಾಯಿಗಳೆಂದು ನಿರ್ಧರಿಸಲಾಯಿತು. ಈ ಲೆಕ್ಕದಲ್ಲಿ ಅನರ್ಘ್ಯವಾದ ಸಿಂಹಾಸನದ ಬೆಲೆ ಸೇರಿಲ್ಲ.

ಅರಮನೆಯ ಇಲಾಖೆಗಳನ್ನು ಪುನರ್ವ್ಯವಸ್ಥೆ ಮಾಡಿ ಮೂರು ಕಛೇರಿಗಳಾಗಿಯೂ 8 ಉಪಇಲಾಖೆಗಳಾಗಿಯೂ ವಿಂಗಡಿಸಲಾಯಿತು. ಒಟ್ಟು ಆಡಳಿತವನ್ನು ನೋಡುವುದಕ್ಕೆ ಕೇಂದ್ರ ಕಛೇರಿಯನ್ನು ಏರ್ಪಡಿಸಲಾಯಿತು. ಪುನರ್ವ್ಯವಸ್ಥೆಗೊಂಡ ಕಛೇರಿಗಳು—1. ಅರಮನೆ ದಫ್ತರ್ 2. ಖಿಲ್ಲೇ ದಫ್ತರ್ ಮತ್ತು 3. ಜಿಲ್ಲೋ ದಫ್ತರ್‌ಗಳು. ಉಪಇಲಾಖೆಗಳು— 1. ಚಾಮುಂಡಿ ತೊಟ್ಟಿ 2. ಅವಸರದ ಹೋಬಳಿ 3. ಸಮ್ಮುಖದ ಊಳಿಗ, ಖಾಸ್ 4. ಅರಮನೆಯ ಒಳಗಿನ ಸೇವಕರು, ಜನಾನಾ 5. ಅಶ್ವಶಾಲೆ ಮತ್ತು ಗಜಶಾಲೆಗಳು 6. ಕರುಹಟ್ಟಿ 7. ಮರಾಮತ್ 8. ಬಾಗಾಯತಿ ಅಥವಾ ತೋಟಗಳು.

ತೋಷಾಖಾನಾ ಅಥವಾ ಖಜಾನೆ, ಪತ್ರ ವ್ಯವಹಾರ, ಲೆಕ್ಕಗಳು ಅರ ಮನೆಯ ಸರಬರಾಜುಗಳು, ಇವುಗಳನ್ನು ಕೇಂದ್ರ ಕಛೇರಿಯ ಮೇಲ್ವಿಚಾರಣೆಗೆ ವಹಿಸಲಾಯಿತು. ಮಹಾರಾಜರ ಸಂಬಂಧೀಕರು ಗೌರವ ಭಕ್ಷಿಗಳಾಗಿ ಮೂರು ಕಛೇರಿಗಳ ಮುಖ್ಯಾಧಿಕಾರಿಗಳಾಗಿ ನಿಯಮಿಸಲ್ಪಟ್ಟರು. ಈ ಮುಖ್ಯ ಇಲಾಖೆಗಳಿಗೆ ಕಛೇರಿ ಎಂದು ಕರೆಯಲಾಯಿತು. ಇತರ ಸಣ್ಣ ವಿಭಾಗಗಳನ್ನು ಇಲಾಖೆಗಳೆಂದು ಕರೆದು ಅವುಗಳ ಆಡಳಿತವನ್ನು ನಡೆಸುವುದಕ್ಕೆ ಗುರುಕಾರರನ್ನು ನಿಯಮಿಸಲಾ ಯಿತು. ಈ ಗುರುಕಾರರು ಸಂಬಳವನ್ನು ತೆಗೆದುಕೊಳ್ಳುವ ಅಧಿಕಾರಿಗಳಾಗಿದ್ದರು.

ಅರಮನೆಯ ದಾಖಲೆಗಳನ್ನು ಸಂರಕ್ಷಿಸುವುದೂ, ಅದರ ಆಡಳಿತಕ್ಕೆ ಸಂಬಂಧ ಪಟ್ಟ ಕಾಗದ ಪತ್ರಗಳನ್ನು ನೋಡಿಕೊಳ್ಳುವುದೂ ಅರಮನೆ ದಫ್ತರಿನ ಕಾರ್ಯವೆಂದು ಗೊತ್ತುಪಡಿಸಲಾಯಿತು. ಇದೇ ಕಛೇರಿಯು ಮಹಾರಾಜರ ವಂಶವೃಕ್ಷವನ್ನು ಕಾಪಾಡಿಕೊಂಡು ಬರುವ ಜವಾಬ್ದಾರಿಯನ್ನು ವಹಿಸತಕ್ಕದ್ದೆಂದೂ, ಅರಮನೆ ಯೊಳಗೆ ನಡೆಯಬೇಕಾದ ಸಮಾರಂಭಗಳಲ್ಲಿ ಯಾರು ಯಾರಿಗೆ ಯಾವ ಯಾವ ಸ್ಥಾನಮಾನಗಳು ಸಲ್ಲಬೇಕು, ಅನುಸರಿಸಬೇಕಾದ ಪದ್ಧತಿಗಳಾವುವು ಎಂಬುದನ್ನು ನಿರ್ಧರಿಸತಕ್ಕ ಕರ್ತವ್ಯವೂ ಅದಕ್ಕೆ ಸೇರಿದುದೆಂದೂ ಗೊತ್ತುಪಡಿಸಲಾಯಿತು. ಕೋಟೆ ಅರಮನೆಗಳ ರಕ್ಷಣೆಗೆ ಕಾವಲುಗಾರರನ್ನು ಒದಗಿಸುವ ಜವಾಬ್ದಾರಿ ಯನ್ನೂ, ಮಹಾರಾಜರಿಗೆ ಮತ್ತು ಇತರರಿಗೆ ಅಂಗರಕ್ಷಕರನ್ನು ಗೊತ್ತುಪಡಿಸುವ ಜವಾಬ್ದಾರಿಯನ್ನೂ ಖಿಲ್ಲೇ ಕಛೇರಿಗೆ ವಹಿಸಲಾಯಿತು. ಅರಮನೆಗೆ ಸಂಬಂಧಪಟ್ಟ ಮೆರವಣಿಗೆಗಳ ವ್ಯವಸ್ಥೆಯನ್ನು ನೋಡುವುದೂ, ಪ್ಯಗಾವಲಿನ ಭಟರನ್ನು ಒದ ಗಿಸುವುದೂ, ರಾಜೇವಾರ ಮತ್ತು ಬಹಲೇ ಪಡೆಗಳ ಮೇಲ್ವಿಚಾರಣೆಯನ್ನು ಮಾಡು ವುದೂ ಜಿಲ್ಲೋ ಕಛೇರಿಯ ಕರ್ತವ್ಯವೆಂದು ಗೊತ್ತುಪಡಿಸಲಾಯಿತು. ಅರಮನೆಯ ಒಳಗೆ ಕಾವಲಿನ ಕೆಲಸವನ್ನು ರಾಜೇವಾರರು ಮಾಡುತ್ತಿದ್ದರು. ಅಲ್ಲಿಗೆ ಮಿಕ್ಕ ಕಾವಲುಗಾರರಿಗೆ ಪ್ರವೇಶವಿರಲಿಲ್ಲ. ಬಹಲಿಯವರು ಅರಮನೆಯ ಹೊರಗಡೆ ಕಾವಲಿನ ಕೆಲಸವನ್ನು ಮಾಡುವವರಾಗಿದ್ದರು. ಅವರು ಭರ್ಜಿಗಳನ್ನು ಹಿಡಿ ಯುತ್ತಿದ್ದರು. ಅಲ್ಲದೇ ಮಹಾರಾಜರೋ ಅವರ ಬಂಧುಗಳೋ ಹೊರಗೆ ಹೊರಟಾಗ ಅವರ ಅಂಗರಕ್ಷಕರಾಗಿ ಬಹಲಿಯವರು ಹೋಗುತ್ತಿದ್ದರು. ಅನೇಕ ಕದನಗಳಲ್ಲಿ ಭಾಗವಹಿಸಿದ್ದ ಬಹಲಿಯವರು ತಮ್ಮ ಪರಾಕ್ರಮಕ್ಕೆ ಹೆಸರಾಗಿದ್ದರು. ಅವರು ಬೇಟೆಯಲ್ಲಿ ಮಹಾಚತುರರೆಂದೂ, ಧೈರ್ಯಶಾಲಿಗಳೆಂದೂ, ಎಂತಹ

ಕಷ್ಟಬಂದರೂ ಸಹಿಸುವ ದಾರ್ಢ್ಯವುಳ್ಳವರೆಂದೂ, ತಮ್ಮ ಯಜಮಾನರಿಗೆ ಸಂಪೂರ್ಣ ನಿಷ್ಠೆಯಿಂದ ನಡೆದುಕೊಳ್ಳುವರೆಂದೂ ಹೆಸರಾಗಿದ್ದರು.

ಮಹಾರಾಜರ ಆಸ್ಥಾನದಲ್ಲಿ ಆಸ್ಥಾನಿಕರಾಗಿದ್ದ ದೊಡ್ಡ ಮನುಷ್ಯರಿಗೆ ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ಮೂಸಾಹೀಬ್ ಎಂಬ ಆಸ್ಥಾನಿಕ ವರ್ಗವನ್ನು ಮುಂದುವರಿಸಲಾಯಿತು. ದರ್ಬಾರಿನಲ್ಲಿಯೂ ಇತರ ಮುಖ್ಯ ಸಮಾರಂಭಗಳಲ್ಲಿಯೂ ಅವರಿಗೆ ವಿಶೇಷಸ್ಥಾನಮಾನಗಳನ್ನು ಕೊಡಲಾಗುತ್ತಿದ್ದಿತು.

ಅರಮನೆಯ ಸಿಬ್ಬಂದಿ ವರ್ಗವನ್ನು ಕಡಿಮೆಮಾಡಿ, ಆಗುತ್ತಿದ್ದ ಖರ್ಚನ್ನು ತಗ್ಗಿಸುವುದಕ್ಕಾಗಿ ವಿಶೇಷ ಪ್ರಯತ್ನವನ್ನು ಮಾಡಲಾಯಿತು. ಅರಮನೆಯಲ್ಲಿ 9687 ನೌಕರರು ಇದ್ದರು. ಅವರ ಸಂಖ್ಯೆಯನ್ನು 3196ಕ್ಕೆ ಇಳಿಸಲಾಯಿತು. ಇದರಿಂದ ಅರಮನೆಯ ನೌಕರರಿಗೆ ಸಂಬಳಸಾರಿಗೆಗಳಿಗೆ ಆಗುತ್ತಿದ್ದ ಖರ್ಚು ತಿಂಗಳಿಗೆ 19,280.00 ರೂಪಾಯಿಗಳಿಗೆ ಇಳಿಯಿತು. ಉಳಿದವರಲ್ಲಿ ಕೆಲವರಿಗೆ ಸರ್ಕಾರದ ಇಲಾಖೆಗಳಲ್ಲಿ ಕೆಲಸವನ್ನು ಕೊಡಲಾಯಿತು. ಇತರರಿಗೆ ಹೆಚ್ಚಿನ ವಿಶ್ರಾಂತಿ ವೇತನವನ್ನೂ, ಇತರ ಸೌಲಭ್ಯವನ್ನೂ ಕಲ್ಪಿಸಿ ನಿವೃತ್ತಿ ಮಾಡಲಾಯಿತು. ಮೇಜರ್ ಇಲಿಯಟ್‌ರವರು ಮಹಾರಾಜರು ನಡೆಸುತ್ತಿದ್ದ ಎಲ್ಲ ಅನ್ನ ಛತ್ರಗಳನ್ನು ನಿಲ್ಲಿಸಿ ಅವುಗಳಿಗೆ ಖರ್ಚಾಗುತ್ತಿದ್ದ ದ್ರವ್ಯದಿಂದ ಒಂದು ದೊಡ್ಡ ಅನ್ನ ಛತ್ರವನ್ನೂ, ನಿರ್ಗತಿಕರಿಗಾಗಿ ಒಂದು ಗೃಹವನ್ನೂ ಮೈಸೂರು ಪಟ್ಟಣದಲ್ಲಿ ಮಹಾರಾಜರ ನೆನಪಿಗಾಗಿ ಏರ್ಪಡಿಸಬೇಕೆಂದು ಸೂಚಿಸಿದರು. ಆದರೆ ಭಾರತ ಸರ್ಕಾರ ಈ ಸೂಚನೆಯನ್ನು ಒಪ್ಪಲಿಲ್ಲ. ಮೈಸೂರಿನಲ್ಲಿ ಆಗಲೇ ಮಹಾರಾಜರ ಆಶ್ರಯದಲ್ಲಿ ನಡೆಯುತ್ತಿದ್ದ ಅನ್ನ ಛತ್ರಗಳೊಂದಿಗೆ ಮತ್ತೊಂದು ಅನ್ನ ಛತ್ರವನ್ನು ಸ್ಥಾಪಿಸಬೇಕೆಂದು ಅದು ಸೂಚಿಸಿತು. ಮಹಾರಾಜರು ನಡೆಸುತ್ತಿದ್ದ ಆಂಗ್ಲ ಶಾಲೆಯನ್ನು ವಿದ್ಯಾಭ್ಯಾಸದ ಇಲಾಖೆಗೂ, ಆಸ್ಪತ್ರೆಯನ್ನು ವೈದ್ಯಕೀಯ ಇಲಾಖೆಗೂ ವಹಿಸಲಾಯಿತು. ವಿದ್ಯಾರ್ಥಿಗಳಿಗೆ ಶುಲ್ಕವನ್ನು ವಿಧಿಸಲಾಯಿತು. ಮೈಸೂರಿನ ಕೋಟೆಯಲ್ಲಿ ಉಪಯೋಗಕ್ಕೆ ಬರದೇ ಬಿದ್ದಿದ್ದ ಫಿರಂಗಿಗಳನ್ನೂ, ಮದ್ದುಗುಂಡುಗಳನ್ನೂ ನಾಶಮಾಡಲಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವರ್ಷಕ್ಕೆ 16 ಲಕ್ಷ ರೂಪಾಯಿ ಅರಮನೆಯ ಒಟ್ಟು ಖರ್ಚಾಗಿದ್ದಿತು. ಇದನ್ನು ಎಂಟೂವರೆ ಲಕ್ಷ ರೂಪಾಯಿಗಳಿಗೆ ಇಳಿಸಲಾಯಿತು.

ಕೃಷ್ಣರಾಜ ಒಡೆಯರ್ ಕಾಲದಲ್ಲಿ ಅರಮನೆಯ ನೌಕರರಿಗೆ ಅವರ ವೇತನವನ್ನು ಕಂಠೀರಾಯರ ಪಗೋಡಗಳಲ್ಲಿಯೂ, ಫನಾಮುಗಳಲ್ಲಿಯೂ ಕೊಡಲಾಗುತ್ತಿದ್ದಿತು. ಎಲ್ಲ ವೇತನಗಳನ್ನೂ ರೂಪಾಯಿಗಳಲ್ಲಿ ಕೊಡುವಂತೆ ವ್ಯವಸ್ಥೆ ಮಾಡಲಾಯಿತು.

1799ರ ಕೌಲಿನಂತೆ ಸಂಸ್ಥಾನದ ನಿವ್ವಳ ಆದಾಯದ $\frac{1}{5}$ ಭಾಗವನ್ನು ಮಹಾರಾಜರಿಗೆ ರಾಜಧನವಾಗಿ ಕೊಡಲಾಗುತ್ತಿದ್ದಿತು. ಬ್ರಿಟಿಷ್ ಸರ್ಕಾರದ ಭಾರತ ಕಾರ್ಯದರ್ಶಿಯವರು ಇನ್ನು ಮುಂದೆ ಈ ರಾಜಧನವನ್ನು ಕೊಡಬೇಕಾಗಿಲ್ಲವೆಂದು ಆಜ್ಞೆ ಮಾಡಿದರು. ಆದರೆ ರಾಜಕುಮಾರರಿಗೂ, ಅವರ ಬಂಧುವರ್ಗಕ್ಕೂ, ಆಶ್ರಿತ ವರ್ಗಕ್ಕೂ ಅಗತ್ಯವಾದ ದ್ರವ್ಯ ಸಹಾಯವನ್ನು ಕೊಡುವಂತೆ ಏರ್ಪಡಿಸಲಾಯಿತು. ಮೇಜರ್ ಇಲಿಯಟ್‌ರವರೂ, ರಂಗಾಚಾರ್ಲುರವರೂ ತಮ್ಮ ಕಾರ್ಯವನ್ನು ಆರು ತಿಂಗಳ ಅವಧಿಯಲ್ಲಿ ಮುಗಿಸಿದರು. ಅರಮನೆಯ ಖರ್ಚನ್ನು ಕಡಿಮೆ ಮಾಡಲು ಸಾವಿರಾರು ನೌಕರರನ್ನು ಕೆಲಸದಿಂದ ನಿವೃತ್ತಿ ಮಾಡಲಾಯಿತಷ್ಟೆ. ಇದರಿಂದ ಅನೇಕ ಜನರ ಅಸಮಾಧಾನ, ಕೋಪಗಳಿಗೆ ರಂಗಾಚಾರ್ಲುರವರು ಗುರಿಯಾಗಬೇಕಾಯಿತು. ಕೆಲಸದಿಂದ ನಿವೃತ್ತಿ ಮಾಡಿದಾಗ ಅಂತಹವರಿಗೆ ಆದ ಕಷ್ಟನಷ್ಟಗಳಿಂದ ರಂಗಾಚಾರ್ಲುರವರ ಮನಸ್ಸು ಕರಗಿದ್ದುಂಟು. ಅವರ ಪರಿಸ್ಥಿತಿಯನ್ನು ನೋಡಿ ಅವರಿಗೆ ಕನಿಕರವಾಗಿದ್ದುಂಟು. ಆದರೆ ಕರ್ತವ್ಯ ದೃಷ್ಟಿಯಿಂದ ಇಂತಹ ಭಾವನೆಗಳಿಗೆ ಎಡೆಗೊಡುವ ಅವಕಾಶ ಅವರಿಗೆ ಹೆಚ್ಚಾಗಿ ಇರಲಿಲ್ಲ.

ಮೇಜರ್ ಇಲಿಯಟ್‌ರವರೂ, ಮೈಸೂರಿನ ಬ್ರಿಟಿಷ್ ಆಡಳಿತಗಾರರಾದ ಬೌರಿಂಗ್‌ರವರೂ, ಇತರ ಅನೇಕ ದೊಡ್ಡ ಬ್ರಿಟಿಷ್ ಅಧಿಕಾರಿಗಳೂ ರಂಗಾಚಾರ್ಲುರವರ ವ್ಯವಹಾರಕೌಶಲ್ಯ, ತೀಕ್ಷ್ಣಬುದ್ಧಿ, ವಿವೇಚನಾಶಕ್ತಿಗಳನ್ನು ಮೆಚ್ಚಿಕೊಂಡರು. ರಂಗಾಚಾರ್ಲುರವರು ತಮ್ಮ ಕಾರ್ಯವನ್ನು ಶೀಘ್ರವಾಗಿ ಮಾಡಿದುದು ಅವರ ಶ್ಲಾಘನೆಗೆ ಪಾತ್ರವಾಯಿತು.

ಮೇಜರ್ ಇಲಿಯಟ್‌ರವರು ತಮ್ಮ ವರದಿಯಲ್ಲಿ ಅದುವರೆಗೆ ನಿರ್ವಹಿಸಿದ ಕೆಲಸದಲ್ಲಿ ರಂಗಾಚಾರ್ಲುರವರು ನೀಡಿದ ಸಹಕಾರವನ್ನು ತುಂಬಾ ಬೆಲೆಯುಳ್ಳದ್ದೆಂದು ಶ್ಲಾಘಿಸಿ ಅವರ ಅವಿರತ ದುಡಿಮೆ, ಸಾಮರ್ಥ್ಯ, ತಾಳ್ಮೆ, ವಿವೇಚನೆ

ಗಳಿಂದ ಕೆಲಸವು ಸುಗಮವಾಗಿ ಸಾಗಿ, ದೂರುಗಳಿಗೆ ಬಹುಮಟ್ಟಿಗೆ ಅವಕಾಶವಿಲ್ಲದಂತೆ ಆಯಿತೆಂದು ಹೇಳಿದ್ದಾರೆ.

ತಮ್ಮ ಅಧಿಕಾರವನ್ನು ಬಿಡುವುದಕ್ಕೆ ಮುಂಚೆ ಮೇಜರ್ ಇಲಿಯಟ್‌ರವರು ರಂಗಾಚಾರ್ಲುರವರ ಸೇವೆಯನ್ನು ಮತ್ತೆ ಸ್ಮರಿಸಿಕೊಂಡಿದ್ದಾರೆ. ತಮ್ಮ ಅನಾರೋಗ್ಯದ ಕಾರಣದಿಂದ ತಾವು ತಮ್ಮ ಕೆಲಸದಿಂದ ನಿವೃತ್ತರಾಗಬೇಕಾಗಿದೆ. ಆದ್ದರಿಂದ ಅರಮನೆಯ ಆಡಳಿತಕ್ಕೆ ಸಂಬಂಧಪಟ್ಟಂತೆ ಏರ್ಪಡಿಸಿದ ಹೊಸ ವ್ಯವಸ್ಥೆಯನ್ನು ಸ್ವಲ್ಪ ಕಾಲವಾದರೂ ವೀಕ್ಷಿಸುವ ಅವಕಾಶ ತಮಗೆ ಇಲ್ಲದೇ ಹೋಯಿತು. ಆದರೆ ರಂಗಾಚಾರ್ಲುರವರು ಉಳಿದಿರುವ ಕೆಲಸವನ್ನು ಪೂರೈಸುವ ಬಗೆಗೂ ಹಿಂದಿನ ತೀರ್ಪಾಡಿನ ವಿಷಯವಾಗಿ ವಿವರಗಳನ್ನು ಕೊಡುವ ಬಗೆಗೂ, ಯಾವ ತತ್ವಗಳನ್ನು ಅನುಸರಿಸಿ ಆ ತೀರ್ಪಾಡನ್ನು ಮಾಡಲಾಯಿತೋ ಆ ತತ್ವಗಳ ಬಗೆಗೂ, ಮಾಹಿತಿಗಳನ್ನು ಕೊಡುವುದಕ್ಕೆ ಸಮರ್ಥರಾಗಿದ್ದಾರೆ. ಸರ್ಕಾರದ ಅಧಿಕಾರಿಗಳಾಗಿ ರಂಗಾಚಾರ್ಲುರವರು ತೋರಿಸಿರುವ ಕಾರ್ಯಸಾಮರ್ಥ್ಯವು ತಮ್ಮ ಮೆಚ್ಚುಗೆಗೆ ಪಾತ್ರವಾಗಿದೆ. ಅವರಿಗೆ ಸರ್ಕಾರದಲ್ಲಿ ದೊಡ್ಡ ಹುದ್ದೆಗಳನ್ನು ನಿರ್ವಹಿಸುವುದಕ್ಕೆ ತಕ್ಕ ಅರ್ಹತೆ ಇದೆ. ಸೂಕ್ಷ್ಮವೂ, ಕ್ಲಿಷ್ಟವೂ, ಶ್ರಮಸಾಧ್ಯವೂ ಆದ ಈ ತನಿಖೆಯಲ್ಲಿ ರಂಗಾಚಾರ್ಲುರವರು ಶಕ್ತಿಸಾಮರ್ಥ್ಯಗಳಿಂದಲೂ, ವಿವರಗಳ ಬಗೆಗೆ ಪೂರ್ಣವಾದ ಮಾಹಿತಿಯಿಂದಲೂ ಕಾರ್ಯನಾಡಿದ್ದಾರೆ. ಅದಕ್ಕೆ ಅವರಿಗೆ ಸಲ್ಲಬೇಕಾದ ಮನ್ನಣೆ ಸಲ್ಲತಕ್ಕದ್ದು ಎಂದು ಅವರು ಹೇಳಿದ್ದಾರೆ.

ಅರಮನೆಯ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸಿದಾಗ ರಂಗಾಚಾರ್ಲುರವರು ಎಂತಹ ಸನ್ನಿವೇಶಗಳನ್ನು ಎದುರಿಸಬೇಕಾಯಿತು ಎಂಬುದಕ್ಕೆ ಒಂದು ನಿದರ್ಶನವನ್ನು ಇಲ್ಲಿ ಕೊಡಬಹುದು. ಈ ಪ್ರಸಂಗ ಸುಪ್ರಸಿದ್ಧ ಸಂಗೀತಗಾರರಾದ ಮೈಸೂರು ವಾಸುದೇವಾಚಾರ್ಯರಿಗೆ ಸಂಬಂಧಪಟ್ಟದ್ದು. ಅವರಿಗೆ ಮೂರು ವರ್ಷಗಳಾಗಿದ್ದಾಗ ಅಸ್ಥಾನದಲ್ಲಿ ಸಂಸ್ಕೃತ ವಿದ್ವಾಂಸರಾಗಿದ್ದ ಅವರ ತಂದೆಯವರು ತೀರಿಹೋದರು. ಇದರಿಂದ ಅರಮನೆಯಿಂದ ಬರುತ್ತಿದ್ದ ವೇತನ ನಿಂತುಹೋಯಿತು. ಅವರ ಪತ್ನಿ ಕೃಷ್ಣಾಬಾಯಿಯವರು, ಚಿಕ್ಕ ಮಗು ವಾಸುದೇವಾಚಾರ್ಯರು ಮತ್ತು ಒಬ್ಬ ಹೆಣ್ಣು ಮಗು ನಿರ್ಗತಿಕರಾಗಿ ನಿಂತರು. ವಾಸುದೇವಾಚಾರ್ಯರ ತಾಯಿಯ ತಂದೆಯವರಾದ ಗೋಪಾಲಾಚಾರ್ಯರು ನಿಸ್ಸಹಾಯರಾದ

ತಮ್ಮ ಮಗಳಿಗೂ, ಮೊಮ್ಮಕ್ಕಳಿಗೂ ಆಶ್ರಯವನ್ನು ಕೊಟ್ಟರು. ಅರಮನೆಯಿಂದ ಬರುತ್ತಿದ್ದ ವೇತನವನ್ನು ವಾಸುದೇವಾಚಾರ್ಯರ ಹೆಸರಿಗೆ ಮಾಡಿಸಿಕೊಡಬೇಕೆಂದು ಅವರಿಗೆ ತೋರಿತು. ತಮ್ಮ ಊರಿನಿಂದ ಅವರು ಮೈಸೂರಿಗೆ ಈ ಕೆಲಸಕ್ಕಾಗಿ ಪ್ರಯಾಣ ಬೆಳಸಿದರು, ರಂಗಾಚಾರ್ಲುರವರ ಕಛೇರಿಗೆ ಹೋಗಿ, ಅಲ್ಲಿ ಅವರ ಭೇಟಿಯನ್ನು ಪಡೆಯಲು ಪ್ರಯತ್ನಿಸಿದರು. ಅನೇಕ ವಾರಗಳಾದರೂ ಅವರಿಗೆ ಭೇಟಿ ದೊರೆಯಲಿಲ್ಲ. ರಂಗಾಚಾರ್ಲುರವರ ಮನೆಯಲ್ಲೂ, ಕಛೇರಿಯಲ್ಲೂ ನೂರಾರು ಜನರು ಕಾದಿರುತ್ತಿದ್ದರು. ಅರಮನೆಯಲ್ಲಿ ತಮ್ಮ ಕೆಲಸವನ್ನು ಉಳಿಸಿಕೊಳ್ಳಬೇಕೆಂದು ಅವರನ್ನು ಕೇಳುವುದಕ್ಕೆ ಬಂದವರೂ, ಇತರ ರೀತಿಯಲ್ಲಿ ಅವರ ಸಹಾಯವನ್ನು ಅಪೇಕ್ಷಿಸುವವರೂ ಈ ಗುಂಪಿನಲ್ಲಿರುತ್ತಿದ್ದರು. ಹೀಗೆ ಹಗಲಿರುಳೆನ್ನದೆ ತಮ್ಮನ್ನು ನೋಡಬೇಕೆಂದು ಜನರು ಕಾಡಿಸುತ್ತಿದ್ದರಿಂದ ಏನು ಕಾರ್ಯವನ್ನು ಮಾಡುವುದೂ ರಂಗಾಚಾರ್ಲುರವರಿಗೆ ದುಸ್ಸಾಧ್ಯವಾಯಿತು. ಆದ್ದರಿಂದ ಸಂಬಂಧಪಟ್ಟ ಕಾಗದ ಪತ್ರಗಳನ್ನು ನೋಡಿ ವಿಷಯವನ್ನು ತೀರ್ಮಾನಮಾಡುವುದಾಗಿಯೂ, ಯಾರನ್ನೂ ಮುಖತಃ ನೋಡುವುದಿಲ್ಲವೆಂದೂ ಅವರು ಆಜ್ಞೆ ಮಾಡಿದ್ದರು. ಗೋಪಾಲಾಚಾರ್ಯರಾದರೋ ರಂಗಾಚಾರ್ಲುರವರ ಕಛೇರಿಯಲ್ಲಿ ಪ್ರತಿದಿನವೂ ಕಾಯುತ್ತಿದ್ದರು. ಒಂದು ದಿನ ರಂಗಾಚಾರ್ಲುರವರು ಅವರನ್ನು ಒಳಗೆ ಬರಬೇಕೆಂದು ಹೇಳಿಕಳುಹಿಸಿದರು. ಸಣ್ಣ ಮಗುವಾದ ವಾಸುದೇವಾಚಾರ್ಯರನ್ನು ಎತ್ತಿಕೊಂಡು ಆ ವೃದ್ಧರು ಒಳಗೆ ಹೋದರು. ಅವರು ರಂಗಾಚಾರ್ಲುರವರಿಗೆ ಬಾಲಕನ ತಂದೆಯಾದ ಸುಬ್ರಹ್ಮಣ್ಯಾಚಾರ್ಯರು ಸಂಸ್ಕೃತ ವಿದ್ವಾಂಸರು, ಅವರ ವಿಷಯದಲ್ಲಿ ಕೃಷ್ಣರಾಜ ಒಡೆಯರಿಗೆ ತುಂಬಾ ಗೌರವವಿದ್ದಿತು. ಇದ್ದಕ್ಕಿದ್ದಂತೆಯೇ ಸುಬ್ರಹ್ಮಣ್ಯಾಚಾರ್ಯರು ಗತಿಸಿದುದರಿಂದ ಅವರ ಹೆಂಡತಿ ಮಕ್ಕಳು ನಿರ್ಗತಿಕರಾದರು. ಆದ್ದರಿಂದ ಅರಮನೆಯಿಂದ ಅವರಿಗೆಸಲ್ಲುತ್ತಿದ್ದ ವೇತನವನ್ನು ವಾಸುದೇವಾಚಾರ್ಯರಿಗೆಮಾಡಿಸಿಕೊಡಬೇಕು ಎಂದು ಹೇಳಿದರು. ರಂಗಾಚಾರ್ಲುರವರು ಗೋಪಾಲಾಚಾರ್ಯರು ಹೇಳಿದುದನ್ನೆಲ್ಲ ಬಹು ತಾಳ್ಮೆಯಿಂದ ಕೇಳಿ, ಪ್ರಕೃತ ಸಂದರ್ಭದಲ್ಲಿ ಅರಮನೆಯಿಂದ ಯಾವ ಸಹಾಯವನ್ನೂ ಮಾಡಲಾಗುವುದಿಲ್ಲವೆಂದು ಉತ್ತರಕೊಟ್ಟರು.

ಗೋಪಾಲಾಚಾರ್ಯರಾದರೋ ಸುಲಭವಾಗಿ ತಾವು ಹಿಡಿದ ಪಟ್ಟನ್ನು ಬಿಡತಕ್ಕವರಾಗಿರಲಿಲ್ಲ. ಮತ್ತೆ ಅವರು ಪ್ರತಿದಿನವೂ ರಂಗಾಚಾರ್ಲುರವರ ಕಛೇರಿಯಲ್ಲಿ ಕಾಯತೊಡಗಿದರು. ಕೆಲವು ದಿನಗಳಾದ ಮೇಲೆ ರಂಗಾಚಾರ್ಲುರವರು ಮತ್ತೆ

ಅವರಿಗೆ ಭೇಟಿಯನ್ನು ಕೊಟ್ಟರು. ಯಾವುದೋ ವಿಷಯವಾಗಿ ಗಾಢವಾಗಿ ಆಲೋಚನೆ ಮಾಡುತ್ತಿದ್ದ ರಂಗಾಚಾರ್ಲುರವರು ಗೋಪಾಲಾಚಾರ್ಯರನ್ನು ನೋಡಿದೊಡನೆಯೇ ಕೋಪಗೊಂಡರು. "ನೀವು ನನ್ನನ್ನು ನಿಮ್ಮ ಸಾಲಗಾರ ನೆಂಬಂತೆ ಪೀಡಿಸುತ್ತಿದ್ದೀರಿ. ಮೊದಲೇ ನಿಮಗೆ ಏನು ಸಹಾಯಮಾಡುವುದಕ್ಕೂ ಆಗುವುದಿಲ್ಲ ಎಂದು ಹೇಳಲಿಲ್ಲವೇ? ಇಲ್ಲಿಂದ ಹೊರಡಿ. ಮತ್ತೆ ಕಾಲಿಡಬೇಡಿ" ಎಂದರು. ಈ ಮಾತುಗಳಿಂದ ವೃದ್ಧರ ಆತ್ಮಗೌರವಕ್ಕೆ ಘಾತವಾಯಿತು. ಅವರಿಗೆ ತುಂಬಾ ಕೋಪ ಬಂದಿತು. ಅವರು "ಸ್ವಾಮಿ, ಒಬ್ಬ ಮನುಷ್ಯನ ವಯಸ್ಸನ್ನೂ ಅವನು ಯಾರು, ಏನು ಎಂಬುದನ್ನೂ ಲೆಕ್ಕಿಸದೇ ಹೀಗೆ ತಾವು ರೇಗಿ ಮಾತನಾಡ ಬಾರದು. ಸ್ವಲ್ಪ ತಾಳ್ಮೆ ಕಲಿಯಿರಿ, ಅದಕ್ಕಿಂತ ಮುಖ್ಯವಾಗಿ ನಾಲಿಗೆಯನ್ನು ಬಿಗಿ ಹಿಡಿಯುವುದನ್ನು ಕಲಿಯಿರಿ. ಮತ್ತೆ ನಿಮ್ಮ ಮುಖವನ್ನು ಕೂಡ ನೋಡುವುದಿಲ್ಲ" ಎಂದು ಹೇಳಿ ಕೂಡಲೇ ಜಾಗವನ್ನು ಬಿಟ್ಟು ಹೊರಟುಹೋದರು. ಆ ದಿನ ಸಾಯಂಕಾಲ ರಂಗಾಚಾರ್ಲುರವರು ತಮ್ಮ ಕಛೇರಿಯಿಂದ ನೇರವಾಗಿ ಗೋಪಾಲಾ ಚಾರ್ಯರು ಇಳಿದುಕೊಂಡಿದ್ದ ಸ್ಥಳಕ್ಕೆ ಹೋದರು. ಅವರನ್ನು ಕಂಡು "ನಿಮ್ಮ ಮೊಮ್ಮಗನಿಗೆ ತಿಂಗಳಿಗೆ 15ಹಣ(4½ ರೂಪಾಯಿ) ವೇತನವನ್ನು ಏರ್ಪಡಿಸಿದ್ದೇನೆ. ನಾನು ಕೆಲಸದಲ್ಲಿ ಮಗ್ನನಾಗಿದ್ದೆ. ನನ್ನ ಮನಸ್ಸು ವ್ಯಗ್ರವಾಗಿತ್ತು. ಒರಟಾಗಿ ಮಾತನಾಡಿದೆ. ನನ್ನನ್ನು ಕ್ಷಮಿಸಿ" ಎಂದು ಹೇಳಿದರು. ಅವರು ವಾಸುದೇವಾ ಚಾರ್ಯರನ್ನು ಕರೆಸಿ "ಈ ಹುಡುಗ ತಂದೆಗಿಂತ ದೊಡ್ಡ ವಿದ್ವಾಂಸನಾಗಲಿ, ಕೀರ್ತಿ ವಂತನಾಗಲಿ ಎಂದು ಹರಸಿ ಹೊರಟುಹೋದರು.".

ನವೆಂಬರ್ 1868ರ ವೇಳೆಗೆ ಅರಮನೆಯ ವ್ಯವಹಾರಗಳನ್ನು ತಹಬಂದಿಗೆ ತರುವ, ಮಹಾರಾಜರ ಆಸ್ತಿಗಳ ಪಟ್ಟಿಯನ್ನು ತಯಾರಿಸುವ, ಅವರ ಸಾಲ ಗಳನ್ನು ತೀರಿಸುವ ಕಾರ್ಯ ಮುಗಿಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರರಾದ ಚಾಮರಾಜೇಂದ್ರ ಒಡೆಯರು ಇನ್ನೂ ಬಾಲಕರಾಗಿದ್ದ ಕಾರಣ ಅವರನ್ನು ನೋಡಿಕೊಳ್ಳಲೂ, ಅವರ ವ್ಯವಹಾರಗಳ ಮೇಲ್ವಿಚಾರಣೆಯನ್ನು ಮಾಡಲೂ, ಅವರು ಮುಂದೆ ರಾಜ್ಯದ ಒಡೆಯರಾಗುವವರಾದುದರಿಂದ ಅದಕ್ಕೆ ತಕ್ಕ ರೀತಿಯಲ್ಲಿ ಅವರಿಗೆ ಶಿಕ್ಷಣ ಕೊಡುವಂತೆ ಏರ್ಪಡಿಸಲೂ ಲೆಫ್ಟಿನೆಂಟ್ ಕರ್ನಲ್ ಜಿ. ಹೈನ್ಸ್‌ರವರನ್ನು ಭಾರತ ಸರ್ಕಾರದವರು ಪೋಷಕರಾಗಿ ನಿಯಮಿಸಿ ದರು. ಭಾರತ ಸರ್ಕಾರದವರು ಈ ಸಂದರ್ಭದಲ್ಲಿ ಮೈಸೂರಿನ ಬ್ರಿಟಿಷ್

ಆಡಳಿತಾಧಿಕಾರಿಗೆ ಬರೆದ ಪತ್ರದಲ್ಲಿ ಲೆಫ್ಟಿನೆಂಟ್ ಕರ್ನಲ್ ಹೈನ್ಸ್‌ರವರ ಸಹಾಯಕರಾಗಿ ಸಮರ್ಥರಾದ ದೇಶೀಯರೊಬ್ಬರನ್ನು ನಿಯಮಿಸುವುದು ಸೂಕ್ತವೆಂದೂ, ಆ ಹುದ್ದೆಗೆ ರಂಗಾಚಾರ್ಲುರವರು ಅರ್ಹರೆಂದೂ ಸೂಚಿಸಿದರು. ಇದರಂತೆ ರಂಗಾಚಾರ್ಲುರವರನ್ನು ಹೈನ್ಸ್‌ರವರ ಸಹಾಯಕರಾಗಿ ನೇಮಕ ಮಾಡಲಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರು 1867ನೇ ಇಸವಿಯಲ್ಲಿ ವೈಸ್‌ರಾಯರಿಗೆ ಬರೆದ ಕಾಗದದಲ್ಲಿ ಹೈನ್ಸ್‌ರವರನ್ನು ತಮ್ಮ ದತ್ತುಪುತ್ರರ ಪೋಷಕರನ್ನಾಗಿ ನಿಯಮಿಸಬೇಕೆಂದು ಸೂಚಿಸಿದ್ದರು. ಆ ಪತ್ರದಲ್ಲಿ ಅವರು ಹೀಗೆ ಹೇಳಿದ್ದಾರೆ. " ನನ್ನ ಮಗ ಚಾಮರಾಜೇಂದ್ರ ಒಡೆಯರ್ ದೇವರ ದಯದಿಂದ 5ನೇ ವರ್ಷದಲ್ಲಿ ಕಾಲಿಟ್ಟಿದ್ದಾನೆ. ನನ್ನ ಬಾಲ್ಯದಲ್ಲಿಯೂ, ಯೌವನದಲ್ಲಿಯೂ ನನಗೆ ದೊರೆತುದಕ್ಕಿಂತ ಉತ್ತಮವಾದ ಶಿಕ್ಷಣವು ಇವನಿಗೆ ದೊರೆಯಬೇಕೆಂಬುದು ನನ್ನ ಅಭಿಲಾಷೆ. ಇನ್ನು ನಿಧಾನ ಮಾಡುವುದು ಸೂಕ್ತವಲ್ಲವಾದುದರಿಂದಲೂ, ಇದೇ ಸರಿಯಾದ ಸಮಯವಾದುದರಿಂದಲೂ ಬೆಂಗಳೂರು ವಿಭಾಗದ ಮುಖ್ಯಾಧಿಕಾರಿಯಾಗಿದ್ದ ಲೆಫ್ಟಿನೆಂಟ್ ಕರ್ನಲ್ ಗ್ರಿಗರಿ ಹೈನ್ಸ್‌ರವರನ್ನು ಅವನ ರಕ್ಷಕರನ್ನಾಗಿ ಆರಿಸಿದ್ದೇನೆಂದು ನಿಮಗೆ ತಿಳಿಸುತ್ತಿದ್ದೇನೆ. ಈ ಅಧಿಕಾರಿಯು ಈ ಪ್ರಾಂತ್ಯದಲ್ಲಿ ಎಲ್ಲರಿಗೂ ತಿಳಿದವರಾಗಿ ಜನರ ಗೌರವವನ್ನು ಸಂಪಾದಿಸಿದ್ದಾರೆ. ಇವರು ಸಂಸ್ಥಾನಕ್ಕೆ ಸಲ್ಲಿಸಿರುವ ಸೇವೆಯು ಅರ್ಲ್ ಕ್ಯಾನಿಂಗ್‌ರವರ ಮನ್ನಣೆಯನ್ನು ಪಡೆದಿದೆ. ಈ ಮಗುವಿನ ಸ್ಥಾನದ ವಿಷಯದಲ್ಲಿಯೂ, ಹಕ್ಕುಬಾಧ್ಯತೆಗಳ ವಿಷಯದಲ್ಲಿಯೂ ನಿಮಗೂ ನನಗೂ ಅಭಿಪ್ರಾಯಭೇದವಿರಬಹುದಾದರೂ ಭಾರತದ ರಾಜಮಹಾರಾಜರುಗಳಿಗೆ ಒಳ್ಳೆಯ ವಿದ್ಯಾಭ್ಯಾಸ ದೊರಕಬೇಕೆಂಬ ವಿಷಯದಲ್ಲಿ ಅಂತಹ ಅಭಿಪ್ರಾಯಭೇದವೇನೂ ನಮ್ಮಲ್ಲಿಲ್ಲವೆಂದು ನನಗೆ ಭರವಸೆ ಇದೆ. ಹಾಗೆಯೇ ನನ್ನ ಮಗನೂ, ಉತ್ತರಾಧಿಕಾರಿಯೂ ಆದ ಈ ಬಾಲಕನ ಭವಿಷ್ಯವೇನಾದರೂ ಆಗಿರಲಿ, ಅವನು ನಿರ್ವಹಿಸಬೇಕಾದ ಕರ್ತವ್ಯ ಏನೇ ಆಗಲಿ, ಘನವೆತ್ತ ನೀವೂ, ಮುಂದೆ ನಿಮ್ಮ ಸ್ಥಾನಕ್ಕೆ ಬರುವವರೂ ಅವನು ಈ ಪುರಾತನವಾದ ರಾಜಮನೆತನಕ್ಕೆ ಸೇರಿದವನೆಂಬುದನ್ನೂ, ಹಿಂದೂ ಧರ್ಮದಂತೆ ಮೈಸೂರಿನ ರಾಜರ ಪುತ್ರನೆಂಬುದನ್ನೂ ಮರೆಯುವುದಿಲ್ಲವೆಂದು ನನಗೆ ಭರವಸೆ ಇದೆ. "

ಬಾಲಕರಾಗಿದ್ದಾಗಲೇ ಪಟ್ಟಕ್ಕೆ ಬಂದ ಕೃಷ್ಣರಾಜ ಒಡೆಯರ್‌ರವರಿಗೆ ತಕ್ಕ ಶಿಕ್ಷಣವಾಗಲಿ, ತರಪೇತಾಗಲಿ ದೊರೆಯಲಿಲ್ಲವೆಂಬುದನ್ನು ರಂಗಾಚಾರ್ಲು ರವರೇ ಮೈಸೂರಿನಲ್ಲಿ ಬ್ರಿಟಿಷ್ ಆಡಳಿತದ ಬಗೆಗೆ ತಾವು ಬರೆದ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ಇದರಿಂದಾದ ಅನರ್ಥ ಪರಂಪರೆಯನ್ನು ಮನಗಂಡು ಮಹಾ ರಾಜರು ತಮ್ಮ ದತ್ತುಪುತ್ರನ ವಿಷಯದಲ್ಲಿ ಎಚ್ಚರವಹಿಸಿದರು. ತಮ್ಮ ಮಗನ ಭವಿಷ್ಯದ ವಿಷಯದಲ್ಲಿ ಅವರಿಗೆ ಸ್ವಾಭಾವಿಕವಾಗಿ ಇದ್ದ ಕಾತರವೂ, ಆತನಿಗೆ ಒಳ್ಳೆಯ ವಿದ್ಯಾಭ್ಯಾಸ ದೊರೆಯಬೇಕೆಂಬ ಅವರ ಬಯಕೆಯೂ ಈ ಪತ್ರದಲ್ಲಿ ವ್ಯಕ್ತಗೊಂಡಿವೆ.

ಹೈನ್ಸ್‌ರವರು ರಾಜಪುತ್ರರ ರಕ್ಷಕರಾಗಿ ಕೆಲವು ತಿಂಗಳು ಮಾತ್ರ ಇದ್ದರು. ಅವರಿಗೂ ಮೈಸೂರಿನ ಆಡಳಿತಗಾರರಾದ ಬೌರಿಂಗ್‌ರವರಿಗೂ ಅಭಿಪ್ರಾಯಭೇದ ಉಂಟಾದ್ದರಿಂದ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. 1869ರಲ್ಲಿ ಭಾರತ ಸರ್ಕಾರದವರು ಕರ್ನಲ್ ಜಿ. ಬಿ. ಮ್ಯಾಲಿಸನ್‌ರವರನ್ನು ಚಾಮರಾಜೇಂದ್ರ ಒಡೆಯರ ಪೋಷಕರನ್ನಾಗಿ ನಿಯಮಿಸಿದರು. ಮ್ಯಾಲಿಸನ್‌ರವರು 1857ರ ವಿಪ್ಲವದ ಬಗೆಗೆ ಪ್ರಸಿದ್ಧವಾದ ಪುಸ್ತಕವನ್ನು ಬರೆದಿದ್ದಾರೆ. ರಂಗಾಚಾರ್ಲುರವರು ಮ್ಯಾಲಿಸರ್‌ರವರ ಸಹಾಯಕರಾಗಿ ಮುಂದುವರಿದುದಲ್ಲದೇ ಅರಮನೆಯ ಆಯ ವ್ಯಯದ ಅಧಿಕಾರಿಯಾಗಿಯೂ ನಿಯಮಿತರಾದರು.

ಬಾಲಕರಾದ ಮಹಾರಾಜರ ನಡೆನುಡಿಗಳನ್ನು ರೂಪಿಸುವುದರಲ್ಲಿ ರಂಗಾ ಚಾರ್ಲುರವರಿಗೆ ಇದ್ದ ಶ್ರದ್ಧೆ, ಅವರು ತೋರಿಸಿದ ದೂರ ದೃಷ್ಟಿಗಳ ಬಗೆಗೆ ಇಂದೂ ಕತೆಗಳು ಪ್ರಚಲಿತವಾಗಿವೆ. ಮಹಾರಾಜರು ಸಾಯಂಕಾಲ ಕೋಚುಗಾಡಿಯಲ್ಲಿ ವಾಯುವಿಹಾರಕ್ಕಾಗಿ ಹೋಗುತ್ತಿದ್ದರು. ಒಮ್ಮೊಮ್ಮೆ ರಂಗಾಚಾರ್ಲುರವರು ಅವರ ಜೊತೆಗೆ ಕೂಡುತ್ತಿದ್ದರು. ಸುತ್ತಮುತ್ತಲಿನ ಜನರ ಸ್ಥಿತಿಗತಿಗಳನ್ನು ಅವರು ಮಹಾರಾಜರಿಗೆ ಪರಿಚಯ ಮಾಡಿಕೊಡುತ್ತಿದ್ದರು. ಜನ ಸಂದಣಿ ಹೆಚ್ಚಾಗಿರುವ ಜಾಗಗಳಲ್ಲಿ ವೇಗವಾಗಿ ಗಾಡಿಯನ್ನು ಓಡಿಸಿದರೆ ಉಂಟಾಗ ಬಹುದಾದ ಅನಾಹುತಗಳ ವಿಷಯದಲ್ಲಿ ಅವರಿಗೆ ರಂಗಾಚಾರ್ಲುರವರು ಎಚ್ಚರಿಕೆ ಯನ್ನು ಕೊಡುತ್ತಿದ್ದರು. ಮಹಾರಾಜರಿಗೆ ರಂಗಾಚಾರ್ಲುರವರ ವಿಷಯದಲ್ಲಿ ಗಾಢವಾದ ವಿಶ್ವಾಸ ಬೆಳೆಯಿತು. ಅದು ಸ್ವಲ್ಪ ಭಯಮಿಶ್ರಿತವೂ ಆಗಿದ್ದಿತು. ರಂಗಾಚಾರ್ಲುರವರು ದಿವಾನರಾದಮೇಲೆ ಬೆಂಗಳೂರಿನ ಅರಮನೆಗೆ ಸಮೀಪದಲ್ಲಿದ್ದ

"ಸತ್ಯಾಲಯ"ವೆಂಬ ಮನೆಯಲ್ಲಿ ವಾಸಿಸುತ್ತಿದ್ದರು. ಮಹಾರಾಜರಿಗೆ ಮಧ್ಯಾಹ್ನ ನಿದ್ರೆಮಾಡುವ ಅಭ್ಯಾಸವಿದ್ದಿತು. ರಂಗಾಚಾರ್ಲುರವರು ಮಧ್ಯಾಹ್ನ ನಿದ್ರೆ ಮಾಡುವುದನ್ನು ಕಂಡರೆ ಕಿಡಿಕಿಡಿಯಾಗುತ್ತಿದ್ದರು. ತಾವು ಮಧ್ಯಾಹ್ನ ನಿದ್ರೆ ಮಾಡುವುದು ರಂಗಾಚಾರ್ಲುರವರಿಗೆ ಗೊತ್ತಾಗದಿರುವಂತೆ ಮಹಾರಾಜರು ಒಂದು ಉಪಾಯವನ್ನು ಹುಡುಕಿದರು. ಅರಮನೆಯಿಂದ ಸತ್ಯಾಲಯದವರೆಗೆ ಹಲವು ಸೇವಕರನ್ನು ಅವರು ನಿಲ್ಲಿಸುತ್ತಿದ್ದರು. ಒಬ್ಬ ಸೇವಕನಿಗೂ ಇನ್ನೊಬ್ಬ ಸೇವಕನಿಗೂ ಕೆಲವು ಗಜಗಳ ಅಂತರವಿರುತ್ತಿದ್ದಿತು. ಅರಮನೆಗೆ ದಿವಾನರು ಹೊರಡಲು ಸಿದ್ಧರಾಗುತ್ತಿದ್ದಂತೆಯೇ ಆ ವರ್ತಮಾನ ಸೇವಕನಿಂದ ಸೇವಕನಿಗೆ ದಾಟಿ ಮಹಾರಾಜರಿಗೆ ನಿವೇದಿತವಾಗುತ್ತಿದ್ದಿತು. ಮಹಾರಾಜರು ನಿದ್ರೆಯಿಂದ ಎದ್ದು ಮುಖ ತೊಳೆದುಕೊಂಡು, ಪೋಷಾಕನ್ನು ಹಾಕಿಕೊಂಡು ದಿವಾನರನ್ನು ನೋಡಲು ಸಿದ್ಧರಾಗುತ್ತಿದ್ದರು.

ರಂಗಾಚಾರ್ಲುರವರ ಕೋಪಕ್ಕೆ ಮಹಾರಾಜರು ಹೆದರುತ್ತಿದ್ದರು. 1882ರಲ್ಲಿ ಮಹಾರಾಜರು ಛಾಯಾಚಿತ್ರವನ್ನು ತೆಗೆಯುವುದನ್ನು ಕಲಿಯುತ್ತಿದ್ದರು. ಅವರಿಗೆ ದಿವಾನರ ಛಾಯಾಚಿತ್ರವನ್ನು ತೆಗೆಯಬೇಕೆಂಬ ಆಸೆ. ದಸರಾ ಉತ್ಸವ ಮುಗಿದ ಮೇಲೆ ರಂಗಾಚಾರ್ಲುರವರು ಒಂದು ದಿನ ಜಗನ್ಮೋಹನ ಅರಮನೆಗೆ ಯಾವುದೋ ಕೆಲಸದ ಮೇಲೆ ಹೋಗಿದ್ದರು. ಅವರು ಪ್ರಸನ್ನಚಿತ್ತರಾಗಿದ್ದಾರೆಂಬುದು ತಿಳಿದ ಮೇಲೆ ಮಹಾರಾಜರು ಅವರನ್ನು ಒಪ್ಪಿಸಿ ಅವರ ಚಿತ್ರವನ್ನು ತೆಗೆದರು.

ರಂಗಾಚಾರ್ಲುರವರು ಮಹಾರಾಜರ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದರು. ಅವರು ಆಡುವ ಆಟ, ಅವರ ಒಟ್ಟೆಬರೆಗಳು, ಅವರ ನಡೆನುಡಿ ಇವೆಲ್ಲವನ್ನೂ ಅವರು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದರು. ಅವರಲ್ಲಿ ಪ್ರಾಮಾಣಿಕತೆ, ಶೀಲೋನ್ನತಿಗಳು ಬೆಳೆಯುವಂತೆ ನೋಡಿಕೊಂಡರು. ಮಹಾರಾಜರ ಮಹತ್ತರವಾದ ಸ್ಥಾನವನ್ನು ಅವರು ಎಂದೂ ಮರೆತವರಲ್ಲ. ಆದರೆ ಅವರು ತಪ್ಪುಗಳನ್ನೇನಾದರೂ ಮಾಡಿದರೆ ಅವನ್ನು ತಿದ್ದುವುದಕ್ಕೆ ರಂಗಾಚಾರ್ಲುರವರು ಹಿಂದೆಗೆಯುತ್ತಿರಲಿಲ್ಲ. ಬಾಲ್ಯದಲ್ಲಿ ತಮ್ಮ ರೀತಿ ನೀತಿಗಳನ್ನು ತಿದ್ದಿ ಮಾರ್ಗದರ್ಶನ ಮಾಡಿದ ರಂಗಾಚಾರ್ಲುರವರ ವಿಷಯದಲ್ಲಿ ಮಹಾರಾಜರಿಗೆ ವಿಶೇಷವಾದ ಗೌರವಾದರಗಳು ಉಂಟಾದವು. ಅವರು ಸಲ್ಲಿಸಿದ ಸೇವೆಯನ್ನು ಸದಾ ಕೃತಜ್ಞತೆಯಿಂದ ಮಹಾರಾಜರು ಸ್ಮರಿಸಿಕೊಳ್ಳುತ್ತಿದ್ದರು.

ಅಧ್ಯಾಯ 5

# ಆಡಳಿತ ವಿಮರ್ಶಕ ಮತ್ತು ಆಡಳಿತಗಾರ

ಮೈಸೂರಿನಲ್ಲಿ ಬ್ರಿಟಿಷ್ ಆಡಳಿತದ ರೀತಿನೀತಿಗಳನ್ನೂ ಅದರ ನ್ಯೂನಾತಿರೇಕಗಳನ್ನೂ ಕಂಡುಕೊಳ್ಳುವ ಅವಕಾಶ ರಂಗಾಚಾರ್ಲುರವರಿಗೆ ದೊರಕಿತ್ತು. 1868ರಲ್ಲಿ ಮೈಸೂರಿಗೆ ಬಂದ ರಂಗಾಚಾರ್ಲುರವರು ಆಡಳಿತ ವ್ಯವಸ್ಥೆಯ ವಿವಿಧ ಮುಖಗಳ ನಿಕಟವಾದ ಪರಿಚಯವನ್ನು ಮಾಡಿಕೊಂಡಿದ್ದರು. ಅವರು "ಮೈಸೂರಿನಲ್ಲಿ 50 ವರ್ಷಗಳ ಬ್ರಿಟಿಷ್ ಆಡಳಿತ" ಎಂಬ ಪ್ರಬಂಧವನ್ನು ಬರೆದರು. 1874ರಲ್ಲಿ ಈ ಪ್ರಬಂಧವನ್ನು ಲಂಡನ್ನಿನಲ್ಲಿ ಪ್ರಕಟಿಸಲಾಯಿತು. ಅದರ ಪ್ರಕಟಣೆಯಿಂದ ತೀವ್ರವಾದ ಪರಿಣಾಮ ಉಂಟಾಯಿತು. ಬ್ರಿಟಿಷ್ ಆಡಳಿತದ ನ್ಯೂನಾತಿರೇಕಗಳನ್ನು ಅವರು ಈ ಪ್ರಬಂಧದಲ್ಲಿ ಎತ್ತಿ ತೋರಿಸಿದ್ದರು. ಮುಖ್ಯವಾಗಿ ಬ್ರಿಟಿಷ್ ಆಡಳಿತಗಾರರ ಕುಂದುಕೊರತೆಗಳನ್ನು ಅದರಲ್ಲಿ ಅವರು ವಿಶ್ಲೇಷಿಸಿದ್ದರು. ಅವರ ನಿರ್ಭಯ ಪ್ರತಿಪಾದನೆ, ವಿಮರ್ಶನಾಶಕ್ತಿ ಮತ್ತು ಶೈಲಿಗಳ ಪರಿಚಯವನ್ನು ಮಾಡಿಕೊಳ್ಳಬಯಸುವವರು ಈ ಪ್ರಬಂಧವನ್ನು ಓದಬೇಕು. ಅಲ್ಲದೇ ರಾಜ್ಯಾಡಳಿತದ ಬಗೆಗೆ ಅದರಲ್ಲಿ ಹೇಳಿರುವ ಮಾತುಗಳು ಇಂದಿಗೂ ಅನ್ವಯಿಸತಕ್ಕವಾಗಿವೆ. ಆ ಪ್ರಬಂಧದ ಕೆಲವು ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ.

"ದೇಶೀಯ ಸಂಸ್ಥಾನಗಳನ್ನು ಬ್ರಿಟಿಷರ ನೇರವಾದ ಆಡಳಿತಕ್ಕೆ ತೆಗೆದುಕೊಳ್ಳಬೇಕೆಂಬ ನೀತಿಯನ್ನು ಕೈಬಿಡಲಾಯಿತೆಂದು ಸಂತೋಷಿಸುವವರು ರಾಜ್ಯವಿಸ್ತರಣಾಕಾಂಕ್ಷೆಯಿಂದ ಪ್ರೇರಿತರಾಗಿ ಕೊನೆ ಕೊನೆಯಲ್ಲಿ ಬ್ರಿಟಿಷರು ನಡೆದುಕೊಂಡಿದ್ದರಿಂದ ಆ ನೀತಿ ನಿಂದಾರ್ಹವಾಯಿತೆಂದು ಹೇಳಬಹುದಾದರೂ ಮೊದಲು ಅದನ್ನು ರೂಪಿಸಿದಾಗ ಕೇವಲ ರಾಜ್ಯವಿಸ್ತರಣವೇ ಅದರ ಗುರಿಯಾಗಿರಲಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ದೇಶೀಯ ಸರ್ಕಾರಗಳ ಅದಕ್ಷತೆಯ ಕಾರಣದಿಂದ ಜನಗಳ ಸಂರಕ್ಷಣೆಯನ್ನು ಮಾಡಲೂ ಅವರ ಅಭ್ಯುದಯವನ್ನು ಸಾಧಿಸಲೂ ಬ್ರಿಟಿಷ್ ಆಡಳಿತ ಅಗತ್ಯವೆಂದು ಪರಿಗಣಿಸಲಾಗಿದ್ದಿತು.

ಈ ಕಾಲದಲ್ಲಿ ಯಾವ ಸಾಮಾಜಿಕ ಸಂಸ್ಥೆಯೇ ಆಗಲಿ ಅದರಿಂದಾಗುವ ಪ್ರಯೋಜನದಿಂದ ಮಾತ್ರ ಜನಗಳ ಮನ್ನಣೆಯನ್ನು ಗಳಿಸಬಲ್ಲದು. ಜನಗಳ ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯವಿರುವ ಸಂಸ್ಥೆಗಳು ಮಾತ್ರ ಈ ಕಾಲದಲ್ಲಿ ಉಳಿಯಬಲ್ಲವು. ದೇಶೀಯ ಸಂಸ್ಥಾನಗಳನ್ನು ಬ್ರಿಟಿಷರ ನೇರವಾದ ಆಡಳಿತಕ್ಕೆ ತೆಗೆದುಕೊಳ್ಳುವುದರಿಂದ ಜನಹಿತ ಸಿದ್ಧಿಸುವುದಾದರೆ ಬ್ರಿಟಿಷ್ ಮಹಾರಾಣಿಯ ಘೋಷಣೆಗಳಾಗಲಿ, ಅಥವಾ ಕೌಲುಗಳಾಗಲಿ ಆ ಸಂಸ್ಥಾನಗಳನ್ನು ಉಳಿಸಲಾರವು. ಜನರ ಎಲ್ಲ ತೊಂದರೆಗಳೂ ಬ್ರಿಟಿಷರ ನೇರವಾದ ಆಡಳಿತದಿಂದ ಪರಿಹಾರವಾಗಿ ಬಿಡುವುದಾದರೆ ದೇಶೀಯ ಸಂಸ್ಥಾನಗಳ ಅಸ್ತಿತ್ವವನ್ನು ಇವಾವುವೂ ರಕ್ಷಿಸಲಾರವು. ಆದರೆ ರಾಜ್ಯದಲ್ಲಿ ಶಾಂತಿ, ಸುಭದ್ರತೆಗಳನ್ನು ಸ್ಥಾಪಿಸಿ ಒಂದು ಮಟ್ಟದವರೆಗೆ ಅದರ ಆರ್ಥಿಕ ಅಭ್ಯುದಯವನ್ನು ಸಾಧಿಸಿದ ಮೇಲೆ ಬ್ರಿಟಿಷ್ ಆಡಳಿತ ತನ್ನ ಉಪಯುಕ್ತತೆಯನ್ನು ಕಳೆದುಕೊಳ್ಳುತ್ತದೆ. ಜನಗಳ ಸಾಮಾಜಿಕ ಅಭ್ಯುದಯವನ್ನು ಸಾಧಿಸುವ ಕ್ಲಿಷ್ಟವಾದ ಸಮಸ್ಯೆಯನ್ನು ಅದು ಅಷ್ಟು ಸುಲಭವಾಗಿ ಎದುರಿಸಲಾರದು. ಆದ್ದರಿಂದ ಅದೇ ಜನಾಭ್ಯುದಯಕ್ಕೆ ಸಾಧಕವಾದ ಆಡಳಿತವೆಂಬ ಮಾತನ್ನು ಪೂರ್ಣವಾಗಿ ಒಪ್ಪಲಾಗುವುದಿಲ್ಲ. ಈ ವಿಷಯದಲ್ಲಿ ಬ್ರಿಟಿಷ್ ಆಡಳಿತದ ನ್ಯೂನತೆಯನ್ನು ದೇಶೀಯ ಆಡಳಿತಗಳು ಸರಿಪಡಿಸಲು ಸಮರ್ಥವಾಗಿವೆಯೆಂದು ಸಿದ್ಧಪಡಿಸಿಕೊಡುವವರೆಗೆ, ಸಾಮಾಜಿಕ ಪ್ರಗತಿಗೆ ಕಾರಣಭೂತವಾಗಬಲ್ಲ ವಿಚಾರಗಳನ್ನು ಜನಸಾಮಾನ್ಯರಲ್ಲಿ ಶಾಂತಿ ಸುಭದ್ರತೆಗಳ ಕಾಲದಲ್ಲಿ ಹರಡುವುದಕ್ಕೂ, ಕ್ಷೋಭೆ ವಿಪ್ಲವಗಳ ಕಾಲದಲ್ಲಿ ಸಮಾಜ ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕೂ ತಮಗೆ ತಕ್ಕ ಸಾಮರ್ಥ್ಯವಿದೆಯೆಂದು ಅವು ತೋರಿಸಿಕೊಡುವವರೆಗೆ ದೇಶೀಯ ಸಂಸ್ಥಾನಗಳು ಅಸ್ತಿತ್ವದಲ್ಲಿರಬೇಕೆಂಬ ವಾದವನ್ನು ಒಪ್ಪುವುದು ಕಷ್ಟ. ದೇಶೀಯ ಸಂಸ್ಥಾನಗಳಲ್ಲಿ ಸುಧಾರಣೆಯನ್ನು ಮಾಡಬೇಕೆಂಬ ಆಕಾಂಕ್ಷೆ ಎಲ್ಲೆಲ್ಲೂ ಕಂಡುಬರುತ್ತಿದೆ. ಸಿಂಧ್ಯ, ಹೋಳ್ಕರ್, ಜಯಪುರದ ಮಹಾರಾಜರು ತಮ್ಮ ಬ್ರಿಟಿಷ್ ಸಲಹೆಗಾರರು ಆಡಳಿತ ವ್ಯವಸ್ಥೆಯಲ್ಲಿ ಮಾಡಬೇಕೆಂದು ಸೂಚಿಸಿದ ಸುಧಾರಣೆಗಳನ್ನೂ, ಮಾರ್ಪಾಡುಗಳನ್ನೂ ಜಾರಿಗೆ ತರಲು ಒಬ್ಬರೊಂದಿಗೆ ಇನ್ನೊಬ್ಬರು ಸ್ಪರ್ಧಿಸುತ್ತಿದ್ದಾರೆ. ಅತಂತ್ರವಾದ ಆಡಳಿತ ವ್ಯವಸ್ಥೆ ಇದ್ದ ಜೋಧ್‌ಪುರ ಮತ್ತು ಇತರ ಸಂಸ್ಥಾನಗಳು ಬ್ರಿಟಿಷ್ ಮೇಲ್ವಿಚಾರಣೆಗೆ ಒಳಪಡಿಸಲ್ಪಟ್ಟಿವೆ. ಹೈದರಾಬಾದ್, ಮೈಸೂರುಗಳಲ್ಲದೆ ಇತರ ಕೆಲವು ಸಣ್ಣ ಸಂಸ್ಥಾನಗಳ ಪ್ರಭುಗಳು

ಪ್ರಾಪ್ತವಯಸ್ಕರಾಗಿಲ್ಲವಾದ್ದರಿಂದ ಬ್ರಿಟಿಷ್ ಸರ್ಕಾರಕ್ಕೆ ಅವುಗಳಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸುವ ಅವಕಾಶ ಉಂಟಾಗಿದೆ. ಭಾರತದ ಚರಿತ್ರೆಯಲ್ಲಿ ಇಂತಹ ಅವಕಾಶ ಅವರಿಗೆ ಹಿಂದೆಂದೂ ಪ್ರಾಪ್ತವಾಗಿರಲಿಲ್ಲ. ಸಾರ್ವಜನಿಕರು ಈ ಆಡಳಿತ ಸುಧಾರಣೆಗಳನ್ನು ಬಹುವಾದ ಆಸಕ್ತಿಯಿಂದ ವೀಕ್ಷಿಸುತ್ತಿದ್ದಾರೆ. ಮುಖ್ಯವಾದ ಸಂಸ್ಥಾನಗಳಲ್ಲಿ ಒಂದರಲ್ಲಿ ನಡೆದಿರುವ ಇಂತಹ ಪ್ರಯೋಗದ ವಿಚಾರಾತ್ಮಕ ವಿಮರ್ಶೆಯು ಈ ಸಂದರ್ಭದಲ್ಲಿ ಉಪಯೋಗಕರವಾಗದೆ ಇರಲಾರದು.”

“ಇಂತಹ ಪ್ರಯೋಗವನ್ನು ಯಶಸ್ವಿಯಾಗಿ ಮಾಡುವುದಕ್ಕೆ ಮೈಸೂರು ಪ್ರಾಂತ್ಯದಲ್ಲಿ ವಿಶೇಷವಾದ ಸೌಲಭ್ಯಗಳಿವೆ. ಇನ್ನು ಕೆಲವು ವರ್ಷಗಳಲ್ಲಿ ಆ ಸಂಸ್ಥಾನವನ್ನು ದೇಶೀಯ ಆಡಳಿತಕ್ಕೆ ಹಿಂದಿರುಗಿಸಿದಾಗ ಸುಮಾರು ಅರ್ಧ ಶತಮಾನಕಾಲ ಅದು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದಾಗಿರುತ್ತದೆ. ಈ ಸುದೀರ್ಘವಾದ ಅವಧಿಯಲ್ಲಿ ವಿಶೇಷವಾಗಿ ಆರಿಸಿದ ಮೂವರು ಅಧಿಕಾರಿಗಳ ಆಡಳಿತಕ್ಕೆ ಒಳಪಡುವ ಭಾಗ್ಯ ಅದಕ್ಕೆ ಪ್ರಾಪ್ತವಾಗಿದ್ದಿತು. 1834 ರಿಂದ 1860ರ ವರೆಗೆ ಜನರಲ್ ಸರ್ ಮಾರ್ಕ್ ಕಬ್ಬನ್‌ರವರು ಆಡಳಿತಗಾರರಾಗಿದ್ದರು. ಅವರು ತಮ್ಮ ವಿಶೇಷ ಸಾಮರ್ಥ್ಯಕ್ಕೂ, ವಿವೇಚನಾಶಕ್ತಿಗೂ, ವಿಶಾಲಹೃದಯಕ್ಕೂ ಹೆಸರಾಗಿದ್ದವರು. ಅವರಾದ ಅನಂತರ ಹತ್ತಿರ ಹತ್ತಿರ 10 ವರ್ಷಗಳ ಕಾಲ ವಿಶೇಷ ಆಡಳಿತ ಸಾಮರ್ಥ್ಯವುಳ್ಳವರೂ, ಈ ದೇಶದ ಸಮಸ್ಯೆಗಳ ಗಾಢವಾದ ಪರಿಚಯವುಳ್ಳವರೂ ಆದ ಬ್ರಿಟಿಷ್ ಅಧಿಕಾರಿಯ ಆಳ್ವಿಕೆಗೆ ಸಂಸ್ಥಾನ ಒಳಗಾಗಿದ್ದಿತು. ಈ ಸಂಸ್ಥಾನದ ಕ್ಷೇಮಾಭಿವೃದ್ಧಿಗಳಲ್ಲಿ ಸತತವಾದ ಆಸಕ್ತಿಯುಳ್ಳ ಅವರು ದೇಶೀಯರ ಗೌರವವನ್ನೂ ನಂಬಿಕೆಯನ್ನೂ ಸಂಪಾದಿಸಿಕೊಂಡರು. ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಹೆಚ್ಚಿನ ಅನುಭವವುಳ್ಳ ಕಾರಣದಿಂದ ಮುಂದೆ ದೇಶೀಯ ಆಳ್ವಿಕೆಗೆ ಸಂಸ್ಥಾನವನ್ನು ಸಿದ್ಧಪಡಿಸುವುದಕ್ಕೆ ತಕ್ಕ ವ್ಯಕ್ತಿ ಎಂಬ ಕಾರಣದಿಂದ ಆರಿಸಲ್ಪಟ್ಟ ಅಧಿಕಾರಿಯು ಈಗ 4 ವರ್ಷಗಳಿಂದ ಆಡಳಿತಗಾರರಾಗಿದ್ದಾರೆ.”

“ಈಗ ನಾವು ಬ್ರಿಟಿಷ್ ಆಡಳಿತದ ಈ ದೀರ್ಘಾವಧಿಯಲ್ಲಿ ಏನೇನನ್ನು ಸಾಧಿಸಲಾಗಿದೆ ಎಂಬುದನ್ನು ಪರಿಶೀಲಿಸೋಣ. ಜನಗಳ ಸಂಪದಭಿವೃದ್ಧಿಯನ್ನೂ ಸಾಮಾಜಿಕ ಪ್ರಗತಿಯನ್ನೂ ಸಾಧಿಸಲು, ಜನಾಭ್ಯುದಯಕ್ಕೆ ಸಾಧಕವಾದ ದೇಶೀಯ ಆಡಳಿತಕ್ಕೆ ತಕ್ಕ ಬುನಾದಿಯನ್ನು ಕಲ್ಪಿಸಲು ಏನೇನು ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಅರಿತುಕೊಳ್ಳೋಣ.”

“ಸರ್ಕಾರದ ಇಲಾಖೆಗಳಿಗೆ ಸಂಬಂಧಪಟ್ಟಂತೆ ಅಗಾಧವಾದ ಪ್ರಮಾಣದಲ್ಲಿ ವರದಿಗಳು, ಇತರ ಬರವಣಿಗೆಗಳು ಪ್ರಕಟವಾಗುತ್ತಿರುತ್ತವೆ. ಆದರೆ ಈ ಇಲಾಖೆಗಳ ಕೆಲಸಕಾರ್ಯಗಳು ಸಾರ್ವಜನಿಕರ ಅರಿವಿಗೆ ಬರುವುದಿಲ್ಲ. ಅವರ ಚರ್ಚೆಗೆ ವಿಷಯವಾಗುವುದಿಲ್ಲ. ಅಷ್ಟೇ ಏನು, ಯಾವ ಇಲಾಖೆಗೆ ಸಂಬಂಧಪಟ್ಟಂತೆ ಈ ಅಗಾಧ ಪ್ರಮಾಣದ ಸಾಮಗ್ರಿ ಪ್ರಕಟವಾಗುತ್ತದೋ, ಆ ಇಲಾಖೆಯಲ್ಲಿ ಇರುವವರಲ್ಲದೆ ಬೇರೆ ಇಲಾಖೆಗೆ ಸಂಬಂಧಪಟ್ಟವರಿಗೂ ಕೂಡ ಅದರಲ್ಲಿ ಏನಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಸರ್ಕಾರದ ವ್ಯವಹಾರಗಳನ್ನೆಲ್ಲಾ ಅವು ಮಿಕ್ಕ ಯಾರಿಗೂ ಸಂಬಂಧಪಟ್ಟ ವಿಷಯವಲ್ಲವೆಂಬಂತೆ ನಿರ್ವಹಿಸುವುದೇ ಇದಕ್ಕೆ ಕಾರಣ. ಭಾರತದೇಶದ ಆಡಳಿತದ ವೈಶಿಷ್ಟ್ಯ ಇದಾಗಿದೆ. ಸರ್ಕಾರದ ಆಡಳಿತದ ರೀತಿನೀತಿಗಳ ಪರಿಚಯವಿಲ್ಲದಿದ್ದವರಿಗೆ ಅದರ ವ್ಯವಹಾರಗಳಿಗೆ ಸಂಬಂಧಪಟ್ಟ ವಿಷಯವನ್ನು ಸಂಗ್ರಹಿಸುವುದಕ್ಕೆ ಬೇರೆ ಬೇರೆ ಪ್ರಾಂತ್ಯಗಳ ವಾರ್ಷಿಕ ಆಡಳಿತದ ವರದಿಗಳು ಮಾತ್ರ ಆಧಾರವಾಗಿವೆ. ಮೈಸೂರಿನಲ್ಲಿ ಈ ವರದಿಗಳನ್ನು ಕ್ರಮವಾಗಿ 1861-62ರಿಂದ ಪ್ರಕಟಿಸಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳು ಆಯಾ ವರ್ಷದಲ್ಲಿ ನಿರ್ವಹಿಸಿರುವ ಕಾರ್ಯದ ಪರಿಚಯವನ್ನು ಈ ವರದಿಗಳು ಕೊಡುತ್ತವೆ. ಆದ್ದರಿಂದ ಸರ್ಕಾರದ ಸಮ್ಯಕ್ ವಿವೇಚನೆಯ ಸಾರವೇ ಇವುಗಳಲ್ಲಿದೆಯೆಂದು ನಾವು ತಿಳಿದುಕೊಳ್ಳಬಹುದು. ಸ್ವಲ್ಪಮಟ್ಟಿಗೆ ಈ ಮಾತು ನಿಜ. ಸ್ಪಷ್ಟವೂ, ಸಮಗ್ರವೂ ಆದ ಯೋಜನೆಯೊಂದನ್ನು ಕಲ್ಪಿಸಿಕೊಂಡು ಜನಜೀವನದ ಮತ್ತು ಜನಾಭಿವೃದ್ಧಿಯ ವಿವಿಧ ಅಂಶಗಳನ್ನು ಒಳಹೊಕ್ಕು ಅರಿತುಕೊಂಡು ಆಡಳಿತವನ್ನು ನಡೆಸಿದಾಗ ಈ ವರದಿಗಳು ಸ್ವಾರಸ್ಯವಾಗಿರುತ್ತವೆ. ಆದರೆ ಯಾವ ಸುಸ್ಪಷ್ಟವಾದ ನೀತಿಯೂ ಇಲ್ಲದೇ ಆಯಾ ಸಂದರ್ಭಕ್ಕೂ ಹಿತಾಸಕ್ತಿಗಳ ಒತ್ತಡಕ್ಕೂ ಒಳಗಾಗಿ ಕಾರ್ಯಮಾಡುತ್ತಾ ಸರ್ಕಾರವನ್ನು ನಡೆಸುವಾಗ ಈ ವರದಿಗಳು ಆಡಳಿತ ಯಂತ್ರದ ಚಲನವಲನಗಳ, ಸಾಧನೆಗಳ ಸುದೀರ್ಘ ಕಥನವಾಗುತ್ತವೆಯೇ ಹೊರತು ಜನಜೀವನದ ಮೇಲೆ ಸರ್ಕಾರದ ಕ್ರಮಗಳಿಂದ ಆಗುವ ಪರಿಣಾಮ ಅವುಗಳಲ್ಲಿ ಪ್ರತಿಬಿಂಬಿತವಾಗುವುದಿಲ್ಲ. ಸರಾಸರಿಗಳ, ಲೆಕ್ಕಾಚಾರಗಳ, ಹಿಂದಿನ ವರ್ಷದ ನಿಜ ಆಯವ್ಯಯದ ಮತ್ತು ಅಂದಾಜಿನ ಆಯವ್ಯಯದ ಹೋಲಿಕೆಗಳ ನೀರಸಚಿತ್ರ ಇವುಗಳಲ್ಲಿ ದೊರಕುತ್ತದೆಯೇ ಹೊರತು ಆಡಳಿತದ ಮುಖ್ಯವಾದ ಅಂಶಗಳ ಸ್ಪಷ್ಟ

**ಚಿತ್ರ ಅವುಗಳಲ್ಲಿ ಮೂಡುವುದಿಲ್ಲ. ಈ ವರದಿಗಳನ್ನು ಓದುವ ದೌರ್ಭಾಗ್ಯ ಯಾರಿಗೆ ಇರುತ್ತದೋ ಅವರಿಗೆ ಅವನ್ನು ಬರೆದವರು ಅಂಕಿಸಂಖ್ಯೆಗಳಲ್ಲೇ ನಲಿದಾಡುತ್ತಾ ಅವಕ್ಕೆ ಆಧಾರಭೂತವಾಗಿರುವ ವಾಸ್ತವಾಂಶವನ್ನೇ ಮರೆತುಬಿಡುವರೆಂಬುದು ಭಾಸವಾಗುತ್ತದೆ.** § ಹೀಗೆ ಅಸಮರ್ಪಕವಾಗಿದ್ದರೂ ಈ ವರದಿಗಳಿಂದ ಹೊರಪಡುವ ವಿಷಯಗಳ ಸ್ಥೂಲ ಪರಿಚಯವನ್ನು ಮಾಡಿಕೊಳ್ಳೋಣ."

"ಬ್ರಿಟಿಷ್ ಸರ್ಕಾರವು ಈ ಪ್ರಾಂತ್ಯವನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡಾಗ ಹೆಚ್ಚು ಕಾಲ ತಾನು ಆಡಳಿತ ನಿರ್ವಾಹ ಮಾಡುವ ಉದ್ದೇಶವಿಲ್ಲದುದರಿಂದ ಆಡಳಿತ ಯಂತ್ರವು ಸಂಪೂರ್ಣವಾಗಿ ದೇಶೀಯರಿಂದಲೇ ಕೂಡಿರಬೇಕೆಂತಲೂ ದೇಶೀಯ ಸಂಸ್ಥೆಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಬೇಕೆಂತಲೂ ಆಜ್ಞೆ ಮಾಡಿತು."

"ಸರ್ ಮಾರ್ಕ್ ಕಬ್ಬನ್‌ರವರ ಸುದೀರ್ಘವಾದ ಆಡಳಿತದ ಅವಧಿಯಲ್ಲಿ ಅಗತ್ಯವಾದ ಸಂದರ್ಭಗಳಲ್ಲಿ ಹೊರತಾಗಿ ಒಟ್ಟಿನಲ್ಲಿ ಈ ಆಜ್ಞೆಯಂತೆ ನಡೆಯಲಾಯಿತು. ದೇಶೀಯ ಆಡಳಿತಯಂತ್ರದ ಶೈಥಿಲ್ಯದ ಕಾರಣದಿಂದ ಸಂಸ್ಥಾನದ ನಾಲ್ಕು ವಿಭಾಗಗಳ ಮೇಲಧಿಕಾರಿಗಳಾಗಿ ಯೂರೋಪಿಯನ್ನರನ್ನು ನಿಯಮಿಸಬೇಕಾಯಿತು. ಅವರಿಗೆ ಯೂರೋಪಿಯನ್ ಸಹಾಯಕರನ್ನು ಕೊಡಲಾಯಿತು. ಆದರೆ ಆಡಳಿತದ ಮಿಕ್ಕೆಲ್ಲ ಭಾಗಗಳಲ್ಲಿಯೂ ದೇಶೀಯರೇ ಇದ್ದರು. ಜನಗಳ ನಿಜವಾದ ಅವಶ್ಯಕತೆಯನ್ನು ಪೂರೈಸುವ ಉದ್ದೇಶದಿಂದ ಮಾಡಿದ, ಜನಗಳ ಅಭಿಪ್ರಾಯಗಳಿಗೆ ಅನುಗುಣವಾಗಿದ್ದ ನೀತಿನಿಯಮಗಳಂತೆ ಆಡಳಿತವನ್ನು ನಡೆಸಲಾಗುತ್ತಿದ್ದಿತು. ಖಚಿತವಾದ ಯೋಜನೆ ಇಲ್ಲದೇ ಊಹಾಪೋಹಗಳ ಮೇಲೆ ಆಡಳಿತವನ್ನು ನಡೆಸುವ ಪದ್ಧತಿ ಆಗ ಇರಲಿಲ್ಲ. ಸರ್ಕಾರವನ್ನು ವ್ಯವಸ್ಥಿತವಾಗಿ ನಡೆಸಲಾರಂಭಿಸಿದ್ದರಿಂದ ಒಡನೆಯೇ ಪ್ರಾಂತ್ಯದಲ್ಲಿ ಶಾಂತಿಶಿಸ್ತುಗಳು ಸ್ಥಾಪಿತವಾದವು".

ಭೂಕಂದಾಯವನ್ನು ಕಡಿಮೆ ಮಾಡಲಾಯಿತು. ಸರಕುಗಳ, ಸಂಚಾರದ ಮೇಲೆ ವಿಧಿಸಿದ್ದ ಸುಂಕಗಳನ್ನು ತೆಗೆದುಹಾಕಲಾಯಿತು. ಇದರಿಂದ ವ್ಯಾಪಾರೋದ್ಯಮಗಳು ಬೆಳೆಯಲು ಕಾರಣವಾಯಿತು. ಹೀಗೆ ವ್ಯಾಪಾರೋದ್ಯಮಗಳು ಬೆಳೆ

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ದುದರಿಂದ ರೈತನಿಗೆ ತಾನು ಬೆಳೆದ ಬೆಳೆಗೆ ಹೆಚ್ಚಿನ ಬೆಲೆ ದೊರಕುವಂತಾಗಿ ಅವನ ಅಭ್ಯುದಯಕ್ಕೆ ಕಾರಣವಾಯಿತು. ಹೀಗೆ ರೈತಾಪಿವರ್ಗದಲ್ಲಿ ಆರ್ಥಿಕ ಅಭ್ಯುದಯ ಉಂಟಾದ್ದರಿಂದ ಸರ್ಕಾರಕ್ಕೆ ಕಂದಾಯ ಕಾಳಿಗೆಗಳಿಂದ ಆದಾಯ ಹೆಚ್ಚಾಯಿತು. ಸರ್ಕಾರವು ಹೊಸ ಮಾರ್ಗಗಳನ್ನು ನಿರ್ಮಿಸಿತು. ನ್ಯಾಯವ್ಯವಸ್ಥೆಯನ್ನು ಅದು ಪರಿಷ್ಕರಿಸಿತು. ರಂಗಾಚಾರ್ಲುರವರು ಸರ್ಕಾರದ ಈ ವಿವಿಧ ಕಾರ್ಯಪರಿಚಯ ಮಾಡಿಕೊಟ್ಟು, ಕಬ್ಬನ್‌ರವರ ಆಡಳಿತದಲ್ಲಿದ್ದ ನ್ಯೂನತೆಯನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಸ್ವಾತಂತ್ರ್ಯವನ್ನು ಕೊಡಲಾಗಿದ್ದಿತು. ಉನ್ನತ ನ್ಯಾಯಸ್ಥಾನಗಳಲ್ಲಿ ಲಂಚರುಷವತ್ತುಗಳು ಬೇರೂರಿದ್ದವು. ಆದ್ದರಿಂದ ವಿಶೇಷವಾದ ಅಧಿಕಾರ ಇದ್ದ ಈ ಅಧಿಕಾರಿಗಳು ಕಟ್ಟುನಿಟ್ಟಾಗಿ ನ್ಯಾಯಬದ್ಧವಾಗಿ ನಡೆಯುವುದು ಇಂತಹ ವಾತಾವರಣದಲ್ಲಿ ಕಷ್ಟವಾಗಿದ್ದಿತು. ನಿಸ್ಸಹಾಯಕರಾಗಿ ಸರ್ವದಾ ಸರ್ಕಾರದ ಅಧಿಕಾರಿಗಳನ್ನೇ ಆಶ್ರಯಿಸಬೇಕಾಗಿದ್ದ ಪರಿಸ್ಥಿತಿಯಿಂದ ರೈತರನ್ನು ವಿಮೋಚನೆಗೊಳಿಸಬಲ್ಲ ಶುದ್ಧ ಆಡಳಿತದ ಕಲ್ಪನೆ ಆಗಿನ ಕಾಲಕ್ಕೆ ದೂರವಾಗಿದ್ದಿತು. ದವಸಧಾನ್ಯಗಳ ಬೆಲೆ ಕಡಿಮೆಯಾಗಿದ್ದುದರಿಂದಲೂ, ಕಂದಾಯ ಬಹಳ ಹೆಚ್ಚಾಗಿದ್ದುದರಿಂದಲೂ ಬಡತನಕ್ಕೆ ತುತ್ತಾಗಿದ್ದ ರೈತನಿಗೇ ಹೀಗೆ ತಾನು ಅಧಿಕಾರಿಗಳ ಆಶ್ರಿತನಾಗದೆ ಸ್ವತಂತ್ರನಾಗಿರಬೇಕೆಂಬ ಭಾವನೆ ಸ್ಫುರಿಸಿರಲಿಲ್ಲ. ತನ್ನ ಕೈಕೆಳಗಿನವರಾದ ಮುಖ್ಯ ಮುಖ್ಯ ಅಧಿಕಾರಗಳುಳ್ಳ ದೇಶೀಯ ಮತ್ತು ಯೂರೋಪಿಯನ್ ಅಧಿಕಾರಿಗಳ ವಿಷಯದಲ್ಲಿ ವಾತ್ಸಲ್ಯ ಸ್ನೇಹಗಳು ರಾಜ್ಯದ ಮುಖ್ಯ ಅಧಿಕಾರಿಗೆ ಹೆಚ್ಚಾಗಿದ್ದುದರಿಂದ ಅವರ ದೌರ್ಬಲ್ಯಗಳನ್ನು ಅತನು ಮನ್ನಿಸಿಬಿಡುತ್ತಿದ್ದನು.”

‘ಕಬ್ಬನ್‌ರವರಾದ ಮೇಲೆ ಬಂದ ಅಧಿಕಾರಿಯು ಗಮನವನ್ನು ಈ ಅವ್ಯವಸ್ಥೆಯು ಸೆಳೆಯಿತು. ಬ್ರಿಟಿಷರ ನೇರವಾದ ಆಳ್ವಿಕೆಯಲ್ಲಿದ್ದ ಪ್ರದೇಶಗಳಲ್ಲಿ ಈ ರೀತಿಯ ಅವ್ಯವಸ್ಥೆಗೆ ಕಾರಣವಿರಲಿಲ್ಲವಾದ್ದರಿಂದ ಅತನ ಗಮನ ಈ ಅವ್ಯವಸ್ಥೆಯ ಕಡೆಗೆ ಕೂಡಲೇ ಹರಿಯಲು ಅವಕಾಶವಾಯಿತು. ಈ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಅನುಸರಿಸುತ್ತಿದ್ದ ವಿಧಾನವನ್ನೇ ಅಂದರೆ ಸರ್ಕಾರದ ಇಲಾಖೆಗಳನ್ನು ವ್ಯವಸ್ಥೆಪಡಿಸುವ ವಿಧಾನವನ್ನೇ ಆತನು ಅನುಸರಿಸಿದನು. ಈ ವೇಳೆಗಾಗಲೇ ಈ ಸ್ವಾತಂತ್ರ್ಯವನ್ನು ತಮ್ಮ ಆಡಳಿತದಲ್ಲಿ ನೀಡಬೇಕೆಂಬ ಅಭಿಪ್ರಾಯವನ್ನು ಬ್ರಿಟಿಷರು ಬಹಿರಂಗವಾಗಿಯೇ ವ್ಯಕ್ತಪಡಿಸಲು ಆರಂಭಿಸಿದ್ದರು.

ಆದ್ದರಿಂದ ಈ ರೀತಿ ಇಲಾಖೆಗಳನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲು ಈ ಅಧಿಕಾರಿಗೆ ದಾರಿ ಸುಗಮವಾಯಿತು. ಪ್ರಾಂತ್ಯವನ್ನು ಮೊದಲು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಈಗ ಎಂಟು ವಿಭಾಗಗಳಾಗಿ ಮಾಡಲಾಯಿತು. ಇದರಿಂದ ಒಂದೊಂದು ವಿಭಾಗದ ಮೇಲ್ವಿಚಾರಣೆಗೆ ನಿಯಮಿತರಾಗುತ್ತಿದ್ದ ಯುರೋಪಿಯನ್ ಅಧಿಕಾರಿಗಳ ಸಂಖ್ಯೆಯು ಹೆಚ್ಚಾಯಿತು. ಈ ರೀತಿ ಇಲಾಖೆಗಳನ್ನು ಬೆಳೆಸುವ ಪ್ರವೃತ್ತಿ ಒಮ್ಮೆ ಪ್ರಾರಂಭವಾದುದು ಯಾವ ಅಡ್ಡಿ ಆತಂಕಗಳೂ ಇಲ್ಲದೆ ಇದುವರೆಗೆ ಮುಂದುವರೆದುಕೊಂಡು ಬಂದಿದೆ. ಯಾವುದಾದರೂ ಕಾರ್ಯ ನಡೆಯಬೇಕೆಂಬ ಸೂಚನೆ ಕಂಡುಬಂದಕೂಡಲೇ ಅದಕ್ಕಾಗಿ ಒಂದು ಇಲಾಖೆಯನ್ನು ಪ್ರಾರಂಭಿಸಲಾಗುತ್ತಿದ್ದಿತು. ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಖರ್ಚನ್ನು ಹೆಚ್ಚಿಸದಿರುವಂತೆ, ಅದರಲ್ಲೂ ಸಿಬ್ಬಂದಿಯನ್ನು ಹೆಚ್ಚಿಸಿ ಖರ್ಚಿಗೆ ಮಾರ್ಗವಾಗದಿರುವಂತೆ ಕಠಿಣವಾದ ನಿರ್ಬಂಧಗಳನ್ನು ವಿಧಿಸಲಾಗಿದ್ದಿತು. ಈ ನಿರ್ಬಂಧಗಳ ಹಿಡಿತದಿಂದ ಈಗ ಕೇಂದ್ರ ಸರ್ಕಾರ ಪಾರಾದಾಗಿನಿಂದ ಮಿತಿ ಇಲ್ಲದೇ ಇಲಾಖೆಗಳನ್ನು ಹೆಚ್ಚಿಸಲಾಗುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರದ ಅಪೇಕ್ಷೆಯಂತೆ ಇಲ್ಲೂ ಹಲವು ಇಲಾಖೆಗಳನ್ನು ವ್ಯವಸ್ಥೆಗೊಳಿಸಲಾಯಿತು. **ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿರುವ ಕೆಲವು ಪ್ರದೇಶಗಳಲ್ಲಿ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಇಲಾಖೆಗಳೂ, ಅಲ್ಲಿಗಿಂತ ಮಿಗಿಲಾದ ಯೂರೋಪಿಯನ್ ಸಿಬ್ಬಂದಿಯೂ ಇವೆಯೆಂದು ಈಗ ಈ ಪ್ರಾಂತ್ಯ ಹೆಮ್ಮೆಪಡಬಹುದಾಗಿದೆ. §** ಅಭಿವೃದ್ಧಿ ಕ್ರಮಗಳಿಂದು ನಂಬಿರುವ ಈ ಸುಧಾರಣೆಗಳಿಂದ ಜನರಲ್ ಕಬ್ಬನ್‌ರವರ ಕಾಲದಲ್ಲಿಇದ್ದ 30 ಮೇಲಧಿಕಾರಿಗಳ ಸಂಖ್ಯೆ ಈಗ 135ಕ್ಕೆ ಏರಿದೆ. ಈ 135 ಸ್ಥಾನಗಳಲ್ಲಿ ಕಂದಾಯ ಮತ್ತು ನ್ಯಾಯ ಇಲಾಖೆಗಳಲ್ಲಿ ಮಾತ್ರ 30ಕ್ಕಿಂತ ಕಡಿಮೆ ಸಂಖ್ಯೆಯ ಕೆಳಮಟ್ಟದ ಅಧಿಕಾರಿಗಳು ದೇಶೀಯರಾಗಿದ್ದಾರೆ. ಈ ಅಧಿಕ ಸಂಖ್ಯೆಯ ಸಿಬ್ಬಂದಿಯುಲ್ಲಿ ಮಿಕ್ಕವರೆಲ್ಲಾ ಯೂರೋಪಿಯನ್ನರೇ. **ಹೀಗೆ ಇದ್ದಕ್ಕಿದ್ದಂತೆಯೇ ಆಡಳಿತದ ಸಿಬ್ಬಂದಿ ವರ್ಗವನ್ನು ಬಹಳವಾಗಿ ಹೆಚ್ಚಿಸಿದ್ದರಿಂದ ಮೇಲಧಿಕಾರಿಗಳನ್ನು ಕೆಲಸಕಾರ್ಯಗಳಿಗಾಗಿ ಆಶ್ರಯಿಸುವವರ ಸಂಖ್ಯೆ ಅಧಿಕವಾಯಿತು. ನೀತಿನಿಯಮಗಳಿಗನುಸಾರವಾಗಿ ನೇಮಕ ಮಾಡದೇ ಸ್ವಂತ ಇಷ್ಟ ಅಪೇಕ್ಷೆಗಳಂತೆ ನೇಮಕಗಳನ್ನು ಮಾಡಿದ್ದರಿಂದ ಸಾಮಾನ್ಯಮಟ್ಟದ ಜನರೂ ಶಕ್ತಿ ಸಾಮರ್ಥ್ಯಗಳಿಲ್ಲದಿದ್ದವರೂ, ನಿಯಮಿತ§**

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

**ರಾದರೆಂದು ಮಾತ್ರ ಹೇಳಬಹುದು. ಔದಾಸೀನ್ಯದಿಂದಲೂ ನಿರುತ್ಸಾಹ ಕಾರಕವಾದ ವಾತಾವರಣದಿಂದಲೂ ಕಳೆಗುಂದಿದ ದೇಶೀಯ ಅಧಿಕಾರಿಗಳನ್ನು ಅಸಮರ್ಥರೆಂದು ಕಡೆಗಣಿಸಿ ಯೂರೋಪಿಯನ್ ಅಧಿಕಾರಿಗಳನ್ನು ತರಲಾಯಿತು. ಹೀಗೆ ಅಧಿಕ ಸಂಖ್ಯೆಯಲ್ಲಿ ಯೂರೋಪಿಯನ್ ಅಧಿಕಾರಿಗಳನ್ನು ತಂದಿದ್ದರಿಂದ ಈ ದೇಶೀಯ ಅಧಿಕಾರಿಗಳು ಇನ್ನೂ ಕಡೆಗಣಿಸಲ್ಪಟ್ಟರು.§** ತಮ್ಮ ಮಾತುಗಳನ್ನು ಪುಷ್ಟೀಕರಿಸಲು ರಂಗಾಚಾರ್ಲುರವರು 1871-72ರ ಆಡಳಿತ ವರದಿಯಿಂದ ಸಾಮಗ್ರಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಈಗ ಅವರು ವಿವಿಧ ಇಲಾಖೆಗಳ ವಿಷಯದಲ್ಲಿ ಹೇಳಿದ ಮಾತುಗಳನ್ನು ಗಮನಿಸೋಣ.

## ನ್ಯಾಯ ಇಲಾಖೆ

ನ್ಯಾಯಾಂಗವನ್ನು ಕಾರ್ಯಾಂಗದಿಂದ ಸಂಪೂರ್ಣವಾಗಿ ಬೇರ್ಪಡಿಸಬೇಕು. ಕಂದಾಯದ ಇಲಾಖೆಯ ಅಧಿಕಾರಿಗಳು ಮುಂತಾದ ಕಾರ್ಯಾಂಗದ ಅಧಿಕಾರಿಗಳಿಗೆ ನ್ಯಾಯ ನಿರ್ವಹಣೆಯ ಕಾರ್ಯವನ್ನು ವಹಿಸಲಾಗದು. ನಮ್ಮ ನ್ಯಾಯಪದ್ಧತಿಯು ಬ್ರಿಟಿಷ್ ನ್ಯಾಯ ಪದ್ಧತಿಯನ್ನು ವಿಮರ್ಶೆ ವಿವೇಚನೆಗಳಿಲ್ಲದೆ ಅನುಸರಿಸುವುದು ಸರಿಯಲ್ಲ. ಅದು ನಮ್ಮ ದೇಶದ ಸಂಪ್ರದಾಯ, ಪದ್ಧತಿಗಳನ್ನು ಅನುಸರಿಸಬೇಕು.

## ಶಾಸನ ರಚನೆ

ಸ್ಥಿರಸ್ವತ್ತುಗಳ ದಾಖಲೆಯನ್ನು ಮಾಡುವುದಕ್ಕೆ ಸಂಬಂಧಪಟ್ಟ ಶಾಸನಗಳಲ್ಲೂ ಅಂತಹ ಇತರ ವಿಷಯಗಳಿಗೆ ಸಂಬಂಧಪಟ್ಟ ಶಾಸನಗಳಲ್ಲೂ ಅಗತ್ಯವಾದ ಮೂಲ ತತ್ತ್ವಗಳನ್ನೂ, ಆಯಾ ಶಾಸನದ ಮೂಲೋದ್ದೇಶ ಸಾಧನೆಗೆ ಬೇಕಾದ ಅಗತ್ಯ ಅಂಶಗಳನ್ನೂ ಮಾತ್ರ ನಿರೂಪಿಸಿ ಅವುಗಳ ಅನ್ವಯಕ್ಕೆ ಸಂಬಂಧಪಟ್ಟ ವಿವರಗಳನ್ನು ಬೇರೆ ಬೇರೆ ಸ್ಥಳಗಳ ಆಡಳಿತದ ಅಗತ್ಯತೆಗೆ ತಕ್ಕಂತೆ ರಚಿಸಿಕೊಳ್ಳುವುದಕ್ಕೆ ಅವಕಾಶವಿರುವಂತೆ ಮಾಡುವುದು ಸೂಕ್ತವಾಗಿದೆ. ಹೀಗೆ ಮಾಡಿದಲ್ಲಿ ಅನುಭವ ಬೆಳೆದಂತೆ ಅಂತಹ ಶಾಸನಗಳಲ್ಲಿ ಮಾರ್ಪಾಡನ್ನು ಮಾಡುವುದಕ್ಕೂ ಅವುಗಳನ್ನು ಉತ್ತಮಪಡಿಸುವುದಕ್ಕೂ ಅವಕಾಶವಾಗುತ್ತದೆ. ಅಂತಹ ವ್ಯವಸ್ಥೆಯಲ್ಲಿ ಆಯಾ ಶಾಸನದ ಮೂಲತತ್ತ್ವಗಳು ಸಾರ್ವಜನಿಕರಿಗೆ ಚೆನ್ನಾಗಿ ಮನದಟ್ಟಾಗುತ್ತವೆ. ಅವುಗಳ ಅನ್ವಯಕ್ಕೆ ಸಂಬಂಧಪಟ್ಟ ಕ್ರಮಗಳು ಕ್ರಮೇಣ

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು,

ಅನುಭವದ ಆಧಾರದ ಮೇಲೆ ರೂಪುಗೊಳ್ಳುತ್ತವೆ. ಇದರಿಂದ ಸುದೀರ್ಘವೂ ಕ್ಲಿಷ್ಟವೂ ಆದ ಶಾಸನವೊಂದನ್ನು ಜನಗಳ ಮೇಲೆ ಇದ್ದಕ್ಕಿದ್ದಂತೆ ಹೇರುವುದರಿಂದ ಆಗುವ ಕಷ್ಟಗಳನ್ನು ತಪ್ಪಿಸಬಹುದು. ಲೌಕಿಕ ನ್ಯಾಯಶಾಸ್ತ್ರಕ್ಕೂ, ದಂಡನೀತಿ ಶಾಸ್ತ್ರಕ್ಕೂ ಸಂಬಂಧಪಟ್ಟ ನಿಯಮಾವಳಿಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಅವುಗಳ ವಿಷಯದಲ್ಲಿ ಶಾಸನಸಭೆಯು ಎಲ್ಲ ವಿವರಗಳನ್ನು ಒಳಗೊಂಡ ಶಾಸನ ಗಳನ್ನು ಅವುಗಳ ಪ್ರಾಮುಖ್ಯತೆಯ ಕಾರಣದಿಂದ ರಚಿಸುವುದು ಅಗತ್ಯವಾಗಿದೆ.

## ದಂಡ ಶಾಸನದ ನಿರ್ವಹಣೆ

ಶಿಕ್ಷಾರ್ಹವಾದ ಅಪರಾಧಗಳು ಯಾವುವೋ ಅವುಗಳ ನಿರ್ದೇಶನ ಮಾಡುವ ಕಾನೂನನ್ನು ದಂಡಶಾಸನವೆಂದು ಕರೆಯಬಹುದು. ಈ ಅಪರಾಧಗಳನ್ನು ವಿಚಾರಿಸುವಾಗ ನ್ಯಾಯಾಲಯಗಳು ಅನುಸರಿಸಬೇಕಾದ ಕ್ರಮ, ವಿಧಾನಗಳು ಮುಂತಾದ ವಿಷಯಗಳನ್ನು ನಿರ್ದೇಶಿಸುವ ಕಾನೂನನ್ನು ಅಪರಾಧ ವಿಚಾರಣಾ ಶಾಸನವೆಂದು ಕರೆಯಬಹುದು. ಭಾರತಸರ್ಕಾರದವರು ತಮ್ಮ ಆಡಳಿತ ದಲ್ಲಿರುವ ಪ್ರದೇಶಗಳಿಗೆ ಅನ್ವಯಿಸುವಂತೆ ತಂದ ಈ ಕಾನೂನುಗಳನ್ನೂ ಇತರ ಕಾನೂನುಗಳನ್ನೂ ಮೈಸೂರಿಗೂ ಅನ್ವಯಿಸಲಾಗಿದೆ. ಆದ್ದರಿಂದ ಇಲ್ಲಿನ ದಂಡನ್ಯಾಯವ್ಯವಸ್ಥೆಯು ಈ ಎರಡು ಕಾನೂನುಗಳು ಮತ್ತು ಅವುಗಳಂತಹ ಇತರ ಕಾನೂನುಗಳ ಮೇಲೆ ನಿಂತಿದೆ ದಂಡಶಾಸನದಲ್ಲಿ ಅಪರಾಧಗಳ ಲಕ್ಷಣನಿರೂಪಣೆ ಇದೆಯಷ್ಟೆ. ಈ ದಂಡಶಾಸನದಲ್ಲಿ ನಿರ್ದೇಶಿಸಿರುವ ಅಪರಾಧಗಳು ಜನಸಾಮಾನ್ಯರ ಅಭಿಪ್ರಾಯಕ್ಕೆ ಅನುಗುಣವಾಗಿರದೇ ಕೃತಕತೆ ಯಿಂದ ಕೂಡಿವೆ. ಆದ್ದರಿಂದ ಅನ್ಯಾಯವಾಗಿದೆ. ಈ ದಂಡಶಾಸನವು ಕ್ರೂರವಾದ ಕಾನೂನೆಂಬುದು ಜನಗಳ ಅನುಭವದಿಂದ ಸಿದ್ಧವಾಗಿದೆ. ಎಲ್ಲ ಬಗೆಯ ಅಪರಾಧಗಳೂ ಈ ಕಾನೂನಿನಲ್ಲಿ ನಿರ್ದೇಶಿತವಾಗಬೇಕೆಂಬ ಕಾತರ ಅದನ್ನು ರೂಪಿಸಿದವರಿಗೆ ಇದ್ದುದರಿಂದ ದೊಡ್ಡ ಅಪರಾಧಗಳು, ಸಣ್ಣದಾದ ಅಪರಾಧಗಳು ಎಂಬ ತಾರತಮ್ಯವಿಲ್ಲದೆ ಅದರಲ್ಲಿ ಸೇರಿಹೋಗಿವೆ. ಹೆಚ್ಚಿನ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಬೇಕೆಂಬ ಕಾರಣದಿಂದ ವಿಪರೀತ, ಕೆಲವು ಸಂದರ್ಭ ಗಳಲ್ಲಿ ಮಿತಿ ಇಲ್ಲದ ಜುಲ್ಮಾನೆಗಳನ್ನೂ, ಕಾರಾಗೃಹವಾಸವನ್ನೂ ವಿಧಿಸಲಾಗಿದೆ. ಹೀಗೆ ಅಂತಹದೇನೂ ಶುದ್ಧರೂ, ನಿಸ್ಪೃಹರೂ ಅಲ್ಲದ ಅಧಿಕಾರಿವರ್ಗದ ಕ್ರೌರ್ಯಕ್ಕೆ ಶಾಂತಿಪ್ರಿಯನಾದ ನಾಗರಿಕನೂ, ದರೋಡೆಯೇ ಕಸಬಾಗಿರುವ ದರೋಡೆ

ಕಾರನೂ ಒಂದೇ ರೀತಿಯಲ್ಲಿ ಈಡಾಗಿದ್ದಾರೆ. ಯಾವುದೋ ಒಂದು ಕ್ಷಣಿಕವಾದ ಅಚಾತುರ್ಯದಿಂದ ದಂಡ ಶಾಸನದ ಕಪಿಮುಷ್ಟಿಗೆ ಸಿಕ್ಕಿ ಶಿಕ್ಷೆಗೆ ಒಳಗಾಗುವುದಿಲ್ಲವೆಂಬ ಭರವಸೆ ಯಾರಿಗೂ ಇಲ್ಲ. ಒಂದು ವೇಳೆ ಹೀಗೆ ಶಿಕ್ಷೆಯಾದರೆ ಪ್ರಚಲಿತವಾಗಿರುವ ಧಾರ್ಮಿಕ, ಸಾಂಪ್ರದಾಯಿಕ, ಅಭಿಪ್ರಾಯಗಳಿಗನುಗುಣವಾಗಿ ಆ ಮನುಷ್ಯ ಇದ್ದರೂ ಸತ್ತಂತೆಯೇ ಆಗುವುದು. ಜನಸಾಮಾನ್ಯರ ಅಭಿಪ್ರಾಯದಲ್ಲಿ ಯಾವುದು ಅಪರಾಧವೆಂದು ಗಣಿತವಾಗಿದೆಯೋ ಅದನ್ನು ಮಾತ್ರ ಒಳಗೊಂಡು ಎಸಗಿದ ಎಲ್ಲ ಸಾಮಾನ್ಯ ಅಪರಾಧಗಳಿಗೂ ಕಠಿಣವಾದ ಶಿಕ್ಷೆಗಿಂತ ಉಚಿತವಾದ ಶಿಕ್ಷೆ ಆಗುವಂತೆ ರೂಪಿಸಿರುವ, ಅಸಾಧಾರಣ ಅಧಿಕಾರವನ್ನು ವಿಶೇಷ ನ್ಯಾಯಸ್ಥಾನಗಳಿಗೆ ವಹಿಸಿರುವ, ಸರಳವಾದ ದಂಡ ಶಾಸನವೇ ರಾಜ್ಯಕ್ಕೆ ನಿಜವಾಗಿ ಅಗತ್ಯವಾಗಿರುವುದು.

## ಪೋಲೀಸ್

ಮದ್ರಾಸ್ ಪ್ರಾಂತ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗಾಗಿ ರಚಿತವಾದ ಪೋಲೀಸ್ ಪಡೆಯ ಮಾದರಿಯ ಮೇಲೆ ಒಂದು ಪೋಲೀಸ್ ಪಡೆಯನ್ನು ಯೂರೋಪಿಯನ್ ಮೇಲುಸ್ತುವಾರಿಯಲ್ಲಿ ಬೆಂಗಳೂರು ನಗರ ಮತ್ತು ಜಿಲ್ಲೆಗಳಲ್ಲಿ 1868—69ರಲ್ಲಿ ರಚಿಸಲಾಯಿತು. ಈ ಪಡೆಗೆ ವಾರ್ಷಿಕ ವೆಚ್ಚ 1½ ಲಕ್ಷ ರೂಪಾಯಿಗಳು ಈ ಪಡೆ ಹೇಗೆ ಕೆಲಸ ಮಾಡುತ್ತದೆ. ಎಂಬುದರ ವಿಷಯ ಸಾಕಾದಷ್ಟು ಮಾಹಿತಿಯಾಗುವ ಮೊದಲೇ ಯೂರೋಪಿಯನ್ ಮೇಲುಸ್ತುವಾರಿಯಲ್ಲಿ ಇದನ್ನು ಸಂಸ್ಥಾನದ ಇತರ ಭಾಗಗಳಲ್ಲಿಯೂ ಅಸ್ತಿತ್ವಕ್ಕೆ ತರಬೇಕೆಂದು ಸರ್ಕಾರಿ ವರದಿಗಳಲ್ಲಿ ಒತ್ತಾಯಪಡಿಸಲಾಯಿತು. ಆದರೆ 1871–72ರ ವಾರ್ಷಿಕ ವರದಿಯಲ್ಲಿ ಶೇಕಡ 23 ರಷ್ಟು ಅಧಿಕಾರಿಗಳು, ಪೇದೆಗಳು ಆ ವರ್ಷದಲ್ಲಿಯೂ, ಶೇಕಡ 50 ರಷ್ಟು ಅಧಿಕಾರಿಗಳು, ಪೇದೆಗಳು 1870-71 ರಲ್ಲಿಯೂ, ನ್ಯಾಯಸ್ಥಾನಗಳಲ್ಲಿಯೂ, ಇಲಾಖೆಯ ತನಿಖೆಗಳಲ್ಲಿಯೂ, ಅವರು ಮಾಡಿದ ತಪ್ಪುಗಳಿಗಾಗಿಯೂ ಅಕ್ರಮಗಳಿಗಾಗಿಯೂ ಶಿಕ್ಷೆಗೆ ಒಳಗಾಗಬೇಕಾಗಿ ಬಂದಿತೆಂದು ನಿರೂಪಿಸಲಾಗಿದೆ. ಯೂರೋಪಿಯನ್ ಅಧಿಕಾರಿಗಳು ಈ ಇಲಾಖೆಯಲ್ಲಿ ಇದ್ದುದರಿಂದ ಮಾತ್ರವೇ ಅದರಲ್ಲಿ ನೀತಿಬದ್ಧತೆ ಉಂಟಾಗಲಿಲ್ಲ. ಈ ಪೋಲೀಸ್ ಪಡೆಯನ್ನು ಸಂಸ್ಥಾನದ ಮಿಕ್ಕ ಭಾಗಗಳಿಗೆ ವಿಸ್ತರಿಸುವ ಯೋಜನೆಯನ್ನು ಕೈಬಿಡ

ಲಾಯಿತು. "ಪರಂಪರಾನುಗತವಾಗಿ ಬೆಳೆಸಿಕೊಂಡು ಬಂದ ಕರ್ತವ್ಯ ಪ್ರಜ್ಞೆ ಜವಾಬ್ದಾರಿಯ ಅರಿವುಗಳಾದರೂ ಹಳೆಯ ಸಿಬ್ಬಂದಿ ವರ್ಗಕ್ಕೆ ಇದ್ದಿತು. ಅದನ್ನು ಮೂಲೆಗುಂಪು ಮಾಡಿ ಎಲ್ಲ ವರ್ಗಗಳಿಂದಲೂ ಯಾವ ಸಂಪ್ರದಾಯ, ಚಾರಿತ್ರ್ಯ ಶುದ್ಧತೆಯೂ ಇಲ್ಲದ ಬೇಕಾಬಿಟ್ಟಿ ಜನರನ್ನು ಸೇರಿಸಿಕೊಂಡು, ಅವರಲ್ಲಿ ನೈತಿಕ ಔನ್ನತ್ಯವನ್ನು ಉಂಟುಮಾಡಲು ಕೇವಲ ಅಸಮರ್ಥರಾದ ಯೂರೋಪಿಯನ್ ಮೇಲಧಿಕಾರಿಗಳನ್ನು ನಿಯಮಿಸಿ, ಹೊಸ ಇಲಾಖೆಗಳನ್ನು ಕಟ್ಟಿದರೆ ಆಗತಕ್ಕ ಮತ್ತು ಯಾವಾಗಲೂ ಆಗುವ ಪರಿಣಾಮ ಇದೆ."

## ಭೂಕಂದಾಯ ಆಡಳಿತ

ಪ್ರಾಂತ್ಯದ ಒಟ್ಟು ಆದಾಯ ಈಗ 105 ಲಕ್ಷ ರೂಪಾಯಿಗಳು ಇದೆ. ಕೆಲವು ವರ್ಷಗಳಿಂದ ಆದಾಯ ಈ ಮಟ್ಟದಲ್ಲೇ ನಿಂತಿದೆ. ಭವಿಷ್ಯದಲ್ಲಿ ಅದರಲ್ಲಿ ಅಂತಹ ಹೆಚ್ಚಿನ ಬದಲಾವಣೆ ಆಗುವ ಸಂಭವವಿಲ್ಲ. ಜಮೀನಿನ ಅಳತೆಯನ್ನು ಮಾಡುವ, ಹಕ್ಕುದಾರರು, ಗೇಣಿದಾರರು ಮುಂತಾದವರ ಹೆಸರನ್ನು ಸರ್ಕಾರದ ದಾಖಲೆಗಳಲ್ಲಿ ಸೇರಿಸುವ ಕಾರ್ಯ 1862ರಲ್ಲಿ ಪ್ರಾರಂಭವಾಯಿತು. ಬೊಂಬಾಯಿನ ಮಾದರಿಯ ಮೇಲೆ ಈ ಕೆಲಸವನ್ನು ಕೈಗೊಳ್ಳಲಾಯಿತು. ಈ ಇಲಾಖೆಯನ್ನು 1862—63 ರಲ್ಲಿ ಏರ್ಪಡಿಸಲಾಯಿತು. ಈ ಕೆಲಸ ಮುಗಿಯುವುದಕ್ಕೆ ಸುಮಾರು 20 ವರ್ಷಗಳು ಅಗತ್ಯವೆಂದು ನಿರೀಕ್ಷಿಸಲಾಗಿತ್ತು. 1871—72ರ ವರೆಗೆ ಅಂದರೆ 9 ವರ್ಷಗಳ ಅವಧಿಯಲ್ಲಿ ಪ್ರಾಂತ್ಯದಲ್ಲಿರುವ 81 ತಾಲ್ಲೂಕುಗಳ ಪೈಕಿ 11 ತಾಲ್ಲೂಕುಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲಾಯಿತು. ಇನ್ನು 17 ತಾಲ್ಲೂಕುಗಳಲ್ಲಿ ಕೆಲಸ ನಡೆಯುತ್ತಿದ್ದಿತು. ಇನ್ನೂ ಶೀಘ್ರಗತಿಯಿಂದ ಅದು ಸಾಗುತ್ತದೆ ಎಂದು ಎಣಿಸಿದರೂ 20-25 ವರ್ಷಗಳಾದರೂ ಅದು ಮುಗಿದಿರುವುದಿಲ್ಲ. ಈ ಮೋಜಣಿ ಕಾರ್ಯವು 9 ವರ್ಷದಿಂದ ನಡೆಯುತ್ತಿದ್ದರೂ ದಕ್ಷರೂ, ಸ್ಥಳೀಕರೂ, ಅನುಭವಸ್ಥರೂ ಆದ ಅಧಿಕಾರಿಗಳಿಂದ ಅದರ ನಿಷ್ಪಕ್ಷಪಾತವಾದ ವಿಮರ್ಶೆಯನ್ನು ಮಾಡಿಸಿಲ್ಲ. ನ್ಯಾಯವಾಗಿ ವಿಧಿಸಬೇಕಾದ್ದಕ್ಕಿಂತ ಹೆಚ್ಚಿನ ಕಂದಾಯವನ್ನು ವಿಧಿಸಿದೆಯೆಂದೂ, ಕಿರುಕುಳಕ್ಕೆ ಅವಕಾಶವಾಗಿದೆಯೆಂದೂ ದೂರುಗಳಿರುವುದರಿಂದ ವಿಶೇಷತಃ ಇಂತಹ ವಿಮರ್ಶೆಯನ್ನು ಏರ್ಪಡಿಸುವರೆಂದು ನಿರೀಕ್ಷಿಸಬಹುದಾಗಿದ್ದಿತು. ಈಗ ಪ್ರಚಲಿತವಾಗಿರುವ ದರಗಳನ್ನು ಆಧರಿಸಿಯೂ

ಕೆಲವು ಸಂದರ್ಭಗಳಲ್ಲಿ ಅದಕ್ಕಿಂತ ಹೆಚ್ಚಾಗಿಯೂ ಭೂಕಂದಾಯವನ್ನು ನಿಗದಿ ಮಾಡಲಾಗಿದೆ. ಆದರೆ ಕಳೆದ 20 ವರ್ಷಗಳಿಂದ ಭೂಕಂದಾಯವನ್ನು ದ್ವಿಗುಣ ಮಾಡಲಾಗಿದೆ. ಪದಾರ್ಥಗಳ ಬೆಲೆ ತುಂಬಾ ತುಟ್ಟಿಯಾಗಿದ್ದ ಈ ಕಾಲದಲ್ಲಿ ಈ ರೀತಿ ಕಂದಾಯವನ್ನು ಹೆಚ್ಚಿಸಲಾಗಿದೆ. ಈ ಬೆಲೆಗಳು ಇಳಿದಾಗ ಅವುಗಳ ಮೇಲೆ ಆಧರಿಸಿ ಗೊತ್ತುಮಾಡಿದ ಭೂಕಂದಾಯವನ್ನು ಕೊಡುವುದು ಕಷ್ಟವಾಗಿ ಆ ವ್ಯವಸ್ಥೆಯೇ ಮುರಿದುಬೀಳುವ ಸಂಭವವಿದೆ.

ಮೋಜಣಿ ಕೆಲಸವನ್ನು ಮಾಡುವುದಕ್ಕೆ ದೇಶೀಯರನ್ನು ತರಪೇತು ಮಾಡಿಲ್ಲ. ಸಂಸ್ಥಾನವನ್ನು ದೇಶೀಯ ಆಡಳಿತಕ್ಕೆ ವಹಿಸುವ ಕಾಲ ಸನ್ನಿಹಿತವಾಗುತ್ತಿರುವುದರಿಂದ ಆ ರೀತಿ ಶಿಕ್ಷಣವನ್ನು ಕೊಡುವುದು ಅಗತ್ಯ.

## ಇನಾಂ ಆಯೋಗ

ಗೇಣಿದಾರರ ಹಿತಾಸಕ್ತಿಗಳಿಗೆ ಹೆಚ್ಚಿನ ಭದ್ರತೆಯನ್ನು ಕಲ್ಪಿಸುವುದಕ್ಕೂ, ಸರ್ಕಾರದ ಆದಾಯವನ್ನು ಭದ್ರಪಡಿಸುವುದಕ್ಕೂ ಏರ್ಪಡಿಸಿದ ಇನ್ನೊಂದು ವ್ಯವಸ್ಥೆ ಎಂದರೆ ಇನಾಮತಿ ಆಯೋಗ. ಈ ಆಯೋಗದ ಕಾರ್ಯವನ್ನು ಮಾಡುವಾಗ ರೂಪಿಸಿಕೊಂಡಿರುವ ತತ್ವಗಳೂ, ಕಾರ್ಯವಿಧಾನವೂ ಮದ್ರಾಸಿನ ವ್ಯವಸ್ಥೆಯ ಅನುಕರಣವಾಗಿದೆ. ಮೈಸೂರಿನಲ್ಲಿರುವ ಎಲ್ಲ ಇನಾಮತಿಗಳ ಸಂಪೂರ್ಣಪಟ್ಟಿಯನ್ನು, ಅವುಗಳು ನಿಯಮಾನುಸಾರವಾದ ಇನಾಮತಿಗಳಾಗಲಿ ಅನಧಿಕೃತವಾದ ಇನಾಮತಿಗಳಾಗಲಿ ಬೇರೆ ಬೇರೆ ಸಂದರ್ಭಗಳಲ್ಲಿ ತಯಾರಿಸಲಾಗಿದೆ. ಜಿಲ್ಲೆಯ ಅಧಿಕಾರಿಗಳು, ದೇಶಭಾಷೆಯಲ್ಲಿರುವ ದಾಖಲೆಗಳ ಮೇಲೆ ಈ ಇನಾಮತಿ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ವ್ಯವಸ್ಥೆಯನ್ನು ಒಂದೆರಡು ವರ್ಷಗಳಲ್ಲಿ ಮಾಡಬಹುದು. ಇನಾಮತಿ ಅವಧಿಗೆ ಸಂಬಂಧಪಟ್ಟ ಕೆಲವು ನಿಯಮಗಳನ್ನು ನಿರ್ಧರಿಸಿದ್ದಲ್ಲಿ ಈ ಕೆಲಸ ಸುಲಭವಾಗಿ ಸಾಗುತ್ತಿತ್ತು. ದೇಶಭಾಷೆಯಲ್ಲಿ ಹಕ್ಕುಪತ್ರಗಳನ್ನು ಕೊಡುವ ಮೂಲಕ ಇನಾಮತಿಯ ಹಕ್ಕುಬಾಧ್ಯತೆಗಳನ್ನು ಸ್ಥಿರೀಕರಿಸಬಹುದು. ಮದ್ರಾಸಿನಲ್ಲಿರುವಂತೆ ದೊಡ್ಡ ದೊಡ್ಡ ಪದಗಳುಳ್ಳ, ಆದರೆ ಅರ್ಥವಾಗುವುದು ಕಷ್ಟವಾದ ಇಂಗ್ಲೀಷ್ ಭಾಷೆಯ ಹಕ್ಕು ಪತ್ರಗಳೇನೂ ಅಗತ್ಯವಿಲ್ಲ. ದೇಶ ಭಾಷೆಯಲ್ಲಿರುವ ಹಕ್ಕುಪತ್ರಗಳಿಂದಲೇ ಈ ಇನಾಮತಿ ಹಕ್ಕುಗಳನ್ನು ಸ್ಥಿರೀಕರಿಸಬಹುದು.

## ಸುಂಕ

ಅಡಿಕೆ, ಹೊಗೆಸೊಪ್ಪು, ತೆಂಗಿನಕಾಯಿ, ವೀಳ್ಯದೆಲೆ, ಮೆಣಸು, ಏಲಕ್ಕಿ ಮತ್ತು ಅಫೀಮುಗಳ ಮೇಲೆ ಸುಂಕಗಳನ್ನು ವಿಧಿಸಲಾಗುತ್ತಿತ್ತು. ಈ ಸುಂಕವನ್ನು ಕಂದಾಯದ ಬದಲು ವಿಧಿಸಿರಲಿಲ್ಲ. ಆದರೆ ಹೆಚ್ಚಿನ ಕಂದಾಯವನ್ನು ಈ ಬೆಳೆಗಳನ್ನು ಬೆಳೆಯುವ ಭೂಮಿಯ ಮೇಲೆ ಹಾಕಿ, ಅದಲ್ಲದೇ ಈ ಸುಂಕವನ್ನು ವಿಧಿಸಲಾಗುತ್ತಿದ್ದಿತು. ಈ ಸುಂಕವನ್ನು ಕೈಬಿಡುವುದರಿಂದ ತುಂಬಾ ನಷ್ಟವಾಗುತ್ತದೆ ಎಂದು ಎಣಿಸುವುದಾದರೆ ಅಡಿಕೆಯನ್ನು ಬೆಳೆಯಲು ತುಂಬಾ ಸೌಲಭ್ಯ ಇರುವ ತಾಲ್ಲೂಕುಗಳಲ್ಲಿ ಅದನ್ನು ಮುಂದುವರಿಸಬಹುದು. ಅಥವಾ ಸಾಧ್ಯವಿದ್ದೆಡೆ ಈ ಸುಂಕವನ್ನೇ ಇನ್ನೂ ಹೆಚ್ಚಿನ ಭೂಕಂದಾಯವಾಗಿ ಪರಿವರ್ತಿಸಬಹುದು.

ಬ್ರಿಟಿಷರು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡ ಮೇಲೆ ಅದರ ಸಂಪದಭಿವೃದ್ಧಿಗೆ ಕೊಟ್ಟ ಒಂದು ಕಾಣಿಕೆಯೆಂದರೆ ಕಾಫಿ ತೋಟಗಳನ್ನು ಪ್ರಾರಂಭಿಸಿದುದು. ಆದರೆ ಇದು ಸರ್ಕಾರ ಮಾಡಿದ ಕೆಲಸವಲ್ಲ. ಖಾಸಗಿ ಕ್ಷೇತ್ರದಲ್ಲಿ ಮಾಡಿದ ಕೆಲಸ. ಕಾಫಿಯನ್ನು ಬೆಳೆಯುವ ಭೂಮಿಯ ಮೇಲೆ ಕಂದಾಯವನ್ನು ವಿಧಿಸುವ ಬದಲು ಒಂದು ಮಣಕ್ಕೆ 4 ಆಣೆಯಂತೆ ಕಾಫಿಯ ಮೇಲೆ ಸುಂಕವನ್ನು ವಿಧಿಸಲಾಯಿತು. ಹೊಸದೊಂದು ಉದ್ಯಮವನ್ನು ಅದರ ಆರಂಭದ ದೆಶೆಯಲ್ಲಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಮಾಡಿದ ಈ ವ್ಯವಸ್ಥೆ ಎಷ್ಟೇ ಒಳ್ಳೆಯದಾಗಿ ಕಂಡರೂ ಶಾಶ್ವತವಾಗಿ ಅದನ್ನೇ ಮುಂದುವರಿಸುವುದಕ್ಕೆ ಅನೇಕ ಬಾಧಕಗಳಿವೆ.

ಭೂಮಿಯ ಮೇಲೆ, ವ್ಯವಸಾಯೋತ್ಪನ್ನ ವಸ್ತುಗಳ ಮೇಲೆ ವಿಧಿಸಿದ ಸುಂಕಗಳನ್ನು ಮೇಲೆ ಪ್ರಸ್ತಾಪಿಸಲಾಗಿದೆಯಷ್ಟೆ. ಇವಲ್ಲದೇ ಮನೆಗಳು, ಅಂಗಡಿಗಳು, ಮಗ್ಗಗಳು, ಎಣ್ಣೆ ಗಿರಣಿಗಳು, ಗಾಡಿಗಳು, ಸಂಸ್ಥಾನದೊಳಗೆ ತಯಾರಾದ ಬಟ್ಟೆ ಇವುಗಳ ಮೇಲೆ ಕಂದಾಯವನ್ನು ಮೈಸೂರಿನಲ್ಲಿ ವಿಧಿಸಲಾಗುತ್ತಿದೆ. ಈ ತೆರಿಗೆಗಳನ್ನು ತೆಗೆದು ಹಾಕಿ ಅವನ್ನು ವಿಧಿಸುವ ಅಧಿಕಾರವನ್ನು ನಗರಸಭೆಗಳಿಗೆ ಕೊಡಬೇಕು.

## ಮಾದಕ ಪಾನೀಯಗಳ ಮೇಲೆ ತೆರಿಗೆ

ಮಾದಕ ಪಾನೀಯಗಳ ಮೇಲೆ ಹಾಕುವ ತೆರಿಗೆಗೆ ಅಬ್ಕಾರಿ ಎಂದು ಹೆಸರು. ಮೈಸೂರಿನಲ್ಲೂ, ಇತರ ಭಾಗಗಳಲ್ಲೂ ಈ ಬಾಬಿನಿಂದ ಬರುವ ಆದಾಯ ಅತಿ ಹೆಚ್ಚಿನ ಮಟ್ಟವನ್ನು ಮುಟ್ಟಿದೆ, ಇನ್ನೂ ಬೆಳೆಯುತ್ತಿದೆ. ಪಟ್ಟಣಗಳಲ್ಲಿ ವಾಸಿಸುವ ಕೆಲವು ಕಲಬೆರಕೆಯ ವರ್ಗಗಳನ್ನು ಬಿಟ್ಟರೆ ಉಳಿದ ಇನ್ನಾವ ವರ್ಗಗಳಲ್ಲೂ ಕುಡಿತದ ಅಭ್ಯಾಸವು ಕಂಡು ಬರುತ್ತಿರಲಿಲ್ಲ. ಈಗ ಈ ದುಷ್ಟಪದ್ಧತಿ ಬಹುಬೇಗ ಹರಡುತ್ತಿದೆ. ಸಮಾಜಹಿತೈಷಿಗಳ ಗಮನ ಸೆಳೆಯಬೇಕಾದ ಅತಿಮುಖ್ಯ ಪ್ರಶ್ನೆಗಳಲ್ಲಿ ಇದೊಂದಾಗಿದೆ. ಸರ್ಕಾರದವರು ಇದನ್ನು ಆದಾಯದ ಒಂದು ಬಾಬು ಎಂಬುದಾಗಿ ಮಾತ್ರ ಪರಿಗಣಿಸಿದ್ದಾರೆ. ಅಬ್ಕಾರಿ ಆದಾಯ ಹೆಚ್ಚುತ್ತಿರುವುದು ಈ ದುರಾಚಾರ ಬಹುಬೇಗ ಹರಡುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ದುರಾಚಾರ ಶೀಘ್ರವಾಗಿ ಹರಡುತ್ತಿರುವುದಕ್ಕೆ ಸರ್ಕಾರ ಹೆಚ್ಚು ಗಮನಕೊಟ್ಟಿಲ್ಲ. ಒಂದು ವೇಳೆ ಅದರ ಕಡೆ ಅವರ ಗಮನ ಹರಿದಿದ್ದರೆ, ಕುಡುಕತನವನ್ನು ಕಡಿಮೆ ಮಾಡಲು ಏಕೈಕ ಮಾರ್ಗವೆಂದರೆ ಮದ್ಯದ ಮೇಲೆ ಹಾಕುವ ಕಂದಾಯವನ್ನು ಹೆಚ್ಚಿಸುವುದು ಎಂದುಕೊಂಡು ಸಮಾಧಾನ ಪಡೆಯುವುದರಲ್ಲಿ ಕೊನೆಗೊಂಡಿದೆ.

ಸರ್ಕಾರದವರು ಮದ್ಯದ ಅಂಗಡಿಗಳ ಸಂಖ್ಯೆಯನ್ನು ನಿಗದಿ ಮಾಡಿ,ಅವುಗಳು ತೆರೆದಿರುವ ಸಮಯದ ಅವಧಿಯನ್ನು ಕ್ಲುಪ್ತಪಡಿಸಿ,. ಮಾರಾಟ ಮಾಡುವ ಮದ್ಯದ ಗುಣ ಮತ್ತು ಪ್ರಮಾಣಗಳನ್ನು ಗೊತ್ತುಪಡಿಸಿದಲ್ಲಿ ಈ ದುಷ್ಟ ಪದ್ಧತಿ ಹರಡುವುದನ್ನು ತಪ್ಪಿಸಬಹುದು.

## ಅರಣ್ಯ ಇಲಾಖೆ

ಸರ್ಕಾರಕ್ಕೆ ಸೇರಿದ ಅರಣ್ಯಗಳನ್ನು ನೋಡಿಕೊಳ್ಳುವುದಕ್ಕೆ ಬೇರೆ ಸಿಬ್ಬಂದಿ ವರ್ಗವನ್ನು ನಿಯಮಿಸಲಾಗಿದೆ. ಈ ಇಲಾಖೆಯಲ್ಲಿ ಈಗಾಗಲೇ ಒಬ್ಬ ಮುಖ್ಯಾಧಿಕಾರಿಯೂ, ಆಡಳಿತಕ್ಕೆ ಸಂಬಂಧಪಟ್ಟಂತಹ ಕೆಲಸವನ್ನು ನೋಡುತ್ತಿರುವ 7 ಜನ ಯೂರೋಪಿಯನ್ ಸಹಾಯಕ ಅಧಿಕಾರಿಗಳೂ, ಉಪಪಾಲಕರೂ,ವನಾಧಿಕಾರಿಗಳೂ ಮತ್ತು ಇತರ ಸಿಬ್ಬಂದಿ ವರ್ಗವೂ ಇದ್ದಾರೆ. ಇವರ ಸಂಬಳ ಸಾರಿಗೆಗಳಿಗಾಗಿ

ವರ್ಷಕ್ಕೆ 72 ಸಾವಿರ ರೂಪಾಯಿ ಖರ್ಚಾಗುತ್ತಿದೆ. 1871—72ನೇ ಸಾಲಿಗೆ ಅರಣ್ಯಗಳಿಂದ ಬಂದ ಆದಾಯ 3ಲಕ್ಷ 20 ಸಾವಿರ ರೂಪಾಯಿ. ಮರವನ್ನು ಮಾರುವುದರಿಂದ ಈ ಆದಾಯ ಬರುತ್ತಿದೆ. ಆದರೆ ಇದೇ ಆದಾಯವನ್ನು ಹೆಚ್ಚಿಗೆ ಖರ್ಚಿಲ್ಲದೆ ಗಳಿಸಲಾಗುತ್ತಿದ್ದಿತು. ಈಗಲಾದರೂ ಸಿಬ್ಬಂದಿ ವರ್ಗದ ಸಂಬಳ ಮತ್ತು ಇತರ ಖರ್ಚುಗಳು ಒಂದು ಲಕ್ಷ 60 ಸಾವಿರ ರೂಪಾಯಿ ಅಂದರೆ ಆದಾಯದ ಅರ್ಧಭಾಗವಾಗುತ್ತದೆ. ತೇಗ, ಯೂಕ್‌ಲಿಪ್ಟಸ್ ಮತ್ತು ಗಂಧದ ತೋಪುಗಳನ್ನು ಬೆಳೆಸುವ ಎಲ್ಲ ಪ್ರಯತ್ನ ವಿಫಲವಾಗಿದೆ. ಈ ಇಲಾಖೆಯಲ್ಲಿ ಕೆಲಸಕ್ಕಿಂತ ಸದ್ದುಗದ್ದಲ ಜಾಸ್ತಿ.

## ಲೋಕೋಪಯೋಗಿ ಇಲಾಖೆ

ಈ ಇಲಾಖೆಯು ಯಾವ ಅಡ್ಡಿ ಆತಂಕಗಳೂ ಇಲ್ಲದೆ ದೊಡ್ಡದಾಗಿ ಬೆಳೆದಿದೆ. ಅದರಲ್ಲಿ ದುಂದು ಖರ್ಚಾಗುತ್ತಿದೆ. ರೈತರನ್ನು ಬಲವಂತ ಮಾಡಿ ಅವರಿಗೆ ಯಾವ ಪ್ರತಿಫಲವನ್ನೂ ಕೊಡದೆ ದುಡಿಸಿಕೊಳ್ಳಲಾಗುತ್ತಿದೆ. ರೈತರ ಮೇಲೆ ವಿವಿಧವಾದ ಮೇಲುತೆರಿಗೆಗಳನ್ನು ಹೇರಲಾಗಿದೆ. "ಈ ರೀತಿ ಅವರು ನಾನಾ ಬಗೆಯ ಮೇಲುತೆರಿಗೆಗಳನ್ನು ಕೊಡಬೇಕಾಗಿ ಬಂದಿರುವುದರಿಂದ ಅವರನ್ನು ತೋರಿ ಬಂದಾಗ ಪುಕ್ಕಟ್ಟೆ ಕೆಲಸಗಳಿಗಾಗಿ ಬಳಸಿಕೊಳ್ಳುವುದನ್ನು ಬಿಟ್ಟುಬಿಡಲಾಗುವುದೆಂದು ಭಾವಿಸುವುದಕ್ಕೆ ಅವಕಾಶವಿದ್ದಿತು." ಆದರೆ ಅವರನ್ನು ಒತ್ತಾಯ ಮಾಡಿ, ಅವರಿಂದ ಕೆಲಸಗಳನ್ನು ಮಾಡಿಸುವುದು ಮೊದಲಿನಂತೆಯೇ ಮೈಸೂರು ಪ್ರಾಂತ್ಯದಲ್ಲಿ ಪ್ರಚಾರದಲ್ಲಿದೆ. ಅಷ್ಟೇಕೆ, ಹೊಸ ಇಲಾಖೆಗಳನ್ನು ಅಸ್ತಿತ್ವಕ್ಕೆ ತಂದಂತೆಲ್ಲಾ ರೈತರಿಂದ ಒತ್ತಾಯದ ಕೆಲಸವನ್ನು ಮಾಡಿಸುವುದು ಹೆಚ್ಚಾಗುತ್ತಿದೆ. ಈ ರೀತಿ ಜನಗಳಿಂದ ಒತ್ತಾಯಪೂರ್ವಕವಾಗಿ ಕೆಲಸಮಾಡಿಸುವುದರಿಂದ ಅವರ ಮನಸ್ಸು ಕ್ಷೋಭೆಗೊಳ್ಳುತ್ತದೆ. ಮೈಸೂರಿನ ರೈತಾಪಿ ವರ್ಗವನ್ನು ಅದರ ಔದಾಸೀನ್ಯಕ್ಕೆ, ಜಡತೆಗೆ, ನಿರಾಸಕ್ತಿಗೆ ದೂಷಿಸಲಾಗುತ್ತಿದೆ. ಆದರೆ ಅವರ ಜಡತೆಗೆ ಅವರಿಂದ ಒತ್ತಾಯಪೂರ್ವಕವಾಗಿ ಕೆಲಸ ಮಾಡಿಸುವುದು ಮುಖ್ಯ ಕಾರಣವಾಗಿದೆ. 1870—71ರ ಆಡಳಿತ ವರದಿಯಲ್ಲಿ ಹಾಸನ ಜಿಲ್ಲೆಯ ಅಧಿಕಾರಿಯೊಬ್ಬನು, ಸ್ಥಳದಲ್ಲಿ ವಿಧಿಸಿದ ಮೇಲುತೆರಿಗೆಗಳಿಂದ ಮಾರ್ಗಗಳನ್ನು ನಿರ್ಮಿಸುವುದಕ್ಕೆ ಬೇಕಾದಷ್ಟು ಹಣವನ್ನು ಶೇಖರಿಸಿದ್ದರೂ, ರೈತರನ್ನು ತನ್ನ ವೈಯಕ್ತಿಕ ಪ್ರಭಾವದಿಂದ ಒಲಿಸಿಕೊಂಡು ಅವರಿಂದ ರಸ್ತೆಗಳನ್ನು ಮಾಡುವುದಕ್ಕೆ ಶ್ರಮದಾನವನ್ನು ಮಾಡಿ

ಸಿದನೆಂದು ಶ್ಲಾಘಿಸಲಾಗಿದೆ. ಮೈಸೂರು ಜಿಲ್ಲೆಯ ಅಧಿಕಾರಿಗಳು ಕಳೆದ ವರ್ಷ ಇದೇ ಬಗೆಯ ಕಾರ್ಯವನ್ನು ಮಾಡಿರುವುದರಿಂದ ಇನ್ನೂ ಹೆಚ್ಚಿನ ಶ್ಲಾಘನೆಯನ್ನು ನಿರೀಕ್ಷಿಸುತ್ತಿದ್ದಾರೆಂದು ಹೇಳಬಹುದು. ಸ್ವಪ್ರತಿಷ್ಠೆಗಾಗಿ, ಸ್ವಾರ್ಥಪರರೂ ನಿರಂಕುಶರೂ ಆದ ಅಧಿಕಾರಿಗಳು ರೈತವರ್ಗದಿಂದ ಒತ್ತಾಯಪೂರ್ವಕವಾಗಿ ಈ ಬಗೆಯ ಕೆಲಸಗಳನ್ನು ಮಾಡಿಸಿ ಅನಂತರ ಅದನ್ನು ವೈಯಕ್ತಿಕ ಪ್ರಭಾವದಿಂದ ಮಾಡಿಸಿದೆ, ಅದು ಶ್ರಮದಾನ ಎಂದು ಹೇಳುವುದು ಉರಿಯುವ ಗಾಯಕ್ಕೆ ಉಪ್ಪನ್ನು ಹಾಕಿದಂತೆಯೇ ಸರಿ. ಅನೇಕ ಸಂದರ್ಭಗಳಲ್ಲಿ ಜನಗಳ ಅಭಿಪ್ರಾಯ ಗಳನ್ನೂ, ಅವರ ಅನುಕೂಲಗಳನ್ನೂ ಲಕ್ಷಿಸದೆ, ಈ ರೀತಿ ಅವರಿಂದ ಒತ್ತಾಯ ಪೂರ್ವಕವಾಗಿ ಕೆಲಸವನ್ನು ಮಾಡಿಸಲಾಗುತ್ತಿದೆ. ಯಾವ ಹಳ್ಳಿಯಲ್ಲಿ ಕೆಲಸ ನಡೆಯುತ್ತದೋ, ಅಲ್ಲಿಯ ಜನರಿಗೆ ಆಸಕ್ತಿ ಇಲ್ಲದ ಅಥವಾ ಸರಿಯಾಗಿ ಆಲೋ ಚನೆ ಮಾಡದೇ ಕೈಗೊಂಡು ಆಮೇಲೆ ಬಿಟ್ಟುಬಿಡಬೇಕಾಗುವ, ಸಾರ್ವಜನಿಕ ಅಗತ್ಯಗಳನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಅಧಿಕಾರಿಗಳ ವೈಯಕ್ತಿಕ ಅಗತ್ಯ ಗಳನ್ನು ಪೂರೈಸುವ ಕಾರ್ಯಗಳಿಗಾಗಿ ಹೀಗೆ ಜನರನ್ನು ಒತ್ತಾಯಪೂರ್ವಕ ವಾಗಿ ಶ್ರಮದಾನ ಮಾಡುವಂತೆ ಮಾಡಲಾಗುತ್ತದೆ. ಇದರಿಂದ ಕಿರುಕುಳಕ್ಕೆ ಆಸ್ಪದವಾಗಿ ಜನಗಳ ನ್ಯಾಯಾನ್ಯಾಯ ವಿವೇಚನೆಯೂ, ಸ್ವಾತಂತ್ರ್ಯಪರತೆಯೂ ನಾಶವಾಗಿ ಹೋಗುತ್ತದೆ."

"ಲೋಕೋಪಯೋಗಿ ಇಲಾಖೆಯಲ್ಲಿ ಆಗಿರುವ ಅಗಾಧ ನಷ್ಟದಿಂದ ಮೈಸೂರು ಸಂಸ್ಥಾನದ ರೈಲ್ವೆ ಯೋಜನೆಯನ್ನು ಮುಂದೆ ಹಾಕಬೇಕಾಗಿ ಬಂದಿದೆ."

## ವಿದ್ಯಾಭ್ಯಾಸ ಇಲಾಖೆ

"ಆಧುನಿಕ ಕಾಲದಲ್ಲಿ ವಿದ್ಯಾಭ್ಯಾಸವು ಜನಗಳ ಸ್ಥಿತಿಯನ್ನು ಉತ್ತಮಗೊಳಿಸು ವುದಕ್ಕೆ ಬಹು ಪ್ರಬಲವಾದ ಸಾಧನವಾಗಿದೆ. ಆದ್ದರಿಂದ ದೇಶೀಯ ಆಳ್ವಿಕೆಯಲ್ಲಿ ಒಂದು ಪ್ರಾಂತ್ಯದ ಅಭ್ಯುದಯವನ್ನು ಸಾಧಿಸುವುದಕ್ಕೋಸ್ಕರ ಅದನ್ನು ಸಿದ್ಧ ಗೊಳಿಸುತ್ತಿರುವ ಸರ್ಕಾರ ಅದಕ್ಕೆ ಎಲ್ಲ ಗಮನವನ್ನೂ ಕೊಡತಕ್ಕದ್ದಾಗಿದೆ. ಎಷ್ಟು ಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಕೊಡಲಾಗಿದೆ ಎಂಬುದರಿಂದ ಮಾತ್ರ ವಿದ್ಯಾಭ್ಯಾಸದ ಬೆಲೆಯನ್ನು ಗೊತ್ತುಪಡಿಸಲಾಗುವುದಿಲ್ಲ. ಶಿಕ್ಷಕರೂ, ವಿದ್ಯಾ

ಸಂಸ್ಥೆಗಳಿಗೆ ಸಂಬಂಧಪಟ್ಟ ಇತರರೂ ತಮ್ಮ ರೀತಿನೀತಿ, ನಡವಳಿಕೆ, ವಿಚಾರಗಳಿಂದ ಬೀರುವ ಪ್ರಭಾವ ಅಷ್ಟೇ ಮುಖ್ಯವಾದದ್ದು. ವಿದ್ಯಾರ್ಥಿಗಳ ಶೀಲದಲ್ಲಿ, ವಿಚಾರದಲ್ಲಿ, ಭಾವನೆಘೋರಣೆಗಳಲ್ಲಿ ಒದಲಾವಣೆಯನ್ನು ಮಾಡುವುದರಿಂದ ಮಾತ್ರ ಅವರ ಮೇಲ್ಮೆಯನ್ನು ಸಾಧಿಸಬಹುದು. ಇದು ವಿದ್ಯಾಭ್ಯಾಸದಿಂದ ನೇರವಾಗಿ ಆಗುವುದಕ್ಕಿಂತ ಹೆಚ್ಚಾಗಿ ಪರೋಕ್ಷವಾಗಿ ಆಗತಕ್ಕ ಕೆಲಸ. ಭಾರತದಲ್ಲಿ ವಿದ್ಯಾರ್ಥಿ ದೆಸೆ ಮುಗಿದ ಮೇಲೆ ಸಾರ್ವಜನಿಕ ಸೇವೆಯಿಂದಲೂ ಸಾರ್ವಜನಿಕ ಅಭಿಪ್ರಾಯದ ಸಂಪರ್ಕದಿಂದುಂಟಾಗುವ ಸತ್ಪ್ರೇರಣೆಗೆ ಅನುಗುಣವಾಗಿಯೂ ತನ್ನ ಜೀವನವನ್ನು ರೂಪಿಸಿಕೊಳ್ಳುವ ಅವಕಾಶ ವಿದ್ಯಾರ್ಥಿಗೆ ಇರುವುದಿಲ್ಲ. ಆದ್ದರಿಂದ ವಿದ್ಯಾರ್ಥಿದೆಸೆಯಲ್ಲೇ ಅವನ ಮನಸ್ಸನ್ನು ಸರಿಯಾಗಿ ತಿದ್ದುವ ಕಾರ್ಯ ಈ ದೇಶದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಶಾಲೆಗಳು ಸ್ವತಂತ್ರ ವಿಚಾರ ಕೇಂದ್ರಗಳಾಗಬೇಕು. ದೇಶದ ಜೀವನವನ್ನೆಲ್ಲಾ ಆವರಿಸಿರುವ ಅಧಿಕಾರವರ್ಗದ ನೆರಳಿನಲ್ಲಿ ಸಂಕುಚಿತವಾದ ಅಭಿಪ್ರಾಯಗಳು, ಸಣ್ಣ ಪ್ರವೃತ್ತಿ ಮತ್ತು ದಬ್ಬಾಳಿಕೆಯ ಮನೋಭಾವ ಬೆಳೆದಿವೆ. ಇವುಗಳ ಪ್ರಭಾವವನ್ನು ತಪ್ಪಿಸಿ ಯೂರೋಪಿಯನ್ ಮತ್ತು ದೇಶೀಯ ಹಿರಿಯರಲ್ಲಿ ಬೌದ್ಧಿಕವಾಗಿ ಅನ್ಯೋನ್ಯ ಸಂಪರ್ಕವನ್ನು ವಿದ್ಯಾಸಂಸ್ಥೆಗಳು ಏರ್ಪಡಿಸಬೇಕು. ಕಿರಿಯರ ಮೇಲೆ ಸತ್ಪ್ರಭಾವವನ್ನು ಬೀರುವುದಲ್ಲದೆ ಈ ಕೆಲಸವನ್ನೂ ವಿದ್ಯಾಸಂಸ್ಥೆಗಳು ಮಾಡಬೇಕು. ಹೀಗಾದಲ್ಲಿ ಶಾಲೆಗಳು ಬಹು ಪ್ರಯೋಜನಕಾರಿಯಾಗುತ್ತವೆ. ಆದರೆ ಮೈಸೂರಿನಲ್ಲಿರುವ ವಿದ್ಯಾಸಂಸ್ಥೆಗಳ ಇಂದಿನ ಸ್ಥಿತಿಗೂ ಈ ಆದರ್ಶಕ್ಕೂ ಅಂತರ ಅಪಾರ. ಸರ್ಕಾರಕ್ಕೆ ವಿದ್ಯಾಭ್ಯಾಸಇಲಾಖೆಯ ಕಾರ್ಯಕ್ರಮಗಳ ವಿಷಯದಲ್ಲಿ ಏನೂ ಸಹಾನುಭೂತಿಯಿಲ್ಲ.

ಎಲ್ಲಾ ಶಾಲೆಗಳಲ್ಲಿಯೂ ವೈವಿಧ್ಯವಿಲ್ಲದ, ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸುವ ಶಿಕ್ಷಣ ಪದ್ಧತಿಯನ್ನು ಗೊತ್ತುಪಡಿಸಲಾಗಿದೆ. ಈ ಶಿಕ್ಷಣಪದ್ಧತಿಯಲ್ಲಿ ವಿಜ್ಞಾನಕ್ಕೆ ಸ್ಥಾನವಿಲ್ಲ, ನಿತ್ಯಜೀವನದಲ್ಲಿ ಉಪಯೋಗವಾಗುವ ಕಸಬುಗಳಲ್ಲಿ ತರಬೇತಿಗೆ ಅವಕಾಶವಿಲ್ಲ. ಇಂತಹ ವಿದ್ಯಾಭ್ಯಾಸಕ್ರಮದಲ್ಲಿ ಕೆಳಗಿನ ತರಗತಿಗಳಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ಹೊರಗೆ ಬರುವ ವಿದ್ಯಾರ್ಥಿಗಳಿಗೆ ಚರಿತ್ರೆ ಮತ್ತು ಗಣಿತ ತತ್ವ ಸೂತ್ರಗಳ ಅಸ್ಪಷ್ಟ, ಅಪೂರ್ಣ ಪರಿಚಯವಿರು

ತ್ತದೆ. ಅವುಗಳನ್ನೂ ಅವರು ಬೇಗ ಮರೆತುಬಿಡುತ್ತಾರೆ. ಉಪಯುಕ್ತವಾಗುವ ಯಾವ ಜ್ಞಾನವನ್ನೂ ಅವರು ಪಡೆದಿರುವುದಿಲ್ಲ. ಓದದೇ ಇರುವ ಇತರರಿಗಿಂತ ಅವರು ಉಪಯೋಗಕರವಾದ ಕೆಲಸಗಳನ್ನು ಮಾಡುವುದರಲ್ಲಿ ಹಿಂದುಳಿದಿರುತ್ತಾರೆ. ನೀತಿಬಲ ಅವರಿಗಿಂತ ಇವರಲ್ಲಿ ಕಡಿಮೆಯಾಗಿರುತ್ತದೆ."§ ವಿದ್ಯಾಭ್ಯಾಸ ಪದ್ಧತಿಯ ವಿಷಯದಲ್ಲಿ ರಂಗಾಚಾರ್ಲುರವರು ಹೇಳಿರುವ ಈ ಮಾತುಗಳು ಇಂದಿಗೂ ಅನ್ವಯಿಸುತ್ತವೆ. "ತಾಂತ್ರಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಪ್ರಯತ್ನವನ್ನು ನಿಷ್ಪ್ರಯೋಜಕವೆಂದು ಕೈಬಿಡಲಾಯಿತು. ಯಂತ್ರೋದ್ಯಮ ಶಿಕ್ಷಣ ಅಥವಾ ಇತರ ವಿಶೇಷ ಶಿಕ್ಷಣವನ್ನು ಕೊಡುವ ಇನ್ನಾವ ಪ್ರಯತ್ನವನ್ನೂ ಮಾಡಿಲ್ಲ."

## ವೈದ್ಯಕೀಯ ಇಲಾಖೆ

ಕಾರಾಗೃಹಗಳಲ್ಲಿ ಇರುವವರಿಗೂ, ಮುಖ್ಯವಾದ ಪಟ್ಟಣಗಳಲ್ಲಿರುವ ಸರ್ಕಾರಿ ಸಿಬ್ಬಂದಿಗಳಿಗೂ ಮಾತ್ರ ಈ ಇಲಾಖೆಯ ಸೇವೆ ದೊರಕುತ್ತಿದೆ. ಆದರೆ ಜನಜೀವನದ ಮೇಲೆ ಈ ಇಲಾಖೆಯ ಕೆಲಸದಿಂದ ಯಾವ ಪರಿಣಾಮವೂ ಆಗುತ್ತಿಲ್ಲ. ಪ್ರತಿವರ್ಷವೂ ಜ್ವರ ಮತ್ತು ಕಾಲಕಾಲಕ್ಕೆ ಉಲ್ಬಣಿಸುವ ಇತರ ವ್ಯಾಧಿಗಳಿಂದ ಸಾಯುತ್ತಿರುವ ಸಾವಿರಾರು ಜನರ ಬಗೆಗೆ ಈ ಇಲಾಖೆಯು ಲಕ್ಷ್ಯವನ್ನು ಕೊಡುತ್ತಿಲ್ಲ. ಜಿಲ್ಲೆಗಳಲ್ಲಿ ಸೇವೆ ಮಾಡುವುದಕ್ಕೋಸ್ಕರವಾಗಿ ವೈದ್ಯಕೀಯ ಶಿಕ್ಷಣವನ್ನು ಸಿಬ್ಬಂದಿವರ್ಗಕ್ಕೆ ಕೊಡುವುದರಲ್ಲಿ ಯಾವ ಪ್ರಗತಿಯೂ ಆಗಿಲ್ಲ.

## ವ್ಯವಸಾಯ ಇಲಾಖೆ.

ವ್ಯವಸಾಯ ಪ್ರಯೋಗಗಳ ಇಲಾಖೆಯ ಮೇಲಧಿಕಾರಿಯು ದೇಶೀಯ ವ್ಯವಸಾಯ ಪದ್ಧತಿಯಲ್ಲಿ ಯಾವ ರೀತಿಯ ಅಭಿವೃದ್ಧಿಯೂ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸರ್ಕಾರದ ಇತ್ತೀಚಿನ ಪ್ರೇಮಶಿಶುವಾದ ಈ ಇಲಾಖೆ ಯಥಾಪ್ರಕಾರ ಬೆಳೆದು ಸಾವನ್ನಪ್ಪುತ್ತದೆ ಎಂದು ನಿರೀಕ್ಷಿಸಬಹುದು.

ಈ ಪ್ರಬಂಧವನ್ನು ಮುಕ್ತಾಯಗೊಳಿಸುತ್ತಾ ರಂಗಾಚಾರ್ಲುರವರು ಹೀಗೆ ಹೇಳಿದ್ದಾರೆ :—

"ಶಾಂತಿ ಶಿಸ್ತುಗಳನ್ನು ಸ್ಥಾಪಿಸಿದ ಮೇಲೆ, ವ್ಯವಸ್ಥಿತವಾದ ಸರ್ಕಾರಕ್ಕೆ ಅಸ್ತಿಭಾರವನ್ನು ಹಾಕಿದ ಮೇಲೆ ನಿಜ ಪ್ರಗತಿ ನಿಂತಿತು. ಹೊಸ ಇಲಾಖೆಗಳನ್ನು

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಪ್ರಾರಂಭಿಸುವುದೇ ಆಡಳಿತದಲ್ಲಿ ಪ್ರಗತಿಯನ್ನು ಸಾಧಿಸುವ ವಿಧಾನವಾಯಿತು. ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದ ಬ್ರಿಟಿಷ್ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಇಲಾಖೆಗಳ ಮಾದರಿಯ ಮೇಲೆ ಈ ಇಲಾಖೆಗಳನ್ನು ರಚಿಸಲಾಯಿತು. ಆದರೆ ಬ್ರಿಟಿಷ್ ಪ್ರಾಂತ್ಯಗಳಲ್ಲಿದ್ದ ಇಲಾಖೆಗಳ ಅನುಕರಣವಾಗಿದ್ದುದರಿಂದ ಅವುಗಳಲ್ಲಿ ಹೆಚ್ಚಿನ ಜೀವವಿರಲಿಲ್ಲ. ಯಾವ ತತ್ವಗಳ ಮೇಲೆ ಬ್ರಿಟಿಷ್ ಪ್ರದೇಶಗಳಲ್ಲಿ ಆ ಇಲಾಖೆಗಳನ್ನು ವ್ಯವಸ್ಥೆಗೊಳಿಸಲಾಯಿತೋ ಅವುಗಳನ್ನು ಸರಿಯಾಗಿ ಅರಿತು ಕೊಂಡು ಇಲ್ಲಿ ಅವುಗಳನ್ನು ವ್ಯವಸ್ಥೆ ಮಾಡಲಿಲ್ಲ. ಇಲ್ಲಿನ ಪರಿಸ್ಥಿತಿಗೆ ಹೊಂದು ವಂತೆ ಅವನ್ನು ರೂಪಿಸಲಿಲ್ಲ. ಈ ಸಂದರ್ಭಗಳಿಂದ ಈ ಇಲಾಖೆಗಳು ಮಿಕ್ಕ ಕಡೆ ಉಪಯೋಗಕರವಾಗಿ ಕೆಲಸ ಮಾಡಿದಷ್ಟು ದೀರ್ಘಕಾಲ ಇಲ್ಲಿ ಕೆಲಸಮಾಡಲಾರ ದಾಗಿವೆ. ಯಾವುದಾದರೂ ಒಂದು ಹೊಸ ವ್ಯವಸ್ಥೆಯನ್ನು ಕಲ್ಪಿಸಿದಾಗ ಕಂಡು ಬರುವ ಚೇತನ, ಚಟುವಟಿಕೆಗಳು ಅವುಗಳ ಅಂಧಾನುಕರಣವಾದ ಈ ಇಲಾಖೆ ಗಳಲ್ಲಿ ಕಂಡುಬರುವುದು ಸಾಧ್ಯವಿಲ್ಲ. ಬದಲಾವಣೆಯಾದಾಗ ಕಂಡುಬರುವ ಗಡಿಬಿಡಿ ಬೇಗ ತಣ್ಣಗಾಗಿ ಹೋಗುತ್ತದೆ. ವ್ಯವಸ್ಥೆಗೊಳಿಸಿದ ಕೆಲವು ಕಾಲ ಈ ಇಲಾಖೆಗಳು ಮೇರೆ ಮೀರಿ ಬೆಳೆಯದಂತೆ ಅವುಗಳನ್ನು ಅಸ್ತಿತ್ವಕ್ಕೆ ತಂದ ಬಹು ಸಮರ್ಥರಾದ ಅಧಿಕಾರಿಗಳು ಎಚ್ಚರಿಕೆವಹಿಸಿದರೂ ಅನಂತರ ಅವುಗಳು ವಿಪರೀತವಾಗಿ ಬೆಳೆದವು. ದೇಶೀಯ ಅಧಿಕಾರಿಗಳ ಬದಲು ಯೂರೋಪಿಯನ್ ಅಧಿಕಾರಿಗಳನ್ನು ಅವುಗಳಲ್ಲಿ ನಿಯಮಿಸಲಾಯಿತು. ಈ ಅಧಿಕಾರಿಗಳ ಹಿತಾಸಕ್ತಿ, ಬೇಡಿಕೆಗಳು, ಆಸೆ ಆಕಾಂಕ್ಷೆಗಳು ಜನತೆಯ ಹಿತವನ್ನು ಮೂಲೆಗುಂಪು ಮಾಡಿದವು. ಒಂದು ವೇಳೆ ತುಂಬಾ ನ್ಯೂನತೆ, ಲೋಪಗಳು ಕಂಡುಬಂದಾಗ ದೇಶೀಯರು ಅಸಮರ್ಥರು ಆದ್ದರಿಂದ ಯೂರೋಪಿಯನ್ನರ ಸಂಖ್ಯೆಯನ್ನು ಹೆಚ್ಚಿಸಬೇಕು ಎಂಬ ವಾದಕ್ಕೆ ಹೆಚ್ಚು ಬಲ ದೊರೆಯುವಂತಾಗುತ್ತಿತ್ತು. ಪ್ರಾಂತ್ಯದ ಆದಾಯ ದ್ವಿಗುಣವಾಗಿದ್ದರೂ, ಮಹಾರಾಜರ ಅರಮನೆಯ ಖರ್ಚನ್ನು ಬಹುಮಟ್ಟಿಗೆ ತಗ್ಗಿಸಿದ್ದರೂ, ಈ ಹೊಸ ಸಿಬ್ಬಂದಿವರ್ಗದ ಸಂಬಳಸಾರಿಗೆಗಳಿಗೆ ಆದಾಯವೆಲ್ಲಾ ಬಹುಮಟ್ಟಿಗೆ ಖರ್ಚಾಗಿ ಹೋಗುತ್ತಿದೆ. ಆಡಳಿತ ಯಂತ್ರವನ್ನು ದೇಶೀಯಆಳ್ವಿಕೆಗೆ ಸಿದ್ಧಪಡಿಸುವ ವಿಚಾರ ಬಹುಕಾಲ ಮೂಲೆಗುಂಪಾಗಿಯೇ ಉಳಿಯಿತು. ಈಚೆಗೆ ಈ ಪ್ರಶ್ನೆಯನ್ನು ಪರ್ಯಾಲೋಚನೆಗೆ ತೆಗೆದುಕೊಂಡು ಪರಿಹರಿಸುವ ಅಗತ್ಯಕಂಡುಬಂದಿಲ್ಲ. ಸರ್ಕಾರದ ಆಡಳಿತ ಯಂತ್ರವು ಮೇರೆ ಮೀರಿ ಬೆಳೆದಿದೆ. ಅದರ ಗಾತ್ರವನ್ನು ಕಡಿಮೆಮಾಡುವುದು ದೇಶೀಯ ಆಳ್ವಿಕೆಗೆ ರಾಜ್ಯವನ್ನು

ಸಿದ್ಧಪಡಿಸುವುದಕ್ಕೆ ಮೊದಲು ಕೈಗೊಳ್ಳಬೇಕಾದ ಕ್ರಮವಾಗಿದೆ. ಆದರೆ ಈ ಸಮಸ್ಯೆ ಬಹು ಕ್ಲಿಷ್ಟವಾಗಿ ಈ ವಿಷಯವನ್ನೇ ಮುಂದೆ ಹಾಕಲಾಗುತ್ತಿದೆ. ಪ್ರಾಂತ್ಯದ ಆಡಳಿತವನ್ನು ಬ್ರಿಟಿಷ್ ಸರ್ಕಾರದವರು ಮೊದಲು ವಹಿಸಿಕೊಂಡಾಗ ದಿವಂಗತರಾದ ಮಹಾರಾಜರು ತಮಗೆ ಸಹಜವಾದ ದೂರದೃಷ್ಟಿಯಿಂದ ರಾಜ್ಯವನ್ನು ತಮಗೆ ಹಿಂದಿರುಗಿಸುವುದಕ್ಕೆ ನಿಜವಾಗಿ ಅಡ್ಡಿಯಾಗಿ ನಿಲ್ಲುವುದು ಇಂಗ್ಲಿಷ್ ಸಿಬ್ಬಂದಿವರ್ಗ ಎಂಬುದನ್ನು ಕಂಡುಕೊಂಡರು. ಅವರು ಸರ್ಕಾರವನ್ನು, ಯಾವ ಇಂಗ್ಲಿಷ್ ಸಿಬ್ಬಂದಿವರ್ಗದ ಕೆಲಸ ರಾಜ್ಯವನ್ನು ಹಿಂದಿರುಗಿಸುವುದರಿಂದ ಹೋಗುತ್ತದೋ ಆ ಸಿಬ್ಬಂದಿ ವರ್ಗವೇ ರಾಜ್ಯವನ್ನು ಹಿಂದಿರುಗಿಸುವುದಕ್ಕೆ ಸೂಕ್ತ ಕಾಲ ಯಾವುದು ಎಂಬುದನ್ನು ನಿರ್ಧರಿಸತಕ್ಕದ್ದೇ ಎಂದು ಕೇಳಿದರಂತೆ. ಅವರು ಹೀಗೆ ಕೇಳಿದ್ದು 1836ರಲ್ಲಿ. ಆಗ ಯೂರೋಪಿಯನ್ ಸಿಬ್ಬಂದಿವರ್ಗ ಸಣ್ಣದಾಗಿದ್ದಿತು. ಆ ಸಿಬ್ಬಂದಿ ವರ್ಗ ಈಗ ವಿಪರೀತ ಜಟಿಲವಾಗಿ ಬೆಳೆದು ನಿಂತಿದೆ. ಅದರ ಜಟಿಲತೆಯಿಂದ ಪಾರಾಗುವುದು ಸಾಧ್ಯವೇ ಇಲ್ಲ ಎಂದು ತೋರುತ್ತದೆ. ಮಹಾರಾಜರು ಬದುಕಿದ್ದು ಈ ಅಗಾಧವಾದ, ಜಟಿಲವಾಗಿ ಬೆಳೆದು ನಿಂತಿರುವ ಯೂರೋಪಿಯನ್ ಸಿಬ್ಬಂದಿ ವರ್ಗವನ್ನು ನೋಡಿದ್ದರೆ ಅವರ ಭಾವನೆಗಳು ಏನಾಗುತ್ತಿದ್ದವು, ಅವರು ಎಷ್ಟು ಕಂಗೆಡುತ್ತಿದ್ದರು? ಅಂತಸ್ಸತ್ವವಿಲ್ಲದ ಬಹಿರ್ವ್ಯವಸ್ಥೆಯಿಂದ, ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಟ್ಟು ಇಟ್ಟುಕೊಂಡಿರುವ ಸಿಬ್ಬಂದಿವರ್ಗದಿಂದ ಅಥವಾ ಇಂತಹ ಸಿಬ್ಬಂದಿವರ್ಗ ನಿರ್ಮಿಸಬಹುದಾದ ಕೆರೆ, ಕಟ್ಟೆ ಕಾಲುವೆ ಕಟ್ಟಡಗಳಿಂದ ಕೂಡ ದೇಶೀಯ ಪ್ರಭುತ್ವಕ್ಕೆ ತಕ್ಕ ಅಡಿಪಾಯವನ್ನು ನಿರ್ಮಿಸಲಾಗುವುದಿಲ್ಲ. ಆದರೆ ದೇಶೀಯರಿಗೆ ಸರಿಯಾಗಿ ಶಿಕ್ಷಣವನ್ನೂ ತರಬೇತನ್ನೂ ಕೊಡುವುದರಿಂದಲೂ, ವಾಸ್ತವವಾಗಿ ಒಳ್ಳೆಯ ಸರ್ಕಾರವನ್ನು ತಮಗೋಸ್ಕರ ವ್ಯವಸ್ಥೆಗೊಳಿಸುವುದಕ್ಕೆ ತಕ್ಕ ಶಕ್ತಿಯನ್ನು ಅವರಲ್ಲಿ ಉಂಟು ಮಾಡುವುದರಿಂದಲೂ ದೇಶೀಯ ಪ್ರಭುತ್ವಕ್ಕೆ ತಕ್ಕ ಅಡಿಪಾಯವನ್ನು ನಿರ್ಮಿಸಬಹುದು.” §

ರಂಗಾಚಾರ್ಲುರವರು ಮೈಸೂರಿನಲ್ಲಿನ ಬ್ರಿಟಿಷ್ ಆಳ್ವಿಕೆಯ ವಿಷಯ ಮಾಡಿದ ಈ ತೀಕ್ಷ್ಣವಾದ ಟೀಕೆಯಿಂದ ಬ್ರಿಟಿಷ್ ಅಧಿಕಾರ ವರ್ಗ ಅವರ ವಿಷಯ

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ದಲ್ಲಿ ಕೋಪಗೊಂಡಿತು. ಲಂಡನ್ನಿನ ಮುಖ್ಯವಾದ ದಿನಪತ್ರಿಕೆಗಳು ಈ ವಿಷಯದಲ್ಲಿ ವಾಗ್ವಾದವನ್ನು ಪ್ರಾರಂಭಿಸಿದವು. ಭಾರತಸರ್ಕಾರ ಈ ಪ್ರಬಂಧದ ವಿಷಯದಲ್ಲಿ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿತು ಪ್ರಬಂಧದ ಲೇಖಕನ ಹೆಸರನ್ನು "ಮೈಸೂರು ದೇಶೀಯ" ಎಂದು ಕೊಡಲಾಗಿದ್ದಿತು. ಈ ಗುಪ್ತನಾಮವನ್ನು ಇಟ್ಟು ಕೊಂಡು ಬರೆದ ಲೇಖಕರು ರಂಗಾಚಾರ್ಲುರವರೇ ಎಂಬುದು ಬ್ರಿಟಿಷ್ ಅಧಿಕಾರಿ ಗಳಿಗೆ ತಿಳಿದುಬಂದಿತು. ಮೈಸೂರಿನ ಮುಖ್ಯಆಡಳಿತಗಾರರಾದ ಸರ್ ರಿಚರ್ಡ್ ಮೀಡ್‌ರವರು ರಂಗಾಚಾರ್ಲುರವರಿಗೆ ಹೇಳಿಕಳುಹಿಸಿ ಈ ಪ್ರಬಂಧದ ಕರ್ತೃಗಳು ಅವರೇ ಎಂದು ಕೇಳಿದರು. ರಂಗಾಚಾರ್ಲುರವರು ನಿರ್ಭೀತಿಯಿಂದ ತಾನೇ ಲೇಖಕ ನೆಂದು ಒಪ್ಪಿಕೊಂಡರು. ವೈಸ್‌ರಾಯ್‌ರವರು ಮೀಡ್‌ರವರ ಮೂಲಕ ರಂಗಾಚಾರ್ಲು ರವರಿಗೆ ಈ ಪ್ರಬಂಧವನ್ನು ಪ್ರಕಟಿಸಿದ್ದು ಬಹಳ ಅನುಚಿತವಾದ ಕಾರ್ಯವಾಯಿ ತೆಂದು ಹೇಳಿಕಳುಹಿಸಿದರು. ಸರ್ಕಾರದ ಅಧಿಕಾರಿಗಳು ಸಾರ್ವಜನಿಕವಾಗಿ ಅದನ್ನು ಟೀಕಿಸುವುದನ್ನು ನಿಷೇಧಿಸಿದ್ದರಿಂದ ಈ ರೀತಿ ಪ್ರಬಂಧವನ್ನು ಅವರು ಪ್ರಕಟಿಸ ಬಾರದಾಗಿತ್ತೆಂದು ಅವರಿಗೆ ತಿಳಿಸಲಾಯಿತು. ಈ ಪ್ರಬಂಧದ ಮಿಕ್ಕಭಾಗ ಗಳನ್ನು ಪ್ರಕಟಿಸಲಿಲ್ಲ.

ಮೈಸೂರಿನಲ್ಲಿ ಬ್ರಿಟಿಷ್ ಆಡಳಿತದ ಅಂತ್ಯ ಸಮೀಪಿಸುತ್ತಿತ್ತು. ಮಹಾರಾಜರ ಪೋಷಕರಾದ ಗೋರ್ಡನ್‌ರವರನ್ನು 1878ರಲ್ಲಿ ಸ್ಯಾಂಡ್ಸರ್‌ರವರ ಜಾಗದಲ್ಲಿ ಮೈಸೂರಿನ ಮುಖ್ಯ ಆಡಳಿತಾಧಿಕಾರಿಗಳಾಗಿ ನಿಯಮಿಸಲಾಯಿತು. ಕುಂಭಕೋಣದ ಕಾಲೇಜಿನ ಮುಖ್ಯಸ್ಥರಾದ ಪೋರ್ಟರ್‌ರವರನ್ನು ರಂಗಾಚಾರ್ಲುರವರ ಸಲಹೆ ಯಂತೆ ಮಹಾರಾಜರ ಪೋಷಕರನ್ನಾಗಿ ನಿಯಮಿಸಲಾಯಿತು. ಮೇ 1879ರಲ್ಲಿ ರಂಗಾಚಾರ್ಲುರವರನ್ನು ಭೂಕಂದಾಯ ಇಲಾಖೆಯ ಕಾರ್ಯದರ್ಶಿಗಳನ್ನಾಗಿ ಗೋರ್ಡನ್‌ರವರು ನಿಯಮಿಸಿದರು. ಮುಂದೆ ರಂಗಾಚಾರ್ಲುರವರನ್ನು ದಿವಾನ ರನ್ನಾಗಿ ನಿಯಮಿಸುವ ಉದ್ದೇಶದಿಂದ ಅವರಿಗೆ ಈ ಹುದ್ದೆಯನ್ನು ಕೊಡಲಾಯಿತು ಎಂಬುದು ಜನಗಳ ನಂಬಿಕೆಯಾಗಿದ್ದಿತು.

ಗೋರ್ಡನ್‌ರವರು ಅಧಿಕಾರ ವಹಿಸಿದಾಗ ಸಂಸ್ಥಾನದಲ್ಲಿ ಪರಿಸ್ಥಿತಿ ಕಠಿಣವಾಗಿ ದ್ದಿತು. 1875-76ರಲ್ಲಿ ಹಿಂಗಾರು, ಮುಂಗಾರು ಮಳೆಗಳಾಗಲಿಲ್ಲ. ಎರಡು ವರ್ಷ ಬೆಳೆಗಳಾಗಲಿಲ್ಲ. ರೈತರು ತಾವು ಕೂಡಿಟ್ಟಿದ್ದ ದವಸಧಾನ್ಯಗಳನ್ನು ಖರ್ಚು ಮಾಡಿದರು. 1877 ರ ವಸಂತದಲ್ಲಿ ಸ್ವಲ್ಪ ಮಳೆಗಳಾದವು. ಇದರಿಂದ ಬೆಳೆಗಳಿಗೆ ಅನುಕೂಲವಾದೀತೆಂಬ ಆಶೆ ತಲೆದೋರಿತು. ಆದರೆ ಯಾವ ಹಿಂಗಾರು

ಮುಂಗಾರು ಮಳೆಗಳು ವ್ಯವಸಾಯಕ್ಕೆ ಜೀವದಾಯಕವೋ ಅವು ಮತ್ತೆ ಮೂರನೇ ವರ್ಷ ಆಗಲಿಲ್ಲ. ಹೀಗೆ ಈ ಆಶೆ ಬಯಲಾಯಿತು. ಸಂಸ್ಥಾನದ ಸುತ್ತಮುತ್ತ ಇದ್ದ ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯಗಳ ಭಾಗಗಳು ಇದೇ ರೀತಿ ಮಳೆಯಿಲ್ಲದೆ ಬೆಂಡಾಗಿದ್ದವು. ಹೀಗೆ ಒದಗಿದ ಧಾತುಈಶ್ವರ ಕ್ಷಾಮವು ಜನಗಳು ಅನ್ನಾಹಾರಗಳಿಲ್ಲದೆ ತತ್ತರಿಸುವಂತೆ ಮಾಡಿತು. ಅಸಹಾಯಕರಾದ ಜನರು ದೀಪಕ್ಕೆ ಮುತ್ತಿದ ಪತಂಗಗಳಂತೆ ಲಕ್ಷಲಕ್ಷ ಸಂಖ್ಯೆಯಲ್ಲಿ ಸಾವಿಗೀಡಾದರು.

ಹೀಗೆ ಕ್ಷಾಮದ ಕರಾಳ ಛಾಯೆಯಿಂದ ಆವೃತವಾದ ನಾಡಿನಲ್ಲಿ ಜನಗಳಿಗೆ ಆಹಾರವನ್ನು ಒದಗಿಸುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಕೆಲಸಗಳನ್ನು ಕೈಗೊಳ್ಳಬೇಕಾಯಿತು. ಮದ್ರಾಸ್ ಬೆಂಗಳೂರು ರೈಲ್ವೆಯೊಂದೇ ಸಂಸ್ಥಾನದಲ್ಲಿದ್ದ ರೈಲು ಮಾರ್ಗ. ಪ್ರತಿದಿನವೂ 400 ರಿಂದ 500 ಟನ್ ದವಸಧಾನ್ಯಗಳನ್ನು ಈ ರೈಲಿನ ಮುಖಾಂತರ ಸಂಸ್ಥಾನದೊಳಗೆ ಸಾಗಿಸಲು ಏರ್ಪಾಡಾಯಿತು. ಇದರಿಂದ ಸುಮಾರು 9ಲಕ್ಷ ಜನಕ್ಕೆ ಆಹಾರವನ್ನು ಒದಗಿಸಲು ಅವಕಾಶವಾಯಿತು. ಅದೂ 1877ನೇ ಮೇನಲ್ಲಿ ಸಾರ್ವಜನಿಕ ಭೋಜನಗೃಹಗಳಲ್ಲಿ ನಿರಾಧಾರರಾದ ಒಂದು ಲಕ್ಷ ಜನರಿಗೆ ಅನ್ನವನ್ನು ಕೊಡಲಾಯಿತು. ಆಗಸ್ಟ್‌ನಲ್ಲಿ ಇಂತಹವರ ಸಂಖ್ಯೆ 2ಲಕ್ಷ 27 ಸಾವಿರಕ್ಕೆ ಏರಿತು. 60 ಸಾವಿರ ಜನರನ್ನು ಈ ಕ್ಷಾಮ ಸಮಯದಲ್ಲಿ ಕೈಗೊಂಡ ಜನೋಪಯೋಗಿ ಕೆಲಸಗಳಲ್ಲಿ ನಿಯಮಿಸಿಕೊಂಡು ದವಸಧಾನ್ಯಗಳ ರೂಪದಲ್ಲಿ ಅವರಿಗೆ ಸಲ್ಲಬೇಕಾದ ಸಂಬಳವನ್ನು ಕೊಡಲಾಯಿತು. ಇವಲ್ಲದೇ ಬೆಂಗಳೂರು-ಮೈಸೂರು ರೈಲುಮಾರ್ಗವನ್ನು ನಿರ್ಮಿಸಲು 20 ಸಾವಿರ ಜನರನ್ನು ನಿಯಮಿಸಿಕೊಳ್ಳಲಾಯಿತು.

ಸರ್ ರಿಚರ್ಡ್ ಟೆಂಪಲ್‌ರವರನ್ನು ಸಂಸ್ಥಾನದಲ್ಲಿ ಕ್ಷಾಮದಿಂದ ಆಪತ್ತಿಗೆ ಒಳಗಾಗಿದ್ದ ಜನರಿಗೆ ಸಹಾಯ ಮಾಡಲು ಮಾಡಿದ್ದ ವ್ಯವಸ್ಥೆಯನ್ನು ಪರೀಕ್ಷಿಸುವುದಕ್ಕಾಗಿ ಭಾರತ ಸರ್ಕಾರದವರು ನಿಯಮಿಸಿದರು. ಈ ಏರ್ಪಾಡುಗಳು ಸಮಸ್ಯೆಯ ಪರಿಹಾರಕ್ಕೆ ಏನೂ ಸಾಲದೆಂಬುದು ವ್ಯಕ್ತವಾಗತೊಡಗಿತು. ವೈಸ್‌ರಾಯರಾದ ಲಾರ್ಡ್ ಲಿಟ್ಟನ್‌ರವರು ಸಂಸ್ಥಾನಕ್ಕೆ ಸೆಪ್ಟೆಂಬರ್ 1877ರಲ್ಲಿ ಭೇಟಿಯಿತ್ತರು. ವ್ಯವಸ್ಥೆ ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನಕ್ಕೆ ಸಹಾಯವನ್ನು ಒದಗಿಸುವುದು ಅಗತ್ಯವೆಂಬ ನಿರ್ಧಾರಕ್ಕೆ ಅವರು ಬಂದರು. ಉತ್ತರ ಭಾರತದಿಂದ ಹಲವು ಯೂರೋಪಿಯನ್ ಅಧಿಕಾರಿಗಳನ್ನು ಈ ಕಾರ್ಯಕ್ಕಾಗಿ ಕಳುಹಿಸಿಕೊಟ್ಟರು. ಚಾರ್ಲ್ಸ್ ಇಲಿಯಟ್‌ರವರನ್ನು

ಕಾರ್ಯವನ್ನು ನಿರ್ವಹಿಸಲು ಅಧಿಕಾರಿಗಳಾಗಿ ನಿಯಮಿಸಲಾಯಿತು. ಸಂಸ್ಥಾನದ ಒಳಗೆ ಸಾರಿಗೆ ವ್ಯವಸ್ಥೆ ಅಸಮರ್ಪಕವಾಗಿದ್ದರಿಂದ ಜನಗಳಿಗೆ ದವಸಧಾನ್ಯಗಳನ್ನು ಒದಗಿಸುವ ಕೆಲಸಕ್ಕೆ ಬಹಳ ತೊಂದರೆಯಾಯಿತು. ಸರ್ಕಾರದವರು ಭೂ ಕಂದಾಯವನ್ನು ವಜಾಮಾಡಿದರು. ಸರ್ಕಾರಕ್ಕೆ ಸೇರಿದ ಕಾಡುಗಳಲ್ಲಿ ರೈತರು ತಮ್ಮ ದನಗಳನ್ನು ಮೇಯಿಸುವುದಕ್ಕೆ ಅವಕಾಶವನ್ನು ಕೊಟ್ಟರು. ಅನೇಕ ತಲೆಮಾರುಗಳಿಂದ ಕೂಡಿಟ್ಟಿದ್ದ ಚಿನ್ನ, ಬೆಳ್ಳಿ ಒಡವೆಗಳನ್ನು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಜನ ಮಾರಿಬಿಡಬೇಕಾಗಿ ಬಂದಿತು. ಇದರಿಂದ ದವಸ ಧಾನ್ಯಗಳ ಬೆಲೆ ಎಷ್ಟು ತುಟ್ಟಿಯಾಗಿದ್ದಿತ್ತೆಂಬುದನ್ನು ಊಹಿಸಬಹುದು.

ಬೆಂಗಳೂರಿನಿಂದ ಹೊರಡುತ್ತಿದ್ದ "ಕರ್ಣಾಟಕ ಪ್ರಕಾಶಿಕಾ" ಎಂಬ ವೃತ್ತ ಪತ್ರಿಕೆಯ 6ನೇ ನವೆಂಬರ್ 1876ರ ಸಂಚಿಕೆಯಲ್ಲಿ "ಕ್ಷಾಮವನ್ನು ಕುರಿತು" ಎಂಬ ಸಂಪಾದಕೀಯ ಲೇಖನದಲ್ಲಿ ಹೀಗೆ ಹೇಳಿದೆ— "ಕಾಲಸ್ಥಿತಿಯನ್ನು ವಿಚಾರಿಸಿದರೆ ಒಂದು ತಿಂಗಳ ಕೆಳಗೆ ಸವರನ್ ಬಂಗಾರಕ್ಕೆ ಅಪರಂಜೀ ಖರೀದಿ ಯಿತ್ತು. ಈಗ ಅಪರಂಜಿಯು ಸವರನ್ ಖರೀದಿಗೆ ಹೋಗುತ್ತಿದೆ. ಹೀಗೆಯೇ ಆಹಾರೋಪಯೋಗಿಯಲ್ಲದ ಜವಳೀ ವಗೈರೆ ಪ್ರಿಯವಾಗಿದ್ದ ಸರ್ವ ಪದಾರ್ಥಗಳು ಅಘ್ಘವಾದವು. ಈ ಷಹರಿಗೆ ನಮ್ಮ ಶೀಮೆಯ ತಾಲ್ಲೂಕ್ ಜಾತಗಳಿಂದ ಭಂಡಿಗಳ ಮೇಲೂ ನಡೆಗಳ ಮೇಲೂ ಹೇರಳವಾಗಿ ಬರುತ್ತಿದ್ದ ಧಾನ್ಯಗಳೆಲ್ಲ ಹೋಗಿ ರೈಲ್ ಮಾರ್ಗವಾಗಿ ಧಾನ್ಯ ಒಂದೇ ನಮಗೆ ಲಭಿಸಬೇಕಾಯಿತು. ಹೀಗೆಯೇ ಕ್ಷಾಮ ವೆಂಬ ಒಂದೇ ನಿಮಿತ್ತದಿಂದ ಮೈಸೂರು ದೇಶೀಯರ ಆಹಾರ, ವಿಹಾರ, ವ್ಯವಹಾರ ವ್ಯಾಪಾರ ಮುಂತಾದ ಸಕಲ ಕಾರ್ಯಗಳೂ ಬದಲಾಯಿಸಿ, ಸರ್ವಚಿಂತೆಗಳೂ ಹೋಗಿ, ಸರ್ವ ಪ್ರಾಣಿಗಳಿಗೂ ಜೀವನೈಕಚಿಂತೆ ಪ್ರಾಪ್ತವಾಗಿಯಿದೆ. ಷಹರ್ ಜಾಗಾಗಳಲ್ಲೇ ಈ ಸ್ಥಿತಿ ಯಿರುವಲ್ಲಿ ಹಳ್ಳಿಗಾಡುಗಳ ದೆಸೆಯನ್ನು ಹೇಳಬೇಕಾದುದೇ ಯಿಲ್ಲವು. ಗ್ರಾಮಾಂತರ ಜನಗಳು ತಮ್ಮ ತಮ್ಮ ಜಾಗಾಗಳನ್ನು ಬಿಟ್ಟು ತಂಡೋಪತಂಡವಾಗಿ ಷಹರ್‌ಗಳಿಗೆ ಬಂದು ಸೇರಿಯಿದ್ದಾರೆ. ಈ ಸಂದರ್ಭದಲ್ಲಿ ದುಷ್ಟರು ಬಹುಮಂದಿ ಜೋರೀ ಛಪ್ಪೆ, ದರೋಡೆ, ಪ್ರಾಣಹಿಂಸೆ ಮುಂತಾದ ಕ್ರೂರಕೃತ್ಯಗಳಿಗೆ ನಿಶ್ಶಂಕವಾಗಿ ಪ್ರವರ್ತಿಸಲು ಆ ಮೊಕದ್ದಮೆಗಳನ್ನು ವಿಚಾರಿ ಸುವುದಕ್ಕೆ ಅಧಿಕಾರಿಗಳು ಬಹಳ ಬೇಜಾರು ಪಡುತಲಿದ್ದಾರೆ. ಮುಖ್ಯವಾಗಿ ಹಳ್ಳಿ

ಶಾನಭಾನು ಮೊದಲು ಚೀಫ್ ಕಮಿಷನರವರಿಗೂ ಕ್ಷಾಮ ದೆಸೆಯಿಂದ ಉಂಟಾದ ಬದಲಾವಣೆಗಳನ್ನು ಆಲೋಚಿಸುವುದೇ ಕಾರ್ಯವಾಗಿದೆ.”

ಈ ಧಾತುಈಶ್ವರ ಕ್ಷಾಮದಿಂದ ಸಂಸ್ಥಾನದ ಆರ್ಥಿಕ ಸ್ಥಿತಿಯು ಅಸ್ತವ್ಯಸ್ತವಾಯಿತು. 17ನೇ ಫೆಬ್ರವರಿ 1881ರಲ್ಲಿ ಜನಗಣತಿಯನ್ನು ನಡೆಸಿದಾಗ ಸಂಸ್ಥಾನದ ಜನಸಂಖ್ಯೆಯು ಶೇಕಡಾ 17.19ರಷ್ಟು ಕಡಿಮೆಯಾಗಿದ್ದುದು ಕಂಡು ಬಂದಿತು ಇದಕ್ಕೆ ಬಹುಮಟ್ಟಿಗೆ ಕ್ಷಾಮವೇ ಕಾರಣವಾಗಿದ್ದಿತು. 1871ರಲ್ಲಿ ಮೊದಲನೆಯ ಜನಗಣತಿಯನ್ನು ಮಾಡಿದಾಗ ಜನಸಂಖ್ಯೆ 50,55,412 ಇದ್ದಿತು. 1881ರ ಜನಗಣತಿಯಲ್ಲಿ ಜನಸಂಖ್ಯೆಯು 41,86,[illegible] ಇದ್ದಿತೆಂದು ನಿರ್ಧರಿಸಲಾಯಿತು. ಹೀಗೆ ಸಂಸ್ಥಾನದ ಜನಸಂಖ್ಯೆಯು 8,69,224ರಷ್ಟು ಕಡಿಮೆಯಾಗಿದ್ದಿತು.

ಕ್ಷಾಮ ಪ್ರಾರಂಭವಾಗುವುದಕ್ಕೆ ಮುಂಚೆ ಸರ್ಕಾರದ ಖಜಾನೆಯಲ್ಲಿ [illegible] ಲಕ್ಷ ರೂಪಾಯಿ ಉಳಿತಾಯದ ಹಣವಿದ್ದಿತು. ಕ್ಷಾಮದ ಅಬ್ಬರ ಕಡಿಮೆಯಾಗುವ ವೇಳೆಗೆ ಈ ಹಣವೆಲ್ಲಾ ವ್ಯಯವಾಗಿ ಸರ್ಕಾರವು 80 ಲಕ್ಷ ರೂಪಾಯಿ ಸಾಲವನ್ನು ಮಾಡಬೇಕಾಗಿ ಬಂದಿತು. ಭಾರತ ಸರ್ಕಾರದವರು ಈ 80 ಲಕ್ಷ ರೂಪಾಯಿಗಳನ್ನು ಶೇಕಡ 5ರ ಬಡ್ಡಿಯ ಮೇಲೆ ಸಾಲವಾಗಿ ಕೊಟ್ಟರು. ಕ್ಷಾಮದ ಮುಂಚೆ ಸಂಸ್ಥಾನದ ವಾರ್ಷಿಕ ಆದಾಯ 10[illegible] ಲಕ್ಷ ರೂಪಾಯಿಗಳಾಗಿದ್ದಿತು. 1876-77ರಲ್ಲಿ ಅದು 82 ಲಕ್ಷವಾಯಿತು. 1877-78ರಲ್ಲಿ ಈ ಆದಾಯವು [illegible] ಲಕ್ಷಕ್ಕೆ ಇಳಿಯಿತು.

ವ್ಯವಸಾಯ, ವ್ಯಾಪಾರ ಉದ್ಯಮಗಳು ಕ್ಷಾಮದ ಪ್ರಭಾವದಿಂದ ತುಂಬಾ ಅವ್ಯವಸ್ಥೆಗೆ ಈಡಾದವು. ಅವು ಮತ್ತೆ ಚೇತರಿಸಿಕೊಳ್ಳಬೇಕಾದರೆ ಅನೇಕ ವರ್ಷಗಳು ಬೇಕಾದವು.

ಭಾರತದ ವೈಸ್‌ರಾಯರಾಗಿದ್ದ ಲಾರ್ಡ್ ಲಿಟ್ಟನ್‌ರವರು ಧಾತುಈಶ್ವರ ಕ್ಷಾಮದ ಅಬ್ಬರಕ್ಕೆ ಸಂಸ್ಥಾನ ಬಲಿಯಾಗಿದ್ದಾಗ ಭೇಟಿಯಿತ್ತರು. ಅವರು ನವೆಂಬರ್ 1878ರಲ್ಲಿ ಬರೆದ ಟಿಪ್ಪಣಿಯಲ್ಲಿ ಈ ಕ್ಷಾಮದಿಂದ ಸಂಸ್ಥಾನದ ಮೇಲೆ

ಆದ ದುಷ್ಪರಿಣಾಮಗಳನ್ನು ವರ್ಣಿಸಿದ್ದಾರೆ. ಅದರ ಸಾರಾಂಶ ಹೀಗಿದೆ:— "1875ರಲ್ಲಿ ಸರಿಯಾಗಿ ಮಳೆಯಾಗದಿದ್ದುದೇ ಕ್ಷಾಮದ ಪ್ರಾರಂಭಕ್ಕೆ ಕಾರಣವಾಯಿತು. ಸಾಮಾನ್ಯವಾಗಿ ಆಗುವುದಕ್ಕಿಂತ $\frac{1}{3}$ ರಿಂದ $\frac{2}{3}$ ರಷ್ಟು ಈ ವರ್ಷ ಮಳೆಯಾಯಿತು. ಆಹಾರಧಾನ್ಯಗಳ ಬೆಳೆಯ ಬಹುಭಾಗ ನಷ್ಟವಾಯಿತು. ಆದರೆ ಮೈಸೂರಿನಲ್ಲಿ ಯಾವಾಗಲೂ ಆಹಾರ ಸಂಗ್ರಹ ಹೆಚ್ಚಾಗಿಯೇ ಇರುತ್ತದೆ. ಆದ್ದರಿಂದ ಹೀಗೆ ಮಳೆ ನಿಂತರೂ, ತಾತ್ಕಾಲಿಕವಾಗಿ ಅಲ್ಪಸ್ವಲ್ಪ ತೊಂದರೆಯಾಯಿತು. ಆಹಾರದ ಬೆಲೆ ಸಾಮಾನ್ಯವಾದ ದರಗಳಿಗಿಂತ ದ್ವಿಗುಣವಾಯಿತಷ್ಟೇ ಹೊರತು ಅದಕ್ಕಿಂತ ಹೆಚ್ಚಲಿಲ್ಲ. 1876ರಲ್ಲಿ ಮತ್ತೆ ಮಳೆ ಸರಿಯಾಗಿ ಆಗಲಿಲ್ಲ. ಧಾನ್ಯದ ಬೆಳೆಗಳ ಸಂಗ್ರಹ, ಸರಿಯಾಗಿ ಬೆಳೆಯಾದಾಗ ಆಗುವ ಸಂಗ್ರಹದ ಮೂರನೇ ಒಂದು ಭಾಗವಾಗಿದ್ದಿತು. ಅಕ್ಕಪಕ್ಕದ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳ ಜಿಲ್ಲೆಗಳಲ್ಲೂ ಬೆಳೆಯಾಗದಿದ್ದುದರಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿತು. 1876ನೇ ಡಿಸೆಂಬರ್ ತಿಂಗಳ ಮಧ್ಯದ ವೇಳೆಗೆ ಕ್ಷಾಮ ಪ್ರಾರಂಭವಾಗಿಬಿಟ್ಟಿತು. ಡಿಸೆಂಬರ್ ಮಧ್ಯದಿಂದ ಮುಂದಿನ ವರ್ಷ ಮಾರ್ಚ್ ವರೆಗೆ ಪರಿಸ್ಥಿತಿ ಕೆಡುತ್ತಾ ಹೋಯಿತು. ರೈಲಿನ ಮುಖಾಂತರ ದಿನಕ್ಕೆ 500ಟನ್‌ನಂತೆ (9ಲಕ್ಷ ಜನಕ್ಕೆ ಸಾಕಾಗುವಷ್ಟು) ಆಹಾರ ಧಾನ್ಯಗಳನ್ನು ಸಂಸ್ಥಾನದೊಳಗೆ ಸಾಗಿಸಲಾಯಿತು. ಆದರೂ ದವಸ ಧಾನ್ಯಗಳ ಬೆಲೆ ಈ ಅವಧಿಯಲ್ಲಿ 13 ರಿಂದ 15 ಪೌಂಡುಗಳಿಗೆ ಒಂದು ರೂಪಾಯಿನಷ್ಟು ಏರಿದ್ದಿತು. ಅಂದರೆ ಸಾಮಾನ್ಯವಾದ ದರಗಳ 4-5 ರಷ್ಟು ಅವುಗಳ ಬೆಲೆಯಾಯಿತು. 1877ರ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ವಸಂತದಲ್ಲಿ ಆಗುವ ಮಳೆಗಳು ಆಗಿದ್ದರಿಂದ ಪರಿಸ್ಥಿತಿ ಉತ್ತಮಗೊಳ್ಳುವುದೆಂಬ ಆಸೆ ತಲೆದೋರಿತು. ಆದರೆ ಜೂನ್ ತಿಂಗಳು ಕಳೆದು ಜುಲೈ ತಿಂಗಳು ಬಂದಂತೆ ಮಳೆ ಮತ್ತೆ ಮೂರನೆಯ ವರ್ಷ ನಿಂತುಹೋಗುವುದೆಂದು ಸ್ಪಷ್ಟವಾಗತೊಡಗಿತು. ಜನಗಳು ಭಯಗ್ರಸ್ತರಾದರು, ಹೊಟ್ಟೆಗಿಲ್ಲದೆ ಸಾಯಲಾರಂಭಿಸಿದರು. ಕ್ಷಾಮ ಸಂಸ್ಥಾನದಲ್ಲಿ ಉಲ್ಬಣವಾಯಿತು. 1877ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗಳಲ್ಲಿ ಚೆನ್ನಾಗಿ ಮಳೆಯಾಗುವವರೆಗೂ ಕ್ಷಾಮದ ತೀವ್ರತೆ ಕಡಿಮೆಯಾಗಲಿಲ್ಲ. ಕ್ಷಾಮ ತುಂಬಾ ಪ್ರಖರವಾಗಿದ್ದ ಎಂಟು ತಿಂಗಳುಗಳಲ್ಲಿ ಎಲ್ಲೂ ಬೆಳೆಗಳ ಕೊಯಿಲನ್ನು ಮಾಡಲಿಲ್ಲ. ಆಹಾರದ ಬೆಲೆ ಸಾಮಾನ್ಯವಾದ ಕಾಲದಲ್ಲಿದ್ದ ಬೆಲೆಗಿಂತ 3 ರಿಂದ 6 ರಷ್ಟು ಹೆಚ್ಚಾಗಿದ್ದಿತು.

ಸರ್ಕಾರದವರು ಕ್ಷಾಮಕ್ಕೆ ತುತ್ತಾಗಿದ್ದ ಜನಗಳಿಗೆ ಕೆಲಸ ಒದಗಿಸಲು ಏರ್ಪಡಿಸಿದ್ದ ಕಾಮಗಾರಿ ಕಾರ್ಯಗಳು ಮಾತ್ರ ಸಾಮಾನ್ಯ ಜನರ ಜೀವನೋಪಾಯಕ್ಕೆ ಮಾರ್ಗವಾಗಿದ್ದವು. ಅವರಿಗೆ ಬೇರೆ ಸಂಪಾದನೆಯ ದಾರಿ ಇರಲಿಲ್ಲ. 1877-78 ರಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡರೂ ಆಗಲೂ ಬೆಳೆಗಳು ಸಾಮಾನ್ಯವಾಗಿ ಆಗುವುದಕ್ಕಿಂತ ಅರ್ಧಕ್ಕಿಂತ ಕಡಿಮೆ ಮಾತ್ರ ಆಗಿದ್ದವು. ನವೆಂಬರ್ 1877 ರಿಂದ ಇದುವರೆಗೆ (ನವೆಂಬರ್ 1878) ಆಹಾರ ಪದಾರ್ಥಗಳ ಬೆಲೆ ಸಾಮಾನ್ಯವಾದ ಕಾಲದಲ್ಲಿದ್ದ ಬೆಲೆಗಿಂತ 3ರಷ್ಟು ಹೆಚ್ಚಿದೆ."

ಹೀಗೆ ಘಾತುಕಈಶ್ವರ ಕ್ಷಾಮದಿಂದ ಸಂಸ್ಥಾನದ ಅರ್ಥವ್ಯವಸ್ಥೆಯಲ್ಲಿ ಬಿಕ್ಕಟ್ಟುಂಟಾಗಿ ಹಣಕಾಸಿನ ಸ್ಥಿತಿ ಹದಗೆಟ್ಟಿತು ಇಂತಹ ವಿಷಮ ಸ್ಥಿತಿಯಲ್ಲಿ ಸಂಸ್ಥಾನದ ಆಡಳಿತ ಜವಾಬ್ದಾರಿಯನ್ನು ಚೀಫ್ ಕಮಿಷನರ್ ಗೋರ್ಡನ್‌ರವರೂ ರಂಗಾಚಾರ್ಲುರವರೂ ವಹಿಸಿಕೊಂಡು ನಿರ್ವಹಿಸಬೇಕಾಯಿತು. ಅಲ್ಲದೇ ಮಹಾರಾಜರು ಪ್ರಾಪ್ತವಯಸ್ಕರಾಗುವ ಕಾಲ ಹತ್ತಿರವಾಗುತ್ತಿತ್ತು. ಆದ್ದರಿಂದ ಆಡಳಿತವನ್ನು ಅವರ ಆಳ್ವಿಕೆಗೆ ಅಣಿಗೊಳಿಸುವ ಕಾರ್ಯವನ್ನೂ ಗೋರ್ಡನ್ ರವರೂ, ರಂಗಾಚಾರ್ಲುರವರೂ ಕೈಗೊಳ್ಳಬೇಕಾಯಿತು.

ಸಂಸ್ಥಾನದ ಹದಗೆಟ್ಟ ಹಣಕಾಸಿನ ಸ್ಥಿತಿಯನ್ನು ಸರಿಪಡಿಸಲು ಬಹು ತೀವ್ರವಾದ ಮಿತವ್ಯಯದ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಯಿತು. ಕ್ಷಾಮದ ಎರಡು ವರ್ಷಗಳ ಕಾಲದಲ್ಲಿ ಸಂಸ್ಥಾನದ ಆದಾಯ ೬೭ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದ್ದಿತು. ವ್ಯಯ ಆದಾಯಕ್ಕಿಂತ ೬೬½ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದ್ದಿತು. ಕ್ಷಾಮದಿಂದ ಸಂತ್ರಸ್ತರಾದ ಜನರಿಗೆ ಉದ್ಯೋಗವನ್ನು ಕಲ್ಪಿಸಲೂ, ಆಹಾರವನ್ನು ಒದಗಿಸಲೂ ಸರ್ಕಾರವು ಕೈಗೊಂಡ ಕ್ರಮಗಳಿಂದ ಹೀಗೆ ಆದಾಯಕ್ಕಿಂತ ಖರ್ಚು ಹೆಚ್ಚಾಯಿತು. ಆದಾಯದ ಇಳಿತದಿಂದಲೂ ವ್ಯಯದ ಹೆಚ್ಚುವರಿಯಿಂದಲೂ ಸಂಸ್ಥಾನದ ಆಯವ್ಯಯದಲ್ಲಿ ೧,೩೩,೫೦,೦೦೦ ರೂಪಾಯಿ ಕೊರತೆ ಉಂಟಾಯಿತು. ಸರ್ಕಾರವು ಉಳಿತಾಯದ ಹಣವನ್ನು ಭಾರತ ಸರ್ಕಾರದ ಸಾಲ ಪತ್ರಗಳನ್ನು ಕೊಳ್ಳುವುದು ಮುಂತಾದವುಗಳಲ್ಲಿ ವಿನಿಯೋಗಿಸಿತ್ತು. ಹೀಗೆ ಕೊಂಡಿದ್ದ ೬೧ ಲಕ್ಷ ರೂಪಾಯಿಗಳಷ್ಟು ಸಾಲ ಪತ್ರಗಳನ್ನು ಅದು ಈ ಅಗಾಧವಾದ ಕೊರತೆಯನ್ನು ತುಂಬಲು ಮಾರಿಬಿಟ್ಟಿತು.

ಇನ್ನು ಉಳಿದ ಖೋತಾವನ್ನು ತುಂಬಲು ಭಾರತ ಸರ್ಕಾರದಿಂದ ಸಾಲವನ್ನು ಮಾಡಿತು. ೧೮೭೮-೭೯ ರ ಅವಧಿಗೆ ಆದಾಯ ೧೦೪ ಲಕ್ಷ ರೂಪಾಯಿ ಆಗುವುದೆಂದು ನಿರೀಕ್ಷಿಸಲಾಗಿದ್ದಿತು. ಆದರೆ ಕ್ಷಾಮದ ಅಬ್ಬರವು ಕಡಿಮೆಯಾಗಿ, ಅನಿರೀಕ್ಷಿತವಾಗಿ ಸಮೃದ್ಧವಾಗಿ ಬೆಳೆಯಾದುದರಿಂದ ವಾಸ್ತವವಾಗಿ ಆದಾಯ ೧೨೧ ಲಕ್ಷ ರೂಪಾಯಿಗಳಿಗೆ ಏರಿತು. ವ್ಯಯ ೧೨೬ ಲಕ್ಷ ರೂಪಾಯಿಗಳಾಗಿದ್ದಿತು.

ಸರ್ಕಾರದ ಇಲಾಖೆಗಳಲ್ಲಿ ಖರ್ಚನ್ನು ಕಡಿಮೆ ಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳಲಾಯಿತು. ಸರ್ಕಾರದ ಕೆಲಸದಲ್ಲಿದ್ದ ಅನೇಕ ಮಂದಿಯನ್ನು ಅವರಿಗೆ ಉದಾರವಾಗಿ ನಿವೃತ್ತಿವೇತನವನ್ನೂ, ಕೂಡುಗೆಗಳನ್ನೂ ಕೊಟ್ಟು ನಿವೃತ್ತಿ ಮಾಡಲಾಯಿತು. ಲೋಕೋಪಯೋಗಿ ಇಲಾಖೆಯ ಖರ್ಚನ್ನು ಮೊದಲಿದ್ದುದಕ್ಕಿಂತ ಅರ್ಧಪಾಲು ಕಡಿಮೆಮಾಡಲಾಯಿತು. ನೀರಾವರಿ ಇಲಾಖೆಯು ಸ್ವತಂತ್ರ ಇಲಾಖೆಯಾಗಿರುವುದನ್ನು ನಿಲ್ಲಿಸಿಬಿಡಲಾಯಿತು. ಪ್ರಾಂತೀಯ ಮತ್ತು ಸ್ಥಳೀಯ ನಿಧಿಗಳನ್ನು ಕೂಡಿಸಿ ಒಂದೇ ಇಲಾಖೆಯನ್ನಾಗಿ ಮಾಡಲಾಯಿತು. ನಂದೀದುರ್ಗ ವಿಭಾಗದಲ್ಲಿ ತಿಂಗಳಿಗೆ ೨,೫೦೦ ರೂಪಾಯಿ ಸಂಬಳದ ಮೇಲೆ ಕೆಲಸ ಮಾಡುತ್ತಿದ್ದ ಯೂರೋಪಿಯನ್ ನ್ಯಾಯಾಧಿಕಾರಿಯ ಜಾಗದಲ್ಲಿ ತಿಂಗಳಿಗೆ ೧೨೦೦ ರೂಪಾಯಿ ಸಂಬಳದ ಮೇಲೆ ಭಾರತೀಯ ಜಿಲ್ಲಾ ನ್ಯಾಯಾಧೀಶನನ್ನು ನಿಯಮಿಸಲಾಯಿತು. ಉಪನ್ಯಾಯಾಧಿಕಾರಿಗಳ ಜಾಗದಲ್ಲಿ ಉಪನ್ಯಾಯಾಧೀಶರನ್ನು ನಿಯಮಿಸಲಾಯಿತು. ಮಿಕ್ಕ ಎರಡು ವಿಭಾಗಗಳಲ್ಲಿಯೂ ಇದೇ ರೀತಿ ಬದಲಾವಣೆಗಳನ್ನು ಮಾಡಲಾಯಿತು. ಸಂಸ್ಥಾನದ ೮ ಜಿಲ್ಲೆಗಳ ಪೈಕಿ ೪ ಜಿಲ್ಲೆಗಳಲ್ಲಿ ಯೂರೋಪಿಯನ್ ಜಿಲ್ಲಾಧಿಕಾರಿಗಳ ಸ್ಥಾನದಲ್ಲಿ ಕಡಿಮೆ ಸಂಬಳದ ಮೇಲೆ ಭಾರತೀಯರನ್ನು ನಿಯಮಿಸಲಾಯಿತು. ಜಿಲ್ಲಾಧಿಕಾರಿಗಳ ಸಂಬಳವನ್ನು ೧೦೦೦–೧೬೬೬ ರೂಪಾಯಿಗಳಿಂದ ೭೦೦–೧೦೦೦ ಕ್ಕೆ ಕಡಿಮೆ ಮಾಡಲಾಯಿತು. ಪೋಲೀಸ್ ಉಪಆಡಳಿತಾಧಿಕಾರಿಗಳ ಸ್ಥಾನಗಳನ್ನೂ, ಉಪ ವಿಭಾಗಾಧಿಕಾರಿಗಳ ಸ್ಥಾನವನ್ನೂ ರದ್ದುಮಾಡುವ ಮೂಲಕ ಉಪಜಿಲ್ಲಾಧಿಕಾರಿಗಳ ಸಂಖ್ಯೆಯನ್ನು ಕಡಿಮೆಮಾಡಲಾಯಿತು. ಸಂಸ್ಥಾನದಲ್ಲಿ ಇದ್ದ ಒಟ್ಟು 27 ಉಪಜಿಲ್ಲಾಧಿಕಾರಿಗಳ ಹುದ್ದೆಗಳಲ್ಲಿ ಎಂಟು ಹುದ್ದೆಗಳನ್ನು ರದ್ದು ಮಾಡಲಾಯಿತು. ವಿದ್ಯಾ ಇಲಾಖೆ, ಅರಣ್ಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಹೆಚ್ಚಿನ

ಸಂಬಳವನ್ನು ತೆಗೆದುಕೊಳ್ಳುತ್ತಿದ್ದ ಯೂರೋಪಿಯನ್ ಅಧಿಕಾರಿಗಳ ಸ್ಥಾನದಲ್ಲಿ ಕಡಿಮೆ ಸಂಬಳದ ಮೇಲೆ ಭಾರತೀಯ ಅಧಿಕಾರಿಗಳನ್ನು ನಿಯಮಿಸಲಾಯಿತು. 1879–80 ರಲ್ಲಿ ಈ ಎಲ್ಲಾ ಕ್ರಮಗಳ ಪರಿಣಾಮವಾಗಿ ವರ್ಷಕ್ಕೆ 2½ ಲಕ್ಷ ರೂಪಾಯಿಗಳು ಉಳಿತಾಯವಾದವೆಂದು ಅಂದಾಜು ಮಾಡಲಾಯಿತು. ಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿ ರಂಗಾಚಾರ್ಲುರವರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯನ್ನು ಮನ್ನಿಸಿ ಭಾರತ ಸರ್ಕಾರದವರು ಅವರಿಗೆ ಸಿ. ಐ. ಇ. ಎಂಬ ಬಿರುದನ್ನು ಕೊಟ್ಟರು.

ಮಹಾರಾಜ ಚಾಮರಾಜೇಂದ್ರ ಒಡೆಯರವರು ಮೈಸೂರಿನ ಸಿಂಹಾಸನವನ್ನು ಅಲಂಕರಿಸುವ ಸಮಯ ಸಮೀಪಿಸತೊಡಗಿತು. ರಂಗಾಚಾರ್ಲುರವರು ದೊಡ್ಡ ಅಧಿಕಾರದಲ್ಲಿದ್ದುಕೊಂಡು ದಿನೇ ದಿನೇ ಉಚ್ಛ್ರಾಯ ಸ್ಥಿತಿಗೆ ಬರುತ್ತಿದ್ದರು. ಅವರು ತುಂಬಾ ಪ್ರಬಲರಾಗುವುದಕ್ಕೆ ಮುಂಚೆ ಅವರ ಮುಖಕ್ಕೆ ಮಸಿ ಹಚ್ಚಿ ಅವರ ಅಧಃಪತನಕ್ಕೆ ದಾರಿಮಾಡಬೇಕೆಂದು ಅವರ ಶತ್ರುಗಳು ಎಣಿಸಿದರು. 1872–73 ರಲ್ಲಿ ಬಹುಬೆಲೆ ಬಾಳುವ ಆಭರಣಗಳು ಅರಮನೆಯಿಂದ ಕಳುವಾದುವೆಂದೂ, ಅದಕ್ಕೆ ರಂಗಾಚಾರ್ಲುರವರೇ ಜವಾಬ್ದಾರರೆಂದೂ 1879–80 ರಲ್ಲಿ ವದಂತಿಗಳನ್ನು ಹಬ್ಬಿಸಲಾಯಿತು. ಅರಮನೆಯ ಸಿಬ್ಬಂದಿವರ್ಗವನ್ನು ಪುನರ್ವ್ಯವಸ್ಥೆಗೊಳಿಸುವಾಗ ಅನೇಕ ಮಂದಿಯನ್ನು ರಂಗಾಚಾರ್ಲುರವರು ನಿವೃತ್ತಿಗೊಳಿಸಬೇಕಾಗಿ ಬಂದಿತು. ಸರ್ಕಾರದಲ್ಲಿ ದುಂದುವೆಚ್ಚವನ್ನು ತಪ್ಪಿಸುವುದಕ್ಕೋಸ್ಕರ ಅನೇಕಮಂದಿ ಸರ್ಕಾರಿ ಅಧಿಕಾರಿಗಳನ್ನು ಅವರು ನಿವೃತ್ತಿಗೊಳಿಸಬೇಕಾಯಿತು. ಸ್ವಾರ್ಥಸಾಧಕರೂ, ದುರಾಶಾಪರರೂ ಆದ ಸಾಹುಕಾರರು ಅರಮನೆಯೊಂದಿಗೆ ವ್ಯವಹರಿಸುತ್ತ ವಿಪರೀತ ಬಡ್ಡಿಗೆ ಸಾಲವನ್ನು ಕೊಡುತ್ತಿದ್ದರು. ಅವರ ವ್ಯವಹಾರಗಳನ್ನೂ ರಂಗಾಚಾರ್ಲುರವರು ನಿಲ್ಲಿಸಿದ್ದರು. ಸರ್ಕಾರದಲ್ಲಿ ರಂಗಾಚಾರ್ಲುರವರು ಬೇಗ ಬೇಗ ದೊಡ್ಡ ದೊಡ್ಡ ಸ್ಥಾನಗಳಿಗೆ ಬರುತ್ತಿದ್ದುದನ್ನು ಕಂಡು ಅನೇಕ ಅಧಿಕಾರಿಗಳು ಅಸೂಯೆಗೊಂಡಿದ್ದರು. ಇವರೆಲ್ಲ ಸೇರಿ ಈ ವದಂತಿಗಳನ್ನು ಹಬ್ಬಿಸಿದ್ದರು. ರಂಗಾಚಾರ್ಲುರವರ ವಿಷಯದಲ್ಲಿ ವಿಶ್ವಾಸ ಗೌರವಗಳನ್ನು ಬೆಳಸಿಕೊಂಡಿದ್ದ ಬೌರಿಂಗ್ ರವರೂ ಕೂಡ ಅವರ ಪ್ರಾಮಾಣಿಕತೆಯನ್ನು ಶಂಕಿಸುವಂತಾಯಿತು. ಗೋರ್ಡನ್ ರವರೂ ಇತರ ದೊಡ್ಡ ಅಧಿಕಾರಿಗಳೂ ಈ ಅಪಾದನೆಗಳನ್ನು ಕೂಲಂಕಷವಾಗಿ

ಪರಿಶೀಲಿಸಿ ರಂಗಾಚಾರ್ಲುರವರು ನಿರಪರಾಧಿಗಳೆಂಬ ತೀರ್ಮಾನಕ್ಕೆ ಬಂದರು. ಈ ಅಗ್ನಿಪರೀಕ್ಷೆಯಿಂದ ರಂಗಾಚಾರ್ಲುರವರು ಪಾರಾದರು. ಅವರ ಕೀರ್ತಿ ಇನ್ನೂ ಉಜ್ವಲವಾಯಿತು. ಬ್ರಿಟಿಷ್ ಸರ್ಕಾರವೂ, ಮಹಾರಾಜರೂ ರಂಗಾಚಾರ್ಲುರವರ ವಿಷಯದಲ್ಲಿ ಇಟ್ಟುಕೊಂಡಿದ್ದ ನಂಬಿಕೆ, ವಿಶ್ವಾಸಗಳು ಈ ದುರ್ಭರ ಪ್ರಸಂಗದಲ್ಲಿ ಕುಂದದೆ ಉಳಿದವು.

## ಅಧ್ಯಾಯ 6

# ರಾಜ್ಯಪ್ರಾಪ್ತಿ

ಮಹಾರಾಜ ಚಾಮರಾಜೇಂದ್ರ ಒಡೆಯರವರು ಪ್ರಾಪ್ತವಯಸ್ಕರಾಗುವ ಕಾಲ ಸನ್ನಿಹಿತವಾದಂತೆ ಬ್ರಿಟಿಷ್ ಸರ್ಕಾರದವರೂ, ಭಾರತ ಸರ್ಕಾರದವರೂ ರಾಜ್ಯವನ್ನು ಅವರಿಗೆ ಹಿಂದಿರುಗಿಸುವ ವಿಷಯವನ್ನು ಕುರಿತು ಆಲೋಚಿಸಲಾರಂಭಿಸಿದರು. ಅದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗೆಗೆ ಬ್ರಿಟಿಷ್ ಸರ್ಕಾರಕ್ಕೂ ಭಾರತ ಸರ್ಕಾರಕ್ಕೂ ಸುದೀರ್ಘವಾದ ಪತ್ರವ್ಯವಹಾರವು ನಡೆಯಿತು. ಜೂನ್ 1875 ರಲ್ಲಿ, ಬ್ರಿಟಿಷ್ ಸರ್ಕಾರದಲ್ಲಿ ಭಾರತದ ಕಾರ್ಯದರ್ಶಿಗಳಾಗಿದ್ದ ಸ್ಯಾಲಿಸ್‌ಬರಿಯವರು 'ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ಮೈಸೂರಿನ ಆಡಳಿತವನ್ನು ವಹಿಸುವುದಕ್ಕೆ ಪೂರ್ವಭಾವಿಯಾಗಿ ಅದಕ್ಕಾಗಿ ಆಡಳಿತ ಯಂತ್ರವನ್ನು ಸಿದ್ಧಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಆಲೋಚಿಸುವ ಕಾಲ ಸನ್ನಿಹಿತವಾಗಿದೆ ಎಂದು ಭಾರತ ಸರ್ಕಾರಕ್ಕೆ ಸೂಚಿಸಿ ಪತ್ರವನ್ನು ಬರೆದರು. ಆದರೆ 1876–77ರಲ್ಲಿ ಸಂಭವಿಸಿದ ಧಾತುಸಂವತ್ಸರ ಕ್ಷಾಮದಿಂದ ಈ ದೆಸೆಯಲ್ಲಿ ಸರ್ಕಾರವು ಯಾವ ಕ್ರಮಗಳನ್ನೂ ಕೈಗೊಳ್ಳುವುದಕ್ಕೆ ಆಗಲಿಲ್ಲ. ಕ್ಷಾಮದಿಂದ ದಿಕ್ಕುಗೆಟ್ಟಿದ್ದ ಜನರಿಗೆ ತಕ್ಕ ಪರಿಹಾರವನ್ನು ಒದಗಿಸುವುದರಲ್ಲಿಯೇ ಸರ್ಕಾರ ತನ್ನ ಗಮನವನ್ನು ಪೂರ್ಣವಾಗಿ ಹರಿಸಬೇಕಾಯಿತು. ಕ್ಷಾಮದಿಂದ ಸಂಸ್ಥಾನ ಸ್ವಲ್ಪಮಟ್ಟಿಗೆ ಚೇತರಿಸಿಕೊಳ್ಳುತ್ತಿದ್ದಂತೆಯೇ ಭಾರತಸರ್ಕಾರವು ರಾಜ್ಯವರ್ಗಾವಣೆಯ ವಿಷಯ ಕ್ರಮಗಳನ್ನು ಕುರಿತು ಯೋಚಿಸತೊಡಗಿತು. ೯ನೇ ನವೆಂಬರ್ 1878 ರಲ್ಲಿ ಭಾರತ ಸರ್ಕಾರವು ಈ ವಿಷಯದಲ್ಲಿ ಮೈಸೂರಿನ ಮುಖ್ಯ ಆಡಳಿಗಾರರಿಗೆ ಒಂದು ಪತ್ರವನ್ನು ಬರೆಯಿತು. ಅದರಲ್ಲಿ ಹೀಗೆ ಆದುಹೇಳಿತು. ಮೈಸೂರಿನ ಹೊಸ ಆಡಳಿತ ಸ್ವರೂಪವನ್ನು ನಿರ್ಧರಿಸುವಾಗ ಬ್ರಿಟಿಷರ ತಾತ್ಕಾಲಿಕ ಆಡಳಿತಕ್ಕೆ ಒಳಗಾಗಿದ್ದ ಮಿಕ್ಕ ಸಂಸ್ಥಾನಗಳಿಗಿಂತ ಮೈಸೂರಿನ ಸ್ಥಿತಿಯು ಬೇರೆ ಎಂಬುದನ್ನು ಗಮನಕ್ಕೆ ತಂದುಕೊಳ್ಳಬೇಕು. ಸಂಸ್ಥಾನದಲ್ಲಿ ಎರಡು ತಲೆಮಾರುಗಳು ಬ್ರಿಟಿಷ್ ಆಡಳಿತದ ನೆರಳಿನಲ್ಲಿ ಬೆಳೆದಿವೆ. ಸಂಸ್ಥಾನದ ಒಂದು ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲಿಷರು ನೆಲೆಸಿದ್ದಾರೆ. ಬ್ರಿಟಿಷರ ಆಡಳಿತದಲ್ಲಿ ಸಂಸ್ಥಾನಕ್ಕೆ

ಸುವ್ಯವಸ್ಥಿತವಾದ ಆಡಳಿತವು ಪ್ರಾಪ್ತವಾಗಿದೆ. ಇಂತಹ ಆಡಳಿತದಲ್ಲಿ ತಮಗೆ ಸರಿಯಾದ ರಕ್ಷಣೆ ದೊರಕುವುದೆಂಬ ಭರವಸೆಯಿಂದ ಇಂಗ್ಲಿಷರು ಬಂಡವಾಳವನ್ನು ಹೂಡಿ ಬೆಲೆಯುಳ್ಳ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ. ಹೀಗೆ ಸರ್ವಸಮ್ಮತವಾದ ತತ್ವಗಳ ಆಧಾರದ ಮೇಲೆ ನಡೆಯುವ, ಸುವ್ಯವಸ್ಥಿತವಾದ ಆಡಳಿತ ಪದ್ಧತಿಯು, ಜನಗಳಿಗೆ ಬಳಕೆಯಾಗಿದೆ. ಲಿಖಿತ ಶಾಸನಗಳನ್ನು ವಿಧಿಯುಕ್ತವಾಗಿ ಜಾರಿಗೆ ತರಲಾಗುತ್ತಿದೆ. ಕ್ರಮಬದ್ಧವಾಗಿ ಸ್ಥಾಪಿಸಲ್ಪಟ್ಟ ನ್ಯಾಯಸ್ಥಾನಗಳಿಂದ ನ್ಯಾಯವಿತರಣೆಯಾಗುತ್ತಿದೆ. ಶಾಶ್ವತವಾದ ನಿಯಮಗಳಿಗೆ ಅನುಸಾರವಾಗಿ ಕಂದಾಯವನ್ನು ನಿರ್ಧರಿಸಲಾಗುತ್ತಿದೆ, ವಸೂಲಿ ಮಾಡಲಾಗುತ್ತಿದೆ. ಒಟ್ಟಿನಲ್ಲಿ ಬ್ರಿಟಿಷರ ನೇರವಾದ ಆಳ್ವಿಕೆಯಲ್ಲಿ ಇರುವ ಪ್ರದೇಶಗಳಲ್ಲಿ ಯಾವ ವಿಧಿವಿಧಾನಗಳಂತೆ, ಯಾವ ಮಟ್ಟದಲ್ಲಿ ಆಡಳಿತ ನಡೆಯುವುದೋ ಅದೇ ರೀತಿಯ ಆಡಳಿತವು ಮೈಸೂರಿನಲ್ಲಿ ಏರ್ಪಟ್ಟಿದೆ. ಆದ್ದರಿಂದ ರಾಜ್ಯದಲ್ಲಿ ಬೇರೂರಿರುವ ಈ ಆಡಳಿತ ಪದ್ಧತಿಯಲ್ಲಿ ಯಾವ ಪ್ರತಿಕೂಲವಾದ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ಮೈಸೂರನ್ನು ಅದರ ಮುಂದಿನ ಪ್ರಭುಗಳಿಗೆ ವಹಿಸುವುದಕ್ಕೆ ಮುಂಚೆ ಭಾರತ ಸರ್ಕಾರದವರು ಭರವಸೆಯನ್ನು ಪಡೆಯುವುದು ಸೂಕ್ತವಾಗಿದೆ.

ಯಾವ ಷರತ್ತುಗಳಿಗೆ ಒಳಪಟ್ಟು ಮಹಾರಾಜರಿಗೆ ಪೂರ್ಣ ರಾಜ್ಯಾಧಿಕಾರವನ್ನು ವಹಿಸಬೇಕೆಂಬುದನ್ನು ಮೊದಲೇ ನಿರ್ಧರಿಸತಕ್ಕದ್ದು, ಈ ಷರತ್ತುಗಳು ಮೈಸೂರಿನ ಸಂವಿಧಾನದ ರೂಪರೇಖೆಗಳನ್ನು ನಿರ್ಧರಿಸುವಂತಿರಬೇಕು, ಅವುಗಳಲ್ಲಿ ಯಾವ ಬದಲಾವಣೆಯನ್ನು ಮಾಡಬೇಕಾದರೂ ಬ್ರಿಟಿಷ್ ಸರ್ಕಾರದ ಒಪ್ಪಿಗೆಯಾಗಬೇಕು ಎಂಬುದು ಭಾರತ ಸರ್ಕಾರದ ಅಭಿಪ್ರಾಯವಾಗಿದ್ದಿತು.

ಭಾರತ ಸರ್ಕಾರ ಸೂಚಿಸಿದ ಷರತ್ತುಗಳು ಈ ಕೆಳಕಂಡಂತಿವೆ :—

(1) ಸಂಸ್ಥಾನದಲ್ಲಿ ಸಾರ್ವಜನಿಕ ಆಡಳಿತವನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟಂತೆ ಇದುವರೆಗೆ ಅಸ್ತಿತ್ವದಲ್ಲಿ ಇರುವ ಕಾನೂನುಗಳು, ನಿಯಮ ನಿಬಂಧನೆಗಳು ಮುಂದುವರಿಯತಕ್ಕದ್ದು. ಸೂಕ್ತಅಧಿಕಾರವುಳ್ಳ ಮಂಡಲಿಯು ಮಾತ್ರ ಅವುಗಳಲ್ಲಿ ಬದಲಾವಣೆಯನ್ನು ಮಾಡತಕ್ಕದ್ದು.

(2) ಹೀಗೆ ನಿರ್ಧರಿಸಲ್ಪಟ್ಟ ಆಡಳಿತ ಪದ್ಧತಿಯಲ್ಲಿ ಮುಖ್ಯವಾದ ಯಾವ ಬದಲಾವಣೆಯನ್ನು ಮಾಡಬೇಕಾದರೂ ಭಾರತಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕು.

(3) ಕಾನೂನುಗಳಲ್ಲಿ ಬದಲಾವಣೆ ಮಾಡುವುದಕ್ಕೆ ತಕ್ಕ ಶಾಸಕಾಂಗ ವನ್ನು ಅಸ್ತಿತ್ವಕ್ಕೆ ತರುವ ಏರ್ಪಾಡು ಮಾಡಬೇಕು.

(4) ಯಾವುದಾದರೂ ಕಾನೂನಿನಂತೆ, ರೂಢಮೂಲವಾದ ಹಕ್ಕಿನಂತೆ ಅಥವಾ ಸಾರ್ವತ್ರಿಕವಾಗಿ ಒಪ್ಪಿಗೆಯಾಗಿರುವ ಪದ್ಧತಿಯಂತೆ ಮಾತ್ರ ತೆರಿಗೆಗಳನ್ನೂ ಇತರ ಕಂದಾಯಗಳನ್ನೂ ವಿಧಿಸತಕ್ಕದ್ದು.

(5) ಮಹಾರಾಜರ ಸ್ವಂತ ಆಸ್ತಿ ಆದಾಯಗಳೂ, ಸಂಸ್ಥಾನದ ಹಣಕಾಸು ಗಳೂ ಪ್ರತ್ಯೇಕವಾಗಿರತಕ್ಕದ್ದು. ಇದರಿಂದ ರಾಜ್ಯದ ಹಣವನ್ನು ಅದಕ್ಕೆ ತಕ್ಕ ಅಧಿಕಾರವಿರುವ ಅಧಿಕಾರಿಗಳು ಸೂಕ್ತವಾದ ನಿಯಮ ನಿಬಂಧನೆಗಳಿಗೆ ಅನುಸಾರವಾಗಿ ಮಾತ್ರ ವಿನಿಯೋಗಿಸುವಂತೆ ಏರ್ಪಡಿಸಲು ಸಾಧ್ಯವಾಗುತ್ತದೆ.

(6) ಸರ್ಕಾರದ ಖಜಾನೆಯಿಂದ ಆಗತಕ್ಕ ವ್ಯಯದ ಸಂಪೂರ್ಣ ಲೆಕ್ಕವನ್ನು ಒಪ್ಪಿಸತಕ್ಕದ್ದು. ಆ ಲೆಕ್ಕವನ್ನು ಸೂಕ್ತವಾಗಿ ತನಿಖೆ ಮಾಡತಕ್ಕದ್ದು.

(7) ವಾರ್ಷಿಕ ಆಯವ್ಯಯದ ಅಂದಾಜನ್ನು ಮಾಡಿ ಅದರಂತೆ ಸರ್ಕಾರದ ನಾನಾ ಇಲಾಖೆಗಳಿಗೆ ಪ್ರತಿ ವರ್ಷವೂ ಆಗತ್ಯವಾದ ಹಣವನ್ನು ಒದಗಿಸತಕ್ಕ ಪದ್ಧತಿಯನ್ನು ಮುಂದುವರಿಸತಕ್ಕದ್ದು.

(8) ಸಂಸ್ಥಾನದ ಆಡಳಿತವನ್ನು ನಿರ್ವಹಿಸುವ ವಿಷಯದಲ್ಲಿ ಮಹಾರಾಜ ರಿಗೆ ಸಲಹೆಗಳನ್ನು ಕೊಡುವುದಕ್ಕೆ ಒಂದು ಸಂಪುಟವನ್ನು ರಚಿಸಿ ಅದಕ್ಕೆ ದಿವಾನ ರನ್ನು ಮುಖ್ಯಸ್ಥರನ್ನಾಗಿ ಮಾಡತಕ್ಕದ್ದು.

(9) ಕೆಳಗಿನ ನ್ಯಾಯಸ್ಥಾನಗಳ ತೀರ್ಪುಗಳನ್ನು ವಿಮರ್ಶಿಸಲು ಇಬ್ಬರು ನ್ಯಾಯಾಧೀಶರನ್ನೊಳಗೊಂಡ ಮುಖ್ಯನ್ಯಾಯಸ್ಥಾನವನ್ನು ಸ್ಥಾಪಿಸತಕ್ಕದ್ದು.

ಆದಕ್ಕೆ ಕೆಲವು ವರ್ಷ ಯೂರೋಪಿಯನ್ನರೊಬ್ಬರು ಮುಖ್ಯನ್ಯಾಯಾಧೀಶರಾಗಿರ ತಕ್ಕದ್ದು.

ಸುಪ್ರಸಿದ್ಧರಾದ ನಿವೃತ್ತ ಸರ್ಕಾರೀ ಅಧಿಕಾರಿಗಳನ್ನೂ, ದೊಡ್ಡ ಮನೆತನಗಳ ಪ್ರತಿನಿಧಿಗಳನ್ನೂ, ಜನಸಮುದಾಯದ ವಿವಿಧ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವವರನ್ನೂ ಒಳಗೊಂಡ ಆಲೋಚನಾ ಸಭೆಯೊಂದನ್ನು ಕಾರ್ಯನಿರ್ವಾಹಕ ಸಂಪುಟದ ಜೊತೆಗೆ ಅಸ್ತಿತ್ವಕ್ಕೆ ತರಬಹುದೆಂದು ಮೈಸೂರು ಸಂಸ್ಥಾನದ ಮುಖ್ಯ ಆಡಳಿತಗಾರರಾದ ಗೋರ್ಡನ್‌ರವರು ಭಾರತ ಸರ್ಕಾರಕ್ಕೆ ಸೂಚಿಸಿದರು. ಈ ಆಲೋಚನಾಸಭೆಯು ಮಸೂದೆಗಳನ್ನೂ, ಆಡಳಿತ ಯಂತ್ರದ ಸುಧಾರಣೆಗೆ ಸಂಬಂಧಪಟ್ಟ ಮುಖ್ಯವಾದ ಕ್ರಮಗಳನ್ನೂ, ಸರ್ಕಾರದ ವಿವಿಧ ಇಲಾಖೆಗಳಿಗೆ ವಿನಿಯೋಗಿಸಬೇಕಾದ ಹಣವನ್ನೂ ಕುರಿತು ಚರ್ಚಿಸಬಹುದು, ತನ್ನ ಅಭಿಪ್ರಾಯಗಳನ್ನು ಸೂಚಿಸಬಹುದು ಎಂಬುದು ಗೋರ್ಡನ್‌ರವರ ಅಭಿಪ್ರಾಯವಾಗಿದ್ದಿತು.

1879ನೇ ಮೇ ತಿಂಗಳಲ್ಲಿ ಭಾರತ ಸರ್ಕಾರದವರು ಸಾರ್ವಭೌಮ ಸರ್ಕಾರದ ಭಾರತ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆದು ಆದರಲ್ಲಿ ಮೈಸೂರು ಸಂಸ್ಥಾನವನ್ನು ಮಹಾರಾಜರಿಗೆ ಹಿಂದಿರುಗಿಸುವಾಗ ಅನುಸರಿಸಬೇಕಾದ ಸೂತ್ರಗಳನ್ನು ನಿರೂಪಿಸಿದರು. ಸುಸಂಸ್ಕೃತರಾದ ಜನರಿಂದ ಕೂಡಿರುವ, ಸಂಪದ್ಯುಕ್ತವಾಗಿರುವ ಈ ಸಂಸ್ಥಾನವನ್ನು ಬ್ರಿಟಿಷರ ಆಳ್ವಿಕೆಯಿಂದ ದೇಶೀಯರ ಆಳ್ವಿಕೆಗೆ ವರ್ಗಾಯಿಸಲಾಗುತ್ತಿದೆ. ಬ್ರಿಟಿಷರ ನೇರವಾದ ಆಳ್ವಿಕೆಯಲ್ಲಿರುವ ಪ್ರದೇಶಗಳಲ್ಲಿ ಯಾವ ಮಟ್ಟದ ದಕ್ಷತೆಯಿಂದ ಆಡಳಿತವನ್ನು ನಡೆಸಲಾಗುತ್ತಿದೆಯೋ ಅದೇ ಮಟ್ಟದ ಆಡಳಿತವನ್ನು ಮೈಸೂರಿನಲ್ಲಿ ಬ್ರಿಟಿಷರ ಪ್ರಭುತ್ವದ ಕಾಲದಲ್ಲಿ ನಡೆಸಿಕೊಂಡು ಬರಲಾಗಿದೆ. ಇದನ್ನೇ ಮುಂದೂ ನಡೆಸಿಕೊಂಡು ಬರಬೇಕೆಂಬ ಷರತ್ತಿನಂತೆ ಸಂಸ್ಥಾನವನ್ನು ವರ್ಗಾಯಿಸುತ್ತಿದೆ. ಇದು ಒಂದು ಅಪೂರ್ವವಾದ ಪ್ರಯೋಗ. ಏಕೆಂದರೆ ದೇಶೀಯ ಸಂಸ್ಥಾನಗಳಲ್ಲಿ ಬಹುಪಾಲು ಸಂಸ್ಥಾನಗಳಲ್ಲಿ ಪ್ರಭುವಿನ ಅಧಿಕಾರವು ವಾಸ್ತವವಾಗಲ್ಲದಿದ್ದರೂ ತತ್ವಶಃ ಅಪರಿಮಿತವಾದುದು ಎಂಬುದನ್ನು ಗಣನೆಗೆ ತಂದುಕೊಂಡು ರಾಜ್ಯದ ಒಡೆಯರ ಘನತೆಗೂ ಸ್ವಾತಂತ್ರ್ಯಕ್ಕೂ ಲೋಪ ಬರದಂತೆಯೂ, ಆಡಳಿತದ ನಿರ್ವಹಣೆಯಲ್ಲಿ ಅವರಿಗೆ ಗಣನೀಯವಾದ ಅಧಿಕಾರವಿರುವಂತೆಯೂ ಏರ್ಪಡಿಸತಕ್ಕದ್ದು. ಆದರೆ ಈ ರಾಜರಿಂದ ತಮ್ಮ ಅಧಿಕಾರದ ದುರುಪಯೋಗವಾಗದಂತೆ ಪ್ರತಿಬಂಧಕಗಳನ್ನು ಕಲ್ಪಿಸುವುದೂ ಅಗತ್ಯವಾಗಿದೆ.

ಸಮರ್ಥರೂ, ಅನುಭವಶಾಲಿಗಳೂ ಆದ ಉನ್ನತ ಅಧಿಕಾರಿಗಳೂ, ಸಲಹೆಗಾರರೂ ಪ್ರಭುಗಳ ಹತ್ತಿರ ಇರುವಂತೆ ಏರ್ಪಡಿಸುವದೂ, ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಕ್ರಮುಗಳನ್ನು ನಿರ್ಧರಿಸ:ವಾಗ ಒಂದೊಂದು ಹಂತದಲ್ಲೂ ಚೆನ್ನಾಗಿ ಆಲೋಚಿಸುವಂತೆ ಏರ್ಪಡಿಸುವುದೂ, ಅದಕ್ಕೆ ಸಂಬಂಧಪಟ್ಟಂತೆ ಯಾವ ಅಧಿಕಾರಿಗೆ ಜವಾಬ್ದಾರಿ ಇರತಕ್ಕದ್ದು ಎಂಬುದನ್ನು ಗೊತ್ತುಪಡಿಸುವುದೂ ಈ ದಿಶೆಯಲ್ಲಿ ತೆಗೆದುಕೊಳ್ಳಬಹುದಾದ ಮೊದಲ ಕ್ರಮ. ಹೀಗೆಂದು ಆ ಪತ್ರದಲ್ಲಿ ಸೂತ್ರಗಳನು ನಿರೂಪಿಸಲಾಗಿದೆ.

ಭಾರತ ಸರ್ಕಾರದ ಪತ್ರದಲ್ಲಿ ಗೋರ್ಡನ್‌ರವರು ಸೂಚಿಸಿದ್ದ ಆಲೋಚನಾ ಸಭೆಯ ವಿಷಯ ಪ್ರಸ್ತಾಪಿಸಲಾಗಿದೆ. ಅಂತಹ ಸಭೆಯನ್ನು ಕೂಡಲೇ ಅಸ್ತಿತ್ವಕ್ಕೆ ತರುವುದು ಆತುರದ ಹೆಜ್ಜೆಯಾದೀತು. ಏಕೆಂದರೆ ಅಂತಹ ಸಭೆಯನ್ನು ಬ್ರಿಟಿಷ್ ಭಾರತದಲ್ಲಿ ಎಲ್ಲೂ ಏರ್ಪಡಿಸಿಲ್ಲ. ಮೈಸೂರಿನಲ್ಲಿ ಕಂಡು ಬರುವಂತಹ ಪರಿಸ್ಥಿತಿ ಇದ್ದ ಇತರ ಪ್ರದೇಶಗಳಲ್ಲಿ ಇಂತಹ ಸಭೆ ಯಶಸ್ವಿಯಾಯಿತೆಂದು ಕಂಡುಬಂದಿಲ್ಲ. ಆದರೆ ಉತ್ತರೋತ್ತರವಾಗಿ ಇಂತಹ ವ್ಯವಸ್ಥೆಯನ್ನು ಆನುಷಂಗಿಕವಾಗಿ ಏರ್ಪಡಿಸಬಹುದು ಎಂದು ಆ ಪತ್ರದಲ್ಲಿ ಹೇಳಿದೆ.

"ಮೈಸೂರಿನ ಮಹಾರಾಜರನ್ನು ರಾಜ್ಯಾಂಗಬದ್ಧವಾದ ಆಡಳಿತವ್ಯವಸ್ಥೆಯ ಎಂದರೆ ಸ್ಥಿರವಾದ ಮತ್ತು ಮೂಲಭೂತವಾದ ಸೂತ್ರಗಳಿಗೆ ಅನುಗುಣವಾಗಿ ನಡೆಸುವ ಸರ್ಕಾರದ ಮುಖ್ಯಸ್ಥರನ್ನಾಗಿ ಮಾಡುವ ಈ ಪ್ರಯೋಗದಿಂದ ಸಾರ್ವಭೌಮಸರ್ಕಾರವು ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಹೊಸದೊಂದು ನೀತಿಯನ್ನು ರೂಪಿಸಿದಂತಾಗುತ್ತದೆ. ಈ ಸಂಸ್ಥಾನಗಳೊಂದಿಗೆ ವ್ಯವಹರಿಸುವ ಮಾರ್ಗ ಯಾವುದು, ಅವುಗಳಿಗೆ ಸಂಬಂಧಪಟ್ಟಂತೆ ಸಾರ್ವಭೌಮ ಸರ್ಕಾರಕ್ಕೆ ಇರುವ ಜವಾಬ್ದಾರಿಯನ್ನು ನಿರ್ವಹಿಸುವ ಬಗೆ ಹೇಗೆ ಎಂಬುದು ಯಾವಾಗಲೂ ಜಟಿಲವಾದ ಸಮಸ್ಯೆಯಾಗಿದೆ. ಈಗಲೂ ಜಟಿಲವಾದ ಸಮಸ್ಯೆಯಾಗಿಯೇ ಉಳಿದಿದೆ. ಅವುಗಳ ಸ್ಥಿತಿಯನ್ನು ಉತ್ತಮಗೊಳಿಸುವುದೂ, ಸಾರ್ವಭೌಮ ಸರ್ಕಾರದವರು ಕಲ್ಪಿಸಿರುವ ವ್ಯವಸ್ಥೆಯಲ್ಲಿ ಕ್ರಮೇಣ ಅವುಗಳು ಹೊಂದುವಂತೆ ಮಾಡುವುದೂ, ಅದೇ ಮಟ್ಟದಲ್ಲಿ ಅವುಗಳ ಆಡಳಿತ ವ್ಯವಸ್ಥೆ ಇರುವಂತೆ ಕಲ್ಪಿಸುವುದೂ ಅವುಗಳ ಭದ್ರತೆಗೆ ಬಹುಮಟ್ಟಿಗೆ ಅಗತ್ಯವಾಗಿದೆ."

"ನಾವು ಈಗ ದೇಶೀಯ ಸಂಸ್ಥಾನಗಳನ್ನು ಕಾಪಾಡಬೇಕೆಂಬ ವಿಷಯದಲ್ಲಿ ಕಾತರರಾಗಿದ್ದೇವೆ ಎಂಬುದರಿಂದ ಅವುಗಳ ಅರಸರಲ್ಲಿ ಕ್ರಮೇಣ ಆ ಸಂಸ್ಥಾನಗಳ ರಾಜಕೀಯ ಭದ್ರತೆಯ ಬಗೆಗೆ ಭರವಸೆ ಮೂಡಿದೆ. ಇದರಿಂದ ಈ ಸಂಸ್ಥಾನಗಳ ಸರ್ಕಾರಗಳಿಗೆ ಬಲ ಭದ್ರತೆಗಳನ್ನು ಕಲ್ಪಿಸುವ ನಮ್ಮ ಪ್ರಯತ್ನ ಊರ್ಜಿತ ವಾಗುವ ಬದಲು ಅಡ್ಡಿ ಆತಂಕಗಳನ್ನು ಎದುರಿಸುತ್ತಿದೆ. ಬ್ರಿಟಿಷರು ಭಾರತದಲ್ಲಿ ಪ್ರಬಲವಾಗುವುದಕ್ಕೆ ಮುಂಚೆ ಅವ್ಯವಸ್ಥೆಗೊಳಗಾದ ದೇಶೀಯ ಸಂಸ್ಥಾನವು ಅದಕ್ಕಿಂತ ಪ್ರಬಲರಾದ ಸುತ್ತಮುತ್ತಲಿನ ರಾಜ್ಯಗಳ ಆಕ್ರಮಣದ ಭಯಕ್ಕೀಡಾಗು ತ್ತಿದ್ದಿತು. ತದನಂತರದಲ್ಲಿ ಅಂತಹ ಸಂಸ್ಥಾನಗಳನ್ನು ಬ್ರಿಟಿಷರು ಸ್ವಾಧೀನ ಪಡಿಸಿಕೊಂಡುಬಿಡುತ್ತಿದ್ದರು. ಈಗ ಈ ದೇಶೀಯ ಸಂಸ್ಥಾನಗಳಿಗೆ ಪರರಾಜರು ಆಕ್ರಮಿಸುವ, ಬ್ರಿಟಿಷರು ಸ್ವಾಧೀನಪಡಿಸಿಕೊಳ್ಳುವ ಭಯಕ್ಕೆ ಕಾರಣವಿಲ್ಲ. ಅಲ್ಲದೇ ಮಹಾರಾಣಿಯವರ ಸರ್ಕಾರದವರು ಈ ರಾಜರ ಉತ್ತರಾಧಿಕಾರಿಗಳು, ರಾಜ್ಯದ ಗದ್ದುಗೆಯನ್ನು ಏರುವ ವಿಷಯದಲ್ಲಿ ಸ್ಪಷ್ಟವಾದ ಭರವಸೆಯನ್ನು ಕೊಟ್ಟಿದ್ದಾರೆ. ಈ ಸಂಸ್ಥಾನಗಳ ಅರಸರು ತತ್ವಶಃ ಮತ್ತು ಕೆಲವು ಸಂದರ್ಭಗಳಲ್ಲಿ ವಾಸ್ತವವಾಗಿ ನಿರಂಕುಶರಾಗಿದ್ದಾರೆ. ಆದರೆ ಅವರು ಅವಿವೇಕವಾಗಿ ನಡೆದು ಕೊಳ್ಳುವುದಕ್ಕೆ, ದುರಾಡಳಿತ ಮಾಡುವುದಕ್ಕೆ ಅವಕಾಶವಿಲ್ಲದಂತೆ ಇದ್ದ ಪ್ರತಿಬಂಧಕ ಗಳು ಸ್ವಲ್ಪಮಟ್ಟಿಗೆ ಕಣ್ಮರೆಯಾಗಿವೆ. ಬಿಗಿ ಇಲ್ಲದ, ನ್ಯಾಯವಿರುದ್ಧವಾದ ಆಡಳಿತದಿಂದ ಉಂಟಾಗುವ ಪರಿಣಾಮಗಳ ವಿಷಯದಲ್ಲಿ ಹೀಗೆ ಭಯ ತಪ್ಪಿರುವದ ರಿಂದ ರಾಜ್ಯಾಡಳಿತದ ವಿಷಯದಲ್ಲಿ ಸಲಹೆ ಕೊಡುವವರು, ಅಧಿಕಾರಿಗಳು ಮತ್ತು ಸರ್ಕಾರದಲ್ಲಿ ಪ್ರಭಾವವಿರುವವರೆಲ್ಲರೂ ಸ್ವಲ್ಪಮಟ್ಟಿಗೆ ಎಚ್ಚರದಪ್ಪಿ ನಡೆಯುವುದಕ್ಕೆ ಅವಕಾಶವಾಗಿದೆ."

"ಇಂತಹ ಸಂದರ್ಭಗಳಲ್ಲಿ, ಈ ಕಾರಣಗಳಿಂದ ಈಚಿನ ವರ್ಷಗಳಲ್ಲಿ ಸಾರ್ವ ಭೌಮ ಸರ್ಕಾರವು ದೇಶೀಯ ಸಂಸ್ಥಾನಗಳ ವ್ಯವಹಾರದಲ್ಲಿ ಪದೇ ಪದೇ ಪ್ರವೇಶಿಸ ಬೇಕಾಗಿ ಬಂದಿದೆ. ರಾಜರ ಅಸಮರ್ಥತೆ ಅಥವಾ ಅವಿವೇಕದ ಆಡಳಿತದಿಂದಾಗಿ ಸಮಸ್ಯೆಗಳು ಉದ್ಭವಿಸಿದ ಕೂಡಲೇ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿ ಬಂದಿದೆ. ಇಲ್ಲವೇ ಪಟ್ಟಾಧಿಕಾರಿಯು ತುಂಬಾ ಚಿಕ್ಕವಯಸ್ಸಿನವನಾಗಿ ಅವನು ಪ್ರಾಪ್ತವಯಸ್ಕನಾಗಿ ರಾಜ್ಯಾಧಿಕಾರ ವಹಿಸುವವರೆಗಿನ ಅವಧಿ ದೀರ್ಘವಾಗಿದ್ದು ರಾಜ್ಯದ ಆಡಳಿತವನ್ನು ಎಚ್ಚರಿಕೆಯಿಂದ ಮೇಲ್ವಿಚಾರಣೆ ಮಾಡಬೇಕಾದ ಅಗತ್ಯ

ಒದಗಿದೆ. ಇಂತಹ ಸಂದರ್ಭಗಳಲ್ಲಿ ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಸರ್ಕಾರವು ವಹಿಸಿಕೊಂಡು ಅದನ್ನು ನಡೆಸುವುದಕ್ಕಾಗಿ ಬ್ರಿಟಿಷ್ ಅಧಿಕಾರಿಗಳನ್ನು ನಿಯಮಿಸದಿದ್ದರೆ, ರಾಜನ ಅಧಿಕಾರವು ಸಮರ್ಥನೆಂದು ಆರಿಸಲ್ಪಟ್ಟ ದೇಶೀಯ ಮಂತ್ರಿಯ ಕೈವಶವಾಗಿದೆ. ದೇಶೀಯ ಸಂಸ್ಥಾನಗಳಲ್ಲಿ ಪರಿಸ್ಥಿತಿ ಹದಗೆಟ್ಟಾಗ, ಅದನ್ನು ಸರಿಪಡಿಸಲು ಬ್ರಿಟಿಷ್ ಸರ್ಕಾರವು ಪದೇ ಪದೇ ಪ್ರವೇಶಿಸುವುದರಲ್ಲಿ, ಬ್ರಿಟಿಷ್ ಅಧಿಕಾರಿಗಳನ್ನು ಆಡಳಿತ ನಿರ್ವಹಣೆಗೆ ನಿಯಮಿಸುವುದರಲ್ಲಿ ಬಾಧಕಗಳು ಇವೆ ಎಂಬುದು ನಿಜ. ಆದರೆ ಎಷ್ಟೇ ಸಮರ್ಥನಾಗಲಿ, ಕರ್ತೃತ್ವಶಾಲಿಯಾಗಲಿ, ಒಬ್ಬ ಮಂತ್ರಿಗೆ ತುಂಬಾ ಅಧಿಕಾರವನ್ನು ಕೊಡುವುದರಿಂದ ಅನೇಕ ತೊಂದರೆಗಳು ಉಂಟಾಗುವುವೆಂಬುದೂ ಅನುಭವದಿಂದ ಸಿದ್ಧವಾಗಿದೆ.''

"ದೇಶೀಯ ಸಂಸ್ಥಾನಗಳಲ್ಲಿ ಬಹುಕಾಲದಿಂದ ಕಂಡುಬರುತ್ತಿರುವ ದುರಾಡಳಿತಕ್ಕೆ ಅವಕಾಶವಾಗದಂತೆ ಪ್ರತಿಬಂಧಕಗಳನ್ನು ಏರ್ಪಡಿಸಿ, ಸಾರ್ವಭೌಮ ಸರ್ಕಾರವು ಅಂತಹ ದುರಾಡಳಿತದಿಂದ ಉಂಟಾದ ದುಷ್ಪರಿಣಾಮಗಳನ್ನು ನಿವಾರಿಸಲು ಪದೇ ಪದೇ ಅನಿಯಂತ್ರಿತವಾಗಿ ಪ್ರವೇಶಿಸುವ ಸಂದರ್ಭ ಒದಗದಂತೆ ಮಾಡಲು, ರಾಜನ ಅಥವಾ ರಾಜ್ಯಾಡಳಿತದ ಜವಾಬ್ದಾರಿಯನ್ನು ವಹಿಸಿರುವ ಮಂತ್ರಿಯ ಅಧಿಕಾರಕ್ಕೆ ನ್ಯಾಯವಾದ ಮಿತಿಯನ್ನು ಕಲ್ಪಿಸುವ ಅವಕಾಶ ಬಂದಾಗಲೆಲ್ಲ ಆ ರೀತಿ ಮಿತಿಯನ್ನು ಕಲ್ಪಿಸುವುದು ಸೂಕ್ತವೆಂಬುದು ನಮ್ಮ ಈಗಿನ ನೀತಿಯಾಗಿದೆ. ಈ ರೀತಿ ಕಲ್ಪಿಸಿದ ಮಿತಿಗಳು ಸಾರ್ವಜನಿಕ ದಾಖಲೆಗಳಲ್ಲಿ ಸ್ಪಷ್ಟವಾಗಿ ನಮೂದಾಗಬೇಕು. ಇದರಿಂದ ಈ ಮಿತಿಗಳು ಏನು ಎಂಬ ವಿಷಯದಲ್ಲಿ ವಾಗ್ವಾದಕ್ಕೆ ಅವಕಾಶವಿರುವುದಿಲ್ಲ. ಅಲ್ಲದೇ ಕೆಲವು ಸಂದರ್ಭಗಳಲ್ಲಿ ಸಾರ್ವಭೌಮ ಸರ್ಕಾರಕ್ಕೆ ಸಂಸ್ಥಾನಗಳ ಆಡಳಿತಗಳ ಮೇಲ್ವಿಚಾರಣೆಯನ್ನು ಮಾಡುವುದಕ್ಕೆ ಇರುವ ಅಧಿಕಾರವನ್ನು ಬಲಗೊಳಿಸಿ ವಿಸ್ತಾರಗೊಳಿಸಬೇಕಾಗಬಹುದು. ಮಹಾರಾಣಿಯವರ ಸರ್ಕಾರವು ಮೈಸೂರಿಗೆ ಈ ಸೂತ್ರಗಳನ್ನು ಅನ್ವಯಿಸುವುದನ್ನು ಒಪ್ಪಿದರೆ ಆಶ್ರಿತ ಸಂಸ್ಥಾನಗಳಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರಕ್ಕೆ ಇರುವ ಜವಾಬ್ದಾರಿಯನ್ನು ನಿರ್ವಹಿಸುವ ಬಗೆಗೆ ಸ್ಥಿರವಾದ ನೀತಿಯ ನೆಲೆಗಟ್ಟನ್ನು ನಿರ್ಮಿಸಿದಂತಾಗುತ್ತದೆ."

"ಹೀಗೆ ಕಲ್ಪಿಸಿದ ಈ ಹೊಸ ಮಾದರಿಯೂ, ಮೈಸೂರಿನಲ್ಲಿ ಗಳಿಸುವ ಅನುಭವವೂ ದೇಶೀಯ ಸಂಸ್ಥಾನಗಳ ಆಡಳಿತದ ಪುನರ್ವ್ಯವಸ್ಥೆ ಮತ್ತು

**ಸುಧಾರಣೆಗೆ ಸಂಬಂಧಪಟ್ಟ ಪ್ರಶ್ನೆಗಳು ಉದ್ಭವಿಸಿದಾಗ ಅವುಗಳನ್ನು ವ್ಯವಸ್ಥಿತವಾಗಿ ಬಗೆಹರಿಸುವುದಕ್ಕೆ ಉಪಯುಕ್ತವಾಗಬಹುದು." §**

ಭಾರತಸರ್ಕಾರವು ಬ್ರಿಟಿಷ್‌ಸರ್ಕಾರಕ್ಕೆ ಬರೆದ ಪತ್ರದಲ್ಲಿರುವ ಅನೇಕ ಅಂಶಗಳನ್ನು ವಿಸ್ತಾರವಾಗಿ ಮೇಲೆ ಕೊಡಲಾಗಿದೆ. ಬ್ರಿಟಿಷ್ ಸರ್ಕಾರವು ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಅನುಸರಿಸಬೇಕೆಂದು ನಿರ್ಧರಿಸಿದ ನೀತಿಯ ಸ್ಪಷ್ಟವಾದ ನಿರೂಪಣೆಯು ಈ ಪತ್ರದಲ್ಲಿ ಕಂಡುಬರುತ್ತದೆ. ಅಲ್ಲದೇ ಈ ಸಂಸ್ಥಾನಗಳ ಆಡಳಿತವು ಹದಗೆಟ್ಟದ್ದರ ವಿಷಯ ಅದರಲ್ಲಿ ಸ್ಪಷ್ಟವಾದ ಚಿತ್ರವಿದೆ. ಮೈಸೂರಿನಲ್ಲಿ ಏರ್ಪಡಿಸ ಬೇಕೆಂದಿದ್ದ ಹೊಸ ವ್ಯವಸ್ಥೆಯು ಇತರ ದೇಶೀಯ ಸಂಸ್ಥಾನಗಳ ಆಡಳಿತಕ್ಕೆ ಮಾದರಿಯಾಗುವುದೆಂಬ ನಿರೀಕ್ಷೆಯೂ, ಒಟ್ಟಿನಲ್ಲಿ ದೇಶೀಯ ಸಂಸ್ಥಾನಗಳ ಬಗೆಗೆ ಸಾರ್ವಭೌಮಸರ್ಕಾರದ ನೀತಿಯಲ್ಲಿ ಅದೊಂದು ಹೊಸ ಪ್ರಯೋಗವೆಂಬ ಭಾವನೆಯೂ ಈ ಪತ್ರದ ಕೊನೆಯಲ್ಲಿ ವ್ಯಕ್ತವಾಗಿವೆ. ಭಾರತಸರ್ಕಾರದವರು ಮೈಸೂರಿನ ಮುಖ್ಯಾಡಳಿತಗಾರರಾದ ಗೋರ್ಡನ್‌ರವರು ಸೂಚಿಸಿದ ಆಲೋಚನಾ ಸಭೆಯು ಕೂಡಲೇ ಏರ್ಪಡತಕ್ಕದ್ದಲ್ಲವೆಂದು ತಳ್ಳಿಹಾಕಿದುದು ಗಮನಿಸಬೇಕಾದ ವಿಷಯವಾಗಿದೆ.

1879ರ ಆಗಸ್ಟಿನಲ್ಲಿ ಭಾರತ ಕಾರ್ಯದರ್ಶಿಗಳಾದ ವೈಕೌಂಟ್ ಕ್ರಾನ್‌ಬ್ರೂಕ್ ರವರು ಮೈಸೂರು ಸಂಸ್ಥಾನದ ರಾಜ್ಯಾಡಳಿತವನ್ನು ಮಹಾರಾಜರಿಗೆ ವಹಿಸುವ ವಿಷಯದಲ್ಲಿ ಭಾರತಸರ್ಕಾರದವರು ಮಾಡಿದ ಸೂಚನೆಗಳಿಗೆ ತಮ್ಮ ಒಪ್ಪಿಗೆ ಇದೆ ಎಂಬುದನ್ನು ತಿಳಿಸಿದರು. ಮೈಸೂರಿನ ರಾಜ್ಯಾಡಳಿತದ ಬಗೆಗೆ ಸೂಚಿಸಿದ ಹೊಸ ವ್ಯವಸ್ಥೆಯು ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಸಾರ್ವಭೌಮಸರ್ಕಾರದ ನೀತಿಯಲ್ಲಿ ಹೊಸದೊಂದು ಅಧ್ಯಾಯವನ್ನು ಪ್ರಾರಂಭಿಸುತ್ತದೆ ಎಂಬ ಅಭಿಪ್ರಾಯವನ್ನು ಅವರು ಅನುಮೋದಿಸಿದರು.

ಆ ಕಾಲದಲ್ಲಿ ದೇಶೀಯ ಸಂಸ್ಥಾನಗಳ ಆಡಳಿತದಲ್ಲಿ ದಕ್ಷತೆ ಇರಲಿಲ್ಲ. ಲಂಚರುಷವತ್ತುಗಳು ಬೇರೂರಿದ್ದವು. ಬ್ರಿಟಿಷ್ ಸರ್ಕಾರವು ಈ ಸಂಸ್ಥಾನಗಳ ಅಸ್ತಿತ್ವವನ್ನು ತಾನು ಕಾಪಾಡುವುದೆಂಬ ಭರವಸೆಯನ್ನು ಕೊಟ್ಟಿದ್ದರಿಂದಲೂ,

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಅವುಗಳ ಸಿಂಹಾಸನಾಧೀಶ್ವರರ ವಂಶೀಕರು ರಾಜ್ಯಾಡಳಿತದಲ್ಲಿ ಮುಂದುವರೆಯು ವಂತೆ ತಾನು ನೋಡಿಕೊಳ್ಳುವೆನೆಂದು ಆಶ್ವಾಸನೆಯನ್ನು ಕೊಟ್ಟಿದ್ದರಿಂದಲೂ ಅವುಗಳ ಅರಸರುಗಳಲ್ಲಿ ತಮ್ಮ ಪದವಿ, ಅಧಿಕಾರಗಳಿಗೆ ಯಾವ ರೀತಿಯ ಚ್ಯುತಿಯೂ ಒದಗುವುದಿಲ್ಲವೆಂಬ ಭಾವನೆ ಬಲವಾಗಿ ಬೇರೂರಿತು. ತಾವು ದುರಾಡಳಿತ ಮಾಡಿದರೂ ತಮ್ಮ ರಾಜ್ಯಗಳನ್ನು ಬ್ರಿಟಿಷರು ವಶಪಡಿಸಿಕೊಳ್ಳುವು ದಿಲ್ಲವೆಂಬ ಭಾವನೆ ಅವರಲ್ಲಿ ತಲೆದೋರಿತು. ಇದರಿಂದ ಆಡಳಿತದಲ್ಲಿ ಬಿಗಿತಪ್ಪಿ ಅನ್ಯಾಯ ಅವ್ಯವಸ್ಥೆಗಳು ತಲೆದೋರಿ ನಿರಂಕುಶಾಧಿಕಾರಕ್ಕೆ ಎಡೆಗೊಟ್ಟಿತು. ಜನಗಳ ಮೇಲೆ ದಬ್ಬಾಳಿಕೆ ನಡೆಯಲು ಅವಕಾಶವಾಯಿತು. ಆದ್ದರಿಂದ ಬ್ರಿಟಿಷ್ ಸರ್ಕಾರವು ತಾನು ಈ ಸಂಸ್ಥಾನಗಳ ಅಸ್ತಿತ್ವವನ್ನೂ, ಅವುಗಳ ರಾಜಮನೆತನಗಳ ಅಧಿಕಾರವನ್ನೂ ಕಾಪಾಡುವೆನೆಂದು ಕೊಟ್ಟಿದ್ದ ಆಶ್ವಾಸನೆಯನ್ನು ಉಳಿಸಿಕೊಂಡು, ಅವುಗಳ ರಾಜ್ಯಾಡಳಿತದಲ್ಲಿ ನ್ಯಾಯ, ನೀತಿ ಶಿಸ್ತುಗಳು ಕಂಡುಬರುವಂತೆ ಮಾಡು ವುದು ಹೇಗೆ, ಅದರ ಬಗೆಗೆ ರೂಪಿಸಬೇಕಾದ ನೀತಿ ಯಾವುದು, ಎಂಬುದನ್ನು ಕುರಿತು ಪರ್ಯಾಲೋಚಿಸುತ್ತಿದ್ದಿತು. ಹೀಗೆ ಮೈಸೂರಿನ ಆಡಳಿತವನ್ನು ಮಹಾರಾಜ ರಿಗೆ ವಹಿಸುವ ಕಾಲ ಬಂದಾಗ ರಾಜ್ಯಾಂಗಬದ್ಧವಾದ ಆಡಳಿತದ ಮುಖ್ಯಸ್ಥರನ್ನಾಗಿ ಮಹಾರಾಜರನ್ನು ಮಾಡುವ ಒಂದು ಸದವಕಾಶವು ತಮಗೆ ದೊರಕಿದೆ ಎಂಬುದು ಬ್ರಿಟಿಷ್ ಸರ್ಕಾರದ ಅಭಿಪ್ರಾಯವಾಗಿದ್ದಿತು.

ಮುಮ್ಮಡಿ ಕೃಷ್ಣರಾಜ ಒಡೆಯರು ಸರಿಯಾಗಿ ರಾಜ್ಯಾಡಳಿತ ಮಾಡಲಿಲ್ಲ, ಆದರಿಂದ ರಾಜ್ಯದಲ್ಲಿ ಅನಾಯಕತೆ ತಲೆದೋರಿತು ಎಂಬ ಕಾರಣಗಳನ್ನು ಕೊಟ್ಟು ಬ್ರಿಟಿಷರು ಮೈಸೂರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರಿಂದ ಸಂಸ್ಥಾನದ ಜನತೆಯ ಆತ್ಮಾಭಿಮಾನಕ್ಕೆ ಬಲವಾದ ಘಾತವಾಯಿತು. ಇದೇ ಕಾಲದಲ್ಲಿ ಭಾರತದಲ್ಲಿ ವಿದ್ಯಾವಂತರಾದಜನರು ಬ್ರಿಟಿಷ್‌ಜನರ ಸ್ವಾತಂತ್ರ್ಯಾಭಿಮಾನ ವನ್ನೂ, ಅವರಿಗೆ ರಾಜ್ಯಾಂಗಬದ್ಧವಾದ ಸರ್ಕಾರದ ಬಗೆಗೆ ಇದ್ದ ವಿಶ್ವಾಸವನ್ನೂ ಕಂಡು ಮೆಚ್ಚಿಕೊಂಡಿದ್ದರು. ಅವರಲ್ಲಿ ಭಾರತವೂ ಒಂದು ರಾಷ್ಟ್ರ ಎಂಬ ಅಭಿಮಾನವು ಜಾಗೃತವಾಗುತ್ತಿದ್ದಿತು. ಮೈಸೂರಿನ ಆಡಳಿತವನ್ನು ಬ್ರಿಟಿಷರು ವಹಿಸಿಕೊಂಡಿದ್ದನ್ನು ಈ ವಿದ್ಯಾವಂತವರ್ಗ ಭಾರತದ ಆತ್ಮಗೌರವಕ್ಕೆ ಚ್ಯುತಿ ಬಂದಂತಾಯಿತು ಎಂದೆಣಿಸಿತು. ಭಾರತೀಯರಿಗೆ ತಮ್ಮ ವ್ಯವಹಾರಗಳನು ತಾವೇ ನಿರ್ವಹಿಸುವುದಕ್ಕೆ ಯೋಗ್ಯತೆಯಿಲ್ಲ ಎಂದು ಬ್ರಿಟಿಷರು ಈ ದೇಶದ ಜನಕೆ

ಸವಾಲು ಹಾಕಿದಂತಾಯಿತು ಎಂದು ಅವರಿಗೆ ತೋರಿತು. **ಹೀಗೆ ಬ್ರಿಟಿಷರೂ ರಾಷ್ಟ್ರೀಯ ಭಾವನೆ ಜಾಗೃತವಾಗಿದ್ದ ಭಾರತೀಯರೂ ಚಾಮರಾಜೇಂದ್ರ ಒಡೆಯರ್‌ರವರಿಗೆ ಮೈಸೂರನ್ನು ಹಿಂದಿರುಗಿಸುವುದು ದೇಶದ ಚರಿತ್ರೆಯಲ್ಲಿಯೇ ಒಂದು ಮುಖ್ಯವಾದ ಘಟನೆಯೆಂದು ಅಭಿಪ್ರಾಯವುಳ್ಳವರಾಗಿದ್ದರು.**

3ನೇ ಮಾರ್ಚಿ 1880 ರಲ್ಲಿ ಭಾರತಸರ್ಕಾರದವರು ಭಾರತಕಾರ್ಯದರ್ಶಿಯವರ ಒಪ್ಪಿಗೆಗಾಗಿ ಅಧಿಕಾರವರ್ಗಾವಣೆಯ ಷರತ್ತುಗಳನ್ನೊಳಗೊಂಡ ಕರಡನ್ನು ತಮ್ಮ ಪತ್ರದೊಂದಿಗೆ ಕಳುಹಿಸಿದರು. ಯಾವ ಷರತ್ತುಗಳಿಗೆ ಒಳಪಟ್ಟು ಮಹಾರಾಜರು ಸಂಸ್ಥಾನದ ರಾಜ್ಯಾಡಳಿತವನ್ನು ವಹಿಸತಕ್ಕದ್ದು, ಸಾರ್ವಭೌಮ ಸರ್ಕಾರದೊಂದಿಗೆ ಅವರ ಸಂಬಂಧ ಯಾವ ರೀತಿ ಇರತಕ್ಕದ್ದು ಎಂಬುದನ್ನು ಅದರಲ್ಲಿ ನಿರೂಪಿಸಲಾಗಿದ್ದಿತು. ಸಂಸ್ಥಾನದ ಒಳಾಡಳಿತದ ವಿವರಗಳನ್ನು ಈ ಕರಡಿನಲ್ಲಿ ಪ್ರಸ್ತಾಪಿಸದಿದ್ದರೂ ಭಾರತದ ಗೌರ್ನರ್ ಜನರಲ್‌ರವರು ಸೂಕ್ತ ಕಂಡಾಗ ರಾಜ್ಯದ ಆಡಳಿತದಲ್ಲಿ ಪ್ರವೇಶಿಸಬಹುದೆಂದು ಅದರಲ್ಲಿ ಸ್ಪಷ್ಟಪಡಿಸಿದ್ದಿತು. ಮುಮ್ಮಡಿ ಕೃಷ್ಣರಾಜ ಒಡೆಯರವರಿಗೂ ಸಾರ್ವಭೌಮ ಸರ್ಕಾರಕ್ಕೂ ಹಿಂದೆ ಆಗಿದ್ದ ಒಪ್ಪಂದಗಳನ್ನು ಈ ಕರಡಿನಲ್ಲಿ ಪ್ರಸ್ತಾಪಿಸಿರಲಿಲ್ಲ. ಭಾರತ ಕಾರ್ಯದರ್ಶಿಗಳಾಗಿದ್ದ ನಾರ್ತ್‌ಕೋಟ್‌ರವರು 1867 ರಲ್ಲಿ ಭಾರತ ಸರ್ಕಾರಕ್ಕೆ ಬರೆದ ಪತ್ರದಲ್ಲಿ ನಿರೂಪಿಸಿದಂತೆ ಈ ಹೊಸ ಒಪ್ಪಂದ ಹಿಂದೆ ಮಾಡಿಕೊಂಡಿದ್ದ ಎಲ್ಲಾ ಒಪ್ಪಂದಗಳನ್ನೂ ರದ್ದುಮಾಡುವುದೆಂದೂ, ಮೈಸೂರಿನ ರಾಜಮನೆತನಕ್ಕೂ ಬ್ರಿಟಿಷ್‌ಸರ್ಕಾರಕ್ಕೂ ಹೊಸ ಸಂಬಂಧವನ್ನು ಕಲ್ಪಿಸುವುದೆಂದೂ ಭಾರತ ಸರ್ಕಾರವು ಅಭಿಪ್ರಾಯಪಟ್ಟಿತು. ರಾಜ್ಯವರ್ಗಾವಣೆಗೆ ಮುಂಚೆ ಜಾರಿಯಲ್ಲಿದ್ದ ಯಾವ ಕಾನೂನನ್ನೇ ಆಗಲಿ ಬದಲಾಯಿಸಬೇಕಾದರೆ ಅಥವಾ ರಾಜ್ಯಾಡಳಿತದ ಯಾವುದಾದರೂ ಮುಖ್ಯವಿಭಾಗದಲ್ಲಿ ಮುಖ್ಯವಾದ ಬದಲಾವಣೆಮಾಡಬೇಕಾದರೆ ಬ್ರಿಟಿಷ್‌ಸರ್ಕಾರದ ಒಪ್ಪಿಗೆ ಅಗತ್ಯವೆಂಬ ಷರತ್ತನ್ನು ಈ ಕರಡಿನಲ್ಲಿ ಸೇರಿಸಲಾಗಿದ್ದಿತು. ಅಲ್ಲದೇ ಮೈಸೂರು ಸರ್ಕಾರವು ಸಾರ್ವಭೌಮ ಸರ್ಕಾರಕ್ಕೆ ಒಂದು ವರ್ಷಕ್ಕೆ 35 ಲಕ್ಷ ರೂಪಾಯಿಗಳ ಪೊಗದಿಯನ್ನು ಕೊಡಬೇಕೆಂದು ಅದರಲ್ಲಿ ಗೊತ್ತುಪಡಿಸಲಾಯಿತು. ಕೃಷ್ಣರಾಜ ಒಡೆಯರು

ರಾಜ್ಯಭಾರ ಮಾಡುತ್ತಿದ್ದಾಗ ವರ್ಷಕ್ಕೆ 24½ ಲಕ್ಷ ರೂಪಾಯಿಗಳನ್ನು ಪೊಗದಿಯಾಗಿ ಕೊಡಲಾಗುತ್ತಿದ್ದಿತು. ಈಗ ಅದನ್ನು 10½ ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಲಾಯಿತು. ಮೈಸೂರಿನ ಸಿಂಹಾಸನಕ್ಕೆ ಉತ್ತರಾಧಿಕಾರಿಗಳು ಯಾರು, ಅವರನ್ನು ನಿರ್ಧರಿಸುವ ಬಗೆ ಹೇಗೆ ಎಂಬ ವಿಷಯವನ್ನೂ, ಮೈಸೂರು ಸಂಸ್ಥಾನಕ್ಕೆ ಹೊರರಾಜ್ಯಗಳೊಂದಿಗೆ ಇರಬೇಕಾದ ಸಂಬಂಧ ಯಾವ ರೀತಿ ಇರಬೇಕೆಂಬುದನ್ನೂ ಅದರಲ್ಲಿ ನಮೂದಿಸಲಾಯಿತು. ಶ್ರೀರಂಗಪಟ್ಟಣದ ಮೇಲೆ ಬ್ರಿಟಿಷರಿಗೆ ಇದ್ದ ಪರಮಾಧಿಕಾರವನ್ನು ಮೈಸೂರು ಸಂಸ್ಥಾನಕ್ಕೆ ವಹಿಸಲಾಯಿತು. ಭಾರತಕಾರ್ಯದರ್ಶಿಗಳಾದ ಲಾರ್ಡ್ ಹಾರ್ಟಿಂಗ್‌ಟನ್‌ರವರು ಲಾರ್ಡ್ ಲಿಟ್ಟನ್‌ರವರ ಜಾಗದಲ್ಲಿ ಭಾರತದ ವೈಸ್‌ರಾಯರಾಗಿ ಬಂದಿದ್ದ ಲಾರ್ಡ್ ರಿಪ್ಪನ್‌ರವರಿಗೆ 12 ನೇ ಆಗಸ್ಟ್ 1880ರಲ್ಲಿ ಪತ್ರವನ್ನು ಬರೆದು ಕರಡು ಒಪ್ಪಂದಕ್ಕೆ ಸಾರ್ವಭೌಮ ಸರ್ಕಾರದ ಒಪ್ಪಿಗೆ ಇದೆ ಎಂದು ತಿಳಿಸಿದರು. ಭಾರತಕಾರ್ಯದರ್ಶಿಯವರು ಪೊಗದಿಯನ್ನು 35 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದಕ್ಕೆ ತಮ್ಮ ಒಪ್ಪಿಗೆ ಇದೆ, ಆದರೆ ಹೀಗೆ ಹೆಚ್ಚಿಸಿದ ಮೊತ್ತ 10½ ಲಕ್ಷ ರೂಪಾಯಿಗಳನ್ನು ಮಹಾರಾಜರು ಗದ್ದುಗೆಯನ್ನು ಏರಿದ ಕಾಲದಿಂದ 5 ವರ್ಷಗಳವರೆಗೆ ವಸೂಲ್ಮಾಡತಕ್ಕದ್ದಲ್ಲವೆಂದು ಸೂಚಿಸಿದರು. ಧಾತುಈಶ್ವರ ಕ್ಷಾಮದಿಂದ ಸಂಸ್ಥಾನದ ಹಣಕಾಸಿನ ಸ್ಥಿತಿಯು ತುಂಬಾ ಹದಗೆಟ್ಟಿದ್ದರಿಂದ ಈ ರಿಯಾಯಿತಿಯನ್ನು ತೋರಿಸಲಾಯಿತು.

1880 ನೇ ಇಸವಿಯ ಉತ್ತರಾರ್ಧದಲ್ಲಿ ಮಹಾರಾಜರು ಸಂಸ್ಥಾನದ ವಿವಿಧ ಪ್ರದೇಶಗಳಿಗೆ ಭೇಟಿ ಕೊಟ್ಟರು. ಅವರೊಂದಿಗೆ ಹೋಗಿದ್ದ ಗೋರ್ಡನ್‌ರವರು ಅದರ ಬಗೆಗೆ ಹೀಗೆ ಬರೆದಿದ್ದಾರೆ:— "ಪ್ರತಿ ಸ್ಥಳದಲ್ಲಿಯೂ ಸಂಸ್ಥಾನದ ವಿವಿಧ ಭಾಗಗಳಿಂದ ಅವರನ್ನು ನೋಡಲು ಬಂದಿದ್ದ ಭಾರೀ ಜನಗಳ ಗುಂಪು ಮಹಾರಾಜರನ್ನು ಸ್ವಾಗತಿಸುತ್ತಿದ್ದಿತು. ಅವರು ಪ್ರಯಾಣಬೆಳೆಸುತ್ತಿದ್ದ ಮಾರ್ಗದ ಒಂದೊಂದು ತಿರುವಿನಲ್ಲಿಯೂ ಉತ್ಸಾಹಭರಿತರಾದ ಜನರ ಗುಂಪು ಅವರನು ಸ್ವಾಗತಿಸುತ್ತಿದ್ದಿತು. ಮಹಾರಾಜರ ಬಿಜಯಕ್ಕೆ ಗೌರವ ಸೂಚಕವಾಗಿ ಎಲ್ಲೆಲ್ಲೂ ಸ್ವಸಂತೋಷದಿಂದ, ಉತ್ಸಾಹಪೂರಿತರಾಗಿ ಜನರು ತಳಿರುತೋರಣಗಳನ್ನೂ, ದೀಪಾಲಂಕಾರಗಳನ್ನೂ, ಇಂತಹ ಹರ್ಷಸೂಚಕವಾದ ಪ್ರದರ್ಶನಗಳನ್ನೂ ಏರ್ಪಡಿಸಿದ್ದರು. ಹೀಗೆ ಈ ಪ್ರಯಾಣವು ಒಂದು ದೊಡ್ಡ ಮೆರವಣಿಗೆಯಂತೆ ಸಾಗಿತು.

ಈ ಎಲ್ಲ ಸ್ಥಳಗಳಲ್ಲೂ ಸಂದರ್ಭ ಒದಗಿದಂತೆಲ್ಲ ಮುಖ್ಯವಾದ ವಿಷಯಗಳು ಯಾವುವು ಎಂಬುದನ್ನು ಮಹಾರಾಜರ ಗಮನಕ್ಕೆ ತರಲಾಯಿತು. ಮಹಾರಾಜರ ಮನಸ್ಸಿನಲ್ಲಿ ಅನೇಕ ವಿಷಯಗಳ ಬಗೆಗೆ ಆಸಕ್ತಿ ಹುಟ್ಟುವಂತೆ ಮಾಡುವುದ ರಲ್ಲಿಯೂ, ಜನಗಳ ಕ್ಷೇಮಾಭ್ಯುದಯಗಳಲ್ಲಿ ಅವರು ಶ್ರದ್ಧೆವಹಿಸುವಂತೆಯೂ ಈ ಪ್ರಯಾಣದಿಂದ ಸತ್ಪರಿಣಾಮವಾಗಿದೆ.''

ಬ್ರಿಟಿಷರು ಸಂಸ್ಥಾನವನ್ನು ಅರ್ಧಶತಮಾನ ಆಳಿದರು. ಬಹು ಸಮರ್ಥ ರಾದ ಇಂಗ್ಲಿಷ್ ಅಧಿಕಾರಿಗಳು ಸಂಸ್ಥಾನದ ಮುಖ್ಯಆಡಳಿತಗಾರರಾಗಿ ಈ ಅವಧಿಯಲ್ಲಿ ಸೇವೆಸಲ್ಲಿಸಿದರು. ಇಂದಿಗೂ ಸಾಮಾನ್ಯ ಜನ ಕಬ್ಬನ್ ಮತ್ತು ಬೌರಿಂಗ್‌ರವರನ್ನು ಪ್ರೀತಿವಿಶ್ವಾಸಗಳಿಂದಲೂ, ಕೃತಜ್ಞತೆಯಿಂದಲೂ ಸ್ಮರಿಸಿ ಕೊಳ್ಳುತ್ತಾರೆ. ಬ್ರಿಟಿಷರು ರಾಜ್ಯದಲ್ಲಿ ದಕ್ಷವಾದ ಆಡಳಿತ ವ್ಯವಸ್ಥೆಯನ್ನು ಏರ್ಪ ಡಿಸಿದರು. ಅವರು ಸಂಸ್ಥಾನದ ಎಲ್ಲ ಭಾಗಗಳಿಗೂ ಸಂಪರ್ಕ ಉಂಟಾಗುವಂತೆ ಮಾರ್ಗಗಳನ್ನು ನಿರ್ಮಿಸಿದರು, ಪ್ರಾಂತ್ಯದ ಆದಾಯವನ್ನು ಎರಡುಪಟ್ಟು ಹೆಚ್ಚಿಸಿದರು. ವಾಣಿಜ್ಯವ್ಯಾಪಾರಗಳೂ, ಉದ್ಯಮದಂಥೆಗಳೂ ಅವರ ವ್ಯವಸ್ಥಿತ ವಾದ ಆಡಳಿತದಲ್ಲಿ ಉಚ್ಛ್ರಾಯಸ್ಥಿತಿಗೆ ಬಂದವು. ಒಟ್ಟಿನಲ್ಲಿ ಸಂಸ್ಥಾನದಲ್ಲಿ ಶಾಂತಿ ನೆಮ್ಮದಿಗಳು ನೆಲೆಗೊಂಡು ಅದು ಸಂಪದ್ಭರಿತವಾಗಿದ್ದಿತು. ಹೀಗೆ ಸುವ್ಯವ ಸ್ಥಿತವಾದ ಆಡಳಿತ ವ್ಯವಸ್ಥೆಯನ್ನು ಹೊಂದಿ ಸಂಪದ್ಭರಿತವಾಗಿದ್ದ ರಾಜ್ಯವನ್ನು ಬ್ರಿಟಿಷರಿಂದ ಮಹಾರಾಜರು ಪಡೆಯುವಂತಾಯಿತು.

12ನೇ ಆಗಸ್ಟ್ 1880 ರಲ್ಲಿ ಭಾರತಕಾರ್ಯದರ್ಶಿಯವರು ಸಂಸ್ಥಾನದ ವರ್ಗಾವಣೆಯ ಷರತ್ತುಗಳನ್ನು ಒಳಗೊಂಡ ಕರಡುಪತ್ರಕ್ಕೆ ಒಪ್ಪಿಗೆ ಸೂಚಿಸಿ ಭಾರತ ಸರ್ಕಾರಕ್ಕೆ ಪತ್ರವನ್ನು ಬರೆದರಷ್ಟೆ. ಈ ಪತ್ರದಿಂದ ರಾಜ್ಯವರ್ಗಾವಣೆಗೆ ಸಾರ್ವಭೌಮ ಸರ್ಕಾರದ ಅಂಗೀಕಾರ ಮುದ್ರೆ ಬಿದ್ದಿತು. ಹೀಗೆ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರು ತಮ್ಮ ಹಿರಿಯರ ಸಿಂಹಾಸನವನ್ನು ಏರುವ ಕಾಲ ಸನ್ನಿಹಿತವಾಯಿತು.

## ಅಧ್ಯಾಯ 7

# ದಿವಾನರು

೨೫ನೇ ಮಾರ್ಚ್ ೧೮೮೧ರಲ್ಲಿ ಮೈಸೂರಿನ ಅರಮನೆಯಲ್ಲಿ ನಡೆದ ದರ್ಬಾರಿನಲ್ಲಿ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರು ಮೈಸೂರಿನ ಪ್ರಭುಗಳಾಗಿ ವಿಧ್ಯುಕ್ತವಾಗಿ ಅಧಿಕಾರವನ್ನು ಸ್ವೀಕಾರಮಾಡಿದರು. ಅದೇ ದಿನ ಮಹಾರಾಜರು ರಾಜಘೋಷಣೆಯನ್ನು ಹೊರಡಿಸಿ ರಂಗಾಚಾರ್ಲುರವರನ್ನು ಸಂಸ್ಥಾನದ ದಿವಾನರಾಗಿ ನಿಯಮಿಸಿದರು. ಆ ಘೋಷಣೆ ಹೀಗಿದ್ದಿತು : "ನಮ್ಮ ಆಧಿಪತ್ಯಕ್ಕೆ ಒಳಪಟ್ಟು ನಮ್ಮ ಅಧೀನದಲ್ಲಿರುವ ರಾಜ್ಯದ ಆಡಳಿತವನ್ನು ನಡೆಸುವುದಕ್ಕಾಗಿ ಒಬ್ಬ ದಿವಾನರನ್ನು ನಿಯಮಿಸಬೇಕೆಂದು ನಿಶ್ಚಯಿಸಿದ್ದೇವೆ. ಚೆಟ್ಟಿಪುಣ್ಯಂ ವೀರವಳ್ಳಿ ರಂಗಾಚಾರ್ಲು, ಸಿ. ಐ. ಇ. ಅವರ ರಾಜನಿಷ್ಠೆ, ದಕ್ಷತೆ, ವಿವೇಚನೆಗಳಲ್ಲಿ ನಂಬಿಕೆ ವಿಶ್ವಾಸಗಳನ್ನಿಟ್ಟು ಈ ಮೂಲಕ ಮೇಲೆ ಹೇಳಿದ ಚೆಟ್ಟಿಪುಣ್ಯಂ ವೀರವಳ್ಳಿ ರಂಗಾಚಾರ್ಲು ಸಿ.ಐ.ಇ. ರವರನ್ನು ರಾಜ್ಯದ ಆಡಳಿತ ನಿರ್ವಹಣೆಗಾಗಿ ನಮ್ಮ ದಿವಾನರನ್ನಾಗಿ ನಿಯಮಿಸಿದ್ದೇವೆ." ಅಲ್ಲದೇ ಮಹಾರಾಜರು ಒಂದು ಕಾಯನಿರ್ವಾಹಕ ಮಂಡಳಿಯನ್ನು ನಿಯಮಿಸಿದರು. ಈ ಮಂಡಲಿಯಲ್ಲಿ ಎರಡು ಅಥವಾ ಅದಕ್ಕಿಂತ ಅಧಿಕಸಂಖ್ಯೆಯ ಸದಸ್ಯರು ಇರತಕ್ಕದ್ದೆಂದೂ ಇದಕ್ಕೆ ದಿವಾನರು ಅಧಿಕಾರಪ್ರಯುಕ್ತ ಅಧ್ಯಕ್ಷರಾಗಿರತಕ್ಕದ್ದೆಂದೂ ನಿಯಮಿಸಿದರು. ಶಾಸನರಚನೆಯನ್ನೂ, ಕಂದಾಯ ಮತ್ತು ತೆರಿಗೆಗಳನ್ನೂ ಮತ್ತು ಆಡಳಿತ ನಿರ್ವಹಣೆಗೆ ಸಂಬಂಧಪಟ್ಟ ಮಿಕ್ಕ ಎಲ್ಲಾ ಮುಖ್ಯವಾದ ಕ್ರಮಗಳನ್ನೂ ಕುರಿತು ಪರ್ಯಾಲೋಚಿಸಿ ಮಹಾರಾಜರಿಗೆ ಸೂಕ್ತವಾದ ಸಲಹೆಗಳನ್ನು ಕೊಡುವುದು ಈ ಮಂಡಲಿಯ ಕರ್ತವ್ಯವಾಗಿದ್ದಿತು. ಈ ಕಾರ್ಯನಿರ್ವಾಹಕ ಮಂಡಲಿಯ ಕಾರ್ಯ ಪ್ರಯುಕ್ತ ಅಧ್ಯಕ್ಷರಾಗಿ ದಿವಾನರಾದ ರಂಗಾಚಾರ್ಲುರವರು, ಕಾರ್ಯ ಪ್ರಯುಕ್ತ ಸದಸ್ಯರಾಗಿ ನ್ಯಾಯಾಧೀಶರಾಗಿದ್ದ ತಿರುಚಿರಾಪಳ್ಳಿ ರಾಯುಲು ಆರೋಗ್ಯಸ್ವಾಮಿ ತಂಬೂಚೆಟ್ಟಿಯವರು ಮತ್ತು ಸದಸ್ಯರಾಗಿ ಪೂರ್ಣ ಕೃಷ್ಣರಾವ್, ಆಟ್ಟುಪಾಕಂ ರತ್ನಸಭಾಪತಿ ಮೊದಲಿಯಾರ್‌ರವರು ನಿಯಮಿತರಾದರು. ಈ ಸದಸ್ಯರ ಅಧಿಕಾರಾ

ವಧಿ ೩ ವರ್ಷಗಳು ಅಥವಾ ಮಹಾರಾಜರ ಇಷ್ಟ ಪ್ರಕಾರ ಎಂದು ಗೊತ್ತುಪಡಿಸಲಾಯಿತು. ಜಾನ್ ಡೌಗ್ಲಾಸ್ ಸ್ಯಾಂಡ್‌ಫರ್ಡ್‌ರವರು ಮೈಸೂರಿನ ಮೊದಲನೆಯ ಮುಖ್ಯನ್ಯಾಯಾಧೀಶರಾಗಿ ನಿಯಮಿತರಾದರು.

ಮಹಾರಾಜರ ಕಾರ್ಯಸಮಿತಿಗೆ ನಿಯಮಿತರಾದಾಗ ತಂಬೂಚೆಟ್ಟರು ನಂದಿದುರ್ಗ ವಿಭಾಗದ ಜಿಲ್ಲಾನ್ಯಾಯಾಧೀಶರಾಗಿದ್ದರು. ಬ್ರಿಟಿಷ್ ನ್ಯಾಯಾಂಗ ಅಧಿಕಾರಿಯ ಮುಖ್ಯ ಶಿರಸ್ತೇದಾರರ ಸ್ಥಾನದಿಂದ ಅವರು ಜಿಲ್ಲಾನ್ಯಾಯಾಧೀಶರ ಸ್ಥಾನಕ್ಕೆ ಹಂತಹಂತವಾಗಿ ಮೇಲೇರಿ ಬಂದಿದ್ದರು. ಅವರು ಕ್ರಿಶ್ಚಿಯನ್‌ರಲ್ಲಿ ಕ್ಯಾಥೋಲಿಕ್ ಪಂಗಡಕ್ಕೆ ಸೇರಿದ್ದವರು. ಅವರು ತಮ್ಮ ಚಾರಿತ್ರ್ಯಕ್ಕೂ, ಕರ್ತವ್ಯನಿಷ್ಠೆಗೂ ಹೆಸರಾಗಿದ್ದವರು. ಮೈಸೂರಿನ ಚರಿತ್ರೆಯಲ್ಲಿ ಅವರ ಹೆಸರು ಗೌರವಾನ್ವಿತವಾದುದು. ಅವರು ಸ್ವಲ್ಪಕಾಲ ದಿವಾನರ ಕಾರ್ಯವನ್ನು ನಿರ್ವಹಿಸಿದರು. ಮೈಸೂರನ್ನು ಬ್ರಿಟಿಷರು ಆಳುತ್ತಿದ್ದಾಗ ಪೂರ್ಣ ಕೃಷ್ಣರಾಯರು ಜಿಲ್ಲಾಧಿಕಾರಿಗಳಾಗಿದ್ದರು. ಸಭಾಪತಿ ಮೊದಲಿಯಾರ್‌ರವರು ಶಿರಸ್ತೇದಾರರಾಗಿದ್ದರು. ಅವರನ್ನು ಮಹಾರಾಜರ ಕಾರ್ಯನಿರ್ವಾಹಕ ಮಂಡಲಿಗೆ ನಿಯಮಿಸುವ ವೇಳೆಗೆ ಅವರು ಸರ್ಕಾರದ ಕೆಲಸದಿಂದ ನಿವೃತ್ತರಾಗಿ ವಿಶ್ರಾಂತಿ ಪಡೆಯುತ್ತಿದ್ದರು. ಕೇವಲ ಅಧಿಕಾರಿಗಳನ್ನಲ್ಲದೇ ಸಾರ್ವಜನಿಕರಲ್ಲಿ ಪ್ರಮುಖರಾದವರನ್ನೂ ಮಂಡಲಿಯಲ್ಲಿ ತೆಗೆದುಕೊಳ್ಳುವುದು ರಂಗಾಚಾರ್ಲುರವರ ಉದ್ದೇಶವಾಗಿದ್ದಿತೆಂಬುದನ್ನು ಪೂರ್ಣ ಕೃಷ್ಣರಾವ್, ಸಭಾಪತಿಮೊದಲಿಯಾರ್‌ರವರ ನೇಮಕವು ತೋರಿಸುತ್ತದೆ.

ಧಾತುಈಶ್ವರ ಕ್ಷಾಮದಿಂದ ಸಂಸ್ಥಾನದ ಆರ್ಥಿಕ ವ್ಯವಸ್ಥೆಯು ಮುರಿದು ಬಿದ್ದು ಅದರ ಹಣಕಾಸಿನ ಸ್ಥಿತಿಯು ಕಠಿಣವಾಗಿದ್ದಾಗ ಮಹಾರಾಜರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿದ್ದರು. ಮಹಾರಾಜರ ಪ್ರಧಾನಮಂತ್ರಿಯೂ ಮುಖ್ಯ ಸಲಹೆಗಾರರೂ ಆಗಿದ್ದ ರಂಗಾಚಾರ್ಲುರವರ ಜವಾಬ್ದಾರಿ ಈ ಸನ್ನಿವೇಶದಲ್ಲಿ ಬಹಳ ಹೆಚ್ಚಿನದಾಗಿದ್ದಿತು. ಅವರು ಬಹಳ ಜಾಣ್ಮೆಯಿಂದಲೂ, ದೂರದೃಷ್ಟಿಯಿಂದಲೂ ತಮ್ಮ ಕಾರ್ಯವನ್ನು ನಿರ್ವಹಿಸಬೇಕಾಗಿದ್ದಿತು. ಕ್ಷಾಮದಿಂದ ಕಂಗಾಲಾಗಿದ್ದ ಜನಗಳಲ್ಲಿ ಹೊಸ ಆಡಳಿತದ ಬಗೆಗೆ ನಂಬಿಕೆಯನ್ನು ಹುಟ್ಟಿಸಿ ಸಂಸ್ಥಾನದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದಕ್ಕೆ ಅಗತ್ಯವಾದ ಕ್ರಮಗಳನ್ನು ಅವರು ಕೈಗೊಳ್ಳಬೇಕಾಗಿದ್ದಿತು. ಒಂದು ಕಡೆ ಬ್ರಿಟಿಷರು, ಮೈಸೂರಿನ ಹೊಸ

ಆಡಳಿತ ವ್ಯವಸ್ಥೆ ಯಾವ ರೀತಿ ಕೆಲಸಮಾಡುವುದೆಂದು ಕುತೂಹಲದಿಂದ ನಿರೀಕ್ಷಿಸು ತ್ತಿದ್ದರು. ಮತ್ತೊಂದು ಕಡೆ ರಾಷ್ಟ್ರಪ್ರಜ್ಞೆ ಜಾಗೃತವಾಗುತ್ತಿದ್ದ ಭಾರತೀಯರು ಅರ್ಧಶತಮಾನದ ಮೇಲೆ ಕೈಗೆ ಬಂದ ರಾಜ್ಯಾಧಿಕಾರವನ್ನು ಮೈಸೂರಿನ ಅರಸರೂ ಮಂತ್ರಿಗಳೂ ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ಕಾತರದಿಂದ ನಿರೀಕ್ಷಿಸು ತ್ತಿದ್ದರು. ದೇಶಾಭಿಮಾನಿಗಳೂ, ಜನಗಳ ಆಶೆ ಆಕಾಂಕ್ಷೆಗಳನ್ನು ಅರಿತವರೂ, ದೇಶದಲ್ಲೆಲ್ಲಾ ಕಂಡುಬರುತ್ತಿದ್ದ ನವಜಾಗೃತಿಯ ಬಗೆಗೆ ನೈಜವಾದ ಸಹಾನುಭೂತಿ ಯುಳ್ಳವರೂ ಆದ ರಂಗಾಚಾರ್ಲುರವರಿಗೆ ಮೈಸೂರಿನ ಆಡಳಿತ ಯಶಸ್ವಿಯಾಗು ವುದು ಎಷ್ಟು ಆಗತ್ಯವೆಂದು ಗೊತ್ತಿದ್ದಿತು.

ಮೈಸೂರಿನಲ್ಲಿ ಆಡಳಿತವನ್ನು ಯಶಸ್ವಿಯಾಗಿ ನಡೆಸುವುದರಿಂದ ಸಂಸ್ಥಾನದ ಭವಿತವ್ಯಕ್ಕೆ ಸುಭದ್ರವಾದ ತಳಹದಿಯನ್ನು ಹಾಕಿದಂತಾಗುವುದಲ್ಲದೇ ಭಾರತೀಯ ರಿಗೆ ತಮ್ಮ ದೇಶದ ಆಡಳಿತವನ್ನು ನಡೆಸುವುದಕ್ಕೆ ಸಾಮರ್ಥ್ಯ ಇದೆ ಎಂಬ ಆತ್ಮ ವಿಶ್ವಾಸ ಮೂಡುವುದಕ್ಕೂ ಅದು ಸಹಾಯಕವಾಗುತ್ತದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು.

ರಂಗಾಚಾರ್ಲುರವರಿಗೆ ಸರ್ಕಾರದೊಳಗೂ, ಹೊರಗೂ ಅನೇಕ ಮಂದಿ ಶತ್ರು ಗಳಿದ್ದರು. ಅವರು ತಪ್ಪು ಮಾಡುತ್ತಾರೆಯೇ ಎಡವುತ್ತಾರೆಯೇ ಎಂದು ಗೃಧ್ರ ದೃಷ್ಟಿಯಿಂದ ನೋಡುತ್ತಿದ್ದ ಈ ಜನ ಅವರಿಗೆ ಕೇಡನ್ನುಂಟು ಮಾಡಲು ಅವಕಾಶ ದೊರಕುವುದೇ ಎಂದು ಕಾಯುತ್ತಿದ್ದರು. ಇಂತಹ ಕಠಿಣವಾದ ಪರಿಸ್ಥಿತಿಯಲ್ಲಿ ಮಹಾರಾಜರಿಗೆ ಅವರಲ್ಲಿದ್ದ ಸಂಪೂರ್ಣವಾದ ವಿಶ್ವಾಸವೇ ಅವರಿಗಿದ್ದ ಆಸರೆಯಾಗಿ ದ್ದಿತು. ಬ್ರಿಟಿಷ್ ಪೋಷಕರೂ, ಭಾರತೀಯ ಶಿಕ್ಷಕರೂ, ಮಹಾರಾಜರಿಗೆ ಉತ್ತಮವಾದ ಶಿಕ್ಷಣವನ್ನು ಕೊಟ್ಟಿದ್ದರು. ಅವರು ಸಾಧುಸ್ವಭಾವದವರು. ಸೌಜನ್ಯ, ಸಜ್ಜನಿಕೆಗಳು ಅವರ ನೈಜ ಪ್ರವೃತ್ತಿ. ಅವರಿಗೆ ರಾಜ್ಯಾಂಗ ಶಾಸನದ ಬಗೆಗೂ, ಆಡಳಿತವ್ಯವಸ್ಥೆಯ ಬಗೆಗೂ ಚೆನ್ನಾಗಿ ತಿಳಿವಳಿಕೆಯಿದ್ದಿತು. ರಾಜ್ಯಾಡ ಳಿತ ಸೂತ್ರಗಳನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಸಂಸ್ಥಾನದಲ್ಲೆಲ್ಲಾ ಅವರು ಸುದೀರ್ಘವಾಗಿ ಪ್ರವಾಸಮಾಡುವಂತೆ ಏರ್ಪಡಿಸಲಾಗಿದ್ದಿತು. ಹೀಗೆ ಅವರಿಗೆ ಜನಗಳ ಸ್ಥಿತಿಗತಿಗಳ ಪರಿಚಯವಾಗಿದ್ದಿತು, ಅವರೊಂದಿಗೆ ಸಂಪರ್ಕ ಬೆಳೆಯಲು ಅವಕಾಶವಾಗಿದ್ದಿತು. ಅವರ ನಡೆನುಡಿಗಳು, ಮೃದುಮಧುರವಾಗಿ

ಇದ್ದವು. ಅವರು ಎಂತಹ ವಿಷಯವನ್ನಾದರೂ ಬೇಗ ಗ್ರಹಿಸಬಲ್ಲವರಾಗಿದ್ದರು. ಘನತೆ, ಗಂಭೀರತೆ, ಉದಾತ್ತತೆ ಅವರಿಗೆ ಸಹಜವಾಗಿ ಬಂದಿದ್ದ ಗುಣಗಳು. ಇವೆಲ್ಲದರ ಜೊತೆಗೆ ಅವರಲ್ಲಿ ಗಾಢವಾದ ದೇಶಾಭಿಮಾನ ಮೂಡಿದ್ದಿತು. ಅವರು ಪಟ್ಟಾಭಿಷಿಕ್ತರಾದಾಗ ಮದ್ರಾಸಿನ ಗೌರ್ನರ್ ತಮ್ಮ ಭಾಷಣದಲ್ಲಿ ಅವರ ಬಗೆಗೆ ಹೇಳಿದಂತೆ ಅವರು ವಿವೇಕಿಗಳೂ, ಪ್ರಜಾನುಕೂಲಿಗಳೂ, ಪ್ರಗತಿಪರರೂ ಆದ ದೊರೆಗಳಾಗುವರೆಂಬ ಎಲ್ಲ ಲಕ್ಷಣಗಳೂ ಅವರಲ್ಲಿ ಕಂಡುಬರುತ್ತಿದ್ದುವು.

ಧಾತುಈಶ್ವರ ಕ್ಷಾಮದಿಂದ ಉಂಟಾದ ಆಘಾತದಿಂದ ಸಂಸ್ಥಾನವು ಇನ್ನೂ ಚೇತರಿಸಿಕೊಂಡಿರಲಿಲ್ಲ. ಕ್ಷಾಮಕಾಲದಲ್ಲಿ ಜನರಿಗೆ ಅನ್ನವಸತಿಗಳನ್ನು ಕಲ್ಪಿಸುವ ಉದ್ದೇಶದಿಂದ ಭಾರತಸರ್ಕಾರದಿಂದ ತೆಗೆದುಕೊಂಡ 80 ಲಕ್ಷ ರೂಪಾಯಿಗಳ ಸಾಲ ಹಾಗೆಯೇ ಉಳಿದಿದ್ದಿತು. ರಾಜ್ಯದ ಆರ್ಥಿಕ ಸ್ಥಿತಿಯು ಹೀಗೆ ಅಸ್ತವ್ಯಸ್ತವಾಗಿದ್ದಾಗ ಹೊಸ ತೆರಿಗೆಗಳನ್ನು ಹಾಕುವ ಸಂಭವವೇ ಇರಲಿಲ್ಲ. 1874–75ರಲ್ಲಿ ಸಂಸ್ಥಾನದ ಆದಾಯವು 109 ಲಕ್ಷಗಳಿದ್ದುದು 1880–81ರಲ್ಲಿ 101 ಲಕ್ಷಗಳಿಗೆ ಇಳಿದಿದ್ದಿತು. ಭಾರತ ಸರ್ಕಾರದಿಂದ ಮಾಡಿದ 80 ಲಕ್ಷ ರೂಪಾಯಿಗಳ ಸಾಲಕ್ಕೆ ವರ್ಷಕ್ಕೆ 4 ಲಕ್ಷ ರೂಪಾಯಿಗಳ ಬಡ್ಡಿಯನ್ನು ಕಟ್ಟಬೇಕಾಗಿದ್ದಿತು. ರಂಗಾಚಾರ್ಲುರವರು ಭಾರತ ಸರ್ಕಾರವನ್ನು ಬಡ್ಡಿಯ ದರವನ್ನು ಶೇಕಡ 5 ರಿಂದ ಶೇಕಡ 4ಕ್ಕೆ ಇಳಿಸುವುದಕ್ಕೆ ಒಪ್ಪಿಸಿದರು. ಅಲ್ಲದೇ ಆ ಸಾಲವನ್ನು ವರ್ಷಕ್ಕೆ 4 ಲಕ್ಷ ರೂ. ಗಳಂತೆ 41 ಕಂತುಗಳಲ್ಲಿ ಮೈಸೂರು ಸರ್ಕಾರ ತೀರಿಸುವುದಕ್ಕೆ ಭಾರತ ಸರ್ಕಾರವನ್ನು ಒಡಂಬಡಿಸಿದರು. ಭಾರತ ಸರ್ಕಾರದೊಂದಿಗೆ ಈ ವಿಷಯದಲ್ಲಿ ನಡೆಸಿದ ಪತ್ರವ್ಯವಹಾರದಲ್ಲಿ ರಂಗಾಚಾರ್ಲುರವರು ಸಂಸ್ಥಾನದ ಆರ್ಥಿಕ ದುಸ್ಥಿತಿಯನು ಪ್ರಸ್ತಾಪಿಸಿದರಲ್ಲದೇ ಬ್ರಿಟಿಷ್ ಆಡಳಿತಗಾರರು ಧಾತು ಈಶ್ವರ ಕ್ಷಾಮದ ಕಾಲದಲ್ಲಿ ಅನಾವಶ್ಯಕವಾಗಿಯೂ, ಮಿತಿಮೀರಿಯೂ ಖರ್ಚುಮಾಡಿದರೆಂದು ಧೈರ್ಯವಾಗಿ ಪ್ರತಿಪಾದಿಸಿದರು. ಬ್ರಿಟಿಷ್ ಆಡಳಿತದ ಕೊನೆಯ ದಿನಗಳಲ್ಲಿ ರಂಗಾಚಾರ್ಲುರವರು ಸರ್ಕಾರದ ಖರ್ಚನ್ನು ಕಡಿಮೆಮಾಡಲು ಕ್ರಮುಗಳನ್ನು ಕೈಗೊಂಡಿದ್ದರು. ಅವರು ದಿವಾನರಾದ ಮೇಲೆ ಆ ಕಾರ್ಯವನ್ನು ಮುಂದುವರಿಸಿದರು. ವಾಸ್ತವವಾಗಿ ಮಹಾರಾಜರ ಸರ್ಕಾರವು ಕೈಗೊಂಡ ಮೊದಲ ಕ್ರಮುವೇ ಸರ್ಕಾರದ ನಾನಾ ಇಲಾಖೆಗಳಲ್ಲಿ ಮಿತವ್ಯಯವನ್ನು ಕಲ್ಪಿಸುವುದಾಗಿದ್ದಿತು.

ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳನ್ನೂ, 9 ತಾಲ್ಲೂಕುಗಳನ್ನೂ ರದ್ದು ಮಾಡಲಾಯಿತು. 4 ಮುನ್ಸಿಫ್ ನ್ಯಾಯಾಲಯಗಳನ್ನೂ ಅದಕ್ಕಿಂತ ಮೇಲಿನ 3 ನ್ಯಾಯಾಲಯಗಳನ್ನೂ ತೆಗೆದುಹಾಕಲಾಯಿತು. ರಾಜ್ಯದಲ್ಲಿದ್ದ ಸೆರೆಮನೆಗಳನ್ನು 9 ರಿಂದ 3 ಕ್ಕೆ ಇಳಿಸಲಾಯಿತು. ಸಿಲ್ಲಾದಾರ್ ಪಡೆಗಳನ್ನು 3 ರಿಂದ 2ಕ್ಕೆ ಇಳಿಸಲಾಯಿತು. ಕೆಲವು ಜಿಲ್ಲೆಗಳ ಮತ್ತು ತಾಲ್ಲೂಕುಗಳ ಸರಹದ್ದುಗಳನ್ನು ಮಾರ್ಪಡಿಸಲಾಯಿತು. ಕೆಲವು ಪ್ರವಾಸಿ ಮಂದಿರಗಳ ಸಿಬ್ಬಂದಿವರ್ಗವನ್ನು ವಜಾ ಮಾಡಲಾಯಿತು. ಬ್ರಿಟಿಷ್ ಆಡಳಿತದ ಕೊನೆಯ ದಿನಗಳಲ್ಲಿ ರಾಜ್ಯದಲ್ಲಿ ವ್ಯಯವನ್ನು ಎರಡೂವರೆ ಲಕ್ಷ ರೂಪಾಯಿಗಳಷ್ಟು ಕಡಿಮೆ ಮಾಡಲಾಗಿದ್ದಿತು. ಮೇಲೆ ಹೇಳಿದ ಕ್ರಮಗಳಿಂದ 2 ಲಕ್ಷ ರೂಪಾಯಿಗಳಷ್ಟು ವಾರ್ಷಿಕ ಖರ್ಚನ್ನು ಕಡಿಮೆಮಾಡಲಾಯಿತು.

ಅರಣ್ಯ ಇಲಾಖೆಯಿಂದ ಬರುತ್ತಿದ್ದ ಆದಾಯ ಬಹಳ ಕಡಿಮೆಯಾಗಿದ್ದಿತು. ಆ ಇಲಾಖೆಯ ವ್ಯವಸ್ಥೆ ಸರಿಯಾಗಿರಲಿಲ್ಲ. ರಾಜ್ಯದಲ್ಲಿದ್ದ ಅರಣ್ಯಗಳ ವಿಸ್ತಾರವನ್ನೂ, ಅವುಗಳಲ್ಲಿ ದೊರಕುತ್ತಿದ್ದ ಬಗೆ ಬಗೆಯ ವಸ್ತುಗಳನ್ನೂ ಗಣನೆಗೆ ತೆಗೆದುಕೊಂಡಲ್ಲಿ ಅವುಗಳಿಂದ ಆಗುತ್ತಿದ್ದ ಉತ್ಪತ್ತಿ ಬಹಳ ಕಡಿಮೆಯಾಗಿದ್ದಿತು. ಸಂಸ್ಥಾನದ ಕಾಡುಗಳಲ್ಲಿ ಬೆಳೆಯುತ್ತಿದ್ದ ಗಂಧದ ಮರಗಳನ್ನು ಬಹುಮಟ್ಟಿಗೆ ಅರಮನೆಯಲ್ಲಿ ಉಪಯೋಗಮಾಡಲಾಗುತ್ತಿದ್ದಿತು. ಇಷ್ಟು ಬೆಲೆ ಬಾಳುವ ಮರಗಳನ್ನು ಅರಮನೆಯ ಉಪಯೋಗಕ್ಕೆಂದು ವ್ಯರ್ಥಮಾಡಲಾಗುತ್ತಿದ್ದುದನ್ನು ನಿಲ್ಲಿಸಲಾಯಿತು. ಈ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಿ ಅದರ ಆದಾಯವನ್ನು ಹೆಚ್ಚಿಸಲಾಯಿತು.

ಸಂಸ್ಥಾನದಲ್ಲಿ ವಾಣಿಜ್ಯ, ಉದ್ಯೋಗಗಳ ಬೆಳವಣಿಗೆಯಾಗಬೇಕಾದರೆ, ಪ್ರಜೆಗಳ ಆರ್ಥಿಕ ಅಭ್ಯುದಯವಾಗಬೇಕಾದರೆ ಸಂಚಾರ ಮತ್ತು ಸಾರಿಗೆ ವ್ಯವಸ್ಥೆ ಉತ್ತಮಗೊಳ್ಳಬೇಕು ಎಂಬುದು ರಂಗಾಚಾರ್ಲುರವರ ಅಭಿಪ್ರಾಯವಾಗಿದ್ದಿತು. ಕ್ಷಾಮದ ಕಾಲದಲ್ಲಿ ಯಾವ ಪ್ರದೇಶಗಳಿಗೆ ಆಹಾರದ ಸರಬರಾಜು ತುಂಬಾ ಅಗತ್ಯವಾಗಿದ್ದಿತೋ ಅಲ್ಲಿಗೆ ಅದನ್ನು ಕಳುಹಿಸುವುದಕ್ಕೆ ಸರಿಯಾದ ಮಾರ್ಗಗಳಿಲ್ಲದೆ ಆದ ಕಷ್ಟನಷ್ಟಗಳ ನೆನಪು ಇನ್ನೂ ಮಾಸಿರಲಿಲ್ಲ. ಮೈಸೂರಿನಲ್ಲಿ ಒಳ್ಳೆಯ ವ್ಯವಸಾಯ ಯೋಗ್ಯವಾದ ಜಮೀನು ಯಥೇಚ್ಛವಾಗಿದ್ದಿತು. ಬೆಳೆ ಬೆಳೆಯಲು ಅಗತ್ಯವಾದ

ಕೆರೆಕಟ್ಟೆಗಳ ಅನುಕೂಲವೂ ಚೆನ್ನಾಗಿದ್ದಿತು. ಆದರೆ ಧಾತುಈಶ್ವರ ಕ್ಷಾಮಕ್ಕೆ ರೈತಾಪಿವರ್ಗದಲ್ಲಿ ಬಹುಮಂದಿ ಆಹುತಿಯಾಗಿದ್ದರು. ಇದರಿಂದ ವ್ಯವಸಾಯ ಯೋಗ್ಯವಾದ ಭೂಮಿ ಇದ್ದರೂ ವ್ಯವಸಾಯ ಮಾಡುವವರು ಇಲ್ಲದೇ ಬೇಸಾಯ ಕ್ಷೀಣಸ್ಥಿತಿಗೆ ಬಂದಿದ್ದಿತು. ಆದ್ದರಿಂದ ಯಾವ ಪ್ರದೇಶಗಳಲ್ಲಿ ಹೀಗೆ ಬೇಸಾಯ ಕ್ಷೀಣಸ್ಥಿತಿಗೆ ಬಂದಿದ್ದಿತೋ ಅಲ್ಲಿಗೆ ಸಂಸ್ಥಾನದ ಇತರ ಭಾಗಗಳಿಂದ, ಅಗತ್ಯವಾದಲ್ಲಿ ಹೊರಗಿನಿಂದ ಕೂಡ ರೈತವರ್ಗ ಬಂದು ಮತ್ತೆ ವ್ಯವಸಾಯವನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು ಅಗತ್ಯವಾಗಿದ್ದಿತು. ಜನಗಳು ಸಂಸ್ಥಾನಾದ್ಯಂತ ಸುಲಭ ಸಂಚಾರ ಮಾಡುವಂತಾಗಲೂ, ವಾಣಿಜ್ಯೋದ್ಯಮಗಳ ಪ್ರಸಾರಕ್ಕಾಗಿಯೂ, ರಸ್ತೆಗಳನ್ನೂ, ರೈಲುಮಾರ್ಗಗಳನ್ನೂ ನಿರ್ಮಿಸುವುದು ಅಗತ್ಯವಾಗಿದ್ದಿತು. ರಂಗಾ ಚಾರ್ಲುರವರು ವಿವಿಧ ಇಲಾಖೆಗಳಲ್ಲಿ ಖರ್ಚನ್ನು ಕಡಿಮೆಮಾಡಿ ಉಳಿಸಿದ ಹಣ ವನ್ನು ಮೈಸೂರು–ಬೆಂಗಳೂರು ರೈಲ್ವೆ ಮಾರ್ಗದ ಕೆಲಸವನ್ನು ಪೂರೈಸಲು ಉಪ ಯೋಗಿಸಿದರು. ಅವರು ಶೇಕಡ 5 ರ ಬಡ್ಡಿಯ ಮೇಲೆ 20 ಲಕ್ಷ ರೂಪಾಯಿಗಳ ಸಾಲವನ್ನು ಎತ್ತಿದರು. ಈ ಹಣವನ್ನು ಬೆಂಗಳೂರು-ತಿಪಟೂರು ರೈಲ್ವೆ ಮಾರ್ಗ ವನ್ನು ನಿರ್ಮಿಸಲು ಉಪಯೋಗಿಸಿಕೊಂಡರು. ಅವರು 1881ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸಾರಿಗೆ ವ್ಯವಸ್ಥೆಯ ಬೆಳೆವಣಿಗೆಯ ಬಗೆಗೂ, ಆರ್ಥಿಕೋನ್ನತಿಯ ಬಗೆಗೂ, ರಾಜ್ಯದಲ್ಲಿ ಉದ್ಯಮದಂಧೆಗಳ ಅಭ್ಯುದಯದ ಬಗೆಗೂ ತಮ್ಮ ವಿಚಾರಗಳನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಅವರು ಈ ವಿಷಯಗಳನ್ನು ಕುರಿತು ಹೀಗೆ ಹೇಳಿದ್ದಾರೆ.

“ಆಡಳಿತದ ನಿತ್ಯಗಟ್ಟಲೆಯ ವ್ಯವಹಾರಗಳನ್ನು ಮಾತ್ರ ನಾವು ಗಮನಿಸ ತಕ್ಕದ್ದಲ್ಲ. ರಾಜ್ಯದ ಅಭ್ಯುದಯಕ್ಕೆ ಅಗತ್ಯವಾದ ಬಗೆಬಗೆಯ ಉದ್ಯಮಗಳ ಅಭಿವೃದ್ಧಿಯನ್ನು ಕುರಿತೂ ನಾವು ಆಲೋಚಿಸತಕ್ಕದ್ದು. ಮಹಾರಾಜರ ಸರ್ಕಾರವು ಈ ವಿಷಯಗಳ ಬಗೆಗೆ ಬರಬಹುದಾದ ಸೂಚನೆಗಳನ್ನು ಯಾವಾಗಲೂ ಲಕ್ಷ್ಯ ಕೊಟ್ಟು ಪರಿಶೀಲಿಸುವುದು. ಇದಕ್ಕಾಗಿ ಒಬ್ಬ ವಿಶೇಷ ಅಧಿಕಾರಿಯನ್ನು ನಿಯಮಿಸು ವುದರಿಂದ ಹೆಚ್ಚಿಗೆ ಉಪಯೋಗವಾಗುವುದಿಲ್ಲ. ಏತಕ್ಕೆಂದರೆ ಒಬ್ಬ ವ್ಯಕ್ತಿಯ ಅನುಭವ ಮತ್ತು ಜ್ಞಾನದಿಂದ ಸಾಧಿಸಬಹುದಾದುದು ಅಲ್ಪವಾದುದು. ಮಹಾ ರಾಜರು ಈ ವಿಷಯದಲ್ಲಿ ಆಸಕ್ತಿವಹಿಸಬಹುದಾದ ಖಾಸಗಿ ವ್ಯಕ್ತಿಗಳ ದೊಡ್ಡ ಸಂಘವನ್ನು ಸ್ಥಾಪಿಸಬೇಕು ಎಂದು ಅಭಿಪ್ರಾಯವುಳ್ಳವರಾಗಿದ್ದಾರೆ. ಅಂತಹ

ಸಂಘವು ಸ್ಥಾಪಿತವಾದ ಮೇಲೆ ಅದು ರಾಜ್ಯದಲ್ಲಿ ಉದ್ಯಮಗಳನ್ನು ಪ್ರಾರಂಭಿಸಲು ಕ್ರಮಗಳನ್ನು ಕೈಗೊಂಡಾಗ ಅದಕ್ಕೆ ಸಹಾಯವನ್ನು ಕೊಡುವುದು ತನ್ನ ಕರ್ತವ್ಯ ವೆಂದು ಮಹಾರಾಜರ ಸರ್ಕಾರವು ಭಾವಿಸುತ್ತದೆ."

"ರೈಲ್ವೆ ಮಾರ್ಗಗಳನ್ನು ನಿರ್ಮಿಸಿ ರಾಜ್ಯದ ಎಲ್ಲೆಡೆ ಸಂಪರ್ಕವುಂಟಾಗು ವಂತೆ ಏರ್ಪಡಿಸುವುದು, ರಾಜ್ಯದ ಸಾಧನ ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳಬೇಕಾದ ಕ್ರಮವೆಂದು ಮಹಾರಾಜರ ಸರ್ಕಾರವು ಭಾವಿಸುತ್ತದೆ. ಪ್ರಾಂತ್ಯದಲ್ಲಿ ಮೊದಲ ರೈಲ್ವೆ ಮಾರ್ಗವಾದ ಬೆಂಗಳೂರು–ಮೈಸೂರು ಮಾರ್ಗವನ್ನು ಇಷ್ಟರಲ್ಲಿಯೇ ಪೂರೈಸಲಾಗುವುದು."

"ಪ್ರಾಂತ್ಯಕ್ಕೆ ಇದಕ್ಕಿಂತ ತುರ್ತಾಗಿ ಬೇಕಾದ ಇತರ ರೈಲ್ವೆಮಾರ್ಗಗಳು ಇವೆ. ಬೆಂಗಳೂರಿನಿಂದ ತುಮಕೂರಿಗೂ ಅಲ್ಲಿಂದ ತಿಪಟೂರು ಮತ್ತು ತರೀಕೆರೆ ಗಳಿಗೂ ಹೋಗುವ, 150 ಮೈಲಿಗಳಷ್ಟು ದೂರ ಸಾಗುವ ಕೇಂದ್ರ ರೈಲ್ವೆಮಾರ್ಗವು ಸಂಸ್ಥಾನದ ಬಹು ಭಾಗದ ಪ್ರದೇಶದ ಆವಶ್ಯಕತೆಯನ್ನು ಪೂರೈಸುವುದಕ್ಕೆ ಬೆಂಗಳೂರು–ಮೈಸೂರು ರೈಲ್ವೆ ಮಾರ್ಗಕ್ಕಿಂತ ಹೆಚ್ಚು ಅಗತ್ಯವಾಗಿದೆ. ಕಾಫಿ ಮತ್ತು ಅಡಕೆಗಳನ್ನು ಬೆಳೆಯುವ ಹಾಸನ, ಕಡೂರು ಮತ್ತು ಶಿವಮೊಗ್ಗ ಜಿಲ್ಲೆ ಗಳಿಗೆ ಈ ಮಾರ್ಗವು ಸಂಪರ್ಕವನ್ನು ಕಲ್ಪಿಸುವುದಲ್ಲದೇ ಪ್ರಾಂತ್ಯದಲ್ಲಿರುವ ಎಲ್ಲ ದೂರ ಪ್ರದೇಶಗಳೂ ಬೆಂಗಳೂರಿನೊಂದಿಗೆ ಹೆಚ್ಚು ಸುಲಭವಾಗಿ ಸಂಪರ್ಕವನ್ನು ಹೊಂದುವಂತೆ ಮಾಡುವುದು. ಮುಂದೆ ಕ್ಷಾಮ ಉಂಟಾದಲ್ಲಿ ಅದರ ಉರುಬಿನಿಂದ ತಪ್ಪಿಸಿಕೊಳ್ಳಲು ಈ ಮಾರ್ಗ ಈ ಪ್ರಾಂತ್ಯಕ್ಕೆ ಅತ್ಯಂತ ಆವಶ್ಯಕವೆಂದು ಭಾವಿಸಬಹುದು."

"ಭಾರ ಹೊರುವ ರಾಸುಗಳು ಕಡಿಮೆಯಾದದ್ದರಿಂದ ಈ ದೂರದ ಜಿಲ್ಲೆಗಳ ಒಳಗಿನಿಂದ ಮಿಕ್ಕ ಪ್ರದೇಶಗಳಿಗೂ, ಹೊರಗಿನ ಪ್ರದೇಶಗಳಿಂದ ಈ ಜಿಲ್ಲೆಗಳ ಒಳಗೂ ಹೊರೆ ಬಂಡಿಗಳಲ್ಲಿ ಪ್ರಯಾಣಮಾಡುವುದು ತುಂಬಾ ಖರ್ಚಿನ ಕೆಲಸ ವಾಗಿದ್ದಿತು. ಅಲ್ಲದೇ ಕ್ಷಾಮಡಾಮರಗಳ ಕಾಲದಲ್ಲಿ ಆಹಾರವನ್ನು ಸಾಗಿಸು ವುದಕ್ಕೆ ಈ ಬಂಡಿಗಳು ಉಪಯೋಗಕರವಾಗುವುದಿಲ್ಲ. ಈ ರೈಲುಮಾರ್ಗ ಲಾಭ ದಾಯಕವಾಗಿರುವುದಲ್ಲದೇ ಕಚ್ಚಾಮಾಲುಗಳನ್ನು ರಫ್ತುಮಾಡುವ ಜಿಲ್ಲೆಗಳ ಸಂಪ

ದಭಿವೃದ್ಧಿಗೂ, ಆಡಳಿತದಲ್ಲಿ ಮಿತವ್ಯಯವನ್ನೂ, ದಕ್ಷತೆಯನ್ನೂ ಉಂಟುಮಾಡು ವುದಕ್ಕೂ ಸಹಾಯಕವಾಗುತ್ತದೆ. ಉದ್ಯಮಗಳ ಮತ್ತು ವ್ಯವಸಾಯದ ಅಭಿವೃದ್ಧಿ ಯಲ್ಲಿಯೂ, ರಾಜ್ಯದ ಸರ್ವತೋಮುಖವಾದ ಬೆಳವಣಿಗೆಯಲ್ಲಿಯೂ ಅದರ ಪಾತ್ರ ಅತ್ಯಮೂಲ್ಯವಾಗಿರುತ್ತದೆ. ಬಳ್ಳಾರಿ, ಗೋವ ಮತ್ತು ದಕ್ಷಿಣ ಮರಾಟಾ ದೇಶಗಳ ಮೂಲಕ ಹಾದು, ಹೊಸ ಹುಬ್ಬಳ್ಳಿಯಲ್ಲಿ ಕೇಂದ್ರೀಕೃತವಾಗುವ ರೈಲುಮಾರ್ಗಗಳು ಪೂರ್ಣವಾದ ಮೇಲೆ ಬೆಂಗಳೂರು–ತರೀಕೆರೆ ಮಾರ್ಗದೊಂದಿಗೆ ಸಂಪರ್ಕ ಹೊಂದು ವಂತೆ ಏರ್ಪಾಡು ಮಾಡಿದರೆ ತುಂಬಾ ಅನುಕೂಲವಾಗುವುದು. ತರೀಕೆರೆಯಿಂದ ಶಿವಮೊಗ್ಗಾ ಮೂಲಕ ಈ ಮಾರ್ಗದ ಮೇಲೆ ಹೋದರೆ ರಾಜ್ಯದ ಗಡಿಗೆ 50 ಮೈಲಿ ಗಳಿಗಿಂತ ಸ್ವಲ್ಪ ದೂರ ಇದೆ. ಬೆಂಗಳೂರಿನಿಂದ ಇಲ್ಲಿಯವರೆಗೆ ಒಟ್ಟು 200 ಮೈಲಿ ದೂರ ಇದೆ. 80 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಖರ್ಚಿಗೆ ಈ ಮಾರ್ಗವನ್ನು ಪೂರ್ಣಗೊಳಿಸಬಹುದಲ್ಲದೇ ಅವಶ್ಯಕವಾದ ಉಗಿಬಂಡಿ, ಅದಕ್ಕೆ ಲಗತ್ತಿಸುವ ಪ್ರಯಾಣಿಕರ ಗಾಡಿ ಮುಂತಾದವುಗಳನ್ನು ಕೊಂಡುಕೊಳ್ಳಬಹುದು."

"ಇತರ ಉಪಯುಕ್ತವಾದ ರೈಲ್ವೆ ಮಾರ್ಗಗಳೆಂದರೆ—ಮೈಸೂರು ವೈನಾಡಿನ ಮಾರ್ಗ ಮತ್ತು ಮೈಸೂರು ಕೊಡಗು ಗಡಿಯಿಂದ ಮುಂದೆ ಹೋಗುವ ಮಾರ್ಗ. ಸಂಸ್ಥಾನದೊಳಗೆ ಈ ಮಾರ್ಗಗಳ ಭಾಗ ನಿರ್ಮಿಸಬೇಕಾದದ್ದು ಒಂದೊಂದೂ 50 ಮೈಲಿಗಳಾಗುತ್ತದೆ. ಪ್ರಾಂತ್ಯದ ಅಷ್ಟು ಸಂಪತ್ಸಮೃದ್ಧವಲ್ಲದ ಪ್ರದೇಶ ಗಳಲ್ಲಿ ಈ ಎರಡು ಮಾರ್ಗಗಳೂ ಹಾಯುತ್ತವೆ. ಕಾಫಿ ಬೆಳೆಯುವ ಮುಖ್ಯ ಜಿಲ್ಲೆ ಗಳಾದ ವೈನಾಡು ಮತ್ತು ಕೊಡಗುಗಳಿಗೂ ಮೈಸೂರು ಸಂಸ್ಥಾನಕ್ಕೂ ರೈಲ್ವೆ ಸಂಪರ್ಕವನ್ನು ಏರ್ಪಡಿಸುವುದಕ್ಕೆ ಈ ಮಾರ್ಗಗಳು ಅಗತ್ಯವಾಗಿವೆ. ಈ ಜಿಲ್ಲೆಗಳು ಆಹಾರ ಪದಾರ್ಥಗಳ ಸರಬರಾಜಿಗೂ, ಕೂಲಿಗಾರರಿಗೂ ಮೈಸೂರನ್ನು ಅವಲಂಬಿ ಸಿವೆ. ಈಗಾಗಲೇ ಪೂರ್ಣಗೊಳಿಸಿರುವ ಮೈಸೂರು ಬೆಂಗಳೂರು ರೈಲುಮಾರ್ಗವೂ ಅಲ್ಲಿಂದ ಮದ್ರಾಸಿಗೆ ಮುಂದುವರಿಯುವ ಮಾರ್ಗವೂ, ಕಾಫಿ ಮತ್ತು ಚಿನ್ನ ದೊರಕುವ ಈ ಜಿಲ್ಲೆಗಳಿಂದ ಹೆಚ್ಚು ಸಂಖ್ಯೆಯಲ್ಲಿ ಜನಗಳನ್ನೂ ಮತ್ತು ಹೆಚ್ಚು ಪ್ರಮಾಣದಲ್ಲಿ ಪದಾರ್ಥಗಳ ಸಾಗಾಣಿಕೆಯನ್ನೂ ಆಕರ್ಷಿಸುವುವು. ವೈನಾಡು ಮೂಲಕ ಬೈಪೂರಿಗೋ, ದಕ್ಷಿಣ ಕೊಡಗಿನ ಮೂಲಕ ತಲ್ಲಿಚೇರಿಗೋ ಈ ಮಾರ್ಗ ಗಳ ಪೈಕಿ ಯಾವುದಾದರೂ ಒಂದನ್ನು ಪಶ್ಚಿಮ ತೀರದವರೆಗೆ ವಿಸ್ತರಿಸಿದರೆ ಮೈಸೂರಿಗೂ ಪಶ್ಚಿಮ ತೀರ ಪ್ರದೇಶಕ್ಕೂ ಬೊಂಬಾಯಿಗೂ ಇರುವ ವಿಪುಲವಾದ

ವ್ಯಾಪಾರಕ್ಕೆ ಸಹಾಯಕವಾಗುವುದು. ಕಲ್ಕತ್ತಾದಿಂದ ಬೈಪೂರು, ಕಲ್ಲೀಕೋಟೆ ಮತ್ತು ತಲ್ಲಿಚೇರಿಗಳಿಗೆ ಹಡಗುಗಳಲ್ಲಿ ಅಗ್ಗವಾಗಿ ಬಂದ ಅಕ್ಕಿ ಮತ್ತು ಇತರ ಧಾನ್ಯಗಳನ್ನು ಮೈಸೂರು ರಾಜ್ಯಕ್ಕೆ ತರುವುದಕ್ಕೆ ಧಾತುಈಶ್ವರ ಕ್ಷಾಮದ ಕಾಲದಲ್ಲಿ ಕಷ್ಟವಾದಾಗ ಪಶ್ಚಿಮ ತೀರದೊಂದಿಗೆ ಸಂಪರ್ಕವೇರ್ಪಡಿಸುವ ಇಂತಹ ಮಾರ್ಗಗಳ ಆವಶ್ಯಕತೆ ಎಷ್ಟೆಂಬುದು ಗೊತ್ತಾಯಿತು."

"ಸುಮಾರು 300 ಮೈಲಿಗಳ ಉದ್ದದ ಈ ಮೂರು ರೈಲ್ವೆ ಮಾರ್ಗಗಳಿಗೆ 120 ಲಕ್ಷ ರೂಪಾಯಿಗಳು ಖರ್ಚಾಗಬಹುದು. ರಾಜ್ಯದ ಪ್ರಸಕ್ತ ಆದಾಯವನ್ನು ಉಪಯೋಗಿಸಿಕೊಂಡು ಇಷ್ಟು ಹೆಚ್ಚಿನ ವೆಚ್ಚದ ಕಾರ್ಯಗಳನ್ನು ಕೈಗೊಳ್ಳಲಾಗುವುದಿಲ್ಲ."

"ದುರದೃಷ್ಟವಶಾತ್ ಇಂಗ್ಲಿಷ್ ಕೈಗಾರಿಕೋದ್ಯಮಿಗಳನ್ನು ಈ ದೇಶದ ಆರ್ಥಿಕ ಕ್ಷೇತ್ರದಿಂದ ದೂರವಿರಿಸಲಾಗಿದ್ದಿತಷ್ಟೆ. ಅವರು ಈಗ ಉದ್ಯಮಸಂಘಗಳನ್ನು ಭಾರತದಲ್ಲಿ ಪ್ರಾರಂಭಿಸಲು ಅನುಕೂಲ ಮನೋಭಾವವುಳ್ಳವರಾಗಿರುವರೆಂದು ತೋರುತ್ತದೆ. ಈ ರೈಲುಮಾರ್ಗಗಳ ನಿರ್ಮಾಣವಾದ ಮೊದಲ ಕೆಲವು ವರ್ಷಗಳಲ್ಲಿ ಹಾಕಿದ ಬಂಡವಾಳದ ಮೇಲೆ ಅಷ್ಟೇನೂ ಹೆಚ್ಚಲ್ಲದ, ಶೇಕಡ 4 ರಷ್ಟು ಬಡ್ಡಿಯನ್ನು ಕೊಡುವ ಖಾತರಿಯ ಮೇಲೆ ಇಂಗ್ಲಿಷ್ ಕಂಪನಿಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಶೀಘ್ರದಲ್ಲಿಯೇ ಈ ರೈಲುಮಾರ್ಗಗಳು ಹೂಡಿದ ಬಂಡವಾಳದ ಮೇಲೆ ಬಡ್ಡಿಯನ್ನು ಗಳಿಸುವುದಕ್ಕೆ ಸಾಕಾದಷ್ಟು ಆದಾಯವನ್ನು ಹೊಂದುವುವೆಂದೂ, ಸ್ವಾವಲಂಬಿಯಾಗುವುವೆಂದೂ ಭರವಸೆ ಇದೆ. ಹೀಗೆ ಪ್ರಾಂತ್ಯದ ಅಭ್ಯುದಯಕ್ಕೆ ಅಗತ್ಯವಾದ ಈ ಮುಖ್ಯವಾದ ಕೆಲಸಗಳನ್ನು ರಾಜ್ಯಕ್ಕೆ ಯಾವ ಖರ್ಚೂ ಆಗದಂತೆ ಪೂರೈಸಿಕೊಂಡಂತಾಗುತ್ತದೆ."

"ಇಂಗ್ಲೆಂಡಿನಲ್ಲಿರುವ ಬಂಡವಾಳಗಾರರು ಆಸಕ್ತರಾಗಿರುವ ಇನ್ನೊಂದು ಉದ್ಯಮವೆಂದರೆ ರಾಜ್ಯದಲ್ಲಿ ದೊರಕುವ ಚಿನ್ನದ ಅದುರಿನಿಂದ ಚಿನ್ನವನ್ನು ಬೇರ್ಪಡಿಸಿ ಅದನ್ನು ತಯಾರಿಸುವುದು. ಚಿನ್ನದ ಅದುರು ಈ ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುವುದೆಂಬ ಭರವಸೆಯಿದೆ. ಈ ಅದುರಿನಿಂದ ಚಿನ್ನವನ್ನು ತಯಾರಿಸುವ ಉದ್ಯಮವನ್ನು ಕೈಗೊಳ್ಳುವವರು ಲಾಭದಾಯಕವಾಗಿ ಅದನ್ನು ನಡೆಸಬಲ್ಲವರಾದರೆ ರಾಜ್ಯದ ಭವಿಷ್ಯವನ್ನೇ ಬದಲಾಯಿಸಬಲ್ಲರು."

"ಹಿಂದೆ ಸೂಚಿಸಿದ ಸಂಘವು ಗಮನಕೊಡಬಹುದಾದ ಇತರ ಉದ್ಯಮಗಳನ್ನು ಈಗ ನಾನು ಸಂಕ್ಷೇಪವಾಗಿ ನಮೂದಿಸುತ್ತೇನೆ. ಉದ್ಯಮದಂಥೆಗಳನ್ನು ನಡೆಸುವವರೂ, ಕೈಕಸುಬುಗಾರರೂ ಕ್ಷಾಮದಿಂದ ನಾಶವಾಗಿ ಹೋಗಿದ್ದಾರೆಂಬ ವಿಷಯವನ್ನು ನಾನು ಆಗಲೇ ಪ್ರಸ್ತಾಪಿಸಿದ್ದೇನೆ. ವಿಶೇಷವಾದ ಕಲಾ ವಸ್ತುಗಳ, ಕುಶಲ ವಸ್ತುಗಳ ತಯಾರಿಕೆಗೆ ಕೈಕಸುಬುದಾರರ ದುಡಿಮೆಯೊಂದೇ ಸಾಕಾಗಬಹುದು. ಆದರೆ ಬಹು ಮಂದಿಯ ಆವಶ್ಯಕತೆಗಳನ್ನು ಪೂರೈಸಬೇಕಾದ ಉದ್ಯಮಗಳು ಈ ಕಾಲದಲ್ಲಿ ಹೊರ ದೇಶಗಳ ಸ್ಪರ್ಧೆಯನ್ನು ಎದುರಿಸಬೇಕಾದರೆ ಯಂತ್ರೋಪಕರಣಗಳು ಇಲ್ಲದೇ ಸಾಧ್ಯವಾಗದು."

"ಉಣ್ಣೆಗಾಗಿ ಕುರಿಗಳನ್ನು ಸಾಕುವುದು ಮತ್ತು ಉಣ್ಣೆಯ ಸಾಮಾನುಗಳನ್ನು ತಯಾರಿಸುವುದು ಈ ಪ್ರಾಂತ್ಯಕ್ಕೆ ವಿಶಿಷ್ಟವಾದ ಉದ್ಯಮವಾಗಿದೆ. ಯಂತ್ರೋಪಕರಣಗಳ ಉಪಯೋಗದಿಂದ ಈ ಉದ್ಯಮಕ್ಕೆ ಸಹಾಯವಾಗುವುದು."

"ಕಾಗದವನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯವನ್ನು ಈಚೆಗೆ ಪ್ರಸ್ತಾಪಿಸಲಾಗಿದೆ. ಈ ಸಂಘವು ಈ ವಿಷಯಗಳನ್ನು ತನ್ನ ಗಮನಕ್ಕೆ ತೆಗೆದುಕೊಳ್ಳಬಹುದು."

"ಕೊನೆಯದಾಗಿ, ದೇಶದ ಅಭ್ಯುದಯವನ್ನು ಸಾಧಿಸಬೇಕಾದರೆ ಅದರ ಜನ ತಮ್ಮ ದುಡಿಮೆಯಿಂದ ಉತ್ಪತ್ತಿ ಮಾಡುವ ಆಹಾರವು ಉಪಯೋಗಿಸಲ್ಪಡುವುದಕ್ಕಿಂತ ಹೆಚ್ಚಾಗಿದ್ದು, ಉಳಿತಾಯವಾಗುವಂತಿರಬೇಕು. ಎಲ್ಲಿಯವರೆಗೆ ರೈತರು ಬೆಳೆಯುವ ಆಹಾರವು ಅವರಿಗೆ ಮಾತ್ರ ಸಾಕಾಗುವಷ್ಟು ಇರುವದೋ ಅಲ್ಲಿಯವರೆಗೆ ಕ್ಷಾಮ ಅಥವಾ ಇತರ ವಿಪತ್ತು ಸಂಭವಿಸಿದಾಗ ಅವರು ಸಂಪೂರ್ಣವಾಗಿ ಉಡುಗಿಹೋಗುವರು. ದೇಶದ ವಿವಿಧೋದ್ಯಮಗಳಲ್ಲಿರುವ ಕೆಲಸಗಾರರ ಸಂಖ್ಯೆಯನ್ನು ಕಡಿಮೆ ಮಾಡಿ, ಯಂತ್ರೋಪಕರಣಗಳನ್ನೂ, ಬಂಡವಾಳವನ್ನೂ ತೊಡಗಿಸುವುದರಿಂದ ಮಾತ್ರವೇ ಈ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು. ನೀರಾವರಿ ಅನುಕೂಲವನ್ನು ಕಲ್ಪಿಸುವುದರಿಂದ ಈ ಉದ್ದೇಶವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದು. ಏಕೆಂದರೆ ನೀರಾವರಿ ಅನುಕೂಲ ಒದಗುವುದಕ್ಕಿಂತ ಮುಂಚೆ ಇದ್ದಷ್ಟು ಸಂಖ್ಯೆಯ ಜನರೇ ಆ ಅನುಕೂಲ ಒದಗಿದ ಮೇಲೆ ಮೊದಲಿಗಿಂತ ಹೆಚ್ಚಿನ ಬೆಳೆಯನ್ನು ತೆಗೆಯಬಹುದು. ಆದರೆ ತರೀಜಮೀನಿಗಿಂತ ಖುಷ್ಕಿ ಜಮೀನೇ ಬಹಳ ಹೆಚ್ಚಾಗಿದೆ. ಈ ಖುಷ್ಕಿ ಜಮೀನಿನಲ್ಲಿ ಬೆಳೆಯುವ ಬೆಳೆಗಳು

ರೈತ ಮತ್ತು ಅವನ ಸಂಸಾರದವರಿಗೆ ಅಗತ್ಯವಾದುದಕ್ಕಿಂತ ಹೆಚ್ಚಾಗಿರುವುದಿಲ್ಲ. ಉದ್ಯಮಗಳನ್ನು ನಡೆಸುವವರ, ಕೈಕಸಬುಗಾರರ ಪರಿಸ್ಥಿತಿ ಇದಕ್ಕಿಂತ ಕಠಿಣ ವಾದುದು. ಇಲ್ಲಿಯವರೆಗೆ ಹಣದ ಮೇಲಿನ ಬಡ್ಡಿ ಹೆಚ್ಚಾಗಿದ್ದುದರಿಂದಲೂ, ಕೂಲಿ ಕೆಲಸ ಮಾಡುವವರು ಬಹಳ ಕಡಿಮೆಯ ವೇತನಕ್ಕೆ ಸಿಕ್ಕುತ್ತಿದ್ದುದರಿಂದಲೂ ಹೆಚ್ಚು ಬೆಳೆ ಬಾಳುವ ಯಂತ್ರೋಪಕರಣಗಳನ್ನು ಬಳಸುವುದಕ್ಕೆ ಪರಿಸ್ಥಿತಿ ಅನು ಕೂಲವಾಗಿರಲಿಲ್ಲ. ಆದರೆ ಈಗ ಇಂಗ್ಲಿಷ್ ಬಂಡವಾಳವು ಭಾರತದೊಳಗೆ ಅನುಕೂಲ ವಾದ ಷರತ್ತುಗಳ ಮೇಲೆ ಬರುತ್ತಿರುವುದರಿಂದಲೂ, ಕೂಲಿಗಾರವರ್ಗವು ಈಚಿನ ಕ್ರಮದಿಂದ ಕ್ಷೀಣಿಸಿರುವುದರಿಂದಲೂ ಬಂಡವಾಳ ಮತ್ತು ಯಂತ್ರೋಪಕರಣ ಗಳನ್ನು ಉದ್ಯಮಗಳಲ್ಲಿ ಹೂಡಿ ಜನಗಳ ಜೀವನ ಮಟ್ಟವನ್ನು ಉತ್ತಮಗೊಳಿಸಲು ಪ್ರಸಕ್ತ ಕಾಲವು ವಿಶೇಷವಾಗಿ ಅನುಕೂಲವಾಗಿದೆ. ಈ ಪ್ರಾಂತ್ಯದಲ್ಲಿಯೂ, ಅಕ್ಕ ಪಕ್ಕದ ಬ್ರಿಟಿಷ್ ಪ್ರದೇಶಗಳಲ್ಲಿಯೂ ತುಂಬಾ ಒಳ್ಳೆಯ ಜಮೀನುಗಳು ಹೆಚ್ಚಿನ ಪ್ರಮಾಣದಲ್ಲಿ ಪಾಳುಬಿದ್ದಿವೆ. ಇದಕ್ಕೆ ಕಾರಣ ಕ್ರಮದಿಂದ ಜಮೀನು ರೂಢಿ ಸುವ ಕೆಲಸಗಾರರು ಕಡಿಮೆಯಾಗಿರುವುದು. ಉಗಿಯಿಂದ ನಡೆಯುವ ನೇಗಿಲು ಗಳನ್ನೂ, ಇತರ ಯಂತ್ರಗಳನ್ನೂ ಉಪಯೋಗಿಸಿಕೊಂಡು ಹೊರದೇಶಗಳಿಗೆ ರಫ್ತು ಮಾಡುವ ಪದಾರ್ಥಗಳನ್ನು ಬೆಳೆಯಲು ಈ ಜಮೀನುಗಳನ್ನು ಉಪಯೋಗಿಸು ವುದಕ್ಕೆ ಬಂಡವಾಳಗಾರರಿಗೆ ಒಳ್ಳೆಯ ಅವಕಾಶ ಪ್ರಾಪ್ತವಾಗಿದೆ."

"ಹೀಗೆ ವ್ಯವಸಾಯದಲ್ಲಿಯೂ, ಕೈಗಾರಿಕೋದ್ಯಮಗಳಲ್ಲಿಯೂ ಕ್ಷಿಪ್ರ ದಲ್ಲಿ ಪ್ರಗತಿಯನ್ನು ಸಾಧಿಸುವುದರಿಂದ ಆಹಾರ ಪದಾರ್ಥಗಳ ಮತ್ತು ಇತರ ಸಾಮಗ್ರಿಗಳ ಉತ್ಪನ್ನವು ಬೆಳೆಯುತ್ತಿರುವ ಜನ ಸಂಖ್ಯೆಯ ಅವಶ್ಯ ಕತೆಗಳಿಗಿಂತ ಹೆಚ್ಚಾಗುತ್ತದೆ. ಇದರಿಂದ ಕೆಲಸಗಾರರ ಸಂಬಳವೂ, ಸಮಾ ಜದಲ್ಲಿ ಅವರ ಸ್ಥಾನಮಾನಗಳೂ ಉತ್ತಮವಾಗುವುದಕ್ಕೆ ಅವಕಾಶವಾಗು ತ್ತದೆ. ಈಗಲಾದರೋ ಆಹಾರ ಮತ್ತು ಇತರ ಸಾಮಗ್ರಿಗಳ ಉತ್ಪತ್ತಿಗಿಂತ ಜನಸಂಖ್ಯೆಯ ಬೆಳೆವಣಿಗೆಯೇ ಹೆಚ್ಚಾಗಿದೆ. ಇದರ ಅನಿವಾರ್ಯ ಪರಿ ಣಾಮವೆಂದರೆ ಎಲ್ಲೆಲ್ಲೂ ಕಂಡುಬರುವ ಅಭಾವ ಮತ್ತು ದಾರಿದ್ರ್ಯ."

"ಸರ್ಕಾರಿ ಹುದ್ದೆಗೆ ಈ ದೇಶದಲ್ಲಿರುವ ಹೆಚ್ಚಿನ ಪ್ರಾಮುಖ್ಯತೆ ಯಿಂದಾಗಿ ದೇಶದ ಒಳಗೇ ಎಲ್ಲೆಲ್ಲೂ ಕಂಡುಬರುವ ಸಣ್ಣ ಮೊತ್ತದ ಬಂಡ

**ವಾಳವು ವ್ಯವಸಾಯಕ್ಕೂ, ಕೈಗಾರಿಕೆಗಳ ಬೆಳವಣಿಗೆಗೂ ವಿನಿಯೋಗ ವಾಗದೇ ಹೋಗಿದೆ. ಸರ್ಕಾರದ ಚಾಕರಿ ಅಥವಾ ಇತರ, ದೇಶದ ಆರ್ಥಿಕಾಭಿವೃದ್ಧಿಗೆ ಉಪಯೋಗಕರವಲ್ಲದ, ವೃತ್ತಿಗಳನ್ನು ಕೈಗೊಳ್ಳುವ ಬದಲು ಜನರು ತಮ್ಮ ಧನವನ್ನೂ, ಬುದ್ಧಿಶಕ್ತಿಯನ್ನೂ ಗೌರವಾಸ್ಪದವಾದ ಉದ್ಯಮದಂಥೆಗಳನ್ನು ನಡೆಸುವುದರಲ್ಲಿ ಉಪಯೋಗಿಸುವಂತೆ ಅವರನ್ನು ಪ್ರೋತ್ಸಾಹಿಸಬೇಕು." §**

"ಈಗ ಸರ್ಕಾರದ ಅಧಿಕಾರಿಗಳು ತಾವು ಉಳಿಸುವ ಹಣವನ್ನು ಬಹುಮಟ್ಟಿಗೆ ಭೂಮಿಯನ್ನು ಕೊಳ್ಳುವುದರಲ್ಲಿ ವಿನಿಯೋಗಿಸುವುದೇನೋ ನಿಜ. ಆದರೆ ಅದು ಆಸ್ತಿಯನ್ನು ಮಾಡಬೇಕೆಂಬ ಉದ್ದೇಶದಿಂದ ಮಾತ್ರ ಹೀಗೆ ವಿನಿಯೋಗವಾಗುವುದೇ ಹೊರತು ವ್ಯವಸಾಯವನ್ನು ಉತ್ತಮಪಡಿಸುವುದಕ್ಕಲ್ಲ."

"ಈ ಭಾಷಣವನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಪ್ರಸ್ತಾಪಿಸುವುದು ಅಗತ್ಯವಾಗಿದೆ. ಈಚೆಗೆ ಮಳೆ ಬರದೇ ಇದ್ದುದರಿಂದ ಸರ್ಕಾರಕ್ಕೂ, ಜನಕ್ಕೂ ಬಹಳ ಕಳವಳವಾಯಿತು. ಆದರೆ ಕೆಲವು ತಾಲ್ಲೂಕುಗಳ ಹೊರತಾಗಿ ಮಿಕ್ಕೆಡೆ ಭಯಕ್ಕೆ ಕಾರಣವಿಲ್ಲವೆಂದು ಕಂಡುಬಂದಿದೆ. ಹೀಗೆ ಆಗಾಗ ಮಳೆ ಬರದಿರುವುದು ಈ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಪರಿಸ್ಥಿತಿಯೇ ಆಗಿರುವುದರಿಂದ ಅದರಿಂದ ಉಂಟಾಗುವ ಘೋರವಾದ ಪರಿಣಾಮದ ವಿಷಯದಲ್ಲಿ ಸರ್ಕಾರಕ್ಕೆ ಯಾವಾಗಲೂ ಆತಂಕವಿರುತ್ತದೆ. ಸರ್ಕಾರ ಎಷ್ಟೇ ಧಾರಾಳವಾಗಿ ಖರ್ಚು ಮಾಡಿದರೂ ಜನಗಳ ಸಹಾಯವಿಲ್ಲದಿದ್ದರೆ ಸರ್ಕಾರ ಮಾಡಬಹುದಾದುದು ಎಷ್ಟು ಅಲ್ಪವೆಂಬುದು ಈಚಿನ ಕ್ಷಾಮದಿಂದ ವ್ಯಕ್ತವಾಗುತ್ತದೆ. ನೀರಾವರಿ ಕಾರ್ಯಕ್ಕೆ ಸರ್ಕಾರ ಖಂಡಿತವಾಗಿ ಎಲ್ಲಾ ಗಮನವನ್ನೂ ಕೊಡುವುದು. ಆದರೆ ನದಿಗಳಿಂದ ನೀರನ್ನು ಹೊಂದಲು ಕಟ್ಟಿದ ಕಾಲುವೆಗಳ ಹೊರತಾಗಿ ಇತರ ನೀರಾವರಿ ಯೋಜನೆಗಳಿಂದ ಮಳೆ ಬರದಿದ್ದಾಗ ಹೆಚ್ಚಿನ ಉಪಯೋಗವಾಗುವುದಿಲ್ಲ. ಈಗಾಗಲೇ ವಿವರಿಸಿದಂತೆ ಆಹಾರ ಪದಾರ್ಥಗಳ ಸಾಗಾಣಿಕೆಗೆ ಅನುಕೂಲ ಒದಗಿಸುವುದಕ್ಕಾಗಿ ಸಂಪೂರ್ಣವಾದ ರೈಲ್ವೆವ್ಯವಸ್ಥೆಯನ್ನು ಏರ್ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆ. ಯಾವ ತಾಲ್ಲೂಕುಗಳಲ್ಲಿ ಭೂಮಿಯ ಒಳಗೆ ಚಿಲುಮೆ

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಗಳಿವೆಯೋ ಅವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾವಿಗಳನ್ನು ತೋಡುವುದಕ್ಕೆ ರೈತರಿಗೆ ಹಣವನ್ನು ಮುಂಗಡವಾಗಿ ಕೊಡಲು ಸರ್ಕಾರ ಉದ್ದೇಶಿಸಿದೆ. ಈ ರೀತಿ ಹಣವನ್ನು ಕೊಟ್ಟಾಗ ಅದು ದುರುಪಯೋಗವಾಗದಂತೆ ತಕ್ಕ ಏರ್ಪಾಡನ್ನು ಮಾಡಲಾಗುತ್ತದೆ. ಆಗಲೇ ಹೇಳಿದಂತೆ ವ್ಯವಸಾಯವನ್ನು ಮಾಡುವುದಕ್ಕಾಗಿ ಬಂಡವಾಳವನ್ನು ಹೂಡಿ, ಯಂತ್ರೋಪಕರಣಗಳನ್ನು ಉಪಯೋಗಿಸುವ ಖಾಸಗೀ ಪ್ರಯತ್ನಕ್ಕೆ ಸರ್ಕಾರವು ಎಲ್ಲಾ ಪ್ರೋತ್ಸಾಹವನ್ನೂ ಕೊಡುವುದು. **ಕ್ಷಾಮ ಮುಂತಾದ ವಿಪತ್ತುಗಳ ಬಗೆಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದು ಕೊಳ್ಳುವ ವಿಷಯದಲ್ಲಿ ಜನರೇ ಮಾಡಬೇಕಾದ ಕೆಲಸ ತುಂಬಾ ಇದೆ. ಪ್ರತಿಯೊಬ್ಬ ರೈತನೂ ಯಾವಾಗಲೂ ತನಗೂ ತನ್ನ ಸಂಸಾರಕ್ಕೂ ಒಂದು ಅಥವಾ ಎರಡು ವರ್ಷಗಳಿಗೆ ಸಾಕಾಗುವಷ್ಟು ಆಹಾರವನ್ನು ಸಂಗ್ರಹಿಸಿಟ್ಟು ಕೊಳ್ಳುವುದು ಮುಖ್ಯವಾದ, ಪವಿತ್ರವಾದ ಕರ್ತವ್ಯವೆಂಬುದನ್ನು ಮರೆಯುದಿರಬೇಕೆಂದು ಮಹಾರಾಜರ ವಿಶೇಷ ಕೋರಿಕೆಯಂತೆ ನಾನು ಪ್ರಾರ್ಥಿಸುತ್ತೇನೆ.” §**

“ರಾಗಿ ಈ ಪ್ರಾಂತ್ಯದ ಬೆಳೆ. ಅದಕ್ಕೆ ಮಿಕ್ಕೆಡೆ ಬೇಡಿಕೆ ಇಲ್ಲ. ಹತ್ತು ವರ್ಷವಾದರೂ ಅದು ಕೆಡುವುದಿಲ್ಲ. ರಾಗಿಯ ಈ ವಿಶೇಷ ಗುಣದಿಂದಾಗಿ ಅದನ್ನು ಬಹು ಕಾಲ ಸಂಗ್ರಹಿಸಿಡಬಹುದು. ಅಲ್ಪಸ್ವಲ್ಪ ಮಳೆ ತಪ್ಪಿದಾಗ ರೈತರು ಅದರಿಂದಾಗುವ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೆ; ಎಚ್ಚರಿಕೆಯಿಂದ ಅನುಸರಿಸುವುದಾದರೆ, ಉಪಯೋಗವಾಗುವ ಕ್ರಮವೊಂದಿದೆ. ಭೂಮಿಯನ್ನು ಆಳವಾಗಿ ಉತ್ತರೆ ಅದು ಹೆಚ್ಚಿನ ಪ್ರಮಾಣದಲ್ಲಿ ತೇವವನ್ನು ಉಳಿಸಿಕೊಂಡು ಮಳೆಯಾಗದಿದ್ದಾಗಲೂ ಹೆಚ್ಚು ಕಾಲ ಬೆಳೆ ತೆಗೆಯುವುದಕ್ಕೆ ಇಂಬುಗೊಡುತ್ತದೆ ಎಂಬ ವಿಷಯವನ್ನು ವ್ಯವಸಾಯವನ್ನೇ ಕಸಬಾಗುಳ್ಳವರು ಕಂಡುಹಿಡಿದಿದ್ದಾರೆ. ಸ್ವಲ್ಪ ಆಲೋಚಿಸಿದರೆ ಇದು ಎಲ್ಲರಿಗೂ ವ್ಯಕ್ತವಾಗತಕ್ಕದ್ದೇ. ಈ ಬಗೆಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಅನುಭವದಿಂದ ಸಿದ್ಧವಾಗತಕ್ಕದ್ದು. ಆದರೆ ಆಳವಾದ ಕೆಂಪು ಮತ್ತು ಕಪ್ಪು ಭೂಮಿಯುಳ್ಳ ಈ ಪ್ರಾಂತ್ಯದಲ್ಲಿ ಆಳವಾದ ಉಳುಮೆಯಿಂದ ಅನುಕೂಲವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ತಕ್ಕ ನೇಗಿಲುಗಳನ್ನು ಕಡಿಮೆ ಬೆಲೆಗೆ ಈ ದೇಶದಲ್ಲೇ ತಯಾರಿಸಲು ವ್ಯವಸ್ಥೆಯನ್ನು

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಮಾಡಲಾಗುತ್ತದೆ. ಮಹಾರಾಜರ ಸರ್ಕಾರವು ಅವು ಸಾರ್ವತ್ರಿಕವಾಗಿ ಉಪಯೋಗವಾಗುವಂತೆ ನೀವು ಸಹಾಯ ಮಾಡುವಿರೆಂದು ನಂಬುತ್ತದೆ."

ಮಹಾರಾಜ ಚಾಮರಾಜೇಂದ್ರ ಒಡೆಯರವರು ರಾಜ್ಯಸೂತ್ರಗಳನ್ನು ವಹಿಸಿಕೊಂಡಾಗ ಸಂಸ್ಥಾನವು ಅನೇಕ ಬಗೆಯ ಕಷ್ಟಗಳನ್ನು ಎದುರಿಸುತ್ತಿದ್ದಿತ್ತೆಂಬುದನ್ನು ಆಗಲೇ ಪ್ರಸ್ತಾಪಿಸಲಾಗಿದೆ. ಅವರ ಪಟ್ಟಾಭಿಷೇಕದಿಂದ ಮೈಸೂರಿನ ಚರಿತ್ರೆಯಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭವಾಯಿತು. ಮೈಸೂರಿನ ಪುನರ್ಜನ್ಮಕ್ಕೆ ಅದು ಸಂಕೇತವಾಯಿತು. ಆದರೆ ಧಾತುಈಶ್ವರಕ್ಷಾಮದಿಂದ ಬೆಂಡಾಗಿದ್ದ ಸಂಸ್ಥಾನದ ಪುನರಭ್ಯುದಯವನ್ನು ಸಾಧಿಸುವುದು ಸುಲಭವಾದ ಕೆಲಸವಾಗಿರಲಿಲ್ಲ. ಈ ವಿಷಮ ಪರಿಸ್ಥಿತಿಯಲ್ಲಿ ಸಂಸ್ಥಾನದ ಆಡಳಿತದ ಜವಾಬ್ದಾರಿಯನ್ನು ಯಾರು ವಹಿಸಿದ್ದರೋ ಅವರನ್ನು ಸಂಸ್ಥಾನದ ಭವಿಷ್ಯ ಅವಲಂಬಿಸಿದ್ದಿತು. ರಂಗಾಚಾರ್ಲುರವರು ಈ ಸನ್ನಿವೇಶದಲ್ಲಿ ಮೈಸೂರಿನ ದಿವಾನರಾಗಿದ್ದುದು ಸಂಸ್ಥಾನದ ಪುಣ್ಯ.

ಅವರು ದಿವಾನರಾಗಿದ್ದದ್ದು ಕೇವಲ ೧ ವರ್ಷ ೧೦ ತಿಂಗಳು ಮಾತ್ರ. ಈ ಅಲ್ಪ ಅವಧಿಯಲ್ಲಿ ಅವರು ಸಂಸ್ಥಾನದ ಆರ್ಥಿಕ ಅಭ್ಯುದಯಕ್ಕೆ ಭದ್ರವಾದ ಬುನಾದಿಯನ್ನು ಕಲ್ಪಿಸಿದರು. ಜನಹಿತಾಕಾಂಕ್ಷಿಯೂ, ಪ್ರಗತಿಪರವೂ ಆದ ಆಡಳಿತ ವ್ಯವಸ್ಥೆಯನ್ನು ಅವರು ರೂಪಿಸಿದರು. ಸಮರ್ಥರೂ, ಕರ್ತೃತ್ವಶಾಲಿಗಳೂ ಆದ ಅವರು ಸರ್ಕಾರದ ಎಲ್ಲ ಇಲಾಖೆಗಳ ಆಡಳಿತ ವಿಧಾನವನ್ನು ಸರಿಪಡಿಸಿದರು. ಅವರ ಆಡಳಿತ ನಿಯಮಬದ್ಧವಾದುದೂ ಬಿಗಿಯಾದುದೂ ಆಗಿದ್ದಿತು. ರಂಗಾಚಾರ್ಲುರವರ ಮುಖ್ಯ ಗುಣ ಚಾರಿತ್ರ್ಯಶುದ್ಧತೆ. ಆದ್ದರಿಂದ ಅವರ ಆಡಳಿತದಲ್ಲಿ ನೀತಿಶುದ್ಧತೆಗೆ ವಿಶೇಷ ಬೆಲೆ ಕೊಡಲಾಗಿದ್ದಿತು. ನೀತಿಗೇಡಿಗಳಿಗೆ ಆಶ್ರಯ ಕೊಡುತ್ತಿದ್ದ, ಸಂಚುಹೊಂಚುಗಳ ಬೀಡಾಗಿದ್ದ ಅರಮನೆಯೂ ಕೂಡ ಅವರ ಕಾಲದಲ್ಲಿ ಸ್ವಲ್ಪವಾದರೂ ನೀತಿಯ ಮಟ್ಟವನ್ನು ಕಾಪಾಡಿಕೊಂಡಿದ್ದಿತು. ಸರ್ಕಾರದ ಎಲ್ಲ ಅಧಿಕಾರಿಗಳ ನಡವಳಿಕೆಯನ್ನು ಅವರು ಸೂಕ್ಷ್ಮ, ತೀಕ್ಷ್ಣ ದೃಷ್ಟಿಯಿಂದ ಗಮನಿಸುತ್ತಿದ್ದರು. ಯಾವ ಅಧಿಕಾರಿಯ ನಡತೆಯಾಗಲಿ ಸರಿಯಾಗಿಲ್ಲವೆಂದು ಅಥವಾ ಅವನು ಲಂಚರುಷವತ್ತುಗಳಿಗೆ ಕೈಹಾಕುವನೆಂದು, ಇಲ್ಲವೇ ಜನಗಳ ವಿಷಯದಲ್ಲಿ ದಬ್ಬಾಳಿಕೆಯಿಂದ ನಡೆದುಕೊಳ್ಳುವನೆಂದು ವರ್ತಮಾನ ಬಂದರೆ ಕೂಡಲೇ ಆ ಅಧಿಕಾರಿ ಇರುವ ಜಾಗಕ್ಕೆ ಹೋಗಿ ಅವರು ವಿಚಾರಣೆ

ನಡೆಸುತ್ತಿದ್ದರು. ಒಂದು ವೇಳೆ ತಾವೇ ಆ ರೀತಿ ಹೋಗಲಾಗದಿದ್ದರೆ ಆ ವದಂತಿ ನಿಜವೇ ಎಂಬುದನ್ನು ವಿಚಾರಿಸಲು ಯಾರನ್ನಾದರೂ ಕಳುಹಿಸುತ್ತಿದ್ದರು. ಇಲ್ಲವೇ ಆ ಅಧಿಕಾರಿಗಳಿಗೆ ಬೆಳಗಾಗಲಿ ರಾತ್ರಿಯಾಗಲಿ ಎಷ್ಟೇ ಹೊತ್ತಾಗಿರಲಿ ಕೂಡಲೇ ತಮ್ಮನ್ನು ನೋಡಬೇಕೆಂದು ಹೇಳಿಕಳುಹಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ರಂಗಾಚಾರ್ಲುರವರು ಅಧಿಕಾರಿಗಳನ್ನು ಯಾವ ದಯಾದಾಕ್ಷಿಣ್ಯಗಳಿಲ್ಲದೆ ದಂಡಿಸಿ ಮಾತನಾಡುತ್ತಿದ್ದರು. ತೀಕ್ಷ್ಣವಾದ ಅವರ ಮಾತಿನ ಏಟನ್ನು ತಡೆಯುವುದು ಎಂತಹವರಿಗೂ ಕಷ್ಟವಾಗುತ್ತಿದ್ದಿತು. ಅಧಿಕಾರಿಯ ಮೇಲೆ ಬಂದ ಆಪಾದನೆ ನಿಜವಾದುದೆಂದು ರುಜುವಾತಾದರೆ ಕೂಡಲೇ ಕಠಿಣವಾದ ಶಿಕ್ಷೆಯನ್ನು ವಿಧಿಸುತ್ತಿದ್ದರು.

ಒಬ್ಬ ಜಿಲ್ಲಾಧಿಕಾರಿಗಳು ಪ್ರವಾಸ ಕಾಲದಲ್ಲಿ ತಮಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಅಮಲ್ದಾರರಿಂದ ಬಿಟ್ಟಿಯಾಗಿ ಪಡೆಯುತ್ತಿದ್ದರು. ಈ ವರ್ತಮಾನ ರಂಗಾಚಾರ್ಲುರವರಿಗೆ ಬಂದಿತು. ಅವರು ಕೂಡಲೇ ಆ ಜಿಲ್ಲೆಗೆ ಹೋಗಿ ಜನಗಳನ್ನು ಭೇಟಿಮಾಡಿ ತಮಗೆ ಬಂದ ವರ್ತಮಾನ ನಿಜವೆಂದು ಖಚಿತ ಪಡಿಸಿಕೊಂಡರು. ಅನಂತರ ಆ ಜಿಲ್ಲೆಯ ಅಮಲ್ದಾರರನ್ನು ಕರೆಸಿಕೊಂಡು ತಾವು ಸಂಗ್ರಹಿಸಿದ ವರ್ತಮಾನವನ್ನು ಅವರ ಮುಂದಿಟ್ಟು ಆ ಅಮಲ್ದಾರರು ಹಾಗೆ ಬಿಟ್ಟಿಯಾಗಿ ಜಿಲ್ಲಾಧಿಕಾರಿಗೆ ಸಾಮಾನು ಸರಂಜಾಮುಗಳನ್ನು ಸರಬರಾಜು ಮಾಡುತ್ತಿದ್ದರೆಂದು ಒಪ್ಪಿಕೊಳ್ಳುವಂತೆ ಮಾಡಿದರು. ಅನಂತರ ಆ ಪದ್ಧತಿಯನ್ನು ನಿಷೇಧಿಸಿ ಅವರು ಒಂದು ಆಜ್ಞೆಯನ್ನು ಹೊರಡಿಸಿದರು. ಈ ಪದ್ಧತಿಯಿಂದ ಅಮಲ್ದಾರರನ್ನು ಇಕ್ಕಟ್ಟಿನ ಪರಿಸ್ಥಿತಿಗೆ ಗುರಿಪಡಿಸಿದಂತಾಗುವುದಲ್ಲದೇ ಅವರ ಸ್ಥಾನಮಾನಗಳನ್ನು ಕಡೆಗಣಿಸಿದಂತಾಗುತ್ತದೆ, ಅವರ ಮೇಲಧಿಕಾರಿಗಳು ಅವರಿಗೆ ತೋರಿಸಬೇಕಾದ ಮರ್ಯಾದೆಯನ್ನು ತೋರಿಸದೇ ನಿರ್ಲಕ್ಷಿಸಿದಂತಾಗುತ್ತದೆ ಎಂದು ಆ ಆಜ್ಞೆಯಲ್ಲಿ ಹೇಳಲಾಗಿದೆ.

ರಂಗಾಚಾರ್ಲುರವರ ಹತ್ತಿರದ ಸಂಬಂಧಿಯೊಬ್ಬರು ನ್ಯಾಯಾಧಿಕಾರಿಗಳಾಗಿದ್ದರು. ಅವರು ಇದ್ದ ಸ್ಥಾನಕ್ಕೆ ಮೇಲಿನ ನ್ಯಾಯಾಧಿಪತಿಯ ಸ್ಥಾನ ಖಾಲಿಯಾದಾಗ ಅದಕ್ಕೆ ತಮಗೆ ಬಡತಿ ಕೊಡಬೇಕೆಂದು ಅವರು ಒಂದು ಅರ್ಜಿಯನ್ನು ಹಾಕಿಕೊಂಡರು. ದಿವಾನರಿಗೆ ಆ ಅಧಿಕಾರಿಗೆ ಮೇಲಿನ ಸ್ಥಾನಕ್ಕೆ ತಕ್ಕ ನೀತಿ ಶುದ್ಧತೆ ಇಲ್ಲವೆಂಬುದು ಗೊತ್ತಿದ್ದಿತು. ಆದ್ದರಿಂದ ಅವರು ಆ ಅರ್ಜಿಯನ್ನು ತಿರಸ್ಕರಿಸಿ

ದರು. ಆದರೆ ಆತನಿಗೆ ಮೊದಲಿನ ಸ್ಥಾನದಲ್ಲೇ ಸಂಬಳವನ್ನು ಹೆಚ್ಚು ಮಾಡಿದರು. ಆ ಅಧಿಕಾರಿಯು ಮಹಾರಾಜರಿಗೆ ಒಂದು ಮನವಿಮಾಡಿಕೊಂಡರು. ಅದರಲ್ಲಿ ಮೇಲಿನ ಜಾಗಕ್ಕೆ ತಮಗೆ ಬಡತಿ ಕೊಡಬೇಕೆಂದೂ, ತಮಗೆ ಅದಕ್ಕೆ ಅರ್ಹತೆಯಿದೆ ಎಂದೂ ಅವರು ನಮೂದಿಸಿಕೊಂಡರು. ಮಹಾರಾಜರು ತಮ್ಮ ಒಂದು ಕಾಗದದಲ್ಲಿ ಈ ಘಟನೆಯನ್ನು ಪ್ರಸ್ತಾಪಿಸಿ ದಿವಾನರಿಗೆ ಸಂಬಂಧಿಯಾಗಿದ್ದುದೇ ಆ ಅಧಿಕಾರಿಯ ದುರದೃಷ್ಟವೆಂದು ಹೇಳಿದರು. ಆ ಅಧಿಕಾರಿಯು ದಿವಾನರಿಗೆ ಹತ್ತಿರದ ಸಂಬಂಧಿಯಾದುದರಿಂದ ಆತನಿಗೆ ನೀತಿಶುದ್ಧತೆ ಇಲ್ಲವೆಂಬುದು ಅವರಿಗೆ ಗೊತ್ತಿದ್ದಿತು. ಆದ್ದರಿಂದ ದಿವಾನರು ಆತನಿಗೆ ಬಡತಿ ಕೊಡಲಿಲ್ಲವೆಂಬುದು ಮಹಾರಾಜರ ಅಭಿಪ್ರಾಯವಾಗಿದ್ದಿತು.

ವಾಣಿಜ್ಯಕೇಂದ್ರವಾಗಿದ್ದ ಒಂದು ಸಣ್ಣ ಪಟ್ಟಣದಲ್ಲಿ ಮುನ್ಸೀಫರ ನ್ಯಾಯಾಲಯದಲ್ಲಿ ದಾಖಲಾಗುತ್ತಿದ್ದ ಮೊಖದ್ದಮೆಗಳ ಸಂಖ್ಯೆಯು ಇದ್ದಕ್ಕಿದ್ದ ಹಾಗೆ ಕಡಿಮೆಯಾಯಿತು. ಆ ಸ್ಥಳದ ವರ್ತಕರು ಹಣವಂತರಾಗಿದ್ದರು. ಅವರಲ್ಲಿ ವಾಗ್ವಾದಗಳು ಉಂಟಾದಾಗ ನ್ಯಾಯಸ್ಥಾನಕ್ಕೆ ಹೋಗುವುದು ಸರ್ವೇಸಾಧಾರಣವಾಗಿದ್ದಿತು. ಆದ್ದರಿಂದ ದಿವಾನರಿಗೆ ಮುನ್ಸಿಫರ ನ್ಯಾಯಸ್ಥಾನದಲ್ಲಿ ಮೊಖದ್ದಮೆಗಳ ಸಂಖ್ಯೆ ಇದ್ದಕ್ಕಿದ್ದಂತೆ ಕಡಿಮೆಯಾದದ್ದು ಆಶ್ಚರ್ಯಕ್ಕೆ ಕಾರಣವಾಯಿತು. ವಿಷಯವೇನೆಂದು ಅವರು ಅರಿತುಕೊಳ್ಳಲು ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿದರು. ಆ ಅಧಿಕಾರಿಯು ಪಟ್ಟಣದ ಪ್ರಮುಖರಾದ ವರ್ತಕರನ್ನು ಒಬ್ಬೊಬ್ಬರನ್ನಾಗಿ ಕರೆಸಿಕೊಂಡು ವಿಚಾರಣೆಯನ್ನು ನಡೆಸಿದರು. ಪ್ರತಿ ವರ್ತಕನೂ ಅವರು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರ ಒಂದೇ ಆಗಿದ್ದಿತು. ಅವರು ಹೇಳಿದ್ದು ಏನೆಂದರೆ "ನಮ್ಮಲ್ಲಿ ಉಂಟಾಗುವ ವಿವಾದಗಳನ್ನು ನ್ಯಾಯಸ್ಥಾನದಲ್ಲಿ ಬಗೆಹರಿಸಿಕೊಳ್ಳುವುದಕ್ಕೆ ಬಹಳ ಖರ್ಚಾಗುತ್ತದೆ. ಆದ್ದರಿಂದ ಅವನ್ನು ನ್ಯಾಯಸ್ಥಾನಕ್ಕೆ ಹೋಗದೆ ಹೊರಗೇ ಬಗೆಹರಿಸಿಕೊಳ್ಳಬೇಕಾಗಿದೆ." ಆ ಅಧಿಕಾರಿಯು ವರ್ತಕರು ಹೇಳಿದ ಮಾತನ್ನು ದಿವಾನರಿಗೆ ವರದಿ ಮಾಡಿದರು. ಆಗ ದಿವಾನರು ಹೀಗೆ ಹೇಳಿದರು. "ನ್ಯಾಯವಿತರಣೆಗೆ ಆ ಪಟ್ಟಣದಲ್ಲಿ ತುಂಬಾ ಖರ್ಚಾಗುತ್ತೆಂದು ಕಾಣುತ್ತದೆ. ನ್ಯಾಯಸ್ಥಾನದಲ್ಲಿ ಮೊಖದ್ದಮೆಯನ್ನು ದಾಖಲುಮಾಡಲು ಕಟ್ಟಬೇಕಾದ ಶುಲ್ಕ, ವಕೀಲರಿಗೆ ಕೊಡಬೇಕಾದ ಸಂಭಾವನೆ ಮುಂತಾದ ನ್ಯಾಯವಾದ ಖರ್ಚುಗಳಲ್ಲದೇ ಕಕ್ಷಿಗಾರರು ಮುನ್ಸೀಫರಿಗೂ ಲಂಚವನ್ನು ಕೊಡಬೇಕಾಗಿದೆ. ವರ್ತಕರ

ಬಹಳ ಬುದ್ಧಿವಂತರು, ಮುನ್ಸೀಫರು ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ನೇರವಾಗಿ ಹೇಳಿ ಅವರ ಕೋಪಕ್ಕೆ ಪಾತ್ರರಾಗುವುದು ಅವರಿಗೆ ಬೇಡ. ಅದಕ್ಕಾಗಿ ಈ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ." ಆ ಮುನ್ಸೀಫರನ್ನು ದಿವಾನರು ಕೂಡಲೇ ಕೆಲಸದಿಂದ ತೆಗೆದುಹಾಕಿದರು.

ಮಹಾರಾಜರು ಚಿಕ್ಕವಯಸ್ಸಿನವರಾಗಿದ್ದಾಗ ಅವರಿಗೆ ಒಬ್ಬ ಉಪಾಧ್ಯಾಯರನ್ನು ನಿಯಮಿಸಬೇಕಾಗಿದ್ದಿತು. ಮದ್ರಾಸ್ ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ಚೆನ್ನಾಗಿ ತೇರ್ಗಡೆಯಾಗಿ ಪ್ರಶಸ್ತಿಯನ್ನು ಪಡೆದುಕೊಂಡು ಒಬ್ಬ ಯುವಕರು ಆಗ ತಾನೇ ಬಂದಿದ್ದರು. ಅವರು ಮೈಸೂರಿನವರು. ರಂಗಾಚಾರ್ಲುರವರು ಬೆಂಗಳೂರು ಲಿಟರರಿ ಯೂನಿಯನ್ ಸಂಸ್ಥೆಯಲ್ಲಿ ಅವರು ಭಾಷಣ ಕೊಡುವಂತೆ ಏರ್ಪಡಿಸಿದರು. ಈ ಯುವಕನಿಗೆ ಕೇವಲ ಪಾಂಡಿತ್ಯ ಇರುವುದೇ ಅಥವಾ ಪ್ರಪಂಚ ಜ್ಞಾನವೂ ಇರುವುದೇ ಎಂಬುದನ್ನು ಪರೀಕ್ಷಿಸಲು ಅವರು ಈ ರೀತಿ ಮಾಡಿದ್ದರು. ವಿದ್ಯಾ ಪ್ರಶಸ್ತಿಗಳನ್ನು ಪಡೆದು ವಿದ್ವಾಂಸನೆಂದು ಹೆಸರು ಗಳಿಸಿದ್ದ ಆ ಯುವಕನ ಭಾಷಣವನ್ನು ಕೇಳಲು ಬಹುಮಂದಿ ಗಣ್ಯರಾದ ವ್ಯಕ್ತಿಗಳು ಆ ಸಭೆಯಲ್ಲಿ ಸೇರಿದ್ದರು. ದಿವಾನರು ಆ ಸಭೆಗೆ ಬಂದಿದ್ದರು. ಭಾಷಣಕಾರರು "ವಿದ್ಯಾಭ್ಯಾಸ" ಎಂಬುದನ್ನೇ ತಮ್ಮ ಭಾಷಣದ ವಿಷಯವನ್ನಾಗಿ ಆರಿಸಿಕೊಂಡಿದ್ದರು. ಅದರ ವಿಷಯವಾಗಿ ಅವರು ದೊಡ್ಡ ಪ್ರಬಂಧವನ್ನು ಬರೆದುಕೊಂಡು ಬಂದು ಅದನ್ನು ಓದಲಾರಂಭಿಸಿದರು. ಅವರು ಮೊದಲು "ವಿದ್ಯಾಭ್ಯಾಸ" ಎಂಬ ಪದವನ್ನು ಸುದೀರ್ಘವಾಗಿ ವಿಶ್ಲೇಷಣ ಮಾಡಿದರು. ಆ ಪದದ ವ್ಯುತ್ಪತ್ತಿಯನ್ನೂ ಅರ್ಥವನ್ನೂ ಸುದೀರ್ಘವಾಗಿ ವಿಮರ್ಶಿಸಿ ಅನೇಕ ಪಂಡಿತರು ಅದರ ವಿಷಯ ಬರೆದಿದ್ದ ಪ್ರೌಢ ಪ್ರಬಂಧಗಳಿಂದ ಅರ್ಥಗರ್ಭಿತವೂ ವಿಚಾರಪರಿಪ್ಲುತವೂ ಆದ ವಾಕ್ಯಗಳನ್ನು ಉದಾಹರಿಸಿದರು. ಒಂದು ಗಂಟೆಯಾದರೂ ಭಾಷಣ ಮುಗಿಯುವ ಸೂಚನೆ ಕಾಣಲಿಲ್ಲ. ರಂಗಾಚಾರ್ಲುರವರು ಆ ಯುವಕನಿಗೆ ಬೇಕಾದಷ್ಟು ಪುಸ್ತಕ ಪಾಂಡಿತ್ಯವಿದ್ದರೂ ವ್ಯವಹಾರ ಜ್ಞಾನ ಕಡಿಮೆ ಎಂಬ ತೀರ್ಮಾನಕ್ಕೆ ಬಂದರು. ಆತನಿಗೆ ಸರ್ಕಾರದ ಕಛೇರಿಯಲ್ಲಿ ಒಂದು ಕೆಲಸವನ್ನು ಕೊಟ್ಟರು. ಆದರೆ ಮಹಾರಾಜರ ಉಪಾಧ್ಯಾಯನನ್ನಾಗಿ ಆತನನ್ನು ನಿಯಮಿಸಲಿಲ್ಲ.

ರಂಗಾಚಾರ್ಲುರವರು ಬಹಳ ಚಟುವಟಿಕೆಯ ಸ್ವಭಾವದವರು. ಅವರು ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಅವರು ಸುಪ್ತಿಗೆಯನ್ನೂ

ಸುಖಾಸನಗಳನ್ನೂ ಇತರ ಸುಖಸಾಧನಗಳನ್ನೂ ಬಯಸಿದವರಲ್ಲ, ಅವನ್ನು ಮೆಚ್ಚಿಕೊಂಡವರೂ ಅಲ್ಲ. ಅವರು ಕಾರ್ಯನಿಮಿತ್ತವಾಗಿ ವಿಶೇಷವಾಗಿ ಪ್ರಯಾಣ ಮಾಡುತ್ತಿದ್ದರು. ದಿವಾನರ ಪ್ರಯಾಣವೆಂದ ಮೇಲೆ ಅವರನ್ನು ಹಿಂಬಾಲಿಸುವ ಪರಿವಾರವೂ, ಅವರ ಸ್ಥಾನಮಾನಗಳಿಗೆ ತಕ್ಕ ವೈಭವ ಆಟಾಟೋಪಗಳೂ ಬೇಕೆಂಬುದು ಸಾಮಾನ್ಯವಾದ ಭಾವನೆಯಷ್ಟೆ. ಆದರೆ ರಂಗಾಚಾರ್ಲುರವರು ಇದಾವುದಕ್ಕೂ ಬೆಲೆ ಕೊಟ್ಟವರಲ್ಲ. ಕಾರ್ಯನಿರ್ವಾಹಕ್ಕೆ ಬೇಕಾದಷ್ಟು ಜನರನ್ನು ಮಾತ್ರ ಕರೆದುಕೊಂಡು ಹೋಗಿ ಕಾರ್ಯವನ್ನು ಮುಗಿಸಿ ಬಂದುಬಿಡುತ್ತಿದ್ದರು. ಅವರಿಗೆ ಸೋಮಾರಿಗಳನ್ನೂ, ಮಂದಬುದ್ಧಿಗಳನ್ನೂ ಕಂಡರೆ ತಾಳ್ಮೆ ಕಡಿಮೆ. ಎಂತಹ ದೊಡ್ಡ ಅಧಿಕಾರಿಗಳಾದರೂ ಸಂದರ್ಭ ಒದಗಿದಾಗ ಅವರನ್ನು ಗದರಿಸಿ ಕಟುವಾಗಿಯೇ ಮಾತನಾಡುತ್ತಿದ್ದರು. ದಡ್ಡರನ್ನು ಕಂಡರೆ ಬೆಂಕಿಯಾಗುತ್ತಿದ್ದ ರಂಗಾಚಾರ್ಲುರವರು ದುರಹಂಕಾರಿಗಳೆಂದೂ, ದುರಭಿಮಾನಿಗಳೆಂದೂ ಪ್ರಶಸ್ತಿಯನ್ನು ಬಹು ಬೇಗ ಗಳಿಸಿದರು.

ರಂಗಾಚಾರ್ಲುರವರು ಬೆಳಿಗ್ಗೆ 5 ಗಂಟೆಯಿಂದ ಜನಗಳ ಅಹವಾಲುಗಳನ್ನು ಕೇಳಲು ಆರಂಭಿಸುತ್ತಿದ್ದರು ಬೆಳಿಗ್ಗೆ 10 ಗಂಟೆಯವರೆಗೆ ಈ ಕಾರ್ಯ ನಡೆಯುತ್ತಿದ್ದಿತು. ಅಮೇಲೆ ಅವರು ತಮ್ಮ ಕಛೇರಿಗೆ ಹೋಗುತ್ತಿದ್ದರು. ಸಾಮಾನ್ಯ ಜನರು ಸುಲಭವಾಗಿ ಅವರನ್ನು ನೋಡಬಹುದಾಗಿದ್ದಿತು. ಅದರಲ್ಲಿಯೂ ರೈತರನ್ನು ಅವರು ಯಾವಾಗ ಬಂದರೂ ನೋಡುತ್ತಿದ್ದರು, ಅವರ ಮಾತನ್ನು ಎಷ್ಟು ಹೊತ್ತಾದರೂ ತಾಳ್ಮೆಯಿಂದ ಕೇಳುತ್ತಿದ್ದರು. ಅವರ ಕುಂದುಕೊರತೆಗಳು ಏನು ಎಂಬುದನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳದೇ ಎಂದೂ ಅವರು ಭೇಟಿಯನ್ನು ಮುಕ್ತಾಯಗೊಳಿಸುತ್ತಿರಲಿಲ್ಲ. ಮಧ್ಯರಾತ್ರಿಯಾದರೂ ಹೀಗೆ ರೈತಾಪಿವರ್ಗದ ಮನವಿಗಳನ್ನು ಕೇಳುತ್ತಾ ಅವರು ಕುಳಿತುಕೊಳ್ಳುತ್ತಿದ್ದುದುಂಟು.

ರಂಗಾಚಾರ್ಲುರವರು ಸರ್ಕಾರದ ಕಾಗದಗಳನ್ನು ಹೇಳಿ ಬರೆಯಿಸುತ್ತಿದ್ದರು. ಅವರ ಕೈಬರಹ ಅಷ್ಟು ಚೆನ್ನಾಗಿರಲಿಲ್ಲ. ಹಲವು ಜನರಿಗೆ ಹೀಗೆ ಅವರು ಪತ್ರಗಳನ್ನು ಹೇಳಿ ಬರೆಯಿಸುತ್ತಿದ್ದರು. ಹೀಗೆ ಪತ್ರವ್ಯವಹಾರದ ಕಾರ್ಯವನ್ನು ನಡೆಸುತ್ತಾ ಅವರು ಅನೇಕ ದಿನಗಳು ಬೆಳಿಗ್ಗೆ 2 ಗಂಟೆಯವರೆಗೆ ಕುಳಿತಿದ್ದುದುಂಟು. ಅವರು ಕಾಲವನ್ನು ವ್ಯರ್ಥವಾಗಿ ಕಳೆಯುವವರನ್ನೂ, ಮೈಗಳ್ಳರನ್ನೂ ಬಗೆಬಗೆಯ

ಹವ್ಯಾಸಗಳನ್ನು ಹಚ್ಚಿಕೊಂಡು ಕೇವಲ ವಿನೋದದಲ್ಲಿ ಕಾಲ ಕಳೆಯುತ್ತಿದ್ದವರನ್ನೂ ಕಂಡರೆ ಅಸಂತುಷ್ಟರಾಗುತ್ತಿದ್ದರು.

ಹೀಗೆ ತಾವು ಬಹಳ ಕಷ್ಟಪಟ್ಟು ದುಡಿಯುತ್ತಿದ್ದ ರಂಗಾಚಾರ್ಲುರವರು ಇತರರಿಂದ ಕೆಲಸವನ್ನು ತೆಗೆಯುವುದಕ್ಕೆ ಹಿಂದುಮುಂದು ನೋಡುತ್ತಿರಲಿಲ್ಲ. ಆ ವಿಷಯದಲ್ಲಿ ಕಠಿಣರಾಗಿದ್ದರೆಂದೇ ಅವರು ಹೆಸರು ಗಳಿಸಿದ್ದರು. ಮಾಡುವ ಕೆಲಸ ಅಚ್ಚುಕಟ್ಟಾಗಿರಬೇಕು, ತುಂಬಾ ಉತ್ತಮ ಮಟ್ಟದ್ದಾಗಿರಬೇಕು, ಸ್ವಲ್ಪವೂ ಸಾವಕಾಶವಾಗದೇ ಮುಗಿಯಬೇಕು ಎಂಬುದು ಅವರ ಅಪೇಕ್ಷೆಯಾಗಿದ್ದಿತು. "ಬ್ರಿಟಿಷರು ತಾವು ನಡೆಸಬೇಕಾದ ಕಾರ್ಯಗಳನ್ನು ಹೇಗೆ ಮಾಡುತ್ತಾರೆ ಎಂಬುದು ನಮಗೆ ಅಷ್ಟು ಮುಖ್ಯವಲ್ಲ. ಭಾರತೀಯರು ಬಹಳ ಹೆಚ್ಚಿನ ಕರ್ತವ್ಯಶ್ರದ್ಧೆಯಿಂದ ಕಾರ್ಯವನ್ನು ಮಾಡಬೇಕು. ಅವರು ತಮ್ಮ ಕಾರ್ಯನಿರ್ವಹಣೆಯಲ್ಲಿ ಅಸಮರ್ಥರಾಗಿ ನಡೆದುಕೊಂಡಲ್ಲಿ, ಔದಾಸೀನ್ಯವನ್ನೂ ಉಪೇಕ್ಷೆಯನ್ನೂ ತೋರಿದಲ್ಲಿ ಅವರು ಸ್ವರಾಜ್ಯಕ್ಕೆ ಅನರ್ಹರೆಂಬ ತೀರ್ಮಾನಕ್ಕೆ ಲೋಕ ಖಂಡಿತವಾಗಿ ಬಂದುಬಿಡುವುದು. ಇಂತಹ ಆಪಾದನೆಗೆ ನಾವು ಎಂದಿಗೂ ಅವಕಾಶಕೊಡಬಾರದು" ಎಂದು ಅವರು ಹೇಳುತ್ತಿದ್ದರು.

ರಾಜ್ಯಾಡಳಿತದ ವಿವಿಧ ಸಮಸ್ಯೆಗಳ ಬಗೆಗೆ ನಿರಂತರಾಗಿ ಆಲೋಚಿಸುತ್ತಿದ್ದ ರಂಗಾಚಾರ್ಲುರವರಿಗೆ ವಿಶ್ರಾಂತಿ ಇರಲಿಲ್ಲ. ಅಂತಹ ವಿಶ್ರಾಂತಿ ಅವರಿಗೆ ಬೇಕೂ ಇರಲಿಲ್ಲ. "ಮೈಸೂರು ಸರ್ಕಾರದ ಕಾರ್ಯಾಲಯದ ಕಾಗದ ಪತ್ರಗಳ ಸಂಗ್ರಹವನ್ನು ಶೋಧಿಸಿದಲ್ಲಿ ಅವರು ಬರೆದ ಅನೇಕ ಸೂಚನಾಪತ್ರಗಳೂ, ಟಿಪ್ಪಣಿಗಳೂ ಸಿಕ್ಕುತ್ತವೆ. ಇವು ಯುವಕ ಜನಾಂಗಕ್ಕೆ ಮಾರ್ಗದರ್ಶಕವಾದವು. ಅವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಹೊರಡಿಸಿದ ಸರ್ಕಾರಿ ಆಜ್ಞೆಗಳೂ, ಬ್ರಿಟಿಷ್ ಆಡಳಿತದ ಮುಖ್ಯಾಧಿಕಾರಿಯ ಸೂಚನೆಯ ಮೇರೆಗೆ ಅವರು ಸಿದ್ಧಪಡಿಸಿದ ಆಜ್ಞೆಗಳೂ ಕೂಡ ಬೋಧಪ್ರದವಾಗಿವೆ, ಬಹುಮಟ್ಟಿಗೆ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟವಾಗಿವೆ" ಎಂದು ಅವರ ವಿಷಯವನ್ನು ನಿಕಟವಾಗಿ ಬಲ್ಲವರೊಬ್ಬರು ಹೇಳಿದ್ದಾರೆ.

ರಂಗಾಚಾರ್ಲುರವರಿಗೆ ಜನಗಳ ಸ್ಥಿತಿಗತಿಗಳನ್ನೂ, ರಾಜ್ಯದ ವಿವಿಧ ಪ್ರದೇಶಗಳ ವಿದ್ಯಮಾನಗಳನ್ನೂ ತಿಳಿದುಕೊಳ್ಳುವ ವಿಷಯದಲ್ಲಿ ತುಂಬಾ ಉತ್ಸಾಹ

ವಿದ್ದಿತು. ಆದಕ್ಕಾಗಿ ಅವರು ರಾಜ್ಯದ ಮೂಲೆ ಮೂಲೆಗಳಲ್ಲೂ ಪ್ರವಾಸಮಾಡುತ್ತಿದ್ದರು. ಅವರು ಪ್ರವಾಸ ಕಾಲದಲ್ಲಿ ಆಯಾ ತಾಲ್ಲೂಕಿನ, ಜಿಲ್ಲೆಯ ಪ್ರಮುಖರನ್ನು ಕರೆಸಿ ಅವರಿಂದ ವಿಷಯವನ್ನು ಸಂಗ್ರಹಿಸುತ್ತಿದ್ದರು. ಅವರು ಸಾಮಾನ್ಯ ಜನರನ್ನು ಭೇಟಿಮಾಡುತ್ತಿದ್ದರು. ಅಲ್ಲದೇ ಬೆಂಗಳೂರು, ಮೈಸೂರು ನಗರಗಳಲ್ಲಿ ಸಂಸ್ಥಾನದ ವಿವಿಧ ಪ್ರದೇಶಗಳಿಂದ ಬರುತ್ತಿದ್ದ ಪ್ರಯಾಣಿಕರು ಸೇರುವ ಸ್ಥಳಗಳಿಗೆ ಅವರು ಹೋಗುತ್ತಿದ್ದರು. ಪ್ರಯಾಣಿಕನು ಬಂದಿದ್ದ ಸ್ಥಳದ ಪರಿಸ್ಥಿತಿ ಏನು ಎಂದು ಅವರು ಪ್ರಶ್ನೆಗಳನ್ನು ಹಾಕುತ್ತಿದ್ದರು. ಈ ಸಂದರ್ಭದಲ್ಲಿ ಅವರು ಅಗತ್ಯ ಕಂಡಂತೆ ಇಂಗ್ಲೀಷ್, ಕನ್ನಡ, ತೆಲುಗು, ತಮಿಳು, ಹಿಂದೂಸ್ಥಾನಿ ಭಾಷೆಗಳಲ್ಲಿ ಮಾತನಾಡುತ್ತಿದ್ದರು. ಒಮ್ಮೊಮ್ಮೆ ವಿಷಯವನ್ನು ಸಂಗ್ರಹಿಸುವ ಆತುರದಲ್ಲಿ ಈ ಎಲ್ಲ ಭಾಷೆಗಳ ಪದಗಳ ವಿಚಿತ್ರ ಕಲಬೆರಕೆಯನ್ನು ಉಪಯೋಗಿಸಿ ಪ್ರಯಾಣಿಕರೊಂದಿಗೆ ಅವರು ಮಾತನಾಡುತ್ತಿದ್ದರು.

ರಂಗಾಚಾರ್ಲುರವರು ಭೀತಿಯೇನೆಂಬುದನ್ನು ಕಂಡರಿಯದವರು. ಸಂದರ್ಭ ಒದಗಿದಾಗ ಸ್ವದೇಶೀಯರ ಹಕ್ಕುಬಾಧ್ಯತೆಗಳನ್ನೂ, ಮಾನಗೌರವಗಳನ್ನೂ ರಕ್ಷಿಸಲು ಅವರು ಯಾರನ್ನಾದರೂ ಎದುರಿಸಬಲ್ಲವರಾಗಿದ್ದರು. ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿ ಒಂದು ದೊಡ್ಡ ಸಾರ್ವಜನಿಕ ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ಇದಕ್ಕೆ ಭಾರತೀಯರೂ, ಯೂರೋಪಿಯನ್ನರೂ ಅನೇಕ ಮಂದಿ ಬಂದಿದ್ದರು. ಗಂಡಸರು ಹೆಂಗಸರು ಮತ್ತು ಮಕ್ಕಳ ಭಾರಿ ಗುಂಪು ಸೇರಿದ್ದಿತು. ಅಲ್ಲಿ ಕೆಲವು ಬ್ರಿಟಿಷ್ ಸೈನಿಕರು ಇದ್ದರು. ಈ ಬ್ರಿಟಿಷ್ ಸೈನಿಕರು ಉದ್ಯಾನದಲ್ಲಿ ಬಹು ಚೆನ್ನಾಗಿ ಬೆಳೆಸಿದ್ದ ಹುಲ್ಲಿನ ಮೇಲೆ ತೋರಿದಂತೆ ಅಡ್ಡಾಡುತ್ತಾ ಅದನ್ನು ತುಳಿದು ಹಾಳುಮಾಡುತ್ತಿದ್ದರು. ಅಲ್ಲಿಗೆ ಬಂದಿದ್ದ ದಿವಾನರು ಈ ಸೈನಿಕರ ವರ್ತನೆಯನ್ನು ನೋಡಿದರು. ಕೂಡಲೇ ಅವರು ಅವರ ಮುಖ್ಯಾಧಿಕಾರಿಯ ಬಳಿಗೆ ಹೋಗಿ ಕೋಪದಿಂದ, "ಇಲ್ಲಿ ಬಹು ಮಂದಿ ಭಾರತೀಯರು ಸೇರಿದ್ದಾರೆ. ಹುಲ್ಲನ್ನು ತುಳಿದು ಕೆಡಿಸದಿರಲೆಂದು ಅವರನ್ನು ಹುಲ್ಲು ಬೆಳೆದಿರುವ ಪ್ರದೇಶಕ್ಕೆ ಬಿಡುತ್ತಿಲ್ಲ. ನಿಮ್ಮ ಸೈನಿಕರು ನಮ್ಮ ದೇಶೀಯರು ಯಾವುದನ್ನು ಮಾಡಲು ಹಿಂದೆಗೆಯುವರೋ ಅದನ್ನು ಮಾಡುತ್ತಿರುವರು. ನಮ್ಮ ಜನ ಪಾಲಿಸಬೇಕಾದ ನಿಯಮಗಳನ್ನು ಅವರು ಉಲ್ಲಂಘಿಸಬಹುದಾದರೂ ಹೇಗೆ?" ಎಂದರು. ಆ ಸೈನ್ಯಾಧಿಕಾರಿಯು ಕೂಡಲೇ ಸೈನಿಕರನ್ನು ಅಲ್ಲಿಂದ ದೂರಹೋಗುವಂತೆ ಆಜ್ಞೆಮಾಡಿದನು.

ರಂಗಾಚಾರ್ಲುರವರು ದಿವಾನರಾಗಿದ್ದಾಗ ಸರ್ಕಾರದಲ್ಲಿ ಅನೇಕ ಬ್ರಿಟಿಷರು ಅಧಿಕಾರಿಗಳಾಗಿದ್ದರು. ತಮ್ಮ ಕೈಕೆಳಗೆ ಕೆಲಸಮಾಡುತ್ತಿದ್ದ ಭಾರತೀಯ ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಅವರು ಎಂದೂ ಬೇರೆ ರೀತಿಯಲ್ಲಿ ನಡೆಸಿಕೊಂಡವರಲ್ಲ. ಅವರು ಮಹಾರಾಜರ ಘನತೆ ಗೌರವಗಳನ್ನು ಬಹು ಎಚ್ಚರಿಕೆಯಿಂದ ಕಾಪಾಡುತ್ತಿದ್ದರು. ಆ ವಿಷಯದಲ್ಲಿ ಸ್ವಲ್ಪ ನ್ಯೂನತೆ ಉಂಟಾಗುವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ಸ್ವತಂತ್ರಪ್ರವೃತ್ತಿಯುವರೂ, ಸ್ವಾಭಿಮಾನಿಗಳೂ ಆದ ರಂಗಾಚಾರ್ಲುರವರು ಬ್ರಿಟಿಷ್ ರಾಜಪ್ರತಿನಿಧಿಗಳೊಂದಿಗೆ ವ್ಯವಹರಿಸುವಾಗ ಮಹಾರಾಜರ, ಸಂಸ್ಥಾನದ ಗೌರವ ಪ್ರತಿಷ್ಠೆಗಳನ್ನು ಎತ್ತಿಹಿಡಿಯುತ್ತಿದ್ದರು. ಹಾಗೆಯೇ ಅವರು ಆ ರಾಜಪ್ರತಿನಿಧಿಗಳಿಗೆ ಸಲ್ಲಬೇಕಾದ ಮರ್ಯಾದೆಯನ್ನು ಚಾಚೂ ತಪ್ಪದೆ ಕೊಡುತ್ತಿದ್ದರು. ಆ ಪ್ರತಿನಿಧಿಗಳ ಮುಂದೆ ಎಂದೂ ಅವರು ಅತಿ ವಿನಯವನ್ನು ತೋರಿದವರಲ್ಲ.

ರಂಗಾಚಾರ್ಲುರವರಿಗೆ ಮೇಧಾವಿಗಳಾದ ಮೈಸೂರಿನ ಯುವಕರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ತಕ್ಕ ಅವಕಾಶವನ್ನು ಕಲ್ಪಿಸುವುದರಲ್ಲಿ ಬಹಳ ಆಸಕ್ತಿ ಇದ್ದಿತು. ಆ ಕಾಲದಲ್ಲಿ ಈ ಯುವಕರು ತಮ್ಮ ಪ್ರೌಢವಿದ್ಯಾಭ್ಯಾಸಕ್ಕಾಗಿ ಮದ್ರಾಸಿಗೋ, ಬೊಂಬಾಯಿಗೋ ಹೋಗಬೇಕಾಗಿದ್ದರಿಂದ ಅವರಿಗೆ ರಂಗಾಚಾರ್ಲುರವರು ವಿದ್ಯಾರ್ಥಿವೇತನಗಳನ್ನು ಏರ್ಪಡಿಸಿದರು. ಈ ಯುವಕರು ಯಂತ್ರಶಿಲ್ಪ, ವಾಸ್ತುಶಿಲ್ಪಗಳನ್ನೂ, ವೈದ್ಯಶಾಸ್ತ್ರವನ್ನೂ, ವೈಜ್ಞಾನಿಕ ವಿಷಯಗಳನ್ನೂ ಅರಿಸಿಕೊಳ್ಳುವುದಕ್ಕೆ ಅವರು ವಿಶೇಷವಾಗಿ ಪ್ರೋತ್ಸಾಹಕೊಡುತ್ತಿದ್ದರು. ಈ ರೀತಿ ರಂಗಾಚಾರ್ಲುರವರಿಂದ ಪ್ರೋತ್ಸಾಹ, ಸಹಾಯಗಳನ್ನು ಪಡೆದವರ ಪೈಕಿ ಮೈಸೂರಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರೂ ಒಬ್ಬರು. ಪೂನಾದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಲು ಅವರಿಗೆ ಸರ್ಕಾರದಿಂದ ವಿದ್ಯಾರ್ಥಿವೇತನವನ್ನು ಕೊಡಲಾಯಿತು. ದಿವಾನರನ್ನು ನೋಡಲು ಹೋದಾಗ ವಿಶ್ವೇಶ್ವರಯ್ಯನವರು ಆಗತಾನೇ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ರಂಗಾಚಾರ್ಲುರವರಿಗೆ ಆ ಯುವಕನನ್ನು ನೋಡಿ ಬಹಳ ಸಂತೋಷವಾಯಿತು. ಅತನನ್ನು ಬೆನ್ನುತಟ್ಟಿ ಮೆಚ್ಚುಗೆಯ ಮಾತುಗಳನ್ನೂ, ಪ್ರೋತ್ಸಾಹದ ಮಾತುಗಳನ್ನೂ ಅವರು ಆಡಿದರು. ಹೀಗೆ ರಂಗಾಚಾರ್ಲುರವರಿಂದ ಸಹಾಯಪಡೆದ ಅನೇಕ ವಿದ್ಯಾರ್ಥಿಗಳು ಸಂಸ್ಥಾನದ ಒಳಗೂ ಹೊರಗೂ ದೊಡ್ಡ, ದೊಡ್ಡ ಸ್ಥಾನಗಳಿಗೆ ಬಂದರು.

ಆ ಕಾಲದಲ್ಲಿ ಸರ್ಕಾರದ ಎಲ್ಲ ಉನ್ನತಹುದ್ದೆಗಳನ್ನು ಯೂರೋಪಿಯನ್ನರಿಗೆ ಮೀಸಲಾಗಿಡಲಾಗಿದ್ದಿತು. ಭಾರತೀಯರಿಗೆ ಸರ್ಕಾರದಲ್ಲಿ ದೊಡ್ಡ ಹುದ್ದೆಗಳನ್ನು ನಿರ್ವಹಿಸಲು ತಕ್ಕ ಸಾಮರ್ಥ್ಯವಿದೆ ಎಂಬುದು ಇನ್ನೂ ವ್ಯಕ್ತವಾಗಿರಲಿಲ್ಲವೆಂಬುದು ಬ್ರಿಟಿಷರ ಅಭಿಪ್ರಾಯವಾಗಿದ್ದಿತು. ಪರಿಸ್ಥಿತಿ ಹೀಗಿರುವಾಗ ಸಮರ್ಥರಾದ ಭಾರತೀಯರನ್ನು ಉನ್ನತ ಸರ್ಕಾರಿ ಹುದ್ದೆಗಳಿಗೆ ನಿಯಮಿಸುವುದೇ ಸರಿಯಾದ ನೀತಿ ಎಂದು ಪ್ರತಿಪಾದಿಸುವುದು ಧೈರ್ಯದ ಕೆಲಸವಾಗಿದ್ದಿತು ಅಂತಹ ನೀತಿಯನ್ನು ಕಾರ್ಯಾಚರಣೆಗೆ ತರುವುದಕ್ಕೆ ಇನ್ನೂ ಹೆಚ್ಚಿನ ಧೈರ್ಯ ಬೇಕಾಗಿದ್ದಿತು. ರಂಗಾಚಾರ್ಲುರವರಾದರೋ ಸಂಸ್ಥಾನದ ಉನ್ನತಸ್ಥಾನಗಳಿಗೆ ಭಾರತೀಯರನ್ನೇ ನಿಯಮಿಸುತ್ತಿದ್ದರು. ಅವರು ಮಾಡಿದ ದೇಶೋಪಕಾರದ ಕೆಲಸಗಳಲ್ಲಿ ಇದು ಬಹುಕಾಲ ನೆನಸಬೇಕಾದ ಸಂಗತಿಯಾಗಿದೆ. ಹೀಗೆ ಅವರು ಸಮರ್ಥರಾದ ಭಾರತೀಯ ಅಧಿಕಾರಿಗಳ ಒಂದು ತಂಡವನ್ನೇ ತರಪೇತು ಮಾಡಿದರು. ಇವರ ಪೈಕಿ ರಂಗಾಚಾರ್ಲುರವರಾದ ಕೂಡಲೇ ಮೈಸೂರಿನ ದಿವಾನರಾದ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರ್‌ರವರನ್ನೂ ಮತ್ತು ಜಯರಾಮರಾಯರನ್ನೂ ಸ್ಮರಿಸಬಹುದು. ರಂಗಾಚಾರ್ಲುರವರಿಂದ ಪ್ರೋತ್ಸಾಹ, ಉತ್ತೇಜನಗಳನ್ನು ಪಡೆದು ಸರ್ಕಾರದಲ್ಲಿ ದೊಡ್ಡ ಸ್ಥಾನಗಳಿಗೆ ಬಂದವರ ಪೈಕಿ ಅವರ ಬಂಧುಗಳು ಯಾರು ಇರಲಿಲ್ಲ.

ರಂಗಾಚಾರ್ಲುರವರು ಸಂಸ್ಥಾನದ ಪ್ರಗತಿಗಾಗಿ ಯಾವ ಯಾವ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ವಿಷಯವನ್ನು ಚೆನ್ನಾಗಿ ಅರಿತಿದ್ದರು. ಅಲ್ಲದೇ ಈ ವಿಷಯಗಳಲ್ಲಿ ಯಾರಿಂದ ಯಾವ ಸೂಚನೆ ಸಲಹೆಗಳು ಬಂದರೂ ಅವನ್ನು ಕೂಲಂಕಷವಾಗಿ ಪರಿಶೀಲಿಸುವ ಮನೋವೃತ್ತಿ ಅವರದಾಗಿದ್ದಿತು. ಈ ದೇಶದಲ್ಲಿ ದಾರಿದ್ರ್ಯವನ್ನು ನಿವಾರಣೆ ಮಾಡಬೇಕಾದರೆ ವಿಜ್ಞಾನದಿಂದಲೂ ಮತ್ತು ಔದ್ಯೋಗೀಕರಣದಿಂದಲೂ ಮಾತ್ರ ಸಾಧ್ಯ ಎಂಬುದನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದರು. ಮೈಸೂರಿನಲ್ಲಿ ಮೊದಲು ವಿದ್ಯುಚ್ಛಕ್ತಿಯನ್ನು ಬಳಸುವಂತೆ ಏರ್ಪಡಿಸಿದವರು ರಂಗಾಚಾರ್ಲುರವರೇ. ಅರಮನೆಯಲ್ಲಿ ವಿದ್ಯುದ್ದೀಪಗಳಿರುವಂತೆ ಏರ್ಪಡಿಸಲು ಅವರು ವಿದ್ಯುಜ್ಜನಕ ಯಂತ್ರವನ್ನು ಹೊರದೇಶದಿಂದ ತರಿಸಿಕೊಂಡರು.

ರಂಗಾಚಾರ್ಲುರವರಿಗೆ ವಿಜ್ಞಾನದ ವಿಷಯದಲ್ಲಿ ಇದ್ದ ಗಾಢವಾದ ಆಸಕ್ತಿಯ ಬಗೆಗೆ ಒಂದು ಪ್ರಸಂಗವನ್ನು ಇಲ್ಲಿ ನಿರೂಪಿಸಬಹುದು. ೧೮೮೨ರಲ್ಲಿ

ಬೆಂಗಳೂರಿನಲ್ಲಿರುವ ಸೆಂಟ್ರಲ್ ಕಾಲೇಜಿಗೆ ಮುಖ್ಯಸ್ಥರನ್ನು ಆರಿಸಬೇಕಾಗಿದ್ದಿತು. ಆ ಸ್ಥಾನಕ್ಕೆ ಉಮೇದುವಾರರಾಗಿದ್ದವರ ಪೈಕಿ ಇಬ್ಬರು ಅದಕ್ಕೆ ಎಲ್ಲಾ ರೀತಿಯಲ್ಲಿಯೂ ಅರ್ಹರಾಗಿದ್ದರು. ಅವರ ಪೈಕಿ ಒಬ್ಬರು ಇಂಗ್ಲೀಷ್ ಸಾಹಿತ್ಯದಲ್ಲಿ ವಿದ್ವಾಂಸರೂ ಇನ್ನೊಬ್ಬರೂ ಭೌತಶಾಸ್ತ್ರ, ಗಣಿತಶಾಸ್ತ್ರಗಳಲ್ಲಿ ಪರಿಣತರೂ ಆಗಿದ್ದರು. ರಂಗಾಚಾರ್ಲುರವರು ಭೌತಶಾಸ್ತ್ರ, ಮತ್ತು ಗಣಿತಶಾಸ್ತ್ರಗಳಲ್ಲಿ ಪರಿಣತರಾಗಿದ್ದವರನ್ನು ಆ ಹುದ್ದೆಗೆ ಆರಿಸಿದರು. ಉನ್ನತ ವಿದ್ಯಾಭ್ಯಾಸದ ಹಂತದಲ್ಲಿ ವೈಜ್ಞಾನಿಕ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು ಎಂಬುದು ಅವರ ಅಭಿಪ್ರಾಯವಾಗಿದ್ದುದರಿಂದ ಅವರು ಹೀಗೆ ಮಾಡಿದರು. ಹೀಗೆ ಸೆಂಟ್ರಲ್ ಕಾಲೇಜಿನ ಮುಖ್ಯಸ್ಥರಾದ ಜಾನ್ ಕುಕ್‌ರವರು ಅದರ ಪ್ರಸಿದ್ಧ ಶಾಲಾಧ್ಯಕ್ಷರಲ್ಲಿ ಒಬ್ಬರೆಂದು ಪರಿಗಣಿತರಾಗಿದ್ದಾರೆ. ಲಂಡನ್ನಿನ ಜೆ. ಬಿ. ಥಾಲ್‌ಮರ್ಸ್ ಎಂಬ ವಾಸ್ತುಶಿಲ್ಪಿಯಿಂದ ರಂಗಾಚಾರ್ಲುರವರು ಬಾವಿಗಳಿಂದ ನೀರು ತೆಗೆಯುವ ಯಂತ್ರಗಳ, ಇಟ್ಟಿಗೆ ತಯಾರಿಸುವ ಯಂತ್ರಗಳ ಮತ್ತು ಶಕ್ತಿಚಾಲಿತ ಗರಗಸಗಳ ನಕಾಶೆಗಳನ್ನೂ, ಅವುಗಳಿಗೆ ಆಗಬಹುದಾದ ಬೆಲೆಯ ವಿವರಗಳನ್ನೂ ತರಿಸಿಕೊಂಡಿದ್ದರು.

ಯೂರೋಪಿಯನ್ನರಿಗೂ, ಆಂಗ್ಲೋ ಇಂಡಿಯನ್ನರಿಗೂ ಪ್ರತ್ಯೇಕವಾಗಿ ಒಂದು ನಗರವನ್ನು ಈ ದೇಶದಲ್ಲಿ ಮೊದಲು ಸ್ಥಾಪಿಸಿದವರು ರಂಗಾಚಾರ್ಲುರವರು. ಈ ಪಂಗಡಗಳನ್ನು ಯೂರೋಪಿಯನ್ನರು ತಿರಸ್ಕಾರದಿಂದ ಕಾಣುತ್ತಿದ್ದರು. ಭಾರತೀಯರು ಅವರನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಹೀಗೆ ಅವರ ಪರಿಸ್ಥಿತಿ ಶೋಚನೀಯವಾಗಿದ್ದಿತು. ೧೮೭೯ರಲ್ಲಿ ಸಂಸ್ಥಾನದಲ್ಲಿ ಯೂರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ನರ ಒಂದು ಸಂಘವನ್ನು ಸ್ಥಾಪಿಸಲಾಯಿತು. ಈ ಪಂಗಡಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದೂ ಅವರು ಉದ್ಯೋಗ ವ್ಯವಸಾಯಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಕೊಡುವುದೂ ಈ ಸಂಘದ ಉದ್ದೇಶವಾಗಿದ್ದಿತು. ಜುಲೈ ೧೮೮೧ರಲ್ಲಿ ಮೈಸೂರು ಸರ್ಕಾರದವರು ಬೆಂಗಳೂರಿಗೆ ಸಮೀಪದಲ್ಲಿ ಈ ಪಂಗಡಗಳು ಇರುವುದಕ್ಕಾಗಿ ಒಂದು ಪಟ್ಟಣವನ್ನು ಕಟ್ಟಲು ೪೦೦೦ ಎಕರೆಗಳನ್ನು ಮಂಜೂರು ಮಾಡಿದರು. ಈ ಪಟ್ಟಣವೇ "ವೈಟ್ ಫೀಲ್ಡ್". ರಂಗಾಚಾರ್ಲುರವರು ೧೮೮೨ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. ಈ ಪಂಗಡಗಳವರ ಪೈಕಿ ಯಾರಿಗೆ ಉದ್ಯೋಗದ ಆವಶ್ಯಕತೆ ಇದೆಯೋ ಅವರಿಗೆ ವಸತಿಗಳನ್ನೂ ಮತ್ತು ವ್ಯವಸಾಯೋಪಕರಣಗಳನ್ನೂ

ಕೈಗೊಳ್ಳುವುದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸುವುದೇ ಹೀಗೆ ಈ ವಿಸ್ತಾರವಾದ ಪ್ರದೇಶವನ್ನು ಮಂಜೂರು ಮಾಡಿದ್ದರ ಉದ್ದೇಶ.

ಈ ಪ್ರಯೋಗ ಯಶಸ್ವಿಯಾದರೆ ದೇಶದ ವ್ಯವಸಾಯ ಮತ್ತು ಉದ್ಯಮ ಕ್ಷೇತ್ರಗಳ ಮೇಲೆ ಪ್ರಭಾವ ಉಂಟಾಗುವುದೆಂದು ನಿರೀಕ್ಷಿಸಲಾಗಿದೆ. ಏಕೆಂದರೆ ವಿದೇಶಗಳಲ್ಲಿ ವ್ಯವಸಾಯಾಭಿವೃದ್ಧಿಗೆ ಸಂಬಂಧಿಸಿದಂತೆ ಕೈಗೊಳ್ಳಲಾದ ವಿವಿಧ ಕ್ರಮಗಳನ್ನು ಈ ಪಂಗಡಗಳು ಬೇಗನೆ ಅಳವಡಿಸಿಕೊಳ್ಳಬಲ್ಲವು. ಹೀಗೆ ಅವರು ಅವನ್ನು ಕಾರ್ಯತಃ ಮಾಡಿ ತೋರಿಸಿ ಅವು ಯಶಸ್ವಿ ಎಂದು ತಿಳಿದು ಬಂದರೆ ಜನ ಸಾಮಾನ್ಯರು ಅವನ್ನು ಅನುಸರಿಸುವರು ಎಂದು ಆ ಭಾಷಣದಲ್ಲಿ ಅವರು ಹೇಳಿದರು.

ರಂಗಾಚಾರ್ಲುರವರು ರಾಜ್ಯದ ಆರ್ಥಿಕಾಭಿವೃದ್ಧಿಗಾಗಿಯೂ, ಆಡಳಿತದಲ್ಲಿ ಮಿತವ್ಯಯವನ್ನು ಸಾಧಿಸುವದಕ್ಕಾಗಿಯೂ ಕೈಗೊಂಡ ಕ್ರಮಗಳ ಸತ್ಪರಿಣಾಮವು ಸ್ವಲ್ಪ ಕಾಲದಲ್ಲಿಯೇ ಕಂಡುಬಂದಿತು. ಧಾತುಈಶ್ವರ ಕ್ಷಾಮದಿಂದ ಸಂಸ್ಥಾನದ ಅರ್ಥ ವ್ಯವಸ್ಥೆಗೆ ಆಘಾತ ಉಂಟಾಗುವುದಕ್ಕೆ ಮುಂಚೆ ೧೮೭೪-೭೫ರಲ್ಲಿ, ರಂಗಾಚಾರ್ಲುರವರ ದಿವಾನಗಿರಿಯ ಮೊದಲ ವರ್ಷ ೧೮೮೦–೮೧ರಲ್ಲಿ ಮತ್ತು ದಿವಾನಗಿರಿಯ ಎರಡನೆಯ ವರ್ಷ ೧೮೮೧–೮೨ರಲ್ಲಿ ಸಂಸ್ಥಾನದ ಆಯವ್ಯಯದ ಅಂಕಿ ಅಂಶಗಳಿಂದ ಈ ವಿಷಯ ವ್ಯಕ್ತವಾಗುತ್ತದೆ :—

| | ೧೮೭೪—೭೫ | ೧೮೮೦—೮೧ | ೧೮೮೧—೮೨ |
|---|---|---|---|
| ಆದಾಯ (ರೂಪಾಯಿಗಳು) | ೧,೦೯,೫೦,೦೦೦ | ೧,೦೧,೦೦,೦೦೦ | ೧,೦೮,೫೦,೯೯೧ |
| ಖರ್ಚು (ರೂಪಾಯಿಗಳು) | ೧,೦೯,೫೦,೭೬೦ | ೧,೦೦,೯೬,೨೮೧ | ೧,೧೯,೩೩,೧೫೭ |

ರಂಗಾಚಾರ್ಲುರವರು ಕೇವಲ ೧ವರ್ಷ ೧೦ ತಿಂಗಳು ಸಂಸ್ಥಾನದ ದಿವಾನರಾಗಿದ್ದರು. ಆಹಾರ ನಿದ್ರೆಗಳನ್ನೂ ನಿರ್ಲಕ್ಷಿಸಿ ಅವಿಶ್ರಾಂತರಾಗಿ ಈ ಅವಧಿಯಲ್ಲಿ ಅವರು ದುಡಿದರು. ಈ ಅವಿಶ್ರಾಂತವಾದ ದುಡಿಮೆಯಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಯಿತು. ಹೀಗೆ ತನುಮನಗಳನ್ನು ಸವೆಸಿ ರಂಗಾಚಾರ್ಲುರವರು ಜನಹಿತಕಾರಿಯೂ, ಪ್ರಗತಿಪರವೂ ಆದ ಆಡಳಿತಕ್ಕೆ ಭದ್ರವಾದ ಅಡಿಪಾಯವನ್ನು ನಿರ್ಮಿಸಿದರು.

ಅಧ್ಯಾಯ 8

# ರಾಜ್ಯಾಂಗಬದ್ಧ ಸರ್ಕಾರದ ಅಸ್ತಿಭಾರ

ರಂಗಾಚಾರ್ಲುರವರಿಗೆ ರಾಜ್ಯಾಡಳಿತ ಜನಾಭಿಪ್ರಾಯಕ್ಕೆ ಅನುಗುಣವಾಗಿ ನಡೆಯಬೇಕೆಂಬ ಗಾಢವಾದ ನಂಬಿಕೆ ಇದ್ದಿತು. ಪ್ರಜಾಭಿಪ್ರಾಯಕ್ಕೆ ತಕ್ಕ ಮನ್ನಣೆ ಕೊಡದೆ ಆಡಳಿತವನ್ನು ನಡೆಸುವದರಿಂದ ಆಗುವ ದುಷ್ಪರಿಣಾಮಗಳು ಏನೆಂಬುದರ ಅರಿವು ಅವರಿಗೆ ಚೆನ್ನಾಗಿದ್ದಿತು. ಆದ್ದರಿಂದ ಸರ್ಕಾರವು ಅನೇಕ ಕಠಿಣ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಹೊಸ ರಾಜ್ಯದ ಆಡಳಿತ ಯಂತ್ರವನ್ನು ವ್ಯವಸ್ಥೆಗೊಳಿಸುವ ಗುರುತರವಾದ ಭಾರವನ್ನು ಅವರು ಹೊತ್ತಿದ್ದರೂ ತಾವು ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಐದು ತಿಂಗಳಲ್ಲಿಯೇ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಇಂತಹ ಸಭೆ ದೇಶದಲ್ಲಿ ಆಗ ಇನ್ನೆಲ್ಲೂ ಇರಲಿಲ್ಲ. ಅವರು ೨೫ನೇ ಮಾರ್ಚ್ ೧೮೮೧ರಲ್ಲಿ ರಾಜ್ಯದ ಎಲ್ಲ ಭಾಗಗಳಿಂದಲೂ ಪ್ರಮುಖರಾದ ರೈತರನ್ನೂ, ವರ್ತಕರನ್ನೂ ಕರೆಸಿಕೊಂಡು ಒಂದು ಸಭೆಯನ್ನು ಏರ್ಪಡಿಸಿದರು. ಸಾರ್ವಜನಿಕ ವಿಷಯಗಳನ್ನು ಚರ್ಚಿಸುವುದೂ, ಆಡಳಿತದ ವಿಷಯಗಳಲ್ಲಿ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದೂ ಆ ಸಭೆಯ ಉದ್ದೇಶವಾಗಿದ್ದಿತು. ಈ ಸಭೆಯಲ್ಲಿಯೇ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ತೆಗೆದುಕೊಂಡದ್ದು. ೨೫ನೇ ಆಗಸ್ಟ್ ೧೮೮೧ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಪ್ರಜಾಪ್ರತಿನಿಧಿ ಸಭೆಯ ಸ್ವರೂಪವನ್ನೂ, ಅದರ ಕಾರ್ಯವ್ಯಾಪ್ತಿಯನ್ನೂ ಅದರಲ್ಲಿ ನಿರೂಪಿಸಲಾಯಿತು. ಆ ಆಜ್ಞೆಯಲ್ಲಿ ಹೀಗೆ ಹೇಳಿದೆ :— “ಮಹಾರಾಜರು, ತಮ್ಮ ಸರ್ಕಾರವು ಸಂಸ್ಥಾನದ ಆಡಳಿತವನ್ನು ನಡೆಸುವುದಕ್ಕಾಗಿ ಕೈಗೊಂಡ ಕ್ರಮಗಳು ಯಾವ ಅಭಿಪ್ರಾಯ ಉದ್ದೇಶಗಳಿಂದ ಕೈಗೊಳ್ಳಲ್ಪಟ್ಟಿವೆ ಎಂಬುದು, ಯಾರ ಹಿತಕ್ಕಾಗಿ ಅವನ್ನು ರೂಪಿಸಿದೆಯೋ ಆ ಪ್ರಜಾಜನರಿಗೆ ಇನ್ನೂ ಚೆನ್ನಾಗಿ ತಿಳಿಯಬೇಕೆಂದು, ಅವರು ಅದನ್ನು ಅರ್ಥ ಮಾಡಿಕೊಳ್ಳಬೇಕೆಂದು ಇಚ್ಛೆಯುಳ್ಳವರಾಗಿದ್ದಾರೆ. ಸಂಸ್ಥಾನದ ಎಲ್ಲ ಭಾಗಗಳಿಂದಲೂ ಬಂದ ಪ್ರಮುಖರಾದ ಜಮೀನ್ದಾರರ ಮತ್ತು ವರ್ತಕರ ವಾರ್ಷಿಕ ಸಭೆಯನ್ನು ಸೇರಿಸಿ ಅದರ ಮುಂದೆ ದಿವಾನರು ಹಿಂದಿನ ವರ್ಷದ ಆಡಳಿತ ಕ್ರಮ

ಗಳ ಫಲಿತಾಂಶಗಳನ್ನೂ, ಮುಂದಿನ ವರ್ಷದ ಕಾರ್ಯಕ್ರಮುವನ್ನೂ ನಿರೂಪಿಸುವುದರಿಂದ ಈ ಉದ್ದೇಶವನ್ನು ಸಾಧಿಸುವುದರಲ್ಲಿ ಮೊದಲ ಹೆಜ್ಜೆಯನ್ನು ಇಟ್ಟಂತಾಗುತ್ತದೆಂಬುದು ಮಹಾರಾಜರ ಅಭಿಪ್ರಾಯವಾಗಿದೆ. **ಇಂತಹ ವ್ಯವಸ್ಥೆ ಜನಗಳಿಗೆ ಸರ್ಕಾರದೊಂದಿಗೆ ನೇರವಾದ ಸಂಬಂಧ ಕಲ್ಪಿಸಿ ಸರ್ಕಾರದ ಅಭಿಪ್ರಾಯಗಳ ಮತ್ತು ಕಾರ್ಯಗಳ ವಿಷಯ ಅವರಲ್ಲಿರಬಹುದಾದ ತಪ್ಪುತಿಳುವಳಿಕೆಯನ್ನು ಹೋಗಲಾಡಿಸುವುದಲ್ಲದೇ ಸರ್ಕಾರದ ಹಿತಾಸಕ್ತಿಗಳೂ ಪ್ರಜಾಜನರ ಹಿತಾಸಕ್ತಿಗಳೂ ಒಂದೇ ಎಂದು ಅವರಿಗೆ ಮನವರಿಕೆಯಾಗುವಂತೆ ಮಾಡುವುದು.** § ಈ ವಾರ್ಷಿಕ ಸಭೆಯನ್ನು ದಸರಾ ಉತ್ಸವ ಮುಗಿದ **ಕೂಡಲೆ ಮೈಸೂರಿನಲ್ಲಿ ನಡೆಸುವುದು** ಅನುಕೂಲಕರವಲ್ಲದೆ ಆ ಉತ್ಸವದ **ಕಾರಣ**ದಿಂದ ಈ ಸಭೆಗೆ ಆಹ್ವಾನಿತರಾದವರು ಬರುವುದಕ್ಕೆ ಹೆಚ್ಚಿನ ಆಕರ್ಷಣೆಯೂ ಇರುತ್ತದೆ.''

ಪ್ರಜಾಪ್ರತಿನಿಧಿ ಸಭೆಯ ಮೊದಲನೆಯ ಅಧಿವೇಶನವು ೭ನೆಯ ಅಕ್ಟೋಬರ್ ೧೮೮೧ರಲ್ಲಿ ನಡೆಯಿತು. ಈ ಸಭೆಗೆ ೧೪೪ ಜನ ಸದಸ್ಯರು ಆಗಮಿಸಿದ್ದರು. ಅವರನ್ನೆಲ್ಲಾ ಜಿಲ್ಲಾಧಿಕಾರಿಗಳು ಆರಿಸಿದ್ದರು. ಈ ಸಭೆಯಲ್ಲಿ ಭಾಗವಹಿಸುವ ಅಥವಾ ಭಾಗವಹಿಸದಿರುವ ಸ್ವಾತಂತ್ರ್ಯವನ್ನು ಈ ಸದಸ್ಯರಿಗೆ ಕೊಡಲಾಗಿದ್ದಿತು. ಸಂಸ್ಥಾನದ ಎಲ್ಲ ಜಿಲ್ಲೆಗಳಿಂದ ಅವರನ್ನು ಆರಿಸಲಾಗಿದ್ದಿತು. ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಸದಸ್ಯರ ಪೈಕಿ ಅಥವಾ ಜಿಲ್ಲೆಯ ಇತರ ವ್ಯಕ್ತಿಗಳ ಪೈಕಿ ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಅಧಿಕಾರವನ್ನು ಕೊಡಲಾಗಿದ್ದಿತು. ಪ್ರತಿ ತಾಲ್ಲೂಕಿನಿಂದಲೂ ಒಬ್ಬರು ಅಥವಾ ಇಬ್ಬರು ಭೂಮಾಲೀಕರನ್ನು ಜಿಲ್ಲಾಧಿಕಾರಿಯು ನೇಮಕಮಾಡುತ್ತಿದ್ದರು. ಇವರು ಭೂಮಾಲೀಕರ ಪ್ರತಿನಿಧಿಗಳಾಗಿದ್ದರು. ಹೀಗೆ ಜಿಲ್ಲಾಧಿಕಾರಿಯಿಂದ ಆರಿಸಲ್ಪಟ್ಟವರು ತಿಳುವಳಿಕಸ್ಥರೂ ತಮ್ಮ ಸ್ಥಳದಲ್ಲಿ ಪ್ರಭಾವಶಾಲಿಗಳೂ ಆಗಿರಬೇಕಾಗಿದ್ದಿತು. ಪ್ರತಿ ಜಿಲ್ಲೆಯಿಂದಲೂ ವರ್ತಕ ವರ್ಗವನ್ನು ಪ್ರತಿನಿಧಿಸುವುದಕ್ಕಾಗಿ ೩ ಅಥವಾ ೪ ಜನ ಪ್ರಮುಖರಾದ ವರ್ತಕರನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯು ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳಾಗಿ ನಿಯಮಿಸುತ್ತಿದ್ದರು.

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಕಳೆದ ವರ್ಷದ ಆಡಳಿತದ ಬಗೆಗೆ ವರದಿಯನ್ನೂ, ಮುಂದಿನ ವರ್ಷ ಸರ್ಕಾರವು ಕೈಗೊಳ್ಳಬೇಕೆಂದಿರುವ ಕ್ರಮಗಳ ಸ್ಥೂಲ ರೂಪರೇಷೆಗಳನ್ನೂ ದಿವಾನರು ಈ ಸಭೆಯ ಮುಂದಿಡುತ್ತಿದ್ದರು. ತಮ್ಮ ಅಭಿಪ್ರಾಯಗಳನ್ನೂ ಸಲಹೆಗಳನ್ನೂ ನೀಡುವುದೂ, ಜನಗಳ ಕುಂದುಕೊರತೆಗಳನ್ನೂ ಅವರ ಆವಶ್ಯಕತೆಗಳನ್ನೂ ಸರ್ಕಾರದ ಅವಗಾಹನೆಗೆ ತರುವುದೂ, ಸರ್ಕಾರದ ಕೆಲಸ ಕಾರ್ಯಗಳನ್ನು ವೀಕ್ಷಿಸಿ ವಿಮರ್ಶೆ ಮಾಡುವುದೂ ಪ್ರಜಾಪ್ರತಿನಿಧಿಸಭೆಯ ಸದಸ್ಯರ ಕಾರ್ಯವಾಗಿದ್ದಿತು.

ಸಂಸ್ಥಾನದಲ್ಲಿ ವಾತಾವರಣ ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಗೆ ಅನುಕೂಲವಾಗಿರಲಿಲ್ಲ. ಇಂತಹ ನವೀನ ಸಂಸ್ಥೆಗೆ ವಿರೋಧ ಪ್ರಬಲವಾಗಿದ್ದಿತು. ಅವಿದ್ಯಾವಂತರೇ ಹೆಚ್ಚಾಗಿದ್ದ ಸಂಸ್ಥಾನದಲ್ಲಿ ಇಂತಹ ಪ್ರತಿನಿಧಿ ಸಭೆಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ತಕ್ಕ ಪೂರ್ವಸಿದ್ಧತೆ ಜನರಿಗೆ ಇರಲಿಲ್ಲವೆಂದು ದಿವಾನರ ವಿರೋಧಿಗಳು ವಾದಿಸಿದರು. ಪ್ರಜಾಪ್ರತಿನಿಧಿ ಸಭೆ ಬೇಕೆಂದು ಜನ ಕೇಳಲೂ ಇಲ್ಲ, ಅಂತಹ ಸಂಸ್ಥೆಯನ್ನು ನಡೆಸುವ ಅರ್ಹತೆಯೂ ಅವರಿಗಿಲ್ಲ. ದಿವಾನರು ಬೇರೆ ಪ್ರಾಂತ್ಯದಿಂದ ಬಂದವರು. ಅವರು ಜನಸಾಮಾನ್ಯರ ಮೆಚ್ಚುಗೆಯನ್ನು ಸುಲಭವಾಗಿ ಸಂಪಾದಿಸುವುದಕ್ಕೋಸ್ಕರ ಯುವಕರೂ ಅನನುಭವಿಗಳೂ ಆದ ಮಹಾರಾಜರನ್ನು ಇಂತಹ ಅಪಾಯಕರವಾದ ಕಾರ್ಯವನ್ನು ಕೈಗೊಳ್ಳುವಂತೆ ಪ್ರೇರೇಪಿಸಿದ್ದಾರೆ ಎಂದು ಈ ವಿರೋಧಿಗಳು ಹೇಳಿದರು. ದೇಶದಲ್ಲಿ ಎಲ್ಲೂ ಪ್ರಜಾಪ್ರತಿನಿಧಿ ಸಂಸ್ಥೆ ಇಲ್ಲದಿದ್ದರಿಂದ ಈ ಮಾತುಗಳಲ್ಲಿ ತಥ್ಯವಿದೆ ಎಂದು ತೋರುವುದಕ್ಕೆ ಅವಕಾಶವಿದ್ದಿತು.

ರಂಗಾಚಾರ್ಲುರವರಿಗೆ ಜನಸಾಮಾನ್ಯರಲ್ಲಿ ವಿಶೇಷವಾದ ವಿಶ್ವಾಸ ನಂಬಿಕೆಗಳಿದ್ದವು. ಚಿಕ್ಕಂದಿನಲ್ಲಿ ಅವರು ದಾರಿದ್ರ್ಯವನ್ನು ಅನುಭವಿಸಿದವರು. ಆದ್ದರಿಂದ ಸಾಮಾನ್ಯ ಜನರ ಕಷ್ಟಗಳನ್ನೂ, ಕುಂದುಕೊರತೆಗಳನ್ನೂ ಅವರು ಅರಿತಿದ್ದರು. ಅವರಿಗೆ ಬಡವರ, ದೀನದಲಿತರ ಬಗೆಗೆ ಇದ್ದ ಅನುಕಂಪ ಕರುಣೆಗಳು ಸಹಜವಾದವು. ಪುಸ್ತಕಗಳನ್ನೋದಿ ತರ್ಕ, ಚಿಂತನೆಗಳಿಂದ ಮಾತ್ರ ಅವರು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡವರಲ್ಲ. ಆ ನಂಬಿಕೆ ಅವರ ಹೃದಯಾಂತರಾಳದಿಂದ ಬಂದುದು.

ಅವರು ತಮ್ಮ 25 ನೆಯ ವರ್ಷದಲ್ಲಿ ಬರೆದ ಪುಸ್ತಕದಲ್ಲಿ ಸಾರ್ವಜನಿಕ ಅಭಿಪ್ರಾಯದ ಪ್ರಾಮುಖ್ಯತೆಯ ವಿಷಯ ಹೀಗೆ ಹೇಳಿದ್ದಾರೆ:—

"ಈ ಸಾರ್ವಜನಿಕ ಅಭಿಪ್ರಾಯವು ಪ್ರಬಲವಾಗಿ ಅದಕ್ಕೆ ತಪ್ಪನ್ನೆಸಗುವ ಸರ್ಕಾರಿ ಅಧಿಕಾರಿಗಳು ಹೆದರುವಂತೆಯೂ ಜನಗಳ ಏಳಿಗೆಯಲ್ಲಿ ಆಸಕ್ತಿ ವಹಿಸುವ ಅಧಿಕಾರಿಗಳು ಅದರಿಂದ ಪ್ರೋತ್ಸಾಹ ಹೊಂದುವಂತೆಯೂ ಆಗುವವರೆಗೆ ಈ ದುರಾಚಾರಗಳು ಮುಂದುವರೆಯುವುವು." ಆ ಪುಸ್ತಕದಲ್ಲಿ ಅವರು ರಾಜಕೀಯ ಸಂಘಗಳನ್ನೂ, ಇಂಗ್ಲೀಷ್ ಮತ್ತು ಭಾರತೀಯ ಭಾಷೆಗಳಲ್ಲಿ ವೃತ್ತಪತ್ರಿಕೆಗಳನ್ನೂ ಪ್ರಾರಂಭಿಸಬೇಕೆಂದು ಸೂಚಿಸಿದ್ದರು. ಹೀಗೆ ರಂಗಾಚಾರ್ಲುರವರು ಜನಸಾಮಾನ್ಯರಲ್ಲಿ ಗಾಢವಾದ ಪ್ರೀತಿ ವಿಶ್ವಾಸಗಳನ್ನು ಉಳ್ಳವರಾಗಿದ್ದರು. ಸರ್ಕಾರದ ಆಡಳಿತದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ದೊರಕಬೇಕೆಂಬುದರಲ್ಲಿ ಅವರಿಗೆ ಶ್ರದ್ಧೆ ಇದ್ದಿತು. ಇಂಗ್ಲೆಂಡ್ ದೇಶದಲ್ಲಿ ಅಲ್ಲಿಯ ಪ್ರಜಾಪ್ರತಿನಿಧಿ ಸಭೆಯಾದ ಹೌಸ್ ಆಫ್ ಕಾಮನ್ಸಿಗೆ ಸದಸ್ಯರನ್ನು ಚುನಾಯಿಸುವ ಅಧಿಕಾರವು ಕೆಲವರಿಗೆ ಮಾತ್ರ ಸೀಮಿತವಾಗಿದ್ದಿತು. ಆಗತಾನೆ ಅದುವರೆಗೆ ಆ ಹಕ್ಕು ಇಲ್ಲದಿದ್ದ ಹಲವು ಜನವರ್ಗಗಳಿಗೆ ಗ್ಲಾಡ್‌ಸ್ಟನ್‌ರವರು ಅದು ದೊರಕುವಂತೆ ಮಾಡಿದ್ದರು. ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸುವುದರಲ್ಲಿ ಗ್ಲಾಡ್‌ಸ್ಟನ್‌ರವರ ಈ ಸುಧಾರಣೆಯಿಂದಲೂ ರಂಗಾಚಾರ್ಲುರವರು ಉತ್ತೇಜನಗೊಂಡಿರಬೇಕು.

ಪ್ರಜೆಗಳಿಗೆ ಸರ್ಕಾರಕ್ಕೆ ನೇರವಾದ ಸಂಪರ್ಕವಿಲ್ಲದಿದ್ದರೆ ಅವರ ಕಷ್ಟಗಳೇನು, ಕುಂದುಕೊರತೆಗಳೇನು ಎಂಬುದು ಸರ್ಕಾರಕ್ಕೆ ಗೊತ್ತಾಗುವುದಿಲ್ಲ. ಸರ್ಕಾರವು ಕೈಗೊಳ್ಳತಕ್ಕ ಕ್ರಮಗಳು ಪ್ರಜಾಜನರಿಗೆ ಸಮ್ಮತವಾಗಿದೆಯೇ ಎಂದು ತಿಳಿದು ಬರುವುದು ಕಷ್ಟ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ದೊರೆಗಳಾಗಿದ್ದಾಗ ಜನಗಳ ಇಚ್ಛೆಗೆ ವಿರುದ್ಧವಾದ ಕ್ರಮಗಳನ್ನು ಕೈಗೊಂಡಾಗ ಅಸಮಾಧಾನ ಹರಡಿ ಕೊನೆಗೆ ಅದು ದಂಗೆಯಲ್ಲಿ ಪರ್ಯವಸಾನವಾಯಿತು. ಇದನ್ನೇ ಕಾರಣ ಮಾಡಿಕೊಂಡು ಬ್ರಿಟಿಷರು ಮೈಸೂರು ಸಂಸ್ಥಾನವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇಂತಹ ವಿಪತ್ತು ಮತ್ತೆ ಸಂಭವಿಸದಿರಲೆಂಬುದೂ, ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಜಾಮುಖಂಡರು ಜನಾಭಿಪ್ರಾಯವನ್ನು ಪ್ರತಿಬಿಂಬಿಸುವುದರಿಂದ ಸರ್ಕಾರ ಜನಗಳ ಇಷ್ಟಾನಿಷ್ಟಗಳನ್ನು ಅರಿತುಕೊಂಡು ಆಡಳಿತ ನಡೆಸುವುದಕ್ಕೆ ಅವಕಾಶ ಉಂಟಾಗುವುದೆಂಬುದೂ ರಂಗಾಚಾರ್ಲುರವರ ಅಭಿಪ್ರಾಯವಾಗಿದ್ದಿತು.

ಜನಗಳಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನಗಳು ಮೂಡಿ ಅವರಲ್ಲಿ ತಮ್ಮತನದ ಅರಿವುಂಟಾಗಬೇಕು. ಜನಜೀವನದಲ್ಲಿ ಕಂಡುಬರುತ್ತಿದ್ದ ಅನೈಕ್ಯ, ದುರ್ಬಲತೆ, ಶೈಥಿಲ್ಯಗಳು ಅಳಿದು ಪ್ರಬುದ್ಧವೂ, ಪ್ರಬಲವೂ ಐಕಮತ್ಯವುಳ್ಳದ್ದೂ ಆದ ಜನಾಂಗದ ಉದಯವಾಗಬೇಕು. ಪ್ರಜಾಪ್ರತಿನಿಧಿ ಸಭೆ ಈ ಉದ್ದೇಶಗಳನ್ನು ಸಾಧಿಸುವುದಕ್ಕೆ ತಕ್ಕ ಸಾಧನ ಎಂದು ರಂಗಾಚಾರ್ಲುರವರು ನಂಬಿದ್ದರು.

ಮೈಸೂರು ರಾಜ್ಯವನ್ನು ಮಹಾರಾಜರಿಗೆ ವಹಿಸುವುದಕ್ಕೆ ಮುಂಚೆ ಗೋರ್ಡನ್‌ರವರು ಪ್ರತಿನಿಧಿ ಸಭೆಯೊಂದನ್ನು ಅಸ್ತಿತ್ವಕ್ಕೆ ತರುವುದು ಸೂಕ್ತವೆಂದು ಸೂಚಿಸಿದ್ದರು. ಆದರೆ ಭಾರತ ಸರ್ಕಾರವು ಇಂತಹ ಸಭೆಯನ್ನು ಸ್ಥಾಪಿಸುವುದಕ್ಕೆ ಒಪ್ಪಿರಲಿಲ್ಲ. ಇಂತಹ ಸಭೆ ದೇಶದಲ್ಲಿ ಯಾವ ಭಾಗದಲ್ಲಿಯೂ ಅಸ್ತಿತ್ವದಲ್ಲಿ ಇಲ್ಲ. ಮೈಸೂರಿನಲ್ಲಿ ಕಂಡುಬರುತ್ತಿದ್ದಂತಹ ಪರಿಸ್ಥಿತಿ ಇದ್ದ ಇನ್ನೆಲ್ಲಿಯೂ ಅಂತಹ ಸಭೆ ಯಶಸ್ವಿಯಾಗಿಲ್ಲ ಎಂಬುದು ಅದರ ಅಭಿಪ್ರಾಯವಾಗಿದ್ದಿತು. ಹೀಗೆ ಅನೇಕ ದೃಷ್ಟಿಗಳಿಂದ ಪ್ರತಿಕೂಲವಾಗಿದ್ದ ಸನ್ನಿವೇಶದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ್ದು ರಂಗಾಚಾರ್ಲುರವರ ಅಸೀಮವಾದ ಧೈರ್ಯವನ್ನು ತೋರಿಸುತ್ತದೆ.

ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದಾಗ ಭಾರತದಲ್ಲಿ ಎಲ್ಲೂ ಅಂತಹ ಸಭೆ ಇರಲಿಲ್ಲ. ಬ್ರಿಟಿಷ್ ಸರ್ಕಾರವಾದರೋ ಅದರ ಆಡಳಿತದಲ್ಲಿದ್ದ ಪ್ರದೇಶಗಳಲ್ಲಿ ಸ್ಥಾನಿಕ ಸ್ವಾಡಳಿತ ಸಂಸ್ಥೆಗಳನ್ನು ಪ್ರಜಾಪ್ರತಿನಿಧಿ ಸಭೆಯು ಸ್ಥಾಪಿತವಾದ ಅನಂತರ ಅಸ್ತಿತ್ವಕ್ಕೆ ತಂದಿತು. ಈ ಸ್ಥಾನಿಕ ಸ್ವಾಡಳಿತ ವ್ಯವಸ್ಥೆಯನ್ನೊಳಗೊಂಡ ರಾಜಪತ್ರವನ್ನು 8ನೇ ಮೇ 1882ರಲ್ಲಿ ಬ್ರಿಟಿಷ್ ಸರ್ಕಾರವು ಹೊರಡಿಸಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸ್ಥಾಪಿಸುವ ಉದ್ದೇಶದಿಂದ ಅಲಾನ್ ಆಕ್ಟೇವಿಯನ್ ಹ್ಯೂಮ್ ಅವರು ೧ನೇ ಮಾರ್ಚಿ ೧೮೮೫ರಲ್ಲಿ ಮನವಿಯನ್ನು ಹೊರಡಿಸಿದರು. ಆ ಸಂಸ್ಥೆಯ ಮೊದಲನೆಯ ಸಭೆಯು ೧೮೮೫ರಲ್ಲಿ ಬೊಂಬಾಯಿನಲ್ಲಿ ಸಮಾವೇಶಗೊಂಡಿತು. ಹೀಗೆ ದೇಶದ ಸ್ವಾತಂತ್ರ್ಯ ಚಳುವಳಿಯ ದಿಗ್ದರ್ಶನ ಮಾಡಿದ ರಾಷ್ಟ್ರೀಯ ಸಭೆಯೂ ಕೂಡ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ನಾಲ್ಕು ವರ್ಷಗಳ ಮೇಲೆ ಅಸ್ತಿತ್ವಕ್ಕೆ ಬಂದಿತು.

ಪ್ರಜಾರಾಜ್ಯದ, ಪ್ರಜಾಧಿಕಾರದ ಕಲ್ಪನೆ ಆಗ ಭಾರತದಲ್ಲಿ ಹೊಸದು. ಹೀಗಿರುವಾಗ ರಾಜ್ಯಾಡಳಿತಕ್ಕೆ ಸಹಕಾರಿಯಾಗಬಲ್ಲ ಪ್ರಜಾಪ್ರತಿನಿಧಿಗಳ ಸಭೆ

ಯನ್ನು ಅಸ್ತಿತ್ವಕ್ಕೆ ತರಬೇಕೆಂಬ ಅಭಿಪ್ರಾಯ ಅಂದಿನ ರಾಜಕೀಯ ಸನ್ನಿವೇಶದಲ್ಲಿ ಕ್ರಾಂತಿಕರವಾದ ಅಭಿಪ್ರಾಯವೆಂದೇ ಹೇಳಬೇಕು. ಪ್ರಸಕ್ತಪರಿಸ್ಥಿತಿಯು, ವರ್ತಮಾನ ಕಾಲದ ಚಕ್ರವ್ಯೂಹವನ್ನು ಭೇದಿಸಿ, ರಾಜ್ಯಕ್ಕೆ ದೇಶಕ್ಕೆ ಹಿತಕಾರಿಯಾಗಬಲ್ಲ ಸಂಸ್ಥೆಗಳನ್ನು ಯೋಜಿಸಬಲ್ಲವರು, ಕಟ್ಟಬಲ್ಲವರು ರಾಜ್ಯಶಿಲ್ಪಿಗಳು. ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ್ದರಿಂದ ರಂಗಾಚಾರ್ಲುರವರು ತಾವು ಈ ರಾಜನೀತಿಜ್ಞರ ವರ್ಗಕ್ಕೆ ಸೇರಿದವರೆಂಬುದನ್ನು ತೋರಿಸಿಕೊಟ್ಟರು.

ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ ಅಕಾಲಿಕವಾದುದು ಎಂಬ ವಾದಕ್ಕೆ ರಂಗಾಚಾರ್ಲುರವರು ಆ ಸಭೆಯ ಎರಡನೆಯ ಅಧಿವೇಶನದಲ್ಲಿ ತಾವು ಮಾಡಿದ ಭಾಷಣದಲ್ಲಿ ಹೀಗೆ ಉತ್ತರ ಕೊಟ್ಟಿದ್ದಾರೆ :—

" ಜನಸಾಮಾನ್ಯರಲ್ಲಿ ಹೆಚ್ಚಿನಮಟ್ಟದ ವಿದ್ಯಾಭ್ಯಾಸ ಹರಡಿದಲ್ಲದೇ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವುದಿಲ್ಲ ಎನ್ನುವುದಾದರೆ ಅದಕ್ಕಾಗಿ ನಾವು ಎಂದೆಂದಿಗೂ ಕಾಯುತ್ತಿರಬೇಕಾದೀತು. ಈ ಮಧ್ಯೆ ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟ ಜನರು ಅದರ ಅಡಿಯಲ್ಲಿ ಕಳೆದ ಒಂದೊಂದು ವರ್ಷವೂ ಪ್ರತಿನಿಧಿ ಸಂಸ್ಥೆಗಳನ್ನು ನಡೆಸುವುದಕ್ಕೆ ಹೆಚ್ಚುಹೆಚ್ಚು ಅಸಮರ್ಥರಾಗುತ್ತಾರೆ. ಈ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಕೆಲವರಾದರೂ ವಿದ್ಯಾವಂತರಿರುವುದು ಖಂಡಿತ. ಅವರು ತಮ್ಮ ಜೊತೆಯವರಿಗೆ ಸರಿಯಾದ ಮುಖಂಡತ್ವವನ್ನೂ, ಮಾರ್ಗದರ್ಶನವನ್ನೂ ಒದಗಿಸುತ್ತಾರೆ. ಈ ಸಭೆಯಲ್ಲಿರುವ ಬಹು ಸಂಖ್ಯಾತರಾದ ಪ್ರತಿನಿಧಿಗಳಲ್ಲಿ ಅಗತ್ಯವಾಗಿರುವುದು ಸಾಮಾನ್ಯ ಪರಿಜ್ಞಾನ, ವ್ಯವಹಾರ ಜ್ಞಾನಗಳು. ನಮ್ಮ ಹಿಂದಿನ ಸಭೆಯಲ್ಲಿ ತಾವು ನಡೆಸಿದ ಚರ್ಚೆಗಳಲ್ಲಿ ಇವು ಸುವ್ಯಕ್ತವಾಗಿದ್ದವು. ಉದ್ಯಮಗಳಲ್ಲಿಯೂ ಇತರ ವೃತ್ತಿಗಳಲ್ಲಿಯೂ ನಿರತಾಗಿರುವ ಅನುಭವಿಗಳಾದ ಜನರಿಗೆ ಇಂತಹ ಸಾಮಾನ್ಯ ಪರಿಜ್ಞಾನ, ವ್ಯವಹಾರ ಜ್ಞಾನಗಳು ಖಂಡಿತವಾಗಿ ಇರುತ್ತವೆ. ಭಾರತ ಸರ್ಕಾರದವರು ಹೇಳಿದಂತೆ ಆಡಳಿತ ನಿರ್ವಹಣೆಯಲ್ಲಿ ಔಚಿತ್ಯ ಜ್ಞಾನವುಳ್ಳವರೂ, ಸಮರ್ಥರೂ, ಪ್ರಜೆಗಳಿಗೆ ಅಧಿಕಾರವನ್ನು ಕೊಡುವ ಪ್ರಯೋಗದಲ್ಲಿ ವಿಶ್ವಾಸವುಳ್ಳವರೂ ಆದ ಅಧಿಕಾರಿಗಳ ಮಾರ್ಗದರ್ಶದಲ್ಲಿ ಜನರ ಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಕರ್ತವ್ಯಗಳನ್ನೂ,

ಜವಾಬ್ದಾರಿಗಳನ್ನೂ ನಿರ್ವಹಿಸುವುದರಿಂದ ಮಾತ್ರವೇ, ಜವಾಬ್ದಾರಿ ಸರ್ಕಾರಕ್ಕೆ ಬೇಕಾದ ನಿಜವಾದ ಶಿಕ್ಷಣ ಅವರಿಗೆ ದೊರಕಬಲ್ಲದು. ದೇಶದ ವಿವಿಧ ಭಾಗಗಳಲ್ಲಿ ಈ ಪ್ರಯೋಗ ಯಾವ ಯಾವ ಮಟ್ಟದಲ್ಲಿ ಯಶಸ್ವಿಯಾಗುತ್ತದೆಂಬುದು ಇಂಗ್ಲಿಷ್ ಶಿಕ್ಷಣ ಎಷ್ಟರಮಟ್ಟಿಗೆ ಹರಡಿದೆ ಎಂಬುದರ ಮೇಲೆ ನಿರ್ಧಾರವಾಗುವುದಿಲ್ಲ. ಅದು ಜನಗಳಲ್ಲಿ ಗ್ರಾಮ ಸ್ವಾಯತ್ತತೆಯ ಅಭಿಪ್ರಾಯ ಎಷ್ಟರಮಟ್ಟಿಗೆ ಇನ್ನೂ ಪ್ರಚಲಿತವಾಗಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ." §

"ಈಗ ನಮ್ಮ ಪ್ರಾಂತ್ಯಕ್ಕೆ ಸಂಬಂಧಪಟ್ಟಂತೆ ನಿಮ್ಮ ಮುಂದೆ ಇಡಬೇಕಾದ ಸಲಹೆ ಸೂಚನೆಗಳನ್ನು ಪ್ರಸ್ತಾಪಿಸುತ್ತೇನೆ. ಮೊದಲು ನಾನು ಹೇಳಬೇಕಾದ ಅಂಶ ಏನೆಂದರೆ ಭಾರತಸರ್ಕಾರದವರು ಅನುಸರಿಸಬೇಕೆಂದು ಉದ್ದೇಶಪಟ್ಟಿರುವ ಮಾರ್ಗಕ್ಕಿಂತ ಭಿನ್ನವಾದ ರೀತಿಯಲ್ಲಿ ನಾವು ಇಲ್ಲಿ ಈ ವಿಷಯದಲ್ಲಿ ನಡೆದುಕೊಂಡಿದ್ದೇವೆ. ಜಿಲ್ಲೆಯ ಜನಗಳ ಪ್ರಮುಖರು ಇರುವ, ನಾವು ಈಗ ಸೇರಿರುವಂತಹ ಪ್ರತಿನಿಧಿ ಸಭೆಯು ಸರ್ಕಾರದೊಂದಿಗೆ ನೇರವಾದ ಸಂಪರ್ಕವನ್ನೇರ್ಪಡಿಸಿಕೊಂಡು ಆಡಳಿತಕ್ರಮಗಳ ವಿಷಯ ಚರ್ಚಿಸುವುದೂ, ಅವುಗಳ ಮೇಲೆ ಪ್ರಭಾವವನ್ನು ಬೀರುವುದೂ, ನಗರಸಭೆಗಳನ್ನೂ ಜಿಲ್ಲೆಗಳಲ್ಲಿರುವ ಸ್ಥಳೀಯ ಸಂಸ್ಥೆಗಳನ್ನೂ ಬಲಪಡಿಸುವುದಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಯ ಕ್ರಮವೆಂದು ನಮ್ಮ ಅಭಿಪ್ರಾಯ. ಸರ್ಕಾರದೊಂದಿಗೆ ಹೀಗೆ ನೇರವಾಗಿ ಸಂಪರ್ಕ ಹೊಂದಿದ ಪ್ರತಿನಿಧಿಗಳು ತಮ್ಮ ಜಿಲ್ಲೆಗಳಿಗೆ ಹಿಂದಿರುಗಿದಾಗ ಅವರ ಸ್ಥಾನಮಾನಗಳು ಹೆಚ್ಚಾಗುತ್ತವೆ. ನಗರ ಸಭೆಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ಮಾಡುವಾಗ ಹೆಚ್ಚಿನ ಮಟ್ಟದಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಅವರು ನಡೆದುಕೊಳ್ಳುತ್ತಾರೆ, ತಮ್ಮ ಜೊತೆಯ ಸದಸ್ಯರನ್ನೂ ನಡೆಸುತ್ತಾರೆ. ಅಲ್ಲದೇ ಈ ಸದಸ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವಂತೆ ಅವರು ಪ್ರೋತ್ಸಾಹಿಸುತ್ತಾರೆ."

"ಅಲ್ಲದೇ ಸಾರ್ವಜನಿಕ ಅಭಿಪ್ರಾಯದ ಪ್ರಭಾವವು ನಗರಸಭೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದು, ಜನಗಳಿಗೆ ಅಷ್ಟೇ ಆಸಕ್ತಿ

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಯಿರುವ ಪೋಲೀಸ್, ಮ್ಯಾಜಿಸ್ಟ್ರೇಟುಗಳು, ನ್ಯಾಯಾಡಳಿತ, ಭೂಕಂದಾಯ ಇಲಾಖೆ, ಹಣಕಾಸಿನ ಆಡಳಿತ ಮುಂತಾದವುಗಳಲ್ಲಿ ಅದರ ಪ್ರಭಾವವಿರಬೇಕಾದ್ದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ರಾಜಕೀಯ ಕಾರಣಗಳಿಗಾಗಿ ಸಾರ್ವಜನಿಕರಿಗೆ ತಿಳಿಸಲಾಗದ ವಿಷಯಗಳನ್ನು ಮಾತ್ರ ಅವರಿಂದ ದೂರವಿಡಬೇಕಾಗುತ್ತದೆ."

"ಹೋದ ವರ್ಷ ನಾವು ಸಭೆ ಸೇರಿದಾಗ ನಿಮ್ಮ ಚರ್ಚೆಗಳಲ್ಲಿ ನೀವು ಯಾವುದರಲ್ಲೂ ವಿಪರೀತಕ್ಕೆ ಹೋಗದ ಮಿತವಾದಿಗಳೆಂಬುದೂ, ವ್ಯವಹಾರಜ್ಞರೆಂಬುದೂ ವ್ಯಕ್ತವಾಯಿತು. ಅಲ್ಲದೇ ಉಪಯುಕ್ತವಾದ ಅನೇಕ ಕ್ರಮಗಳೂ ಆವಶ್ಯಕವಾದ ಸುಧಾರಣೆಗಳೂ, ಈ ಚರ್ಚೆಗಳಿಂದ ರೂಪಗೊಂಡವು. ಆದ್ದರಿಂದ ಜನಗಳ ಹಿತಾಸಕ್ತಿಗಳಿಗೆ ನೇರವಾಗಿ ಸಂಬಂಧಿಸಿದ ವಿಷಯಗಳನ್ನು ಕುರಿತು ಕಾರ್ಯತಃ ಸಾಧಿಸಲಾಗುವ ದೃಷ್ಟಿಯಿಂದ ಅವುಗಳನ್ನು ಪರಿಗಣಿಸಿರುವ ನಿಮ್ಮ ಅಭಿಪ್ರಾಯಗಳಿಗೆ ಹೆಚ್ಚಿನ ಬೆಲೆ ಇದೆ. ಭಾರತ ಸರ್ಕಾರದವರು ಈಗ ಪ್ರಾರಂಭಿಸಿರುವ ಸ್ಥಳಿಯ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಕೊಡುವ ಕ್ರಮವು ಪೂರ್ಣವಾಗಬೇಕಾದರೆ ನಗರ ಸಭೆಗಳಲ್ಲೂ, ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಲ್ಲೂ ಚುನಾಯಿತ ಸದಸ್ಯರಿರುವಂತೆ ಮಾಡಿರುವುದನ್ನು ವಿಸ್ತರಿಸಬೇಕು. ಈ ಸ್ಥಾನಿಕ ಸಂಸ್ಥೆಗಳ ಸದಸ್ಯರ ಪೈಕಿ ಕೆಲವರನ್ನು ಪ್ರಾಂತ್ಯಗಳ ವಿಧಾನಸಭೆಯ ಸದಸ್ಯರಾಗಿರುವಂತೆ ಏರ್ಪಡಿಸುವ ಅಥವಾ ಇನ್ನಾವುದಾದರೂ ಕ್ರಮದಿಂದ ಸಾರ್ವಜನಿಕರ ಪ್ರತಿನಿಧಿಗಳು ಆ ಸಭೆಗಳಲ್ಲಿ ಇರುವಂತಾಗುವುದು. ಸಾರ್ವಜನಿಕ ವಿಷಯಗಳ ಬಗೆಗೆ ಈ ಪ್ರತಿನಿಧಿಗಳು ಪ್ರತಿಪಾದಿಸುವ ಅಭಿಪ್ರಾಯಗಳು ಸರ್ಕಾರದ ಗೌರವಪೂರ್ವಕವಾದ ಗಣನೆಗೆ ಅರ್ಹವಾಗತಕ್ಕವಾಗಿವೆ."

ಅನೇಕ ಬಗೆಯ ಅಡ್ಡಿ ಆತಂಕಗಳನ್ನು ಎದುರಿಸಿ, ಬಹು ದೂರಾಲೋಚನೆಯಿಂದ ಪ್ರಾರಂಭಿಸಿದ ಪ್ರಜಾಪ್ರತಿನಿಧಿ ಸಭೆಯು ತನ್ನ ಕಾರ್ಯಗಳನ್ನು ಯಶಸ್ವಿಯಾಗಿ ಮಾಡಲಾರಂಭಿಸಿತು. ರಂಗಾಚಾರ್ಲುರವರು ಅದರ ಬಗೆಗೆ ಇರಿಸಿಕೊಂಡಿದ್ದ ಆಶೋತ್ತರಗಳು ಸಫಲವಾಗುವವೆಂಬ ಸೂಚನೆ ಕಂಡುಬಂದಿತು. ಈ ಸಭೆಯ ಮೊದಲನೆಯ ಅಧಿವೇಶನದಲ್ಲಿ ಪ್ರಜಾಪ್ರತಿನಿಧಿಗಳು ಕಂದಾಯ, ಅರಣ್ಯ ಮತ್ತು ಇತರ ಇಲಾಖೆಗಳಿಗೆ ಸಂಬಂಧಪಟ್ಟ ಕಾನೂನುಗಳ ಪರಿಚಯವನ್ನು ಮಾಡಿಕೊಂಡರಲ್ಲದೆ ತಮ್ಮ ಕುಂದುಕೊರತೆಗಳೇನೆಂಬುದನ್ನು ಸರ್ಕಾರದ ಗಮನಕ್ಕೆ ತಂದರು.

ಅಧಿಕಾರವರ್ಗದ ದುರಹಂಕಾರ, ದಬ್ಬಾಳಿಕೆಗಳನ್ನು ಕಂಡರೆ ರಂಗಾಚಾರ್ಲು ರವರಿಗೆ ತುಂಬಾ ಜುಗುಪ್ಸೆ ಉಂಟಾಗುತ್ತಿದ್ದಿತು. ಅಧಿಕಾರವರ್ಗದ ವಿಷಯ ಅವರು ಹೀಗೆ ಹೇಳಿದ್ದಾರೆ :—

"ಅಧಿಕಾರ ವರ್ಗದ ಪ್ರಭಾವಕ್ಕೆ ಸಿಕ್ಕ ಜನ ತಲೆ ಎತ್ತದಂತಾಗಿದ್ದಾರೆ. ಈ ಪ್ರಭಾವದಿಂದ ಜನರನ್ನು ವಿಮೋಚನೆಗೊಳಿಸಿ ಅವರು ಕೈಗಾರಿಕೋದ್ಯಮಗಳನ್ನು ಸ್ಥಾಪಿಸುವಂತೆ, ಪ್ರಗತಿಪಥದಲ್ಲಿ ನಡೆಯುವಂತೆ ಮಾಡುವುದೇ, ಭಾರತೀಯ ರಾಜನೀತಿಜ್ಞರು ಎದುರಿಸಬೇಕಾದ ದೊಡ್ಡ ಸಮಸ್ಯೆಯಾಗಿದೆ." ಹೊಸ ಸಭೆಯ ಸದಸ್ಯರಾದ ಪ್ರಜಾಪ್ರತಿನಿಧಿಗಳನ್ನು ಕೆಲವು ಅಧಿಕಾರಿಗಳು ಅಗೌರವವಾಗಿ ನಡೆಸಿಕೊಂಡ ಸಂದರ್ಭಗಳೂ ಉಂಟು. ಪ್ರಜಾಪ್ರತಿನಿಧಿ ಸಭೆಯ ಮೊದಲ ಅಧಿವೇಶನದಲ್ಲಿ ಅಧಿಕಾರಿಗಳೊಬ್ಬರು ರೈತರು ಮಂದಮತಿಗಳೆಂದು ವ್ಯಂಗ್ಯವಾಗಿ ಹೇಳಿದರು. ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಂಗಾಚಾರ್ಲುರವರು ಆ ಅಧಿಕಾರಿಯನ್ನು ಖಂಡಿಸಿ ಹೀಗೆ ಹೇಳಿದರು. "ಸರ್ಕಾರಿ ಅಧಿಕಾರಿಗಳು ನಿತ್ಯಗಟ್ಟಲೆಯ ಕಾರ್ಯಗಳನ್ನು ಒಂದು ಮಟ್ಟದ ದಕ್ಷತೆಯಿಂದ ನಿರ್ವಹಿಸಬಲ್ಲರಷ್ಟೆ. ಅವರಿಗೆ ತಾವು ಮಾಡುತ್ತಿರುವ ಕೆಲಸಕ್ಕಿಂತ ತೀರಾ ಬೇರೆಯಾದ ಕಾರ್ಯವನ್ನು ವಹಿಸಿದರೆ ದಿಕ್ಕು ತೋಚದಂತಾಗುತ್ತಾರೆ. ಆದರೆ ರೈತರೂ, ಉದ್ಯಮಿಗಳೂ, ವರ್ತಕರೂ ಸ್ವಾವಲಂಬಿಗಳು, ಅವರು ಮನಸ್ಸು ಅಧಿಕಾರಿಗಳ ಮನಸ್ಸಿಗಿಂತ ವಿಶಾಲವಾದದ್ದು. ಅಧಿಕಾರಿಗಳು ಯಾವುದೋ ಒಂದೆರಡು ಕೆಲಸಗಳನ್ನು ಮಾಡಬಲ್ಲವರಾದರೆ ಇವರು ಅನೇಕ ಬಗೆಯ ಕೆಲಸಗಳನ್ನು ಮಾಡಬಲ್ಲವರಾಗಿದ್ದಾರೆ."

ದಿವಾನರು ಸದಸ್ಯರ ವಿಷಯದಲ್ಲಿ ಅತಿಯಾದ ವಿಶ್ವಾಸವನ್ನು ತೋರಿಸುತ್ತಾ ಅವರಿಗೆ ಇಲ್ಲದ ಸ್ಥಾನಮಾನಗಳನ್ನು ಕೊಟ್ಟರೆ ಸರ್ಕಾರಿ ಅಧಿಕಾರಿಗಳೇ ಅವರಿಗೆ ಲಂಚವನ್ನು ಕೊಡಬೇಕಾದ ಕಾಲ ಬಂದೀತೆಂದು ಇನ್ನೊಬ್ಬ ಅಧಿಕಾರಿಯು ಕಟುವಾಗಿ ನುಡಿದರು. ರಂಗಾಚಾರ್ಲುರವರು ಕೂಡಲೇ "ಜನ ಹಗಲು ರಾತ್ರಿ ಎನ್ನದೆ ಬೆವರು ಸುರಿಸಿ ದುಡಿದು ರಾಜ್ಯವನ್ನು ಸಂಪದ್ಸಮೃದ್ಧವಾಗಿ ಮಾಡುತ್ತಾರೆ. ಅವರು ಸರ್ಕಾರಕ್ಕೆ ತೆರಿಗೆಗಳನ್ನು ಕೊಡುತ್ತಾರೆ. ಅವರು ಕೊಟ್ಟ ತೆರಿಗೆಗಳಿಂದ ತಾನೇ ಅಧಿಕಾರಿಗಳಿಗೆ ಭಾರಿ ಸಂಬಳಗಳು ದೊರಕುವುದು. ಆದರೆ ಈ ಅಧಿಕಾರಿಗಳಲ್ಲಿ ಕೆಲವರಾದರೋ ತಮಗೆ ಬರುವ ಭಾರಿ ಸಂಬಳದಿಂದ ತೃಪ್ತರಾಗದೇ

ಲಂಚರುಷವತ್ತುಗಳಿಗೆ ಕೈನೀಡಿ ಜನರ ರಕ್ತವನ್ನು ಹೀರುತ್ತಾರೆ. ಇಂತಹ ಅಧಿಕಾರಿಗಳು ರೈತರಿಗೆ ಲಂಚರುಷವತ್ತುಗಳನ್ನು ಕೊಡುವ ಕಾಲ ಬರುವುದಾದರೆ ಅಂತಹ ಕಾಲ ಬರಲೆಂದೇ ನಾನು ಹಾರೈಸುತ್ತೇನೆ" ಎಂದರು.

ಪ್ರಜಾಪ್ರತಿನಿಧಿ ಸಭೆಯನ್ನು ತಮ್ಮ ಆಸೆ ಆಕಾಂಕ್ಷೆಗಳಿಗೆ ತಕ್ಕಂತೆ ರೂಪಿಸುವುದಕ್ಕೆ ಮುಂಚೆಯೇ ರಂಗಾಚಾರ್ಲುರವರು ವಿಧಿವಶರಾದರು. ಅವರ ಅನಂತರ ದಿವಾನರಾಗಿ ಬಂದವರಿಗೆ ಪ್ರಜಾಪ್ರತಿನಿಧಿ ಸಭೆಯನ್ನು ಬೆಳೆಸುವುದರಲ್ಲಿ ಅವರಿಗಿದ್ದ ಶ್ರದ್ಧೆ ಆಸಕ್ತಿಗಳು ಇರಲಿಲ್ಲ. ಆದರೆ ಕಾಲಾನುಕ್ರಮದಲ್ಲಿ ಆ ಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳು ಇರುವಂತೆ ಏರ್ಪಡಿಸಿದ್ದರಿಂದಲೂ, ಅದರ ಕಾರ್ಯವ್ಯಾಪ್ತಿ, ಅಧಿಕಾರಗಳನ್ನು ಹೆಚ್ಚಿಸಿದ್ದರಿಂದಲೂ ಅದು ತುಂಬಾ ಯಶಸ್ವಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು.

ಪ್ರಜಾಪ್ರತಿನಿಧಿ ಸಭೆಯ ಕಾರ್ಯವು ದೇಶವಿದೇಶಗಳ ಪ್ರಮುಖ ವ್ಯಕ್ತಿಗಳ ಗಮನವನ್ನು ಸೆಳೆಯಿತು. 1892 ರಲ್ಲಿ ವೈಸರಾಯರಾದ ಲಾರ್ಡ್ ಲ್ಯಾನ್ಸ್‌ಡೌನ್ ರವರು ಮೈಸೂರಿಗೆ ಭೇಟಿಕೊಟ್ಟರು. ಅವರು ಪ್ರಜಾಪ್ರತಿನಿಧಿ ಸಭೆ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದುದನ್ನು ಪ್ರಶಂಸಿಸುತ್ತಾ "ಮಹಾರಾಜರ ರಾಜನೀತಿ ಕೌಶಲ್ಯಕ್ಕೆ ಈ ಸಭೆ ನಿದರ್ಶನವಾಗಿ ಅವರಿಗೆ ಕೀರ್ತಿ ತರುವುದಾಗಿದೆ. ಅದರಲ್ಲಿ ಕೆಲವು ಮಂದಿ ಚುನಾಯಿತ ಪ್ರತಿನಿಧಿಗಳು ಇರುವುದರಿಂದ ಅದರ ಚರ್ಚೆಗಳು ಹೆಚ್ಚು ತೂಕವುಳ್ಳವುಗಳಾಗಿ ಅದು ಮಾಡುವ ಸಲಹೆಗಳನ್ನು ಸರ್ಕಾರ ಹೆಚ್ಚು ಗೌರವದಿಂದ ಸ್ವೀಕರಿಸುವುದೆಂದು ನನಗೆ ಭರವಸೆ ಇದೆ" ಎಂದು ಹೇಳಿದರು.

ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದ ಕೇರ್‌ಹಾರ್ಡಿ ಅವರು 1909 ರಲ್ಲಿ ಮೈಸೂರಿಗೆ ಭೇಟಿಕೊಟ್ಟಾಗ ಪ್ರಜಾಪ್ರತಿನಿಧಿ ಸಭೆಯನ್ನು ಜರ್ಮನಿಯ ರೀಚ್‌ಸ್ಟಾಗ್‌ಗೆ (ಜರ್ಮನಿಯ ಶಾಸನ ಸಭೆ) ಹೋಲಿಸಿದರು, ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದವರ ವಿವೇಕ, ದೂರದೃಷ್ಟಿಗಳನ್ನು ಹೊಗಳಿದರು. ಲಾರ್ಡ್ ಮಾರ್ಲೆಯವರ ಭಾರತ ರಾಜ್ಯಾಂಗದ ತಿದ್ದುಪಾಡಿನ ಯೋಜನೆಯನ್ನು ಪಾರ್ಲಿಮೆಂಟ್ ಚರ್ಚಿಸುತ್ತಿದ್ದಾಗ ಹಾರ್ಡಿಯವರು ಪ್ರಜಾಪ್ರತಿನಿಧಿ ಸಭೆಯ ಕಾರ್ಯವನ್ನು ಪ್ರಶಂಸಿಸಿದರು.

1923 ರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ವಿಧಾನ ಪರಿಷತ್ತುಗಳ ರಚನೆ ಕಾರ್ಯವ್ಯಾಪ್ತಿಗಳಲ್ಲಿ ಆಮೂಲಾಗ್ರವಾದ ಸುಧಾರಣೆಗಳನ್ನು ಮಾಡಿದ ಮೇಲೆ ಅವುಗಳ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಮಹಾರಾಜ ನಾಲ್ಮಡಿ ಕೃಷ್ಣರಾಜ ಒಡೆಯರ್‌ರವರು ಹೀಗೆ ಹೇಳಿದರು. "21 ವರ್ಷಗಳ ಹಿಂದೆ ನಾನು ರಾಜ್ಯಭಾರವನ್ನು ವಹಿಸಿಕೊಂಡ ಮೇಲೆ ಪ್ರಪ್ರಥಮವಾಗಿ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವನ್ನು ಉದ್ಘಾಟನೆ ಮಾಡಿದಾಗ ಹೇಳಿದ ಮಾತು ಗಳನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುತ್ತೇನೆ. ಆಗ ನನ್ನ ಪ್ರಜೆಗಳ ಯೋಗ ಕ್ಷೇಮಕ್ಕೆ ನೆಮ್ಮದಿಗೆ ಈ ಸಭೆಯ ವಾರ್ಷಿಕ ಅಧಿವೇಶನಗಳು ತುಂಬಾ ಉಪಯುಕ್ತ ವಾಗುತ್ತವೆ ಎಂದು ವ್ಯಕ್ತಪಡಿಸಿದ ಆಕಾಂಕ್ಷೆ ಯಥೇಷ್ಟವಾಗಿ ಈಡೇರಿದೆ."

1881 ರಲ್ಲಿ ಮೈಸೂರು ರಾಜ್ಯವನ್ನು ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ಬ್ರಿಟಿಷರು ಹಿಂದಿರುಗಿಸಿದ ಮೇಲೆ ಮೈಸೂರು ಚರಿತ್ರೆ ಸುಗಮ ವಾದ ಪಥದಲ್ಲಿ ಸಾಗಿತು. ರಾಜ್ಯದ ಮುನ್ನಡೆ ಕುಂಠಿತವಾಗುವುದಕ್ಕಾಗಲಿ, ಹಠಾ ತ್ತಾದ ಪರಿವರ್ತನೆಗಳಾಗುವುದಕ್ಕಾಗಲಿ ಅವಕಾಶವಾಗದಂತೆ ಆಡಳಿತ ಸೂತ್ರ ಗಳನ್ನು ನಿರ್ವಹಿಸಲಾಯಿತು. ರಾಜ್ಯಾಂಗ ಶಾಸನವನ್ನೂ, ಆಡಳಿತ ಯಂತ್ರ ವನ್ನೂ ಹೊಸ ಕಾಲಕ್ಕೆ ತಕ್ಕಂತೆ, ಹೊಸ ಅಗತ್ಯಗಳಿಗೆ, ಆಸೆ ಆಕಾಂಕ್ಷೆಗಳಿಗೆ ಅನು ಗುಣವಾಗಿ ಹೊಂದಿಸಿಕೊಳ್ಳುತ್ತ ರಾಜ್ಯವು ಪ್ರಗತಿಪಥದಲ್ಲಿ ಸುಗಮವಾಗಿ ಸಾಗಿತು. ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ರಾಜ್ಯಾಡಳಿತದಲ್ಲಿ ಪ್ರಜೆಗಳಿಗೆ ಸ್ಥಾನವನ್ನು ಕಲ್ಪಿಸಿದುದೇ ಇದಕ್ಕೆ ಕಾರಣ.

ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯೇ ರಂಗಾಚಾರ್ಲುರವರು ದೇಶಕ್ಕೆ ಸಲ್ಲಿಸಿದ ಅತ್ಯಂತ ಮಹತ್ವದ ಕಾಣಿಕೆ.

ಅಧ್ಯಾಯ 9

# ರಾಜ್ಯಶಿಲ್ಪಿ

ರಾಜ್ಯದಲ್ಲಿ ಭದ್ರತೆ, ಶಾಂತಿಗಳನ್ನು ಸ್ಥಾಪಿಸುವುದೂ, ಆರ್ಥಿಕ ಪ್ರಗತಿಯನ್ನು ಸಾಧಿಸುವುದೂ ಎಷ್ಟು ಮುಖ್ಯವೋ ಜನಗಳ ಸಾಮಾಜಿಕ ಪ್ರಗತಿಯನ್ನು ಸಾಧಿಸುವುದೂ ಅಷ್ಟೇ ಮುಖ್ಯ ಎಂದು ರಂಗಾಚಾರ್ಲುರವರು ನಂಬಿದ್ದರು. ಪ್ರಜೆಗಳು ಸಾಮಾಜಿಕ ಅಭ್ಯುದಯವನ್ನು ಸಾಧಿಸುವುದರಿಂದ ಮಾತ್ರವೇ ದೇಶೀಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಸಾರ್ಥಕಗೊಳಿಸಿಕೊಂಡಂತಾಗುವುದೆಂಬುದು ಅವರ ಅಭಿಪ್ರಾಯವಾಗಿದ್ದಿತು. ಬ್ರಿಟಿಷರು ಮೈಸೂರು ಸಂಸ್ಥಾನವನ್ನು ಆಳುತ್ತಿದ್ದಾಗ ಸಾಮಾಜಿಕ ಪ್ರಗತಿಯನ್ನು ಸಾಧಿಸಲಿಲ್ಲ, ಅದು ಅವರ ಆಡಳಿತದಲ್ಲಿದ್ದ ಮುಖ್ಯವಾದ ದೋಷ ಎಂದು ಅವರು ಹೇಳಿದ್ದರು. ಭಾರತವು ಅನೇಕ ಶತಮಾನಗಳಿಂದ ತನ್ನನ್ನು ಕವಿದಿದ್ದ ಜಡತೆಯಿಂದ ಎಚ್ಚೆತ್ತು ಎಲ್ಲ ಕ್ಷೇತ್ರಗಳಲ್ಲೂ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬೇಕು, ಕಾಲಹರಣಕ್ಕೆ ಅವಕಾಶವಿಲ್ಲ ಎಂದು ಪ್ರಜಾಪ್ರತಿನಿಧಿ ಸಭೆಯ ಎರಡನೆಯ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಅವರು ಪ್ರತಿಪಾದಿಸಿದರು. "ಒಟ್ಟು ಪ್ರಪಂಚವೇ ಅದ್ಭುತವಾದ ಪ್ರಗತಿಯನ್ನು ಸಾಧಿಸುತ್ತಿರುವಾಗ ಈ ದೇಶದ 20 ಕೋಟಿ ಜನರು 2,000 ವರ್ಷಗಳ ಹಿಂದಿನ ತಮ್ಮ ಪೂರ್ವಿಕರ ಪದ್ಧತಿಗಳನ್ನೇ ಅನುಸರಿಸುತ್ತಾ ದರಿದ್ರರಾಗಿ ಬದುಕುತ್ತಾ ಕ್ಷಾಮವೋ ಅಥವಾ ಇನ್ನಾವುದಾದರೋ ವಿಪತ್ತು ಒದಗಿದೊಡನೆಯೇ ಕುಗ್ಗಿ ನಿಶ್ಶೇಷ್ಟರಾಗುತ್ತಾ ಇನ್ನೂ ತಮ್ಮ ದೀರ್ಘ ನಿದ್ರೆಯಿಂದ ಎಚ್ಚೆತ್ತುಕೊಳ್ಳದೆ ಎಷ್ಟು ದಿನ ಇರುವುದು. ಈ ಶತಮಾನದ ಆದಿಯಿಂದ ಮಾತ್ರವೇ ಯೂರೋಪಿನಲ್ಲಿ ಜನರು ಯಂತ್ರೋದ್ಯಮದ ಚಾಲಕ ಶಕ್ತಿಯಾಗಿ ಉಗಿಯನ್ನು ಉಪಯೋಗಿಸಲಾರಂಭಿಸಿದರು. ಆಗ ಭಾರತವು ಇಂಗ್ಲೆಂಡಿಗೆ ಬಟ್ಟೆಗಳನ್ನು ರಫ್ತು ಮಾಡುತ್ತಿದ್ದಿತು. ಈಗ ಯೂರೋಪ್ ಮತ್ತು ಅಮೇರಿಕಾ ಖಂಡಗಳಲ್ಲಿರುವ ಮಿಕ್ಕ ರಾಜ್ಯಗಳ ತೀವ್ರವಾದ ಸ್ಪರ್ಧೆ ಇದ್ದರೂ ಇಂಗ್ಲೆಂಡ್ ಪ್ರಪಂಚದ ಬಹು ಭಾಗಕ್ಕೆ ಬಟ್ಟೆಯನ್ನೂ ಇತರ ಸಿದ್ಧ ವಸ್ತುಗಳನ್ನೂ ಪೂರೈಸುತ್ತಿದೆ."

"ಇವೆಲ್ಲಾ ಕೆಲವು ವ್ಯಕ್ತಿಗಳು ಮಾಡಿದ ಭಾರಿ ಸಂಶೋಧನೆಗಳ ಫಲವಲ್ಲ. ಭಾರಿ ಸಂಶೋಧನೆಗಳು ಮಾತ್ರ ಅಧಿಕಾರಿ ವರ್ಗದ ಮನಸ್ಸನ್ನು ಸೆಳೆಯ ಬಲ್ಲವು. ಆದರೆ ಅನೇಕ ವ್ಯಕ್ತಿಗಳು ತಮ್ಮ ವಿವಿಧ ಉದ್ಯೋಗಗಳಲ್ಲಿ ದಿನ ದಿನದ ಕಾರ್ಯವನ್ನು ಮಾಡುವಾಗ ತಮ್ಮ ಬುದ್ಧಿಯನ್ನು ಉಪಯೋಗಿಸಿ ಮಾಡಿದ ಸಣ್ಣ ಸಂಶೋಧನೆಗಳೂ, ಕಾರ್ಯವಿಧಾನ ಯಂತ್ರೋಪಕರಣಗಳಲ್ಲಿ ಮಾಡಿದ ಮಾರ್ಪಾಡುಗಳೂ ಒಟ್ಟು ಸೇರಿ ಇಂತಹ ಅದ್ಭುತವಾದ ಐಶ್ವರ್ಯಕ್ಕೂ, ಒಟ್ಟಿನಲ್ಲಿ ಜನರ ಅಭ್ಯುದಯಕ್ಕೂ ಕಾರಣವಾಗಿವೆ. ಈ ದೇಶದ ಅಗಾಧ ಜನ ಸಮುದಾಯ ಇಂತಹ ಪ್ರಗತಿಯ ಮಾರ್ಗದಲ್ಲಿ ಒಮ್ಮೆ ಕಾಲಿಟ್ಟರೆ ಸಾಧಿಸಲಾಗದುದೇನು ?" ಎಂದು ಅವರು ಆ ಅಧಿವೇಶನದಲ್ಲಿ ಹೇಳಿದರು.

ರಂಗಾಚಾರ್ಲುರವರ ಕಲ್ಪನೆ ಭಾರತದ ಭವಿಷ್ಯತ್ತಿನ ವಿಷಯದಲ್ಲಿ ಏನಿದ್ದಿತ್ತೆಂಬುದು ಅವರ ಈ ಮಾತುಗಳಲ್ಲಿ ಮೂಡಿದೆ. ಅವರಿಗೆ ದೇಶದ ಪರಿಸ್ಥಿತಿ ಏನು ಯಾವುದು ಕಾರ್ಯಸಾಧ್ಯ, ಯಾವ ಕ್ರಮಗಳನ್ನು ಕೈಗೊಂಡರೆ ದೇಶಾಭ್ಯುದಯ ಉಂಟಾಗುತ್ತದೆ ಎಂಬುದರ ಗಾಢವಾದ ಜ್ಞಾನವಿದ್ದಿತು. ರೈತರು ದೇಶದ ಬೆನ್ನೆಲುಬು. ಅವರು ವಿದ್ಯಾವಂತರಾಗಿ ಆಧುನಿಕ ಜಗತ್ತಿನ ಪ್ರಗತಿಯನ್ನು ಅರ್ಥ ಮಾಡಿಕೊಳ್ಳಬಲ್ಲವರಾದರೆ ಮಾತ್ರ ದೇಶದ ಅಭ್ಯುದಯವನ್ನು ಸಾಧಿಸಬಹುದು ಎಂಬುದನ್ನು ಅವರು ಅರಿತಿದ್ದರು. ಆಧುನಿಕ ಜಗತ್ತಿನಲ್ಲಿ ಜನಗಳ ಅಭ್ಯುದಯ ವನ್ನು ಸಾಧಿಸಬೇಕಾದರೆ ವಿದ್ಯೆಯೇ ಪರಮಸಾಧನ ಎಂದು ಅವರು ಹೇಳುತ್ತಿದ್ದರು.

ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸದ ಪ್ರಸಾರದಲ್ಲಿ ಸರ್ಕಾರದ ನೇರ ವಾದ ಹೊಣೆ ಇದೆ ಎಂಬುದು ಅವರ ಅಭಿಪ್ರಾಯವಾಗಿದ್ದಿತು. ಜನಸಾಮಾನ್ಯರಲ್ಲಿ ಅಕ್ಷರಜ್ಞಾನ ಹರಡಿದರೆ ಮಾತ್ರ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧ್ಯ ಎಂದು ಅವರು ನಂಬಿದ್ದರು. ದೇಶಾಭ್ಯುದಯಕ್ಕೆ ವಿದ್ಯಾವಂತರು ಶ್ರಮಿಸ ಬೇಕು ಎಂದು ಅವರು ಹೇಳುತ್ತಿದ್ದರು. 24 ನೇ ಮಾರ್ಚ್ 1882 ರಲ್ಲಿ ಮಹಾ ರಾಜ ಕಾಲೇಜಿನಲ್ಲಿ ಬಹುಮಾನ ವಿತರಣೋತ್ಸವ ನಡೆದಾಗ ಅವರು ಮಾಡಿದ ಭಾಷಣದಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಆ ಸಭೆಯ ಅಧ್ಯಕ್ಷತೆ ಯನ್ನು ಮಹಾರಾಜರು ವಹಿಸಿದ್ದರು. ಮಹಾರಾಜರ ಅಪ್ಪಣೆಯಂತೆ ದಿವಾನರು ಭಾಷಣ ಮಾಡಿದರು. ಆಗ ಅವರು ಹೀಗೆ ಹೇಳಿದ್ದಾರೆ :—"ಆಧುನಿಕ ಪರಿಸ್ಥಿತಿಯಲ್ಲಿ ವಿದ್ಯಾಪ್ರಚಾರ ಕಾರ್ಯವನ್ನು ಪರೋಪಕಾರಶೀಲರಾದ ವ್ಯಕ್ತಿ

ಗಳೇ ಮಾಡಲೆಂದು ಹಿಂದಿನ ಕಾಲದಂತೆ ಬಿಡುವುದಕ್ಕಾಗುವುದಿಲ್ಲ. ಸರ್ಕಾರವು ಸಾರ್ವಜನಿಕ ಶಾಲೆಗಳನ್ನೂ, ಕಾಲೇಜುಗಳನ್ನೂ ನಡೆಸಬೇಕಾಗುತ್ತದೆ. ಆದರೆ ಈ ಶಾಲೆ ಮತ್ತು ಕಾಲೇಜುಗಳು ಸರ್ಕಾರದ ಇಲಾಖೆಯ ಮಟ್ಟಕ್ಕೆ ಇಳಿದು ಕೆಲಸ ಮಾಡಲಾಗದು. ನಿತ್ಯಗಟ್ಟಲೆಯ ಕೆಲಸವನ್ನು ಮಾಡುತ್ತಾ ಪ್ರತಿಫಲಾಪೇಕ್ಷೆಯಿಂದ ಅವುಗಳ ಸಿಬ್ಬಂದಿಯು ಕೆಲಸ ಮಾಡಿದರೆ ಅವುಗಳ ಉದ್ದೇಶ ಸಾರ್ಥಕವಾಗದು. ಹೀಗಾಗದಂತೆ ಎಚ್ಚರಿಕೆ ವಹಿಸಬೇಕು. ದೇಶಾಭಿಮಾನವೂ, ಉದ್ದೇಶಶುದ್ಧತೆಯೂ ಗುರುಶಿಷ್ಯರಲ್ಲಿ ಗಾಢವಾದ ಪ್ರೇಮಾಭಿಮಾನಗಳೂ, ಹಳೆಯ ಕಾಲದ ವಿದ್ಯಾ ಕೇಂದ್ರಗಳಲ್ಲಿ ಕಾಣಬರುತ್ತಿದ್ದವು. ಇವೆಲ್ಲಾ ಇದ್ದರೆ ಮಾತ್ರ ಈಗಿನ ವಿದ್ಯಾ ಸಂಸ್ಥೆಗಳು ಅತ್ಯುನ್ನತ ಮಟ್ಟದ ಯಶಸ್ಸನ್ನು ಪಡೆಯುವುದು ಸಾಧ್ಯ."

## ವಿದ್ಯಾಭ್ಯಾಸ

"ಹಾಗಾದರೆ ಸರ್ಕಾರವು ಈ ಕಾಲೇಜು ಮಟ್ಟದ ಸಂಸ್ಥೆಗಳ ವೆಚ್ಚದ ಒಂದು ಭಾಗವನ್ನು ವಹಿಸಬೇಕಾದರೆ ಈ ಹಣವು ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಟ್ಟ ಕೊಡುಗೆಯಾಗುವುದಿಲ್ಲ. ಆದರೆ ಅದು ಒಟ್ಟು ಜನಾಂಗದ ಅಭಿವೃದ್ಧಿಗಾಗಿ ಕೈಗೊಂಡ ಖರ್ಚಾಗುತ್ತದೆ. **ಅತ್ಯುನ್ನತ ಮಟ್ಟದ ಶಿಕ್ಷಣವನ್ನು ಪಡೆದ ವಿದ್ಯಾವಂತರ ವರ್ಗ ನಾಯಕರಾಗಿಲ್ಲದ ಯಾವ ಜನಾಂಗವೂ ಅಭ್ಯುದಯವನ್ನು ಪಡೆಯಲಾರದು. ಕಾಲೇಜುಗಳು ಇಲ್ಲದೇ ಸರ್ಕಾರಿ ಶಾಲೆಗಳ ವ್ಯವಸ್ಥೆಯು ಸಂಪೂರ್ಣವಾಗದು. ಪ್ರಜಾಸಮುದಾಯದ ಎಲ್ಲ ವರ್ಗಗಳಿಂದ ಬಂದ ವಿದ್ಯಾರ್ಥಿಗಳಿಗೂ ಈ ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ಅವಕಾಶವಿರಬೇಕು. ಸುವ್ಯವಸ್ಥಿತವಾಗಿ ವಿದ್ಯಾರ್ಥಿ ವೇತನಗಳನ್ನು ಕೊಡುವುದರ ಮೂಲಕ ಮೇಧಾವಿಗಳಾದ ಬಡವಿದ್ಯಾರ್ಥಿಗಳೂ ಈ ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವಂತಿರಬೇಕು. ಹೀಗಿದ್ದರೆ ಕೇವಲ ವ್ಯಕ್ತಿಗಳ ಹಿತಸಾಧನೆಯಾಗದೆ ಒಟ್ಟು ಜನಾಂಗದ ಹಿತಸಾಧನೆಯಾಗುತ್ತಿದೆಯೆಂದೇ ಸರ್ಕಾರವು ಭಾವಿಸುತ್ತದೆ."** §

"ವಿದ್ಯಾಭ್ಯಾಸವು ಒಂದು ಗುರಿಯನ್ನು ಮುಟ್ಟಲು ಸಾಧನವಷ್ಟೆ. ರಾಜಕೀಯ ಆಸೆ ಆಕಾಂಕ್ಷೆಗಳು, ಧಾರ್ಮಿಕ ಚಳುವಳಿ ಅಥವಾ ಮಹತ್ತರವಾದ ಕೈಗಾ

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ರಿಕಾ ಕ್ರಾಂತಿಗಳಿಂದ ಜನರಲ್ಲಿ ವಿದ್ಯಾಭ್ಯಾಸವನ್ನು ಹೊಂದಬೇಕೆಂಬ ಆಶೆ ಹುಟ್ಟು ತ್ತದೆ. ಈ ದೇಶದಲ್ಲಿ ವಿದ್ಯಾಭ್ಯಾಸದ ಈಗಿನ ಪರಿಸ್ಥಿತಿಯು ಈ ಮಾತು ಸತ್ಯ ವೆಂಬುದನ್ನು ತೋರಿಸುತ್ತದೆ."

**"ಪ್ರಜಾಸಮುದಾಯದ ಮಹದ್ವರ್ಗವಾದ ರೈತಾಪಿ ಜನರಲ್ಲಿ ವಿದ್ಯೆಯ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುವುದೇ ಇಂದು ಅಗತ್ಯವಾಗಿ ನಡೆಯ ಬೇಕಾಗಿರುವ ಕಾರ್ಯ. ವಿದ್ಯೆಯನ್ನು ಪಡೆಯಬೇಕೆಂಬ ಅಭಿಲಾಷೆ ಅವ ರಲ್ಲಿ ಮೂಡಿದಲ್ಲಿ ಅವರ ಅನ್ನಾಹಾರಗಳಿಗೆ ಹೇಗೆ ಸರ್ಕಾರ ಖರ್ಚು ಮಾಡ ಬೇಕಾಗಿಲ್ಲವೋ ಹಾಗೆಯೇ ಅವರ ವಿದ್ಯಾಭ್ಯಾಸಕ್ಕೂ ಸರ್ಕಾರ ಖರ್ಚು ಮಾಡಬೇಕಾದ್ದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ರೈತಾಪಿವರ್ಗದ ಸ್ಥಾನ ಮಾನಗಳನ್ನು ಹೆಚ್ಚಿಸಬೇಕು. ಅಲ್ಲದೇ ಅವರಿಗೆ ತಮ್ಮ ಪ್ರಾಮುಖ್ಯತೆಯ ಅರಿವುಂಟಾಗಬೇಕು. ಸಂಸ್ಥಾನದ ಆಡಳಿತದಲ್ಲಿ ಪಾತ್ರವಹಿಸುವುದಕ್ಕಾಗಿ ಪ್ರಜಾಪ್ರತಿನಿಧಿಗಳು ವಾರ್ಷಿಕವಾಗಿ ಸೇರುವಂತೆ ಏರ್ಪಡಿಸಿ ಮಹಾರಾಜರ ಸರ್ಕಾರವು ಈ ದೆಸೆಯಲ್ಲಿ ಸ್ವಲ್ಪಮಟ್ಟಿಗೆ ಪ್ರಯತ್ನವನ್ನು ಮಾಡಿದೆ. ಜನ ಗಳಿಗೆ ತಮಗೆ ಸ್ಥಾನಮಾನಗಳಿವೆ ಎಂಬ ಭಾವನೆ ಬಂದಲ್ಲಿ ಓದುಬರಹ ಲೆಕ್ಕಗಳನ್ನಾದರೂ ಕಲಿತುಕೊಳ್ಳುವುದು ಅಪೇಕ್ಷಣೀಯ ಎಂಬ ಭಾವನೆ ಅವರಲ್ಲಿ ಮೂಡುವುದು." §**

"ಪಾಶ್ಚಾತ್ಯ ವಿದ್ಯೆಯಲ್ಲಿ ಜನರಿಗೆ ಉಪಯೋಗಕರವಾಗುವ ವಿಷಯಗಳನ್ನು ಬೋಧಿಸುವುದನ್ನೂ, ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಏಕ ಕಾಲದಲ್ಲಿ ಕೈಗೊಳ್ಳು ವುದು ಅನುಕೂಲಕರವಲ್ಲ. ಈ ಪ್ರಾಥಮಿಕ ಶಿಕ್ಷಣವನ್ನು ಜನಗಳ ಅಭಿಪ್ರಾಯ ಅನುಕೂಲತೆಗಳಿಗೆ ತಕ್ಕಂತೆ ಗ್ರಾಮ ಶಾಲೆಗಳಲ್ಲಿ ಕೊಡುವುದು ಸೂಕ್ತವಾಗಿದೆ. ಹಳ್ಳಿಯಿಂದ ಹಳ್ಳಿಗೆ ತಿರುಗುತ್ತಾ, ಕಾಲಕಾಲಕ್ಕೆ ಜನಗಳಿಗೆ ಉಪಯೋಗಕರವಾದ ವಿಶೇಷ ವಿಷಯಗಳನ್ನು ಆಕರ್ಷಕವಾಗಿ ಬೋಧಿಸುತ್ತಾ, ಅವರಲ್ಲಿ ಅಗತ್ಯವಾದ ಆಧುನಿಕ ವಿಷಯಗಳ ಜ್ಞಾನವನ್ನು ಉಂಟುಮಾಡಬಲ್ಲ, ಚೆನ್ನಾಗಿ ತಯಾರಾದ ಶಿಕ್ಷಕರ ತಂಡ ಅಗತ್ಯವಾಗಿದೆ. ಇಂತಹ ವಿಷಯಗಳ ಮೇಲೆ ದೇಶಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುವುದೂ, ದೇಶಭಾಷಾ ಸಾಹಿತ್ಯಗಳ ಹೆಚ್ಚಿನ ಬೆಳವಣಿ

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಗೆಯೂ ಅಗತ್ಯವಾಗಿವೆ. ಇವೆಲ್ಲ ಯೋಜನೆಗಳಿಂದಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ವೆಚ್ಚ ಮಾಡಬೇಕೆಂಬುದು ಅರ್ಥವಲ್ಲ. ಆದರೆ ತಮ್ಮ ದೇಶಬಂಧುಗಳ ಅಭ್ಯುದಯದಲ್ಲಿ ಆಸಕ್ತರಾದ ವಿದ್ಯಾವಂತಜನರ ವರ್ಗವು ಬೆಳೆಯುತ್ತಾ ಈ ಕಾರ್ಯಗಳನ್ನು ನೆರವೇರಿಸತಕ್ಕದ್ದು ಎಂದು ಅರ್ಥ."

## ಸರ್ಕಾರ ಮತ್ತು ವಿದ್ಯಾವಂತರು

"ಭಾರತಸರ್ಕಾರವು ಔದಾರ್ಯದಿಂದ ದೇಶೀಯರಿಗೆ ಲಾಭಕರವಾದ ಉದ್ಯೋಗಾವಕಾಶವನ್ನು ಕಲ್ಪಿಸಿದೆ. **ಆದರೆ ಸರ್ಕಾರದ ಎಲ್ಲ ಇಲಾಖೆಗಳ ನಿರ್ವಹಣೆಯ ಬಗೆಗೆ ತಮ್ಮ ಅಭಿಮತವನ್ನು ವ್ಯಕ್ತಪಡಿಸುವ ಹಕ್ಕು ದೇಶೀಯರಿಗೆ ಇರತಕ್ಕದ್ದು. ದೇಶೀಯ ಸರ್ಕಾರಿ ಅಧಿಕಾರಿಗಳ ಕಾರ್ಯ ನಿರ್ವಹಣೆಯ ಯೋಗ್ಯತಾ ನಿರ್ಣಯವನ್ನು ದೇಶೀಯರೇ ಮಾಡತಕ್ಕದ್ದು.** § ಒಡಂಬಡಿಕೆಯ ಕಟ್ಟಿಗೆ ಒಳಪಡದ ಅಧಿಕಾರಿಗಳ ಹುದ್ದೆಗಳು ಇರುವುವಷ್ಟೆ. * ಈ ಹುದ್ದೆಗಳಿಗೆ ತಮಗೆ ಬೇಕಾದವರನ್ನು ನಿಯಮಿಸುವುದನ್ನು ಬಿಟ್ಟು ಅವು ಸರ್ಕಾರದ ಹುದ್ದೆಗಳಾದ್ದರಿಂದ ಎಚ್ಚರವಹಿಸಿ ಅರ್ಹರನ್ನು ಮಾತ್ರ ನಿಯಮಿಸಬೇಕು. ಸಾರ್ವಜನಿಕ ಜೀವನದಲ್ಲಿ ಪ್ರಭಾವಶಾಲಿಯಾದ ಸ್ಥಾನಗಳನ್ನು ಕೇವಲ ಸರ್ಕಾರಿ ಅಧಿಕಾರಿಗಳಿಗೆ ಮೀಸಲಾಗಿಡದೇ ಜಮೀನುದಾರರು ಮುಂತಾದ ಖಾಸಗೀ ವ್ಯಕ್ತಿಗಳಿಗೆ ಅವುಗಳನ್ನು ಕೊಡಬೇಕು."

## ವಿದ್ಯಾರ್ಥಿಗಳಿಗೆ

**"ವಿದ್ಯಾವಂತವರ್ಗವು ಸಮಾಜಕ್ಕೆ ಪ್ರಯೋಜನಕಾರಿಯಾಗಿ ಬಾಳುತ್ತಿಲ್ಲ ಎಂಬ ಕಳಂಕವನ್ನು ನೀವು ನಿವಾರಿಸಬೇಕು. ನೀವು ಜೀವನದ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತೀರಷ್ಟೆ. ನಿಮ್ಮ ದುಡಿತದಿಂದ ಜನಸಾಮಾ**

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

* ಸರ್ಕಾರದ ಅತ್ಯುನ್ನತ ಅಧಿಕಾರಿವರ್ಗವಾಗಿದ್ದ ಸಿವಿಲ್‌ಸರ್ವಿಸ್ ಅಧಿಕಾರಿಗಳನ್ನು ಅವರಿಗೂ ಸರ್ಕಾರಕ್ಕೂ ಒಡಂಬಡಿಕೆಯಾಗಿರುವ ಕರಾರುಗಳಂತೆ ನಿಯಮಿಸಲಾಗಿದ್ದಿತು. ಈ ಅಧಿಕಾರಿ ವರ್ಗಕ್ಕೆ "ಒಡಂಬಡಿಕೆಗೆ ಒಳಪಟ್ಟ ಅಧಿಕಾರಿ ವರ್ಗ" ಎಂದು ಹೆಸರು. ಈ ವರ್ಗಕ್ಕೆ ಸೇರದ ಇತರ ಅಧಿಕಾರಿಗಳ ವಿಷಯವನ್ನು ರಂಗಾಚಾರ್ಲುರವರು ಇಲ್ಲಿ ಪ್ರಸ್ತಾಪಿಸಿದ್ದಾರೆ.

ನ್ಯರ ಅಭ್ಯುದಯ ಎಷ್ಟರಮಟ್ಟಿಗೆ ಸಾಧಿತವಾಗುತ್ತದೆ ಎಂಬುದರಿಂದ ನಿಮ್ಮ ಯೋಗ್ಯತೆ ಸರ್ವದಾ ನಿರ್ಧಾರವಾಗತಕ್ಕದ್ದಾಗಿದೆ. § ನಿಮ್ಮಲ್ಲಿ ಯಾರು ಪರೀಕ್ಷೆಗಳಲ್ಲಿ ಹೆಚ್ಚಿನ ಯಶಸ್ಸನ್ನು ಗಳಿಸಿರುವಿರೋ ಅವರಿಗೆ ನನ್ನ ಅಭಿನಂದನೆಗಳು. ಹೀಗೆ ಯಶಸ್ಸನ್ನು ಸಾಧಿಸದಿರುವವರಿಗೂ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಯಾರು ಪ್ರಯತ್ನಪಟ್ಟರೂ ತೇರ್ಗಡೆಯಾಗಿಲ್ಲವೋ ಅವರು ನಿರುತ್ಸಾಹಕ್ಕೆ ಎಡೆಗೊಡಬೇಕಾದುದಿಲ್ಲ. ತಮ್ಮ ಶಾಲಾಜೀವನದಲ್ಲಿ ಯಶಸ್ವಿಗಳಾಗದಿರುವವರು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವವರಷ್ಟೇ ಜೀವನ ಸಂಗ್ರಾಮದಲ್ಲಿ ಯಶಸ್ವಿಗಳಾಗುವರು."

## ಧಾರ್ಮಿಕ ಶಿಕ್ಷಣ

"ಧಾರ್ಮಿಕ ಶಿಕ್ಷಣವನ್ನು ಕೊಡಬೇಕೆಂದರೆ ಶಿಕ್ಷಣಸಂಸ್ಥೆಗಳು ಮತತತ್ತ್ವಬೋಧನೆ ಮಾಡಬೇಕೆಂದಲ್ಲ. ವಿದ್ಯಾರ್ಥಿಗಳ ಧಾರ್ಮಿಕ ಪ್ರವೃತ್ತಿಯನ್ನು ಕಾಪಾಡಬೇಕೆಂದು ಅದರ ಅರ್ಥ. ಆದರೆ ಈ ದೇಶದಲ್ಲಿ ಶಾಲೆಗಳು ವಿದ್ಯಾರ್ಥಿಗಳನ್ನು ಅನ್ನವಸತಿಗಳನ್ನು ಕೊಟ್ಟು ಅವರ ವಿದ್ಯಾಜೀವನ ಮುಗಿಯುವವರೆಗೆ ತಮ್ಮಲ್ಲಿಯೇ ಇಟ್ಟುಕೊಂಡಿರುವುದಿಲ್ಲ. ವಿದ್ಯಾರ್ಥಿಗಳು ಶಾಲೆಗೆ ಹೋಗಿ ಪಾಠಪ್ರವಚನಗಳನ್ನು ಮುಗಿಸಿಕೊಂಡು ಮನೆಗೆ ಬಂದುಬಿಡುತ್ತಾರೆ. ಹೀಗಿರುವಾಗ ವಿದ್ಯಾರ್ಥಿಗಳ ಧಾರ್ಮಿಕ ಪ್ರವೃತ್ತಿಯನ್ನು ಅವರವರ ಮನೆಗಳಲ್ಲಿ ಅವರವರ ಮತ ನಂಬಿಕೆಗಳಿಗನುಸಾರವಾಗಿ ಬೆಳೆಸುವುದೇ ಸೂಕ್ತ. ಆದರೂ ಶಿಕ್ಷಕರ ಮೇಲೆ ಈ ವಿಷಯದಲ್ಲಿ ದೊಡ್ಡದಾದ ಜವಾಬ್ದಾರಿ ಇದೆ. ಯಾವುದೊಂದು ಮತವನ್ನು ಬೋಧಿಸಬೇಕಾದುದು ಅವರ ಕರ್ತವ್ಯವಲ್ಲವಾದರೂ ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಭಾವನೆಯನ್ನು ಬೆಳೆಸುವುದೂ, ತೀರಾ ಚಿಕ್ಕ ವಯಸ್ಸಿನಲ್ಲಿ ನೀತಿತತ್ತ್ವಬೋಧನೆ ಮಾಡುವುದರಿಂದ ಆ ತತ್ತ್ವಗಳನ್ನು ಅವರು ಲಘುವಾಗಿ ಕಾಣುವ ಪ್ರವೃತ್ತಿಯನ್ನು ನಿಯಂತ್ರಿಸುವುದೂ ಅವರು ಮಾಡಬೇಕಾದ ಕಾರ್ಯವಾಗಿದೆ."

ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ರಂಗಾಚಾರ್ಲುರವರು ಪ್ರಗತಿಪರವಾದ ಅಭಿಪ್ರಾಯಗಳನ್ನು ಹೊಂದಿದ್ದರು. ಅವರ ಕಾಲದಲ್ಲಿ ಆ ಅಭಿಪ್ರಾಯಗಳು ಕ್ರಾಂತಿಕಾರಕವೆಂದು ಕಂಡುಬಂದಿದ್ದರೂ ಆಶ್ಚರ್ಯವೇನಿಲ್ಲ. 21 ನೇ ಮಾರ್ಚಿ 1882 ರಲ್ಲಿ ಮಹಾರಾಣಿ ಬಾಲಿಕಾ ಶಾಲೆಯಲ್ಲಿ ಅವರು ಮಾತನಾಡಿದರು.

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಆ ಸಮಾರಂಭದ ಅಧ್ಯಕ್ಷತೆಯನ್ನು ಮಹಾರಾಜರು ವಹಿಸಿದ್ದರು. ಆ ಸಂಸ್ಥೆಯನ್ನು ಸ್ಥಾಪಿಸಿ ಆಗ ಕೇವಲ 14 ತಿಂಗಳುಗಳಾಗಿದ್ದವು. ಸ್ತ್ರೀಯರಲ್ಲಿ ವಿದ್ಯಾಪ್ರಚಾರವನ್ನು ಮಾಡುವ ಕಾರ್ಯ ಆಗತಾನೇ ಪ್ರಾರಂಭವಾಗಿದ್ದಿತು. ಆ ಸಮಾರಂಭದಲ್ಲಿ ಮಾತನಾಡುವಾಗ ರಂಗಾಚಾರ್ಲುರವರು ಹೀಗೆ ಹೇಳಿದರು—"ಯಾವ ಈ ಸಂಸ್ಥೆಯ ಯಶಸ್ಸನ್ನು ನಿರೀಕ್ಷಿಸಲು ಇಲ್ಲಿ ಸೇರಿದ್ದೇವೋ ಅದು ಸಾರ್ವಜನಿಕ ಸಹಾಯದಿಂದ ಸ್ಥಾಪಿಸಲ್ಪಟ್ಟ ಮೊದಲ ಸಂಸ್ಥೆಯಾಗಿ ದೇಶೀಯ ಸಮಾಜದ ಗಣ್ಯ ವ್ಯಕ್ತಿಗಳ ಬೆಂಬಲವನ್ನು ಹೊಂದಿ ಅವರಿಂದ ನಡೆಸಲ್ಪಡುತ್ತಿದೆ."

"ಇಂತಹ ಸಂಸ್ಥೆಗಳ ಬಗೆಗೆ ಎಚ್ಚರಿಕೆಯಿಂದ ಪರ್ಯಾಲೋಚಿಸಬೇಕಾದ ವಿಷಯವೆಂದರೆ ಅವುಗಳು ಅನುಸರಿಸಬೇಕಾದ ವ್ಯಾಸಂಗಕ್ರಮ. ಅದೃಷ್ಟವಶದಿಂದ ಈ ಸಂಸ್ಥೆಗಳಲ್ಲಿ ಓದುವ ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯಗಳಿಂದ ಮತ್ತು ಸರ್ಕಾರದಿಂದ ನಡೆಸಲ್ಪಡುವ ಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾಗಿಲ್ಲ. ಅನೇಕ ವಿಷಯಗಳನ್ನು ದೀರ್ಘಕಾಲದ ಅಂತರದಲ್ಲಿ ಬೋಧಿಸುವುದರಿಂದ ವಿದ್ಯಾರ್ಥಿಗಳಿಗೆ ಪರಿಷ್ಕಾರವಾದ ತರಬೇತನ್ನು ಕೊಡಲಾಗುವುದಿಲ್ಲ. ಈ ಪರಿಸ್ಥಿತಿ ವಿಶೇಷವಾಗಿ ಶಾಲೆಗಳ ಕೆಳಗಿನ ತರಗತಿಗಳಲ್ಲಿ ಕಂಡುಬರುತ್ತದೆ. ಈ ಸಂಸ್ಥೆಗಳು ವಿಶ್ವವಿದ್ಯಾನಿಲಯ ಮತ್ತು ಸರ್ಕಾರಗಳಿಂದ ನಡೆಸಲ್ಪಡುವ ಪರೀಕ್ಷೆಗಳ ವ್ಯಾಪ್ತಿಯಿಂದ ಹೊರಗಿರುವುದರಿಂದ ಹೀಗೆ ವಿಷಯಗಳನ್ನು ಅಸಮಗ್ರವಾಗಿ, ಸ್ವಲ್ಪಸ್ವಲ್ಪವಾಗಿ ಬೋಧಿಸುವ ಪದ್ಧತಿಯಿಂದ ತಪ್ಪಿಸಿಕೊಳ್ಳುವ ಅವಕಾಶವಿದೆ."

"ಈಗ ಇಂತಹ ಸಂಸ್ಥೆಗಳನ್ನು ಯಾವ ತತ್ವಗಳನ್ನು ಅನುಸರಿಸಿ ನಡೆಸಬೇಕೆಂಬ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ದೇಶೀಯ ಸಂಪ್ರದಾಯ ಮತ್ತು ದೇಶೀಯರ ಮನೋಭಾವಗಳಿಗೆ ಅಸಂಗತವಾದ ಯಾವುದಕ್ಕೂ ಈ ಸಂಸ್ಥೆಯಲ್ಲಿ ಅವಕಾಶ ಕೊಡುವುದಿಲ್ಲ ಎಂಬ ಈ ಸಂಸ್ಥೆಯ ವ್ಯವಸ್ಥಾಪಕರ ದೃಢ ನಿರ್ಧಾರವನ್ನು ನಾನು ಮೆಚ್ಚುತ್ತೇನೆ. ಹಾಗೆಯೇ ತಮ್ಮ ಸಂಸಾರಗಳ, ಬಂಧುಬಳಗಗಳ ಮಧ್ಯೆ ಒಳ್ಳೆಯ ಪತ್ನಿಯರಾಗಿ, ತಾಯಂದಿರಾಗಿ ವಿದ್ಯಾರ್ಥಿನಿಯರು ತಮ್ಮ ಮುಂದಿನ ಜೀವನವನ್ನು ನಡೆಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಶಿಕ್ಷಣವನ್ನು ಕೊಡಬೇಕೆಂಬ ವ್ಯವಸ್ಥಾಪಕರ ಅಭಿಪ್ರಾಯವು ಶ್ಲಾಘನೀಯವಾದುದು. ಈ ವಿಷಯಗಳಿಗೆ ಎಷ್ಟು ಪ್ರಾಮುಖ್ಯತೆ

ಯನ್ನು ಕೊಟ್ಟರೂ ಸಾಲದು. ಏಕೆಂದರೆ ಇಂತಹ ಶಾಲೆಗಳು ಹೊರಗಿನವರ ಆಡಳಿತದಿಂದ ನಮ್ಮ ಯುವಕರ ಅಪಕ್ವವಾದ ಸುಧಾರಣೆಯ, ಪ್ರಗತಿಯ ಅಭಿಪ್ರಾಯಗಳಿಂದಷ್ಟೇ ತೊಂದರೆಗೀಡಾಗುವ ಸಂಭವವಿದೆ. ಶ್ರದ್ಧಾವಂತರಾದ ಒಳ್ಳೆಯ ಮನುಷ್ಯರಲ್ಲಿ ಒಂದು ದೋಷವುಂಟು. ಅವರು ತಾವು ಕೈಗೊಂಡ ಕಾರ್ಯಗಳು ಬಹು ಬೇಗ ಫಲವನ್ನು ಕೊಡುತ್ತವೆ ಎಂದು ನಿರೀಕ್ಷಿಸುತ್ತಾರೆ. ಆದರೆ ಲೋಕವು ಅಷ್ಟು ಬೇಗ ಪ್ರಗತಿಯಾಗುವುದಿಲ್ಲ. ಗಿಡವನ್ನು ನೆಡುವವನೇ ಅದರ ಫಲವನ್ನು ಉಣ್ಣುವುದು ಸಾಧ್ಯವಿಲ್ಲ. ಈ ಸಂಸ್ಥೆಯ ವ್ಯವಸ್ಥಾಪಕರು ಒಳ್ಳೆಯ ವಾತಾವರಣವನ್ನು ಕಲ್ಪಿಸಿ ವಿದ್ಯಾರ್ಥಿನಿಯರ ಮನಸ್ಸಿನಲ್ಲಿ ಜ್ಞಾನ ಬೀಜವನ್ನು ಬಿತ್ತುವುದರಲ್ಲಿ, ವಿದ್ಯಾರ್ಥಿನಿಯರು ತಮ್ಮ ರಾಷ್ಟ್ರೀಯ ಪ್ರವೃತ್ತಿಯಂತೆ ತಮ್ಮದೇ ಆದ ರೀತಿಯಲ್ಲಿ ತಮ್ಮ ಗುಣ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸುವುದರಲ್ಲಿ ತೃಪ್ತರಾಗಬೇಕು. ದೇಶೀಯ ಸಂಪ್ರದಾಯಗಳ, ಮನೋಭಾವಗಳ ವಿರುದ್ಧವಾಗಿ ಹೊರಗಿನಿಂದ ಯಾರೂ ಪ್ರಭಾವ ಬೀರದಂತೆ ನೋಡಿಕೊಳ್ಳುವುದು ಮಾತ್ರ ವ್ಯವಸ್ಥಾಪಕರ ಕರ್ತವ್ಯವಲ್ಲ. ವಿವಿಧ ಪ್ರಭಾವಗಳ ದೆಸೆಯಿಂದಾಗಿ ಇಂತಹ ಶಾಲೆಗಳಲ್ಲಿ ನಮ್ಮ ರಾಷ್ಟ್ರೀಯ ಚಾರಿತ್ರ್ಯ ಒಳಗೊಳಗೆ ಕೆಡುವುದಕ್ಕೆ ಅವಕಾಶ ಉಂಟು. ಅದನ್ನು ತಪ್ಪಿಸಬೇಕು. ಸರ್ಕಾರಿ ಪರೀಕ್ಷೆಗಳ ಪ್ರಭಾವಕ್ಕೆ ಅವುಗಳಲ್ಲಿ ಸ್ಪರ್ಧಿಸಬೇಕಾದ ಅಗತ್ಯಕ್ಕೆ ಒಳಗಾಗಿರುವ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಆಡಂಬರದ, ತೋರಾಣಿಕೆಯ ರೀತಿನೀತಿಗಳನ್ನು ಬೆಳೆಸಿಕೊಳ್ಳುತ್ತಾರೆ. ನಿಜವಾದ ಗುಣಾಢ್ಯತೆ ಅವರಲ್ಲಿ ಲುಪ್ತವಾಗುತ್ತದೆ. ಆದ್ದರಿಂದ ವಿದ್ಯಾರ್ಥಿನಿಯರ ಮನಸ್ಸಿನಲ್ಲಿ ತಮ್ಮ ಹಿರಿಯರ ಅಭಿಪ್ರಾಯಗಳ ಬಗೆಗೆ ಸ್ವಾಭಾವಿಕವಾಗಿ ಇರಬೇಕಾದ ಮರ್ಯಾದೆ, ಗೌರವಗಳು ನಶಿಸಿಹೋಗದಂತೆ ಸರ್ವ ಪ್ರಯತ್ನವನ್ನೂ ಮಾಡಬೇಕಾದುದು ತುಂಬಾ ಮುಖ್ಯವಾದ ವಿಷಯ."

## ಸ್ತ್ರೀಯರಿಗಾಗಿ ಶಾಸನ

"ದೊಡ್ಡ ದೊಡ್ಡ ಮನೆತನಗಳಿಗೆ ಸೇರಿದ ಹೆಚ್ಚು ಮಂದಿ ತರುಣಿಯರು ಉನ್ನತಮಟ್ಟದ ಇಂಗ್ಲಿಷ್ ಶಿಕ್ಷಣವನ್ನು ಪಡೆಯುವುದಕ್ಕೆ ನಾನು ತುಂಬಾ ಪ್ರಾಮುಖ್ಯತೆಯನ್ನು ಕೊಡುತ್ತೇನೆ. ಇವರು ತಮ್ಮ ಭಗಿನಿಯರ ಪ್ರಗತಿಯಲ್ಲಿ ಶ್ರದ್ಧೆಯುಳ್ಳವರಾಗಿ, ಸುಶಿಕ್ಷಿತರಾದ ಪುರುಷರು ಅವಿದ್ಯಾವಂತರಾದ ತಮ್ಮ

ಸಹೋದರರ ಬಗೆಗೆ ಯಾವ ಸ್ಥಾನವನ್ನು ಹೊಂದಿರುವರೋ ಅದೇ ಸ್ಥಾನವನ್ನು ತಮ್ಮ ಸಹೋದರಿಯರ ಬಗೆಗೆ ಹೊಂದಿದವರಾಗಿರುತ್ತಾರೆ."

**"ಒಂದು ವರ್ಗದ ಬಗೆಗೆ ಶಾಸನವನ್ನು ಮಾಡುವ ಹೊಣೆಯನ್ನು ಇನ್ನೊಂದು ವರ್ಗಕ್ಕೆ ಹೇಗೆ ವಹಿಸುವುದು ಸಾಧುವಲ್ಲವೋ ಹಾಗೆಯೇ ಸ್ತ್ರೀಯರಿಗೆ ಸಂಬಂಧಪಟ್ಟಂತೆ ಶಾಸನವನ್ನು ಮಾಡುವ ಹೊಣೆಯನ್ನು ಪುರುಷರಿಗೆ ವಹಿಸುವುದು ಸಾಧುವಾದುದಲ್ಲ. ಹೀಗೆ ಪುರುಷರು ಸ್ತ್ರೀಯರಿಗಾಗಿ ಶಾಸನ ಮಾಡಿದಲ್ಲಿ ಹೆಂಗಸರನ್ನು ದಬ್ಬಾಳಿಕೆಗೆ ಒಳಪಡಿಸುವ ಸಂಭವವೆಷ್ಟಿದೆಯೋ ಅಷ್ಟೇ ಮಟ್ಟಿಗೆ ಹೆಂಗಸರ ಹಕ್ಕುಗಳ ಬಗೆಗೆ ವಸ್ತುಸ್ಥಿತಿಗೆ ದೂರವಾದ ಕಲ್ಪನೆಗಳಿಗೂ, ಇತರ ವಿಪರೀತ ಅಭಿಪ್ರಾಯಗಳಿಗೂ ಎಡೆಗೊಟ್ಟು ಅವಿವೇಕದ ಶಾಸನಗಳನ್ನು ಮಾಡುವ ಸಂಭವವಿದೆ. ಸ್ತ್ರೀಯರಿಗೆ ಅವರ ಭಾವನೆ ಅವರ ಅಭಿಪ್ರಾಯಗಳಿಗನುಗುಣವಾಗಿ ಅವರಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗೆಗೆ ಶಾಸನ ಮಾಡುವುದಕ್ಕೆ ಅವಕಾಶ ಕೊಟ್ಟರೆ ಯಾವ ಅತಿರೇಕಕ್ಕೂ ಹೋಗದೇ ಸೂಕ್ತವಾದ ಶಾಸನಗಳನ್ನು ಮಾಡುವರೆಂದು ನಿರೀಕ್ಷಿಸಬಹುದು." §**

ಈ ಮೇಲಿನ ಮಾತುಗಳು ರಂಗಾಚಾರ್ಲುರವರ ಮನೋವೈಶಾಲ್ಯವನ್ನೂ, ಸ್ತ್ರೀಯರ ವಿಷಯದಲ್ಲಿ ಅವರಿಗಿದ್ದ ಸಹಾನುಭೂತಿಯನ್ನೂ, ಅವರ ಪ್ರಗತಿಪರ ಮನೋಭಾವವನ್ನೂ ತೋರಿಸುವವಾಗಿವೆ.

ಮಹಾರಾಣಿ ಬಾಲಿಕಾ ಶಾಲೆಯಲ್ಲಿ ನಡೆದ ಒಂದು ಘಟನೆ ರಂಗಾಚಾರ್ಲುರವರ ಸ್ವಭಾವವನ್ನು ಎತ್ತಿತೋರಿಸುವುದಾಗಿದೆ. ಚಾಮರಾಜೇಂದ್ರ ಒಡೆಯರವರಿಗೆ ಉಪಾಧ್ಯಾಯರೂ ಅನಂತರ ಅರಮನೆಯಲ್ಲಿ ದರ್ಬಾರ್ ಭಕ್ಷಿಗಳೂ ಆಗಿದ್ದ ರಾವ್‌ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರು ಈ ಘಟನೆಯನ್ನು ವರ್ಣಿಸಿದ್ದಾರೆ. "ರಂಗಾಚಾರ್ಲುರವರು ಮೈಸೂರು ಸಂಸ್ಥಾನದ ಇಂದಿನ ಎಲ್ಲಾ ಸಾಮಾಜಿಕ, ರಾಜಕೀಯ ಚಳುವಳಿಗಳಿಗೆ ಹೇಗೆ ಚೇತನಸ್ವರೂಪರಾಗಿದ್ದರೋ ಅದೇ ರೀತಿ ಈ ಸಂಸ್ಥೆಗೂ ಚೇತನಸ್ವರೂಪರಾಗಿದ್ದರು. ಈ ಶಾಲೆಯಲ್ಲಿ ಸಂಗೀತಪಾಠವನ್ನು

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ಪ್ರಾರಂಭಮಾಡಲಾಗಿದ್ದಿತು. ಆದರ ವಿಷಯ ಊರಿನ ಹೆಂಗಸರು ಅನೇಕ ಬಗೆಗಳಲ್ಲಿ ಮಾತನಾಡುತ್ತಾ ಗುಲ್ಲನ್ನೆಬ್ಬಿಸಿದ್ದರು. ಈ ಮಾತು ರಂಗಾಚಾರ್ಲುರವರ ಮನೆಗೂ ಮುಟ್ಟಿತು. ರಂಗಾಚಾರ್ಲುರವರ ಪತ್ನಿಯವರು ಈ ಮಾತುಗಳನ್ನು ಕೇಳಿ ಶಾಲೆಯ ಹೆಸರು ಹೇಗೆ ಕೆಟ್ಟುಹೋಗಿದೆ ಎಂಬುದನ್ನು ರಂಗಾಚಾರ್ಲುರವರಿಗೆ ತಿಳಿಸಿದರು. ರಂಗಾಚಾರ್ಲುರವರಾದರೋ ಮಾರನೆಯ ದಿನ ಪ್ರಾತಃಕಾಲವೇ ಆ ಶಾಲೆಗೆ ಬಂದು ಸಂಗೀತದ ಶಿಕ್ಷಕನನ್ನು ಕೆಲಸದಿಂದ ತೆಗೆದುಹಾಕಿದರು. ಆ ಶಿಕ್ಷಕನನ್ನು ನಾನು ಒಳಗೆ ಹೋಗುತ್ತಿದ್ದಾಗ ಶಾಲೆಯ ಬಾಗಿಲ ಬಳಿ ನೋಡಿದೆನು. ಆತನು ನಡೆದ ವಿಷಯಗಳನ್ನೆಲ್ಲಾ ತಿಳಿಸಿದನು. "ಏನಾದರೂ ಆಗಿರಬಹುದು. ಪರವಾಗಿಲ್ಲ, ನೀನು ಒಳಗೆ ಹೋಗು" ಎಂದು ಹೇಳಿ ಆತನನ್ನು ಹಿಂದಿರುಗಿ ಕಳುಹಿಸಿದೆನು. ನಾನು ಒಳಗೆ ಹೋದಾಗ ರಂಗಾಚಾರ್ಲುರವರು ನನ್ನ ವಿಷಯದಲ್ಲಿ ಬಹಳ ಕೋಪಗೊಂಡಿದ್ದರು. "ಒಂದು ಗಂಟೆ ತಾಳ್ಮೆಯಿಂದಿರಿ, ಯಾವ ಬಗೆಯ ಸಂಗೀತವನ್ನು ಹೇಳಿಕೊಡಲಾಗುತ್ತಿದೆ ಎಂಬುದನ್ನು ನೋಡಿ, ಆನಂತರ ಆದರ ವಿಷಯದಲ್ಲಿ ನೀವೇ ತೀರ್ಮಾನಮಾಡಿ" ಎಂದು ಅವರನ್ನು ಕೇಳಿಕೊಂಡೆ. ಅವರು ಒಪ್ಪಿದರು. ಈ ರೀತಿ ಪರೀಕ್ಷೆಯಾದ ಮೇಲೆ ಸಂಗೀತ ಪಾಠ ನಡೆಸುವುದು ಸೂಕ್ತವೆಂದು ಅವರು ಒಪ್ಪಿಕೊಂಡರು. ಯಾರದೋ ಮಾತು ಕೇಳಿ ತಪ್ಪಾಗಿ ತಿಳಿದುದಕ್ಕಾಗಿ ಅವರು ವಿಷಾದಪಟ್ಟರು. ಸಂಗೀತ ಪಾಠವನ್ನು ಮಾಡುವುದರಿಂದ ಏನೂ ಬಾಧಕವಿಲ್ಲವಷ್ಟೇ ಅಲ್ಲ ಹೆಣ್ಣುಮಕ್ಕಳಿಗೆ ಅದು ಅಗತ್ಯ ಎಂದು ಅವರಿಗೆ ಮನದಟ್ಟಾಯಿತು ಎಂದು ಹೇಳಿದರು. ತಮ್ಮ ಪತ್ನಿಯನ್ನು ಶಾಲೆಗೆ ಆಹ್ವಾನಿಸಬೇಕೆಂದು ಅವರು ಸೂಚಿಸಿದರು. ಅದೇ ಮಧ್ಯಾಹ್ನ ಆಕೆಯನ್ನು ನಾನು ಕಂಡೆ. ಮಾರನೆಯ ಬೆಳಿಗ್ಗೆ ಅವರು ಶಾಲೆಗೆ ಭೇಟಿಕೊಟ್ಟರು. ಆ ಭೇಟಿಯಿಂದ ಸಂಗೀತ ಪಾಠದ ವಿಷಯದಲ್ಲಿ ಅವರ ಅಭಿಪ್ರಾಯವೂ ಸಂಪೂರ್ಣವಾಗಿ ಬದಲಾಯಿತು. ಶಾಲೆಯ ವಿವಿಧ ಕಾರ್ಯಕಲಾಪಗಳನ್ನು ನೋಡಿ ಅವರು ಸಂತೋಷಪಟ್ಟರು. ಆಕೆಗೆ ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸವಾಗಿದ್ದಿತು. ಅಲ್ಲದೇ ಆಕೆ ಸುಸಂಸ್ಕೃತೆ. ಆದ್ದರಿಂದ ಶಾಲೆಯ ಬಗೆಗೆ ಒಳ್ಳೆಯ ಸಲಹೆ ಸೂಚನೆಗಳನ್ನು ಅವರು ಕೊಟ್ಟರು. ಆ ದಿನದಿಂದ ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಆ ಶಾಲೆಗೆ ಕಳುಹಿಸಿಕೊಡಲಾರಂಭಿಸಿದರು."

ರಂಗಾಚಾರ್ಲುರವರು ಜನಸಾಮಾನ್ಯರ ಮತ್ತು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆಯೂ, ಸಮಾಜಕ್ಕೆ ಸಂಬಂಧಪಟ್ಟಂತೆಯೂ ಪ್ರಗತಿಪರವಾದ

ಅಭಿಪ್ರಾಯಗಳನ್ನುಳ್ಳವರಾಗಿದ್ದರು. ಆದರೆ ಅವರ ಈ ಅಭಿಪ್ರಾಯಗಳನ್ನು ವಿಪ್ಲವಕಾರಿಯೆಂದಾಗಲೀ ಕ್ರಾಂತಿಕಾರಿಯೆಂದಾಗಲಿ ಹೇಳಲಾಗುವುದಿಲ್ಲ. 1880 ರಲ್ಲಿ ಬ್ರಹ್ಮ ಸಮಾಜಕ್ಕೆ ಸೇರಿದ ಪಂಡಿತ ಶಿವನಾಥಶಾಸ್ತ್ರಿ ಎಂಬುವರು ಬೆಂಗಳೂರಿಗೆ ಭೇಟಿಕೊಟ್ಟರು. ಅವರು ಒಂದು ಸಭೆಯಲ್ಲಿ ಮಾತನಾಡುತ್ತಾ ಜಾತಿಪದ್ಧತಿಯನ್ನು ಉಗ್ರವಾಗಿ ಖಂಡಿಸಿದರು. ತಮ್ಮ ಭಾಷಣವನ್ನು ಮುಕ್ತಾಯ ಗೊಳಿಸುತ್ತಾ ಅವರು "ಜಾತಿಯಿಂದ ನಮ್ಮ ಜನರು ಸಮಾಜದೊಡನೆ ಮಿಳಿತ ವಾಗದೆ ದೂರವಾಗಿ ಇದ್ದಾರೆ. ಈ ಜಾತಿ ಪದ್ಧತಿಯಿಂದಲೇ ನಮ್ಮ ಜನಕ್ಕೆ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಧೈರ್ಯವಿಲ್ಲದೆ ಹೋಗಿದೆ. ನಾವು ಭಯಗ್ರಸ್ತರಾಗಿದ್ದೇವೆ. ನಾವು ಮನುಷ್ಯರು ಎಂಬ ಭಾವನೆ ಇಲ್ಲದೇಹೋಗಿದೆ. ಮಹಾಶಯರೇ ಈ ಜಾತಿ ಪದ್ಧತಿಯನ್ನು ಭಗ್ನಗೊಳಿಸಿ. ಒಬ್ಬರಿಗೊಬ್ಬರು ಸಹಾಯ ಮಾಡಿ. ಜಾತಿಯಿಂದ ಬಂಧಿತರಾಗುವುದು ಬೇಡ. ಈ ಜಾತಿ ಪದ್ಧತಿಯ ಚಕ್ರವ್ಯೂಹ ವನ್ನು ಭೇದಿಸಿದರೆ ಮಾತ್ರ, ಅದನ್ನು ಸಂಪೂರ್ಣವಾಗಿ ತೊಡೆದುಹಾಕಿದರೆ ಮಾತ್ರ ನಮ್ಮ ದೇಶವು ಉನ್ನತಿಗೊಳ್ಳುವುದೂ ಪುನರುತ್ಥಾನಗೊಳ್ಳುವುದೂ ಸಾಧ್ಯ. ಇಲ್ಲದಿದ್ದರೆ ಸಾಧ್ಯವಿಲ್ಲ" ಎಂದು ಹೇಳಿದರು. ರಂಗಾಚಾರ್ಲುರವರು ಆ ಸಭೆ ಯಲ್ಲಿದ್ದರು. ಭಾಷಣಕಾರರಿಗೆ ವಂದನಾರ್ಪಣೆಯಾಯಿತು. ಅದನ್ನು ಅನುಮೋದಿಸಿ ಮಾತನಾಡುತ್ತಾ ರಂಗಾಚಾರ್ಲುರವರು ಹೀಗೆ ಹೇಳಿದರು. "ಜಾತಿಯ ಹೆಸರಿನಲ್ಲಿ ನಮ್ಮ ನಡೆನುಡಿಗಳ ಮೇಲೆ ಹೇರಿರುವ ಅನೇಕ ಅನಾವಶ್ಯಕವಾದ ನಿರ್ಬಂಧಗಳನ್ನು ನಿರ್ಮೂಲ ಮಾಡದೇ, ಪ್ರತಿಯೊಬ್ಬ ಮನು ಷ್ಯನೂ ತನ್ನ ವಿವೇಚನೆಗೆ ಅನುಗುಣವಾಗಿ ತನ್ನ ನೈತಿಕ ಮತ್ತು ಬೌದ್ಧಿಕ ಪ್ರಗತಿ ಯನ್ನು ಸಾಧಿಸುವುದಕ್ಕೆ ತನಗೆ ಸ್ವಾತಂತ್ರ್ಯವಿದೆ ಎನ್ನುವ ಪರಿಸ್ಥಿತಿ ಉಂಟಾಗದೇ ಪ್ರಗತಿ ಸಾಧ್ಯವಿಲ್ಲ ಎನ್ನುವುದು ನನ್ನ ದೃಢವಾದ ನಂಬಿಕೆ. ಅಲ್ಲದೇ ಎಲ್ಲಾ ವರ್ಗ ಮತಗಳಿಗೆ ಸೇರಿದ ಜನರಲ್ಲಿಯೂ ಭ್ರಾತೃತ್ವ ಮೂಡುವಂತೆ ಮಾಡು ವುದು ಬಹು ಮುಖ್ಯ. ನೀತಿಶುದ್ಧತೆ ಮತ್ತು ಬೌದ್ಧಿಕ ಸಾಮರ್ಥ್ಯ ಎಲ್ಲಿ ಕಂಡುಬಂದರೂ ಅವಕ್ಕೆ ಬೆಲೆ ಕೊಡುವ, ಮೆಚ್ಚುವ ಮನೋವೃತ್ತಿ ಬೆಳೆ ಯಬೇಕು. ಎಲ್ಲ ಜಾತಿವರ್ಗಗಳ ಜನರೂ ದುಡಿಮೆ ಗೌರವಾಸ್ಪದ ವಾದುದು ಎಂಬುದನ್ನು ಅರಿತುಕೊಳ್ಳಬೇಕು. ಆದರೆ ನಮ್ಮಲ್ಲಿ ಕಂಡು ಬರುವ ಎಲ್ಲಾ ನ್ಯೂನಾತಿರೇಕಗಳಿಗೆ ಜಾತಿ ಪದ್ಧತಿಯೇ ಕಾರಣ ಎಂಬು ದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಜಾತಿನಿಯಮಗಳನ್ನು ತೊಡೆದುಹಾಕು

**ವುದರಿಂದ ನಮ್ಮ ಉದ್ಧಾರವಾಗುವುದೆಂದು ನಾನು ಹೇಳಲಾರೆ. ಅಂತ ರ್ಜಾತೀಯ ವಿವಾಹಗಳಿಂದ ಎಲ್ಲ ವರ್ಗಗಳ ಸಾರ್ವತ್ರಿಕ ಮಿಶ್ರಣವುಂಟಾ ಗುವಂತೆ ಮಾಡುವುದು ನಮ್ಮ ಸಾಮಾಜಿಕ ದೋಷಗಳ ನಿವಾರಣೆಗೆ ಪರ ಮೌಷಧವೆಂದು ನನಗೆ ತೋರುವುದಿಲ್ಲ." §**

"ಗತಕಾಲದಲ್ಲಿ ಆಯಾ ಜನಾಂಗ ತನ್ನ ಪ್ರವೃತ್ತಿ ಸಾಮರ್ಥ್ಯಗಳಿಗೆ ಅನುಗುಣ ವಾಗಿ ಕಾರ್ಯ ಮಾಡಿರುವುದರಿಂದ ಪ್ರಗತಿಯನ್ನು ಸಾಧಿಸಿದೆ ಎಂದು ಚರಿತ್ರೆಯಿಂದ ನಮಗೆ ಗೊತ್ತಾಗುತ್ತದೆ. ಪ್ರಕೃತಿಯಲ್ಲಿ ಅನೇಕ ಪ್ರಾಣಿವರ್ಗಗಳು ಉಂಟಷ್ಟೆ. ಅವುಗಳಲ್ಲಿ ಹೆಚ್ಚಿನ ಸಾಮರ್ಥ್ಯವುಳ್ಳ ವ್ಯಕ್ತಿಗಳನ್ನು ಆಯುವುದರಿಂದ ಆ ವರ್ಗದ ಉನ್ನತಿ ಸಾಧ್ಯವಾಗುತ್ತದಲ್ಲದೇ ಎಲ್ಲ ವರ್ಗಗಳ ಸಾರ್ವತ್ರಿಕ ಮಿಶ್ರಣದಿಂದಲ್ಲ ಎಂಬ ಅಭಿಪ್ರಾಯಕ್ಕೆ ತತ್ವಶಾಸ್ತ್ರವು ಹೆಚ್ಚು ಮನ್ನಣೆ ಕೊಡುವಂತೆ ಕಾಣುತ್ತದೆ. ಬೌದ್ಧಮತದ ಉದಯದಿಂದ ಮತ್ತು ಜಾತಿಪದ್ಧತಿಯ ಬಂಧನಗಳ ಕಳಚುವಿಕೆ ಯಿಂದ ಈ ದೇಶದಲ್ಲಿ ವಿವಿಧ ಕಲೆಗಳಲ್ಲಿ ಇದ್ದಕ್ಕಿದ್ದಂತೆಯೇ ಪ್ರಗತಿಯಾಯಿತೆಂದು ನಾನು ನಂಬುವುದಿಲ್ಲ. ಬೌದ್ಧಮತ ಪ್ರಸಾರವಾದ ಕಾಲದಲ್ಲಿ ಈ ದೇಶದೊಳಗೆ ಇಂತಹ ಕಲೆಗಳನ್ನು ಕರಗತ ಮಾಡಿಕೊಂಡಿದ್ದ ಜನಾಂಗಗಳು ಬಂದಿದ್ದರಿಂದಲೋ, ಅಥವಾ ಅಂತಹ ಜನಾಂಗಗಳೊಂದಿಗೆ ಈ ದೇಶದ ಜನರಿಗೆ ಸಂಪರ್ಕ ಉಂಟಾದು ದರಿಂದಲೋ ಕಲೆಗಳಲ್ಲಿ ಹೀಗೆ ಪ್ರಗತಿಯಾಯಿತು ಎಂದು ನನಗೆ ತೋರುತ್ತದೆ. ಆಂಗ್ಲ ನಾಗರಿಕತೆಯ ಸಂಪರ್ಕ ನೂರಾರು ವರ್ಷಗಳಿಂದ ನಮಗಿದ್ದರೂ ನಾವು ಸಾಧಿಸಲಾಗದಿದ್ದ ಪ್ರಗತಿಯನ್ನು ಜಪಾನ್ ದೇಶೀಯರು ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿರುವುದನ್ನು ಉಪನ್ಯಾಸಕರು ಹೇಳಿದರಷ್ಟೆ. ಅದನ್ನು ನೀವು ವಿಶೇಷವಾಗಿ ಗಮನಿಸತಕ್ಕದ್ದು. ಜಪಾನ್‌ದೇಶ ದ್ವೀಪಗಳಿಂದ ಕೂಡಿದ್ದಾದ್ದರಿಂದ ಇತರ ಜನಾಂಗಗಳಿಂದ ಆ ದೇಶೀಯರು ದೂರವಿದ್ದಾರೆ. ಆ ಜನ ಸ್ವತಂತ್ರ ಮನೋ ವೃತ್ತಿಯುಳ್ಳವರು. ಇತರ ಕಾರಣಗಳಿಗಿಂತ ಹೆಚ್ಚಾಗಿ ಈ ಕಾರಣಗಳಿಂದ ಅವರು ಪ್ರಗತಿಯನ್ನು ಸಾಧಿಸಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಬಹುಕಾಲ ದಿಂದ ಅವರು ಕೈಗಾರಿಕೆಗಳಲ್ಲಿಯೂ ವ್ಯಾಪಾರದಲ್ಲಿಯೂ ತೊಡಗಿದ್ದಾರೆ. ಇದ ರಿಂದಲೇ ಕೈಗಾರಿಕೋದ್ಯಮಗಳಲ್ಲಿ ಉಂಟಾದ ಸುಧಾರಣೆಗಳನ್ನು ಕೂಡಲೇ ತಮ್ಮ

---

§ ವಿಶೇಷ ಗಮನ ಸೆಳೆಯುವ ಅಚ್ಚಿನ ಉಪಯೋಗ ಗ್ರಂಥಕರ್ತನದು.

ದೇಶದಲ್ಲಿ ಅನುಸರಿಸಲು ಅವರಿಗೆ ಸಾಧ್ಯವಾಯಿತು. ನಾವಾದರೋ ಒಂದು ಭೂಖಂಡಕ್ಕೆ ಸೇರಿದವರು. ವ್ಯವಸಾಯವೇ ನಮ್ಮ ದೇಶದ ಏಕೈಕವೃತ್ತಿ. ವ್ಯವಸಾಯ ಮಾಡುವವರು ಒಂದೇ ಕಡೆ ನೆಲೆ ನಿಂತು ಸುಖವಾಗಿ ಜೀವಿಸಬಲ್ಲವ ರಾದರೂ ತಮ್ಮ ಸ್ಥಳದಿಂದ ಹೊರಗಡೆ ಹೋಗದಿರುವ ಪ್ರವೃತ್ತಿ ಅವರಲ್ಲಿ ಉಂಟಾ ಗುತ್ತದೆ. ಯಾವ ಬದಲಾವಣೆಯೂ ಅವರ ಮನಸ್ಸಿಗೆ ಒಗ್ಗದು. ನಾವು ಹಿಂದು ಳಿದಿರುವುದಕ್ಕೆ ಇವು ಕಾರಣವಲ್ಲದೇ ಜಾತಿಯಲ್ಲ."

ರಂಗಾಚಾರ್ಲುರವರು ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟರು. ಮಹಾರಾಜ ಕಾಲೇಜಿನಲ್ಲಿ ಅವರು ಭಾಷಣ ಮಾಡಿದಾಗ ಹಳ್ಳಿಗಾಡಿನ ಜನರಿಗೆ ಆವಶ್ಯಕವಾದ ಪುಸ್ತಕಗಳನ್ನು ಬರೆಸಬೇಕು, ದೇಶೀಯ ಭಾಷೆಯ ಸಾಹಿತ್ಯವನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಬೇಕು ಎಂದು ಹೇಳಿದರಷ್ಟೆ. ತಮಿಳು ಅವರ ಮಾತೃಭಾಷೆ. ಆದರೆ ಅವರಿಗೆ ಕನ್ನಡದಲ್ಲಿ ನಿಜ ವಾದ ಅಭಿಮಾನ ಇದ್ದಿತು. ಸಂಸ್ಥಾನದ ಭಾಷೆಯಾದ ಕನ್ನಡವನ್ನು ಕಲಿಯ ಬೇಕೆನ್ನುವುದು ಅವರ ಅಪೇಕ್ಷೆಯಾಗಿದ್ದಿತು. ಕನ್ನಡ ವ್ಯಾಕರಣದ ಬಗೆಗೆ ಅವರು ಟೀಕೆ ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು. ಪ್ರಸಿದ್ಧ ಕವಿಗಳಾದ ಬಸಪ್ಪಶಾಸ್ತ್ರಿಗಳು ಕಾಳಿದಾಸನ ಶಾಕುಂತಲ ನಾಟಕವನ್ನು ಭಾಷಾಂತರಿಸುವಂತೆ ಅವರು ಪ್ರೋತ್ಸಾ ಹಿಸಿದರು. ಬಸಪ್ಪಶಾಸ್ತ್ರಿಗಳ ಕನ್ನಡ ಶಾಕುಂತಲವು ಸರ್ವಾದರಣೀಯವಾದ ಗ್ರಂಥವಾಗಿದೆ. ರಂಗಾಚಾರ್ಲುರವರು ಅವರಿಗೆ ಕರ್ನಾಟಕ ಕಾಳಿದಾಸನೆಂಬ ಬಿರುದನ್ನು ಕೊಟ್ಟರು.

ರಂಗಾಚಾರ್ಲುರವರ ಪ್ರೋತ್ಸಾಹ, ಉತ್ತೇಜನಗಳಿಂದಾಗಿ ಗಿರಿಭಟ್ಟ ತಮ್ಮಯ್ಯ, ಸುಂದರಶಾಸ್ತ್ರಿಗಳು, ಜಯರಾಯಾಚಾರ್ಯರು, ನಂಜನಗೂಡು ಸುಬ್ಬಾಶಾಸ್ತ್ರಿಗಳು, ಅನಂತನಾರಾಯಣಶಾಸ್ತ್ರಿಗಳು ಮುಂತಾದ ಪಂಡಿತರು ಒಳ್ಳೆಯ ರಾಗಗಳಲ್ಲಿ ಹೃದ್ಯವಾದ ಗೀತೆಗಳನ್ನು ರಚಿಸಿದರು. ಈ ಗೀತಗಳು ಮಹಾ ರಾಣಿ ಕಾಲೇಜಿನ ವಿದ್ಯಾರ್ಥಿನಿಯರ ಉಪಯೋಗಕ್ಕಾಗಿ ಪ್ರಕಟವಾದ "ಬಾಲಿಕಾ ಗೀತ ಮುಕ್ತಾ ಕಲಾಪ" ಎನ್ನುವ ಕನ್ನಡ ಹಾಡುಗಳ, ಸಂಸ್ಕೃತ ಶ್ಲೋಕಗಳ ಸಂಕಲನದಲ್ಲಿ ಅಚ್ಚಾದವು. ಅಲ್ಲದೇ ರಂಗಾಚಾರ್ಲುರವರ ಪ್ರೋತ್ಸಾಹದಿಂದ ಶಾಕುಂತುಲ ನಾಟಕ ಕಂಪೆನಿ ಎಂಬ ನಾಟಕ ಸಂಸ್ಥೆಯೊಂದು ಸ್ಥಾಪಿತವಾಯಿತು.

ಅಧ್ಯಾಯ 10

# ವ್ಯಕ್ತಿಚಿತ್ರ

ರಂಗಾಚಾರ್ಲುರವರು "ಮೈಸೂರಿನಲ್ಲಿ 50 ವರ್ಷಗಳ ಬ್ರಿಟಿಷ್ ಆಡಳಿತ" ಎಂಬ ತಮ್ಮ ಗ್ರಂಥದಲ್ಲಿ ದೇಶೀಯರ ಪ್ರಭುತ್ವಕ್ಕೆ ಭದ್ರವಾದ ಬುನಾದಿಯನ್ನು ಕಲ್ಪಿಸುವುದು ಹೇಗೆ ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾ, "ದೇಶೀಯರಿಗೆ ಸರಿಯಾಗಿ ಶಿಕ್ಷಣವನ್ನೂ, ತರಬೇತನ್ನೂ ಕೊಡುವುದರಿಂದಲೂ, ಒಳ್ಳೆಯ ಸರ್ಕಾರವನ್ನು ವ್ಯವಸ್ಥೆಗೊಳಿಸುವುದಕ್ಕೆ ತಕ್ಕ ಶಕ್ತಿಯನ್ನು ಅವರಲ್ಲಿ ಉಂಟುಮಾಡುವುದರಿಂದಲೂ ದೇಶೀಯ ಪ್ರಭುತ್ವಕ್ಕೆ ತಕ್ಕ ಅಡಿಪಾಯವನ್ನು ನಿರ್ಮಿಸಬಹುದು" ಎಂದು ಹೇಳಿದ್ದಾರೆ. ದಕ್ಷವೂ, ಪ್ರಜಾಹಿತಸಾಧಕವೂ ಆದ ಆಡಳಿತ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಿದ್ದು ಮೈಸೂರಿಗೆ ಅವರು ಸಲ್ಲಿಸಿದ ವಿಶಿಷ್ಟಸೇವೆಯಾಗಿದೆ. ಜನಗಳಲ್ಲಿ ಸ್ವತಂತ್ರವಾಗಿ ಉದ್ಯೋಗ, ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ತಕ್ಕ ಧೈರ್ಯ, ಸಾಹಸಗಳು ಉಂಟಾಗುವಂತೆ ಅವರಲ್ಲಿ ಸ್ವಾವಲಂಬನೆ ಬೆಳೆಯುವಂತೆ, ಆಧುನಿಕ ಜಗತ್ತಿನ ಪ್ರಗತಿಪರ ಅಭಿಪ್ರಾಯಗಳು ಜನಗಳಲ್ಲಿ ಹರಡುವಂತೆ ಅವರು ಶ್ರಮಿಸಿದರು. ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಪ್ರಜಾಜನರಿಗೆ ರಾಜ್ಯಾಡಳಿತದ ವಿಷಯದಲ್ಲಿ ತಮ್ಮ ಮಾತನ್ನು ಹೇಳುವ ಅಧಿಕಾರವಿದೆ ಎನ್ನುವ ತತ್ವಕ್ಕೆ ಅವರು ಮನ್ನಣೆ ಕೊಟ್ಟರು. ರಾಜ್ಯಾಡಳಿತದಲ್ಲಿ ಪ್ರಜಾಜನರು ಸಕ್ರಿಯವಾದ ಪಾತ್ರವನ್ನು ವಹಿಸುವುದಕ್ಕೆ ಪ್ರಜಾಪ್ರತಿನಿಧಿ ಸಭೆಯು ತಕ್ಕ ಅವಕಾಶವನ್ನು ಕಲ್ಪಿಸುತ್ತದೆ ಎಂಬುದು ಅವರ ನಂಬಿಕೆಯಾಗಿದ್ದಿತು. ರಂಗಾಚಾರ್ಲುರವರು ಮೈಸೂರಿನಲ್ಲಿ ದಿವಾನರಾಗಿದ್ದ ಕಾಲದಲ್ಲಿ ಭಾರತದ ಇತರ ದೇಶೀಯ ಸಂಸ್ಥಾನಗಳಲ್ಲಿ ಬಹು ಸಮರ್ಥರೂ, ದಕ್ಷರೂ ಆದ ದಿವಾನರಿದ್ದರು. ಆದರೆ ಅವರಿಗಿಲ್ಲದ ಒಂದು ವೈಶಿಷ್ಟ್ಯ ರಂಗಾಚಾರ್ಲುರವರಿಗಿದ್ದಿತು. ಸಾರ್ವಜನಿಕಹಿತಕ್ಕಾಗಿ ಹೋರಾಡುವ ಪ್ರವೃತ್ತಿ, ಪ್ರಜಾಪ್ರತಿನಿಧಿ ಸಂಸ್ಥೆಗಳಲ್ಲಿ ಅವರಿಗಿದ್ದ ಗಾಢ ವಿಶ್ವಾಸ ಇವುಗಳೇ ಅವರ ಈ ವೈಶಿಷ್ಟ್ಯಕ್ಕೆ ಕಾರಣವಾಗಿದ್ದವು.

ರಂಗಾಚಾರ್ಲುರವರು ಮಹಾಧೈರ್ಯಶಾಲಿಗಳಾದ ಆಡಳಿತಗಾರರೆಂದು ಹೆಸರು ಗಳಿಸಿದ್ದರು. ಜೀವನದಲ್ಲಿ ಎಂತಹ ಕಠಿಣ ಪ್ರಸಂಗ ಬಂದರೂ ವಿಚಲಿತ ವಾಗದ ಸಂಕಲ್ಪಬಲ ಅವರಿಗಿದ್ದಿತು. ಈ ಸ್ಥೈರ್ಯ ಮನೋದಾರ್ಢ್ಯಗಳೇ ಅವರ ವೈಶಿಷ್ಟ್ಯವಾಗಿದ್ದವು. ಅವರ ತಂದೆಯವರು ಅವರ ಬಾಲ್ಯದಲ್ಲಿಯೇ ಗತಿಸಿದ್ದರು. ಆಗ ಅವರ ಕುಟುಂಬ ನಿರ್ಗತಿಕವಾಗಿ ಬೀದಿಯಲ್ಲಿ ನಿಲ್ಲಬೇಕಾದ ಪ್ರಸಂಗ ಬಂದಿದ್ದಿತು. ಕುಟುಂಬದ ಪರಿಸ್ಥಿತಿಯನ್ನು ನೋಡಿ ರಂಗಾಚಾರ್ಲುರವರ ಚಿಕ್ಕಪ್ಪಂದಿರಾದ ರಾಮಯ್ಯಂಗಾರರವರು ಅದರ ಪೋಷಣೆಯ ಭಾರವನ್ನು ವಹಿಸಿಕೊಂಡರು. ಆದರೆ ಅದರಿಂದ ರಂಗಾಚಾರ್ಲುರವರ ಕುಟುಂಬ ಬಡತನದಿಂದ ಪಾರಾಯಿತೆಂದು ಹೇಳಲಾಗುವುದಿಲ್ಲ. ಹೀಗಾಗಿ ಜೀವನದಲ್ಲಿ ರಂಗಾಚಾರ್ಲುರವರು ಸ್ವಾವಲಂಬಿಗಳಾಗಬೇಕಾಯಿತು. ಶಾಲೆಯಲ್ಲಿಯೂ ಅನಂತರ ಸರ್ಕಾರದ ಅಧಿಕಾರಿಗಳಾಗಿದ್ದಾಗಲೂ ಅವರ ಸ್ವತಂತ್ರ ಮನೋವೃತ್ತಿಯನ್ನು ತೋರಿಸುವ ಅನೇಕ ಪ್ರಸಂಗಗಳು ನಡೆದವು. ಸರ್ಕಾರದಲ್ಲಿ ಸಣ್ಣ ನೌಕರಿಯಲ್ಲಿದ್ದಾಗ ಕಂದಾಯ ಇಲಾಖೆಯಲ್ಲಿ ರೂಢಿಯಾಗಿದ್ದ ಲಂಚರುಷವತ್ತುಗಳ ಮೇಲೆ ಪುಸ್ತಕವನ್ನು ಬರೆದರು. ಆಗ ಅವರಿಗೆ 25 ವರ್ಷ ಮಾತ್ರ. ಈ ಪುಸ್ತಕ ಬರೆದಿದ್ದರಿಂದ ದೊಡ್ಡ ದೊಡ್ಡ ಜಾಗಗಳಲ್ಲಿದ್ದ ಪ್ರಭಾವಶಾಲಿಗಳಾದ ಅಧಿಕಾರಿಗಳ ಕೋಪವನ್ನು ಅವರು ಎದುರಿಸಬೇಕಾಯಿತು. ಆದರೆ ಅವರು ಹೆದರಲಿಲ್ಲ. ಅವರು ಸಮುದ್ರ ಪ್ರಯಾಣವನ್ನು ಮಾಡಿದುದನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಆಗ ಅವರು ಸಮಾಜದ ವಿರೋಧವನ್ನೂ, ಬಹಿಷ್ಕಾರವನ್ನೂ ಎದುರಿಸಬೇಕಾಯಿತು. ಅದರಿಂದ ಅವರೂ ಅವರ ಕುಟುಂಬದವರೂ, ಅನೇಕ ಬಗೆಯ ತೊಂದರೆಗಳನ್ನೂ, ಯಾತನೆಗಳನ್ನೂ ಅನುಭವಿಸಬೇಕಾಯಿತು. ಆದರೆ ಸಮುದ್ರಪ್ರಯಾಣ ಮಾಡುವುದು ಸೂಕ್ತವೆಂದು ಅವರು ನಿರ್ಧಾರಮಾಡಿದ ಮೇಲೆ ಎಷ್ಟೇ ವಿರೋಧ ಬಂದಾಗಲೂ ಅವರು ಮಣಿಯಲಿಲ್ಲ.

ಅವರ ಧೈರ್ಯಕ್ಕೆ ಇನ್ನೊಂದು ಉದಾಹರಣೆಯನ್ನು ಕೊಡಬಹುದು. ಅವರು ಮಹಾರಾಜರಿಗೆ ಪೋಷಕರಾಗಿದ್ದ ಕರ್ನಲ್ ಮ್ಯಾಲಿಸನ್‌ರವರಿಗೆ ಸಹಾಯಕರಾಗಿದ್ದರು. ಒಂದು ದಿನ ಕರ್ನಲ್ ಮ್ಯಾಲಿಸನ್‌ರವರು ಮಹಾರಾಜರ ವಿಷಯದಲ್ಲಿ ಅವಿನಯವಾಗಿ ನಡೆದುಕೊಂಡರು. ರಂಗಾಚಾರ್ಲುರವರು ಕೂಡಲೇ ಆ ವರ್ತನೆ ಸರಿಯಲ್ಲವೆಂದು ಪ್ರತಿಭಟಿಸಿದರು. ಮ್ಯಾಲಿಸನ್‌ರವರಿಗೆ ವಿಪರೀತ

ಕೋಪ ಬಂದಿತು. ಅವರು ರಂಗಾಚಾರ್ಲುರವರಿಗೆ "ನನಗೆ ಹೇಳುವುದಕ್ಕೆ ನೀವು ಯಾರು?" ಎಂದು ಕೇಳಿದರು. "ನಮ್ಮಿಬ್ಬರನ್ನೂ ನಿಯಮಿಸಿರುವುದು ಮಹಾರಾಜರಿಗೆ ಸಹಾಯವನ್ನು ಮಾಡುವುದಕ್ಕಲ್ಲದೇ ಅವರನ್ನು ಅವಮಾನಪಡಿಸುವುದಕ್ಕಲ್ಲ" ಎಂದು ರಂಗಾಚಾರ್ಲುರವರು ಉತ್ತರಕೊಟ್ಟರು. ಮಹಾರಾಜರ ಸ್ಥಾನಮಾನಗಳನ್ನೂ, ಘನತೆ ಗೌರವಗಳನ್ನೂ ರಕ್ಷಿಸುವುದರಲ್ಲಿ ರಂಗಾಚಾರ್ಲುರವರು ನಿರ್ಭೀತರಾಗಿದ್ದರು. ಅವರ ಯೋಗಕ್ಷೇಮದಲ್ಲಿ ಅವರಿಗಿದ್ದ ಆಸ್ಥೆ ತುಂಬ ಗಾಢವಾದುದು.

ಒಮ್ಮೆ ಅರಮನೆಯಲ್ಲಿ ಒಂದು ವಿವಾಹವು ನಡೆಯಿತು. ಆಗ ಪಿಚಕಾರಿಗಳಲ್ಲಿ ಬಣ್ಣಬಣ್ಣದ ನೀರನ್ನು ತುಂಬಿಕೊಂಡು ಅಲ್ಲಿ ಬಂದಿದ್ದವರ ಮೇಲೆಲ್ಲಾ ಚಿಮ್ಮಿಸಲಾಯಿತು. ಅದು ಸಂತೋಷ ಸಮಾರಂಭ. ಸನ್ನಿವೇಶ ಉತ್ಸಾಹ ಸಡಗರಗಳಿಂದ ತುಂಬಿತ್ತು. ಪರಿಹಾಸ್ಯ, ಕುಚೋದ್ಯಗಳು ಇಂತಹ ಸಂದರ್ಭಗಳಲ್ಲಿ ಕಂಡು ಬರುವುದು ಸಹಜವಷ್ಟೆ. ಮಹಾರಾಜರ ಕೆಲವು ಬಂಧುಗಳೂ, ಸ್ನೇಹಿತರೂ ಅವರ ವಿಷಯದಲ್ಲಿ ಅವರ ಘನತೆ ಗೌರವಗಳಿಗೆ ಅನುಚಿತವಾದ ರೀತಿಯಲ್ಲಿ ವರ್ತಿಸಿದರು. ಅಲ್ಲಿ ಇದ್ದ ರಂಗಾಚಾರ್ಲುರವರು "ಮಹಾರಾಜರು ನಿಮ್ಮ ಪ್ರಭುಗಳು, ಅದನ್ನು ಮರೆತು ವರ್ತಿಸುವುದು ಸರಿಯಲ್ಲ" ಎಂದು ಎಚ್ಚರಿಸಿ ಬುದ್ಧಿ ಹೇಳಿದರು. ಭಾರತ ಸರ್ಕಾರದವರು ಕರ್ನಲ್ ಮ್ಯಾಲಿಸನ್‌ರವರ ಸಲಹೆಯಂತೆ ಮಹಾರಾಜರ ವಿದ್ಯಾಭ್ಯಾಸಕ್ಕೆ ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಬೇಕೆಂದು ಮಹಾರಾಣಿಯವರಿಗೆ ಸೂಚಿಸಿದ್ದರು. ಮೈಸೂರಿನ ಅರಮನೆಯಲ್ಲಿ ವಾತಾವರಣ ಸರಿಯಾಗಿರಲಿಲ್ಲ. ಅಲ್ಲಿಯ ಸಿಬ್ಬಂದಿ ವರ್ಗದಲ್ಲಿ ನುಡಿ ನಡೆ ಶುದ್ಧಿ ಇಲ್ಲದ ಕೆಲವು ಜನರಿದ್ದರು. ಮಹಾರಾಜರ ಸಮೀಪದಲ್ಲಿದ್ದು ದಿನದಿನವೂ ಅವರ ಪರಿಚಾರಿಕೆಯನ್ನು ನಡೆಸುತ್ತಿದ್ದ ಸೇವಕರು ಇಂತಹವರಾಗಿದ್ದರು. ಸಂದರ್ಭ ಹೀಗಿರಲಾಗಿ ಎಳೆಯ ವಯಸ್ಸಿನ ಮಹಾರಾಜರ ಮೇಲೆ ಏನು ದುಷ್ಪರಿಣಾಮವಾಗುವುದೋ ಎಂಬ ಭಯಕ್ಕೆ ಅವಕಾಶವಿದ್ದಿತು. ಆದ್ದರಿಂದ ಈ ಕಲುಷಿತವಾದ ವಾತಾವರಣದಿಂದ ಮಹಾರಾಜರನ್ನು ದೂರವಿರಿಸಲು ಬೆಂಗಳೂರಿನಲ್ಲಿ ಅವರ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಬೇಕೆಂಬ ಅಭಿಪ್ರಾಯ ಉಂಟಾಯಿತು. ರಂಗಾಚಾರ್ಲುರವರೇ ಈ ರೀತಿ ಮೊದಲು ಆಲೋಚಿಸಿದವರೆಂದು ಕಾಣುತ್ತದೆ. ಆದರೆ ಮಹಾರಾಣಿಯವರು ಚಿಕ್ಕ ವಯಸ್ಸಿನ ಮಹಾರಾಜರನ್ನು ಬೆಂಗಳೂರಿಗೆ ಕಳುಹಿಸುವುದಕ್ಕೆ ವಿರೋಧವಾಗಿದ್ದರು. ಮೈಸೂರು ಬಹುಕಾಲದಿಂದಲೂ ರಾಜ್ಯದ ರಾಜಧಾನಿಯಾಗಿದ್ದಿತು. ಆದ್ದರಿಂದ ಅಲ್ಲಿಂದ ಮಹಾ

ರಾಜರನ್ನು ಬೇರೆ ಕಡೆಗೆ ಕಳುಹಿಸುವುದು ರಾಜಕೀಯ ಕಾರಣಗಳಿಗಾಗಿ ಸೂಕ್ತವಾಗಿರಲಿಲ್ಲ. ಈ ಕಾರಣದಿಂದಲೂ, ಮಹಾರಾಣಿಯವರು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದುದರಿಂದಲೂ ಮಹಾರಾಜರು ಮೈಸೂರಿನಲ್ಲಿಯೇ ಇರಬೇಕೆಂದು ತೀರ್ಮಾನಿಸಲಾಯಿತು. ಆದ್ದರಿಂದ ರಂಗಾಚಾರ್ಲುರವರು ಅರಮನೆಯ ಸಿಬ್ಬಂದಿಯಲ್ಲಿ ಇದ್ದ ನಡೆನುಡಿ ಶುದ್ಧವಿಲ್ಲದ ಜನರನ್ನು ಹೊರಗೆ ಕಳುಹಿಸಬೇಕಾಯಿತು. ಇದರಿಂದ ಮಹಾರಾಣಿಯವರಿಗೆ ಅವರ ವಿಷಯದಲ್ಲಿ ಅಸಮಾಧಾನ ಉಂಟಾಯಿತು. ಆದರೆ ಭಾರತ ಸರ್ಕಾರದವರೂ, ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟರೂ ಈ ಕ್ರಮ ಅಗತ್ಯವೆಂಬುದನ್ನು ಮನಗಂಡರು. ಅವರು ಮಹಾರಾಣಿಯವರಿಗೆ ಈ ಕ್ರಮ ಹೇಗೆ ಸೂಕ್ತವೆಂಬುದನ್ನು ವಿವರಿಸಿ ಅವರಿಗೂ ರಂಗಾಚಾರ್ಲುರವರಿಗೂ ಮಧ್ಯೆ ಬೆಳೆದಿದ್ದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿದರು.

ರಂಗಾಚಾರ್ಲುರವರು ಬೆಂಗಳೂರಿನಲ್ಲಿ "ಲಿಟರರಿ ಯೂನಿಯನ್" ಎಂಬ ಸಂಘವನ್ನು ಸ್ಥಾಪಿಸುವುದಕ್ಕೆ ಕಾರಣರಾಗಿದ್ದರು. ವಿಜ್ಞಾನ, ಕಲೆ, ಸಾಹಿತ್ಯ, ಸಮಾಜ ಸುಧಾರಣೆ ಮತ್ತು ದೇಶಾಭಿವೃದ್ಧಿಗೆ ಸಂಬಂಧಪಟ್ಟ ಇತರ ಎಲ್ಲ ವಿಷಯಗಳನ್ನು ಕುರಿತು ಅಭ್ಯಾಸ ಮಾಡುವ, ಚರ್ಚಿಸುವ ಉದ್ದೇಶದಿಂದ ಈ ಸಂಘ ಸ್ಥಾಪಿತವಾಯಿತು. ಸರ್ಕಾರಿ ಅಧಿಕಾರಿಗಳು, ವಕೀಲಿ ಮುಂತಾದ ವೃತ್ತಿಗಳಿಗೆ ಸೇರಿದ ಜನರು, ಸಮಾಜದಲ್ಲಿ ಗಣ್ಯರಾಗಿದ್ದ ವ್ಯಕ್ತಿಗಳು ವಿದ್ಯಾವಂತರು ಈ ಸಂಘದ ಸಭೆಗಳಿಗೆ ಬರುತ್ತಿದ್ದರು. ಈ ಸಂಘವು ಸಂಸ್ಥಾನದ ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯವಾದ ಕಾರ್ಯವನ್ನು ಮಾಡಿತು. ರಂಗಾಚಾರ್ಲುರವರು ಅದರ ಸಭೆಗಳಲ್ಲಿ ಅನೇಕ ಬಾರಿ ಭಾಗವಹಿಸುತ್ತಿದ್ದರು. ಇಂದಿಗೂ ಬೆಂಗಳೂರು ವಕೀಲರ ಸಂಘದ ಅಂಗಸಂಸ್ಥೆಯಾಗಿ ಈ ಸಂಘವು ಮುಂದುವರಿಯುತ್ತಿದೆ.

ಪ್ರಜಾಜನರ ಉದ್ದೇಶ ಅಭೀಷ್ಟಗಳು ಸಾಧನೆಯಾಗಬೇಕಾದರೆ ಅವು ಏನು ಎಂಬುದನ್ನು ಅರಿತು ಪ್ರಕಾಶಗೊಳಿಸುವ ಸಾಧನಗಳಿರಬೇಕು. ಈ ಸಾಧನಗಳೇ ವೃತ್ತಪತ್ರಿಕೆಗಳು. ಆದ್ದರಿಂದ ಪ್ರಜಾಜನರ ಆಶೋತ್ತರಗಳು ಈಡೇರಬೇಕಾದರೆ ಅವನ್ನು ಪ್ರತಿಬಿಂಬಿಸುವ ಪತ್ರಿಕೆಗಳು ಅಗತ್ಯ. ಹೀಗೆ ಜನಜೀವನದಲ್ಲಿ ಪತ್ರಿಕೆಗಳಿಗೆ ಮಹತ್ತರವಾದ ಪಾತ್ರವಿದೆ ಎಂಬ ಗಾಢವಾದ ನಂಬಿಕೆ ರಂಗಾಚಾರ್ಲುರವರಿಗೆ ಇದ್ದಿತು. ಅಲ್ಲದೇ ಜನಾಭಿಪ್ರಾಯವನ್ನು ರೂಪಿಸುವುದರಲ್ಲಿ, ಆಧುನಿಕ

ಪ್ರಗತಿಪರ ವಿಚಾರಗಳನ್ನು ಜನಗಳಲ್ಲಿ ಹರಡುವುದರಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸಮಾಡುವ ಶಕ್ತಿ ಪತ್ರಿಕೆಗಳಿಗೆ ಇದೆಯೆಂಬುದನ್ನು ಅವರು ಅರಿತಿದ್ದರು.

ಮೈಸೂರಿನ ವೃದ್ಧ ಪಿತಾಮಹರೆಂದು ಪ್ರಸಿದ್ಧರಾದ ವೆಂಕಟಕೃಷ್ಣಯ್ಯನವರು (1844–1933) ಮೈಸೂರಿನ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಹತ್ತರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಬಡ ಕುಟುಂಬವೊಂದರಲ್ಲಿ ಜನಿಸಿ, ಬಹಳ ಕಷ್ಟದಿಂದ ಮೇಲಕ್ಕೆ ಬಂದ ವೆಂಕಟಕೃಷ್ಣಯ್ಯನವರು ರಂಗಾಚಾರ್ಲುರವರ ಪ್ರಭಾವಕ್ಕೆ ಒಳಗಾದವರ ಪೈಕಿ ಒಬ್ಬರು. ಅವರು ರಂಗಾಚಾರ್ಲುರವರ ಪ್ರೇರಣೆ ಪ್ರೋತ್ಸಾಹಗಳಿಂದ ರಾಜ್ಯ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅನೇಕ ಗ್ರಂಥಗಳನ್ನು ಓದಿದರು. ತಮ್ಮ ಜೀವನವನ್ನು ಜನಸೇವೆಗೆ ಮುಡುಪಾಗಿಡಬೇಕೆಂಬ ಅಭಿಪ್ರಾಯ ಅವರಲ್ಲಿ ಅಂಕುರಿಸಲು ರಂಗಾಚಾರ್ಲುರವರ ಪ್ರಭಾವವೇ ಕಾರಣ.

ಅರಮನೆಯಲ್ಲಿ ಅಧಿಕಾರಿಗಳಾಗಿದ್ದ ಗುರುಕಾರ ಮರಿಮಲ್ಲಪ್ಪ ಎಂಬುವರು ಆಗ ಅರಮನೆಯ ಹಣಕಾಸಿನ ಅಧಿಕಾರಿಗಳಾಗಿದ್ದ ರಂಗಾಚಾರ್ಲುರವರ ಪ್ರೇರಣೆಯ ಮೇರೆಗೆ ಹುಡುಗರಿಗೆ ವಸತಿ ಊಟಗಳಿಗೆ ವ್ಯವಸ್ಥೆ ಇರುವ ಶಾಲೆಯೊಂದನ್ನು ತೆರೆಯಲು 18 ಸಾವಿರ ರೂಪಾಯಿಗಳನ್ನು ಕೊಡುಗೆಯಾಗಿ ಕೊಟ್ಟರು. ಆ ಶಾಲೆ ಅವರ ಮನೆಯಲ್ಲೇ ಪ್ರಾರಂಭವಾಯಿತು. ವೆಂಕಟಕೃಷ್ಣಯ್ಯನವರು 1875 ರ ಸುಮಾರಿಗೆ ಈ ಶಾಲೆಯಲ್ಲಿ ತಿಂಗಳಿಗೆ 10 ರೂಪಾಯಿ ಸಂಬಳದ ಮೇಲೆ ಉಪಾಧ್ಯಾಯರಾಗಿ ಸೇರಿದರು. ಆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಎಸ್. ರಂಗಾಚಾರ್ ಎಂಬುವರು ಬೇರೆಯ ಕಡೆ ಕೆಲಸಕ್ಕೆ ಹೋದಾಗ ವೆಂಕಟಕೃಷ್ಣಯ್ಯನವರು ಅವರ ಸ್ಥಾನದಲ್ಲಿ ಆ ಶಾಲೆಯ ಮುಖ್ಯಸ್ಥರಾದರು. ಸರ್ಕಾರದ ನೀತಿಯನ್ನೂ, ಕೆಲಸ ಕಾರ್ಯಗಳನ್ನೂ ನಿಷ್ಪಕ್ಷಪಾತವಾಗಿ ವಿಮರ್ಶಿಸುವ ಪತ್ರಿಕೆಯನ್ನು ಸ್ಥಾಪಿಸುವುದು ಅಗತ್ಯ ಎಂದು ರಂಗಾಚಾರ್ಲುರವರು ವೆಂಕಟಕೃಷ್ಣಯ್ಯನವರಿಗೆ ಹೇಳಿದ ಮೇರೆಗೆ ಅವರು ಪತ್ರಿಕಾ ವೃತ್ತಿಯಲ್ಲೂ ಕಾಲಿಟ್ಟರು. ತಮ್ಮ ಪತ್ರಿಕೆಗಳ ಮೂಲಕ ವೆಂಕಟಕೃಷ್ಣಯ್ಯನವರು ಸಂಸ್ಥಾನಕ್ಕೆ ವಿಶೇಷವಾದ ಸೇವೆಯನ್ನು ಸಲ್ಲಿಸಿದರು.

ರಂಗಾಚಾರ್ಲುರವರು ಪತ್ರಿಕೆಗಳಲ್ಲಿ ತೋರಿಸುತ್ತಿದ್ದ ಆಸಕ್ತಿಗೆ ಇನ್ನೊಂದು ಉದಾಹರಣೆಯನ್ನು ಕೊಡಬಹುದು. ಮದ್ರಾಸಿನ ದೇಶೀಯ ಸಂಘವು ದೇಶದಲ್ಲಿ ಜನಜಾಗೃತಿಯನ್ನು ಉಂಟುಮಾಡುವ ಉದ್ದೇಶದಿಂದ ಒಂದು ಪತ್ರಿಕೆಯನ್ನು

ಸ್ಥಾಪಿಸಬೇಕು ಎಂದು ನಿರ್ಧರಿಸಿತು. ಆಗ ರಂಗಾಚಾರ್ಲುರವರು ಆ ಪತ್ರಿಕೆಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಕಾಗದವನ್ನು ಕೊಂಡುಕೊಡುವುದಾಗಿ ಮಾತು ಕೊಟ್ಟರು.

ರಂಗಾಚಾರ್ಲುರವರಿಗೆ ಸಾರ್ವಜನಿಕ ಕಾರ್ಯಗಳಲ್ಲಿ ವಿಶೇಷವಾದ ಆಸಕ್ತಿ ಇದ್ದಿತೆಂಬುದೂ, ರಾಜಕೀಯ ವಿಷಯಗಳಲ್ಲಿ ಅವರು ತೀಕ್ಷ್ಣಮತಿಗಳೆಂಬುದೂ, ದೇಶೋದ್ಧಾರದಲ್ಲಿ ಅವರಿಗೆ ನಿಜವಾದ ಉತ್ಸಾಹವಿದ್ದಿತೆಂಬುದೂ ದೇಶದ ಎಲ್ಲೆಡೆ ಗೊತ್ತಾಗಿದ್ದ ಸಂಗತಿ. ಅಲ್ಲದೇ ಅವರು ಒಳ್ಳೆಯ ಲೇಖಕರೆಂದು ಪ್ರಸಿದ್ಧರಾಗಿದ್ದರು. ಬೊಂಬಾಯಿಯಲ್ಲಿಯೂ, ಮದ್ರಾಸಿನಲ್ಲಿಯೂ ಇದ್ದ ಅನೇಕ ಸಾರ್ವಜನಿಕ ಸಂಸ್ಥೆಗಳು ಸರ್ಕಾರಕ್ಕೆ ಮನವಿಗಳನ್ನೂ, ಬಿನ್ನಹಗಳನ್ನೂ ಸಮರ್ಪಿಸಬೇಕಾದಾಗ ಅವುಗಳನ್ನು ಸಿದ್ಧಪಡಿಸುವುದರಲ್ಲಿ ರಂಗಾಚಾರ್ಲುರವರ ಸಹಾಯವನ್ನು ತೆಗೆದುಕೊಳ್ಳುತ್ತಿದ್ದವು. ಮುಖ್ಯವಾಗಿ ಮದ್ರಾಸಿನ ದೇಶೀಯ ಸಂಘ ಅವರ ಸಹಾಯವನ್ನು ಪದೇ ಪದೇ ಕೇಳುತ್ತಿತ್ತು. ರಂಗಾಚಾರ್ಲುರವರು ದಿವಾನರಾಗಿದ್ದಾಗ ನಿಸ್ವಾರ್ಥಿಗಳೂ, ದೇಶಾಭಿಮಾನಿಗಳೂ ಆದ ಕೆಲವು ಸ್ನೇಹಿತರನ್ನು ಸಮೀಪವರ್ತಿಗಳಾಗಿ ಇಟ್ಟುಕೊಂಡು ಅವರೊಂದಿಗೆ ಸಾರ್ವಜನಿಕ ವಿಚಾರಗಳನ್ನು ಪದೇ ಪದೇ ಚರ್ಚಿಸುತ್ತಿದ್ದರು. ಹೀಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳು ಈ ಮಿತ್ರರ ಕೂಟದಲ್ಲಿ ಚರ್ಚೆಗೆ ಬಂದಾಗ ಎಲ್ಲರೂ ಮುಚ್ಚುಮರೆಯಿಲ್ಲದೇ ಮಾತನಾಡುತ್ತಿದ್ದರು. ವಾಸ್ತವವಾಗಿ ರಂಗಾಚಾರ್ಲುರವರು ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯಗಳನ್ನು ಬಹು ಆಸಕ್ತಿಯಿಂದ ಕೇಳುತ್ತಿದ್ದರು. ಸತ್ಯಕ್ಕೆ ಹಲವು ಮುಖಗಳುಂಟು, ಅದನ್ನು ಸಮಗ್ರವಾಗಿ ಅರಿಯಬೇಕಾದರೆ ಎಲ್ಲ ಬಗೆಯ ಅಭಿಪ್ರಾಯಗಳಿಗೂ ಕಿವಿಗೊಡಬೇಕು ಎಂಬುದನ್ನು ಅವರು ಅರಿತಿದ್ದರು.

ರಂಗಾಚಾರ್ಲುರವರು ತಮ್ಮ ಕೈಕೆಳಗಿನ ಅಧಿಕಾರಿಗಳ ಘನತೆ ಗೌರವಗಳನ್ನು ಎತ್ತಿಹಿಡಿಯುತ್ತಿದ್ದರು. ಒಂದು ಬಾರಿ ಪೋಲೀಸ್ ಮತ್ತು ಅರಣ್ಯ ಇಲಾಖೆಗಳೆರಡರ ಮುಖ್ಯಾಧಿಕಾರಿಯಾಗಿದ್ದ ಒಬ್ಬ ಯೂರೋಪಿಯನ್ ಅಧಿಕಾರಿಯು ದೇವನಹಳ್ಳಿಗೆ ಅಧಿಕೃತ ಭೇಟಿಯನ್ನು ಕೊಟ್ಟರು. ಅವರನ್ನು ಸ್ವಾಗತಿಸಲು ಅಮಲ್ದಾರರೂ, ಜನರು ಗುಂಪೂ ಸೇರಿದ್ದರು. ರಸ್ತೆಯ ಪಕ್ಕದಲ್ಲಿ ಗೆದ್ದಲು ತಿಂದ ಸರ್ವೆಮರವೊಂದನ್ನು ಆ ಅಧಿಕಾರಿಯು ನೋಡಿದರು. ಆ ಮರವನ್ನು ಒಂದು ಕೋಲಿನಿಂದ ಹೊಡೆದು ಅದು ಟೊಳ್ಳಾಗಿದ್ದುದನ್ನು ತೋರಿಸಿದರು. ಅಲ್ಲೇ

ನಿಂತಿದ್ದ ಅಮಲ್ದಾರರನ್ನು ಆ ಜನಗಳ ಗುಂಪಿನ ಮುಂದೆ, " ನೀವು ಆಡಳಿತ ನಡೆಸು ವುದು ಹೀಗೆಯೋ?" ಎಂದು ಗದರಿಸಿದರು. ಈ ಅಧಿಕಾರಿಯ ಉದ್ಧಟ ವರ್ತನೆಯ ವರದಿ ದಿವಾನರಿಗೆ ತಲುಪಿತು. ಈ ಯೂರೋಪಿಯನ್ ಅಧಿಕಾರಿಯು ತಮ್ಮ ಕಾರ್ಯಸಂಬಂಧವಾಗಿ ದಿವಾನರನ್ನು ಭೇಟಿಮಾಡಬೇಕೆಂದು ಪ್ರಯತ್ನಿಸಿದರು. ಒಂದೊಂದು ಬಾರಿ ಆತನು ಭೇಟಿಗೆ ಪ್ರಯತ್ನಿಸಿದಾಗಲೂ ಅದನ್ನು ಮುಂದಕ್ಕೆ ಹಾಕಲಾಯಿತು. ಎಷ್ಟೋ ಕಾಲವಾದ ಮೇಲೆ ದಿವಾನರು ಆತನಿಗೆ ಸಂದರ್ಶನ ವನ್ನು ಕೊಟ್ಟರು. ಆತನನ್ನು ನೋಡಿದ ಕೂಡಲೆ ಅವರು " ಮಹಾರಾಜರ ಪ್ರತಿ ನಿಧಿಯಾದ ಅಮಲ್ದಾರರನ್ನು ನೀವು ನಡೆಸಿಕೊಳ್ಳುವ ಬಗೆ ಹೀಗೋ? ಜನಗಳ ಮುಂದೆ ಅವರನ್ನು ಗದರಿಸಿದರೆ ಜನಗಳ ದೃಷ್ಟಿಯಲ್ಲಿ ಅವರ ಸ್ಥಾನಮಾನಗಳು ಕಡಿಮೆಯಾಗುವುದಿಲ್ಲವೇ? ಮೇಲಿನ ಅಧಿಕಾರಿಗಳು ತಮ್ಮ ಕೆಳಗಿನ ಅಧಿಕಾರಿಗಳ ಘನತೆ ಗೌರವಗಳನ್ನು ರಕ್ಷಿಸಬೇಕಾದದ್ದು ಅವರ ಕರ್ತವ್ಯವಲ್ಲವೇ?" ಎಂದು ಕೇಳಿದರು. ಆ ಯೂರೋಪಿಯನ್ ಅಧಿಕಾರಿಯು ಕೂಡಲೇ ತಮ್ಮ ವರ್ತನೆಯ ಬಗೆಗೆ ಕ್ಷಮಾಪಣೆಯನ್ನು ಬೇಡಿದರು.

ರಂಗಾಚಾರ್ಲುರವರಿಗೆ ಅನೇಕ ವಿಷಯಗಳಲ್ಲಿ ಆಸಕ್ತಿ ಇದ್ದಿತು. ಗ್ರಂಥಾವ ಲೋಕನ ಅವರಿಗೆ ಬಹು ಪ್ರಿಯವಾದ ಹವ್ಯಾಸ. ಅವರಲ್ಲಿ ದೊಡ್ಡ ಪುಸ್ತಕ ಭಂಡಾ ರವೇ ಇದ್ದಿತು. ಅರಿಸ್ಟೋಟಲ್ ಮೊದಲುಗೊಂಡು ಜಾನ್ ಸ್ಟುಯರ್ಟ್ ಮಿಲ್‌ವರೆ ಗಿನ ಎಲ್ಲ ದಾರ್ಶನಿಕರ ತತ್ವಜ್ಞರ ಗ್ರಂಥಗಳೂ, ಮೆಕಾಲೆಯವರ ಇಂಗ್ಲೆಂಡಿನ ಚರಿತ್ರೆಯೂ, ಪ್ರಪಂಚದ ಅನೇಕ ದೇಶಗಳ ಚರಿತ್ರೆಗಳೂ, ಡಿಕನ್ಸಿ ಮತ್ತು ಥ್ಯಾಕರೆ ಯವರ ಕಾದಂಬರಿಗಳೂ, ಪತ್ರಿಕಾವೃತ್ತಿ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೇಲಿನ ಪುಸ್ತಕಗಳೂ ಅವರ ಗ್ರಂಥಭಂಡಾರದಲ್ಲಿದ್ದವು. ಅವರಲ್ಲಿ ಅಕ್ಬರನ ಆಸ್ಥಾನದಲ್ಲಿ ಮಹಾವಿದ್ವಾಂಸನೂ ಇತಿಹಾಸಕಾರನೂಆಗಿದ್ದ ಅಬುಲ್‌ಫಸಲ್ ಬರೆದ ಐನ್ ಇ ಅಕ್ಬರಿಯೂ ಇದ್ದಿತು. ತತ್ವಶಾಸ್ತ್ರ, ರಾಜನೀತಿಶಾಸ್ತ್ರ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಈ ಪುಸ್ತಕಗಳಲ್ಲದೇ ಅವರಲ್ಲಿ ಖನಿಜಶಾಸ್ತ್ರ, ಖಗೋಳವಿಜ್ಞಾನ ಮತ್ತು ವೈದ್ಯಶಾಸ್ತ್ರಗಳನ್ನು ಕುರಿತ ಗ್ರಂಥಗಳಿದ್ದವು. ಆಯುರ್ವೇದಕ್ಕೆ ಸಂಬಂಧಪಟ್ಟ ಓಲೆ ಗರಿಯ ಅನೇಕ ಗ್ರಂಥಗಳನ್ನು ಅವರು ಸಂಗ್ರಹಿಸಿದ್ದರು. ಅವರಿಗೆ ಆಯುರ್ವೇದ ವನ್ನು ಕಲಿಯಬೇಕೆಂಬ ಇಷ್ಟವಿದ್ದಿತು. ಆದರೆ ಅದಕ್ಕೆ ಸಮಯವನ್ನು ಹೊಂದಿಸ ಲಾಗದೇ ಆ ಶಾಸ್ತ್ರವನ್ನು ಅವರು ಕಲಿಯಲಾಗಲಿಲ್ಲ. ರಂಗಾಚಾರ್ಲುರವರು ಗ್ರೀಕ್

ತತ್ವಜ್ಞಾನಿಯಾದ ಅರಿಸ್ಟೋಟಲನ ಗ್ರಂಥಗಳನ್ನು ಬಹು ಶ್ರದ್ಧೆಯಿಂದ ವ್ಯಾಸಂಗ ಮಾಡಿದ್ದರೆಂಬುದಕ್ಕೆ ಆ ಗ್ರಂಥಗಳಲ್ಲಿ ಕುರುಹುಗಳಿವೆ. ಅಲ್ಲದೇ ಅವರಿಗೆ ಜಾನ್ ಸ್ಟುಯರ್ಟ್ ಮಿಲ್‌ನ ಗ್ರಂಥಗಳು ಮನಸ್ಸಿಗೆ ತುಂಬಾ ಹಿಡಿಸಿದ್ದವೆಂದು ಕಾಣುತ್ತದೆ. ಅವನು ಬರೆದ "ಪ್ರಜಾಪ್ರತಿನಿಧಿ ಸರ್ಕಾರ" ಎಂಬ ಪುಸ್ತಕದಲ್ಲಿ ಅವರು ತಮ್ಮ ಕೈಬರಹದಲ್ಲಿ ವಿಪುಲವಾಗಿ ಟಿಪ್ಪಣಿಗಳನ್ನು ಮಾಡಿದ್ದರು. ಆದರೆ ಅವರ ಬರವಣಿಗೆ ನೋಡಿಯಾಗಿದ್ದು ಅಕ್ಷರಗಳು ಸ್ಪಷ್ಟವಾಗಿಲ್ಲದಿರುವುದರಿಂದ ಆ ಟಿಪ್ಪಣಿಗಳನ್ನು ಓದುವುದು ತುಂಬಾ ಕಷ್ಟಸಾಧ್ಯ.

ರಂಗಾಚಾರ್ಲುರವರು ವಿಚಾರವಾದಿಗಳು. ವಿಚಾರದ ಒರೆಗಲ್ಲಿಗೆ ಹಚ್ಚದೆ ಯಾವ ವಿಷಯವನ್ನೂ ಅವರು ಒಪ್ಪುತ್ತಿರಲಿಲ್ಲ. ಮೂಢನಂಬಿಕೆಗಳಿಗೂ ಅಂಧಶ್ರದ್ಧೆಗಳಿಗೂ ಅವರಿಗೂ ಬಹುದೂರ. ಮತಧರ್ಮಗಳಿಗೆ ಸಂಬಂಧಪಟ್ಟ ವಿಚಾರವಾಗಲಿ, ಸಾಮಾಜಿಕ ಸುಧಾರಣೆಯಾಗಲಿ, ತರ್ಕಬದ್ಧ ದೃಷ್ಟಿಯಿಂದ ಅವನ್ನು ಕೂಲಂಕಷವಾಗಿ ವಿಮರ್ಶಿಸುವುದು ಅವರ ಪದ್ಧತಿಯಾಗಿದ್ದಿತು. ಅವರಿಗೆ ಅನೇಕ ವಿಷಯಗಳಲ್ಲಿದ್ದ ಆಸಕ್ತಿ ಕುತೂಹಲಗಳು ಅವರ ದೃಷ್ಟಿ ಎಷ್ಟು ವ್ಯಾಪಕವಾದುದೆಂಬುದನ್ನು ತೋರಿಸುತ್ತವೆ.

ರಂಗಾಚಾರ್ಲುರವರು ಸ್ನೇಹಪರರು. ಅವರಿಗೆ ಅನೇಕ ಭಾರತೀಯ ಮತ್ತು ಯೂರೋಪಿಯನ್ ಮಿತ್ರರಿದ್ದರು. ಲಾರ್ಡ್ ನೇಪಿಯರ್, ಸರ್ ರಿಚರ್ಡ್ ಮೀಡ್, ಜೇಮ್ಸ್ ಗೋರ್ಡನ್, ಡಬ್ಲ್ಯು. ಎ. ಪೋರ್ಟರ್, ಜೆ.ಬಿ. ಮ್ಯಾಲಿಸನ್, ಜಿ. ಎನ್. ಟೈಲರ್, ಇ. ಬಿ. ಪವೆಲ್, ಸರ್ ಜೇಮ್ಸ್ ಗಾರ್ಡ್‌ನರ್, ಎಲ್. ಬಿ. ಬೌರಿಂಗ್, ಚಾರ್ಲೆಸ್ ಇಲಿಯಟ್, ಸರ್ ವಿಲಿಯಂ ಡಿಗ್ಬಿ, ಜೆ.ಬಿ. ನಾರ್ಟನ್ ಒ. ಜೆ. ಬರ್ನ್ ಮತ್ತು ಆರ್. ಇಲ್ಲಿಸ್ ಅವರ ಯೂರೋಪಿಯನ್ ಮಿತ್ರವರ್ಗಕ್ಕೆ ಸೇರಿದ್ದವರು. ಅವರ ಭಾರತೀಯ ಮಿತ್ರವರ್ಗಕ್ಕೆ ಸೇರಿದ್ದವರು ರಾಜಾ ಸರ್. ಟಿ. ಮಾಧವರಾವ್, ಸರ್. ಎ. ಶೇಷಯ್ಯಶಾಸ್ತ್ರಿ, ವೆಂಬಾಕಂ ರಾಮಯ್ಯಂಗಾರ್, ಸರ್. ಟಿ. ಮುತ್ತುಸ್ವಾಮಿಅಯ್ಯರ್, ದಿವಾನ್ ಬಹದ್ದೂರ್ ಆರ್. ರಘುನಾಥರಾವ್, ಪಿ. ಚಂಚಲರಾವ್, ಸಿ.ಐ.ಇ. ಮತ್ತು ಮೊರಾರ್ಜಿ ಗೋಕುಲದಾಸ್ ಸಿ.ಐ.ಇ. ದೊಡ್ಡ, ದೊಡ್ಡ ಸ್ಥಾನಗಳಲ್ಲಿದ್ದ ಈ ಸ್ನೇಹಿತರೊಂದಿಗೆ ಅವರು ವಿಪುಲವಾಗಿ ಪತ್ರವ್ಯವಹಾರವನ್ನು ನಡೆಸುತ್ತಿದ್ದರು. ಆ ಪತ್ರಗಳು ಕೇವಲ ಸ್ವಂತ ವಿಷ

ಯಕ್ಕೆ ಸಂಬಂಧಪಟ್ಟವಾಗಿರಲಿಲ್ಲ. ಅವುಗಳಲ್ಲಿ ಸಾರ್ವಜನಿಕ ವಿಚಾರಗಳ ಪ್ರಸ್ತಾಪವಿರುತ್ತಿದ್ದಿತು. ದೇಶಾಭ್ಯುದಯದ ವಿಷಯದಲ್ಲಿ ರಂಗಾಚಾರ್ಲುರವರಿಗಿದ್ದ ಕಾತರವೂ ಅವರಿಗೆ ಅನೇಕ ವಿಷಯಗಳಲ್ಲಿದ್ದ ಆಸಕ್ತಿಯೂ ಈ ಪತ್ರಗಳಲ್ಲಿ ಕಂಡು ಬರುತ್ತವೆ. ಅವರ ಒಂದು ಪತ್ರ ಹೀಗಿದೆ :—

ಬೆಂಗಳೂರು, ಏಪ್ರಿಲ್ 22.

ಪ್ರಿಯರಾದ ಶ್ರೀ ಇಲಿಯಟ್‌ರವರೇ,

ಮಂಜರಾಬಾದಿನಿಂದ ನೀವು ಬರೆದ ಪತ್ರ ನನಗೆ ತಲುಪಿದೆ. ನೀವು ಇಂಗ್ಲೆಂಡ್ ತಲುಪುವವರೆಗೆ ನಾನು ಉತ್ತರ ಬರೆಯುವುದನ್ನು ನಿಧಾನ ಮಾಡಿದೆನು. ಈ ವೇಳೆಗೆ ನೀವು ನಿಮ್ಮ ಇಂಗ್ಲಿಷ್ ಸ್ನೇಹಿತರೊಂದಿಗೆ ಮತ್ತೇ ಸೇರಿದ್ದೀರೆಂದೂ, ನಿಮ್ಮ ಪುಟ್ಟ ಮಗ ಚೆನ್ನಾಗಿದ್ದಾನೆಂದೂ ಆಶಿಸುತ್ತೇನೆ. ತುಂಬಾ ಆಯಾಸಕರವಾದ, ದೀರ್ಘವಾದ ಪ್ರಯಾಣವನ್ನು ಮಾಡಿಕೊಂಡು ಈ ದೇಶಕ್ಕೆ ಶ್ರೀಮತಿ ಇಲಿಯಟ್ಟರು ಬಂದಿದ್ದಾರೆ. ಈ ದೇಶದ ಜನರಲ್ಲಿ ಅವರಿಗಿರುವ ಸಹಾನುಭೂತಿಯನ್ನು ತೋರಿಸುವುದೇ ಈ ಪ್ರಯಾಣ ಅವರು ಕೈಗೊಳ್ಳುವುದಕ್ಕೆ ಕಾರಣ. ಇಂತಹ ಪ್ರಯಾಣವನ್ನು ಕೈಗೊಳ್ಳುವುದಕ್ಕೆ ಕಾರಣವಾದ ಅವರ ದಯಾರ್ದ್ರತೆಯನ್ನು ನಾನು ಮೆಚ್ಚದಿರಲಾರೆ. ನನ್ನ ಪತ್ನಿ ಇದನ್ನು ಪರಮಾಶ್ಚರ್ಯಕರವಾದ ವಿಷಯವೆಂದು ಎಣಿಸುತ್ತಾರೆ. ಪರರ ವಿಷಯದಲ್ಲಿ ದಯೆ‌ಅನುಕಂಪಗಳನ್ನೂ, ಸ್ನೇಹವಿಶ್ವಾಸಗಳನ್ನೂ ತೋರುವುದು ನಮ್ಮ ಜನಾಂಗದ ನೀತಿನಿಯಮಗಳಲ್ಲಿ ಒಂದಾಗಿದೆ. ಆದರೆ ನಮ್ಮ ಆಚಾರ ಪದ್ಧತಿಗಳು ಇತರರೊಡನೆ ಹೆಚ್ಚಾಗಿ ನಮ್ಮ ಜನ ಬೆರೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಆದ್ದರಿಂದ ಇತರರ ವಿಷಯದಲ್ಲಿ ದಯೆ‌ಅನುಕಂಪಗಳನ್ನೂ, ಸ್ನೇಹವಿಶ್ವಾಸಗಳನ್ನೂ ತೋರಿಸುವುದಕ್ಕೆ ನಿಮ್ಮಲ್ಲಿ ಇರುವಷ್ಟು ಅವಕಾಶ ನಮ್ಮಲ್ಲಿ ಇಲ್ಲ. ನೀವು ಇಲ್ಲಿ ಸ್ವಲ್ಪಕಾಲವೇ ಇದ್ದುದರಿಂದ ನಾವು ಮತ್ತು ನೀವು ಪರಸ್ಪರವಾಗಿ ಹೆಚ್ಚಾಗಿ ಒಬ್ಬರನ್ನೊಬ್ಬರು ನೋಡಲವಕಾಶವಾಗಲಿಲ್ಲವೆಂದು ನಮಗೆ ತುಂಬಾ ವಿಷಾದವಾಗಿದೆ. ಶ್ರೀಮತಿ ಇಲಿಯಟ್‌ರವರಲ್ಲಿ ನಮ್ಮ ದೇಶದ ಮತ್ತು ಜನತೆಯ ವಿಷಯದಲ್ಲಿ ದುರಭಿಪ್ರಾಯ ಮೂಡಿಲ್ಲವೆಂದೂ, ಅವರು ಮತ್ತೆ ಈ ದೇಶ ಮತ್ತು ಜನಗಳೊಂದಿಗೆ ಸಂಪರ್ಕ ಬೆಳೆಸಿಕೊಳ್ಳುವಂತೆ ಅವರನ್ನು ಒಪ್ಪಿಸಬಹುದೆಂದೂ ಆಶಿಸುತ್ತೇನೆ. ನೀವಾದರೋ ಪಕ್ಕಾ ಭಾರತೀಯರೇ ಆಗಿರುವುದರಿಂದ

ಭಾರತೀಯ ವಿದ್ಯಮಾನಗಳಲ್ಲಿ ನಿಮ್ಮ ಆಸಕ್ತಿ ಎಂದಿಗೂ ಕಡಿಮೆಯಾಗುವುದೆಂಬ ಶಂಕೆಗೆ ಅವಕಾಶವಿಲ್ಲ. ಈ ವರ್ಷದ ಕೊನೆಯವೇಳೆಗೆ ಮತ್ತೆ ಭೇಟಿಕೊಡುವಿರೆಂದು ನೀವು ಮಾತು ಕೊಟ್ಟದ್ದೀರಿ. ಆ ಭೇಟಿಯನ್ನು ನಾನು ಎದುರುನೋಡುತ್ತಿದ್ದೇನೆ.

ನಡೆಯಲಿರುವ ಸಂಸದೀಯ ಚುನಾವಣೆಗಳಿಂದ ಮಹತ್ತರವಾದ ಬದಲಾವಣೆಗಳಾಗುತ್ತವೆ. ಅದರಿಂದ ಇಂಗ್ಲೆಂಡಿನಲ್ಲಿ ಮಂತ್ರಿಸಂಪುಟವಷ್ಟೇ ಬದಲಾವಣೆಯಾಗುವುದಿಲ್ಲ, ವೈಸರಾಯರುಗಳ ಬದಲಾವಣೆಯೂ ಆಗುತ್ತದೆ. ನಮ್ಮ ಭಾರತೀಯ...ಇಂಗ್ಲೀಷ್ ರಾಜಕೀಯದಲ್ಲಿ ಬೆರೆಯುವುದು ನನಗೆ ಅಷ್ಟು ಒಪ್ಪಿಗೆಯಿಲ್ಲ. ಪಾರ್ಲಿಮೆಂಟಿನಲ್ಲಿ ನಮಗೆ ಪ್ರಾತಿನಿಧ್ಯ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೆ ಅದರಿಂದ ಪ್ರಯೋಜನವೇನೂ ಆಗುವುದಿಲ್ಲ. ಲಾರ್ಡ್ ಲಿಟ್ಟನ್‌ರವರು ಎಲ್ಲಾ ದೇಶೀಯ ಸಂಸ್ಥಾನಗಳಿಗೆ ಅದರಲ್ಲೂ ಮೈಸೂರಿಗೆ ತುಂಬಾ ಸಹಾನುಭೂತಿಯನ್ನು ತೋರಿದ್ದಾರೆ. ಆದ್ದರಿಂದ ಅವರು ಈಗ ಭಾರತವನ್ನು ಬಿಟ್ಟು ಹೋಗುವುದರಿಂದ ನನಗೆ ವ್ಯಥೆಯಾಗುತ್ತದೆ. ಆದರೆ ಈ ಬದಲಾವಣೆಯಿಂದ ಕೆಲವು ಅನುಕೂಲಗಳೂ ಆಗಬಹುದು. ಕಾಫಿ ಬೆಳೆಯುವ ಜಮೀನುಗಳಿಗೆ ಖಾಯಂ ಕಂದಾಯವನ್ನು ಗೊತ್ತುಪಡಿಸುವುದಕ್ಕೆ ನೀವು ಹೋರಾಡುತ್ತಿದ್ದೀರಷ್ಟೆ. ಹೊಸ ವೈಸರಾಯರೊಂದಿಗೆ ಆ ಪ್ರಯತ್ನ ಹೆಚ್ಚು ಸಫಲವಾಗುವ ಸಂಭವವಿದೆ. ಭಾರತದ ಅಧಿಕಾರವರ್ಗದ ಪೂರ್ವಾಗ್ರಹಗಳೂ, ಸಂಕುಚಿತದೃಷ್ಟಿಯೂ ವೈಸರಾಯರ ಮನಸ್ಸಿನ ಮೇಲೆ ಪರಿಣಾಮ ಬೀರುವುದಕ್ಕೆ ಮುಂಚೆ ಅವರಿಗೆ ಈ ವಿಷಯವನ್ನು ತಿಳಿಸುವುದು ತುಂಬಾ ಪ್ರಯೋಜನಕರ. ಇಂಗ್ಲೀಷ್....ಜಮೀನುಗಳ ಏಕಸ್ವಾಮ್ಯ ದೇಶದ ಎಲ್ಲೆಡೆ ಇರುವ ಈ ದೇಶದ ಸಣ್ಣಸಣ್ಣ ಭೂಮಾಲೀಕರಿಗೆ ಇದರಿಂದ ಹೆಚ್ಚಿನ ತೊಂದರೆಯಾಗುತ್ತದೆ. ಸರ್ಕಾರಕ್ಕೆ ಯಾವ ಲಾಭವೂ ಆಗುವುದಿಲ್ಲ. ಈ ದೇಶದ ಜನಸಮುದಾಯದಲ್ಲಿ ಬಹುಮಟ್ಟಿಗೆ ಎಲ್ಲರೂ ರೈತರು. ಅವರು ಒಂದಲ್ಲ ಇನ್ನೊಂದು ಬಗೆಯಲ್ಲಿ ಭೂವ್ಯವಸಾಯದಿಂದ ಜೀವನವನ್ನು ಸಾಗಿಸುತ್ತಾರೆ. ಖಾಯಂ ಆಗಿ ಭೂಸ್ವಾಮ್ಯವನ್ನು ಗೊತ್ತುಪಡಿಸುವುದರಿಂದ ಜನಗಳ ಮನಸ್ಸಿನಲ್ಲಿ ತಮ್ಮ ಜಮೀನುಗಳ ಒಡೆತನ ಭದ್ರವಾಗಿದೆಯೆಂಬ ಭಾವನೆ ಮೂಡಿ ಅವುಗಳ ವ್ಯವಸಾಯಕ್ಕಾಗಿ ಹೆಚ್ಚು ಶ್ರಮಿಸುವುದಕ್ಕೆ, ಹೆಚ್ಚು ಬಂಡವಾಳ ಹಾಕುವುದಕ್ಕೆ ಅವರಿಗೆ ಉತ್ತೇಜನ ಉಂಟಾಗಿ ಒಟ್ಟು ಜನಸಮುದಾಯಕ್ಕೆ ಲಾಭ

ವಾಗುತ್ತದೆ. ಭೂಮಿಯ ಸ್ವಾಮ್ಯ ಕೆಲವರಿಗೆ ಮಾತ್ರ ಇರುವುದರಿಂದ ಬಹು ಸಂಖ್ಯಾತರ ಅಸಮಾಧಾನಕ್ಕೆ ಕಾರಣವಾಗಿರುವ ಇಂಗ್ಲೆಂಡನ್ನು ಅನುಕರಿಸುವುದು........

(ಈ ಪತ್ರದಲ್ಲಿ ಕೆಲವು ಭಾಗಗಳಲ್ಲಿ ರಂಗಾಚಾರ್ಲುರವರ ಬರವಣಿಗೆ ಅರ್ಥವಾಗುವುದಿಲ್ಲ. ಅಂತಹ ಭಾಗಗಳನ್ನು ಪತ್ರದಲ್ಲಿ ಖಾಲಿ ಬಿಡಲಾಗಿದೆ).

ರಂಗಾಚಾರ್ಲುರವರು ತಾವು ಹಾಕುತ್ತಿದ್ದ ಬಟ್ಟೆಬರೆಗಳ ವಿಷಯದಲ್ಲಿ ಅಷ್ಟು ಶ್ರದ್ಧೆ ತೋರಿಸುತ್ತಿರಲಿಲ್ಲ. ಅದರ ವಿಷಯದಲ್ಲಿ ಒಂದು ಸಣ್ಣ ಕಥೆ ಇದೆ. ಅವರಿಗೆ ಯಾವಾಗಲೂ ಕೆಲಸದ ಅವಸರ. ಆದ್ದರಿಂದ ಅವರು ಕೋಟನ್ನು ಅಡ್ಡಾದಿಡ್ಡಿಯಾಗಿ ಹಾಕುವರು, ಅದರ ಗುಂಡಿಗಳನ್ನು ಹೆಚ್ಚು ಕಡಿಮೆ ಹಾಕುವರು, ರುಮಾಲನ್ನು ಬೇಗ ಬೇಗ ಓರೆಕೋರೆಯಾಗಿ ಸುತ್ತುವರು. ಹೀಗೆ ತಮ್ಮ ಯಜಮಾನರು ತಮ್ಮ ಉಡುಪುತೊಡಪುಗಳ ವಿಷಯದಲ್ಲಿ ತೀರಾ ಅಸಡ್ಡೆಯಿಂದ ಇದ್ದುದನ್ನು ನೋಡಿ ಅವರ ಪತ್ನಿ ಅಲಮೇಲಮ್ಮನವರು ತುಂಬಾ ಅಸಮಾಧಾನಗೊಂಡು ಸರಿಯಾಗಿ ಬಟ್ಟೆ ಏಕೆ ಹಾಕಿಕೊಳ್ಳಬಾರದೆಂದು ಕೇಳಿದರಂತೆ. ಅದಕ್ಕೆ ರಂಗಾಚಾರ್ಲುರವರು, "ನಾನೇನು ಸೊಗಸುಗಾರ ಪುಟ್ಟಸ್ವಾಮಿಯಲ್ಲ. ನಾನು ಯಾರನ್ನೂ ಮೆಚ್ಚಿಸಬೇಕಾಗಿಲ್ಲ" ಎಂದು ಉತ್ತರ ಕೊಟ್ಟರಂತೆ.

ರಂಗಾಚಾರ್ಲುರವರು ನೆನೆಸಿದಾಗ ಊರಿಂದ ಊರಿಗೆ ಪ್ರಯಾಣಮಾಡುತ್ತಿದ್ದರು. ಬಟ್ಟೆಬರೆಗಳನ್ನೂ, ಹಾಸಿಗೆಯನ್ನೂ ಪ್ರಯಾಣಕ್ಕೆ ಬೇಕಾದ ಇತರ ಪದಾರ್ಥಗಳನ್ನೂ ತೆಗೆದುಕೊಳ್ಳದೇ ಅವರು ನೇರವಾಗಿ ಒಂದು ರೈಲಿನಲ್ಲಿ ಕುಳಿತುಕೊಂಡು ಹೊರಟುಬಿಡುತ್ತಿದ್ದರು. ಇದರಿಂದ ಆಗುತ್ತಿದ್ದ ತೊಂದರೆಯನ್ನು ಅವರು ಲಕ್ಷಿಸುತ್ತಿರಲಿಲ್ಲ. ಆಗ ಬೆಂಗಳೂರು ರೈಲುನಿಲ್ದಾಣದಲ್ಲಿ ಪುಟ್ಟಣ್ಣಶೆಟ್ಟರು ಅಧಿಕಾರಿಯಾಗಿದ್ದರು. ದಿವಾನರು ಹೀಗೆ ಯಾವ ಪೂರ್ವಸಿದ್ಧತೆಯೂ ಇಲ್ಲದೇ ಪ್ರಯಾಣಮಾಡುವುದನ್ನು ಅವರು ನೋಡಿದ್ದರು. ಆದ್ದರಿಂದ ಅವರು ರಂಗಾಚಾರ್ಲುರವರ ಮನೆಯಿಂದ ಒಂದು ಹಾಸಿಗೆಯನ್ನೂ, ಪ್ರಯಾಣಕ್ಕೆ ಬೇಕಾದ ಬಟ್ಟೆಬರೆಗಳನ್ನೂ ತರಿಸಿ ಇಟ್ಟುಕೊಂಡಿರುತ್ತಿದ್ದರು. ದಿವಾನರು ಪ್ರಯಾಣಕ್ಕೆ ಬೇಕಾದ ಪದಾರ್ಥಗಳನ್ನು ತರದೇ ನೇರವಾಗಿ ಒಂದು ರೈಲಿನಲ್ಲಿ ಕುಳಿತಾಗ ಅವರಿಗೆ ಬೇಕಾದ ಪದಾರ್ಥಗಳನ್ನು ಪುಟ್ಟಣ್ಣಶೆಟ್ಟರು ಅವರ ಜೊತೆಗೆ ಕಳುಹಿಸುತ್ತಿದ್ದರು. ತಾವು ತಲುಪಬೇಕೆಂದಿದ್ದ ಊರನ್ನು ಸೇರಿದಾಗ ತಮಗೆ ಬೇಕಾದ ಬಟ್ಟೆಬರೆಗಳೂ,

ಇತರ ಪದಾರ್ಥಗಳೂ ಸಿದ್ಧವಾಗಿರುವುದನ್ನು ನೋಡಿ ರಂಗಾಚಾರ್ಲುರವರು ಆಶ್ಚರ್ಯಪಟ್ಟು ಇದು ಹೇಗೆ ಎಂದು ವಿಚಾರಿಸಿದಾಗ ಅದು ಪುಟ್ಟಣ್ಣಶೆಟ್ಟರ ಕೆಲಸ ಎಂದು ತಿಳಿದು ಅವರ ವಿಷಯದಲ್ಲಿ ಅವರಿಗೆ ಬಹಳ ಮೆಚ್ಚುಗೆ ಉಂಟಾಯಿತು. ಇದರಿಂದ ಪುಟ್ಟಣ್ಣಶೆಟ್ಟರ ಬಡತಿಗೂ ಅವಕಾಶವಾಯಿತೆಂದು ಹೇಳುತ್ತಾರೆ.

ಜನಜೀವನಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳ ಬಗೆಗೆ ರಂಗಾಚಾರ್ಲುರವರು ಸತತವಾಗಿ ಆಲೋಚಿಸುತ್ತಿದ್ದರು. ಈ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗವನ್ನು ಸೂಚಿಸಿ ಅವರ ಲೇಖಣಿಯಿಂದ ಬಂದ ಲೇಖನಗಳು ಹಲವು. ನಮ್ಮ ಜನ ಹಬ್ಬ ಹರಿದಿನಗಳಿಗಾಗಿ, ಮದುವೆಗಳಿಗಾಗಿ, ಅಂತ್ಯಕ್ರಿಯೆಶ್ರಾದ್ಧಗಳಿಗಾಗಿ ಮಿತಿಮೀರಿ ಖರ್ಚುಮಾಡಿ ಸಾಲಗಾರರಾಗುವುದನ್ನು ಅವರು ಅರಿತಿದ್ದರು. ಮನೆಯ ಯಜಮಾನನಾದವನು ಹೀಗೆ ಸಾಲಮಾಡಿ ಇದ್ದಕ್ಕಿದ್ದಂತೆಯೇ ಗತಿಸಿದರೆ ಅವನ ಕುಟುಂಬದವರು ಒಂದುಕಡೆ ಸಾಲಗಾರರ ಕಾಟಕ್ಕೂ ಮತ್ತೊಂದುಕಡೆ ದಾರಿದ್ರ್ಯಕ್ಕೂ ತುತ್ತಾಗಬೇಕಾಗಿದ್ದಿತು. ರಂಗಾಚಾರ್ಲುರವರು ಈ ಸಮಸ್ಯೆಗೆ ಒಂದು ಪರಿಹಾರವನ್ನು ಸೂಚಿಸಿ ಲೇಖನವನ್ನು ಬರೆದರು. ಅದರಲ್ಲಿ ಜೀವವಿಮೆಯನ್ನು ಜನಗಳಲ್ಲಿ ಪ್ರಚಾರಮಾಡಬೇಕೆಂದೂ, ವಾಸ್ತವವಾಗಿ ಸರ್ಕಾರವೇ ಅದನ್ನು ಕೈಗೊಳ್ಳಬೇಕೆಂದೂ ಸೂಚಿಸಿದರು.

ಇನಾಮತಿ ಆಯೋಗದ ಅಧ್ಯಕ್ಷರ ಸಹಾಯಕರಾಗಿ ರಂಗಾಚಾರ್ಲುರವರು ಕೆಲಸಮಾಡುತ್ತಿದ್ದಾಗ ಗ್ರಾಮ ಪಂಚಾಯಿತಿಗಳ ಪುನರುದ್ಧಾರದ ವಿಷಯವಾಗಿ ಅವರು ಒಂದು ಲೇಖನವನ್ನು ಬರೆದರು. ಅದರಲ್ಲಿ ಅವರು ಹಳ್ಳಿಗಳ ರಸ್ತೆಗಳಲ್ಲಿ ದೀಪಗಳನ್ನು ಹಾಕುವುದು, ಗ್ರಾಮನಿರ್ಮಲೀಕರಣ, ರಸ್ತೆಗಳ ಉಸ್ತುವಾರಿ ಮುಂತಾದ ವಿಷಯಗಳಲ್ಲಿ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಬೇಕೆಂದೂ, ಪ್ರಾಂತ್ಯಸರ್ಕಾರಕ್ಕಿಂತ ಗ್ರಾಮ ಪಂಚಾಯಿತಿಗಳೇ ಈ ವಿಷಯಗಳಲ್ಲಿ ಹೆಚ್ಚು ದಕ್ಷತೆಯಿಂದ ಆಡಳಿತ ನಿರ್ವಹಿಸಬಲ್ಲವೆಂದೂ ಸೂಚಿಸಿದರು. ಅಲ್ಲದೇ ಹಳ್ಳಿಗಳಲ್ಲಿ ತಲೆದೋರುವ ಸಣ್ಣ ಪುಟ್ಟ ವಿವಾದಗಳನ್ನು ಪರಿಹರಿಸುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೇ ವಹಿಸಬೇಕೆಂಬ ಸಲಹೆಯನ್ನು ಅವರು ಮಾಡಿದರು. ಹೀಗೆ ಗ್ರಾಮ ಪಂಚಾಯಿತಿಗಳಿಗೆ ಈ ಸಣ್ಣ ಪುಟ್ಟ ವಿವಾದಗಳನ್ನು ಪರಿಹರಿಸುವ ಅಧಿಕಾರವನ್ನು ಕೊಡುವುದರಿಂದ ನ್ಯಾಯಸ್ಥಾನಗಳಿಗೆ ಹೋಗುವುದಕ್ಕಾಗಿ

ವಾದಿ ಪ್ರತಿವಾದಿಗಳು ಮಾಡುವ ಹೆಚ್ಚಿನ ಖರ್ಚು ನಿಲ್ಲುತ್ತದಲ್ಲದೇ ಹಳ್ಳಿಗಳಲ್ಲಿರುವ ಪಕ್ಷಗಳಲ್ಲಿ ಕಂಡುಬರುವ ಪರಸ್ಪರ ವಿರೋಧ ಕಡಿಮೆಯಾಗುತ್ತದೆ, ಹಳ್ಳಿಗಳಲ್ಲಿ ಶಾಂತಿ ಸೌಹಾರ್ದಗಳೇರ್ಪಡುತ್ತವೆ ಎಂಬುದು ರಂಗಾಚಾರ್ಲುರವರ ಅಭಿಪ್ರಾಯ ವಾಗಿದ್ದಿತು.

ರಂಗಾಚಾರ್ಲುರವರು ಮುಜರಾಯಿ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಒಂದು ಲೇಖನವನ್ನು ಬರೆದರು. ನ್ಯಾಯಸ್ಥಾನಗಳು ಈ ಸಂಸ್ಥೆಗಳ ಆಡಳಿತವನ್ನು ನಿರ್ವ ಹಿಸುವುದಕ್ಕೆ ಧರ್ಮದರ್ಶಿಗಳನ್ನು ನಿಯಮಿಸಬೇಕೆಂದೂ, ಈ ಧರ್ಮದರ್ಶಿಗಳು ಕರ್ತವ್ಯಲೋಪ ಮಾಡಿದರೆ ಅವರ ವಿರುದ್ಧ ನ್ಯಾಯಸ್ಥಾನಗಳಲ್ಲಿ ಮೊಕದ್ದಮೆ ಹೂಡುವುದಕ್ಕೆ ಅವಕಾಶವಾಗುವಂತೆ ಶಾಸನವನ್ನು ರಚಿಸಬೇಕೆಂದೂ ಈ ಲೇಖನ ದಲ್ಲಿ ಅವರು ಸೂಚಿಸಿದರು. ಅಲ್ಲದೇ ಸರ್ಕಾರವು ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಧರ್ಮದರ್ಶಿಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿಯನ್ನು ನೋಡಿ ಕೊಳ್ಳಲು ಕೇಂದ್ರ ಸಮಿತಿಗಳನ್ನು ರಚಿಸಬೇಕೆಂದು ಅವರು ಸೂಚಿಸಿದರು.

ರಂಗಾಚಾರ್ಲುರವರದು ಮಧ್ಯಸ್ಥವಾದ ನಿಲುವು, ಎತ್ತರ. ಅವರ ಕಣ್ಣುಗಳು ತುಂಬಾ ಪ್ರಕಾಶಮಾನವಾಗಿದ್ದು ನೋಡಿದವರ ಗಮನವನ್ನು ಥಟ್ಟನೆ ಸೆಳೆಯು ತ್ತಿದ್ದುವು. ಅವರು ಶೀಘ್ರಕೋಪಿಗಳು. ಆದರೆ ಅವರ ಕೋಪ ಬೇಗನೆ ಇಳಿದು ಹೋಗುತ್ತಿತ್ತು. ಯಾರ ವಿಷಯದಲ್ಲಿ ಅವರು ಕೋಪಗೊಂಡಿದ್ದರೋ ಅವರನ್ನು ಕೋಪ ಇಳಿದ ಕೂಡಲೇ ಕ್ಷಮಿಸಿಬಿಡುತ್ತಿದ್ದರು. ಅವರು ನಡೆನುಡಿಗಳಲ್ಲಿ ಸರಳರೂ, ಸುಲಭರೂ ಆಗಿದ್ದರು. ಡಂಭ ಪ್ರದರ್ಶನಗಳು, ಠೀವಿಠೇಂಕಾರಗಳು ಅವರ ಹತ್ತಿ ರವೂ ಸುಳಿಯುತ್ತಿರಲಿಲ್ಲ. ಅವರು ಜನಗಳೊಂದಿಗೆ ಸುಲಭವಾಗಿ ಬೆರೆಯುತ್ತಿದ್ದರು, ನೇರವಾಗಿ ಮಾತನಾಡುತ್ತಿದ್ದರು. ಸರಳತೆ, ಸಜ್ಜನಿಕೆ ಅವರಿಗೆ ಸ್ವಾಭಾವಿಕವಾಗಿ ಮೈಗೂಡಿ ಬಂದ ಗುಣಗಳು.

ರಂಗಾಚಾರ್ಲುರವರು ಪ್ರಾತಃಕಾಲದಲ್ಲಿ ವಾಯುವಿಹಾರಕ್ಕಾಗಿ ಹೊರಟಾಗ ಜನಗಳಿಗೆ ಭೇಟಿಕೊಡುತ್ತಿದ್ದರು. ಯಾವಾಗಲೂ ಅವರ ಕೈಯ್ಯಲ್ಲಿ ಒಂದು ಕೋಲು ಇರುತ್ತಿದ್ದಿತು. ಅವರನ್ನು ಅರ್ಜಿದಾರರ ಒಂದು ದೊಡ್ಡ ಗುಂಪೇ ಹಿಂಬಾ ಲಿಸುತ್ತಿದ್ದಿತು. ಯಾವ ಅಧಿಕಾರಿಯ ವಿರುದ್ಧವಾಗಿ ದೂರನ್ನು ಕೊಡಲು ದಿವಾನರ ಬಳಿಗೆ ಜನರು ಬಂದಿರುತ್ತಿದ್ದರೋ ಆ ಅಧಿಕಾರಿಯೂ ಆ ಸಮಯದಲ್ಲಿ ಸಾಮಾನ್ಯ

ವಾಗಿ ಹಾಜರಾಗಿರುತ್ತಿದ್ದನು. ದೂರಿನಲ್ಲಿ ತಥ್ಯವಿದೆಯೆಂದು ದಿವಾನರಿಗೆ ಮನ ವರಿಕೆಯಾದಲ್ಲಿ ಅದರಲ್ಲಿಯೂ ಅಧಿಕಾರಿಯು ಲಂಚರುಷವತ್ತಿಗೆ ಕೈಹಾಕಿದನೆಂದೋ ಅಥವಾ ಸ್ವೇಚ್ಛಾವರ್ತಿಯಾಗಿದ್ದಾನೆಂದೋ ಕಂಡುಬಂದಲ್ಲಿ ಅವರು ತುಂಬಾ ಕೋಪಗೊಳ್ಳುವರು. ಅವರ ತೀಕ್ಷ್ಣದೃಷ್ಟಿ ಆ ಅಧಿಕಾರಿಯ ಮೇಲೆ ಬೀಳುವುದು. ಅಷ್ಟೇ ಸಾಕಾಗುತ್ತಿದ್ದಿತು ಆ ಅಧಿಕಾರಿ ಮತ್ತೆ ಅಂತಹ ದುರ್ವರ್ತನೆಗೆ ಎಡೆಗೊಡದಿರುವುದಕ್ಕೆ.

ರಂಗಾಚಾರ್ಲುರವರಿಗೆ ಯಾವ ಯಾವ ಭೂಮಿಯ ಗುಣ ಎಂತಹುದು, ಅದರಲ್ಲಿ ಏನು ಬೆಳೆ ಬೆಳೆಯಬಹುದು ಎಂಬುದು ಚೆನ್ನಾಗಿ ಗೊತ್ತಿದ್ದಿತು. ಬೆಳಿಗ್ಗೆ ವಾಯುವಿಹಾರಕ್ಕೆ ಹೊರಟಾಗ ತಮ್ಮ ಕೋಲಿನಿಂದ ನೆಲವನ್ನು ಕುಟ್ಟಿ ಭೂಮಿಯ ಗುಣ ಇಂತಹುದೇ ಅದರಲ್ಲಿ ಯಾವ ತರಹದ ಬೆಳೆಗಳನ್ನು ಬೆಳೆಯುವುದು ಸಾಧ್ಯ ಎಂದು ಅವರು ಹೇಳುತ್ತಿದ್ದರು.

ರಂಗಾಚಾರ್ಲುರವರು ಸ್ವಧರ್ಮದ, ಹಿಂದಿನಿಂದ ಬಂದ ಆಚಾರ ಪದ್ಧತಿಗಳ ವಿಷಯದಲ್ಲಿ ಪ್ರಬುದ್ಧವಾದ ದೃಷ್ಟಿಯುಳ್ಳವರಾಗಿದ್ದರು. ವಿವೇಚನೆಯ ಒರೆಗಲ್ಲಿಗೆ ಹಚ್ಚಿ ಎಲ್ಲ ವಿಷಯಗಳನ್ನೂ ನೋಡುವುದು ಅವರ ಮಾರ್ಗ. ಅನೂಚಾನವಾಗಿ ಬಂದ ಕರ್ಮಗಳನ್ನು ಅವರು ಬಿಟ್ಟವರಲ್ಲ. ಸಂಧ್ಯಾವಂದನೆ, ಶ್ರಾದ್ಧಗಳನ್ನು ತಪ್ಪದೇ ಅವರು ಆಚರಿಸುತ್ತಿದ್ದರು. ಆಗಾಗ ದೇವಸ್ಥಾನಗಳಿಗೆ ಅವರು ಹೋಗು ತ್ತಿದ್ದರು. ಆದರೆ ವ್ರತ, ಪೂಜೆ ಮುಂತಾದುವುಗಳನ್ನು ಹೆಚ್ಚಾಗಿ ಮಾಡುವುದಕ್ಕೆ ಅವರು ಹೋಗುತ್ತಿರಲಿಲ್ಲ. ಮಡಿ ಮೈಲಿಗೆಗಳಲ್ಲಿ ಅವರಿಗೆ ಅಂತಹ ಶ್ರದ್ಧೆ ಇರಲಿಲ್ಲ. ಅವರ ಹೆಂಡತಿ ಅಲಮೇಲಮ್ಮನವರು ತುಂಬಾ ಸಂಪ್ರದಾಯನಿಷ್ಠರು. ಮಡಿ ಮೈಲಿ ಗೆಗಳ ವಿಷಯದಲ್ಲಿ ತುಂಬಾ ಎಚ್ಚರವನ್ನು ಅವರು ವಹಿಸುತ್ತಿದ್ದರು. ರಂಗಾಚಾರ್ಲು ರವರ ಮನೆಗೆ ಬಂದುಹೋಗುತ್ತಿದ್ದವರು ಬಹಳ ಮಂದಿ ಇರುತ್ತಿದ್ದರು. ಹೀಗೆ ಬರುತ್ತಿದ್ದವರು ಎಲ್ಲಾ ಜಾತಿವರ್ಗಗಳಿಗೂ ಸೇರಿದವರು. ಅವರಿಗೆ ಇಡ್ಲಿ, ದೋಸೆ ಮುಂತಾದ ಉಪಹಾರಗಳನ್ನು ರಂಗಾಚಾರ್ಲುರವರು ಕೊಡಿಸುತ್ತಿದ್ದರು. ಮನೆಯ ಒಳಗಡೆ ಈ ಜನರನ್ನು ಅಲಮೇಲಮ್ಮ ಸೇರಿಸುತ್ತಿರಲಿಲ್ಲವಾದ್ದರಿಂದ ರಂಗಾಚಾರ್ಲು ರವರು ಮನೆಯ ಹೊರ ಅಂಗಳದಲ್ಲಿಯೇ ತಮ್ಮನ್ನು ನೋಡಲು ಬಂದವರಿಗೆ ಉಪ ಹಾರವನ್ನು ಕೊಡಿಸುತ್ತಿದ್ದರು, ಅವರೊಂದಿಗೆ ತಮ್ಮ ಉಪಹಾರವನ್ನು ತೆಗೆದು

ಕೊಳ್ಳುತ್ತಿದ್ದರು. ಅವರು ತಮ್ಮ ಹೆಂಡತಿಯ ಸಂಪ್ರದಾಯಬದ್ಧ ಜೀವನಕ್ಕೆ ಅಡ್ಡಿಯನ್ನು ತರಲಿಲ್ಲ, ತಮಗೆ ಸರಿ ಎಂದು ಕಂಡದ್ದನ್ನು ಮಾಡುವುದನ್ನು ಬಿಡಲೂ ಇಲ್ಲ.

ಸಮುದ್ರ ಪ್ರಯಾಣ ಮಾಡುವುದು ಹಿಂದೂಧರ್ಮಕ್ಕೆ ವಿರುದ್ಧವಾದುದಲ್ಲ ಎಂಬ ತೀರ್ಮಾನಕ್ಕೆ ತಾವು ಬಂದ ಮೇಲೆ ರಂಗಾಚಾರ್ಲುರವರು ಎಷ್ಟೇ ವಿರೋಧ ಬಂದರೂ ಕಲ್ಕತ್ತೆಗೆ ಸಮುದ್ರಪ್ರಯಾಣವನ್ನು ಮಾಡಿದುದನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ದಿವಾನರಾಗಿದ್ದಾಗ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಒಂದು ತಹಬಂದಿಗೆ ತಂದ ಮೇಲೆ ಅವರು ಮಹಾರಾಜರೊಂದಿಗೆ ಇಂಗ್ಲೆಂಡಿಗೆ ಹೋಗಬೇಕೆಂಬ ಅಭಿಪ್ರಾಯವನ್ನು ಕೂಡ ಇಟ್ಟುಕೊಂಡಿದ್ದರು.

ರಂಗಾಚಾರ್ಲುರವರು ಸಾಹಿತ್ಯ, ರಾಜ್ಯಶಾಸ್ತ್ರ, ಇತಿಹಾಸ ಮತ್ತು ತತ್ವಶಾಸ್ತ್ರಗಳಲ್ಲಿ ಮಾತ್ರ ಆಸಕ್ತರಾಗಿರಲಿಲ್ಲ. ಅವರಿಗೆ ಕರ್ನಾಟಕ ಸಂಗೀತದಲ್ಲಿ ಆಸಕ್ತಿ ಇದ್ದಿತು. ಅವರು ತಮ್ಮ ಹೆಣ್ಣುಮಕ್ಕಳಿಗೆ ಆ ಸಂಗೀತವನ್ನು ಕಲಿಸಲು ಉಪಾಧ್ಯಾಯರನ್ನು ಗೊತ್ತುಮಾಡಿದ್ದರು. ಅವರು ತಮ್ಮ ಮನೆಯಲ್ಲಿ ಆಗಾಗ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಿದ್ದರು ತಮ್ಮ ಚಿಕ್ಕವಯಸ್ಸಿನಲ್ಲಿ ಸಂಗೀತವನ್ನು ಕಲಿಯಬೇಕೆಂದು ಅವರು ಪ್ರಯತ್ನಿಸಿದರು. ಹೊಸೂರಿನ ಬಳಿ ಒಂದು ಬೆಟ್ಟವಿದೆ. ಆ ಬೆಟ್ಟದ ಮೇಲೆ ಒಂದು ದೇವಸ್ಥಾನವಿದೆ. ರಂಗಾಚಾರ್ಲುರವರು ಆ ಬೆಟ್ಟವನ್ನು ಹತ್ತಿ ಏಕಾಂತವಾದ ಸ್ಥಳವನ್ನು ಹುಡುಕಿ, ಅಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದರು. ಅವರ ಧ್ವನಿ ಸಂಗೀತಕ್ಕೆ ಹೊಂದುತ್ತಿರಲಿಲ್ಲವಾದ್ದರಿಂದ ಅವರು ಅದರ ಅಭ್ಯಾಸವನ್ನು ಬಿಟ್ಟುಬಿಟ್ಟರು. ಅವರ ತಮ್ಮಂದಿರಾದ ಶ್ರೀನಿವಾಸಅಯ್ಯಂಗಾರ್ಯರು ಸಂಗೀತದಲ್ಲಿಯೂ, ಚಿತ್ರಕಲೆಯಲ್ಲಿಯೂ ಪರಿಣತರಾಗಿದ್ದರು.

ರಂಗಾಚಾರ್ಲುರವರು ಸಂಸಾರ ಜೀವನದಲ್ಲಿ ಸುಖಿಗಳು. ಅವರ ಪತ್ನಿ ಅಲಮೇಲಮ್ಮನವರು ದೊಡ್ಡ ಮನೆತನಕ್ಕೆ ಸೇರಿದವರು. ಆಕೆ ಸುಸಂಸ್ಕೃತೆ. ಅವರು ಹಾಡುವುದಕ್ಕೆ ತಕ್ಕ ಕೃತಿಗಳನ್ನು ರಚಿಸುವಷ್ಟು ಸಂಗೀತದಲ್ಲಿ ಪ್ರವೇಶವುಳ್ಳವರಾಗಿದ್ದರು. ಆಕೆಗೆ ಪೂರ್ವಾಚಾರಪದ್ಧತಿಗಳಲ್ಲಿ ತುಂಬಾ ವಿಶ್ವಾಸ, ವ್ರತ, ನಿಯಮ, ಪೂಜೆ, ಪಾರಾಯಣಗಳು ಪ್ರಿಯ. ಗಂಡನಿಗೆ ಹಿತವಾಗಿ ನಡೆದುಕೊಳ್ಳುವ ಕಲೆ ಆಕೆಗೆ ಸಾಧಿಸಿದ್ದಿತು. ತಮ್ಮ ಸಂಸಾರಕ್ಕೆ ಸಂಬಂಧಪಟ್ಟ ಎಲ್ಲ ಮುಖ್ಯ ವಿಷಯ

ಗಳಲ್ಲಿಯೂ ರಂಗಾಚಾರ್ಲುರವರು ಅವರ ಸಲಹೆ ಸೂಚನೆಗಳನ್ನು ಕೇಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಪ್ರಾಮುಖ್ಯವಾದ ಸಾರ್ವಜನಿಕ ವಿಷಯಗಳಲ್ಲಿಯೂ ಅಲಮೇಲಮ್ಮನವರ ಸಲಹೆಯನ್ನು ಅವರು ಕೇಳಿದ್ದುಂಟು. ಇಂತಹ ಒಂದು ಪ್ರಸಂಗವನ್ನು ಇಲ್ಲಿ ಹೇಳಬಹುದು.

ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ಅನುರೂಪವಾದ ಕನ್ಯೆಯನ್ನು ಗೊತ್ತುಮಾಡುವ ಸಂದರ್ಭ ಒದಗಿತು ಅರಸು ಕುಲಕ್ಕೆ ಸೇರಿದ ಬಾಲಕಿಯರು ಒಮ್ಮೆ ಒಂದು ಕಡೆ ಸೇರಿದ್ದರು. ರಂಗಾಚಾರ್ಲುರವರು ಅಲ್ಲಿಗೆ ಹೋದರು. ಅವರ ಪೈಕಿ 8–10 ವರ್ಷದ ಬಾಲಕಿಯೊಬ್ಬಳು ಪಾದರಸದಂತೆ ಓಡಾಡುತ್ತಾ ಚೂಟಿಯಾಗಿ ಇದ್ದುದು ಅವರಿಗೆ ಕಂಡಿತು. ಅವಳ ಮಾತುಕತೆಗಳಿಂದ ಹುಡುಗಿ ಬುದ್ಧಿವಂತೆಯೆಂಬ ತೀರ್ಮಾನಕ್ಕೆ ರಂಗಾಚಾರ್ಲುರವರು ಬಂದರು. ಅವರು ತಮ್ಮ ಹೆಂಡತಿಗೆ ಆ ಅರಸು ಕನ್ಯೆಯರು ಇರುವೆಡೆಗೆ ಹೋಗಿ ಅವರೊಂದಿಗೆ ಬೆರೆತು ಮಾತುಕತೆಯಾಡುವಂತೆ ಸೂಚಿಸಿದರು. ಆ ಹುಡುಗಿಯನ್ನು ಸೂಕ್ಷ್ಮವಾಗಿ ನೋಡಿ ಅವಳ ವಿಷಯ ಅವರಿಗೆ ಏನು ಅಭಿಪ್ರಾಯ ಉಂಟಾಗುವುದೆಂಬುದನ್ನು ತಮಗೆ ತಿಳಿಸಬೇಕೆಂದು ಕೇಳಿದರು. ಅಲಮೇಲಮ್ಮನವರಿಗೂ ಆ ಹುಡುಗಿ ಮಹಾರಾಜರಿಗೆ ಸರಿಯಾದ ವಧುವೆಂಬ ಅಭಿಪ್ರಾಯ ಮೂಡಿತು. ಹೀಗೆ ಮಹಾರಾಜರ ವಧುವಾಗಿ ಗೊತ್ತಾದವರು ಕೆಂಪನಂಜಮ್ಮಣ್ಣಿಯವರು. ಮಹಾರಾಜ ಚಾಮರಾಜೇಂದ್ರ ಒಡೆಯರವರು ಇದ್ದಕ್ಕಿದ್ದಂತೆ ತೀರಿಕೊಂಡಾಗ ಅವರ ಹಿರಿಯ ಪುತ್ರ ನಾಲ್ಮಡಿ ಕೃಷ್ಣರಾಜ ಒಡೆಯರ್‌ರವರು ಇನ್ನೂ ಬಾಲಕರು. ಅವರು ಪ್ರಾಪ್ತವಯಸ್ಕರಾಗುವವರೆಗೆ ಮಹಾರಾಣಿ ಕೆಂಪನಂಜಮ್ಮಣ್ಣಿಯವರೇ ರಾಜಪ್ರತಿನಿಧಿಯಾಗಿ ರಾಜ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಅವರು ಸಮರ್ಥರೂ, ದಕ್ಷರೂ ಆದ ಆಡಳಿತಗಾರರೆಂಬ ಹೆಸರನ್ನು ಗಳಿಸಿದರು.

ಅಲಮೇಲಮ್ಮನವರು ರಂಗಾಚಾರ್ಲುರವರು ಗತಿಸಿದ ಅನಂತರ ಅನೇಕ ವರ್ಷಗಳು ಬದುಕಿದ್ದರು. ನಿಯಮನಿಷ್ಠೆಗಳುಳ್ಳವರೂ, ಸಂಪ್ರದಾಯಸ್ಥರೂ ಆದ ಅಲಮೇಲಮ್ಮನವರು ಪರಿಶುದ್ಧತೆ, ಸಾತ್ವಿಕತೆಗಳ ಸಾಕಾರ ಮೂರ್ತಿಯಾಗಿದ್ದರು. ಸರ್ ಕೆ. ಶೇಷಾದ್ರಿಅಯ್ಯರ್, ದಿವಾನ್ ವಿ. ಪಿ. ಮಾಧವರಾವ್, ನ್ಯಾಯಮೂರ್ತಿ ಎ. ರಂಗಸ್ವಾಮಿಅಯ್ಯಂಗಾರ್ ಮತ್ತು ದಿವಾನ್ ಪ್ರಧಾನ ಶಿರೋಮಣಿ ಆನಂದ

ರಾವ್ ಇವರು ರಂಗಾಚಾರ್ಲುರವರ ಶಿಷ್ಯ ವರ್ಗಕ್ಕೆ ಸೇರಿದವರು, ಅವರ ಪಾಲನೆ ಪೋಷಣೆಯಲ್ಲಿ ದೊಡ್ಡವರಾದವರು. ರಂಗಾಚಾರ್ಲುರವರು ಗತಿಸಿದ ಮೇಲೆ ಇವರೆಲ್ಲ ಪದೇಪದೇ ಅಲಮೇಲಮ್ಮನವರನ್ನು ಕಂಡು ತಮ್ಮ ಭಕ್ತಿ ಗೌರವಗಳನ್ನು ಅರ್ಪಿಸುತ್ತಿದ್ದರು. ಬಂಧುವರ್ಗದಲ್ಲಿಯೂ, ರಂಗಾಚಾರ್ಲುರವರ ಮಿತ್ರವರ್ಗ ದಲ್ಲಿಯೂ, ಶಿಷ್ಯರಲ್ಲಿಯೂ, ಜನಸಾಮಾನ್ಯರಲ್ಲಿಯೂ ವಿಶೇಷ ಗೌರವ ಪ್ರೀತಿ ಗಳನ್ನು ಅಲಮೇಲಮ್ಮನವರು ಸಂಪಾದಿಸಿಕೊಂಡಿದ್ದರು.

ರಂಗಾಚಾರ್ಲುರವರಿಗೆ ಒಬ್ಬ ಮಗ, ಐವರು ಹೆಣ್ಣುಮಕ್ಕಳಿದ್ದರು. ಅವರ ಮನೆ ಒಂದು ದೊಡ್ಡ ಛತ್ರ. ಅಲ್ಲಿ ಅನೇಕ ಮಂದಿ ಬಂಧುವರ್ಗದವರೂ, ಆಶ್ರಿತರೂ ಇದ್ದರು. ರಂಗಾಚಾರ್ಲುರವರು ಎಲ್ಲರ ವಿಷಯದಲ್ಲಿಯೂ ವಿಶ್ವಾಸಪ್ರೀತಿ ಗಳುಳ್ಳವರಾಗಿದ್ದರು. ತಮ್ಮ ಮರಣಶಾಸನದಲ್ಲಿ ಅವರು ತಮ್ಮನ್ನು ಬಾಲ್ಯದಲ್ಲಿ ಸಲಹಿದ್ದ ಸ್ತ್ರೀಸಂಬಂಧಿಗೂ ಕೆಲವು ಅತಿ ದೂರದ ಸಂಬಂಧಿಗಳಿಗೂ ಕೂಡ ದತ್ತಿ ಗಳನ್ನು ಬಿಟ್ಟಿದ್ದರು.

ರಂಗಾಚಾರ್ಲುರವರು ದಿವಾನರಾಗಿದ್ದಾಗ ಅವರ ಮಗ ಆಪ್ತ ಕಾರ್ಯದರ್ಶಿ ಗಳಾಗಿದ್ದರು. ಆದರೆ ನಿರ್ದಾಕ್ಷಿಣ್ಯ ಸ್ವಭಾವದ ರಂಗಾಚಾರ್ಲುರವರು ತಮ್ಮ ಮಗ ಯಾವ ಸಂಬಳಸಾರಿಗೆಗಳನ್ನು ತೆಗೆದುಕೊಳ್ಳಲೂ ಅವಕಾಶ ಕೊಡಲಿಲ್ಲ.

ರಂಗಾಚಾರ್ಲುರವರು ತುಂಬಾ ಉದಾರಿಗಳು. ರಿಕ್ತರಿಗೆ, ಸಹಾಯ ಬೇಡಿ ದವರಿಗೆ, ಸಾರ್ವಜನಿಕ ಸಂಸ್ಥೆಗಳಿಗೆ ಅವರು ಮುಕ್ತ ಹಸ್ತದಿಂದ ಧನಸಹಾಯ ಮಾಡುತ್ತಿದ್ದರೆಂಬುದು ಎಲ್ಲರಿಗೂ ತಿಳಿದಿದ್ದಿತು. ಅನೇಕ ಜನರು, ಸಂಘ ಸಂಸ್ಥೆ ಗಳು ಅವರಲ್ಲಿ ಸಹಾಯಕ್ಕಾಗಿ ಬರುತ್ತಿದ್ದರು. ಮದುವೆಗೋ, ಉಪನಯನಕ್ಕೋ ಸಹಾಯಬೇಕೆಂದು ಕೇಳಿದವರಿಗೆ ಅದನ್ನು ಕೊಡುವಾಗ "ನೇಗಿಲನ್ನು ಕೊಳ್ಳು ವುದಕ್ಕೋ, ಬಾವಿಯನ್ನು ತೋಡುವುದಕ್ಕೋ, ಎತ್ತುಗಳನ್ನು ಕೊಳ್ಳುವುದಕ್ಕೋ ಸಹಾಯ ಕೇಳಿದ್ದರೆ ಇನ್ನೂ ಹೆಚ್ಚಿನ ಸಂತೋಷದಿಂದ ಧನಸಹಾಯ ಮಾಡುತ್ತಿದ್ದೆ" ಎಂದು ಅವರು ಹೇಳುತ್ತಿದ್ದರು.

ರಂಗಾಚಾರ್ಲುರವರು ತಮ್ಮ ಕಾರ್ಯಭಾರದ ಮಧ್ಯದಲ್ಲಿ ಮನಸ್ಸಿಗೆ ಹರ್ಷ ತರುವ ಲಘು ಹವ್ಯಾಸಗಳನ್ನು ಇಟ್ಟುಕೊಂಡಿದ್ದರು. ಅವರು ಹಳೆಯ ಸಾಮಾನಿನ ಅಂಗಡಿಗಳಿಗೆ ಪದೇ ಪದೇ ಹೋಗಿ ಕಣ್ಣಿಗೆ ಕಂಡ ಬಗೆಬಗೆಯ ಪದಾರ್ಥಗಳನ್ನು

ಕೊಂಡುಕೊಳ್ಳುತ್ತಿದ್ದರು. ಜೂಜು, ಪಂದ್ಯಗಳಿಗೆ ಹೋಗಿ ತಮ್ಮ ಅದೃಷ್ಟವನ್ನು ಪರೀಕ್ಷಿಸುವ ಅಭ್ಯಾಸವೂ ಅವರಿಗಿದ್ದಿತು. ಅವರು ಕುದುರೆ ಪಂದ್ಯಕ್ಕೆ ಹೋಗುತ್ತಿದ್ದರು. ಈ ಅದೃಷ್ಟಪರೀಕ್ಷೆಯ ಪ್ರವೃತ್ತಿಯಿಂದ ಅವರ ಮನೆಯವರಿಗೆ ಉಪಕಾರವಾಯಿತೆಂದು ಹೇಳಬಹುದು. ರಂಗಾಚಾರ್ಲುರವರ ಮನೆಯಲ್ಲಿ ಅನೇಕ ಬಂಧುಗಳೂ, ಆಶ್ರಿತರೂ ಇದ್ದರೆಂದು ಹಿಂದೆ ಹೇಳಲಾಗಿದೆ. ಸಾರ್ವಜನಿಕ ಸಂಸ್ಥೆಗಳಿಗೂ ಸಹಾಯ ಕೇಳಿದ ವ್ಯಕ್ತಿಗಳಿಗೂ ಅವರು ಮುಕ್ತಹಸ್ತರಾಗಿ ಸಹಾಯ ಮಾಡುತ್ತಿದ್ದರು. ಹೀಗಾಗಿ ಅವರ ಕೈಯ್ಯಲ್ಲಿ ಹಣ ನಿಲ್ಲುತ್ತಿರಲಿಲ್ಲ. ಭೂಮಿ, ಮನೆ, ಮಳಿಗೆ ಮುಂತಾದ ಸ್ಥಿರಸ್ವತ್ತುಗಳನ್ನು ನೋಡಿ ಅವುಗಳ ಇಂದಿನ ಬೆಲೆ ಏನು, ಮುಂದೆ ಆಗಬಹುದಾದ ಬೆಲೆ ಏನು ಎಂಬುದನ್ನು ನಿರ್ಧರಿಸುವ ಶಕ್ತಿ ಅವರಿಗಿದ್ದಿತು. ಸಾಲವನ್ನು ಮಾಡಿ ಹಲವು ಕಡೆ ಮನೆಗಳನ್ನೂ, ಜಮೀನನ್ನೂ ಅವರು ಕೊಂಡರು. ಅವರು ಕೊಂಡ ಈ ಸ್ಥಿರಆಸ್ತಿಗಳು ಮುಂದೆ ಬಹಳ ಬೆಲೆ ಬಾಳತಕ್ಕವಾದವು. ಅವರು ಕಲ್ಲೀಕೋಟೆಯ ಬಳಿ ಕಟ್ಟಡಕ್ಕೆ ಉಪಯೋಗಿಸುವ ಮರಗಳ ಭಾರಿ ತೋಪೊಂದನ್ನು ಆರುಸಾವಿರ ರೂಪಾಯಿಗಳಿಗೆ ಕೊಂಡರು. ಆ ತೋಪಿನ ಬೆಲೆ ಅನಂತರ ಅನೇಕ ಲಕ್ಷ ರೂಪಾಯಿಗಳಿಗೆ ಏರಿತು.

ರಂಗಾಚಾರ್ಲುರವರು ನಿಧನರಾದ ಮೇಲೆ ಮೈಸೂರು ಸರ್ಕಾರದವರು ಅವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುಗೆಯಾಗಿ ಕೊಟ್ಟರು. ಈ ಹಣವನ್ನು ಉಪಯೋಗಿಸಿಕೊಂಡು ರಂಗಾಚಾರ್ಲುರವರು ಕೊಂಡಿದ್ದ ಸ್ಥಿರಸ್ವತ್ತುಗಳ ಮೇಲಿದ್ದ ಸಾಲವನ್ನು ತೀರಿಸಿ ಅವುಗಳನ್ನು ಉಳಿಸಿಕೊಳ್ಳಲಾಯಿತು. ಮಹಾರಾಜರ ಸರ್ಕಾರದವರು ಈ ಕೊಡುಗೆಯನ್ನು ಕೊಡದಿದ್ದರೆ ಈ ಸ್ಥಿರಸ್ವತ್ತುಗಳೆಲ್ಲಾ ನಷ್ಟವಾಗಿ ಹೋಗುತ್ತಿದ್ದವು.

ರಾಜ್ಯಾಡಳಿತ ನಿರ್ವಹಣೆಯಲ್ಲಿ ಹಗಲಿರುಳೂ ನಿರತರಾಗಿದ್ದ ರಂಗಾಚಾರ್ಲುರವರಿಗೆ ವಿಶ್ರಾಂತಿ, ವಿನೋದ ವಿಹಾರಗಳಿಗೆ ಏನು ಕಾಲವೂ ದೊರಕದಾಯಿತು. ರಂಗಾಚಾರ್ಲುರವರು ದಿವಾನರಾಗಿದ್ದಾಗ ಮಹಾರಾಜರು ನೀಲಗಿರಿಗೆ ಬೇಸಿಗೆಯಲ್ಲಿ ಎರಡು ಬಾರಿ ಭೇಟಿಕೊಟ್ಟರು. ಸಂತತವಾದ ಕಾರ್ಯಭಾರದಿಂದ ರಂಗಾಚಾರ್ಲುರವರ ಆರೋಗ್ಯ ಕೆಡುತ್ತಾ ಬಂದಿತು. ಮಹಾರಾಜರಿಗೆ ಈ ವಿಷಯ ಗೊತ್ತಾಗಿದ್ದಿತು. ಅವರು ನೀಲಗಿರಿಗೆ ಬಂದು ತಮ್ಮ ಜೊತೆಯಲ್ಲಿ ಇರಬೇಕೆಂದು ರಂಗಾಚಾರ್ಲುರವರನ್ನು ಆಹ್ವಾನಿಸಿದರು. ರಂಗಾಚಾರ್ಲುರವರಾದರೋ ಹೀಗೆ ಮಹಾ

ರಾಜರು ಆಹ್ವಾನಿಸಿದಾಗ ಆಡಳಿತ ಸಮಸ್ಯೆಗಳ ಒತ್ತಡದಿಂದ ತಾವು ಬರಲಾಗು ವುದಿಲ್ಲವೆಂದು ಉತ್ತರಕೊಡುತ್ತಿದ್ದರು. ನೀಲಗಿರಿಯ ಪ್ರಕೃತಿ ಸೌಂದರ್ಯವನ್ನೂ, ಒಳ್ಳೆಯ ಹವವನ್ನೂ ವರ್ಣಿಸಿ ಮಹಾರಾಜರು ರಂಗಾಚಾರ್ಲುರವರನ್ನು ಸ್ವಲ್ಪ ಕಾಲವಾದರೂ ವಿಶ್ರಾಂತಿ ತೆಗೆದುಕೊಳ್ಳುವಂತೆ ಒಲಿಸುವುದಕ್ಕೆ ಪ್ರಯತ್ನಿಸು ತ್ತಿದ್ದರು. ಆದರೆ ಮಹಾರಾಜರ ಈ ವಿಶ್ವಾಸದ ಒತ್ತಾಯಕ್ಕೆ ರಂಗಾಚಾರ್ಲುರವರು ಮಣಿಯಲಿಲ್ಲ.

ಮಹಾರಾಜರು ಒಂದು ಪತ್ರದಲ್ಲಿ ಈ ರೀತಿ ಬರೆದರು—"ನೀವು ಅವಿಶ್ರಾಂತ ರಾಗಿ ಕಾರ್ಯೋದ್ಯುಕ್ತರಾಗಿರುವುದು ನನಗೆ ಸಂತೋಷ. ಭೇಟಿಕಾರರು ಸಂತತ ವಾಗಿ ನಿಮ್ಮನ್ನು ಕಂಡು ತೊಂದರೆಗೊಳಿಸುವುದನ್ನು ನೀವು ತಪ್ಪಿಸಿಕೊಳ್ಳಬಲ್ಲವ ರಾದರೆ, ಕ್ಲುಪ್ತವಾದ ಹೊತ್ತಿನಲ್ಲಿ ದಿನಗಳಲ್ಲಿ ಅವರನ್ನು ನೋಡುವುದಾದರೆ ಬಾಕಿ ಉಳಿದಿರುವ ಕೆಲಸವನ್ನು ಸುಲಭವಾಗಿ ನಿಮ್ಮ ಆರೋಗ್ಯ ಕೆಡುವ ಭಯ ವಿಲ್ಲದೇ ನೀವು ಮುಗಿಸಬಹುದು. ನಿಮ್ಮ ಆರೋಗ್ಯ ಕೆಟ್ಟರೆ ಅದಕ್ಕೆ ನೀವೇ ಹೊಣೆ. ಅದಕ್ಕಾಗಿ ಯಾರೂ ನಿಮ್ಮನ್ನು ಕ್ಷಮಿಸುವುದಿಲ್ಲ. ಸರ್ ಜೇಮ್ಸ್‌ರವರು ಬೆಂಗಳೂರಿಗೆ ಬಂದಾಗ ಈ ವಿಷಯದಲ್ಲಿ ದೊಡ್ಡ ಉಪದೇಶವನ್ನೇ ನಿಮಗೆ ಕೊಡು ತ್ತಾರೆಂದು ನನಗೆ ಭರವಸೆಯಿದೆ. ಹಿಂದೆ ನೀವು ಅವರ ಮಾತುಗಳನ್ನು ನಿರ್ಲ ಕ್ಷಿಸಿದಂತೆ ಈಗಲೂ ನಿರ್ಲಕ್ಷಿಸುವುದಿಲ್ಲವೆಂದು ನಿರೀಕ್ಷಿಸುತ್ತೇನೆ.' ಹಿರಿಯರಾದ ನಿಮ್ಮ ವಿಷಯದಲ್ಲಿ ನಾನು ಇನ್ನು ಮಾತನಾಡಬಾರದೆಂದು ಸುಮ್ಮನಿದ್ದೇನೆ. ಆ ಕೆಲಸ ವನ್ನು ಸರ್ ಜೆಮ್ಸ್‌ರವರಿಗೆ ನಾನು ವಹಿಸಿದ್ದೇನೆ."

1882 ನೇ ಇಸವಿಯ ಕೊನೆಯವೇಳೆಗೆ ದಿವಾನರ ಆರೋಗ್ಯ ಕೆಟ್ಟಿತು. ವಿಶ್ರಾಂತಿಗಾಗಿ ಅವರನ್ನು ಮದ್ರಾಸಿಗೆ ಕರೆದುಕೊಂಡು ಹೋಗಲಾಯಿತು. "ಬೆಂಗಳೂರು ಪೋಸ್ಟ್" ಪತ್ರಿಕೆ ಈ ವಿಷಯದಲ್ಲಿ ಹೀಗೆ ಬರೆಯಿತು. "ಬೆಂಗ ಳೂರಿನಿಂದ ಹೊರಡುವ ದಿನದವರೆಗೆ ಅಂದರೆ 26ನೇ ಡಿಸೆಂಬರ್‌ವರೆಗೆ ಸತತವಾಗಿ ಅವರು ಕೆಲಸ ಮಾಡುತ್ತಿದ್ದರು. ರೈಲುಪ್ರಯಾಣದ ಆಯಾಸದಿಂದ ಪಿತ್ತನಾಳದ ಶ್ಲೇಷ್ಮಾವರಣ ಕೆರಳಿತು ಎಂದು ಊಹಿಸಲಾಗಿದೆ. ಮದ್ರಾಸಿಗೆ ಆಗಮಿಸಿದ ಮೇಲೂ ಒಂದು ವಾರ ರಂಗಾಚಾರ್ಲುರವರು ತುಂಬಾ ಸುಸ್ತಾಗಿದ್ದರು. ಇದರಿಂದ ಆಗತಾನೆ ತಲೆದೋರಿದ್ದ ರೋಗದ ಉಪಶಮನಕ್ಕೆ ಸಹಾಯವಾಗಲಿಲ್ಲ."

ರಂಗಾಚಾರ್ಲುರವರ ಆರೋಗ್ಯ ಮೊದಲಿನಿಂದಲೂ ಚೆನ್ನಾಗಿಯೇ ಇದ್ದಿತು. ಆದರೆ ರಾತ್ರಿಹಗಲೆನ್ನದೇ ಯಾವ ವೇಳೆ ಎಂದರೆ ಆ ವೇಳೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದಲೂ, ವಿಶ್ರಾಂತಿಯಿಲ್ಲದೇ ಸತತವಾಗಿ ದುಡಿದುದರಿಂದಲೂ ಅವರ ಆರೋಗ್ಯ ಕೆಟ್ಟಿತು. ಮೊದಲು ಅವರಿಗೆ ಅಜೀರ್ಣ ರೋಗ ಉಂಟಾಯಿತು. ಆಮೇಲೆ ಕಾಮಾಲೆ ಬಂದಿತು. ಹೊಟ್ಟೆಯಲ್ಲಿ ವ್ರಣಗಳಾದವು. ರಂಗಾಚಾರ್ಲುರವರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಿದರೆಂಬುದರಲ್ಲಿ ಸಂದೇಹವಿಲ್ಲ. 20ನೇ ಜನವರಿ 1883ರಲ್ಲಿ ರಂಗಾಚಾರ್ಲುರವರು ಮದ್ರಾಸಿನಲ್ಲಿ ದಿವಂಗತರಾದರು.

ಶೇಷಾದ್ರಿಅಯ್ಯರ್‌ರವರೊಬ್ಬರೇ ತಮ್ಮ ಅನಂತರ ದಿವಾನರಾಗಲು ಅರ್ಹರು ಎಂಬ ಗೋಪ್ಯ ಸಂದೇಶವನ್ನು ಮರಣಕ್ಕೆ ಮುಂಚೆ ರಂಗಾಚಾರ್ಲುರವರು ಮಹಾರಾಜರಿಗೆ ಕಳುಹಿಸಿದರು. ಶೇಷಾದ್ರಿಅಯ್ಯರವರಿಗೆ ಪದೇ ಪದೇ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಬೆಳೆಸಬೇಕೆಂದು ಉಪದೇಶಿಸುತ್ತಿದ್ದರು.

ರಂಗಾಚಾರ್ಲುರವರ ಮರಣದ ಸುದ್ದಿಯಿಂದ ಸಂಸ್ಥಾನದಾದ್ಯಂತ ಜನರು ಶೋಕ ಸಂತಪ್ತರಾದರು. ಅವರ ವ್ಯಕ್ತಿತ್ವ, ಆಡಳಿತ ಪ್ರತಿಭೆಗಳ ಬಗೆಗೆ ಪ್ರಶಂಸೆ ದೇಶದ ಎಲ್ಲ ಕಡೆಯಿಂದಲೂ ಕೇಳಬಂದಿತು. 22ನೇ ಜನವರಿ 1883 ರಲ್ಲಿ ಮೈಸೂರು ಸರ್ಕಾರದವರು ವಿಶೇಷ ರಾಜಪತ್ರವನ್ನು ಹೊರಡಿಸಿ, ರಂಗಾಚಾರ್ಲುರವರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯನ್ನೂ, ಅವರ ನಿಧನದಿಂದ ಸಂಸ್ಥಾನಕ್ಕಾದ ನಷ್ಟವನ್ನೂ ಸ್ಮರಿಸಿದರು.

ರಂಗಾಚಾರ್ಲುರವರು ಮದ್ರಾಸ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮುಖ್ಯೋಪಾಧ್ಯಾಯರಾಗಿದ್ದ ಪವೆಲ್‌ರವರು ಅವರ ಬಗ್ಗೆ ಹೀಗೆ ಹೇಳಿದರು:— "ಅವರು ನನ್ನ ಪ್ರಪ್ರಥಮ ಶಿಷ್ಯರಲ್ಲಿ ಒಬ್ಬರು, ನನ್ನ ಅತ್ಯುತ್ತಮ ಶಿಷ್ಯರಲ್ಲೂ ಒಬ್ಬರು. ಅವರು ತುಂಬಾ ಪ್ರಾಮಾಣಿಕರು, ಸಮರ್ಥರು. ಅವರ ಅಕಾಲಿಕ ಮರಣದಿಂದ ಅವರ ಮನೆಯವರಿಗೂ, ಮಿತ್ರವರ್ಗಕ್ಕೂ ಅಲ್ಲದೇ ಭಾರತಕ್ಕೆ ಅದರಲ್ಲಿಯೂ ಮೈಸೂರಿಗೆ ತುಂಬಾ ನಷ್ಟವಾಗಿದೆ. ಒಬ್ಬ ಹಿಂದೂ, ರಾಜನೀತಿಜ್ಞರಲ್ಲಿ ಪ್ರಮುಖ ಸ್ಥಾನಕ್ಕೆ ಏರುವುದು ಒಟ್ಟು ದೇಶದ ಉನ್ನತಿಗೆ ಕಾರಣವಾಗುತ್ತದೆ. ಆತನ ದೇಶಬಾಂಧವರಿಗೆ ಒಳ್ಳೆಯ ಕಾರ್ಯಗಳನ್ನು ಬಿಡದೆ ಮುಂದುವರಿಸಿಕೊಂಡು

ಹೋಗುವಂತೆ ಆದರಿಂದ ಪ್ರೋತ್ಸಾಹವೂ ದೊರಕುತ್ತದೆ. ಅವರ ಸಾಧನೆಗಳು ಉಪಯೋಗಕರವೂ ಯಶಸ್ಕರವೂ ಆಗಿವೆಯೆಂಬುದೂ ಅವರ ಮೇಲ್ಪಂಕ್ತಿ ಯಶಸ್ಸುಗಳು ನಿಮ್ಮ ದೇಶಬಾಂಧವರಿಗೆ ಅನೇಕ ವರ್ಷ ಪ್ರೇರಕವಾಗಿ ಉಳಿಯು ತ್ತವೆಂಬುದೂ ಸಮಾಧಾನದ ಸಂಗತಿ. ಅವರು ತಮ್ಮ ಜೀವಮಾನ ಪರ್ಯಂತ ಹೇಗೆ ಆತ್ಮಸಾಕ್ಷಿಗನುಗುಣವಾಗಿ ಸತತೋತ್ಸಾಹದಿಂದ ದುಡಿದರೋ ಅದನ್ನು ನಿಮ್ಮ ಜೀವಮಾನಪರ್ಯಂತ ಮೇಲ್ಪಂಕ್ತಿಯಾಗಿ ನೀವು ಅನುಸರಿಸಬೇ ಕೆಂದು ಬಯಸುತ್ತೇನೆ.” ರಂಗಾಚಾರ್ಲುರವರ ಪುರೋಭಿವೃದ್ಧಿಗೆ ಬಹಳವಾಗಿ ಸಹಾಯ ಮಾಡಿದವರೂ, ಅವರ ಪರಮಮಿತ್ರರೂ ಆಗಿದ್ದ ಜಿ. ಎನ್. ಟೈಲರ್ ರವರು ಅವರ ಮರಣದ ಸುದ್ದಿಯನ್ನು ಕೇಳಿ “ಅವರ ಸಾವಿಗಾಗಿ ಅವರ ದೇಶ ಬಾಂಧವರು ಬಹುಕಾಲ ಮರುಗುವರು. ಅವರ ತೆರವಾದ ಜಾಗವನ್ನು ತುಂಬು ವುದು ಸರ್ಕಾರಕ್ಕೆ ಸುಲಭ ಸಾಧ್ಯವಲ್ಲ” ಎಂದು ಹೇಳಿದರು.

ಮಹಾರಾಜರ ಪೋಷಕರಾಗಿದ್ದ ಪೋರ್ಟರ್‌ರವರು ರಂಗಾಚಾರ್ಲುರವರ ಮಗನಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದರು—“ಅವರನ್ನು ಸಾವು ಒಯ್ಯುವುದಕ್ಕೆ ಮುಂಚೆ ತಮಗಿದ್ದ ಅಲ್ಪಕಾಲಾವಧಿಯಲ್ಲಿ ತಾವು ಎಷ್ಟು ಸಾಧಿಸಬಲ್ಲವರಾಗಿದ್ದ ರೆಂಬುದನ್ನು ಅವರು ತೋರಿಸಿದರು. ಬಹು ಫಲಕಾರಿಯಾಗಬಲ್ಲದೆಂಬ ನಿರೀಕ್ಷಣೆಗೆ ಕಾರಣವಾದ ಅಂತಹ ಜೀವವೊಂದು ಅರ್ಧಾಂತಕವಾಗುವುದಕ್ಕಿಂತ ಹೆಚ್ಚು ದುಃಖಕರವಾದ ವಿಷಯ ಇನ್ನೊಂದಿಲ್ಲ. ನಿಮ್ಮ ತಂದೆಯ ವಿಷಯದಲ್ಲಿ ನನಗೆ ಬಹಳ ಪ್ರೀತಿಯಿದ್ದಿತು. ಎಲ್ಲ ವಿಷಯಗಳ ಬಗೆಗೆ ಅವರೊಂದಿಗೆ ಮಾತನಾಡುವುದು ನನಗೆ ಇಷ್ಟವಾಗಿದ್ದಿತು. ಭಾರತದಲ್ಲಿ ನನಗೆ ತಿಳಿದಿದ್ದ ಜನರಲ್ಲೆಲ್ಲಾ ಈ ರೀತಿ ವಿಷಯಗಳನ್ನು ಅವರೊಂದಿಗೆ ಚರ್ಚೆ ಮಾಡುವುದರಲ್ಲಿ ನಾನು ಉತ್ಸುಕನಾಗಿದ್ದಷ್ಟು ಇನ್ನಾರೊಂದಿಗೂ ಚರ್ಚಿಸುವುದರಲ್ಲಿ ಉತ್ಸುಕನಾಗಿರಲಿಲ್ಲ. ಅವರ ಮನಸ್ಸಿನಲ್ಲಿ ಅನೇಕ ಆಲೋಚನೆಗಳು ತುಂಬಿದ್ದವು. ಜನಗಳ ಸ್ಥಿತಿಯನ್ನು ಉತ್ತಮಗೊಳಿಸುವ ಅನೇಕ ಯೋಜನೆಗಳನ್ನು ಮಾಡುವುದರಲ್ಲಿ ಅವರ ಮನಸ್ಸು ನಿರತವಾಗಿರುತ್ತಿದ್ದಿತು. ಆ ಅವಿಶ್ರಾಂತವಾದ ಮಿದುಳು ಸ್ತಬ್ಧವಾಗಿಬಿಟ್ಟಿದೆ ಎಂದು ಊಹಿಸುವುದೂ ನನಗೆ ಕಷ್ಟ. ಅವರು ಪ್ರಸನ್ನವಾದ ಮನೋವೃತ್ತಿಯುಳ್ಳವರಾಗಿದ್ದರು. ಅವರ ಮಾತುಕತೆಗಳು ಆಹ್ಲಾದಕರವಾಗಿದ್ದವು. ಮಾತ್ಸರ್ಯದ ಲವಲೇಶವೂ ಅವರಲ್ಲಿರ ಲಿಲ್ಲ. ಅವರ ಮರಣದಿಂದ ಮೈಸೂರಿನಲ್ಲಿ ತುಂಬಲಾಗದ ಶೂನ್ಯತೆಯುಂಟಾಗಿದೆ ಯೆಂಬಂತೆ ನನಗೆ ಭಾಸವಾಗುತ್ತದೆ.”

ಮೈಸೂರಿನ ಮುಖ್ಯ ಆಡಳಿತಗಾರರಾಗಿದ್ದ ಬೌರಿಂಗ್‌ರವರು ರಂಗಾಚಾರ್ಲು ರವರ ನಿಧನದ ಸುದ್ದಿಯನ್ನು ಕೇಳಿ ಈ ರೀತಿ ಬರೆದರು—"ಅವರ ನಿಧನದ ಬಗೆಗೆ ನನ್ನ ಹೃತ್ಪೂರ್ವಕ ಸಂತಾಪವನ್ನು ಸೂಚಿಸುತ್ತೇನೆ. ಅವರ ಮರಣ ಅವರ ಕುಟುಂಬ ವರ್ಗಕ್ಕೆ ತುಂಬಾ ದುಃಖಕರವಾದುದಲ್ಲದೇ ಮೈಸೂರಿಗೆ ರಾಷ್ಟ್ರೀಯ ನಷ್ಟವೆಂದು ಮೈಸೂರಿನ ಜನ ದುಃಖಿಸಬೇಕಾದ ಪ್ರಸಂಗವಾಗಿದೆ. ಪ್ರಾಂತ್ಯದ ಆರ್ಥಿಕ ಸ್ಥಿತಿ ಯನ್ನು ಸರಿಪಡಿಸಲು ಅವರು ಮಾಡಿದ ಪ್ರಯತ್ನವನ್ನೂ, ಜನರ ಒಳಿತನ್ನು ಸಾಧಿಸಲು ಅವರು ಕೈಗೊಂಡ ಪ್ರಶಂಸಾರ್ಹವಾದ ಕ್ರಮಗಳನ್ನೂ ನಾನು ಚೆನ್ನಾಗಿ ಬಲ್ಲೆ. ಅವರ ಅಕಾಲಿಕ ಮರಣದಿಂದ ಮೈಸೂರಿನ ಜನತೆ ನಿರ್ವಂಚನೆಯಿಂದ ತನ್ನ ಸೇವೆಯನ್ನು ಮಾಡಿದ ಉಪಕಾರಿಯನ್ನೂ ವಿವೇಕಿಯಾದ ಆಡಳಿಗಾರರನ್ನೂ ಕಳೆದುಕೊಂಡಿದೆ. ಆಡಳಿತ ಸಾಮರ್ಥ್ಯ, ಪ್ರಾಮಾಣಿಕತೆ, ಜನಸ್ವಭಾವದ ಪರಿಚಯ ಒಟ್ಟಿಗೆ ಸೇರಿರುವುದು ತುಂಬಾ ಅಪರೂಪವಾದದ್ದು. ಪ್ರಾಮಾಣಿಕತೆ, ದೇಶ ಭಕ್ತಿಗಳು ಒಡಗೂಡಿರುವುದು ಇನ್ನೂ ಅಪರೂಪ"

ಮೈಸೂರಿನ ಮಹಾರಾಜರಾದ ಚಾಮರಾಜೇಂದ್ರ ಒಡೆಯರ್‌ರವರು ರಂಗಾ ಚಾರ್ಲುರವರ ನಿಧನದಿಂದ ಸಮರ್ಥರೂ, ಸ್ವಾಮಿನಿಷ್ಠರೂ ಆದ ಮಂತ್ರಾಲೋಚ ಕರನ್ನು ತಾವು ಕಳೆದುಕೊಂಡರೆಂದೂ, ಮೈಸೂರಿನ ಜನತೆ ಸಹಾನುಭೂತಿಪರನಾದ ನಿಸ್ಪೃಹನಾದ ಮಿತ್ರನನ್ನು ಕಳೆದುಕೊಂಡಿತೆಂದೂ ಹೇಳಿದರು.

ಮೈಸೂರಿನಲ್ಲಿ ರಂಗಾಚಾರ್ಲುರವರ ಸ್ಮಾರಕವಾಗಿ ಒಂದು ಪುರಭವನವನ್ನು ಕಟ್ಟಲಾಯಿತು. 1885 ರಲ್ಲಿ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರು ಆ ಭವನದ ಪ್ರಾರಂಭೋತ್ಸವವನ್ನು ನೆರವೇರಿಸಿದರಲ್ಲದೇ ರಂಗಾಚಾರ್ಲುರವರ ಛಾಯಾಚಿತ್ರವನ್ನು ಅನಾವರಣಮಾಡಿದರು.

ದೇಶಾಭಿಮಾನಿಗಳೂ, ಸಮರ್ಥರಾದ ಆಡಳಿತಗಾರರೂ ಈ ದೇಶದಲ್ಲೇ ಪ್ರಪ್ರಥಮವಾದ ಪ್ರಜಾಪ್ರತಿನಿಧಿಸಭೆಯ ಸಂಸ್ಥಾಪಕರೂ ಆದ ರಂಗಾಚಾರ್ಲು ರವರು ತಮ್ಮ ದೇಶಬಾಂಧವರ ಕೃತಜ್ಞತೆಗೆ ಸದಾ ಪಾತ್ರರಾಗಿರತಕ್ಕವರು. ಹತ್ತೊಂಬತ್ತನೆಯ ಶತಮಾನದಲ್ಲಿ ಜನಿಸಿ, ದೇಶದ ಪುನರುಜ್ಜೀವನಕ್ಕೆ ಕಾರಣವಾದ ಮಹಾವ್ಯಕ್ತಿಗಳ ಪಂಕ್ತಿಗೆ ಅವರು ಸೇರಿದವರು. ಭಾರತದೇಶದ ಚರಿತ್ರೆಯಲ್ಲಿ ಅವರು ಗೌರವಾರ್ಹವಾದ ಸ್ಥಾನವನ್ನು ಹೊಂದಿದ್ದಾರೆ.

# ಅನುಬಂಧ ೧

ಅಕ್ಟೋಬರ್ 7, 1881 ರಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನವನ್ನುದ್ದೇಶಿಸಿ ಮೈಸೂರಿನ ದಿವಾನರು ಮಾಡಿದ ಭಾಷಣ—

ಮಹನೀಯರೇ,

1. ಶ್ರೀಮನ್ಮಹಾರಾಜರ ಆಜ್ಞಾನುಸಾರವಾಗಿ ಈ ದಿವಸ ಇಲ್ಲಿ ಸೇರಿದ್ದೇವೆ. ಕಳೆದ ವರ್ಷದ ಆಡಳಿತ ವರದಿ ಮತ್ತು ಮುಂದಿನ ವರ್ಷ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳ ರೂಪರೇಷೆಗಳನ್ನು ಈ ವಾರ್ಷಿಕ ಸಭೆಗಳಲ್ಲಿ ನಿಮ್ಮ ಅವಗಾಹನೆಗೆ ನಾನು ತರಬೇಕೆಂದು ಶ್ರೀಮನ್ಮಹಾರಾಜರ ಅಭಿಲಾಷೆಯಾಗಿದೆ. ಈ ವ್ಯವಸ್ಥೆಯಿಂದ ಸರ್ಕಾರದ ಕೆಲಸಕಾರ್ಯಗಳು ಪ್ರಜೆಗಳ ಅಭೀಷ್ಟಗಳಿಗೂ ಹಿತಗಳಿಗೂ ಅನುಗುಣವಾಗಿ ನಡೆಯುವುವೆಂದು ಮಹಾರಾಜರ ಹಾರೈಕೆಯಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ನೀವು ಮಾಡುವ ಸಲಹೆಗಳನ್ನು ಮತ್ತು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಮಹಾರಾಜರ ಸರ್ಕಾರ ಸಂತೋಷವಾಗಿ ಸ್ವೀಕರಿಸುತ್ತದೆ. ಅವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಬೇರೆಯಾಗಿ ನಾನೇನೂ ಭರವಸೆಯನ್ನು ಕೊಡಬೇಕಾಗಿಲ್ಲ. ಈ ವ್ಯವಸ್ಥೆಯನ್ನು ಉಪಕ್ರಮಿಸಿರುವ ಉದ್ದೇಶವನ್ನು ಅರ್ಥಮಾಡಿಕೊಂಡು, ನಿಮ್ಮ ಅಭಿಪ್ರಾಯಗಳನ್ನು ನಿಜವಾದ ಸಾರ್ವಜನಿಕ ಹಿತಾಸಕ್ತಿಗಳ ದೃಷ್ಟಿಯಿಂದ ವ್ಯಕ್ತಪಡಿಸುತ್ತೀರೆಂದು ಆಶಿಸುತ್ತೇನೆ.

2. ಪ್ರಸಕ್ತ ಸಂದರ್ಭದಲ್ಲಿ ಹೇಳುವುದಾದರೆ, ಶ್ರೀಮನ್ಮಹಾರಾಜರು ಆಡಳಿತ ಸೂತ್ರವನ್ನು ವಹಿಸಿಕೊಂಡು ಕೆಲವು ತಿಂಗಳುಗಳು ಮಾತ್ರ ಆಗಿವೆ. ಆದ್ದರಿಂದ ಏನು ಸಾಧಿಸಲಾಗಿದೆ ಎಂಬುದನ್ನು ವರದಿಮಾಡಲು ಸಾಕಷ್ಟು ವಿಷಯಗಳು ಇಲ್ಲ. ನಾನು ನಿಮ್ಮ ಮುಂದೆ ಇಡಲಿರುವ ವರದಿಯು ಶ್ರೀಮನ್ಮಹಾರಾಜರ ಸರ್ಕಾರವು ಕೈಗೊಳ್ಳಬೇಕೆಂದು ಆಲೋಚಿಸುತ್ತಿರುವ ಕಾರ್ಯಕ್ರಮಗಳನ್ನೂ, ಸದ್ಯದ ಪರಿಸ್ಥಿತಿಯ ಸಂಕ್ಷಿಪ್ತವಾದ ಪರಿಚಯವನ್ನೂ ನಿಮ್ಮ ಅವಗಾಹನೆಗೆ ತರುತ್ತದೆ.

3. ನಿಮಗೆ ತಿಳಿದಿರುವ ಹಾಗೆ ಈ ಪ್ರಾಂತ್ಯದ ಪರಿಸ್ಥಿತಿಯು ಈಗ ತಾನೆ ಸಂಭವಿಸಿದ ಗಂಡಾಂತರದಿಂದ ಹದಗೆಟ್ಟಿದೆ. ಧಾತುಈಶ್ವರ ಕ್ಷಾಮದ ವಿನಾಶಕಾರಕವಾದ ಪರಿಣಾಮಗಳು ನಿಮ್ಮ ಮನಸ್ಸಿನಲ್ಲಿ ಹೊಚ್ಚಹೊಸವಾಗಿವೆ. ಆದ್ದರಿಂದ

ಅವನ್ನು ನಾನು ಮತ್ತೆ ಪ್ರಸ್ತಾಪಿಸಬೇಕಾಗಿಲ್ಲ. ಆ ವಿಷಯ ಇಷ್ಟು ಹೇಳಿದರೆ ಸಾಕು; ಈ ಕ್ಷಾಮದಿಂದಾಗಿ ಸಂಸ್ಥಾನಕ್ಕೆ 160 ಲಕ್ಷ ರೂಪಾಯಿಗಳ ನಷ್ಟ ವಾಯಿತು; ಸರ್ಕಾರಕ್ಕೆ 80 ಲಕ್ಷ ರೂಪಾಯಿಗಳ ಸಾಲವುಂಟಾಯಿತು; ಹತ್ತು ಲಕ್ಷ ಜನರನ್ನು ದೇಶ ಕಳೆದುಕೊಂಡಿತು; ಆದರಿಂದ ಅನೇಕ ವರ್ಷ ಚೇತರಿಸಿ ಕೊಳ್ಳಲಾಗದಂತೆ ಸಂಸ್ಥಾನದ ಸಾಧನಸಂಪತ್ತಿಗೆ ಆಘಾತವಾಗಿದೆ.

4. ಕಳೆದ 17ನೇ ಫೆಬ್ರುವರಿ ದಿನದ ಇರುಳಿನಲ್ಲಿ ಜಾಗರೂಕತೆಯಿಂದ ಜನ ಗಣತಿಯನ್ನು ಮಾಡಲಾಯಿತು. ಫಲಿತಾಂಶಗಳನ್ನು ಬಹು ವಿವರವಾಗಿ ಕ್ರೋಢೀ ಕರಿಸಲಾಗುತ್ತಿದೆ. ಅವು ಸಿದ್ಧವಾದ ಮೇಲೆ ಅನೇಕ ಸ್ವಾರಸ್ಯವಾದ ಅಂಕಿ ಅಂಶ ಗಳು ತಿಳಿಯುವಂತಾಗುತ್ತವೆ. ಈ ಜನಗಣತಿಯಂತೆ ಜನಸಂಖ್ಯೆ 41,82,000. 1871ರ ಜನಗಣತಿಯೊಂದಿಗೆ ಹೋಲಿಸಿದರೆ 8,74,000 ಜನಬಲ ನಷ್ಟವಾಗಿದೆ ಯೆಂದು ಗೊತ್ತಾಗುತ್ತದೆ. ಒಳ್ಳೆಯ ವರ್ಷಗಳಲ್ಲಿ ರೂಢಿಯಂತೆ ಹೆಚ್ಚುವ ಜನ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಈ ಕ್ಷಾಮದಿಂದ ಆದ ಜನನಷ್ಟ ಹತ್ತು ಲಕ್ಷವೆಂದು ಅಥವಾ ಜನಸಂಖ್ಯೆಯ ಶೇಕಡ 20 ರಷ್ಟೆಂದು ಭಾವಿಸಬಹುದು.

5. ಆದರೆ ಸರ್ಕಾರದ ಆದಾಯ ಇಷ್ಟೇ ಪ್ರಮಾಣದಲ್ಲಿ ಕುಗ್ಗಲಿಲ್ಲ. ಕ್ಷಾಮದ ಭೀಕರ ಪರಿಣಾಮವು ಕೆಲವು ಬಗೆಯ ಜನವರ್ಗಗಳ ಮೇಲೆ ಮಾತ್ರ ಉಂಟಾಯಿತು. ಕೃಷಿಕವರ್ಗದ ಚೈತನ್ಯ ಅಸಾಧಾರಣವಾಗಿದ್ದು ಕ್ಷಾಮವಾದ ಮರು ವರ್ಷದಲ್ಲಿಯೇ ಕೃಷಿಉತ್ಪನ್ನ ಚೇತರಿಸಿಕೊಂಡಿತು. ಆದಾಗ್ಯೂ ಸರ್ಕಾರದ ಆದಾಯದಲ್ಲಿ ಗಮನಾರ್ಹವಾದ ಇಳುವರಿ ಆಗಿದೆ. ಇದರಿಂದ ಇನ್ನೂ ಕೆಲವು ವರ್ಷಗಳವರೆಗೆ ಸಂಸ್ಥಾನದ ಅಭ್ಯುದಯವನ್ನು ಸಾಧಿಸಲು ಸರ್ಕಾರದ ಪ್ರಯತ್ನ ಗಳಿಗೆ ಅಡ್ಡಿಯುಂಟಾಗುತ್ತದೆ.

6 ಸರ್ಕಾರದ ಆದಾಯದ ವಿವರವಾದ ವಿಶ್ಲೇಷಣೆ ಈಗ ತಯಾರಾಗು ತ್ತಿದೆ. ಆದರೆ ಕೆಳಗೆ ಕೊಟ್ಟಿರುವ ವಿವರಗಳಿಂದ ಅದರ ವಿಷಯ ಸಾಕಷ್ಟು ಅರಿ ವಾಗುತ್ತದೆ. ಕ್ಷಾಮಕ್ಕಿಂತ ಮುಂಚೆ ಸರ್ಕಾರದ ಪರಮಾವಧಿ ಆದಾಯ 109½ ಲಕ್ಷ ರೂಪಾಯಿಗಳಾಗಿತ್ತು. 1799ರ ಕೌಲಾದ ಕಾಲದಲ್ಲಿ ಇದ್ದ ಸಂಸ್ಥಾನದ ಆಸ್ತಿಗಳ ಒಟ್ಟು ಮೊತ್ತಕ್ಕಿಂತ ಈ ಆದಾಯ ಎರಡರಷ್ಟಾಗಿದೆ. ಆದ್ದರಿಂದ ಸಂಸ್ಥಾನದ ಆದಾಯ ಅಪರಿಮಿತವಾಗಿ ವಿಸ್ತಾರಗೊಳ್ಳುವುದಕ್ಕೆ ಅವಕಾಶವಿದೆ

ಯೆಂಬ ತಪ್ಪು ಕಲ್ಪನೆ ಉಂಟಾಗಿದೆ. ಆದರೆ 1799ರ ಕೌಲಿನಲ್ಲಿ ಸಂಸ್ಥಾನದ ಆದಾಯವನ್ನು ಬಹು ಕಡಿಮೆಯಾಗಿ ತೋರಿಸಲಾಗಿದ್ದಿತು. ಆಗಿನ ನಿಜವಾದ ಆದಾಯ ಇನ್ನೂ ಹೆಚ್ಚಾಗಿದ್ದಿತು. ಮುಂದೆ ಎರಡು ಸಂದರ್ಭಗಳಲ್ಲಿ ಆದಾಯ ಇದ್ದಕ್ಕಿದ್ದಂತೆ ಅಧಿಕ ಪ್ರಮಾಣದಲ್ಲಿ ಹೆಚ್ಚಿತು. ಒಂದು ಅವಧಿಯಲ್ಲಿ ಬಟಾಯಿ ಹಿಡುವಳಿಯ ಪದ್ಧತಿ ಜಾರಿಯಲ್ಲಿದ್ದು ರೈತರು ನಿಸ್ಸಹಾಯಕರಾಗಿ ಸರ್ಕಾರವನ್ನೇ ಅವಲಂಬಿಸಿದ್ದರು. ವ್ಯಾಪಾರವೇ ಇರಲಿಲ್ಲ. ಬೆಲೆಗಳು ತೀರಾ ಇಳಿದಿದ್ದುವು. ಆಗ ದೇಶದಲ್ಲಿ ಕ್ಷೋಭೆಯನ್ನು ಅಡಗಿಸಿ ಸುವ್ಯವಸ್ಥೆಯನ್ನು ಏರ್ಪಡಿಸಲಾಯಿತು. ಬಟಾಯಿ ಪದ್ಧತಿಯನ್ನು ವಜಾಮಾಡಿ ಹಣದ ರೂಪದಲ್ಲಿ ಕಂದಾಯವನ್ನು ವಿಧಿಸಲು ತೊಡಗಿದಾಗ ಸರ್ಕಾರಕ್ಕೆ ಹೆಚ್ಚು ಆದಾಯ ದೊರೆಯಿತು. ರೈಲ್ವೆ ಮತ್ತು ಕಾಮಗಾರಿ ಕೆಲಸಗಳಿಗಾಗಿ ಹೆಚ್ಚು ಹಣ ಸಂದಾಯ ಮಾಡಲಾಯಿತು. ಅನಿರ್ಬಂಧಿತ ವ್ಯಾಪಾರಕ್ಕೆ * ಅವಕಾಶ ಕೊಡಲಾಯಿತು. ಪದಾರ್ಥಗಳ ಬೆಲೆ ಹೆಚ್ಚಾಯಿತು. ಇನ್ನೊಂದು ಸಂದರ್ಭದಲ್ಲಿ ಹೀಗೆ ಆದಾಯ ಹೆಚ್ಚಾದುದು ಅಮೆರಿಕದಲ್ಲಿ ಅಂತರ್ಯುದ್ಧ ಉಂಟಾದಾಗ. ಆಗ ಅಮೆರಿಕದಿಂದ ಇಂಗ್ಲೆಂಡಿಗೆ ವಸ್ತುಗಳ ಪೂರೈಕೆ ನಿಂತಿತು. ಇಂಗ್ಲೆಂಡಿನ ಮಾರುಕಟ್ಟೆಗಳಲ್ಲಿ ಭಾರತದ ಹತ್ತಿ ಮತ್ತು ಇತರ ಪದಾರ್ಥಗಳಿಗೆ ಗಿರಾಕಿ ಹೆಚ್ಚಿ ಇಲ್ಲಿ ಹಿಂದೆ ಸೂಚಿಸಿದ ಹೆಚ್ಚುವರಿ ಬೆಲೆಗಿಂತ ಪದಾರ್ಥಗಳ ಬೆಲೆ ಇನ್ನೂ ಅಧಿಕವಾಗಿ ಏರಿತು. ಈ ಎರಡು ಕಾರಣಗಳಿಂದಾಗಿ ಆದ ಹೆಚ್ಚುವರಿಯನ್ನು ಬಿಟ್ಟುಬಿಟ್ಟರೆ ಕೃಷಿಯಲ್ಲಿ ಪ್ರಗತಿಯಾಗಲಿ, ಸರ್ಕಾರದ ಆದಾಯವಾಗಲಿ ಸಾಮಾನ್ಯ ವರ್ಷಗಳಲ್ಲಿ ಹೆಚ್ಚಾಗಿಲ್ಲ. ಪ್ರಜಾಸಂಖ್ಯೆಗೆ ಅನುಗುಣವಾಗಿ ವ್ಯವಸಾಯದಲ್ಲಾಗಲಿ, ಆದಾಯದಲ್ಲಾಗಲಿ ಪ್ರಗತಿಯಾಗಿಲ್ಲ. ಸರ್ಕಾರಗಳು ಆದಾಯಕ್ಕೆ ತಕ್ಕಂತೆ ವೆಚ್ಚವನ್ನು ಸರಿತೂಗಿಸಬೇಕಾದರೆ, ಬಡತನಕ್ಕೆ ಈಡಾಗಿರುವ ಈ ದೇಶದಲ್ಲಿ ಹೇಗೋ ಆದಾಯ ಹೆಚ್ಚಾಗುವುದೆಂಬ ಅನಿಶ್ಚಿತವಾದ ನಿರೀಕ್ಷಣೆಯನ್ನು ಇಟ್ಟುಕೊಳ್ಳದೇ ಖರ್ಚುಗಳನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ತೊಡಗಬೇಕು ಎಂಬುದನ್ನು ತೋರಿಸುವುದಕ್ಕಾಗಿ ಈ ವಿಷಯವನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಕೈಗಾರಿಕೋದ್ಯಮಗಳಲ್ಲಿ ಹಿಂದೆ ಸೂಚಿಸಿದ ಸಂದರ್ಭಗಳಲ್ಲಿ ಆದಂತೆ ರಭಸವಾಗಿ ಪ್ರಗತಿಯಾದರೆ ಸರ್ಕಾರದ ಆದಾಯ ಹೆಚ್ಚಿನ ಪ್ರಮಾಣದಲ್ಲಿ ವೃದ್ಧಿಯಾದೀತು.

* ಆಮದು ತಡೆಯಲು ಅಥವಾ ಸ್ವದೇಶೀ ಕೈಗಾರಿಕೆಗಳಿಗೆ ರಕ್ಷಣೆಕೊಡಲು ಪರದೇಶಗಳ ಸರಕುಗಳ ಮೇಲೆ ಸುಂಕ ಹಾಕದೇ ಸಲೀಸಾಗಿ ನಡೆಯುವಂತೆ ಬಿಟ್ಟ ವ್ಯಾಪಾರ.

7. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಈಗ ಪರಿಶೀಲಿಸೋಣ. ಸರ್ಕಾರದ ಆದಾಯ 1874–75ರಲ್ಲಿ 109½ ಲಕ್ಷಕ್ಕೆ ಏರಿದ್ದು 1880–81 ರಲ್ಲಿ 101 ಲಕ್ಷ ರೂಪಾಯಿಗಳಷ್ಟು ಕೆಳಗೆ ಇಳಿಯಿತು. ಇದಕ್ಕೆ ಕ್ಷಾಮ ಸಂಭವಿಸಿದ್ದೇ ಕಾರಣ.

1874–75 ಮತ್ತು 1880–81ರ ಸಂಸ್ಥಾನದ ಆದಾಯದ ಕೆಲವು ಬಾಬುಗಳ ಹೋಲಿಕೆ ಈ ಕೆಳಗೆ ಕಂಡಂತೆ ಇದೆ.

| | 1874–75 | 1880–81 |
|---|---|---|
| ಭೂಕಂದಾಯ | ರೂ. 73,51,000 | 69,58,000 |
| ಅರಣ್ಯ | 3,82,000 | 6,98,000 |
| ಆಬ್ಕಾರಿ | 11,53,000 | 10,67,000 |
| ಮೊಹತರ್ಫ | 3,68,000 | 2,52,800 |
| ಸಾಯರ್ | 7,80,000 | 3,33,000 |
| ಸ್ಟಾಂಪು, ಕಾನೂನು ಮತ್ತು ನ್ಯಾಯಇಲಾಖೆ | 6,26,000 | 5,24,900 |
| ಇತರೆ | 2,90,000 | 2,66,300 |
| ಒಟ್ಟು | 1,09,50,000 | 1,01,00,000 |

8. ಭೂಕಂದಾಯದಲ್ಲಿ ನಾಲ್ಕು ಲಕ್ಷವೂ, ಸಾಯರ್ ಮತ್ತು ಸುಂಕದಲ್ಲಿ ನಾಲ್ಕು ಲಕ್ಷವೂ, ಮೊಹತರ್ಫ ಅಥವಾ ಮನೆಗಳ ಅಂಗಡಿಗಳ ಮಗ್ಗಗಳ ಮೇಲಿನ ತೆರಿಗೆಯಲ್ಲಿ ಒಂದು ಲಕ್ಷವೂ, ಆಬ್ಕಾರಿ ಅಥವಾ ಮದ್ಯಗಳ ಮೇಲಿನ ಸುಂಕದಲ್ಲಿ ದಲ್ಲಿ ಒಂದು ಲಕ್ಷವೂ, ಸ್ಟಾಂಪು ಲೆಕ್ಕದಲ್ಲಿ ಒಂದು ಲಕ್ಷವೂ ನಷ್ಟವಾಗಿದೆ. ಕಂದಾಯದ ಬಾಕಿಯ ಮೇಲೆ ಬರಬೇಕಾಗಿದ್ದ ಬಡ್ಡಿಯಲ್ಲಿಯೂ ಇತರ ಬಾಬುಗಳಲ್ಲಿಯೂ 50 ಸಾವಿರ ರೂಪಾಯಿ ಕಡಿಮೆಯಾಗಿದೆ. ಅರಣ್ಯದ ಬಾಬಿನಲ್ಲಿ ಮುಖ್ಯವಾಗಿ ಗಂಧದಮರದ ಮಾರಾಟದಿಂದ ಹೆಚ್ಚುವರಿ ಆದಾಯ ಮೂರು ಲಕ್ಷ ರೂಪಾಯಿಗಳಷ್ಟು ಬಂದಿದೆ.

9. ಕ್ಷಾಮದಿಂದಾಗಿ ಸಂಭವಿಸಿದ ಮೇಲಿನ ನಷ್ಟವನ್ನು ನಿಧಾನವಾಗಿ ಮಾತ್ರ ಸರಿತೂಗಿಸಬಹುದು. ಭೂಕಂದಾಯ ಕಡಿಮೆಯಾದ್ದಕ್ಕೆ ವ್ಯವಸಾಯ ಬಿದ್ದುಹೋದುದು ಕಾರಣ. ಕೃಷಿಕವರ್ಗದಲ್ಲಿ ಉಂಟಾದ ಕಷ್ಟನಷ್ಟಗಳಿಂದ

ಕೃಷಿಗೆ ಒಳಪಡಬೇಕಾದ ಭೂಮಿಯ ವಿಸ್ತಾರ ಕುಗ್ಗಿತು. ಅಲ್ಲದೇ ಕೃಷಿ ಉತ್ಪಾದನೆಗೆ ಪೂರಕವಾಗಿದ್ದ ಕೆಲವು ಜನವರ್ಗಗಳು ಬಹುವಾಗಿ ನಷ್ಟ ಹೊಂದಿದುದೂ ಭೂಮಿಯ ಸಾಗುವಳಿ ಕುಗ್ಗಿದುದಕ್ಕೆ ಕಾರಣ. ಇದರಿಂದ ಆಹಾರ ಧಾನ್ಯಗಳ ಬೇಡಿಕೆ ಕುಗ್ಗಿತು. ಬೆಲೆಗಳು ಕೆಳಮಟ್ಟದಲ್ಲಿಯೇ ಉಳಿದವು. ಹೆಚ್ಚುವರಿ ಭೂಮಿಯನ್ನು ಸಾಗುವಳಿ ಮಾಡಲು ರೈತರು ಹಿಂಜರಿದರು. ಈ ಸಂಗತಿ ಕೃಷಿಯ ಪ್ರಗತಿಯು ತಯಾರಿಕಾ ಉದ್ಯಮಗಳು ಅಭಿವೃದ್ಧಿ ಹೊಂದುವುದರ ಮೇಲೆ ಅವಲಂಬಿಸಿದೆ ಎಂಬುದನ್ನು ತೋರಿಸುತ್ತದೆ. ಕೃಷಿಉತ್ಪನ್ನವನ್ನು ಅಭಿವೃದ್ಧಿಗೊಳಿಸುವುದಕ್ಕೆ ಮಾತ್ರ ಭಾರತ ಗಮನ ಕೊಡಬೇಕು ಎಂಬ ಹಳೆಯ ಅಭಿಪ್ರಾಯ ಕಣ್ಮರೆಯಾಗುತ್ತಿದೆ. ಕೃಷಿ ಮತ್ತು ತಯಾರಿಕಾ ಉದ್ಯಮಗಳನ್ನು ಸಮಸಮವಾಗಿ ಬೆಳೆಸಿದಲ್ಲದೇ ಯಾವ ದೇಶವೂ ಏಳಿಗೆ ಹೊಂದಲಾರದು ಎಂಬ ಅಭಿಪ್ರಾಯ ತಲೆ ಎತ್ತುತ್ತಿದೆ. ಅದೇ ಸರಿಯಾದ ಅಭಿಪ್ರಾಯ. ಮುಂದಿನ ಕೆಲವು ವರ್ಷಗಳಲ್ಲಿ ವ್ಯವಸಾಯ ಪೂರ್ಣವಾಗಿ ಚೇತರಿಸಿಕೊಳ್ಳುತ್ತದೆಂದು ನಿರೀಕ್ಷಿಸಬಹುದಾಗಿದೆ. ಈ ಮಧ್ಯೆ ಹಲವು ತಾಲ್ಲೂಕುಗಳಲ್ಲಿ ಭೂಮಿಯನ್ನು ಅಳೆಯುವ, ಕಂದಾಯವನ್ನು ನಿರ್ಧರಿಸುವ ಕೆಲಸವನ್ನು ಪ್ರಾರಂಭಿಸಿರುವುದರಿಂದ ಹಿಂದೆ ಇದ್ದ ಭೂಕಂದಾಯದ ಅಸಮಾನತೆಯು ನಿವಾರಣೆಯಾಗಿ ಹೆಚ್ಚುವರಿ ಆದಾಯ ಬರುತ್ತದೆ. ಆದರೆ ಈ ಹೆಚ್ಚುವರಿ ಆದಾಯವು ಗ್ರಾಮಾಧಿಕಾರಿಗಳಿಗೆ ಸಂಭಾವನೆಯನ್ನು ಕೊಡುವುದಕ್ಕೆ ವಿನಿಯೋಗವಾಗುತ್ತದೆ.

10. ಸಾಯರ್ ಬಾಬಿನಲ್ಲಿ ಉಂಟಾಗಿರುವ ನಷ್ಟ ಬಹುಕಾಲ ಇರತಕ್ಕದ್ದಾಗಿದೆ. ಪ್ರಜೆಗಳ ಹಿತಾಸಕ್ತಿಯ ದೃಷ್ಟಿಯಿಂದ ಕೆಲವು ಪರಿಹಾರಗಳನ್ನು ಕೊಡಬೇಕಾದುದು ಆವಶ್ಯಕವಾದ್ದರಿಂದ ಈ ನಷ್ಟ ಉಂಟಾಗಿದೆ. ಅಡಿಕೆಯ ಮೇಲಿನ ಸುಂಕವನ್ನು ಮಣಕ್ಕೆ ಒಂದು ರೂಪಾಯಿ ನಾಲ್ಕಾಣೆಯಿಂದ ಹನ್ನೆರಡು ಆಣೆಗೆ ಇಳಿಸಲಾಯಿತು. ಹೊಗೆಸೊಪ್ಪು, ವೀಳ್ಯದೆಲೆ, ತೆಂಗಿನಕಾಯಿ ಮತ್ತು ಏಲಕ್ಕಿ ಇವುಗಳ ಮೇಲಿನ ಸುಂಕವನ್ನು ಇಳಿಸಲಾಗಿ ಆನಂತರ ವಜಾಮಾಡಲಾಯಿತು. ಈ ಸುಂಕದಿಂದ ಆದಾಯವು ಅತ್ಯಲ್ಪವಾಗಿ ಬರುತ್ತಿತ್ತು. ಇದಕ್ಕಾಗಿ ಮಾಡಬೇಕಾಗಿದ್ದ ಸಿಬ್ಬಂದಿ ಖರ್ಚು, ಜನಗಳಿಗಾಗುತ್ತಿದ್ದ ತೊಂದರೆಗಳನ್ನು ತಪ್ಪಿಸುವುದಕ್ಕಾಗಿ ಹೀಗೆ ಮಾಡಲಾಯಿತು. ಸಂಸ್ಥಾನದ ಕೆಲವೇ ತಾಲ್ಲೂಕುಗಳಲ್ಲಿ ಬೆಳೆಯಲಾಗುತ್ತಿರುವ ಹೊಗೆಸೊಪ್ಪು ಭಾರತದ ಇತರ ರಾಜ್ಯಗಳಲ್ಲಿ ವಿಸ್ತಾರವಾದ ಪ್ರದೇಶಗಳಲ್ಲಿ ಬೆಳೆಯು

ಲಾಗುತ್ತಿರುವ ಹೊಗೆಸೊಪ್ಪಿನೊಂದಿಗೆ ಪೈಪೋಟಿ ಮಾಡಬೇಕಾದುದರಿಂದ ಅದನ್ನು ಪ್ರೋತ್ಸಾಹಿಸುವುದಕ್ಕಾಗಿ ಸರ್ಕಾರದ ಈ ಕ್ರಮ ಅಗತ್ಯವಾಯಿತು. ನಗರಸಭೆಗಳಿರುವ ಪಟ್ಟಣಗಳಲ್ಲಿ ಮಾತ್ರ ಈ ವಸ್ತುಗಳು, ಸುಂಕಕ್ಕೊಳಪಟ್ಟ ಇತರ ವಸ್ತುಗಳಂತೆಯೇ ಕರಕ್ಕೆ ಒಳಗಾಗಿವೆ. ಸಾಯರ್ ಸುಂಕವನ್ನು ಅಡಿಕೆಯ ಮೇಲೆ ಮಾತ್ರ ವಿಧಿಸಲಾಗುತ್ತಿದೆ. ಆದರಿಂದ ಬರುವ ಆದಾಯ ಹೆಚ್ಚಾಗಿರುವುದರಿಂದ ಈ ಸುಂಕವನ್ನು ಕೈಬಿಡಲಾಗುವುದಿಲ್ಲ. ಶ್ರೇಷ್ಠತರವಾದ ಅಡಿಕೆಯನ್ನು ಬೆಳೆಯಲಾಗುತ್ತಿರುವ ಮಲೆನಾಡು ತಾಲ್ಲೂಕುಗಳಲ್ಲಿರುವ ವಿಶೇಷವಾದ ಸೌಲಭ್ಯಗಳಿಂದಾಗಿಯೂ, ಅಡಿಕೆಗೆ ಭಾರತೀಯ ಮಾರುಕಟ್ಟೆಗಳಲ್ಲಿರುವ ಹೆಚ್ಚಿನ ಬೇಡಿಕೆಯಿಂದಾಗಿಯೂ ಈ ತೆರಿಗೆ ಭಾರವೆನಿಸುವುದಿಲ್ಲ. ರೈತರು ಕಂದಾಯದ ತೀರ್ಪಾಡಿನಿಂದಾಗಿ ಅಡಿಕೆತೋಟಗಳ ಮೇಲೆ ಹೆಚ್ಚಿನ ಕಂದಾಯ ಕೊಡಬೇಕಾಗಿರುವುದರಿಂದ ಕೆಲವು ರಿಯಾಯಿತಿಗಳನ್ನು ಅಪೇಕ್ಷಿಸುತ್ತಾರೆ. ತೋಟಗಳ ಮೇಲೆ ವಿಧಿಸಲಾಗಿರುವ ವಿಶೇಷತರವಾದ ಕಂದಾಯವು ಬಂಡವಾಳದ ಮೇಲೆ ತೆರಿಗೆಯನ್ನು ಹೇರಿದಂತಾಗುವುದೆಂಬ ಆಕ್ಷೇಪಣೆಗೆ ಗುರಿಯಾಗಬಹುದಾಗಿದೆ. ಆದರೆ ಈ ಕಂದಾಯ ಈ ಸಂಸ್ಥಾನದಲ್ಲಿ ಯಾವಾಗಲೂ ಅಸ್ತಿತ್ವದಲ್ಲಿದ್ದಿತು. ಈಗ ಕಂದಾಯವನ್ನು ಕಟ್ಟುನಿಟ್ಟಾಗಿ ವಸೂಲ್ಮಾಡುತ್ತಿರುವುದರಿಂದ ಜನರಿಗೆ ಇದರ ಭಾರ ಕಾಣುತ್ತಿದೆ. ಹಿಂದೆ ವೃಕ್ಷಗಳು ಫಲಕ್ಕೆ ಬರುವವರೆಗೆ ಮತ್ತು ಫಲ ನಿಂತ ಮೇಲೆ ಕಂದಾಯದ ರಿಯಾಯಿತಿಯನ್ನು ಕೊಡಲಾಗುತ್ತಿತ್ತು. ಆದರೆ ಅಂತಹ ರಿಯಾಯಿತಿಯ ಹೆಚ್ಚಿನ ದುರುಪಯೋಗವಾಗಿರುವುದರಿಂದ ಅದನ್ನು ಪುನಃ ಜಾರಿಗೆ ತರಲು ಸಾಧ್ಯವಿಲ್ಲ. ಆದರೂ ರಿಯಾಯಿತಿಯನ್ನು ಹೆಚ್ಚಿನ ತೆರಿಗೆಯನ್ನು ಕೊಡುವ ತೋಟಗಳಿಗೆ ಕೊಡುವ ಪ್ರಶ್ನೆಯನ್ನು ಮಹಾರಾಜರವರ ಸರ್ಕಾರ ಶೀಘ್ರವಾಗಿ ಪರಿಶೀಲಿಸುತ್ತದೆ. ಸಾಯರ್ ತೆರಿಗೆಗೆ ಒಳಗಾದ ಇನ್ನೊಂದು ವಸ್ತುವೆಂದರೆ ಬಟ್ಟೆ. ಈ ತೆರಿಗೆಯನ್ನು ಆಮದಾಗುವ ಗಿರಣಿ ಬಟ್ಟೆಗಳ ಮೇಲೆ ವಿಧಿಸದೇ ಸ್ಥಳೀಯವಾಗಿ ಭಾರತದಲ್ಲಿ ತಯಾರಾಗುವ ಬಟ್ಟೆಗಳ ಮೇಲೆ ಮಾತ್ರ ವಿಧಿಸಲಾಗುತ್ತಿತ್ತು. ಇದರಿಂದ ಬರುವ ಆದಾಯವು ಕಡಿಮೆಯಾದುದರಿಂದ ತೆರಿಗೆಯನ್ನು ಬಿಟ್ಟುಬಿಡುವುದು ಸೂಕ್ತವೆಂದು ತೀರ್ಮಾನಿಸಲಾಯಿತು. ಈ ತೆರಿಗೆಯನ್ನು ಹಣಕಾಸಿನ ಜರೂರಾತಿಯಿಂದ ನಿತ್ಯಬಳಕೆಯ ವಸ್ತುಗಳ ಮೇಲೆ ಹಾಕಬೇಕಾಗಿ ಬಂದರೆ ಅದನ್ನು ಗಿರಣಿ ಬಟ್ಟೆಯ ಮೇಲೆ ಹಾಕುವುದು ನ್ಯಾಯವೆಂದು ಕಾಣುತ್ತದೆ. ಇಂತಹ ತೆರಿಗೆಗಳು ಬಹಳ ಆಕ್ಷೇಪಣಾರ್ಹವಾದವು. ಕಠಿಣ ಸಂದರ್ಭಗಳಲ್ಲಿ ಮಾತ್ರ ಅವನ್ನು ವಿಧಿಸತಕ್ಕದ್ದು.

11. ಮಗ್ಗದ ತೆರಿಗೆಯನ್ನು ಕೊಡುತ್ತಿದ್ದ ನೇಯ್ಗೆ ಜನಾಂಗದಲ್ಲಿ ಅತಿಯಾದ ಸಾವು ಸಂಭವಿಸಿದ್ದರಿಂದ ಮೊಹತರ್ಫ ಕಡಿಮೆಯಾಯಿತು. ನಗರ ಸಭೆಗಳು ಪ್ರತ್ಯೇಕವಾದ ಮನೆ ಕಂದಾಯವನ್ನು ವಿಧಿಸುವುದನ್ನು ತಪ್ಪಿಸುವುದಕ್ಕಾಗಿ ಸರ್ಕಾರ ವಿಧಿಸಿದ ಮನೆ ಕಂದಾಯದಲ್ಲಿ ಅರ್ಧಭಾಗವನ್ನು ಅವುಗಳಿಗೆ ಕೊಟ್ಟಿದ್ದರಿಂದ ಈ ತೆರಿಗೆಯ ಬಾಬಿನಲ್ಲಿ ನಷ್ಟ ಉಂಟಾಯಿತು. ಕೃಷಿಗಾರರಲ್ಲದವರ ಮನೆಗಳ ಮೇಲೆ ಈಗಿನಂತೆ ಈ ತೆರಿಗೆಯನ್ನು ವಿಧಿಸುವುದಕ್ಕೆ ಬದಲಾಗಿ ಎಲ್ಲ ಮನೆಗಳ ಮೇಲೆ ವಿಧಿಸಿದರೆ ಅದು ಹೆಚ್ಚು ಉತ್ಪಾದಕವಾಗುತ್ತದೆ. ಇಂತಹ ವ್ಯವಸ್ಥೆಯನ್ನು ಈಚೆಗೆ ನಗರಸಭೆಗಳಿರುವ ಪಟ್ಟಣಗಳಲ್ಲಿ ಜಾರಿಗೆ ತಂದಿದೆ. ಎಲ್ಲ ಮನೆಗಳ ಮೇಲೂ ಯಾವ ವಿನಾಯಿತಿಯೂ ಇಲ್ಲದೇ ಈ ತೆರಿಗೆಯನ್ನು ವಿಧಿಸಲಾಗುತ್ತಿದೆ. ಇದನ್ನು ಗ್ರಾಮಗಳಿಗೆ ಅನ್ವಯಿಸುವುದರಿಂದ ಜನರು ತಪ್ಪು ತಿಳಿದುಕೊಳ್ಳಬಹುದು. ಹಣಕಾಸಿನ ಒತ್ತಡ ಉಂಟಾಗದಿರುವವರಿಗೆ ಈ ತೆರಿಗೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ವಿಧಿಸಲಾಗುವುದಿಲ್ಲ.

12. ಕ್ಷಾಮದ ಪರಿಣಾಮದಿಂದ ಶೀಘ್ರವಾಗಿ ಚೇತರಿಸಿಕೊಂಡುದೆಂದರೆ ಅಬ್ಕಾರಿ ಸುಂಕ. ಕ್ಷಾಮಕ್ಕೆ ಅತಿಯಾಗಿ ತುತ್ತಾಗದೇ ಇದ್ದ, ಅದರಿಂದ ಬೇಗ ಚೇತರಿಸಿಕೊಂಡ ದೊಡ್ಡ ಪಟ್ಟಣಗಳಿಂದ ಈ ಆದಾಯವನ್ನು ಹೆಚ್ಚಾಗಿ ಪಡೆಯಲಾಗುತ್ತಿದೆ. ಇದು ಒಂದೇ ಸಮನೆ ಹೆಚ್ಚುತ್ತಿರುವ ಆದಾಯ ಮೂಲವಾಗಿದೆ. ಈ ಆದಾಯದ ಹೆಚ್ಚುವರಿ ಮಾದಕವಸ್ತುಗಳ ಸೇವನೆ ಹೆಚ್ಚಾಗುತ್ತಿರುವುದನ್ನು ತೋರಿಸುತ್ತದೆ. ಇದೇನೂ ಅಷ್ಟು ಸಮಾಧಾನತರುವ ವಿಷಯವಲ್ಲ. ಇದುವರೆಗೆ ಈ ತೆರಿಗೆಯಿಂದ ಬರುವ ಆದಾಯದ ಕಡೆ ಮಾತ್ರ ಸರ್ಕಾರ ತನ್ನ ಗಮನವನ್ನು ಕೊಟ್ಟಿದೆ. ಈ ತೆರಿಗೆಯನ್ನು ಸರ್ಕಾರಕ್ಕೆ ಕೊಡುವಂತಹ ಬಡಜನರ ಆರೋಗ್ಯ, ಸೌಲಭ್ಯಗಳ ಕಡೆಗೂ ಸರ್ಕಾರದ ದೃಷ್ಟಿ ಹರಿಯಬೇಕು. ಸಾರಾಯಿ ಮಾರಾಟವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಅಕ್ಕಿಭೋಜ ಅಂದರೆ ಭತ್ತದಿಂದ ಭಟ್ಟಿ ಇಳಿಸಿ ತಯಾರಿಸುವ ಮದ್ಯವನ್ನು ಪ್ರತಿಬಂಧಿಸಲಾಗಿತ್ತು. ಇದರಿಂದ ಮಲೆನಾಡಿನಲ್ಲಿ ಮದ್ಯಸೇವಿಸುವ ಜನರಿಗೆ ತೊಂದರೆಯುಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬರಲಾಗಿ ಈ ಪ್ರತಿಬಂಧಕವನ್ನು ತೆಗೆದುಹಾಕಲಾಗಿದೆ. ಮಲೆನಾಡು ಜನರು ಬಹಳಕಾಲದಿಂದ ರೂಢಿಮಾಡಿಕೊಂಡಿರುವ ಅಕ್ಕಿಭೋಜವು ಹೆಚ್ಚು ಮಾದಕವಲ್ಲದ ಮದ್ಯ.

13. ಶ್ರೀಮನ್ಮಹಾರಾಜರು ಬ್ರಿಟಿಷ್‌ಸರ್ಕಾರಕ್ಕೆ ಸಿವಿಲ್ ಮತ್ತು ಸೈನ್ಯದ ನೆಲೆಗಾಗಿ ವರ್ಗಾಯಿಸಲು ಒಪ್ಪಿರುವ ಬೆಂಗಳೂರು ನಗರದ ಭಾಗದಿಂದ ಆಬ್ಕಾರಿ ಆದಾಯದ ಗಣನೀಯ ಭಾಗವು ಬರುತ್ತಿದೆ. ಈ ವರ್ಗಾಯಿಸಿರುವ ಭಾಗದ ಹೆಚ್ಚುವರಿ ಆದಾಯವನ್ನು ಮೈಸೂರು ಸಂಸ್ಥಾನಕ್ಕೆ ಕೊಡಬೇಕೆಂಬ ಸಂಕಲ್ಪವಿರುವುದರಿಂದ ಸಂಸ್ಥಾನದ ಆದಾಯಕ್ಕೆ ಇದರಿಂದ ನಷ್ಟವಾಗದು.

14. ಭಾರತದ ಇತರ ಭಾಗಗಳಲ್ಲಿ ಉಪ್ಪಿನಿಂದ ಹೆಚ್ಚಿನ ಪ್ರಮಾಣದ ಮತ್ತು ಸತತವಾಗಿ ಹೆಚ್ಚುತ್ತಿರುವ ಆದಾಯವಿದೆ. ಮೈಸೂರು ಸಂಸ್ಥಾನವು ಉಪ್ಪಿನಿಂದ ಯಾವ ಆದಾಯವನ್ನೂ ಗಳಿಸುತ್ತಿಲ್ಲ. ಸಂಸ್ಥಾನದ ಜನ ಬಹುಮಟ್ಟಿಗೆ ಈ ಸುಂಕ ಬಿದ್ದಿರುವ ಉಪ್ಪನ್ನು ಉಪಯೋಗಿಸುತ್ತಾರೆ. ಇದರಿಂದ ಬ್ರಿಟಿಷ್ ಭಾರತಕ್ಕೆ ಆದಾಯ ಬರುತ್ತಿದೆ. ಒಂದು ಕಾಲದಲ್ಲಿ ಎರೆಮಣ್ಣಿನಿಂದ ಉಪ್ಪನ್ನು ತಯಾರಿಸುವ ಕೈಗಾರಿಕೆ ಹೆಚ್ಚಿನ ಪ್ರಮಾಣದಲ್ಲಿ ಈ ಪ್ರಾಂತ್ಯದಲ್ಲಿ ನಡೆಯುತ್ತಿದ್ದಿತು. ಅದು ಈಗ ಬಹುವಾಗಿ ಕ್ಷಯಿಸಿದೆ. ಭಾರತಸರ್ಕಾರದ ಅಪೇಕ್ಷೆಯಂತೆ ಬ್ರಿಟಿಷ್ ಪ್ರದೇಶಗಳಿಗೆ ಉಪ್ಪಿನ ಕಳ್ಳಸಾಗಣಿಕೆ ಆಗದಂತೆ ತಡೆಯಲು, ಸಂಸ್ಥಾನದ ಎಲ್ಲೆಯ ಐದು ಮೈಲಿ ಫಾಸಲೆಯಲ್ಲಿ ಉಪ್ಪಿನ ತಯಾರಿಕೆಯನ್ನು ಪ್ರತಿಬಂಧಿಸಿದೆ. ತತ್ಪರಿಣಾಮವಾಗಿ ಈ ತಯಾರಿಕೆಯಲ್ಲಿ ನಿರತರಾಗಿದ್ದ ಜನರಿಗೆ ಮತ್ತು ಸಂಸ್ಥಾನದ ಮೂಲೆ ಮೂಲೆಗಳಲ್ಲಿ ಈ ಉಪ್ಪನ್ನೇ ಉಪಯೋಗಿಸುವ ಜನರಿಗೆ ತೊಂದರೆಯಾಗಿದೆ. ಸಂಸ್ಥಾನದಲ್ಲಿ ರೈಲು ಸೌಲಭ್ಯವನ್ನು ವಿಸ್ತರಿಸುವ ಮೂಲಕ ಈ ಜನರಿಗೆ ಹೆಚ್ಚು ಶುದ್ಧವಾಗಿರುವ ಸಮುದ್ರದ ಉಪ್ಪನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆಂದು ನಿರೀಕ್ಷಿಸಲಾಗಿದೆ.

15. ಕ್ಷಾಮದಿಂದಾಗಿ ಜನರಲ್ಲಿ ಮುಗ್ಗಟ್ಟು ಉಂಟಾಗಿರುವುದರಿಂದ ಸಾಮಾನ್ಯ ಮತ್ತು ಕೋರ್ಟು ಸ್ಟಾಂಪುಗಳ ಆದಾಯದಲ್ಲಿ ಕಡಿಮೆಯಾಗಿದೆ. ಈ ಆದಾಯ ಮೊದಲಿನ ಸ್ಥಿತಿಗೆ ಬೇಗ ಬರುವುದೆಂದು ನಿರೀಕ್ಷಿಸಬಹುದಾಗಿದೆ.

16. ಅರಣ್ಯ ಇಲಾಖೆಯ ಆದಾಯ ಮಾತ್ರ ಹೆಚ್ಚಾಗಿದೆ. ಮೊದಲೇ ಹೇಳಿದಂತೆ ಗಂಧದ ಮರದ ಮಾರಾಟವೇ ಈ ಹೆಚ್ಚಿನ ಆದಾಯಕ್ಕೆ ಮುಖ್ಯ ಕಾರಣ. ಈಚೆಗೆ ಕೆಲವು ಕಾಲದಿಂದ ಗಂಧದ ಮರಕ್ಕೆ ಬೇಡಿಕೆ ಹೆಚ್ಚುತ್ತಿದೆ. ಅದರಲ್ಲಿಯೂ ಗಂಧದ ಎಣ್ಣೆಯ ತಯಾರಿಕೆಗೆ ಅಗತ್ಯವಾದ ಗಂಧದ ಬೇರುಗಳಿಗೆ ಬೇಡಿಕೆ

ಹೆಚ್ಚಿದೆ. ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಗಂಧದ ಮರವನ್ನು ಮಾರಿ ಮೊದಲಿಗಿಂತ ಅಧಿಕ ಬೆಲೆಯನ್ನು ಪಡೆಯುವುದು ಸಾಧ್ಯವಾಗಿದೆ. ಗಂಧದ ಮಾರುಕಟ್ಟೆ ನಿಗದಿಯಾದ ಪ್ರಮಾಣಕ್ಕಿಂತ ಹೆಚ್ಚಿನ ಸರಬರಾಜನ್ನು ವಾರ್ಷಿಕವಾಗಿ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಈ ವಸ್ತುವಿನ ಮಾರಾಟದ ಅನಿರ್ಬಂಧಿತ ವಿಸ್ತರಣೆಗೆ ಅವಕಾಶವಿಲ್ಲ. ಇದೇ ಪ್ರಮಾಣದಲ್ಲಿ ಮಾರಾಟವನ್ನು ಮುಂದುವರಿಸಿಕೊಂಡು ಹೋಗಬಹುದೆಂದು ನಿರೀಕ್ಷಿಸಲಾಗಿದೆ. ಅದಕ್ಕೆ ತಕ್ಕ ಸರಬರಾಜನ್ನು ಮಾಡಲು ಮರಗಳ ಸಂರಕ್ಷಣೆಗೆ ಸರ್ಕಾರ ಗಮನ ಕೊಡುತ್ತದೆ. ಹೆಚ್ಚಾಗಿ ಗಂಧದ ಮರಗಳು ಖಾಸಗೀ ಜಮೀನುಗಳಲ್ಲಿವೆ. ಆ ಜಮೀನುಗಳ ಮಾಲೀಕರು ಅವುಗಳ ರಕ್ಷಣೆಯಲ್ಲಿ ಈಗಿರುವಂತೆ ಯಾವ ಆಸಕ್ತಿಯನ್ನೂ ತೆಗೆದುಕೊಳ್ಳುವುದಕ್ಕೆ ಕಾರಣವಿಲ್ಲ. ಗಂಧದ ಮರಗಳಿರುವ ಜಮೀನುಗಳ ಮಾಲೀಕರಿಗೆ ಮರಗಳನ್ನು ಬೆಳೆಯುವುದಕ್ಕೂ ಸರ್ಕಾರಕ್ಕೆ ಪೂರೈಸುವುದಕ್ಕೂ ಶೇಕಡ ರುಸುಮು ಕೊಡುವ ಪದ್ಧತಿ ಹಿಂದೆ ಜಾರಿಯಲ್ಲಿದ್ದಿತು. ಅದನ್ನು ಪುನಃ ಜಾರಿಗೆ ತರುವ ಯೋಚನೆಯನ್ನು ಸರ್ಕಾರವು ಮಾಡುತ್ತಿದೆ.

17. ಉಳಿದ ಅರಣ್ಯದ ಬಾಬುಗಳಿಂದ ಬರುವ ಆದಾಯ ಇನ್ನೂ ಅಲ್ಪವಾಗಿಯೇ ಉಳಿದಿದೆ. ಅರಣ್ಯದಲ್ಲಿ ಬೆಳೆಯುವ ಗೃಹನಿರ್ಮಾಣಕ್ಕೆ ಉಪಯೋಗವಾಗುವ ಮರಮುಟ್ಟುಗಳು ಬೆಲೆ ಬಾಳುವವಾಗಿದ್ದರೂ ಮರವನ್ನು ಕಡಿಯುವ ಮತ್ತು ಸಾಗಿಸುವ ಖರ್ಚು ಸುಲಭವಾಗದಿದ್ದರೆ ಅವನ್ನು ಲಾಭದಾಯಕವಾಗಿ ಮಾರಲಾಗುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಮೈಸೂರು ರೈಲ್ವೆ ಮಾರ್ಗಕ್ಕೆ ಹೆಚ್ಚಿನ ಮರಮುಟ್ಟುಗಳ ಅವಶ್ಯಕತೆ ಇದ್ದರೂ ಸ್ಥಳೀಯವಾಗಿ ದೊರೆಯುವ ಮರವನ್ನು ಬಳಸುವುದಕ್ಕಿಂತ ರಂಗೂನಿನಿಂದ ಬರುವ ಮರವನ್ನು ಮದ್ರಾಸಿನಿಂದ ತರಿಸಿ ಬಳಸುವುದರಿಂದ ಕಡಿಮೆ ಖರ್ಚಾಗುತ್ತದೆ ಎಂದು ಕಂಡು ಬಂದಿತು. ಈ ರೈಲು ಮಾರ್ಗ ಹಾಯುವ ಮೈಸೂರು ಹತ್ತಿರದ ಸ್ವಲ್ಪ ಭಾಗದಲ್ಲಿ ಮಾತ್ರ ನಮ್ಮ ಮರವನ್ನು ಉಪಯೋಗಿಸಲಾಯಿತು. ಇದು ರೈಲು ಸ್ಲೀಪರುಗಳಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಆಮ್ಲೇಪಿತವಾದ ಫೈರ್ ಮರದ ಸ್ಲೀಪರುಗಳು ತೇಗದ ಮರದ ಸ್ಲೀಪರುಗಳಿಗಿಂತ ಉತ್ತಮವಾದುವೆಂದು ಪರಿಗಣಿತವಾಗಿವೆ. ಅವುಗಳನ್ನು ಯೂರೋಪಿನಿಂದ ಸಮುದ್ರಮಾರ್ಗವಾಗಿ ತರಿಸಿ ಮದ್ರಾಸಿನಿಂದ ರೈಲುಮಾರ್ಗವಾಗಿ ಬೆಂಗಳೂರಿಗೆ ತೆಗೆದುಕೊಂಡು ಬಂದರೂ ಅವುಗಳ ಬೆಲೆ ನಮ್ಮಲ್ಲಿ ತೇಗದ ಮರದಿಂದ ತಯಾರಿಸಬಹುದಾದ ಸ್ಲೀಪರುಗಳನ್ನು

ಸರಬರಾಜು ಮಾಡಬಹುದಾದ ಬೆಲೆಗಿಂತ ಕಡಿಮೆಯಾಗುತ್ತದೆಂದು ಕಂಡುಬಂದಿದೆ. ಅಲ್ಲದೇ ನಮ್ಮ ಕಾಡುಗಳಲ್ಲಿ ತೇಗದ ಮರದಿಂದ ಸ್ಲೀಪರುಗಳನ್ನು ತಯಾರಿಸಿ ಸರಬ ರಾಜು ಮಾಡುವುದಕ್ಕಿಂತ ಈ ಸ್ಲೀಪರುಗಳ ಸರಬರಾಜು ಶೀಘ್ರವಾಗಿ ಆಗುತ್ತದೆ. ನಮ್ಮ ಅರಣ್ಯಗಳನ್ನು ಸ್ಲೀಪರುಗಳ ಸರಬರಾಜಿಗೆ ನೆಚ್ಚಿಕೊಂಡಿದ್ದರೆ ರೈಲ್ವೆ ಮಾರ್ಗದ ಕಾರ್ಯವೇ ನಿಂತುಹೋಗುತ್ತಿತ್ತು. ರೈಲುಮಾರ್ಗಗಳನ್ನು ಹಾಕಿ ದೇಶದ ವಿವಿಧ ಭಾಗಗಳಿಗೆ ಸಂಪರ್ಕವೇರ್ಪಡಿಸಿದ ಅನಂತರ ನಮ್ಮ ರಾಜ್ಯದ ಅರಣ್ಯಗಳನ್ನು ಲಾಭದಾಯಕವಾಗಿ ವೈಜ್ಞಾನಿಕ ಸಾಧನಗಳನ್ನುಪಯೋಗಿಸಿ ಅಭಿ ವೃದ್ಧಿಪಡಿಸಬಹುದು.

18. ಅರಣ್ಯಗಳಲ್ಲಿ ಉತ್ಪತ್ತಿಯಾಗುವ ಬಗೆ ಬಗೆಯ ಪದಾರ್ಥಗಳನ್ನು ರೂಢಿಸುವ, ಈ ಅರಣ್ಯಗಳಿಂದ ಈಗ ಬರುವ ಆದಾಯಕ್ಕಿಂತ ಹೆಚ್ಚಿನ ಆದಾಯ ವನ್ನು ಪಡೆಯುವ ಕಾರ್ಯವನ್ನು ಆಗ ಕೈಗೊಳ್ಳಬಹುದು.

19. ಮೈಸೂರು ರೈಲುಮಾರ್ಗದಲ್ಲಿ ಕಂಡುಬರುವ ವಿಸ್ತಾರವಾದ ಕುರು ಚಲು ಗಿಡದ ಕಾಡುಗಳಲ್ಲಿ ಬೆಳೆಯುವ ಗಿಡಗಳನ್ನು ರೈಲು ಎಂಜಿನ್ನಿಗೆ ಸೌದೆಯಾಗಿ ಉಪಯೋಗಿಸುವ ಮೂಲಕ ಆ ಕಾಡುಗಳ ಲಾಭದಾಯಕ ಉಪಯೋಗವನ್ನು ಮಾಡಿಕೊಳ್ಳಲಾಗಿದೆ. ರೈಲ್ವೆಗೆ ಈ ಮೊದಲು ಮದ್ರಾಸಿನ ಕುಪ್ಪಂ ಕಾಡುಗಳಿಂದ ಸೌದೆಯನ್ನು ಪೂರೈಸಲಾಗುತ್ತಿತ್ತು.

20. ಅರಣ್ಯಗಳನ್ನು ಸರ್ಕಾರಕ್ಕೆ ಹೆಚ್ಚಿನ ಆದಾಯ ತರುವ ಬಾಬಾಗಿ ಮಾಡಬೇಕು. ಅರಣ್ಯಗಳನ್ನು ಸಂರಕ್ಷಿಸದಿದ್ದರೆ ಹೆಚ್ಚಿನ ಆದಾಯ ಸಾಧ್ಯವಿಲ್ಲ. ಆದರೆ ಜನರು ಅವನ್ನು ಕಂಡಂತೆ ಉಪಯೋಗಿಸುತ್ತಿರುವುದರಿಂದ ಅವರು ಅದಕ್ಕೆ ಸ್ವಲ್ಪವೂ ಒಪ್ಪಲಾರರು. ಯಾವುದು ಎಲ್ಲರ ಆಸ್ತಿಯಾಗಿರುತ್ತದೆಯೋ ಅದು ಯಾರಿಗೂ ಪ್ರಯೋಜನವಾಗಲಾರದು. ರೈತರಿಗೆ ಅರಣ್ಯಗಳ ಮೇಲೆ ನ್ಯಾಯ ವಾಗಿ ಯಾವ ಹಕ್ಕೂ ಇಲ್ಲ. ಬಹುಮಟ್ಟಿಗೆ ಅವುಗಳು ಗ್ರಾಮಗಳ ಸರಹದ್ದಿ ನೊಳಗೆ ಸೇರಿರುವುದಿಲ್ಲ. ಆದ್ದರಿಂದ ರೈತರು ತಮಗೆ ಬೇಕಾದ ಪದಾರ್ಥಗಳನ್ನು ತಮ್ಮ ಜಮೀನುಗಳಿಂದಲೂ, ಅವರುಗಳ ಉಪಯೋಗಕ್ಕಾಗಿ ವಹಿಸಬೇಕೆಂದಿರುವ ಗ್ರಾಮಗಳ ಸಮೀಪದಲ್ಲಿರುವ ಅರಣ್ಯಗಳಿಂದಲೂ ಪಡೆದುಕೊಳ್ಳಬಹುದು. ಅವರಿಗೆ ಸರ್ಕಾರದ ಅರಣ್ಯಗಳಿಂದ ಏನಾದರೂ ಆವಶ್ಯಕವಾದರೆ ಸರ್ಕಾರಕ್ಕೆ ಸ್ವಲ್ಪ ಹಣ ಕೊಟ್ಟು ಅದನ್ನು ಪಡೆಯಬಹುದು. ಹೀಗೆ ಏರ್ಪಡಿಸುವುದರಿಂದ ಅವರಿಗೇನೂ

ಕಷ್ಟವಾಗುವುದಿಲ್ಲ. ಈ ಕಾಡುಗಳಲ್ಲಿರುವ ಹುಲ್ಲುಗಾವಲುಗಳನ್ನು ಮೇವಿಗಾಗಿ ಗೊತ್ತಾದ ಕಾಲಗಳಲ್ಲಿ ಸರಿಯಾಗಿ ಉಸ್ತುವಾರಿಯನ್ನು ಏರ್ಪಡಿಸಿ ಬಿಡಲು ಏರ್ಪಾಡನ್ನು ಮಾಡಲಾಗುತ್ತದೆ.

21. ಈ ಸಂಸ್ಥಾನದ ಒಟ್ಟು ಆದಾಯ ಮುಂದಿನ ಎರಡು ಮೂರು ವರ್ಷಗಳಲ್ಲಿ 104 ಅಥವಾ 105 ಲಕ್ಷ ರೂಪಾಯಿಗಳಿಗೆ ಏರಬಹುದು. ಆದರೆ ಹಿಂದೆ ಏರಿದ್ದ ಪರಮಾವಧಿ ಆದಾಯವಾದ 109½ ಲಕ್ಷ ರೂಪಾಯಿಗಳನ್ನು ಮತ್ತೆ ಹೊಂದಲು ಬಹಳಕಾಲ ಬೇಕಾಗುವುದು.

22. ಮೇಲೆ ಹೇಳಿದ ಸರ್ಕಾರದ ಆದಾಯವಲ್ಲದೇ ಭೂಕಂದಾಯ ಮತ್ತು ಇತರ ತೆರಿಗೆಗಳ ಮೇಲೆ ರೂಪಾಯಿಗೆ ಒಂದಾಣೆಯಂತೆ ಸ್ಥಳೀಯ ನಿಧಿಯ ಬಾಬಿನಲ್ಲಿ ತೆರಿಗೆ ವಿಧಿಸಿ ವರ್ಷಕ್ಕೆ 7 ಲಕ್ಷ ರೂಪಾಯಿಗಳನ್ನು ವಸೂಲ್ಮಾಡುತ್ತಿದೆ. ಈ ಹಣವನ್ನು ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆಯಲ್ಲಿ ರಸ್ತೆಸಾರಿಗೆ ಸಂಪರ್ಕಕ್ಕೂ, ತಾಲ್ಲೂಕು ಹೋಬಳಿಶಾಲೆಗಳಿಗೂ, ಸ್ವಲ್ಪಮಟ್ಟಿಗೆ ಆಯಾ ಜಿಲ್ಲೆಗಳಲ್ಲಿರುವ ಸ್ಥಳೀಯ ಆಸ್ಪತ್ರೆಗಳ ನಿರ್ವಹಣೆಗೂ ಖರ್ಚು ಮಾಡಲಾಗುತ್ತಿದೆ. ಈ ನಿಧಿಯ ವಿನಿಯೋಗವನ್ನು ಸಮರ್ಪಕವಾಗಿ ಮಾಡಿದರೆ ಅದು ಈ ಬಾಬುಗಳಿಗೆ ಸಂಬಂಧಪಟ್ಟಂತೆ ಎಲ್ಲ ಸ್ಥಳೀಯ ಆವಶ್ಯಕತೆಗಳನ್ನು ಪೂರೈಸಬಲ್ಲದು.

23. ನಗರ ನೈರ್ಮಲ್ಯವನ್ನುಂಟುಮಾಡುವುದಕ್ಕಾಗಿಯೂ ನಗರ ಪಾಲನೆಗಾಗಿಯೂ ಸಂಸ್ಥಾನದ ಎಲ್ಲ ನಗರಗಳಲ್ಲೂ ನಗರಸಭೆಗಳನ್ನು ಸ್ಥಾಪಿಸಲಾಗಿದೆ. ಈ ನಗರಸಭೆಗಳು ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿಗಳನ್ನು ಮನೆತೆರಿಗೆ, ಸುಂಕ ಮತ್ತಿತರ ಬಾಬುಗಳಿಂದ ವಸೂಲ್ಮಾಡುತ್ತಿವೆ. ಆಡಳಿತದ ಈ ಎರಡು ವಿಭಾಗಗಳಿಗೂ ಸಂಬಂಧಪಟ್ಟ ನಿಯಮಗಳು ಈಗ ಸರ್ಕಾರದ ಪರಿಶೀಲನೆಯಲ್ಲಿವೆ. ಅವುಗಳನ್ನು ಪರಿಷ್ಕರಿಸುವಾಗ ಆಯಾ ಸ್ಥಳದ ಜನರಿಗೆ ಉಪಯೋಗವಾಗುವಂತೆ, ಅವರ ಇಷ್ಟಾನುಸಾರ ಈ ಹಣವನ್ನು ಬಳಸುವುದಕ್ಕೆ ಅವಕಾಶವಾಗುವಂತೆ ಮಾಡಲು ಲಕ್ಷ್ಯಕೊಡಲಾಗುವುದು. ಈ ನಿಧಿಯನ್ನು ಸರ್ಕಾರದ ಆದಾಯದ ಇನ್ನೊಂದು ಬಾಬನ್ನಾಗಿ ಪರಿಗಣಿಸದಿರುವಂತೆ ಈ ನಿಯಮಗಳನ್ನು ರಚಿಸಲಾಗುವುದು.

24. ಈಗ ವೆಚ್ಚಗಳ ಸಮೀಕ್ಷೆಗೆ ತೊಡಗುತ್ತೇನೆ. ಸಂಸ್ಥಾನದ ಬ್ರಿಟಿಷ್ ಆಳ್ವಿಕೆಯ ಕೊನೆಯ ಎರಡುವರ್ಷಗಳಲ್ಲಿ ಆಡಳಿತದ ಹಲವು ವಿಭಾಗಗಳ ಸುಧಾ

ರಣೆಗಾಗಿಯೂ ಮತ್ತು ಕ್ಷಾಮದಿಂದಾಗಿ ಕುಗ್ಗಿದ ಆದಾಯದ ಪರಿಮಿತಿಯೊಳಗೆ ಈ ವಿಭಾಗಗಳ ಖರ್ಚಿರುವಂತೆ ಏರ್ಪಡಿಸಲು ವೆಚ್ಚವನ್ನು ಕಡಿಮೆಮಾಡಲೂ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ಕ್ರಮಗಳು ಒಟ್ಟಿನಲ್ಲಿ ಯಶಸ್ವಿಯಾಗಿವೆ. ಆಡಳಿತದ ದಕ್ಷತೆಗೆ ಯಾವ ವಿಧದಲ್ಲೂ ಧಕ್ಕೆ ಬರದಂತೆ 14 ಲಕ್ಷ ರೂಪಾಯಿಗಳ ವೆಚ್ಚವನ್ನು ಕಡಿಮೆ ಮಾಡಲಾಗಿದೆ. ಕ್ಷಾಮಕ್ಕೆ ಮುಂಚೆ 109½ ಲಕ್ಷ ರೂಪಾಯಿ ಆದಾಯವನ್ನು ಪೂರ್ತಿಯಾಗಿ ಖರ್ಚು ಮಾಡಲಾಗುತ್ತಿತ್ತು. ಅಲ್ಲದೇ ಹಿಂದಿನ ವರ್ಷಗಳಲ್ಲಿ ಉಳಿತಾಯ ಮಾಡಿದ ಹಣದಿಂದ ಮಂಜೂರುಮಾಡಿದ ಸಹಾಯ ದ್ರವ್ಯದಿಂದ ನೀರಾವರಿ ಕಾರ್ಯಗಳಿಗೆ ಖರ್ಚು ಮಾಡಲಾಯಿತು.

25. 1878–79ರ ಸಾಲಿನಲ್ಲಿ ಇದ್ದ ಸರ್ಕಾರದ ವಿವಿಧ ವೆಚ್ಚದ ಬಾಬುಗಳನ್ನೂ, ಅವುಗಳಲ್ಲಿ ಈಗ ಇಳುವರಿಯನ್ನು ಮಾಡಿರುವುದನ್ನೂ ಕೆಳಗೆ ಕೊಡಲಾಗಿದೆ :—

| | 1878–79<br>1 | ಈಗ ಪರಿಷ್ಕರಿಸಿರುವುದು<br>2 |
|---|---|---|
| | ರೂಪಾಯಿಗಳು | ರೂಪಾಯಿಗಳು |
| ಬಡ್ಡಿ | | 4,07,000 |
| ಹಣ ವಾಪಸ್ ಬಂದಿರುವುದು | 33,000 | 14,000 |
| **ಭೂಕಂದಾಯ ಇಲಾಖೆಯ ಸಿಬ್ಬಂದಿಗಳು** | | |
| ವಿಭಾಗಾಧಿಕಾರಿಗಳು ಮತ್ತು | | |
| ಅವರ ಸಿಬ್ಬಂದಿ | 1,60,650 | — |
| ಜಿಲ್ಲಾಧಿಕಾರಿಗಳು, ಅವರ ಸಿಬ್ಬಂದಿ | 2,85,510 | 2,31,448 |
| ಉಪ ಜಿಲ್ಲಾಧಿಕಾರಿಗಳು, ಅವರ ಸಿಬ್ಬಂದಿ | 1,90,000 | 1,05,142 |
| ತಾಲ್ಲೂಕು ಸಿಬ್ಬಂದಿ | 5,95,000 | 5,63,670 |
| ಭೂಕಂದಾಯ ಸಮೀಕ್ಷೆ | 3,26,200 | 2,62,535 |
| ಇನಾಂ ಆಯೋಗ | 63,500 | 6,228 |

| | 1878–79<br>1 | ಈಗ ಪರಿಷ್ಕರಿಸಿರುವುದು<br>2 |
|---|---|---|
| | ರೂಪಾಯಿಗಳು | ರೂಪಾಯಿಗಳು |
| ಗ್ರಾಮಾಧಿಕಾರಿಗಳಿಗೆ ಸಂಬಳಸಾರಿಗೆ | 1,00,000 | 2,07,326 |
| ಇತರ ಬಾಬುಗಳು | 64,900 | 38,688 |
| ಅರಣ್ಯ | 2,47,000 | 2,00,000 |
| ಆಬ್ಕಾರಿ | 36,000 | 18,000 |
| ಸಾಯರ್ | 38,000 | 16,000 |
| ಸ್ಟಾಂಪುಗಳು | 17,000 | 14,000 |
| ಅಂಚೆ ಕಛೇರಿ | 1,68,000 | 1,59,640 |
| ಆಡಳಿತ ಮತ್ತು ಸರ್ಕಾರಿ ಇಲಾಖೆಗಳು | 3,07,000 | 1,84,057 |
| ಅರಮನೆ ಖರ್ಚು | 10,13,000 | 10,00,000 |
| ಸಣ್ಣಪುಟ್ಟ ಇಲಾಖೆಗಳು | 76,000 | 1,00,000 |
| ಕಾನೂನು ಮತ್ತು ನ್ಯಾಯ ಇಲಾಖೆ | 6,32,000 | 6,08,815 |
| ಪೋಲೀಸ್ | 6,24,000 | 4,57,200 |
| ವಿದ್ಯಾಭ್ಯಾಸ | 2,49,000 | 1,59,000 |
| ಮುಜರಾಯಿ | 2,92,000 | 2,87,000 |
| ವೈದ್ಯಕೀಯ | 1,82,000 | 1,63,000 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 75,000 | 87,532 |
| ಕೌಲುಗಳ ಪ್ರಕಾರ ಸಲ್ಲಬೇಕಾದ ಮೊತ್ತಗಳು | 25,61,000 | 25,10,000 |
| ಇತರ ವಿವಿಧ ಬಾಬುಗಳು | 83,000 | 38,356 |
| ಅಧಿಕಾರಿಗಳಿಗೆ ಸಂದ ರಜ ಭತ್ಯ ಮತ್ತು ಮೈಸೂರಿನಿಂದ ವರ್ಗವಾದ ಸೈನ್ಯಾಧಿಕಾರಿಗಳಿಗೆ ಪರಿಹಾರ ಧನ | — | 20,644 |

| | 1878–79<br>1 | ಈಗ ಪರಿಷ್ಕರಿಸಿರುವುದು<br>2 |
|---|---|---|
| | ರೂಪಾಯಿಗಳು | ರೂಪಾಯಿಗಳು |
| ನಿವೃತ್ತಿವೇತನ ಪ್ರೋತ್ಸಾಹ ದ್ರವ್ಯ ಅಥವಾ ಗ್ರಾಚುಯಿಟಿ | 1,83,000 | 2,74,000 |
| ಸೈನ್ಯ, ಸ್ಥಳೀಯ ಪಡೆ | 8,65,000 | 7,88,000 |
| ಲೋಕೋಪಯೋಗಿ ಇಲಾಖೆ | 14,84,000 | 10,75,000 |
| ಒಟ್ಟು | 1,09,50,760 | 99,96,281 |
| ಬೆಂಗಳೂರಿನಲ್ಲಿರುವ ಸಿವಿಲ್ ಮತ್ತು ಸೈನ್ಯ ಠಾಣೆಯ ಖರ್ಚು | — | 1,00,000 |
| ಒಟ್ಟು | 1,09,50,760 | 1,00,96,281 |

26. ವೆಚ್ಚಗಳಲ್ಲಿ ಕಡಿಮೆ ಮಾಡಿರುವುದರ ಸ್ಥೂಲ ಸಾರಾಂಶ ಈ ಕೆಳಗೆ ಕಂಡಂತೆ ಇದೆ :—ಲೋಕೋಪಯೋಗಿ ಇಲಾಖೆ ಮತ್ತು ಸಿಬ್ಬಂದಿ ವರ್ಗದ ವೆಚ್ಚವನ್ನು ಅಂದರೆ ರಸ್ತೆ ಮತ್ತು ನೀರಾವರಿ ವ್ಯವಸ್ಥೆಯ ದುರಸ್ತಿಯ ವೆಚ್ಚವನ್ನು ೧೫ ಲಕ್ಷ ರೂಪಾಯಿಗಳಿಂದ ೧೦,೭೫,೦೦೦ ರೂಪಾಯಿಗಳಿಗೆ ಇಳಿಸಿದೆ ಅಥವಾ ೪,೨೫,೦೦೦ ರೂಪಾಯಿಗಳಷ್ಟು ಕಡಿಮೆ ಮಾಡಲಾಗಿದೆ. ರೈಲ್ವೆ ಅಭಿವೃದ್ಧಿಗೋಸ್ಕರ ಈ ಬಾಬಿನಲ್ಲಿ ಮತ್ತಷ್ಟು ಉಳಿತಾಯವನ್ನು ಮಾಡಬೇಕಾಗುತ್ತದೆ. ಸ್ಥಳೀಯ ನಿಧಿಗಳು ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಹಣವನ್ನು ಒದಗಿಸುವುದರಿಂದ ಕಾಮಗಾರಿ ಲೆಕ್ಕದಲ್ಲಿ ಉಳಿತಾಯ ಉಂಟುಮಾಡಿದರೆ ಅದರಿಂದ ಯಾವ ತೊಂದರೆಯೂ ಉಂಟಾಗಲಾರದೆಂದು ನಿರೀಕ್ಷಿಸಲಾಗಿದೆ. ಸಂಸ್ಥಾನಾದ್ಯಂತ ರೈಲ್ವೆ ವ್ಯವಸ್ಥೆಯನ್ನು ಏರ್ಪಡಿಸಿದ ಮೇಲೆ ಎಲ್ಲಾ ರಸ್ತೆಗಳ ದುರಸ್ತಿಯುನ್ನೂ ನೋಡಿಕೊಳ್ಳುವ ಪೂರ್ಣ ಜವಾಬ್ದಾರಿಯನ್ನು ಸ್ಥಳೀಯ ನಿಧಿಗಳಿಗೇ ವಹಿಸತಕ್ಕದ್ದು.

ಇಂಗ್ಲಿಷ್ ಜಿಲ್ಲಾಧಿಕಾರಿಗಳ ಬದಲು ಕಡಿಮೆ ಸಂಬಳದ ಮೇಲೆ ದೇಶೀಯ ಜಿಲ್ಲಾಧಿಕಾರಿಗಳನ್ನು ನಿಯಮಿಸಿರುವುದರಿಂದ, ಉಪ ಜಿಲ್ಲಾಧಿಕಾರಿಗಳ ಸಂಖ್ಯೆಯನ್ನು ಕಡಿಮೆಮಾಡಿರುವುದರಿಂದ, ಈ ಅಧಿಕಾರಿಗಳಿಗಿರುವ ನ್ಯಾಯಾಂಗ ಸಿಬ್ಬಂದಿಯನ್ನು ವಜಾ ಮಾಡುವುದರಿಂದ ೧,೨೫,೦೦೦ ರೂಪಾಯಿಗಳನ್ನು ಉಳಿತಾಯ ಮಾಡಲಾಗಿದೆ. ಭೂಕಂದಾಯ ವಸೂಲಿಗೆ ಸಂಬಂಧಪಟ್ಟಂತೆಯೂ ನ್ಯಾಯನಿರ್ವಹಣೆಗೆ ಸಂಬಂಧಪಟ್ಟಂತೆಯೂ ಅಧಿಕಾರವಿದ್ದ ವಿಭಾಗಾಧಿಕಾರಿಗಳ ಬದಲಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರನ್ನು ನಿಯಮಿಸುವುದರಿಂದ ೮೦,೦೦೦ ರೂಪಾಯಿಗಳಷ್ಟು ಈ ಬಾಬಿನಲ್ಲಿ ಮತ್ತಷ್ಟು ವೆಚ್ಚವನ್ನು ಕಡಿಮೆ ಮಾಡಲಾಗಿದೆ. ಈಗಿರುವ ಯೂರೋಪಿಯನ್ ಅಧಿಕಾರಿಗಳಿಗೆ ಬದಲಾಗಿ ದೇಶೀಯ ನ್ಯಾಯಾಧೀಶರನ್ನು ನಿಯಮಿಸಿದಾಗ ಈ ವೆಚ್ಚ ಮತ್ತಷ್ಟು ಕಡಿಮೆಯಾಗುವುದು. ಈ ಏರ್ಪಾಡಿನಿಂದ ನ್ಯಾಯಾಂಗವನ್ನು ಪೂರ್ಣವಾಗಿ ಕಾರ್ಯಾಂಗದಿಂದ ಪ್ರತ್ಯೇಕಿಸಲಾಗಿದೆ. ಅಲ್ಲದೇ ವಿಭಾಗಾಧಿಕಾರಿಗಳಂತಹ ಮಧ್ಯವರ್ತಿ ಹತೋಟಿಯ ಕಛೇರಿಗಳನ್ನು ತೆಗೆದುಹಾಕಿರುವುದರಿಂದ ಜಿಲ್ಲಾ ಆಡಳಿತ ಸುಸೂತ್ರವಾಗಿ, ಪತ್ರವ್ಯವಹಾರ ಕಡಿಮೆಯಾಗಿರುತ್ತದೆ.

ಪ್ರತ್ಯೇಕವಾದ ಪೋಲೀಸ್ ಉಪಕಮಿಷನರುಗಳನ್ನು ತೆಗೆದುಹಾಕಿರುವುದರಿಂದ ಮತ್ತು ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರ್ ಮತ್ತು ಜಮೇದಾರರ ಸಂಖ್ಯೆ ಮತ್ತು ಸಂಬಳವನ್ನು ಕಡಿಮೆಮಾಡಿರುವುದರಿಂದ ಮತ್ತು ಉನ್ನತ ದರ್ಜೆಯ ದಫೇದಾರರ ಮತ್ತು ಜವಾನರ ಸಂಖ್ಯೆಯನ್ನು ಕಡಿಮೆಮಾಡಿರುವುದರಿಂದ ಇನ್ನೂ ೧,೨೫,೦೦೦ ರೂಪಾಯಿಗಳನ್ನು ಪೋಲೀಸ್ ಖಾತೆಯ ಲೆಕ್ಕದಲ್ಲಿ ಉಳಿತಾಯ ಮಾಡಲಾಗಿದೆ.

ಲೆಕ್ಕ ವ್ಯವಸ್ಥೆಯ ಮತ್ತು ಹತೋಟಿಯ ಮುಖ್ಯ ಕಛೇರಿಗಳ ಲೆಕ್ಕದಲ್ಲಿ ಆಡಳಿತ ಬಾಬಿನಲ್ಲಿ ಉಳಿತಾಯವನ್ನು ಮಾಡಿ ಒಂದು ಲಕ್ಷ ರೂಪಾಯಿ ಉಳಿತಾಯ ಸಾಧಿಸಿದೆ.

ಅರಣ್ಯಸಿಬ್ಬಂದಿಯ ಖರ್ಚನ್ನು ೫೦,೦೦೦ ರೂಪಾಯಿಗಳಷ್ಟು ಕಡಿಮೆ ಮಾಡಲಾಗಿದೆ. ಇನಾಂ ಆಯೋಗವನ್ನು ವಜಾಮಾಡಿರುವುದರಿಂದ ೫೫,೦೦೦ ರೂಪಾಯಿಗಳಷ್ಟು ಉಳಿತಾಯವಾಗಿದೆ. ಸೈನ್ಯದ ಒಂದು ಬಾರ್ ತುಕ್ಕಡಿಯನ್ನು ಕಡಿಮೆ ಮಾಡಲಾಗಿದೆ. ಕೇಂದ್ರ ಕಛೇರಿಯ ಸಿಬ್ಬಂದಿಯಲ್ಲೂ ಖೋತಾ ಮಾಡಿ ಈ ಖಾತೆಯಲ್ಲಿ ಹತ್ತಿರ ಹತ್ತಿರ ೧ ಲಕ್ಷ ರೂಪಾಯಿ ಉಳಿತಾಯಮಾಡಲಾಗಿದೆ.

ಸ್ವಲ್ಪಮಟ್ಟಿಗೆ ಶಿಕ್ಷಣ ಇಲಾಖೆಯಲ್ಲಿ ಸಿಬ್ಬಂದಿಯನ್ನು ಕಡಿಮೆಮಾಡಿದುದರಿಂದಲೂ, ಅದಕ್ಕಿಂತ ಹೆಚ್ಚಾಗಿ ತಾಲ್ಲೂಕು ಶಾಲೆಗಳನ್ನು ಸ್ಥಳೀಯಸಂಸ್ಥೆಗಳಾದ ಜಿಲ್ಲಾ ನಿಧಿಗಳಿಗೆ ವರ್ಗಾಯಿಸಿರುವುದರಿಂದಲೂ ೯೦,೦೦೦ ರೂಪಾಯಿ ಉಳಿತಾಯವಾಗಿದೆ. ಮೋಜಣಿ ಮತ್ತು ನಕ್ಷಾ ನಿರೂಪಣೆಯ ಸಮೀಕ್ಷೆಗಳಿಗೆ ಕ್ರಮವಾಗಿ ೨,೬೨,೫೦೦ ರೂಪಾಯಿ ಮತ್ತು ೮೭,೦೦೦ ರೂಪಾಯಿ ವೆಚ್ಚವುಂಟಾಗುತ್ತಿದೆ. ಇವು ತಾತ್ಕಾಲಿಕವಾಗಿರುವ ಇಲಾಖೆಗಳಾಗಿರುವುದರಿಂದ ಆ ಕೆಲಸ ಮುಗಿದ ಮೇಲೆ ಅವುಗಳನ್ನು ರದ್ದುಪಡಿಸಲಾಗುವುದು. ೧೮೭೮–೭೯ರ ವೆಚ್ಚದೊಡನೆ ಹೋಲಿಸಿ ನೋಡಿದರೆ ಮೋಜಣಿ ಇಲಾಖೆಯಲ್ಲಿ ೬೦,೦೦೦ ರೂಪಾಯಿಗಳು ಉಳಿತಾಯವುಂಟಾಗಿದೆ.

ವೈದ್ಯಕೀಯ ಮತ್ತು ಕಾರಾಗೃಹಇಲಾಖೆಗಳಲ್ಲಿ ಸುಧಾರಣೆಯನ್ನು ಮಾಡಬೇಕಾಗಿದೆ. ಈಗ ಪ್ರತಿ ಜಿಲ್ಲಾ ಕೇಂದ್ರದಲ್ಲಿರುವ ಹೆಚ್ಚು ವೆಚ್ಚದ ಸೆರೆಮನೆಯ ಏರ್ಪಾಡು ಆವಶ್ಯಕವಿಲ್ಲ. ಕ್ಷಾಮಕಾಲದಲ್ಲಿ ಖೈದಿಗಳಿಗಾಗಿ ಆಗುತ್ತಿದ್ದ ವೆಚ್ಚ ಏರಿದ್ದಿತು. ಅದು ಈಗ ಕಡಿಮೆ ಆಗಿರುವುದರಿಂದ ಈ ಬಾಬಿನಲ್ಲಿ ೬೦,೦೦೦ ರೂಪಾಯಿಗಳಷ್ಟು ಉಳಿತಾಯ ಉಂಟಾಗಿದೆ.

ಇನ್ನು ಅನೇಕ ಇತರ ಬಾಬುಗಳಲ್ಲಿ ಉಳಿತಾಯ ಮಾಡಲಾಗಿದೆ. ಉದಾಹರಣೆಗೆ ಬೆಂಗಳೂರು ರೈಫಲ್ ಸ್ವಯಂಸೇವಕ ದಳಕ್ಕೆ ಕೊಡುತ್ತಿದ್ದ ಪ್ರಯಾಣ ಭತ್ಯ, ವಾರ್ಷಿಕ ಭತ್ಯ ಮತ್ತು ಚಿಲ್ಲರೆ ಖರ್ಚುಗಳನ್ನು ಕಡಿಮೆಮಾಡಿದೆ. ಹೀಗೆ ಉಳಿತಾಯವಾದ ಒಂದು ಲಕ್ಷ ರೂಪಾಯಿಗಳು ಒಟ್ಟು ಉಳಿತಾಯ ೧೪ ಲಕ್ಷ ರೂಪಾಯಿಗಳಲ್ಲಿ ಸೇರಿದೆ.

ರೈಲ್ವೆ ಖಾತೆಯ ಖರ್ಚನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಮಹಾರಾಜರಿಗೆ ಸಲ್ಲುವ ರಾಜಧನ ೧೨ ಲಕ್ಷ ರೂಪಾಯಿ, ಪೊಗದಿ 24½ ಲಕ್ಷ ರೂಪಾಯಿ ಇವುಗಳನ್ನು ಸೇರಿಸಿಕೊಂಡರೆ, ಆಡಳಿತದ ಒಟ್ಟು ವೆಚ್ಚ 96½ ಲಕ್ಷ ರೂಪಾಯಿಗಳಿಗೆ ಈ ಉಳಿತಾಯಗಳಿಂದ ಇಳಿಯುತ್ತಿತ್ತು. ಕ್ಷಾಮದಿಂದಾದ ಸಾಲದ ಮೇಲಿನ ವಾರ್ಷಿಕ ಬಡ್ಡಿ ೪ ಲಕ್ಷ ರೂಪಾಯಿ ಹೊಸ ವ್ಯಯದ ಅಂಶವಾಗಿ ಸೇರಿದೆ. ಸಿಬ್ಬಂದಿ ವರ್ಗಗಳನ್ನು ಕಡಿಮೆ ಮಾಡಿದ್ದರಿಂದ ಸರ್ಕಾರಿ ಅಧಿಕಾರಿಗಳ ವಿಶ್ರಾಂತಿ ವೇತನದ ವೆಚ್ಚ ಒಂದು ಲಕ್ಷ ರೂಪಾಯಿ ಹೆಚ್ಚಾಗಿದೆ. ಮೋಜಣಿ ಸಮಾಕ್ಷೆಯಿಂದಾಗಿ

ಗ್ರಾಮಾಧಿಕಾರಿಗಳಿಗೆ ಕೊಡುವ ಸಂಬಳಸಾರಿಗೆ ಒಂದು ಲಕ್ಷ ರೂಪಾಯಿಗಳಷ್ಟು ಹೆಚ್ಚಿದೆ. ಇದರಿಂದಾಗಿ ಉಳಿತಾಯವು ೮ ಲಕ್ಷ ರೂಪಾಯಿಗಳಿಗೆ ಇಳಿಯುತ್ತದೆ. ಬ್ರಿಟಿಷ್‌ರಾಜಪ್ರತಿನಿಧಿಯ ಆಡಳಿತಕ್ಕೆ ವಹಿಸಿರುವ ಪ್ರದೇಶದ ಆಡಳಿತ ವೆಚ್ಚ ವನ್ನೂ ಸೇರಿಸಿಕೊಂಡು ರೈಲ್ವೆಯ ವೆಚ್ಚವನ್ನು ಬಿಟ್ಟರೆ ಈಗಿನ ವಾರ್ಷಿಕ ವ್ಯಯ ೧೦೧ ಲಕ್ಷ ರೂಪಾಯಿಗಳಾಗುವುದೆಂದು ಅಂದಾಜು ಮಾಡಬೇಕಾಗುತ್ತದೆ. ಕಳೆದ ವರ್ಷದಂತೆ ಸರ್ಕಾರದ ಆದಾಯ ಇರುವುದಾದರೆ ರೈಲ್ವೆಅಭಿವೃದ್ಧಿಗೆ ವಿನಿಯೋಗಿ ಸುವುದಕ್ಕೆ ಏನೂ ಉಳಿಯುವುದಿಲ್ಲ. ಆದರೆ ಈ ವರ್ಷದ ಆದಾಯ ೧೦೩ ಲಕ್ಷ ರೂಪಾಯಿಗಳಾಗುವುದೆಂದು ಅಂದಾಜು ಮಾಡಲಾಗಿದೆ. ವೆಚ್ಚದಲ್ಲಿ ಮತ್ತಷ್ಟು ಕಡಿಮೆಮಾಡಿ ಮಹಾರಾಜರ ಸರ್ಕಾರ ರೈಲ್ವೆ ಅಭಿವೃದ್ಧಿಗೆ ಪ್ರತಿವರ್ಷವೂ ಐದು ಲಕ್ಷ ರೂಪಾಯಿಗಳನ್ನು ಉಳಿಸಬೇಕೆಂದು ತೀರ್ಮಾನಿಸಿದೆ.

ವೆಚ್ಚಗಳನ್ನು ಕಡಿಮೆಮಾಡುವಾಗ ಸರ್ಕಾರಿ ನೌಕರರ ವಿಷಯದಲ್ಲಿ ಸಹಾ ನುಭೂತಿಯಿಂದ ನಡೆದುಕೊಂಡಿರುವುದಕ್ಕೆ ನಿವೃತ್ತಿ ವೇತನಗಳು ಅಧಿಕಗೊಂಡಿರು ವುದೇ ಸಾಕ್ಷಿಯಾಗಿದೆ. ತಾತ್ಕಾಲಿಕ ನಿವೃತ್ತಿವೇತನವನ್ನು ಸಂಬಳದ ಮೂರನೇ ಒಂದು ಭಾಗ ಅಥವಾ ಅರ್ಧಭಾಗದಷ್ಟು ಕೂಡ ಗೊತ್ತುಮಾಡುವುದರ ಮೂಲಕ ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದೂ, ಹೀಗೆ ನಿವೃತ್ತಿಗೊಳಿಸಿದವರನ್ನು ಪ್ರಯೋಜನಕಾರಿಯಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದೂ ಮಿತವ್ಯಯದ ದೃಷ್ಟಿಯಿಂದ ವಿಹಿತವಾಗಿದೆ. ಈಗ ನಿವೃತ್ತಿಮಾಡಿರುವವರ ಸ್ಥಳಗಳಲ್ಲಿ ಹೊಸ ದಾಗಿ ನೇಮಕ ಮಾಡಕೂಡದೆಂದು ಖಡಾಖಂಡಿತವಾಗಿ ಹೇಳಲಾಗಿದೆ.

27. ಈ ಸಂದರ್ಭದಲ್ಲಿ ಆಡಳಿತದ ವಿವಿಧ ಶಾಖೆಗಳ ಕಾರ್ಯ ಚಟುವಟಿಕೆ ಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ನೀಡಿ ನಿಮ್ಮ ಕಾಲವ್ಯಯಕ್ಕೆ ಕಾರ ಣನಾಗುವುದಿಲ್ಲ. ಪ್ರಜೆಗಳ ಯೋಗಕ್ಷೇಮಕ್ಕೆ ಆಡಿಪಾಯದಂತಿರುವ ನ್ಯಾಯಾಂಗ ಇಲಾಖೆಯು ಬಹು ದಕ್ಷತೆಯಿಂದ ಕಾರ್ಯಮಾಡುತ್ತಿದೆ. ಶುದ್ಧತೆಯ ದೃಷ್ಟಿ ಯಿಂದ ನೋಡಿದರೆ ಮೈಸೂರಿನ ನ್ಯಾಯಾಡಳಿತ ಉತ್ತಮ ಆಡಳಿತ ಹೊಂದಿರುವ ಭಾರತದ ಪ್ರಾಂತ್ಯಗಳ ನ್ಯಾಯಾಡಳಿತಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲದು. ಕಾನೂ ನುಗಳನ್ನು ಸುಲಭಗೊಳಿಸುವುದಕ್ಕೂ, ನ್ಯಾಯಾಲಯಗಳ ಕಾರ್ಯವನ್ನು ಜನರಿಗೆ ತಿಳಿಯುವಂತೆ ಮಾಡುವುದಕ್ಕೂ ಪ್ರಯತ್ನಿಸಬಹುದು. ಜನರು ನ್ಯಾಯಸ್ಥಾನ

ಗಳಿಗೆ ಸಣ್ಣ ಸಣ್ಣ ವಿಷಯಗಳಿಗೂ ಹೋಗುವ ಬದಲು ಸಮಾಜದ ಮುಖ್ಯಸ್ಥರ ಮುಂದೆ ಅವುಗಳನ್ನು ತೀರ್ಮಾನಿಸಿಕೊಳ್ಳಲು ಅನುಕೂಲವಾಗುವಂತೆ ಗ್ರಾಮ ಮುಖ್ಯಸ್ಥರನ್ನೊಳಗೊಂಡ ಪಂಚಾಯಿತಿಗಳನ್ನು ಏರ್ಪಡಿಸುವ ಆಲೋಚನೆ ಮಾಡಲಾಗಿದೆ.

28. ಲೋಕೋಪಯೋಗಿ ಇಲಾಖೆ ಚುರುಕಾಗಿಯೂ ಮಿತವ್ಯಯ ದಿಂದಲೂ ಕಾರ್ಯಮಾಡುವಂತೆ, ಜಿಲ್ಲಾಧಿಕಾರಿಗಳೊಡನೆ ಸಹಕರಿಸುವಂತೆ ಅದರ ಕಾರ್ಯವಿಧಾನವನ್ನು ತುರ್ತಾಗಿ ಪರಿಷ್ಕರಿಸಬೇಕಾಗಿದೆ. ಈ ವಿಷಯವನ್ನು ಕೂಡಲೇ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

29. ವಿದ್ಯಾ ಇಲಾಖೆಯ ಕೆಲಸ ಕಾರ್ಯಗಳಲ್ಲಿಯೂ ಜನರು ಬಹುವಾಗಿ ಆಸಕ್ತಿ ಹೊಂದಿರುವರು. ಈಗಿರುವ ಶಾಲೆಗಳಲ್ಲದೇ ಹೆಚ್ಚಿನ ಶಾಲೆಗಳನ್ನು ತೆರೆಯುವ, ವಿದ್ಯಾಭ್ಯಾಸದ ಬಗೆಗೆ ಆಸಕ್ತಿಯನ್ನು ಹುಟ್ಟಿಸುವ ಕಾರ್ಯ ಬಹು ಮಟ್ಟಿಗೆ ಆಗಿದೆ. ಆದರೆ ತಾಲ್ಲೂಕು ಮತ್ತು ಹೋಬಳಿ ಶಾಲೆಗಳಲ್ಲಿ ಹೆಚ್ಚಿನ ಅರ್ಹತೆಯಿರುವ ಶಿಕ್ಷಕವರ್ಗವನ್ನು ಹೊಂದಲೂ, ತಾಂತ್ರಿಕಶಿಕ್ಷಣವನ್ನು ಪ್ರೋತ್ಸಾಹಿಸಲೂ ಮುಖ್ಯವಾಗಿ ಪ್ರಯತ್ನಮಾಡಲಾಗುತ್ತಿದೆ. ಈ ಎಲ್ಲ ಬಾಬುಗಳ ಬಗೆಗೆ ಮುಂದಿನ ಪ್ರತಿನಿಧಿಸಭೆಯ ಅಧಿವೇಶನದಲ್ಲಿ ಇನ್ನೂ ಹೆಚ್ಚಿನ ವಿವರಗಳನ್ನು ಕೊಡುವುದು ಹೆಚ್ಚು ಸೂಕ್ತವಾಗಿದೆ.

30. ಆಡಳಿತದ ನಿತ್ಯಗಟ್ಟಲೆಯ ವ್ಯವಹಾರಗಳನ್ನು ಮಾತ್ರ ನಾವು ಗಮನಿಸತಕ್ಕದ್ದಲ್ಲ. ರಾಜ್ಯದ ಅಭ್ಯುದಯಕ್ಕೆ ಅಗತ್ಯವಾದ ಬಗೆಬಗೆಯ ಉದ್ಯಮಗಳ ಅಭಿವೃದ್ಧಿಯನ್ನು ಕುರಿತು ನಾವು ಆಲೋಚಿಸತಕ್ಕದ್ದು. ಮಹಾರಾಜರ ಸರ್ಕಾರವು ಈ ವಿಷಯಗಳ ಬಗೆಗೆ ಬರಬಹುದಾದ ಸೂಚನೆಗಳನ್ನು ಯಾವಾಗಲೂ ಲಕ್ಷ್ಯಕೊಟ್ಟು ಪರಿಶೀಲಿಸುವುದು. ಇದಕ್ಕಾಗಿ ಒಬ್ಬ ವಿಶೇಷ ಅಧಿಕಾರಿಯನ್ನು ನಿಯಮಿಸುವುದರಿಂದ ಹೆಚ್ಚಿಗೆ ಉಪಯೋಗವಾಗುವುದಿಲ್ಲ. ಏತಕ್ಕೆಂದರೆ ಒಬ್ಬ ವ್ಯಕ್ತಿಯ ಅನುಭವ ಮತ್ತು ಜ್ಞಾನದಿಂದ ಸಾಧಿಸಬಹುದಾದುದು ಅಲ್ಪವಾದುದು. ಮಹಾರಾಜರು ಈ ವಿಷಯದಲ್ಲಿ ಆಸಕ್ತಿವಹಿಸಬಹುದಾದ ಖಾಸಗೀ ವ್ಯಕ್ತಿಗಳ ದೊಡ್ಡ ಸಂಘವನ್ನು ಸ್ಥಾಪಿಸಬೇಕು ಎಂದು ಅಭಿಪ್ರಾಯ ಉಳ್ಳವರಾಗಿದ್ದಾರೆ. ಅಂತಹ ಸಂಘವು ಸ್ಥಾಪಿತವಾದ ಮೇಲೆ ಅದು ರಾಜ್ಯದಲ್ಲಿ ಉದ್ಯಮಗಳನ್ನು ಪ್ರಾರಂಭಿಸಲು

ಕ್ರಮುಗಳನ್ನು ಕೈಗೊಂಡಾಗ ಅದಕ್ಕೆ ಸಹಾಯವನ್ನು ಕೊಡುವುದು ತನ್ನ ಕರ್ತವ್ಯ ವೆಂದು ಮಹಾರಾಜರ ಸರ್ಕಾರವು ಭಾವಿಸುತ್ತದೆ.

31. ರೈಲ್ವೆಮಾರ್ಗಗಳನ್ನು ನಿರ್ಮಿಸಿ ರಾಜ್ಯದ ಎಲ್ಲೆಡೆ ಸಂಪರ್ಕ ಉಂಟಾ ಗುವಂತೆ ಏರ್ಪಡಿಸುವುದು ರಾಜ್ಯದ ಸಾಧನಸಂಪತ್ತನ್ನು ಅಭಿವೃದ್ಧಿಗೊಳಿಸು ವುದಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳಬೇಕಾದ ಕ್ರಮವೆಂದು ಮಹಾರಾಜರ ಸರ್ಕಾ ರವು ಭಾವಿಸುತ್ತದೆ. ಪ್ರಾಂತ್ಯದಲ್ಲಿ ಮೊದಲ ರೈಲ್ವೆಮಾರ್ಗವಾದ ಬೆಂಗಳೂರು–ಮೈಸೂರು ಮಾರ್ಗವನ್ನು ಇಷ್ಟರಲ್ಲಿಯೇ ಪೂರೈಸಲಾಗುವುದು. ಹಿಂದಿನ ಸರ್ಕಾರ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟವಾಗಿದ್ದಾಗ ಪ್ರಸಕ್ತ ಆದಾಯವನ್ನೇ ಉಪಯೋ ಗಿಸಿಕೊಂಡು ಈ ಕಾರ್ಯವನ್ನು ಪ್ರಾರಂಭಿಸಿತು. ಆ ಕ್ರಮ ತುಂಬ ಯಶಸ್ವಿ ಯಾಗಿದೆ. ಆಡಳಿತದ ಎಲ್ಲ ಇಲಾಖೆಗಳಲ್ಲಿಯೂ ಮಿತವ್ಯಯ ಮಾಡುವುದು ಅದ ರಿಂದ ಅಗತ್ಯವಾಯಿತು. ಪ್ರತಿವರ್ಷದ ಆದಾಯದಲ್ಲಿ ಖರ್ಚು ಕಳೆದು ಉಳಿಯುತ್ತಿದ್ದ ಸಣ್ಣ ಮೊತ್ತ ವ್ಯರ್ಥವಾಗದೇ ಉಪಯುಕ್ತವೂ, ಉತ್ಪಾದಕವೂ ಆದ ಕಾರ್ಯದಲ್ಲಿ ಆದರಿಂದ ವಿನಿಯೋಗವಾಗಿದೆ. ಮೈಸೂರಿನ 86 ಮೈಲಿಗಳ ರೈಲುಮಾರ್ಗಕ್ಕೆ ಖರ್ಚಿನ ಅಂದಾಜು 35 ಲಕ್ಷ ರೂಪಾಯಿಗಳು. ಇದರಲ್ಲಿ 1879-80, 1880-81 ರಲ್ಲಿ ಈ ಮಾರ್ಗಕ್ಕಾಗಿ 25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಯಿತು. ಉಳಿದ ಮಾರ್ಗವನ್ನು ಈ ವರ್ಷ ಮುಗಿಸಲಾಗುತ್ತದೆ. ಈ 35 ಲಕ್ಷಗಳಲ್ಲಿ 15 ಲಕ್ಷವನ್ನು ಪ್ರಸಕ್ತ ಆದಾಯದಿಂದ ಹೊಂದಿಸಲಾಗಿದೆ. ಉಳಿದುದನ್ನು ಮುಂದಿನ 4 ವರ್ಷಗಳಲ್ಲಿ ಉಳಿತಾಯವಾಗುವ ಹಣದಿಂದ ಹೊಂದಿಸಬೇಕಾಗಿದೆ. ಈ ಕಾರ್ಯ ತ್ವರಿತವಾಗಿ ನಡೆಯುತ್ತಿರುವುದಕ್ಕೆ, ಕಾವೇರಿಯ ಎರಡು ಶಾಖೆಗಳ ಮೇಲೆ ದೊಡ್ಡ ಸೇತುವೆಗಳ ನಿರ್ಮಾಣವಾಗಿರುವುದಕ್ಕೆ ಈ ಕಾರ್ಯದ ಮೇಲ್ವಿಚಾರಣೆ ಮಾಡುತ್ತಿ ರುವ ಮುಖ್ಯ ಇಂಜಿನಿಯರರಾದ ಮೇಜರ್ ಲೀ ಮೇಸುರಿಯೇ ಅವರ ಅವಿರತ ಕಾರ್ಯಶಕ್ತಿಯೇ ಕಾರಣ. ಈ ಕಾರ್ಯದಲ್ಲಿ ನಿಯಮಿತರಾಗಿರುವ ಎಲ್ಲ ಅಧಿ ಕಾರಿಗಳೂ ಅದು ಚೆನ್ನಾಗಿ ನಡೆದಿರುವ ಯಶಸ್ಸಿನಲ್ಲಿ ಭಾಗಿಗಳಾಗಿದ್ದಾರೆ.

32. ಪ್ರಾಂತ್ಯಕ್ಕೆ ಇದಕ್ಕಿಂತ ತುರ್ತಾಗಿ ಬೇಕಾದ ಇತರ ರೈಲ್ವೆಮಾರ್ಗ ಗಳು ಇವೆ. ಬೆಂಗಳೂರಿನಿಂದ ತುಮಕೂರಿಗೂ ಅಲ್ಲಿಂದ ತಿಪಟೂರು ಮತ್ತು ತರೀ ಕೆರೆಗಳಿಗೂ ಹೋಗುವ, 150 ಮೈಲಿಗಳಷ್ಟು ದೂರ ಸಾಗುವ ಕೇಂದ್ರ ರೈಲ್ವೆ

ಹಮಾರ್ಗವು ಸಂಸ್ಥಾನದ ಬಹು ಭಾಗದ ಪ್ರದೇಶದ ಆವಶ್ಯಕತೆಯನ್ನು ಪೂರೈಸುವುದಕ್ಕೆ ಬೆಂಗಳೂರು–ಮೈಸೂರು ರೈಲ್ವೆಮಾರ್ಗಕ್ಕಿಂತ ಹೆಚ್ಚು ಅಗತ್ಯವಾಗಿದೆ. ಕಾಫಿ ಮತ್ತು ಅಡಕೆಗಳನ್ನು ಬೆಳೆಯುವ ಹಾಸನ, ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಈ ಮಾರ್ಗವು ಸಂಪರ್ಕವನ್ನು ಕಲ್ಪಿಸುವುದಲ್ಲದೇ ಪ್ರಾಂತ್ಯದಲ್ಲಿರುವ ಎಲ್ಲ ದೂರ ಪ್ರದೇಶಗಳೂ ಬೆಂಗಳೂರಿನೊಂದಿಗೆ ಹೆಚ್ಚು ಸುಲಭವಾಗಿ ಸಂಪರ್ಕವನ್ನು ಹೊಂದುವಂತೆ ಮಾಡುವುದು. ಮುಂದೆ ಕ್ಷಾಮ ಉಂಟಾದಲ್ಲಿ ಅದರ ಉರುಬಿನಿಂದ ತಪ್ಪಿಸಿಕೊಳ್ಳಲು ಈ ಮಾರ್ಗ ಈ ಪ್ರಾಂತ್ಯಕ್ಕೆ ಅತ್ಯಂತ ಆವಶ್ಯಕವೆಂದು ಭಾವಿಸಬಹುದು. ಭಾರಹೊರುವ ರಾಸುಗಳು ಕಡಿಮೆಯಾಗಿರುವ ಈ ದೂರದ ಜಿಲ್ಲೆಗಳ ಒಳಗಿನಿಂದ ಮಿಕ್ಕ ಪ್ರದೇಶಗಳಿಗೂ, ಹೊರಗಿನ ಪ್ರದೇಶಗಳಿಂದ ಈ ಜಿಲ್ಲೆಗಳ ಒಳಗೂ ಹೊರೆಬಂಡಿಗಳಲ್ಲಿ ಪ್ರಯಾಣ ಮಾಡುವುದು ತುಂಬ ಖರ್ಚಿನ ಕೆಲಸವಾಗಿದ್ದಿತು. ಅಲ್ಲದೇ ಕ್ಷಾಮಡಾಮರಗಳ ಕಾಲದಲ್ಲಿ ಆಹಾರವನ್ನು ಸಾಗಿಸುವುದಕ್ಕೆ ಈ ಬಂಡಿಗಳು ಉಪಯೋಗಕರವಾಗುವುದಿಲ್ಲ. ಈ ರೈಲುಮಾರ್ಗ ಲಾಭದಾಯಕವಾಗಿರುವುದಲ್ಲದೇ ಕಚ್ಚಾಮಾಲುಗಳನ್ನು ರಫ್ತುಮಾಡುವ ಜಿಲ್ಲೆಗಳ ಸಂಪದಭಿವೃದ್ಧಿಗೂ, ಆಡಳಿತದಲ್ಲಿ ಮಿತವ್ಯಯವನ್ನೂ, ದಕ್ಷತೆಯನ್ನೂ ಉಂಟುಮಾಡುವುದಕ್ಕೂ ಸಹಾಯಕವಾಗುತ್ತದೆ. ಉದ್ಯಮಗಳ ಮತ್ತು ವ್ಯವಸಾಯದ ಅಭಿವೃದ್ಧಿಯಲ್ಲಿಯೂ, ರಾಜ್ಯದ ಸರ್ವತೋಮುಖನಾದ ಬೆಳವಣಿಗೆಯಲ್ಲಿಯೂ ಅದರ ಪಾತ್ರ ಅತ್ಯಮೂಲ್ಯವಾಗಿರುತ್ತದೆ. ಬಳ್ಳಾರಿ, ಗೋವ ಮತ್ತು ದಕ್ಷಿಣ ಮರಾಟಾ ದೇಶಗಳ ಮೂಲಕ ಹಾದು, ಹೊಸ ಹುಬ್ಬಳ್ಳಿಯಲ್ಲಿ ಕೇಂದ್ರೀಕೃತವಾಗುವ ರೈಲು ಮಾರ್ಗಗಳು ಪೂರ್ಣವಾದ ಮೇಲೆ ಬೆಂಗಳೂರು–ತರೀಕೆರೆ ಮಾರ್ಗದೊಂದಿಗೆ ಸಂಪರ್ಕ ಹೊಂದುವಂತೆ ಏರ್ಪಾಡು ಮಾಡಿದರೆ ತುಂಬಾ ಅನುಕೂಲವಾಗುವುದು. ತರೀಕೆರೆಯಿಂದ ಶಿವಮೊಗ್ಗಾ ಮೂಲಕ ಈ ಮಾರ್ಗದ ಮೇಲೆ ಹೋದರೆ ರಾಜ್ಯದ ಗಡಿಗೆ 50 ಮೈಲಿಗಳಿಗಿಂತ ಸ್ವಲ್ಪ ಹೆಚ್ಚು ದೂರ ಆಗುತ್ತದೆ. ಬೆಂಗಳೂರಿನಿಂದ ಇಲ್ಲಿಯವರೆಗೆ ಒಟ್ಟು 200 ಮೈಲಿ ದೂರ ಇದೆ. 80 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಖರ್ಚಿಗೆ ಈ ಮಾರ್ಗವನ್ನು ಪೂರ್ಣಗೊಳಿಸಬಹುದಲ್ಲದೇ ಆವಶ್ಯಕವಾದ ಉಗಿಬಂಡಿ, ಅದಕ್ಕೆ ಲಗತ್ತಿಸುವ ಪ್ರಯಾಣಿಕರ ಗಾಡಿ ಮುಂತಾದವುಗಳನ್ನು ಕೊಂಡುಕೊಳ್ಳಬಹುದು. ಒಂದು ಮೈಲಿ ರೈಲುಮಾರ್ಗಕ್ಕೆ ಅತ್ಯಂತ ಹೆಚ್ಚೆಂದರೆ 40,000 ರೂಪಾಯಿ ಖರ್ಚಾಗುತ್ತದೆ.

33. ಇತರ ಉಪಯುಕ್ತವಾದ ರೈಲ್ವೆ ಮಾರ್ಗಗಳೆಂದರೆ ಮೈಸೂರು ವೈನಾಡು ಮಾರ್ಗ ಮತ್ತು ಮೈಸೂರು ಕೊಡಗು ಗಡಿಯಿಂದ ಮುಂದೆ ಹೋಗುವ ಮಾರ್ಗ. ಸಂಸ್ಥಾನದೊಳಗೆ ಈ ಮಾರ್ಗಗಳ ಭಾಗ ನಿರ್ಮಿಸಬೇಕಾದದ್ದು ಒಂದೊಂದೂ 50 ಮೈಲಿಗಳಾಗುತ್ತವೆ. ಪ್ರಾಂತ್ಯದ ಇಷ್ಟು ಸಂಪತ್ಸಮೃದ್ಧವಲ್ಲದ ಪ್ರದೇಶಗಳಲ್ಲಿ ಈ ಎರಡು ಮಾರ್ಗಗಳೂ ಹಾಯುತ್ತವೆ. ಕಾಫಿ ಬೆಳೆಯುವ ಮುಖ್ಯ ಜಿಲ್ಲೆಗಳಾದ ವೈನಾಡು ಮತ್ತು ಕೊಡಗುಗಳಿಗೂ ಮೈಸೂರು ಸಂಸ್ಥಾನಕ್ಕೂ ರೈಲ್ವೆ ಸಂಪರ್ಕವನ್ನು ಏರ್ಪಡಿಸುವುದಕ್ಕೆ ಈ ಮಾರ್ಗಗಳು ಅಗತ್ಯವಾಗಿವೆ. ಈ ಜಿಲ್ಲೆಗಳು ಆಹಾರ ಪದಾರ್ಥಗಳ ಸರಬರಾಜಿಗೂ, ಕೂಲಿಗಾರರಿಗೂ ಮೈಸೂರನ್ನು ಅವಲಂಬಿಸಿವೆ. ಈಗಾಗಲೆ ಪೂರ್ಣಗೊಳಿಸಿರುವ ಮೈಸೂರು ಬೆಂಗಳೂರು ರೈಲುಮಾರ್ಗವೂ, ಅಲ್ಲಿಂದ ಮದ್ರಾಸಿಗೆ ಮುಂದುವರಿಯುವ ಮಾರ್ಗವೂ ಕಾಫಿ ಮತ್ತು ಚಿನ್ನ ದೊರಕುವ ಈ ಜಿಲ್ಲೆಗಳಿಂದ ಹೆಚ್ಚು ಸಂಖ್ಯೆಯಲ್ಲಿ ಜನಗಳನ್ನು ಮತ್ತು ಹೆಚ್ಚು ಪ್ರಮಾಣದಲ್ಲಿ ಪದಾರ್ಥಗಳ ಸಾಗಾಣಿಕೆಯನ್ನು ಆಕರ್ಷಿಸುವುವು. ವೈನಾಡು ಮೂಲಕ ಬೈಪೂರಿಗೂ, ದಕ್ಷಿಣ ಕೊಡಗಿನ ಮೂಲಕ ತಲ್ಲಿಚೇರಿಗೂ ಈ ಮಾರ್ಗಗಳ ಪೈಕಿ ಯಾವುದಾದರೂ ಒಂದನ್ನು ಪಶ್ಚಿಮತೀರದವರೆಗೆ ವಿಸ್ತರಿಸಿದರೆ ಮೈಸೂರಿಗೂ ಪಶ್ಚಿಮತೀರಪ್ರದೇಶಕ್ಕೂ, ಬೊಂಬಾಯಿಗೂ ಇರುವ ವಿಪುಲವಾದ ವ್ಯಾಪಾರಕ್ಕೆ ಸಹಾಯಕವಾಗುವುದು. ಕಲ್ಕತ್ತಾದಿಂದ ಬೈಪೂರು, ಕಲ್ಲೀಕೋಟೆ ಮತ್ತು ತಲ್ಲಿಚೇರಿಗಳಿಗೆ ಹಡಗುಗಳಲ್ಲಿ ಅಗ್ಗವಾಗಿ ಬಂದ ಅಕ್ಕಿ ಮತ್ತು ಇತರ ಧಾನ್ಯಗಳನ್ನು ಮೈಸೂರು ರಾಜ್ಯಕ್ಕೆ ತರುವುದಕ್ಕೆ ಧಾತುಈಶ್ವರ ಕ್ಷಾಮದ ಕಾಲದಲ್ಲಿ ಕಷ್ಟವಾದಾಗ ಪಶ್ಚಿಮತೀರದೊಂದಿಗೆ ಸಂಪರ್ಕವೇರ್ಪಡಿಸುವ ಇಂತಹ ಮಾರ್ಗದ ಆವಶ್ಯಕತೆ ಎಷ್ಟೆಂಬುದು ಗೊತ್ತಾಯಿತು.

34. ಸುಮಾರು ೩೦೦ ಮೈಲಿಗಳ ಉದ್ದದ ಈ ಮೂರು ರೈಲ್ವೆಮಾರ್ಗಗಳಿಗೆ ೧೨೦ ಲಕ್ಷ ರೂಪಾಯಿಗಳು ಖರ್ಚಾಗಬಹುದು. ರಾಜ್ಯದ ಪ್ರಸಕ್ತ ಆದಾಯವನ್ನು ಉಪಯೋಗಿಸಿಕೊಂಡು ಇಷ್ಟು ಹೆಚ್ಚಿನ ವೆಚ್ಚದ ಕಾರ್ಯಗಳನ್ನು ಕೈಗೊಳ್ಳಲಾಗುವುದಿಲ್ಲ. ದುರದೃಷ್ಟವಶಾತ್ ಇಂಗ್ಲಿಷ್ ಕೈಗಾರಿಕೋದ್ಯಮಿಗಳನ್ನು ಈ ದೇಶದ ಆರ್ಥಿಕ ಕ್ಷೇತ್ರದಿಂದ ದೂರವಿರಿಸಲಾಗಿದ್ದ ತಪ್ಪೆ. ಅವರು ಈಗ ಉದ್ಯಮ ಸಂಘಗಳನ್ನು ಭಾರತದಲ್ಲಿ ಪ್ರಾರಂಭಿಸಲು ಅನುಕೂಲ ಮನೋಭಾವವುಳ್ಳವರಾಗಿರುವರೆಂದು ತೋರುತ್ತದೆ. ಈ ರೈಲುಮಾರ್ಗಗಳ ನಿರ್ಮಾಣವಾದ ಮೊದಲ

ಕೆಲವು ವರ್ಷಗಳಲ್ಲಿ ಹಾಕಿದ ಬಂಡವಾಳದ ಮೇಲೆ ಅಷ್ಟೇನೂ ಹೆಚ್ಚಲ್ಲದ ಶೇಕಡ 4 ರಷ್ಟು ಬಡ್ಡಿಯನ್ನು ಕೊಡುವ ಖಾತರಿಯ ಮೇಲೆ ಇಂಗ್ಲಿಷ್ ಕಂಪೆನಿಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಶೀಘ್ರದಲ್ಲಿಯೇ ಈ ರೈಲುಮಾರ್ಗಗಳು ಹೂಡಿದ ಬಂಡವಾಳದ ಮೇಲೆ ಬಡ್ಡಿಯನ್ನು ಗಳಿಸುವುದಕ್ಕೆ ಸಾಕಾದಷ್ಟು ಆದಾಯ ವನ್ನು ಹೊಂದುವುವೆಂದೂ, ಸ್ವಾವಲಂಬಿಯಾಗುವುವೆಂದೂ ಭರವಸೆಯಿದೆ. ಹೀಗೆ ಪ್ರಾಂತ್ಯದ ಅಭ್ಯುದಯಕ್ಕೆ ಅಗತ್ಯವಾದ ಈ ಮುಖ್ಯವಾದ ಕೆಲಸಗಳನ್ನು ರಾಜ್ಯಕ್ಕೆ ಯಾವ ಖರ್ಚೂ ಆಗದಂತೆ ಪೂರೈಸಿಕೊಂಡಂತಾಗುತ್ತದೆ.

35. ಇಂಗ್ಲೆಂಡಿನಲ್ಲಿರುವ ಬಂಡವಾಳಗಾರರು ಆಸಕ್ತರಾಗಿರುವ ಇನ್ನೊಂದು ಉದ್ಯಮವೆಂದರೆ ರಾಜ್ಯದಲ್ಲಿ ದೊರಕುವ ಅದುರಿನಿಂದ ಚಿನ್ನವನ್ನು ಬೇರ್ಪಡಿಸಿ ಚಿನ್ನವನ್ನು ತಯಾರಿಸುವುದು. ಚಿನ್ನದ ಅದುರು ಈ ಪ್ರಾಂತ್ಯದ ಬೇರೆ ಬೇರೆ ಭಾಗ ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುವುದೆಂಬ ಭರವಸೆ ಇದೆ. ಈ ಅದುರಿನಿಂದ ಚಿನ್ನ ವನ್ನು ತಯಾರಿಸುವ ಉದ್ಯಮವನ್ನು ಕೈಗೊಳ್ಳುವವರು ಲಾಭದಾಯಕವಾಗಿ ಅದನ್ನು ನಡೆಸಬಲ್ಲವರಾದರೆ ರಾಜ್ಯದ ಭವಿಷ್ಯವನ್ನೇ ಬದಲಾಯಿಸಬಲ್ಲರು. ಚಿನ್ನದ ಅದುರಿರುವುದೆಂದು ಎಣಿಸಿರುವ ಪ್ರದೇಶಗಳನ್ನು ಬಹುಮಟ್ಟಿಗೆ ಯಾವ ನಿರ್ಬಂಧಗಳೂ ಇಲ್ಲದೇ, ಪ್ರಸಕ್ತ ಆದಾಯದ ಕಡೆ ಲಕ್ಷ್ಯವಿಲ್ಲದೇ ಗುತ್ತಿಗೆ ಕೊಡ ಲಾಗಿದೆ, ಕೊಡಲಾಗುತ್ತಿದೆ. ಈ ಪ್ರದೇಶಗಳ ಮೇಲೆ ಕೇವಲ ಕಂದಾಯ ವನ್ನೂ, ಗಣಿಗಳ ಒಟ್ಟು ಉತ್ಪನ್ನದ ಮೇಲೆ ಶೇಕಡ 5 ರಷ್ಟು ಸ್ವಾಮ್ಯಪಾಲನ್ನೂ ವಿಧಿಸಲಾಗುತ್ತಿದೆ. ಪ್ರತಿವರ್ಷವೂ ಗುತ್ತಿಗೆಮೊತ್ತವನ್ನು ತೆಗೆದುಕೊಳ್ಳುವ ಬದಲು ಚದುರ ಮೈಲಿಗೆ 55,000 ರೂಪಾಯಿಗಳನ್ನು ಕೂಡಲೇ ಕೊಟ್ಟರೆ ಗುತ್ತಿಗೆಯ ಪೂರ್ಣ ಅವಧಿಗೆ ಅದನ್ನು ಸಂದಾಯವಾದ ಹಣವೆಂದು ಎಣಿಸಬೇ ಕೆಂಬ ಸಲಹೆಯನ್ನು ಪರಿಶೀಲಿಸುವುದಾಗಿ ಸರ್ಕಾರ ಭರವಸೆಯನ್ನು ಕೊಟ್ಟಿದೆ. ಭಾರತದ ಕಡೆ ಈಗ ಗಮನ ಹರಿಸಿರುವ ಇಂಗ್ಲಿಷ್ ಬಂಡವಾಳಗಾರರು ಇತರ ಖನಿಜ ಸಂಪತ್ತನ್ನು ರೂಢಿಸುವ, ಇತರ ಉದ್ಯಮಗಳನ್ನು ನಡೆಸುವ ಬಗೆಗೆ ಆಸಕ್ತಿ ಯನ್ನು ತೋರುವರೆಂದು ನಿರೀಕ್ಷಿಸಬಹುದು. ಆದರೆ ಇದು ಹೆಚ್ಚು ಸಂಭವನೀಯ ವಾಗಿ ಕಾಣುವುದಿಲ್ಲ.

36. ಹಿಂದೆ ಸೂಚಿಸಿದ ಸಂಘವು ಗಮನಕೊಡಬಹುದಾದ ಇತರ ಉದ್ಯ ಮಗಳನ್ನು ಈಗ ನಾನು ಸಂಕ್ಷಿಪ್ತವಾಗಿ ನಮೂದಿಸುತ್ತೇನೆ.

ಉದ್ಯಮಧಂಧೆಗಳನ್ನು ನಡೆಸುವವರೂ, ಕೈಕಸುಬುಗಾರರೂ ಕ್ಷಾಮದಿಂದ ನಾಶವಾಗಿಹೋಗಿದ್ದಾರೆಂಬ ವಿಷಯವನ್ನು ನಾನು ಆಗಲೇ ಪ್ರಸ್ತಾಪಿಸಿದ್ದೇನೆ. ವಿಶೇಷವಾದ ಕಲಾವಸ್ತುಗಳ, ಕುಶಲವಸ್ತುಗಳ ತಯಾರಿಕೆಗೆ ಕೈಕಸುಬುದಾರರ ದುಡಿಮೆಯಿಂದಲೇ ಸಾಕಾಗಬಹುದು. ಆದರೆ ಬಹುಮಂದಿಯ ಆವಶ್ಯಕತೆಗಳನ್ನು ಪೂರೈಸಬೇಕಾದ ಉದ್ಯಮಗಳು ಈ ಕಾಲದಲ್ಲಿ ಹೊರದೇಶಗಳ ಸ್ಪರ್ಧೆಯನ್ನು ಎದುರಿಸಬೇಕಾದರೆ ಯಂತ್ರೋಪಕರಣಗಳು ಇಲ್ಲದೇ ಸಾಧ್ಯವಾಗದು.

37. ಈ ಪ್ರಾಂತ್ಯದಲ್ಲಿ ಹತ್ತಿಯನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಬಟ್ಟೆ ಕಾರ್ಖಾನೆಗಳನ್ನು ಹೆಚ್ಚಾಗಿ ಸ್ಥಾಪಿಸುವುದಕ್ಕೆ ಅವಕಾಶವಿಲ್ಲ. ಒಂದೋ ಎರಡೋ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಅವಕಾಶವಿದೆ.

38. ಉಣ್ಣೆಗಾಗಿ ಕುರಿಗಳನ್ನು ಸಾಕುವುದು ಮತ್ತು ಉಣ್ಣೆಯ ಸಾಮಾನುಗಳನ್ನು ತಯಾರಿಸುವುದು ಈ ಪ್ರಾಂತ್ಯಕ್ಕೆ ವಿಶಿಷ್ಟವಾದ ಉದ್ಯಮವಾಗಿದೆ. ಯಂತ್ರೋಪಕರಣಗಳ ಉಪಯೋಗದಿಂದ ಈ ಉದ್ಯಮಕ್ಕೆ ಸಹಾಯವಾಗುವುದು.

39. ಕಾಗದವನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯವನ್ನು ಈಚೆಗೆ ಪ್ರಸ್ತಾಪಿಸಲಾಗಿದೆ. ಈ ಸಂಘವು ಈ ವಿಷಯಗಳನ್ನು ತನ್ನ ಗಮನಕ್ಕೆ ತೆಗೆದುಕೊಳ್ಳಬಹುದು.

40. ರಫ್ತಿಗೆ ಯೋಗ್ಯವಾದ, ಬೆಲೆಬಾಳುವ ಕೃಷಿವಸ್ತುಗಳ ಉತ್ಪನ್ನವನ್ನು ಉತ್ತಮಗೊಳಿಸುವ ಸಾಧ್ಯತೆ ಅಪಾರವಾಗಿದೆ. ಇವುಗಳಲ್ಲಿ ಕಾಫಿ ಉದ್ಯಮ ಬಹಳ ಮುಖ್ಯವಾದುದು. ಈ ಉದ್ಯಮವನ್ನು ಈಗಾಗಲೇ ಬುದ್ಧಿಶಾಲಿಗಳಾದ ಇಂಗ್ಲಿಷ್ ಪ್ಲಾಂಟರುಗಳು ನಡೆಸುತ್ತಿದ್ದಾರೆ. ಅದಕ್ಕೆ ಎಲ್ಲ ಗಮನವನ್ನೂ ಅವರು ಕೊಡುವುದರಲ್ಲಿ ಸಂಶಯವಿಲ್ಲ. ಈ ಪ್ರದೇಶಗಳಲ್ಲಿ ಬೆಳೆಯುವ ಸಿಂಕೋನಾ ಮುಂತಾದ ಇತರ ಮುಖ್ಯ ಬೆಳೆಗಳಿಗೆ ಪ್ಲಾಂಟರುಗಳು ಎಲ್ಲ ಗಮನವನ್ನೂ ಕೊಡುವರೆಂದು ನಿರೀಕ್ಷಿಸಬಹುದಾಗಿದೆ. ಈ ವರ್ಷದಿಂದ ಕಾಫಿ ಬೆಳೆಯುವ ಭೂಮಿಯ ಮೇಲೆ ಈಗಿನಂತೆ ಹಾಲತ್ತನ್ನು ವಸೂಲ್ಮಾಡುವ ಬದಲು ಕಂದಾಯವನ್ನೇ ವಿಧಿಸುವುದಕ್ಕೆ ಏರ್ಪಾಡುಗಳನ್ನು ಮಾಡಲಾಗಿದೆ. ಎಕರೆಗೆ ಒಂದು ರೂಪಾಯಿಯಂತೆ ಅಥವಾ ಖಾಯಂ ಏರ್ಪಾಡಿಗೆ ಒಪ್ಪುವುದಾದರೆ ಎಕರೆಗೆ 1$\frac{1}{2}$ ರೂಪಾಯಿಗಳಂತೆ

ಕಂದಾಯವನ್ನು ವಿಧಿಸಲಾಗುವುದು. ಸರಿಯಾಗಿ ಬೆಳೆಯಾಗದಿರುವ ಅಥವಾ ಹಾಳಾಗಿ ಹೋಗಿರುವ ಕಾಫಿ ತೋಟಗಳಿಗೆ ಕಂದಾಯದಲ್ಲಿ ಹಂಗಾಮಿಯಾಗಿ ರಿಯಾಯಿತಿಗಳನ್ನು ತೋರಿಸುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಎಕರೆಯ ಆಧಾರದ ಮೇಲೆ ಕಂದಾಯವನ್ನು ವಿಧಿಸುವುದರಿಂದ ಇದುವರೆಗೆ ವಸೂಲ್ಮಾಡು ತಿದ್ದ ಹಾಲತ್‌ನಿಂದ ಬರುತ್ತಿದ್ದ ಆದಾಯಕ್ಕಿಂತ ಹೆಚ್ಚಿಗೆ ಆದಾಯ ಬರುವುದೆಂದು ನಿರೀಕ್ಷಿಸಲಾಗಿದೆ. ಆದ್ದರಿಂದ ಈ ಕ್ರಮವನ್ನು ಕೈಗೊಳ್ಳುವುದರಿಂದ ಸರ್ಕಾರದ ಆದಾಯಕ್ಕೆ ಯಾವ ಬಾಧಕವೂ ಆಗುವುದಿಲ್ಲ. ಪ್ಲಾಂಟರುಗಳು ತಮ್ಮ ಭೂಮಿ ಯನ್ನು ಚೆನ್ನಾಗಿ ಕೃಷಿಮಾಡುವುದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವ ಉದ್ದೇಶ ದಿಂದಲೂ, ಅವರು ಹೆಚ್ಚು ಲಾಭದಾಯಕವಾದ ಬೆಳೆಗಳನ್ನು ಬೆಳೆಯಬೇಕೆಂತಲೂ ಹಾಲತ್‌ಸುಂಕವನ್ನು ವಿಧಿಸಲಾಗಿದ್ದಿತು.

41. ಹತ್ತಿ ಮತ್ತು ಈಗ ರಫ್ತಿಗೆ ಯೋಗ್ಯವಾದ ಮುಖ್ಯವಸ್ತುವಾಗು ತ್ತಿರುವ ಗೋಧಿಗಳನ್ನು ಬೆಳೆಯುವುದಕ್ಕೆ ಯೋಗ್ಯವಾದ ಭೂಮಿ ಈ ಪ್ರಾಂತ್ಯದಲ್ಲಿ ಹೆಚ್ಚಿಗೆ ಇಲ್ಲ. ಆದರೆ ಈ ಬೆಳೆಗಳನ್ನು ಬೆಳೆಯುವುದಕ್ಕೆ ಯೋಗ್ಯವಾದ ಭೂಮಿ ಯಲ್ಲಿ ಈಗ ಆಹಾರಪದಾರ್ಥಗಳನ್ನು ಬೆಳೆಯಲಾಗುತ್ತಿದೆ. ಅವನ್ನು ನಿಲ್ಲಿಸಿ ಗೋಧಿ, ಹತ್ತಿಗಳನ್ನೇ ಬೆಳೆಯುವುದಕ್ಕೆ ಈ ಭೂಮಿಯನ್ನು ಉಪಯೋಗಿಸ ಬಹುದು. ರೈಲಿನ ಮೂಲಕ ಸಾಮಾನ್ಯವಾದ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಇತರ ಕಡೆಗಳಿಂದ ತರಿಸಿಕೊಳ್ಳಬಹುದು.

42. ಕಬ್ಬನ್ನು ಬೆಳೆಯುವುದು ಈಗಾಗಲೇ ಚೆನ್ನಾಗಿ ಬೇರೂರಿರುವ ಒಂದು ಉದ್ಯಮವಾಗಿದೆ. ಭತ್ತ ಮತ್ತು ಕಬ್ಬು ಒಂದೇ ಬಗೆಯ ಭೂಮಿಯಲ್ಲಿ ಬೆಳೆಯು ತ್ತವೆ. ಕಬ್ಬನ್ನು ಇನ್ನೂ ಹೆಚ್ಚಾಗಿ ಬೆಳೆಯುವುದು ಅಕ್ಕಿ ಮತ್ತು ಸಕ್ಕರೆಗೆ ಯಾವ ಬೆಲೆ ದೊರಕುತ್ತದೆ ಎಂಬುದನ್ನು ಅವಲಂಬಿಸಿದೆ.

43. ಈ ರಾಜ್ಯಕ್ಕೆ ವಿಶಿಷ್ಟವಾದ ಬಹು ಮುಖ್ಯವಾದ ಕೈಗಾರಿಕೆ ರೇಷ್ಮೆ ತಯಾರಿಕೆ. ಇದುವರೆಗೂ ಉಪ್ಪುನೇರಳೆ ಬೆಳೆಯಲಾಗುತ್ತಿದ್ದ ಭೂಮಿಗಳ ಮೇಲೆ ಹೆಚ್ಚಿನ ಕಂದಾಯವನ್ನು ವಿಧಿಸಲಾಗುತ್ತಿದ್ದಿತು. ರೇಷ್ಮೆ ಹುಳುಗಳು ಕ್ಷಯಿಸುತ್ತಿದ್ದು ದರಿಂದ ಈ ಕೈಗಾರಿಕೆ ನಿರ್ನಾಮವಾಗಿ ಹೋಗುವಂತೆ ಆಯಿತು. ಈಗ ಅದೃಷ್ಟ ವಶದಿಂದ ಬಹುಶಃ ವಾತಾವರಣದಲ್ಲಿ ಆದ ಬದಲಾವಣೆಗಳಿಂದ ಈ ಹುಳು ತನ

ಷ್ಟಿಗೆ ತಾನೇ ಚೇತರಿಸಿಕೊಂಡಿದೆ. ಮುಂದೆ ಈ ಬಗೆಯ ನಷ್ಟಗಳಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದಲೂ, ಈ ಕೈಗಾರಿಕೆಯನ್ನು ಸಂಪೂರ್ಣವಾಗಿ ವಿಸ್ತರಿಸುವ ದೃಷ್ಟಿಯಿಂದಲೂ, ಈ ವಿಷಯವನ್ನು ಈ ಸಂಘವು ಅಭ್ಯಾಸಮಾಡ ತಕ್ಕದ್ದಾಗಿದೆ.

44. ಕೊನೆಯದಾಗಿ ದೇಶದ ಅಭ್ಯುದಯವನ್ನು ಸಾಧಿಸಬೇಕಾದರೆ ಅದರ ಜನ ತಮ್ಮ ದುಡಿಮೆಯಿಂದ ಉತ್ಪತ್ತಿ ಮಾಡುವ ಆಹಾರವು ಉಪಯೋಗಿಸಲ್ಪಡುವುದಕ್ಕಿಂತ ಹೆಚ್ಚಾಗಿದ್ದು ಉಳಿತಾಯವಾಗುವಂತಿರಬೇಕು. ಎಲ್ಲಿಯವರೆಗೆ ರೈತರು ಬೆಳೆಯುವ ಆಹಾರವು ಅವರಿಗೆ ಮಾತ್ರ ಸಾಕಾಗುವಷ್ಟು ಇರುವುದೋ ಅಲ್ಲಿಯವರೆಗೆ ಕ್ಷಾಮ ಅಥವಾ ಇತರ ವಿಪತ್ತು ಸಂಭವಿಸಿದಾಗ ಅವರು ಸಂಪೂರ್ಣವಾ ಉಡುಗಿಹೋಗುವರು. ದೇಶದ ವಿವಿಧೋದ್ಯಮಗಳಲ್ಲಿರುವ ಕೆಲಸಗಾರರ ಸಂಖ್ಯೆಯನ್ನು ಕಡಿಮೆಮಾಡಿ ಯಂತ್ರೋಪಕರಣಗಳನ್ನೂ, ಬಂಡವಾಳವನ್ನೂ ತೊಡಗಿಸುವುದರಿಂದ ಮಾತ್ರವೇ ಈ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು. ನೀರಾವರಿ ಅನುಕೂಲವನ್ನು ಕಲ್ಪಿಸುವುದರಿಂದ ಈ ಉದ್ದೇಶವನ್ನು ಸ್ವಲ್ಪಮಟ್ಟಿಗೆ ಸಾಧಿಸಬಹುದು. ಏಕೆಂದರೆ ನೀರಾವರಿ ಅನುಕೂಲ ಒದಗುವುದಕ್ಕಿಂತ ಮುಂಚೆ ಇದ್ದಷ್ಟು ಸಂಖ್ಯೆಯ ಜನರೇ ಆ ಅನುಕೂಲ ಒದಗಿದ ಮೇಲೆ ಮೊದಲಿಗಿಂತ ಹೆಚ್ಚಿನ ಬೆಳೆಯನ್ನು ತೆಗೆಯಬಹುದು. ಆದರೆ ತರೀಜಮೀನಿಗಿಂತ ಖುಷ್ಕಿ ಜಮೀನೇ ಬಹಳ ಹೆಚ್ಚಾಗಿದೆ. ಈ ಖುಷ್ಕಿ ಜಮೀನಿನಲ್ಲಿ ಬೆಳೆಯುವ ಬೆಳೆಗಳು ರೈತ ಮತ್ತು ಅವನ ಸಂಸಾರದವರಿಗೆ ಅಗತ್ಯವಾದುದಕ್ಕಿಂತ ಹೆಚ್ಚಾಗಿರುವುದಿಲ್ಲ. ಉದ್ಯಮಗಳನ್ನು ನಡೆಸುವವರ, ಕೈಕಸುಬುಗಾರರ ಪರಿಸ್ಥಿತಿ ಇದಕ್ಕಿಂತ ಕೀಳು ವಾದುದು. ಇಲ್ಲಿಯವರೆಗೆ ಹಣದ ಮೇಲಿನ ಬಡ್ಡಿ ಹೆಚ್ಚಾಗಿದ್ದುದರಿಂದಲೂ, ಕೂಲಿ ಕೆಲಸಮಾಡುವವರು ಬಹಳ ಕಡಿಮೆಯ ವೇತನಕ್ಕೆ ಸಿಕ್ಕುತ್ತಿದ್ದುದರಿಂದಲೂ ಹೆಚ್ಚು ಬೆಲೆಬಾಳುವ ಯಂತ್ರೋಪಕರಣಗಳನ್ನು ಬಳಸುವುದಕ್ಕೆ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. ಆದರೆ ಈಗ ಇಂಗ್ಲಿಷ್ ಬಂಡವಾಳವು ಭಾರತದೊಳಗೆ ಅನುಕೂಲವಾದ ಷರತ್ತುಗಳ ಮೇಲೆ ಬರುತ್ತಿರುವುದರಿಂದಲೂ, ಕೂಲಿಗಾರವರ್ಗವು ಈಚಿನ ಕ್ಷಾಮದಿಂದ ಕ್ಷೀಣಿಸಿರುವುದರಿಂದಲೂ, ಬಂಡವಾಳ ಮತ್ತು ಯಂತ್ರೋಪಕರಣಗಳನ್ನು ಉದ್ಯಮಗಳಲ್ಲಿ ಹೂಡಿ ಜನಗಳ ಜೀವನ ಮಟ್ಟವನ್ನು ಉತ್ತಮಗೊಳಿಸಲು ಪ್ರಸಕ್ತ ಕಾಲವು ವಿಶೇಷವಾಗಿ ಅನುಕೂಲವಾಗಿದೆ. ಈ ಪ್ರಾಂತ್ಯದಲ್ಲಿಯೂ.

ಅಕ್ಕಪಕ್ಕದ ಬ್ರಿಟಿಷ್ ಪ್ರದೇಶಗಳಲ್ಲಿಯೂ ತುಂಬಾ ಒಳ್ಳೆಯ ಜಮೀನುಗಳು ಹೆಚ್ಚಿನ ಪ್ರಮಾಣದಲ್ಲಿ ಪಾಳುಬಿದ್ದಿವೆ. ಇದಕ್ಕೆ ಕಾರಣ ಕ್ಷಾಮದಿಂದ ಜಮೀನು ರೂಢಿಸುವ ಕೆಲಸಗಾರರು ಕಡಿಮೆಯಾಗಿರುವುದು. ಉಗಿಯಿಂದ ನಡೆಯುವ ನೇಗಿಲುಗಳನ್ನೂ, ಇತರ ಯಂತ್ರಗಳನ್ನೂ ಉಪಯೋಗಿಸಿಕೊಂಡು ಹೊರದೇಶಗಳಿಗೆ ರಫ್ತುಮಾಡುವ ಪದಾರ್ಥಗಳನ್ನು ಬೆಳೆಯಲು ಈ ಜಮೀನುಗಳನ್ನು ಉಪಯೋಗಿಸುವುದಕ್ಕೆ ಬಂಡವಾಳಗಾರರಿಗೆ ಒಳ್ಳೆಯ ಅವಕಾಶ ಪ್ರಾಪ್ತವಾಗಿದೆ. ಹೀಗೆ ವ್ಯವಸಾಯದಲ್ಲಿಯೂ, ಕೈಗಾರಿಕೋದ್ಯಮಗಳಲ್ಲಿಯೂ ಕ್ಷಿಪ್ರದಲ್ಲಿ ಪ್ರಗತಿಯನ್ನು ಸಾಧಿಸುವುದರಿಂದ, ಆಹಾರ ಪದಾರ್ಥಗಳ ಮತ್ತು ಇತರ ಸಾಮಗ್ರಿಗಳ ಉತ್ಪನ್ನವು ಬೆಳೆಯುತ್ತಿರುವ ಜನಸಂಖ್ಯೆಯ ಆವಶ್ಯಕತೆಗಳಿಗಿಂತ ಹೆಚ್ಚಾಗುತ್ತದೆ. ಇದರಿಂದ ಕೆಲಸಗಾರರ ಸಂಬಳವೂ, ಸಮಾಜದಲ್ಲಿ ಅವರ ಸ್ಥಾನಮಾನಗಳೂ ಉತ್ತಮವಾಗುವುದಕ್ಕೆ ಅವಕಾಶವಾಗುತ್ತದೆ. ಈಗಲಾದರೋ ಆಹಾರ ಮತ್ತು ಇತರ ಸಾಮಗ್ರಿಗಳ ಉತ್ಪತ್ತಿಗಿಂತ ಜನಸಂಖ್ಯೆಯ ಬೆಳವಣಿಗೆಯೇ ಹೆಚ್ಚಾಗಿದೆ. ಇದರ ಅನಿವಾರ್ಯ ಪರಿಣಾಮವೆಂದರೆ ಎಲ್ಲೆಲ್ಲೂ ಕಂಡುಬರುವ ಅಭಾವ ಮತ್ತು ದಾರಿದ್ರ್ಯ.

45. ಸರ್ಕಾರಿ ಹುದ್ದೆಗೆ ಈ ದೇಶದಲ್ಲಿರುವ ಹೆಚ್ಚಿನ ಪ್ರಾಮುಖ್ಯತೆಯಿಂದಾಗಿ ದೇಶದ ಒಳಗೆ ಎಲ್ಲೆಲ್ಲೂ ಕಂಡುಬರುವ ಸಣ್ಣ ಮೊತ್ತದ ಬಂಡವಾಳವು ವ್ಯವಸಾಯಕ್ಕೂ, ಕೈಗಾರಿಕೆಗಳ ಬೆಳವಣಿಗೆಗೂ ವಿನಿಯೋಗವಾಗದೇ ಹೋಗಿದೆ. ಸರ್ಕಾರದ ಚಾಕರಿ ಅಥವಾ ಇತರ ದೇಶದ ಆರ್ಥಿಕಾಭಿವೃದ್ಧಿಗೆ ಉಪಯೋಗಕರವಲ್ಲದ ವೃತ್ತಿಗಳನ್ನು ಕೈಗೊಳ್ಳುವ ಬದಲು ಜನರು ತಮ್ಮ ಧನವನ್ನೂ, ಬುದ್ಧಿಶಕ್ತಿಯನ್ನೂ ಗೌರವಾಸ್ಪದವಾದ ಉದ್ಯಮದಂಥೆಗಳನ್ನು ನಡೆಸುವುದರಲ್ಲಿ ಉಪಯೋಗಿಸುವಂತೆ ಅವರನ್ನು ಪ್ರೋತ್ಸಾಹಿಸಬೇಕು.

46. ಈಗ ಸರ್ಕಾರದ ಅಧಿಕಾರಿಗಳು ತಾವು ಉಳಿಸುವ ಹಣವನ್ನು ಬಹುಮಟ್ಟಿಗೆ ಭೂಮಿಯನ್ನು ಕೊಳ್ಳುವುದರಲ್ಲಿ ವಿನಿಯೋಗಿಸುವುದೇನೋ ನಿಜ. ಆದರೆ ಇದು ಆಸ್ತಿಯನ್ನು ಮಾಡಬೇಕೆಂಬ ಉದ್ದೇಶದಿಂದ ಮಾತ್ರ ಹೀಗೆ ವಿನಿಯೋಗವಾಗುವುದೇ ಹೊರತು ವ್ಯವಸಾಯವನ್ನು ಉತ್ತಮಪಡಿಸುವುದಕ್ಕಲ್ಲ.

47. ಈ ಭಾಷಣವನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಪ್ರಸ್ತಾಪಿಸುವುದು ಅಗತ್ಯವಾಗಿದೆ. ಈಚೆಗೆ ಮಳೆ ಬರದೇ

ಇದ್ದುದರಿಂದ ಸರ್ಕಾರಕ್ಕೂ ಜನಕ್ಕೂ ಬಹಳ ಕಳವಳವಾಯಿತು. ಆದರೆ ಕೆಲವು ತಾಲ್ಲೂಕುಗಳ ಹೊರತಾಗಿ ಮಿಕ್ಕೆಡೆ ಭಯಕ್ಕೆ ಕಾರಣವಿಲ್ಲವೆಂದು ಕಂಡುಬಂದಿದೆ. ಹೀಗೆ ಆಗಾಗ ಮಳೆ ಬರದಿರುವುದು ಈ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಕಂಡು ಬರುವ ಪರಿಸ್ಥಿತಿಯೇ ಆಗಿರುವುದರಿಂದ ಅದರಿಂದ ಉಂಟಾಗುವ ಘೋರವಾದ ಪರಿಣಾಮದ ವಿಷಯದಲ್ಲಿ ಸರ್ಕಾರಕ್ಕೆ ಯಾವಾಗಲೂ ಆತಂಕವಿರುತ್ತದೆ. ಸರ್ಕಾರ ಎಷ್ಟೇ ಧಾರಾಳವಾಗಿ ಖರ್ಚುಮಾಡಿದರೂ ಜನಗಳ ಸಹಾಯವಿಲ್ಲದಿದ್ದರೆ ಸರ್ಕಾರ ಮಾಡಬಹುದಾದುದು ಎಷ್ಟು ಅಲ್ಪವೆಂಬುದು ಈಚಿನ ಕ್ಷಾಮದಿಂದ ವ್ಯಕ್ತವಾಗುತ್ತದೆ. ನೀರಾವರಿ ಕಾರ್ಯಕ್ಕೆ ಸರ್ಕಾರ ಖಂಡಿತವಾಗಿ ಎಲ್ಲಾ ಗಮನವನ್ನೂ ಕೊಡುವುದು. ಆದರೆ ನದಿಗಳಿಂದ ನೀರನ್ನು ಹೊಂದಲು ಕಟ್ಟಿದ ಕಾಲುವೆಗಳ ಹೊರತಾಗಿ ಇತರ ನೀರಾವರಿ ಯೋಜನೆಗಳಿಂದ ಮಳೆ ಬರದಿದ್ದಾಗ ಹೆಚ್ಚಿನ ಉಪಯೋಗವಾಗುವುದಿಲ್ಲ. ಈಗಾಗಲೇ ವಿವರಿಸಿದಂತೆ ಆಹಾರ ಪದಾರ್ಥಗಳ ಸಾಗಾಣಿಕೆಗೆ ಅನುಕೂಲ ಒದಗಿಸುವುದಕ್ಕಾಗಿ ಸಂಪೂರ್ಣವಾದ ರೈಲ್ವೆ ವ್ಯವಸ್ಥೆಯನ್ನು ಏರ್ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆ. ಯಾವ ತಾಲ್ಲೂಕುಗಳಲ್ಲಿ ಭೂಮಿಯ ಒಳಗೆ ಚಿಲುಮೆಗಳಿವೆಯೋ ಅವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾವಿಗಳನ್ನು ತೋಡುವುದಕ್ಕೆ ರೈತರಿಗೆ ಹಣವನ್ನು ಮುಂಗಡವಾಗಿ ಕೊಡಲು ಸರ್ಕಾರ ಉದ್ದೇಶಿಸಿದೆ. ಈ ರೀತಿ ಹಣವನ್ನು ಕೊಟ್ಟಾಗ ಅದು ದುರುಪಯೋಗವಾಗದಂತೆ ತಕ್ಕ ಏರ್ಪಾಡನ್ನು ಮಾಡಲಾಗುತ್ತದೆ. ಆಗಲೇ ಹೇಳಿದಂತೆ ವ್ಯವಸಾಯವನ್ನು ಮಾಡುವುದಕ್ಕಾಗಿ ಬಂಡವಾಳವನ್ನು ಹೂಡಿ, ಯಂತ್ರೋಪಕರಣಗಳನ್ನು ಉಪಯೋಗಿಸುವ ಖಾಸಗೀ ಪ್ರಯತ್ನಕ್ಕೆ ಸರ್ಕಾರವು ಎಲ್ಲಾ ಪ್ರೋತ್ಸಾಹವನ್ನೂ ಕೊಡುವುದು. ಕ್ಷಾಮ ಮುಂತಾದ ವಿಪತ್ತುಗಳ ಬಗೆಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಜನರೇ ಮಾಡಬೇಕಾದ ಕೆಲಸ ತುಂಬಾ ಇದೆ. ಪ್ರತಿಯೊಬ್ಬ ರೈತನೂ ಯಾವಾಗಲೂ ತನಗೂ ತನ್ನ ಸಂಸಾರಕ್ಕೂ ಒಂದು ಅಥವಾ ಎರಡು ವರ್ಷಗಳಿಗೆ ಸಾಕಾಗುವಷ್ಟು ಆಹಾರವನ್ನು ಸಂಗ್ರಹಿಸಿಟ್ಟುಕೊಳ್ಳುವುದು ಮುಖ್ಯವಾದ, ಪವಿತ್ರವಾದ ಕರ್ತವ್ಯವೆಂಬುದನ್ನು ಮರೆಯದಿರಬೇಕೆಂದು ಮಹಾರಾಜರ ವಿಶೇಷ ಕೋರಿಕೆಯಂತೆ ನಾನು ಪ್ರಾರ್ಥಿಸುತ್ತೇನೆ. ರಾಗಿ ಈ ಪ್ರಾಂತ್ಯದ ಬೆಳೆ. ಅದಕ್ಕೆ ಮಿಕ್ಕೆಡೆ ಬೇಡಿಕೆ ಇಲ್ಲ. ಎಷ್ಟು ವರ್ಷವಾದರೂ ಅದು ಕೆಡುವುದಿಲ್ಲ. ರಾಗಿಯ ಈ ವಿಶೇಷ ಗುಣದಿಂದಾಗಿ ಅದನ್ನು ಬಹುಕಾಲ ಸಂಗ್ರಹಿಸಿಡಬಹುದು. ಅಲ್ಪಸ್ವಲ್ಪ ಮಳೆ

ತಪ್ಪಿದಾಗ ರೈತರು ಅದರಿಂದಾಗುವ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಎಚ್ಚರಿಕೆಯಿಂದ ಅನುಸರಿಸುವುದಾದರೆ ಉಪಯೋಗವಾಗುವ ಕ್ರಮವೊಂದಿದೆ. ಭೂಮಿಯನ್ನು ಆಳವಾಗಿ ಉತ್ತರೆ ಅದು ಹೆಚ್ಚಿನ ಪ್ರಮಾಣದಲ್ಲಿ ತೇವವನ್ನು ಉಳಿಸಿಕೊಂಡು ಮಳೆಯಾಗದಿದ್ದಾಗಲೂ ಹೆಚ್ಚು ಕಾಲ ಬೆಳೆ ತೆಗೆಯುವುದಕ್ಕೆ ಇಂಬುಗೊಡುತ್ತದೆ ಎಂಬ ವಿಷಯವನ್ನು ವ್ಯವಸಾಯವನ್ನೇ ಕಸಬಾಗಿ ಉಳ್ಳವರು ಕಂಡುಹಿಡಿದಿದ್ದಾರೆ. ಸ್ವಲ್ಪ ಆಲೋಚಿಸಿದರೆ ಇದು ಎಲ್ಲರಿಗೂ ವ್ಯಕ್ತವಾಗತಕ್ಕದ್ದೇ. ಈ ಬಗೆಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಅನುಭವದಿಂದ ಸಿದ್ಧವಾಗತಕ್ಕದ್ದು. ಆದರೆ ಆಳವಾದ ಕೆಂಪು ಮತ್ತು ಕಪ್ಪು ಭೂಮಿಯುಳ್ಳ ಈ ಪ್ರಾಂತ್ಯದಲ್ಲಿ ಆಳವಾದ ಉಳುಮೆಯಿಂದ ಅನುಕೂಲವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ತಕ್ಕ ನೇಗಿಲುಗಳನ್ನು ಕಡಿಮೆ ಬೆಲೆಗೆ ಈ ದೇಶದಲ್ಲೇ ತಯಾರಿಸಲು ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮಹಾರಾಜರ ಸರ್ಕಾರವು ಅವು ಸಾರ್ವತ್ರಿಕವಾಗಿ ಉಪಯೋಗವಾಗುವಂತೆ ನೀವು ಸಹಾಯಮಾಡುವಿರೆಂದು ನಂಬುತ್ತದೆ.

# ಅನುಬಂಧ ೨

26ನೇ ಅಕ್ಟೋಬರ್ 1882 ರಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವನ್ನುದ್ದೇಶಿಸಿ ಮೈಸೂರಿನ ದಿವಾನರು ಮಾಡಿದ ಭಾಷಣ.

ಮಹನೀಯರೇ,

ಇದು ಪ್ರಜಾಪ್ರತಿನಿಧಿಗಳ ಎರಡನೆಯ ವಾರ್ಷಿಕ ಅಧಿವೇಶನ. ಶ್ರೀಮನ್ಮಹಾರಾಜರ ಆಜ್ಞೆಯಂತೆ ಕಳೆದ ವರ್ಷದ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನೂ, ಮುಂದಿನ ವರ್ಷದಲ್ಲಿ ಕೈಗೊಳ್ಳಲಾಗುವ ಕಾರ್ಯಕ್ರಮಗಳನ್ನೂ ನಿಮ್ಮ ಅವಗಾಹನೆಗೆ ತರುವುದು ನನ್ನ ಸಂಯೋಗವಾಗಿದೆ. ಶ್ರೀಮನ್ಮಹಾರಾಜರು ಜನಾದರಣೀಯವಾದ ಈ ಕ್ರಮವನ್ನು * ಕೈಗೊಂಡ ಮೇಲೆ ಭಾರತಸರ್ಕಾರವು ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ ಸ್ಥಾನಿಕ ಸ್ವಯಮಾಡಳಿತ ಸಂಸ್ಥೆಗಳನ್ನು ರಚಿಸಲು ವ್ಯಾಪಕವಾದ ಯೋಜನೆಯನು ಕೈಗೊಳ್ಳಲು ನಿರ್ಧರಿಸಿರುವುದು ಹರ್ಷದಾಯಕವಾದ ವಿಷಯ. 8ನೇ ಮೇ 1882ರ ಪತ್ರದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಆಜ್ಞೆಗಳು ಇವೆ. ಈ ಪತ್ರದಿಂದ ಬ್ರಿಟಿಷ್ ಸರ್ಕಾರಕ್ಕೆ ಈ ಉದ್ದೇಶಸಾಧನೆಯ ಬಗೆಗೆ ಇರುವ ಶ್ರದ್ಧೆ, ಅದರ ಉದಾರ ನೀತಿ, ರಾಜಕೀಯ ದೂರದೃಷ್ಟಿಗಳು ವ್ಯಕ್ತವಾಗುತ್ತವೆ. ಈ ಪತ್ರದಿಂದ ಭಾರತದ ಆಡಳಿತದಲ್ಲಿ ಹೊಸ ಯುಗ ಪ್ರಾರಂಭವಾಗುತ್ತಿದೆಯೆಂದು ಭಾವಿಸಬಹುದು. ದಕ್ಷಿಣಭಾರತದಲ್ಲಿಯೂ ಭಾರತದ ಇತರ ಭಾಗಗಳಲ್ಲಿಯೂ ಸಾರ್ವತ್ರಿಕವಾದ ತೃಪ್ತಿ ಸಮಾಧಾನಗಳಿಂದ ಈ ಕೊಡುಗೆಯನ್ನು ಜನರು ಸ್ವಾಗತಿಸಿರುವುದು ಅವರ ಮೆಚ್ಚಿಕೆಯ ನಿದರ್ಶನವಾಗಿರುವುದಲ್ಲದೇ ಭಾರತೀಯರು ಸ್ವಯಮಾಡಳಿತಕ್ಕೆ ಇನ್ನೂ ಅರ್ಹರಾಗಿಲ್ಲ ಎನ್ನುವ ಮಾತಿಗೆ ಆಧಾರವಿಲ್ಲ ಎಂಬುದನ್ನು ತೋರಿಸುತ್ತದೆ. ಜನಸಾಮಾನ್ಯರಲ್ಲಿ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸ ಹರಡಿದಲ್ಲದೇ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವುದಿಲ್ಲ ಎನ್ನುವುದಾದರೆ ಅದಕ್ಕಾಗಿ ನಾವು ಎಂದೆಂದಿಗೂ ಕಾಯುತ್ತಿರಬೇಕಾದೀತು. ಈ ಮಧ್ಯೆ ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟ ಜನರು ಅದರ ಅಡಿಯಲ್ಲಿ ಕಳೆವ ಒಂದೊಂದು ವರ್ಷವೂ ಪ್ರತಿನಿಧಿಸಂಸ್ಥೆಗಳನ್ನು ನಡೆಸುವುದಕ್ಕೆ ಹೆಚ್ಚು ಹೆಚ್ಚು

* ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದುದು.

ಅಸಮರ್ಥರಾಗುತ್ತಾರೆ. ಈ ಪ್ರಜಾಪ್ರತಿನಿಧಿಸಭೆಗಳಲ್ಲಿ ಕೆಲವರಾದರೂ ವಿದ್ಯಾವಂತರಿರುವುದು ಖಂಡಿತ. ಅವರು ತಮ್ಮ ಜೊತೆಯವರಿಗೆ ಸರಿಯಾದ ಮುಖಂಡತ್ವವನ್ನೂ, ಮಾರ್ಗದರ್ಶನವನ್ನೂ ಒದಗಿಸುತ್ತಾರೆ. ಈ ಸಭೆಯಲ್ಲಿರುವ ಬಹುಸಂಖ್ಯಾತರಾದ ಪ್ರತಿನಿಧಿಗಳಲ್ಲಿ ಅಗತ್ಯವಾಗಿರುವುದು ಸಾಮಾನ್ಯಪರಿಜ್ಞಾನ ವ್ಯವಹಾರ ಜ್ಞಾನಗಳು. ನಮ್ಮ ಹಿಂದಿನ ಸಭೆಯಲ್ಲಿ ತಾವು ನಡೆಸಿದ ಚರ್ಚೆಗಳಲ್ಲಿ ಇವು ಸುವ್ಯಕ್ತವಾಗಿದ್ದವು. ಉದ್ಯಮಗಳಲ್ಲಿಯೂ, ಇತರ ವೃತ್ತಿಗಳಲ್ಲಿಯೂ ನಿರತರಾಗಿರುವ ಅನುಭವಿಗಳಾದ ಜನರಿಗೆ ಇಂತಹ ಸಾಮಾನ್ಯ ಪರಿಜ್ಞಾನ, ವ್ಯವಹಾರಜ್ಞಾನಗಳು ಖಂಡಿತವಾಗಿ ಇರುತ್ತವೆ. ಭಾರತಸರ್ಕಾರದವರು ಹೇಳಿದಂತೆ ಆಡಳಿತ ನಿರ್ವಹಣೆಯಲ್ಲಿ ಔಚಿತ್ಯಜ್ಞಾನವುಳ್ಳವರೂ, ಸಮರ್ಥರೂ ಪ್ರಜೆಗಳಿಗೆ ಅಧಿಕಾರವನ್ನು ಕೊಡುವ ಪ್ರಯೋಗದಲ್ಲಿ ವಿಶ್ವಾಸವುಳ್ಳವರೂ ಆದ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಜನರ ಪ್ರತಿನಿಧಿಗಳು ಪ್ರಜಾಪ್ರತಿನಿಧಿಸಭೆಯ ಸದಸ್ಯರ ಕರ್ತವ್ಯಗಳನ್ನೂ, ಜವಾಬ್ದಾರಿಗಳನ್ನೂ ನಿರ್ವಹಿಸುವುದರಿಂದ ಮಾತ್ರವೇ ಜವಾಬ್ದಾರಿ ಸರ್ಕಾರಕ್ಕೆ ಬೇಕಾದ ನಿಜವಾದ ಶಿಕ್ಷಣ ಅವರಿಗೆ ದೊರಕಬಲ್ಲದು. ದೇಶದ ವಿವಿಧ ಭಾಗಗಳಲ್ಲಿ ಈ ಪ್ರಯೋಗ ಯಾವ ಯಾವ ಮಟ್ಟದಲ್ಲಿ ಯಶಸ್ವಿಯಾಗುತ್ತದೆಂಬುದು ಇಂಗ್ಲಿಷ್ ಶಿಕ್ಷಣ ಎಷ್ಟರಮಟ್ಟಿಗೆ ಹರಡಿದೆ ಎಂಬುದರ ಮೇಲೆ ನಿರ್ಧಾರವಾಗುವುದಿಲ್ಲ. ಅದು ಜನಗಳಲ್ಲಿ ಗ್ರಾಮ ಸ್ವಾಯತ್ತತೆಯ ಅಭಿಪ್ರಾಯ ಎಷ್ಟರಮಟ್ಟಿಗೆ ಇನ್ನೂ ಪ್ರಚಲಿತವಾಗಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ನಿರುತ್ಸಾಹ, ಜಡತೆಗಳಿಗೆಡೆಗೊಡುವುದೂ, ಪಕ್ಷಪ್ರತಿಪಕ್ಷಗಳನ್ನು ಬೆಳೆಸಿ ವೈಮನಸ್ಯಕ್ಕೆ ಅವಕಾಶ ಕೊಡುವುದೂ ಪ್ರಜಾಪ್ರತಿನಿಧಿಸಂಸ್ಥೆಗಳಲ್ಲಿ ಕಂಡುಬರುವ ನ್ಯೂನತೆಗಳಾಗಿವೆ. ಪ್ರಜಾಪ್ರತಿನಿಧಿ ಸಂಸ್ಥೆಗಳ ಯಶಸ್ಸಿನಲ್ಲಿ ಶ್ರದ್ಧೆಯಿರುವ ಜಿಲ್ಲಾಧಿಕಾರಿಗಳು ಸೂಕ್ತ ಸಲಹೆ, ಬುದ್ಧಿವಾದಗಳನ್ನು ಪ್ರಜಾಪ್ರತಿನಿಧಿಗಳಿಗೆ ಕೊಡುವುದರಿಂದ ಈ ನ್ಯೂನತೆಗಳನ್ನು ನಿವಾರಿಸಬಹುದು. ಪ್ರಜಾಪ್ರತಿನಿಧಿಗಳಿಗೆ ವಹಿಸಲಾಗಿರುವ ಗುರುತರವಾದ ಕರ್ತವ್ಯಗಳ ನಿರ್ವಹಣೆಯನ್ನು ಮಾಡುವಾಗ ಅವರು ಪ್ರಜಾಹಿತದ ಕಡೆಗೆ ಗಮನವಿಡಬೇಕು, ಸ್ವಂತವಾದ ಅಥವಾ ವೈಯಕ್ತಿಕವಾದ ಹಿತಾಸಕ್ತಿಗಳನ್ನೂ ಕುಂದುಕೊರತೆಗಳನ್ನೂ ಗಣನೆಗೆ ತೆಗೆದುಕೊಳ್ಳಕೂಡದು. ಅವರು ಯಾವುದೊಂದು ವಿಶಿಷ್ಟ ಕೋಮು ಅಥವಾ ಸಮಾಜದ ಯಾವ ಪಂಗಡದ ಹಿತಾಸಕ್ತಿಗಳನ್ನೂ, ಕುಂದುಕೊರತೆಗಳನ್ನೂ ಮಾತ್ರ ಗಮನಿಸತಕ್ಕದಲ್ಲ. ಸಾರ್ವಜನಿಕ ಹಿತಾಸಕ್ತಿಯೇ ಅವರ ಧ್ಯೇಯವಾಗಿರಬೇಕು. ಹೆಚ್ಚಿನ ಪರಿಜ್ಞಾನವಿಲ್ಲದ ಪ್ರಜಾಪ್ರತಿನಿಧಿ

ಗಳಷ್ಟೇ ಸರ್ಕಾರಿಅಧಿಕಾರಿಗಳಿಗೂ ಈ ವಿಷಯದ ಅರಿವನ್ನುಂಟುಮಾಡುವುದು ಅಗತ್ಯವಾಗಿದೆ. ಸಾರ್ವಜನಿಕರಿಗೆ ಅನುಕೂಲವಾದ ಕಾರ್ಯವನ್ನು ಮಾಡಬೇಕೆಂಬ ಉತ್ಸಾಹದಲ್ಲಿ ತಮ್ಮ ದೃಷ್ಟಿಯಲ್ಲಿ ಜನಹಿತಕಾರಕವೆಂದು ಕಾಣಬರುವ ಕಾರ್ಯ ಗಳನ್ನು ಅಧಿಕಾರಿಗಳು ಕೈಗೊಳ್ಳುವರು. ಸ್ವಂತ ಪ್ರಾಶಸ್ತ್ಯದ ಹಂಬಲ ಇದ ರೊಂದಿಗೆ ಸೇರಿಕೊಂಡರಷ್ಟೂ ಸರಿಯೇ. ಇಂತಹ ಕಾರ್ಯಗಳ ಬಗೆಗೆ ಭಿನ್ನಾಭಿ ಪ್ರಾಯ ತಲೆದೋರಿದಾಗ, ವಿರೋಧ ಒದಗಿದಾಗ ಅಸಹನೆ ಅವರಲ್ಲಿ ಕಂಡುಬರು ತ್ತದೆ. ಇತರರು ಕೈಗೊಂಡ ಕಾರ್ಯೋದ್ಯಮಗಳಲ್ಲಿ ತಾಳ್ಮೆ ಆಸಕ್ತಿಗಳನ್ನು ತೋರು ವುದೂ, ಅವರಿಗೆ ಸಲಹೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡುವುದೂ, ಈ ರೀತಿ ಮಾಡುವಾಗ ಸಾರ್ವಜನಿಕ ಹಿತಾಸಕ್ತಿಗಳಲ್ಲಿ ತಮ್ಮ ಶ್ರದ್ಧೆ ಒಂದೇ ರೀತಿ ಇರುವಂತೆ ಕಾಪಾಡಿಕೊಂಡು ಬರುವುದೂ ಅಧಿಕಾರಿಗಳ ಕರ್ತವ್ಯ. ನಗರ ಸಭೆ ಗಳಿಗೆ ಸಂಬಂಧಪಟ್ಟಂತೆಯೂ, ಇತರ ಸಾರ್ವಜನಿಕ ಕಾರ್ಯಗಳಿಗೆ ಸಂಬಂಧ ಪಟ್ಟಂತೆಯೂ, ಸರಿಯಾದ ಅಭಿಪ್ರಾಯಗಳನ್ನು ಜನರಲ್ಲಿ ಹರಡುವುದೂ, ಆ ಕಾರ್ಯಗಳನ್ನು ಜನರೇ ಕೈಗೊಳ್ಳುವಂತೆ ಮಾಡುವುದೂ, ಸರ್ಕಾರವೇ ಅವರಿಗಾಗಿ ಆ ಕಾರ್ಯಗಳನ್ನು ನಿರ್ವಹಿಸುವುದಕ್ಕಿಂತ ಉತ್ತಮವೆಂದು ಜಿಲ್ಲಾಧಿಕಾರಿಗಳಿಗೆ ಮನವರಿಕೆಯಾಗಬೇಕು. ಸರ್ಕಾರ ಈ ಕಾರ್ಯಗಳನ್ನು ನಿರ್ವಹಿಸುವಷ್ಟು ಶೀಘ್ರ ವಾಗಿ, ದಕ್ಷತೆಯಿಂದ ಅವು ನಡೆಯದಿರಬಹುದಾದರೂ ಪರಿಣಾಮದಲ್ಲಿ ಅವುಗಳ ಫಲ ಶಾಶ್ವತವಾಗಿರುವುದು; ಅವುಗಳ ಪ್ರಭಾವ ಜನರಲ್ಲಿ ಹರಡುವುದು; ಸರ್ಕಾರಿ ಅಧಿಕಾರಿಗಳು ಕೈಗೊಂಡ ಕಾರ್ಯಗಳು ಬದಲಾವಣೆಗೊಳಗಾದಂತೆ ಬದಲಾ ವಣೆಗೆ ಅವು ಗುರಿಯಾಗುವುದಿಲ್ಲ.

ಈ ಪ್ರಶ್ನೆ ಸಮಸ್ತ ಭಾರತಕ್ಕೂ ಮುಖ್ಯವಾಗಿರುವುದಲ್ಲದೇ ಅನೇಕ ಪ್ರಾಂತ್ಯ ಗಳಲ್ಲಿ ಈ ಬಗೆಗೆ ನಡೆದಿರುವ ವಿಚಾರವಿನಿಮಯ ನಮ್ಮ ಯೋಜನೆಗಳನ್ನು ರೂಪಿ ಸಿಕೊಳ್ಳುವುದಕ್ಕೆ ಸಹಕಾರಿಯಾಗಿರುವುದರಿಂದ ಪ್ರಸಕ್ತವಲ್ಲದಿದ್ದರೂ ಈ ವಿಷಯ ವನ್ನು ನಾನು ಪ್ರಸ್ತಾಪಿಸಿದ್ದೇನೆ. ಪ್ರಜಾಪ್ರತಿನಿಧಿಸಭೆಯನ್ನು ಅಸ್ತಿತ್ವಕ್ಕೆ ತರುವ ಈ ದೊಡ್ಡ ಕ್ರಮವನ್ನೇನೋ ನಾವು ಕೈಗೊಂಡಿದ್ದೇವೆ. ಆದರೆ ನಗರಸಭೆಗಳ, ಸ್ಥಳೀಯ ಸಂಸ್ಥೆಗಳ ರಚನೆಯನ್ನು ಉತ್ತಮಪಡಿಸುವುದಕ್ಕೆ ಯಾವ ಕ್ರಮಗಳನ್ನೂ ನಾವು ಕೈಗೊಂಡಿಲ್ಲ. ಸರ್ಕಾರದ ವಿವಿಧ ಇಲಾಖೆಗಳನ್ನು ಪುನರ್ವಿಂಗಡಣೆ ಮಾಡುವ ಗುರುತರವಾದ ಕೆಲಸದಿಂದಾಗಿ ಈ ವಿಷಯ ನಿಧಾನಕ್ಕೆ ಒಳಗಾಗಿದೆ. ಅಲ್ಲದೇ ಈ

ವಿಷಯವನ್ನು ಈ ಸಭೆಯ ಪರಿಶೀಲನೆಗೆ ಇಡುವ ಉದ್ದೇಶವಿದ್ದುದರಿಂದಲೂ ನಿಧಾನವಾಯಿತು. ಈ ಬಗೆಗೆ ಮೂಲ ತತ್ವಗಳು ಯಾವುವು ಎಂಬುದು ನಿರ್ಧಾರವಾದ ಮೇಲೆ ಯಾವ ಕಾಲವನ್ನೂ ವ್ಯರ್ಥಮಾಡದಂತೆ ಅವುಗಳನ್ನು ಅನ್ವಯಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ನಾನು ಭರವಸೆ ನೀಡುತ್ತೇನೆ. ಈ ವಿಷಯದಲ್ಲಿ ಸಲಹೆ ಸೂಚನೆಗಳನ್ನು ಕೇಳಿರುವ ಅನೇಕ ಸ್ಥಳೀಯ ಸಂಸ್ಥೆಗಳಿಗೂ, ಸಾರ್ವಜನಿಕ ಅಧಿಕಾರಿಗಳಿಗೂ ಅದರ ಬಗೆಗೆ ಭಿನ್ನಭಿನ್ನವಾದ ಅಭಿಪ್ರಾಯಗಳಿರುವುದು ಕಂಡುಬಂದಿದೆ. ಇದುವರೆಗೆ ಈ ವಿಷಯದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ಸಾರ್ವಜನಿಕ ಸಂಸ್ಥೆಗಳೂ, ದೇಶೀಯ ಮಹನೀಯರೂ ವಿವಿಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಪ್ರಶ್ನೆಯ ಪರಿಹಾರ ಕಷ್ಟಸಾಧ್ಯವೆಂಬುದು ಗೊತ್ತಾಗುತ್ತದೆ. ಈ ವಿಷಯದಲ್ಲಿ ಚರ್ಚೆ ಇನ್ನೂ ಮುಗಿದಿದೆಯೆಂದು ಎಣಿಸಲಾಗುವುದಿಲ್ಲ. ಈ ಬಗೆಗೆ ಸರ್ಕಾರದ ಕ್ರಮಗಳು ಖಚಿತವಾದ, ಕಾರ್ಯಯೋಗ್ಯವಾದ ರೂಪವನ್ನು ಪಡೆದಿಲ್ಲ. ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿನಿಧಿಸುವ ಗಣ್ಯ ದೇಶೀಯ ಸಂಸ್ಥೆಯಾದ ಪೂನಾ ಸಾರ್ವಜನಿಕ ಸಭೆಯು ಈ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಆದರೆ ಅವೆಲ್ಲವೂ ಸರ್ವಸಮ್ಮತವಾದುವೆಂದು ಹೇಳಲಾಗುವುದಿಲ್ಲ. ಆ ಸಂಸ್ಥೆಯು ಜಿಲ್ಲಾಧಿಕಾರಿಯು ಸ್ಥಳೀಯ ಸಂಸ್ಥೆಗಳ ಸಭೆಗಳಲ್ಲಿ ಅಧ್ಯಕ್ಷತೆ ವಹಿಸಬೇಕೆಂದು ಸೂಚಿಸಿದೆ. ಆದರೆ ಇದಕ್ಕೆ ಭಾರತಸರ್ಕಾರದ ಆಕ್ಷೇಪಣೆಯನ್ನು ಅದು ಗಮನಕ್ಕೆ ತಂದುಕೊಂಡಿಲ್ಲ. ಜಿಲ್ಲಾಧಿಕಾರಿಗಳು ಈ ಸಭೆಗಳಲ್ಲಿ ಅಧ್ಯಕ್ಷತೆ ವಹಿಸಿದರೆ ಅವರ ಪ್ರಭಾವಕ್ಕೊಳಗಾಗಿ ಸದಸ್ಯರು ಸ್ವತಂತ್ರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾರರು, ಸ್ವತಂತ್ರರಾದ ಸದಸ್ಯರು ಅಧ್ಯಕ್ಷರಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಇಬ್ಬರಿಗೂ ಘರ್ಷಣೆಯುಂಟಾಗಬಹುದು ಎಂಬುದು ಅದರ ಅಭಿಪ್ರಾಯವಾಗಿದೆ. ಈ ಸಭೆಗಳು ತಮಗೆ ವಹಿಸಲಾಗುವ ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ಮುಖ್ಯ ವಿಷಯಗಳನ್ನು ಕುರಿತು ವಿಚಾರವಿನಿಮಯ ಮಾಡುವಾಗ ಜಿಲ್ಲಾಧಿಕಾರಿಗಳು ಅವುಗಳಿಗೆ ಸೂಕ್ತ ಮಾರ್ಗದರ್ಶನವನ್ನು ಮಾಡಬೇಕಾಗುತ್ತದೆ, ಮೇಲ್ವಿಚಾರಣೆಯನ್ನು ಮಾಡಬೇಕಾಗುತ್ತದೆ. ಆದರೆ ಭಾರತಸರ್ಕಾರ ಅಭಿಪ್ರಾಯಪಡುವಂತೆ ಜಿಲ್ಲಾಧಿಕಾರಿಗಳ ಘನತೆಗೆ ಯಾವ ಧಕ್ಕೆಯೂ ಬಾರದಂತೆ ಹೊರಗಿನಿಂದ ಈ ರೀತಿ ನಿಯಂತ್ರಣವನ್ನು ಮಾಡಬಹುದು. ಸಾರ್ವಜನಿಕ ಸಭೆಯು ಮೇಲಿನ ಸಲಹೆ

ಯನ್ನು ಮಾಡುವುದಕ್ಕೆ ಸರ್ಕಾರೇತರ ಸದಸ್ಯರ ಸಭೆಯು ಸ್ಥಳೀಯ ಕೆಲಸಗಳ ನಿರ್ವಹಣೆಯನ್ನು ಜಿಲ್ಲಾಧಿಕಾರಿಗಳ ಸಹಕಾರವನ್ನು ಪಡೆಯದೇ ಮಾಡಲಾಗದೆಂಬ ಭಯವೇ ಕಾರಣವಾಗಿರಬೇಕು. ಜಿಲ್ಲಾಧಿಕಾರಿಗಳ, ಲೋಕಸ್ವಾಯತ್ತಾ ಸಂಸ್ಥೆಗಳ ಕಾರ್ಯಗಳನ್ನು ಪ್ರತ್ಯೇಕಿಸುವ ಆವಶ್ಯಕತೆಯನ್ನು ಇದು ತೋರಿಸುತ್ತದೆ. ಈ ವಿಷಯವನ್ನು ಮುಂದೆ ಪ್ರಸ್ತಾಪಿಸಲಾಗುತ್ತದೆ. ಅಲ್ಲದೇ ಸಭೆಯು ವಿದ್ಯಾವಂತ ವರ್ಗಕ್ಕೆ ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಸ್ಥಳೀಯ ಸಂಸ್ಥೆಗಳಲ್ಲಿ ಕೊಡಬೇಕೆಂದೂ ಕೇಳುತ್ತದೆ. ದೇಶದಲ್ಲಿ ವಿದ್ಯಾವಂತವರ್ಗಕ್ಕೆ ಇರಬೇಕಾದ ಸ್ಥಾನದ ಬಗೆಗೆ ಇದು ಸರಿಯಾದ ಅಭಿಪ್ರಾಯವೆಂದು ನನಗೆ ಕಾಣುವುದಿಲ್ಲ. ವಿದ್ಯಾವಂತರು ಜನ ಸಾಮಾನ್ಯರೊಡನೆ ಸೇರಿ ಅವರ ಮೇಲೆ ಪ್ರಭಾವ ಬೀರಿ ಮಾರ್ಗದರ್ಶನ ಮಾಡಲು ಪ್ರಯತ್ನಿಸಬೇಕು. ಆಸ್ತಿಯಿಲ್ಲದಿದ್ದರೂ ವಿದ್ಯೆಯ ಅರ್ಹತೆಯಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಒಬ್ಬ ವ್ಯಕ್ತಿ ಮತದಾನ ಮಾಡಲು ಹಕ್ಕುಳ್ಳವನಾಗ ಬಹುದು. ಆದರೆ ವಿದ್ಯಾವಂತರಿಗೇ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ಕೇಳು ವುದು ವಿಹಿತವಲ್ಲ.

ಈಗ ನಮ್ಮ ಪ್ರಾಂತ್ಯಕ್ಕೆ ಸಂಬಂಧಪಟ್ಟಂತೆ ನಿಮ್ಮ ಮುಂದೆ ಇಡಬೇಕಾದ ಸಲಹೆ ಸೂಚನೆಗಳನ್ನು ಪ್ರಸ್ತಾಪಿಸುತ್ತೇನೆ. ಮೊದಲು ನಾನು ಹೇಳಬೇಕಾದ ಅಂಶ ಏನೆಂದರೆ ಭಾರತಸರ್ಕಾರದವರು ಅನುಸರಿಸಬೇಕೆಂದು ಉದ್ದೇಶಪಟ್ಟಿರುವ ಮಾರ್ಗಕ್ಕಿಂತ ಭಿನ್ನವಾದ ರೀತಿಯಲ್ಲಿ ನಾವು ಇಲ್ಲಿ ಈ ವಿಷಯದಲ್ಲಿ ನಡೆದುಕೊಂಡಿ ದ್ದೇವೆ. ಜಿಲ್ಲೆಯ ಜನಗಳ ಪ್ರಮುಖರು ಇರುವ, ನಾವು ಈಗ ಸೇರಿರುವಂತಹ ಪ್ರತಿನಿಧಿಸಭೆಯು ಸರ್ಕಾರದೊಂದಿಗೆ ನೇರವಾದ ಸಂಪರ್ಕವನ್ನೇರ್ಪಡಿಸಿಕೊಂಡು ಆಡಳಿತ ಕ್ರಮಗಳ ವಿಷಯ ಚರ್ಚಿಸುವುದೂ, ಅವುಗಳ ಮೇಲೆ ಪ್ರಭಾವವನ್ನು ಬೀರುವುದೂ ನಗರಸಭೆಗಳನ್ನೂ, ಜಿಲ್ಲೆಗಳಲ್ಲಿರುವ ಸ್ಥಳೀಯಸಂಸ್ಥೆಗಳನ್ನೂ ಬಲ ಪಡಿಸುವುದಕ್ಕೆ ಆಗತ್ಯವಾದ ಪೂರ್ವಸಿದ್ಧತೆಯ ಕ್ರಮವೆಂದು ನಮ್ಮ ಅಭಿಪ್ರಾಯ. ಸರ್ಕಾರದೊಂದಿಗೆ ಹೀಗೆ ನೇರವಾಗಿ ಸಂಪರ್ಕಹೊಂದಿದ ಪ್ರತಿನಿಧಿಗಳು ತಮ್ಮ ಜಿಲ್ಲೆ ಗಳಿಗೆ ಹಿಂದಿರುಗಿದಾಗ ಅವರ ಸ್ಥಾನಮಾನಗಳು ಹೆಚ್ಚಾಗುತ್ತವೆ. ನಗರಸಭೆಗಳಲ್ಲಿ ಸ್ಥಳೀಯಸಂಸ್ಥೆಗಳಲ್ಲಿ ಕಾರ್ಯಮಾಡುವಾಗ ಹೆಚ್ಚಿನ ಮಟ್ಟದಲ್ಲಿ, ಹೆಚ್ಚಿನ ಜವಾ ಬ್ದಾರಿಯಿಂದ ಅವರು ನಡೆದುಕೊಳ್ಳುತ್ತಾರೆ, ತಮ್ಮ ಜೊತೆಯ ಸದಸ್ಯರನ್ನೂ ನಡೆ ಸುತ್ತಾರೆ. ಅಲ್ಲದೇ ಈ ಸದಸ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸು ವಂತೆ ಅವರು ಪ್ರೋತ್ಸಾಹಿಸುತ್ತಾರೆ.

ಅಲ್ಲದೇ ಸಾರ್ವಜನಿಕ ಅಭಿಪ್ರಾಯದ ಪ್ರಭಾವವು ನಗರಸಭೆಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದು, ಜನಗಳಿಗೆ ಅಷ್ಟೇ ಆಸಕ್ತಿ ಇರುವ ಪೋಲೀಸ್, ಮ್ಯಾಜಿಸ್ಟ್ರೇಟುಗಳು, ನ್ಯಾಯಾಡಳಿತ, ಭೂಕಂದಾಯ ಇಲಾಖೆ, ಹಣಕಾಸಿನ ಆಡಳಿತ ಮತ್ತು ಇತರ ಸರ್ಕಾರದ ವಿವಿಧ ಆಡಳಿತ ಇಲಾಖೆಗಳ ಮೇಲೆ ಅದರ ಪ್ರಭಾವವಿರಬೇಕಾದ್ದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ರಾಜಕೀಯ ಕಾರಣಗಳಿಗಾಗಿ ಸಾರ್ವಜನಿಕರಿಗೆ ತಿಳಿಸಲಾಗದ ವಿಷಯಗಳನ್ನು ಮಾತ್ರ ಅವರಿಂದ ದೂರವಾಗಿಡಬೇಕಾಗುತ್ತದೆ.

ಹೋದ ವರ್ಷ ನಾವು ಮೊದಲು ಸಭೆ ಸೇರಿದಾಗ ನಿಮ್ಮ ಚರ್ಚೆಗಳಲ್ಲಿ ನೀವು ಯಾವುದರಲ್ಲೂ ವಿಪರೀತಕ್ಕೆ ಹೋಗದ ಮಿತವಾದಿಗಳೆಂಬುದೂ, ವ್ಯವಹಾರಜ್ಞರೆಂಬುದೂ ವ್ಯಕ್ತವಾಯಿತು. ಅಲ್ಲದೇ ಉಪಯುಕ್ತವಾದ ಅನೇಕ ಕ್ರಮಗಳೂ, ಆವಶ್ಯಕವಾದ ಸುಧಾರಣೆಗಳೂ ಈ ಚರ್ಚೆಗಳಿಂದ ರೂಪಗೊಂಡವು. ಆದ್ದರಿಂದ ಜನಗಳ ಹಿತಾಸಕ್ತಿಗಳಿಗೆ ನೇರವಾಗಿ ಸಂಬಂಧಿಸಿದ ವಿಷಯಗಳನ್ನು ಕುರಿತು ಕಾರ್ಯತಃ ಸಾಧಿಸಲಾಗುವ ದೃಷ್ಟಿಯಿಂದ ಅವುಗಳನ್ನು ಪರಿಗಣಿಸಿರುವ ನಿಮ್ಮ ಅಭಿಪ್ರಾಯಗಳಿಗೆ ಹೆಚ್ಚಿನ ಬೆಲೆ ಇದೆ. ಭಾರತಸರ್ಕಾರದವರು ಈಗ ಪ್ರಾರಂಭಿಸಿರುವ ಸ್ಥಳೀಯಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಕೊಡುವ ಕ್ರಮವು ಪೂರ್ಣವಾಗಬೇಕಾದರೆ ನಗರಸಭೆಗಳಲ್ಲೂ ಜಿಲ್ಲೆಗಳ ಸ್ಥಳೀಯಸಂಸ್ಥೆಗಳಲ್ಲೂ ಚುನಾಯಿತ ಸದಸ್ಯರಿರುವಂತೆ ಏರ್ಪಡಿಸಿರುವುದನ್ನು ವಿಸ್ತರಿಸಬೇಕು. ಈ ಸ್ಥಾನಿಕ ಸಂಸ್ಥೆಗಳ ಸದಸ್ಯರ ಪೈಕಿ ಕೆಲವರನ್ನು ಪ್ರಾಂತ್ಯಗಳ ವಿಧಾನ ಸಭೆಯ ಸದಸ್ಯರಾಗಿರುವಂತೆ ಏರ್ಪಡಿಸುವ ಅಥವಾ ಇನ್ನಾವುದಾದರೂ ಕ್ರಮದಿಂದ ಸಾರ್ವಜನಿಕರ ಪ್ರತಿನಿಧಿಗಳು ಆ ಸಭೆಗಳಲ್ಲಿ ಇರುವಂತಾಗುವುದು. ಸಾರ್ವಜನಿಕ ವಿಷಯಗಳ ಬಗೆಗೆ ಈ ಪ್ರತಿನಿಧಿಗಳು ಪ್ರತಿಪಾದಿಸುವ ಅಭಿಪ್ರಾಯಗಳು ಸರ್ಕಾರದ ಗೌರವಪೂರ್ವಕವಾದ ಗಣನೆಗೆ ಅರ್ಹವಾಗತಕ್ಕವಾಗಿವೆ.

ನಗರಸಭೆಗಳ ಮತ್ತು ಸ್ಥಳೀಯಸಂಸ್ಥೆಗಳ ರಚನೆಯನ್ನು ಕುರಿತು ಪರ್ಯಾಲೋಚಿಸುವಾಗ ಆಡಳಿತ ನೀತಿಯನ್ನು ನಿರ್ಧರಿಸುವುದಕ್ಕೂ ಕಾರ್ಯನಿರ್ವಾಹಕ್ಕೂ ಇರುವ ವ್ಯತ್ಯಾಸದ ಬಗೆಗೆ ವಿವೇಚಿಸುವುದು ಸೂಕ್ತವಾಗಿದೆ. ಆಡಳಿತ ನೀತಿಯನ್ನು ನಿರ್ಧರಿಸುವುದಕ್ಕೆ ಪ್ರತಿನಿಧಿ ಸಂಸ್ಥೆಗಳು ಸೂಕ್ತವಾಗಿರುತ್ತವೆ. ಅವಕ್ಕೆ ಕಾರ್ಯ

ನಿರ್ವಾಹಕ ಜವಾಬ್ದಾರಿಯನ್ನೂ ವಹಿಸಿದರೆ ಅವುಗಳು ಪ್ರತಿಕೂಲವಾದ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಚಿಕ್ಕ ನಗರಸಭೆಗಳಲ್ಲಿ ಆದಾಯ ಮತ್ತು ಖರ್ಚು ಪರಿಮಿತವಾಗಿರುವುದರಿಂದ ಆಡಳಿತನೀತಿಯ ನಿರ್ಧಾರ ಮತ್ತು ಕಾರ್ಯ ನಿರ್ವಾಹಕ ಕರ್ತವ್ಯಗಳೆರಡನ್ನೂ ಅವುಗಳಿಗೇ ಸುಲಭವಾಗಿ ಬಿಡಬಹುದು. ವಿವಿಧ ಪ್ರಮುಖ ಹಿತಾಸಕ್ತಿಗಳಿಗೆ ಆಶ್ರಯಸ್ಥಾನಗಳಾದ, ಹೆಚ್ಚಿನ ಆದಾಯವಿರುವ, ವಿಚಕ್ಷಣವಾದ ಆಡಳಿತಕ್ಕೆ ದೊಡ್ಡ ಸಿಬ್ಬಂದಿವರ್ಗ ಅಗತ್ಯವಾದ ಬೆಂಗಳೂರು ಮೈಸೂರಿನಂತಹ ನಗರಸಭೆಗಳಲ್ಲೂ, ವಿಸ್ತಾರವಾದ ಪ್ರದೇಶಗಳಲ್ಲಿ ಕಾರ್ಯನಿರ್ವಹಣೆ ಮಾಡಬೇಕಾದ ಸ್ಥಳೀಯ ಸಂಸ್ಥೆಗಳಲ್ಲೂ, ಯಶಸ್ವಿಯಾಗಿ ಕಾರ್ಯ ನಡೆಸಲು ಆಡಳಿತನೀತಿನಿರ್ಧಾರವನ್ನೂ, ಕಾರ್ಯನಿರ್ವಾಹವನ್ನೂ ಬೇರ್ಪಡಿಸುವುದು ಅಗತ್ಯ. ಆಡಳಿತನೀತಿನಿರ್ಧಾರವನ್ನು ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಂತೆ ಪ್ರತಿನಿಧಿಮಂಡಲಿಗಳಿಗೆ ಸಂಪೂರ್ಣವಾಗಿ ವಹಿಸಬಹುದು. ಸರ್ಕಾರಿ ಅಧಿಕಾರಿಗಳು ಅಥವಾ ಅಗತ್ಯವಾದ ತರಬೇತು ಪಡೆದಿರುವ, ಸರ್ಕಾರದಿಂದ ನಿಯಮಿತರಾದ, ಅಥವಾ ಅದರ ಒಪ್ಪಿಗೆ ಪಡೆದು ಆರಿಸಲ್ಪಟ್ಟಿರುವ, ಸಂಬಳಕ್ಕೆ ಗೊತ್ತಾದ ಇತರ ಅಧಿಕಾರಿಗಳು ಕಾರ್ಯನಿರ್ವಾಹದ ಜವಾಬ್ದಾರಿಯನ್ನು ಈಗಿನಂತೆಯೇ ಮುಂದೆಯೂ ನಿರ್ವಹಿಸಬೇಕಾಗುತ್ತದೆ. ಸ್ಥಳೀಯಸಂಸ್ಥೆಗಳ ತೆರಿಗೆಗಳನ್ನು ವಸೂಲ್ಮಾಡುವುದಕ್ಕೆ ಪ್ರತ್ಯೇಕವಾದ ಸಿಬ್ಬಂದಿವರ್ಗವನ್ನು ನಿಯಮಿಸುವುದರಿಂದ ಹಣ ವ್ಯರ್ಥವಾಗುವುದಷ್ಟೆ. ಸಂಸ್ಥಾನಾದ್ಯಂತ ಸರ್ಕಾರದ ಸಿಬ್ಬಂದಿವರ್ಗ ಸರ್ಕಾರದ ತೆರಿಗೆಗಳನ್ನು ವಸೂಲ್ಮಾಡುವುದಕ್ಕೆ ಇರುವುದರಿಂದ ಯಾವ ಅಧಿಕಾರದ ಘರ್ಷಣೆಯಿಲ್ಲದೇ, ವಿಚಕ್ಷಣೆಯಿಂದ ಸ್ಥಳೀಯ ಸಂಸ್ಥೆಗಳ ತೆರಿಗೆಗಳನ್ನು ಅದು ವಸೂಲ್ಮಾಡಬಹುದು. ಈ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾಮಗಾರಿ ಕೆಲಸಗಳನ್ನು ಈಗಿರುವ ಸರ್ಕಾರಿ ಸಿಬ್ಬಂದಿವರ್ಗವೇ ಅವು ನಿಯಮಿಸಿಕೊಳ್ಳಬಹುದಾದ ಪ್ರತ್ಯೇಕ ಸಿಬ್ಬಂದಿವರ್ಗಕ್ಕಿಂತ ಹೆಚ್ಚು ದಕ್ಷತೆಯಿಂದ ನಿರ್ವಹಿಸಬಲ್ಲದು. ಸರ್ಕಾರಕ್ಕೂ ಸ್ಥಳೀಯಸಂಸ್ಥೆಗಳ ಕೆಲಸಕಾರ್ಯಗಳಲ್ಲಿ ಜನಗಳಷ್ಟೇ ಆಸಕ್ತಿಯಿರುವುದಷ್ಟೆ. ಆದ್ದರಿಂದ ಸರ್ಕಾರದ ಸಿಬ್ಬಂದಿ ವರ್ಗವನ್ನು ಅದು ಸ್ಥಳೀಯ ಸಂಸ್ಥೆಗಳಿಗೆ, ಸರ್ಕಾರಕ್ಕೆ ಜವಾಬ್ದಾರಿಯಾಗಿರುವಂತೆಯೇ ಜವಾಬ್ದಾರಿಯಾಗಿರುವವರೆಗೆ ಆ ಸಂಸ್ಥೆಗಳ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಯಾವ ಬಾಧಕವೂ ಇಲ್ಲ. ಸರ್ಕಾರದ ಸೇವೆಯಲ್ಲಿ ದೊಡ್ಡ ಮೊತ್ತದ ಸಂಬಳಗಳೂ, ಬಡತಿಗಳೂ, ವಿಶ್ರಾಂತಿವೇತನವೂ ಇವೆ. ಸ್ಥಳೀಯಸಂಸ್ಥೆಗಳಿಗೆ

ಈ ಅಧಿಕಾರಿವರ್ಗದಂತಹ ಸ್ಥಾನಮಾನಗಳುಳ್ಳ ಪ್ರತ್ಯೇಕ ಸಿಬ್ಬಂದಿವರ್ಗವನ್ನು ನಿಯಮಿಸಿಕೊಳ್ಳುವುದು ಕಷ್ಟವಾಗುತ್ತದೆ. ಹಾಲಿ ಇರುವ ಸರ್ಕಾರಿ ಸಿಬ್ಬಂದಿ ವರ್ಗವನ್ನು ಅದರಷ್ಟೇ ದಕ್ಷವಾದ ಬೇರೆ ಸಿಬ್ಬಂದಿವರ್ಗ ಕ್ರಮೇಣ ಏರ್ಪಡುವವರೆಗೆ ಬದಲಾಯಿಸಲಾಗದು. ದೊಡ್ಡ ನಗರಸಭೆಗಳಲ್ಲಿ ಪ್ರತ್ಯೇಕವಾದ ಸಿಬ್ಬಂದಿ ವರ್ಗ ಇರುವುದು ಸಾಧ್ಯವಾದರೂ ಮೇಲಿನ ಅಧಿಕಾರಿಗಳನ್ನು ಸರ್ಕಾರವೇ ನಿಯಮಿಸಬೇಕು. ಈ ಅಧಿಕಾರಿಗಳಿಗೆ ಹೆಚ್ಚಿನ ಸ್ಥಾನಮಾನಗಳನ್ನು ಕೊಡುವುದಕ್ಕೂ, ಅವರು ಜವಾಬ್ದಾರಿಯಿಂದ ಕೆಲಸಮಾಡುವಂತೆ ಮಾಡುವುದಕ್ಕೂ ಇದು ಅಗತ್ಯ. ಅವರ ನೇಮಕವನ್ನು ಸರ್ಕಾರ ನಗರಸಭೆಗಳ, ಸ್ಥಳೀಯಸಂಸ್ಥೆಗಳ ಒಪ್ಪಿಗೆಪಡೆದು ಮಾಡತಕ್ಕದ್ದು. ಸರ್ಕಾರದ ಇಚ್ಛೆಯಂತೆ ಅಥವಾ ಸ್ಥಳೀಯಸಂಸ್ಥೆಯ ಸದಸ್ಯರು ಸಮರ್ಪಕವಾದ ಕಾರಣಗಳಿಗಾಗಿ ಬಹುಮತದಿಂದ ನಿರ್ಧರಿಸಿದಂತೆ ಈ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಬಹುದು ಅಥವಾ ವರ್ಗಮಾಡಬಹುದು. ಜಿಲ್ಲಾಧಿಕಾರಿಗಳು ಈ ಸಂಸ್ಥೆಗಳ ಕಾರ್ಯನಿರ್ವಾಹಕ ಅಧಿಕಾರವರ್ಗದ ಮೇಲ್ವಿಚಾರಣೆಯನ್ನು ಮಾಡುವರು, ಈ ಸಂಸ್ಥೆಗಳ ಸದಸ್ಯಮಂಡಲಿಗಳಿಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ವಿವಾದ ಉಂಟಾದರೆ ಮಧ್ಯಸ್ಥಿಕೆಗಾರರಾಗುವರು ವಿವಾದ ನಿರ್ಣಯವನ್ನು ಮಾಡುವರು, ಸದಸ್ಯ ಮಂಡಲಿಗಳಿಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಮಾರ್ಗದರ್ಶಕರಾಗಿರುವರು.

ಸ್ಥಳೀಯಸಂಸ್ಥೆಗಳಲ್ಲಿ ಆಡಳಿತನೀತಿನಿರ್ಧಾರ, ಕಾರ್ಯನಿರ್ವಾಹಗಳನ್ನು ಬೇರ್ಪಡಿಸುವುದರಿಂದ ಅವುಗಳ ಸದಸ್ಯರ ಪ್ರಾಮುಖ್ಯತೆ ಕಡಿಮೆಯಾಗುತ್ತದೆ, ಅವರ ಆಸಕ್ತಿ ತಗ್ಗುತ್ತದೆ ಎಂದು ಯಾರಾದರೂ ಆಕ್ಷೇಪಿಸುವುದಾದರೆ ನಾನು ಹೇಳುವುದಿಷ್ಟೆ. ಈ ಸಂಸ್ಥೆಗಳ ಕರ್ತವ್ಯಗಳಲ್ಲಿ ಆಡಳಿತನೀತಿನಿರ್ಧಾರದ ಕೆಲಸ ಹೆಚ್ಚು ಮುಖ್ಯವಾದುದು. ಆವಶ್ಯಕತೆಗಳಿಗೆ ತಕ್ಕಂತೆ ಅದನ್ನು ಹೆಚ್ಚಿಸಬಹುದು. ತೆರಿಗೆಗಳನ್ನು ನಿರ್ಧರಿಸುವುದು, ಅವುಗಳ ದರಗಳನ್ನೂ ಅವುಗಳನ್ನು ವಸೂಲ್ಮಾಡುವ ಕ್ರಮವನ್ನೂ ನಿರ್ಧರಿಸುವುದು, ರಿಯಾಯಿತಿಗಳನ್ನು ನೀಡುವುದು, ಈ ವಿಚಾರಗಳಲ್ಲಿ ಏನಾದರೂ ಅಹವಾಲುಗಳಿದ್ದರೆ ಅವನ್ನು ಪರಿಶೀಲಿಸುವುದು, ಆದಾಯ ವೆಚ್ಚಗಳ ಅಂದಾಜುಗಳನ್ನು ನಿರ್ಧರಿಸುವುದು, ಅವುಗಳ ಆಡಳಿತ ನೀತಿ ನಿರ್ಧಾರದ ವ್ಯಾಪ್ತಿಗೆ ಒಳಪಡುತ್ತವೆ. ಅಲ್ಲದೇ ಕಾಮಗಾರಿಗಳ ಮಂಜೂರಾತಿ, ಟೆಂಡರುಗಳನ್ನು ಕರೆದು ಪೈಪೋಟಿ ಉಂಟುಮಾಡಿ, ಅವುಗಳನ್ನು ವಿಲೇವಾರಿ

ಮಾಡುವುದೂ ಸೇರಿ ಕಾಮಗಾರಿ ನಡೆಯುವ ಕ್ರಮ ನಿರ್ಧರಿಸುವುದು, ಈ ಇಲಾಖೆಯ ಎಲ್ಲ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಗಳನ್ನು ಸೂಚಿಸುವುದು, ನಿರ್ದೇಶನ ನೀಡುವುದು ಇವೆಲ್ಲಾ ಈ ಸಂಸ್ಥೆಗಳ ಅಧಿಕಾರವ್ಯಾಪ್ತಿಗೆ ಸೇರಿರುತ್ತವೆ. ಅವರು ಈ ಕರ್ತವ್ಯಗಳನ್ನು ಆಗಾಗ್ಗೆ ಸಭೆಗಳಲ್ಲಿ ಸೇರುವುದರ ಮೂಲಕ ಮತ್ತು ಕಾರ್ಯನಿರ್ವಾಹಕ ಸಮಿತಿಗಳ ಮೂಲಕ ನಿರ್ವಹಿಸಬಹುದು. ಅವರ ಸ್ವಂತ ಕಾರ್ಯಗಳನ್ನು ಇದಕ್ಕಾಗಿ ಪೂರ್ಣವಾಗಿ ಅವರು ಬಿಡಬೇಕಾಗಿಲ್ಲ. ಅವರಿಗೆ ಸಂಚಾರ ಮತ್ತಿತರ ಖರ್ಚನ್ನು ಕೊಡಬಹುದು. ಅವರು ಇನ್ನೇನಾದರೂ ಹೆಚ್ಚಿನ ಕೆಲಸಗಳನ್ನು ಮಾಡುವುದಾದರೆ ಅವರು ಒಂದು ರೀತಿಯ ಸಂಬಳದಾರರಾಗುವರು. ಇದು ಈ ಸಂಸ್ಥೆಗಳ ಪ್ರತಿನಿಧಿಸ್ವರೂಪವನ್ನು ನಾಶಗೊಳಿಸುವುದರಿಂದ ಸಾಧ್ಯವಾದುದಲ್ಲ. ಆಡಳಿತನೀತಿನಿರ್ಧಾರಮಾಡುವ ಕರ್ತವ್ಯವನ್ನು ಮಾತ್ರ ಮೊದಲು ಕೆಲವು ವರ್ಷಗಳು ಸದಸ್ಯರು ನಿರ್ವಹಿಸುವುದು ಸೂಕ್ತವಾದುದು. ಏಕೆಂದರೆ ಕಾರ್ಯನಿರ್ವಾಹದ ಕ್ಷೇತ್ರಕ್ಕಿಳಿದರೆ ಭ್ರಷ್ಟಾಚಾರದ ಸೋಂಕು ತಗುಲದೇ ಇರದು. ಈ ಏರ್ಪಾಡಿನಿಂದ ಸ್ಥಳೀಯ ವ್ಯವಹಾರಗಳಲ್ಲಿ ನಿಜವಾದ ಸ್ವಯಮಾಡಳಿತವನ್ನು ದೃಢವಾದ ಅಸ್ತಿಭಾರದ ಮೇಲೆ ಕೂಡಲೇ ಸ್ಥಾಪಿಸಿದಂತಾಗುವುದು. ಅಲ್ಲದೇ ಮುಂದೆ ಕಾರ್ಯನಿರ್ವಾಹದ ಜವಾಬ್ದಾರಿಯನ್ನು ಅದಕ್ಕೆ ತಕ್ಕ ಸಾಮರ್ಥ್ಯ ತೋರಿಸಿದರೆ ಸದಸ್ಯರಿಗೇ ವಹಿಸಲೂ ಅವಕಾಶವಾಗುವುದು.

ಈ ರೀತಿ ವ್ಯವಸ್ಥೆಗೊಳಿಸಿದಲ್ಲಿ ಸ್ಥಳೀಯ ಸಂಸ್ಥೆಗಳ ಮತ್ತು ನಗರಸಭೆಗಳ ಎಲ್ಲ ಸದಸ್ಯರೂ ಜನರಿಂದ ಚುನಾಯಿತರಾಗುವಂತೆ ಏರ್ಪಡಿಸುವುದು ಸೂಕ್ತವಾದ ಸರ್ವಸಮ್ಮತವಾದ ಕ್ರಮವಾಗುತ್ತದೆ. ನಗರಸಭೆಗಳಲ್ಲಿ ಪ್ರತಿಯೊಂದು ಮೊಹಲ್ಲದ ಅಥವಾ ವಿಭಾಗದ ಸದಸ್ಯರ ಸಂಖ್ಯೆಯನ್ನು ನಿಗದಿಮಾಡಲಾಗುವುದು. ಈ ನಗರಸಭೆಗಳಿಗೆ ಮನೆಯ ಮಾಲೀಕರು ಅಥವಾ ಒಂದು ಮಟ್ಟಕ್ಕಿಂತ ಹೆಚ್ಚಿನ ತೆರಿಗೆ ಕೊಡುವವರು ಪ್ರತಿನಿಧಿಗಳನ್ನು ಚುನಾಯಿಸುವರು. ಹಾಗೆಯೇ ಸ್ಥಳೀಯಸಂಸ್ಥೆಗಳಲ್ಲಿಯೂ ಪ್ರತಿಯೊಂದು ತಾಲ್ಲೂಕಿನ ಸದಸ್ಯರ ಸಂಖ್ಯೆಯನ್ನು ಗೊತ್ತುಮಾಡಿರುತ್ತವೆ. ಒಂದು ಗೊತ್ತಾದ ಮೊತ್ತಕ್ಕಿಂತ ಹೆಚ್ಚು ಸ್ಥಳೀಯ ತೆರಿಗೆಕೊಡುವ ಭೂಮಾಲಿಕರು ಸದಸ್ಯರನ್ನು ಚುನಾಯಿಸುವರು. ನಗರಸಭೆಗಳಿಗೆ ಜಿಲ್ಲಾಸಂಸ್ಥೆಗಳಿಗೆ ಹೆಚ್ಚು ತೆರಿಗೆ ಕೊಡುವವರಿಗೆ ಹೆಚ್ಚಿನ ಮತಗಳನ್ನು ಕೊಡಲಾಗುವುದು.

ಸರ್ಕಾರವು ಆವಶ್ಯಕತೆಯಿದ್ದಾಗ ತನ್ನ ಅಭಿಪ್ರಾಯವನ್ನು ಈ ನಗರಸಭೆಗಳಲ್ಲಿ ಅಥವಾ ಜಿಲ್ಲಾ ಸಂಸ್ಥೆಗಳಲ್ಲಿ ವ್ಯಕ್ತಪಡಿಸುವುದಕ್ಕೆ ಇಬ್ಬರನ್ನೋ, ಮೂವರನ್ನೋ ಸದಸ್ಯರನ್ನಾಗಿ ನಿಯಮಿಸುವ ಅಧಿಕಾರವನ್ನು ಇಟ್ಟುಕೊಳ್ಳಬಹುದು. ಅಧಿಕಾರಿಗಳನ್ನಾಗಲಿ, ಖಾಸಗಿವ್ಯಕ್ತಿಗಳನ್ನಾಗಲಿ ಅದು ಹೀಗೆ ನಿಯಮಿಸಬಹುದು. ಆದರೆ ಸರ್ಕಾರ ಒಟ್ಟಿನ ಸದಸ್ಯರಲ್ಲಿ ಅರ್ಧದಷ್ಟು ಅಥವಾ ಮೂರನೆಯ ಒಂದರಷ್ಟು ಸದಸ್ಯರನ್ನು ನಾಮಕರಣಮಾಡುವುದು ಸರಿಯಲ್ಲ. ನಾಮಕರಣಮಾಡಿದ ಮತ್ತು ಚುನಾಯಿತರಾದ ಸದಸ್ಯರಲ್ಲಿ ಅಸಮಾನತೆಗೆ ಕಾರಣವಾಗುವುದರಿಂದಲೂ, ಪ್ರಜಾಪ್ರತಿನಿಧಿವ್ಯವಸ್ಥೆಯನ್ನು ದುರ್ಬಲಗೊಳಿಸುವುದರಿಂದಲೂ ಈ ಕ್ರಮ ಆಕ್ಷೇಪಣಾರ್ಹವಾದುದು. ಸರ್ಕಾರವು ತನ್ನ ಅಭಿಪ್ರಾಯಗಳನ್ನು ಕಾರ್ಯಗತಗೊಳಿಸಲು ಈ ಸಂಸ್ಥೆಗಳಲ್ಲಿ ಬಹುಮತವನ್ನು ಹೊಂದಲು ಯತ್ನಿಸಬಾರದು. ಈ ಸಂಸ್ಥೆಗಳ ತೀರ್ಮಾನಗಳನ್ನು ಒಪ್ಪದಿರುವ ಅಧಿಕಾರವನ್ನು ಅಥವಾ ಅವುಗಳ ಕೆಲಸ ಸಮರ್ಪಕವಾಗಿಲ್ಲದಿದ್ದಾಗ ತಾತ್ಕಾಲಿಕವಾಗಿ ಅವುಗಳನ್ನು ರದ್ದುಮಾಡುವ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡರೆ ಸಾಕು. ಜಿಲ್ಲೆಯಲ್ಲಿ ಅಥವಾ ನಗರದಲ್ಲಿ ಇರುವ ವಿವಿಧ ಇಲಾಖಾ ಮುಖ್ಯಸ್ಥರಿಗೆ ತಮ್ಮ ಅಭಿಪ್ರಾಯಗಳನ್ನು ಸಭೆಗೆ ನೇರವಾಗಿ ಹೇಳುವ ಅಥವಾ ಪತ್ರದ ಮೂಲಕ ತಿಳಿಸುವ ಅವಕಾಶವಿರತಕ್ಕದ್ದು. ಜಿಲ್ಲಾಧಿಕಾರಿಗಳು ಇದಕ್ಕಾಗಿ ಯಾವಾಗಬೇಕಾದರೂ ಸಭೆ ಕರೆಯಬಹುದು. ಆದರೆ ಅವರಿಗೆ ಸಭೆಯ ನಡವಳಿಕೆಯಲ್ಲಿ ಪಾತ್ರವಿಲ್ಲ. ಸದಸ್ಯರುಗಳಿಗೆ ತಮ್ಮ ಪೈಕಿಯೋ ಅಥವಾ ಹೊರಗಿನಿಂದಲೋ ಅಧ್ಯಕ್ಷರನ್ನು ನಿಯಮಿಸುವ ಅಧಿಕಾರವಿರತಕ್ಕದ್ದು. ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿಯೂ, ತಾಲ್ಲೂಕುಗಳಲ್ಲಿಯೂ ಆಡಳಿತ ನಿರ್ವಹಣೆಗಾಗಿ ತಮ್ಮ ಪೈಕಿ ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕಸಮಿತಿಗಳನ್ನು ನಿಯಮಿಸುವ ಅಧಿಕಾರ ಅವರಿಗೆ ಇರತಕ್ಕದ್ದು.

ಈ ಸಂಸ್ಥೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ಪರಿಶೀಲಿಸೋಣ. ನಗರಸಭೆಗಳ ಕರ್ತವ್ಯಗಳು ಏನು ಎಂಬುದು ಸಾಕಾದಷ್ಟು ಗೊತ್ತಾಗಿದೆ. ನಗರಸಭೆಗಳಿಗೆ ವಹಿಸಲಾಗಿರುವ ಆದಾಯದ ಬಾಬುಗಳಿಂದ ಅವುಗಳ ವೆಚ್ಚವನ್ನು ನಿರ್ವಹಿಸಬಹುದು. ಈ ಬಾಬುಗಳನ್ನು ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಬಹುದು. ಜಿಲ್ಲಾಸ್ಥಳೀಯಸಂಸ್ಥೆಗಳು ಎಲ್ಲ ರಸ್ತೆಗಳ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬಹುದು. (ಸರ್ಕಾರ ಆಗ ರೈಲ್ವೆಗಳಿಗೆ ಮಾತ್ರ ಗಮನ ಕೊಡ

ಬಹುದು) ಪ್ರಾಥಮಿಕ ವಿದ್ಯಾಭ್ಯಾಸ, ಸಣ್ಣ ಆಸ್ಪತ್ರೆಗಳು, ಸಣ್ಣ ಔಷಧಾಲಯ ಗಳು, ದೋಣಿಗಳ ಸಂಚಾರ ವ್ಯವಸ್ಥೆ, ದನಗಳ ದೊಡ್ಡಿ, ಛತ್ರಗಳು, ಮುಸಾಫರ್ ಖಾನೆಗಳು ಮತ್ತು ಮುಂದೆ ವಹಿಸಬಹುದಾದ ಇತರ ಸ್ಥಳೀಯ ವ್ಯವಹಾರಗಳನ್ನು ಈ ಸಂಸ್ಥೆಗಳು ವಹಿಸಿಕೊಳ್ಳಬಹುದು. ಇವುಗಳಿಗಾಗುವ ವೆಚ್ಚವನ್ನು ಸ್ಥಳೀಯ ತೆರಿಗೆಗಳಿಂದಲೂ, ದೋಣಿಸಾರಿಗೆ ಆದಾಯದಿಂದಲೂ, ದನಗಳ ದೊಡ್ಡಿಯ ಆದಾಯದಿಂದಲೂ ಮತ್ತು ಸರ್ಕಾರ ತನ್ನ ಆದಾಯದಿಂದ ಕೊಡುವ ಸಹಾಯ ಧನದಿಂದಲೂ ಸರಿತೂಗಿಸಬಹುದು. ಕೆರೆಗಳನ್ನು, ನೀರಾವರಿ ವ್ಯವಸ್ಥೆಗಳನ್ನು ಮತ್ತು ಸರ್ಕಾರಿ ಕಟ್ಟಡಗಳನ್ನು ಕಾಪಾಡುವ ಜವಾಬ್ದಾರಿಯನ್ನು ಹಿಂದಿನಂತೆಯೇ ಸರ್ಕಾರ ಜಿಲ್ಲಾ ಅಧಿಕಾರಿಗಳ ಮೂಲಕ ನಿರ್ವಹಿಸುವುದು.

ಸರ್ಕಾರವು ಈ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಯಾವ ಬಗೆಯ ನಿಯಂತ್ರ ಣಾಧಿಕಾರವನ್ನು ಇಟ್ಟುಕೊಳ್ಳಬೇಕು ಎಂಬುದನ್ನು ಮಾತ್ರ ಈಗ ಪ್ರಸ್ತಾಪಿಸಬೇಕಾ ಗಿದೆ. ಈಗಿನಂತೆಯೇ ಒಂದು ಗೊತ್ತಾದ ಮೊಬಲಿಗಿಂತ ಹೆಚ್ಚು ವೆಚ್ಚ ತಗಲುವ ಎಲ್ಲ ಕೆಲಸಕಾರ್ಯಗಳಿಗೂ ಸರ್ಕಾರದ ಒಪ್ಪಿಗೆ ಪಡೆಯಬೇಕು. ಭಾರತಸರ್ಕಾರ ತನ್ನ ಅಧಿಕೃತಪತ್ರದಲ್ಲಿ ಹೇಳಿರುವಂತೆ ಧಾರ್ಮಿಕ ವಿಷಯಗಳಿಗೂ ಸಾರ್ವಜನಿಕ ಶಾಂತಿಪಾಲನೆಗೂ ಸಂಬಂಧಪಟ್ಟಂತೆ ಉದ್ಭವಿಸುವ ಪ್ರಶ್ನೆಗಳನ್ನೂ, ಸಾಲ ತೆಗೆ ಯುವ, ಹೊಸ ತೆರಿಗೆಗಳನ್ನು ವಿಧಿಸುವ, ನಗರ ಸಭೆಗಳ ಆಸ್ತಿಯನ್ನು ಪರಭಾರೆ ಮಾಡುವ ವಿಷಯಗಳನ್ನೂ ಸರ್ಕಾರದ ಅಂತಿಮ ತೀರ್ಮಾನಕ್ಕೆ ಈ ಸಂಸ್ಥೆಗಳು ಒಪ್ಪಿಸಬೇಕು. ಸಭೆಯ ಕಾರ್ಯಕಲಾಪಗಳ ವರದಿಯನ್ನು, ಲೆಕ್ಕಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ ಈ ಸಂಸ್ಥೆಗಳು ಕಳುಹಿಸಬೇಕು. ಸದ್ಯಕ್ಕಾದರೂ ಈ ಸಂಸ್ಥೆಗಳು ಮಾಡುವ ಯಾವ ತೀರ್ಮಾನವನ್ನೂ ರದ್ದುಗೊಳಿಸುವ ಅಧಿಕಾರ ಸರ್ಕಾರಕ್ಕಿರ ಬೇಕು. ಈ ಅಧಿಕಾರ ಸರ್ಕಾರಕ್ಕೆ ಮಾತ್ರ ಇರುತ್ತದೆ. ಸರ್ಕಾರಕ್ಕೆ ವರದಿ ಮಾಡು ವವರೆಗೆ ಜಿಲ್ಲಾಧಿಕಾರಿಗಳಿಗೆ ತಾತ್ಕಾಲಿಕವಾಗಿ ಈ ಸಂಸ್ಥೆಗಳ ಕಾರ್ಯಕಲಾಪ ಗಳನ್ನು ತಡೆಹಿಡಿಯುವ ಅಧಿಕಾರವಿರುತ್ತದೆ. ಈ ಸಂಸ್ಥೆಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಔದಾಸೀನ್ಯವನ್ನು ತೋರಿದರೆ, ತೃಪ್ತಿಕರವಾಗಿ ಕೆಲಸಮಾಡದಿದ್ದರೆ ತಾತ್ಕಾಲಿಕವಾಗಿ ಅವನ್ನು ರದ್ದುಮಾಡುವ, ಬೇರೆ ಇಲಾಖೆಯ ಮೂಲಕ ಅವು ಗಳ ಕಾರ್ಯವನ್ನು ಮಾಡಿಸುವ ಅಧಿಕಾರ ಸರ್ಕಾರಕ್ಕಿರತಕ್ಕದ್ದು.

ಮೇಲಿನ ತತ್ವಗಳಿಗೆ 'ಸಾಮಾನ್ಯ ಒಪ್ಪಿಗೆ ದೊರೆತರೆ ಅವುಗಳನ್ನು ಕೂಲಂಕಷವಾಗಿ ವಿಚಾರಮಾಡಿ ಒಂದು ಕಾಯಿದೆಯನ್ನು ಸರ್ಕಾರವು ಸಿದ್ಧಪಡಿಸುವುದು. ಇದರೊಂದಿಗೇ ದೊಡ್ಡ ಪಟ್ಟಣಗಳಲ್ಲಿ ಖಾಸಗಿ ಜನರನ್ನು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿ ಸಣ್ಣಪುಟ್ಟ ಅಪರಾಧಗಳ ವಿಚಾರಣೆಯನ್ನು ಅವರಿಗೆ ವಹಿಸುವ ವಿಚಾರ ಸರ್ಕಾರಕ್ಕಿದೆ.

ನಿಮ್ಮ ಹೆಚ್ಚಿನ ಸಮಯವನ್ನು ಈ ಮೇಲಿನ ಮುಖ್ಯವಾದ ವಿಷಯವನ್ನು ವಿವರಿಸುವುದಕ್ಕೆ ಉಪಯೋಗಿಸಿರುವುದರಿಂದ ನಿಮ್ಮ ಮುಂದೆ ಇಡಬೇಕಾದ ಇತರ ವಿಚಾರಗಳನ್ನು ನಾನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಬೇಕಾಗುತ್ತದೆ.

ಈ ಸಂಸ್ಥಾನದ ಹಣಕಾಸಿನ ಮುಗ್ಗಟ್ಟನ್ನು ಬಗೆಹರಿಸಲು, ಸರ್ಕಾರದ ನಾನಾ ಇಲಾಖೆಗಳಲ್ಲಿ ವ್ಯಾಪಕವಾಗಿ ಸಿಬ್ಬಂದಿಯನ್ನು ಕಡಿಮೆಮಾಡಿ ಉಳಿತಾಯವನ್ನು ಸಾಧಿಸಲಾದ ವಿಷಯವನ್ನು ಹಿಂದಿನ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ. ಈ ಖೋತಾ ಕ್ರಮವು ಇನ್ನೂ ಪೂರ್ಣವಾಗಿಲ್ಲ. ಇಷ್ಟರಲ್ಲೇ ಈ ಕಾರ್ಯ ಮುಗಿಯುವುದಾಗಿದೆ. ಆಗ ಎಷ್ಟು ಉಳಿತಾಯವಾಯಿತು ಎಂಬುದರ ಸಮಗ್ರಚಿತ್ರವನ್ನು ನಿಮಗೆ ನಾನು ಕೊಡಬಹುದು. ಇನ್ನೂ ಮಾಡಬೇಕೆಂದಿರುವ ಖೋತಾಕ್ರಮಗಳು ಈ ಕೆಳಗೆ ಕಂಡಂತಿವೆ.

ಗುಡಿಬಂಡೆ, ಶಿಡ್ಲಘಟ್ಟ, ಬೇತಮಂಗಲ, ದೇವನಹಳ್ಳಿ, ಕೊರಟಗೆರೆ, ಬೂದಿಹಾಳು, ಕನಕುಪ್ಪ, ಲಕ್ಕವಳ್ಳಿ ಮತ್ತು ನರಸೀಪುರ ತಾಲ್ಲೂಕುಗಳನ್ನು ರದ್ದುಮಾಡಿ ಅಮಲ್ದಾರರ ಮತ್ತು ಪೋಲೀಸ್ ಇನ್‌ಸ್ಪೆಕ್ಟರುಗಳ ಕಾರ್ಯವನ್ನು ಮಾಡುವ ಉಪ ಅಮಲ್ದಾರರನ್ನು ಈ ತಾಲ್ಲೂಕುಗಳ ಮುಖ್ಯಸ್ಥಳಗಳಲ್ಲಿ ನಿಯಮಿಸಲಾಗುತ್ತದೆ.

ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ರದ್ದುಮಾಡಲಾಗುತ್ತದೆ. ದಾವಣಗೆರೆ ತಾಲ್ಲೂಕನ್ನು ಬಿಟ್ಟು ಚಿತ್ರದುರ್ಗ ಜಿಲ್ಲೆಯನ್ನು ಶಿವಮೊಗ್ಗ ಜಿಲ್ಲೆಗೆ ಸೇರಿಸಲಾಗುವುದು. ದಾವಣಗೆರೆ ತಾಲ್ಲೂಕನ್ನು ತುಮಕೂರು ಜಿಲ್ಲೆಗೆ ಸೇರಿಸಲಾಗುವುದು. ವಾಸ್ತವವಾಗಿ ಹೆಚ್ಚಿನ ಸಾಮರ್ಥ್ಯವುಳ್ಳ ಉಪಜಿಲ್ಲಾಧಿಕಾರಿಗಳನ್ನು ಬಹುಮಟ್ಟಿಗೆ ಸ್ವತಂತ್ರವಾದ ಅಧಿಕಾರವನ್ನು ಕೊಟ್ಟು ಈ ಜಿಲ್ಲೆಗಳ ಆಡಳಿತವನ್ನು ನಿರ್ವಹಿಸಲು ನಿಯಮಿಸಲಾಗುವುದು. ಅವರಿಗೆ ಖಜಾನೆಯ ಮತ್ತು ಸೆರಮನೆಯ

ವ್ಯವಹಾರದ ಜವಾಬ್ದಾರಿಯಿರುವುದಿಲ್ಲ. ಈ ಕ್ರಮದಿಂದ, ರದ್ದುಪಡಿಸಲಾದ ಜಿಲ್ಲೆಗಳಲ್ಲಿ ಈಗ ಇರುವುದಕ್ಕಿಂತ ದಕ್ಷವಾದ ಆಡಳಿತವನ್ನು ಏರ್ಪಡಿಸಲು ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ. ಸಿಬ್ಬಂದಿವರ್ಗದ ಖರ್ಚು ಇದರಿಂದ ಹೆಚ್ಚಾಗಿ ಉಳಿತಾಯವಾಗುತ್ತದೆ. ಹಾಸನಜಿಲ್ಲೆಯ ಉತ್ತರಭಾಗದ ನಾಲ್ಕು ತಾಲ್ಲೂಕುಗಳಾದ ಮಂಜರಾಬಾದ್, ಹಾಸನ, ಬೇಲೂರು, ಅರಸೀಕೆರೆಗಳನ್ನು ಹೀಗೆಯೇ ಸ್ವತಂತ್ರ ಉಪಜಿಲ್ಲಾಧಿಕಾರಿಯ ಆಡಳಿತಕ್ಕೆ ವಹಿಸಲಾಗುವುದು. ಹಣಕಾಸಿನ ಆಡಳಿತಕ್ಕೆ ಸಂಬಂಧಪಟ್ಟಂತೆ ಅವನ್ನು ಸಣ್ಣದಾದ ಕಡೂರು ಜಿಲ್ಲೆಗೆ ಸೇರಿಸಲಾಗುವುದು. ಹೀಗೆಯೇ ಹಾಸನ ಜಿಲ್ಲೆಯ ದಕ್ಷಿಣಾರ್ಧಭಾಗದ ನಾಲ್ಕುತಾಲ್ಲೂಕುಗಳಾದ ಅರಕಲಗೂಡು, ಚೆನ್ನರಾಯಪಟ್ಟಣ, ನಾಗಮಂಗಲ ಮತ್ತು ಅತ್ತಿಕುಪ್ಪೆ ಇವುಗಳನ್ನೂ, ಮಂಡ್ಯ ತಾಲ್ಲೂಕನ್ನೂ ಸೇರಿಸಿ ಫ್ರೆಂಚ್‌ರಾಕ್ಸ್‌ನಲ್ಲಿ ಉಪಜಿಲ್ಲಾಧಿಕಾರಿಯ ಕಛೇರಿಯನ್ನು ತೆರೆದು ಅದಕ್ಕೆ ಅವುಗಳನ್ನು ಒಳಪಡಿಸಿ ಆ ತಾಲ್ಲೂಕುಗಳನ್ನು ಮೈಸೂರು ಜಿಲ್ಲೆಗೆ ಸೇರಿಸಲಾಗುವುದು.

ನ್ಯಾಯಾಂಗಇಲಾಖೆಯಲ್ಲಿಯೂ, ನ್ಯಾಯಾಲಯಗಳ ಸಂಖ್ಯೆ ಮಾಡಬೇಕಾದ ಕೆಲಸಕ್ಕಿಂತ ಜಾಸ್ತಿಯಿದೆ. ಕೂಡಲೇ ಈ ಇಲಾಖೆಯಲ್ಲಿ ನ್ಯಾಯಾಲಯಗಳ ಸಂಖ್ಯೆಯನ್ನು ಕಡಿಮೆಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಚಿಂತಾಮಣಿ, ಕ್ಲೋಸ್‌ಪೇಟೆ, ಹುಣಸೂರು ಮತ್ತು ದಾವಣಗೆರೆಗಳಲ್ಲಿರುವ ಮುನ್ಸಿಫ್ ಕೋರ್ಟುಗಳನ್ನು ರದ್ದುಮಾಡಿ ಹೆಚ್ಚಿನ ಕೆಲಸವಿಲ್ಲದೆ ಇರುವ ಪಕ್ಕದ ತಾಲ್ಲೂಕಿನ ಮುನ್ಸಿಫ್ ಕೋರ್ಟುಗಳಿಗೆ ಅವುಗಳ ಕೆಲಸವನ್ನು ವಹಿಸಲಾಗುವುದು.

ರದ್ದುಮಾಡಿರುವ ಜಿಲ್ಲೆಗಳ ಸಬ್‌ಜಡ್ಜ್ ನ್ಯಾಯಾಲಯಗಳನ್ನು ರದ್ದುಮಾಡಲಾಗುವುದು. ಕೋಲಾರದಲ್ಲಿರುವ ಸಬ್ ಕೋರ್ಟನ್ನು ರದ್ದುಪಡಿಸಿ ಅದರ ಕಾರ್ಯವನ್ನು ಬೆಂಗಳೂರಿನ ಸಬ್ ಕೋರ್ಟಿಗೆ ವಹಿಸಲಾಗುವುದು. ಕೋಲಾರ ಜಿಲ್ಲೆಯ ಹಲವು ತಾಲ್ಲೂಕುಗಳಿಗೆ ಬೆಂಗಳೂರು ಸಮೀಪದಲ್ಲಿರುವುದರಿಂದ, ಈ ಕ್ರಮ ತೆಗೆದುಕೊಳ್ಳಲಾಗಿದೆ. ಕಡೂರಿನವರೆಗೆ ರೈಲ್ವೆಯನ್ನು ವಿಸ್ತರಿಸಿದ ಮೇಲೆ ಇನ್ನೊಂದು ಸಬ್ ಕೋರ್ಟನ್ನು ರದ್ದುಪಡಿಸಲು ಸಾಧ್ಯವಾಗುವುದು

ಮೂವರು ಜಿಲ್ಲಾ ನ್ಯಾಯಾಧೀಶರು ಕೆಲವು ಕಾಲದವರೆಗೆ ಇರುತ್ತಾರೆ. ಇಬ್ಬರು ಯೂರೋಪಿಯನ್ ಜಿಲ್ಲಾ ನ್ಯಾಯಾಧೀಶರನ್ನು ಶ್ರೇಷ್ಠ ನ್ಯಾಯಸ್ಥಾನಕ್ಕೆ

ತೆಗೆದುಕೊಳ್ಳುವವರೆಗೆ ಕಡಿಮೆ ಸಂಬಳದ ದೇಶೀಯ ಅಧಿಕಾರಿಗಳನ್ನು ಆ ಸ್ಥಳದಲ್ಲಿ ಇಡಲಾಗುವುದು. ಶ್ರೇಷ್ಠನ್ಯಾಯಸ್ಥಾನದ ಮೂವರು ನ್ಯಾಯಾಧೀಶರು ಕೆಳ ನ್ಯಾಯಸ್ಥಾನಗಳ ತೀರ್ಮಾನಗಳ ವಿರುದ್ಧ ಅಪೀಲುಗಳನ್ನು ಕೇಳುವ ತಮ್ಮ ಕರ್ತವ್ಯದ ಜೊತೆಗೆ ಇಡೀ ಸಂಸ್ಥಾನದ ಸೆಷನ್ಸ್ ಮೊಖದ್ದಮೆಗಳನ್ನು ತೀರ್ಮಾನಿಸುವ ಕಾರ್ಯವನ್ನು ಸುಲಭವಾಗಿ ನಿರ್ವಹಿಸಬಹುದು. ದೂರದ ಜಿಲ್ಲೆಗಳಲ್ಲಿರುವ ಸಬ್ ಜಡ್ಜ್ ಗಳಿಗೆ ಉಪಸೆಷನ್ಸ್ ನ್ಯಾಯಾಧೀಶರ ಅಧಿಕಾರವನ್ನು ವಹಿಸಬಹುದು.

ಈ ಸುಧಾರಣೆಗಳ ಒಂದಿಗೇ ಕಕ್ಷಿಗಾರವರ್ಗಕ್ಕೆ ಬಹು ನಷ್ಟವನ್ನುಂಟು ಮಾಡುತ್ತಿರುವ ಕೆಳನ್ಯಾಯಸ್ಥಾನದ ತೀರ್ಮಾನದ ವಿರುದ್ಧ ಅದರ ಮೇಲಿನ ನ್ಯಾಯಸ್ಥಾನಕ್ಕೂ, ಆ ನ್ಯಾಯಸ್ಥಾನದ ತೀರ್ಮಾನದ ವಿರುದ್ಧ ಶ್ರೇಷ್ಠನ್ಯಾಯ ಸ್ಥಾನಕ್ಕೂ ಅಪೀಲನ್ನು ಹಾಕುವ ವ್ಯವಸ್ಥೆಯನ್ನು ತೆಗೆದುಹಾಕುವ ಆಲೋಚನೆಯನ್ನು ಮಾಡಲಾಗುತ್ತಿದೆ. ಸಬ್ ಜಡ್ಜರ ತೀರ್ಮಾನದಿಂದ ನೇರವಾಗಿ ಶ್ರೇಷ್ಠ ನ್ಯಾಯಸ್ಥಾನಕ್ಕೆ ಒಂದೇ ಅಪೀಲು ಇರುವಂತೆ ಏರ್ಪಡಿಸಲಾಗುವುದು. ಮುನ್ಸೀಫರಲ್ಲಿ ದಾಖಲಾದ ಮೊಖದ್ದಮೆಗಳ ತೀರ್ಮಾನದ ವಿರುದ್ಧ ಮೊದಲನೇ ಅಪೀಲಿಗೆ ಸಬ್ ಜಡ್ಜರಲ್ಲಿಗೆ ಹೋಗಬೇಕು. ಸಬ್ ಜಡ್ಜರು ಮುನ್ಸೀಫರ ತೀರ್ಮಾನಕ್ಕೆ ವಿರುದ್ಧವಾಗಿ ತೀರ್ಮಾನ ಕೊಟ್ಟರೆ, ಅಂತಹ ಸಂದರ್ಭಗಳಲ್ಲಿ ಶ್ರೇಷ್ಠ ನ್ಯಾಯ ಸ್ಥಾನಕ್ಕೆ ಸ್ಟಾಂಪ್ ವೆಚ್ಚವಿಲ್ಲದೆ ಎರಡನೇ ಅಪೀಲನ್ನು ಮಾಡುವುದಕ್ಕೆ ಅವಕಾಶ ಕೊಡಲಾಗುವುದು. ಸಬ್ ಜಡ್ಜರು ಮುನ್ಸೀಫರ ತೀರ್ಮಾನವನ್ನೇ ಎತ್ತಿಹಿಡಿದರೆ ಸೋತ ಪಕ್ಷವು ಶ್ರೇಷ್ಠನ್ಯಾಯಸ್ಥಾನಕ್ಕೆ ಅಹವಾಲು ಮಾಡಬೇಕಾದರೆ ಸ್ಟಾಂಪ್ ವೆಚ್ಚವನ್ನು ಮಾಡಬೇಕಾಗುವುದು. ಶ್ರೇಷ್ಠನ್ಯಾಯಸ್ಥಾನದಲ್ಲಿ ಅಪೀಲು ಹಾಕಿದವನಿಗೆ ಅನುಕೂಲವಾಗಿ ತೀರ್ಮಾನವಾದರೆ ಸ್ಟಾಂಪ್ ವೆಚ್ಚವನ್ನು ಪ್ರತಿಕಕ್ಷಿಯು ಕೊಡಬೇಕಾಗುವುದಿಲ್ಲ. ಇಂತಹ ಎರಡನೇ ಅಪೀಲುಗಳಲ್ಲಿ ಕಾನೂನಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನೂ, ಮೊಕದ್ದಮೆಯ ವಿದ್ಯಮಾನಗಳಿಗೆ ಸಂಬಂಧಪಟ್ಟ ಇತರ ಪ್ರಶ್ನೆಗಳನ್ನೂ ಶ್ರೇಷ್ಠನ್ಯಾಯಸ್ಥಾನವು ತೀರ್ಮಾನಿಸತಕ್ಕದ್ದು. ಈ ಅಪೀಲುಗಳಲ್ಲಿ ಶ್ರೇಷ್ಠನ್ಯಾಯಸ್ಥಾನವು ಕೇವಲ ಕಾನೂನಿನ ಪ್ರಶ್ನೆಯನ್ನು ಮಾತ್ರ ಪರಿಶೀಲಿಸತಕ್ಕದ್ದು ಎಂಬ ಪರಿಮಿತಿಯನ್ನು ಕಲ್ಪಿಸುವುದರಿಂದ ಎಷ್ಟೋ ಸಂದರ್ಭಗಳಲ್ಲಿ ನ್ಯಾಯ ದೊರಕದೇ ಹೋಗುತ್ತದೆ. ಅಲ್ಲದೇ ಹೆಚ್ಚಿನ ಸ್ಥಾನಮಾನವುಳ್ಳ ಇಬ್ಬರು ನ್ಯಾಯಾಧೀಶರು, ಕಾನೂನಿನ ಪ್ರಶ್ನೆಗಳನ್ನೂ, ಮೊಖದ್ದಮೆಯ ವಿದ್ಯಮಾನ

ಗಳನ್ನೂ ಕಾನೂನಿಗೆ ಮೀರಿದ ಧರ್ಮತತ್ವದ ದೃಷ್ಟಿಯಿಂದ ವಿಮರ್ಶಿಸುವುದರಿಂದ ಉಂಟಾಗುವ ಅನುಕೂಲ್ಯವು ಕಕ್ಷಿಗಾರನಿಗೆ ತಪ್ಪಿಹೋಗುತ್ತದೆ.

ಮೇಲೆ ಹೇಳಿದಂತೆ ಖರ್ಚನ್ನು ಕಡಿಮೆಮಾಡುವುದರಿಂದ ವರ್ಷಕ್ಕೆ ಸುಮಾರು ಎರಡು ಲಕ್ಷ ರೂಪಾಯಿಗಳು ಉಳಿತಾಯವಾಗುವುದೆಂದು ಅಂದಾಜುಮಾಡ ಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಖೈದಿಗಳು ಇಲ್ಲದಿರುವುದರಿಂದ ಈಗಿರುವ ಎಂಟು ಜಿಲ್ಲಾ ಬಂದೀಖಾನೆಗಳಲ್ಲಿ ಐದನ್ನು ತೆಗೆದುಹಾಕುವುದರಿಂದಲೂ, ಮಿತಿಮೀರಿದ ಪ್ರಮಾಣದಲ್ಲಿ ನಡೆಸುತ್ತಿರುವ ಅಂಚೆ ಕಛೇರಿಗಳನ್ನು ಪುನರ್ವ್ಯವಸ್ಥೆಗೊಳಿಸುವುದ ರಿಂದಲೂ, ಯೂರೋಪಿಯನ್ ಪ್ರವಾಸಿಗಳು ಬಹು ಅಪರೂಪವಾಗಿ ಉಪಯೋಗಿ ಸುವ ಅನೇಕ ಪ್ರವಾಸಿಮಂದಿರಗಳ ಸಿಬ್ಬಂದಿಯನ್ನು ವಜಾಮಾಡುವುದರಿಂದಲೂ, ಹಲವು ಛತ್ರಗಳಲ್ಲಿ ತುಂಬ ದುರುಪಯೋಗಕ್ಕೆ ಅವಕಾಶವನ್ನಿತ್ತಿರುವ ಅನ್ನಾಹಾರ ಗಳ ವ್ಯವಸ್ಥೆಯನ್ನು ತೆಗೆದುಹಾಕುವುದರಿಂದಲೂ, ಇನ್ನೂ ಹೆಚ್ಚಿನ ಉಳಿತಾಯ ವನ್ನು ಮಾಡಬಹುದೆಂದು ಅಂದಾಜುಮಾಡಲಾಗಿದೆ. ಛತ್ರಗಳಲ್ಲಿ ಅನ್ನಾಹಾರ ವ್ಯವಸ್ಥೆಯನ್ನು ತೆಗೆದುಹಾಕುವುದರಿಂದ ಆಗುವ ಉಳಿತಾಯವನ್ನು ಅಧಿಕಸಂಖ್ಯೆ ಯಲ್ಲಿ ಬರುವ ದೇಶೀಯ ಪ್ರವಾಸಿಗರ ವಸತಿ ಸೌಕರ್ಯವನ್ನು ಉತ್ತಮಗೊಳಿಸಲು ಉಪಯೋಗಿಸಲಾಗುವುದು.

ವೈದ್ಯಕೀಯ ಮತ್ತು ಲೋಕೋಪಯೋಗಿ ಇಲಾಖೆಗಳನ್ನು ಕಾರ್ಯವ್ಯವ ಸ್ಥೆಯ ದೃಷ್ಟಿಯಿಂದ ಪುನರ್ವ್ಯವಸ್ಥೆ ಮಾಡಬೇಕಾಗುತ್ತದೆ. ಅವುಗಳಲ್ಲಿ ಮಾಡ ಬೇಕಾದ ಉಳಿತಾಯವನ್ನು ಆಗಲೇ ಮಾಡಲಾಗಿದೆ. ಮುದ್ರಣ ವ್ಯವಸ್ಥೆಯನ್ನು ಪರಿಶೀಲಿಸಬೇಕಾಗಿದೆ.

ಮೈಸೂರು ರೈಲ್ವೆಮಾರ್ಗ ಉಪಯೋಗಕ್ಕೆ ಸಂಪೂರ್ಣವಾಗಿ ಸಿದ್ಧವಾಗಿದೆ. ಈ ಮಾರ್ಗದಲ್ಲಿ ಕಡಿದಾದ ಏರುತಗ್ಗುಗಳಿದ್ದರೂ ಅತ್ಯುತ್ತಮವಾದ ರೈಲುಮಾರ್ಗ ಗಳಲ್ಲಿ ಅದೊಂದು ಎಂದು ಸಮರ್ಥರಾದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಏರುತಗ್ಗುಗಳನ್ನು ತಪ್ಪಿಸುವುದು ಸಾಧ್ಯವಿರಲಿಲ್ಲ. ಈಗಿನ ದಸರಾ ಉತ್ಸವ ಕಾಲ ದಲ್ಲಿ ಪ್ರಯಾಣಿಕರು ಈ ರೈಲ್ವೆ ವ್ಯವಸ್ಥೆಯನ್ನು ಬಳಸುತ್ತಿರುವುದನ್ನು ನೋಡಿದರೆ, ರಾಜ್ಯಕ್ಕೆ ಅದು ಎಂತಹ ವರವಾಗಿ ಪರಿಣಮಿಸಿದೆ ಎಂಬುದನ್ನು ನೀವೇ ತೀರ್ಮಾನಿ ಸಬಹುದು. ಈ ರೈಲುಮಾರ್ಗಕ್ಕೆ ವೆಚ್ಚ 35½ ಲಕ್ಷ ರೂಪಾಯಿ ಎಂದು ಅಂದಾಜು

ಮಾಡಲಾಗಿದ್ದಿತು. ಆದರೆ ಈಗ ಲೆಕ್ಕದ ಹೊಂದಾಣಿಕೆ ಮುಗಿದ ಮೇಲೆ, ಉಳಿದಿರುವ ಕೆಲವು ಕಟ್ಟಡಗಳ ನಿರ್ಮಾಣಕಾರ್ಯ ಪೂರ್ಣವಾದ ಮೇಲೆ ವೆಚ್ಚ 43 ಲಕ್ಷ ರೂಪಾಯಿಗಳಾಗುತ್ತದೆ. ಅಥವಾ ಈ ವೆಚ್ಚ ಮೈಲಿಗೆ 50 ಸಾವಿರ ರೂಪಾಯಿ ಆಗುತ್ತದೆ. ಮೊದಲಿನ ಅಂದಾಜಿನಲ್ಲಿ ಮೊದಲನೆಯ ವರ್ಷದಲ್ಲಿ ಮಾರ್ಗವನ್ನು ದುರಸ್ತಿಯಲ್ಲಿಡುವ ವೆಚ್ಚವನ್ನು ಹೂಡಿದ ಬಂಡವಾಳದ ಲೆಕ್ಕದಲ್ಲಿ ಸೇರಿಸದಿದ್ದುದರಿಂದಲೂ, ಹೆಚ್ಚಿನ ರೈಲು ಬಂಡಿಗಳನ್ನೂ ಮತ್ತು ಎಂಜಿನ್ನುಗಳನ್ನೂ ಒದಗಿಸಬೇಕಾಗಿ ಬಂದಿದ್ದರಿಂದಲೂ, ಅಂದಾಜಿಗಿಂತ ಹೆಚ್ಚು ವೆಚ್ಚ ಸೇತುವೆಗಳಿಗೂ ಇತರ ಕಾಮಗಾರಿ ಕೆಲಸಗಳಿಗೂ ಉಂಟಾದ್ದರಿಂದಲೂ ಹೆಚ್ಚು ವ್ಯಯ ಸಂಭವಿಸಿತು. ಆದಾಗ್ಯೂ ಇದನ್ನು ಅತಿ ಹೆಚ್ಚು ವೆಚ್ಚದ ರೈಲ್ವೆಮಾರ್ಗವೆಂದು ಪರಿಗಣಿಸಲಾಗುವುದಿಲ್ಲ. ಮಿತವ್ಯಯದಿಂದ ನಿರ್ವಹಿಸುತ್ತಿರುವುದರಿಂದ ಈಗಾಗಲೆ ಬಂಡವಾಳದ ಮೇಲೆ ಶೇಕಡ 3 ರಷ್ಟು ನಿವ್ವಳ ಆದಾಯ ರೈಲು ಮಾರ್ಗದಿಂದ ಬರುತ್ತಿದೆ. ವಸ್ತುಗಳ ಸಾಗಾಣಿಕೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಆಗದಿದ್ದರೂ ಈ ಆದಾಯ ಬರುತ್ತಿದೆ. ಈ ಮಾರ್ಗಕ್ಕೆ ತಗಲುವ ವೆಚ್ಚವನ್ನು ಒಟ್ಟು ಆದಾಯದಲ್ಲಿ ಶೇಕಡ 50 ಕ್ಕಿಂತ ಕಡಿಮೆಯಾಗಿರುವಂತೆ ಇಡಲಾಗಿದೆ. ಕಳೆದ ಮೂರುತಿಂಗಳ ಆದಾಯವನ್ನು ಪರಿಶೀಲಿಸಿದರೆ ಪ್ರಯಾಣಿಕರ ಸಾಗಾಣಿಕೆಯಿಂದ ವರ್ಷಕ್ಕೆ ಎರಡು ಲಕ್ಷ ರೂಪಾಯಿ ಆದಾಯ ನಿರೀಕ್ಷಿಸಬಹುದಾಗಿದೆ. ಅಥವಾ ವಾರಕ್ಕೆ ಪ್ರತಿ ಮೈಲಿಗೆ 50 ರೂಪಾಯಿ ಆದಾಯವಾಗುತ್ತದೆ. ವಸ್ತುಗಳ ಸಾಗಾಣಿಕೆಯಿಂದಲೂ ಇಷ್ಟೇ ಆದಾಯ ಬಂದರೆ, ವೆಚ್ಚವನ್ನು ಒಟ್ಟು ಆದಾಯದ ಶೇಕಡ 50ರೊಳಗೇ ಇರುವಂತೆ ಮಿತಿಗೊಳಿಸಿದರೆ, ಒಟ್ಟು ಬಂಡವಾಳದ ಮೇಲೆ ಶೇಕಡ 5 ರಷ್ಟು ನಿವ್ವಳ ಆದಾಯ ಬರುತ್ತದೆ. ಈ ಮಾರ್ಗದ ಮೇಲೆ ಅಧಿಕ ಬಂಡವಾಳವನ್ನು ಹಾಕಿದ್ದರೂ ಇಷ್ಟು ಆದಾಯ ಬರುತ್ತದೆ. ಹಾಲಿಆದಾಯದಿಂದಲೂ, ಬ್ರಿಟಿಷ್ ಸರ್ಕಾರಕ್ಕೆ ಪೊಗದಿಯನ್ನು ಕೊಡಲು ಕಂದಾಯ ವಸೂಲಿಯಾಗದ ತಿಂಗಳುಗಳಲ್ಲಿ ಕೂಡಿಟ್ಟಿದ್ದ ಹೆಚ್ಚಿನ ನಗದು ಹಣದಿಂದಲೂ ರೈಲು ಮಾರ್ಗವನ್ನು ಪೂರೈಸಲಾಗಿದೆ. ವಸೂಲಿ ಕಾಲವಾದ ಜನವರಿ ಮಾರ್ಚಿ ತಿಂಗಳುಗಳಲ್ಲಿ ವಾರ್ಷಿಕ ಪೊಗದಿಯಾದ 24½ ಲಕ್ಷ ರೂಪಾಯಿಗಳನ್ನು, ಎರಡು ಸಮವಾದ ಕಂತುಗಳಲ್ಲಿ ತೆಗೆದುಕೊಳ್ಳುವ ವ್ಯವಸ್ಥೆಗೆ ಭಾರತಸರ್ಕಾರ ಒಪ್ಪಿದೆ. ಇದರಿಂದ ಕಡಿಮೆ ನಗದು ಹಣ ಖಜಾನೆಯಲ್ಲಿದ್ದರೂ ಆಡಳಿತವನ್ನು ತೂಗಿಸಲಾಗುತ್ತದೆ.

ಉಳಿದಿರುವ ಸ್ವಲ್ಪ ಸಾಲವನ್ನು ಈ ವರ್ಷ ಪ್ರಸಕ್ತ ಆದಾಯದಿಂದ ತೀರಿಸಲಾಗುವುದು. ಮುಂದಿನ ವರ್ಷದಿಂದ ಯಾವ ಸಾಲದ ಭಾರವೂ ಇಲ್ಲದೇ ಸಂಸ್ಥಾನವು ರೈಲುಮಾರ್ಗದ ಒಡೆತನವನ್ನು ಹೊಂದುವುದು. ಮೈಸೂರು ರೈಲಿನ ಆದಾಯದಿಂದ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳು ಸಂಸ್ಥಾನದ ಆದಾಯಕ್ಕೆ ಸೇರುವುದು.

ಕಳೆದ ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ ನಾನು ಸಂಸ್ಥಾನದಲ್ಲಿ ಎಲ್ಲಿ ರೈಲುಮಾರ್ಗಗಳು ಅವಶ್ಯಕವಾಗಿವೆ ಎಂಬ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಆಗ ಪ್ರಸ್ತಾಪಮಾಡಿದ ಮಾರ್ಗಗಳಲ್ಲಿ ಈಗ ಸುಮಾರು 85 ಮೈಲಿ ಉದ್ದದ ಬೆಂಗಳೂರು–ತಿಪಟೂರು ರೈಲುಮಾರ್ಗದ ಕಾರ್ಯವನ್ನು ಮಾತ್ರ ಕೈಗೊಳ್ಳಲಾಗುತ್ತದೆ. ಇದಕ್ಕಾಗಿ 20 ಲಕ್ಷ ರೂಪಾಯಿಗಳ ಸಾಲವನ್ನೆತ್ತಲು ಭಾರತ ಸರ್ಕಾರ ಒಪ್ಪಿಗೆಯನ್ನು ಕೊಟ್ಟಿದೆ. ಶೇಕಡ 5ರ ಬಡ್ಡಿಯನ್ನು ಕೊಡುವ ಈ ಸಾಲವನ್ನು ಎತ್ತುವ ಪ್ರಯತ್ನ ಯಶಸ್ವಿಯಾಗಿದೆ. ಶೇಕಡ ೨೨ ರಷ್ಟು ಸಾಲಪತ್ರಗಳಿಗೆ ಬೇಡಿಕೆ ಬಂದಿದೆ. ಸಾಲಪತ್ರಗಳಿಗೆ ಅವುಗಳ ಮುಖಬೆಲೆಗಿಂತ ಶೇಕಡ 1 ರಷ್ಟು ಹೆಚ್ಚು ಬೆಲೆ ಮಾರುಕಟ್ಟೆಯಲ್ಲಿದೆ. ಪ್ರೆಸಿಡೆನ್ಸಿ ಬ್ಯಾಂಕುಗಳ ಶಾಸನದ ಪ್ರಕಾರ ಪ್ರೆಸಿಡೆನ್ಸಿ ಬ್ಯಾಂಕುಗಳು ಸಾಲಕ್ಕೆ ಚಂದಾ ಕೊಡಲು ಅವಕಾಶವಿಲ್ಲದ್ದರಿಂದ ಭಾರತದಾದ್ಯಂತ ಇರುವ ತಮ್ಮ ಶಾಖೆಗಳಲ್ಲಿ ಸಾಲಪತ್ರಗಳಿಗೆ ಬಂದ ಬೇಡಿಕೆಯನ್ನು ಸ್ವೀಕರಿಸುವ ಮತ್ತು ಬಡ್ಡಿ ವಿತರಣೆ ಮಾಡುವ ಬಗೆಗೆ ಆ ಬ್ಯಾಂಕುಗಳೊಂದಿಗೆ ನಾವು ಒಪ್ಪಂದ ಮಾಡಿಕೊಂಡಿದ್ದರೂ, ಅವೇ ನೇರವಾಗಿ ಸಾಲಕ್ಕೆ ಚಂದಾ ಕೊಡಲಾಗಲಿಲ್ಲ. ಇತರ ಬ್ಯಾಂಕುಗಳೂ ದೂರವಾಗಿಯೇ ಉಳಿದವು. ಶೇಕಡ ಅರ್ಧದಷ್ಟು ಸಾಲಕ್ಕೆ ಖಾಸಗಿ ಇಂಗ್ಲಿಷ್ ಮತ್ತು ಭಾರತೀಯ ಮಹನೀಯರಿಂದ ಮದ್ರಾಸ್, ಕಲ್ಕತ್ತಾ, ಬೊಂಬಾಯಿ, ಅಲಹಾಬಾದ್, ಪೇಶಾವರ್, ಕರಾಚಿ, ಅಹಮದಾಬಾದ್ ಮತ್ತಿತರ ಸ್ಥಳಗಳಿಂದ ಬೇಡಿಕೆಗಳು ಬಂದವು. ಆದರೆ ಗಮನಾರ್ಹವಾದ ವಿಷಯವೆಂದರೆ, ಶಿವಮೊಗ್ಗ, ಕಡೂರು, ತುಮಕೂರು ಜಿಲ್ಲೆಗಳ ರೈತರು ಮತ್ತು ವ್ಯಾಪಾರಿಗಳು ಸಣ್ಣ ಮೊತ್ತಗಳಲ್ಲಿ ಹೆಚ್ಚಿನ ಮೊಬಲಗಳನ್ನು ಈ ಸಾಲಕ್ಕೆ ಚಂದಾ ಕೊಟ್ಟಿದ್ದಾರೆ. ಈ ರೈಲಿನ ಅನುಕೂಲ್ಯವನ್ನು ಅವರು ಮೆಚ್ಚಿಕೊಂಡಿರುವುದಕ್ಕೆ ಇದು ನಿದರ್ಶನವಾಗಿದೆ.

ತಿಪಟೂರು ರೈಲುಮಾರ್ಗದಲ್ಲಿ ಹೆಚ್ಚು ತಿರುವುಗಳಿಲ್ಲದಿರುವುದರಿಂದಲೂ, ಅಷ್ಟು ಕಡಿದಾದ ಏರುತಗ್ಗುಗಳಿಲ್ಲದಿರುವುದರಿಂದಲೂ ಮೈಸೂರು ಮಾರ್ಗಕ್ಕಿಂತ

ಸುಲಭವಾಗಿ ಅದನ್ನು ಪೂರೈಸಬಹುದೆಂದು ನಿರೀಕ್ಷಿಸಬಹುದಾಗಿದೆ. ಮೈಲಿಗೆ 40,000 ರೂಪಾಯಿಗಳಂತೆ ತಿಪಟೂರು ಮಾರ್ಗಕ್ಕೆ 34 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಆದ್ದರಿಂದ ಸಾರ್ವಜನಿಕ ಸಾಲದಿಂದ ಬಂದ ಹಣದ ಜೊತೆಗೆ ಸರ್ಕಾರದ ಹಾಲಿ ಆದಾಯದಿಂದ 14 ಲಕ್ಷ ರೂಪಾಯಿಗಳನ್ನು ಕೆಲಸವನ್ನು ಪೂರ್ತಿ ಮಾಡುವುದಕ್ಕಾಗಿ ಹೊಂದಿಸಬೇಕಾಗುತ್ತದೆ. ಮುಂದೆ 40 ಮೈಲಿಗಳ ದೂರದಲ್ಲಿರುವ ಕಡೂರಿಗೆ ಈ ಮಾರ್ಗವನ್ನು ವಿಸ್ತರಿಸಿದಲ್ಲದೇ ಅದರ ಪೂರ್ಣ ಪ್ರಯೋಜನವನ್ನು ಪಡೆಯಲಾಗುವುದಿಲ್ಲ. ಆಗ ಕಾಫಿ ಬೆಳೆಯುವ ಜಿಲ್ಲೆಯಾದ ಕಡೂರಿಗೂ ಮತ್ತು ಅಡಕೆಯ ವ್ಯಾಪಾರದ ಕೇಂದ್ರವಾದ ಬೀರೂರಿಗೂ ಸಂಪರ್ಕ ಕಲ್ಪಿಸಿದಂತಾಗುತ್ತದೆ. ಅಲ್ಲದೇ ಶಿವಮೊಗ್ಗದೊಂದಿಗೂ ಹತ್ತಿರದ ಸಂಪರ್ಕ ಉಂಟಾಗುತ್ತದೆ. ಇನ್ನು ಮುಂದೆ ಸ್ಥಳೀಯವಾಗಿ ಹತ್ತು ಲಕ್ಷ ರೂಪಾಯಿಗಳ ಸಾಲ ಎತ್ತಲು ಅನುಮತಿ ದೊರೆತರೆ ಪ್ರಸಕ್ತ ಆದಾಯದಿಂದ ಮಿಕ್ಕ ಹಣವನ್ನು ಹೊಂದಿಸಿಕೊಂಡು ಈ ಕಾರ್ಯವನ್ನು ಕ್ರಮೇಣ ಪೂರೈಸಬಹುದು. ಈ ಮಾರ್ಗವನ್ನು ಹುಬ್ಬಳ್ಳಿ, ಗೋವಾ ಮತ್ತು ಬಳ್ಳಾರಿ ಮಾರ್ಗಗಳಿಗೆ ಸೇರಿಸುವ ವಿಷಯವನ್ನು ಮುಂದೆ ಆಲೋಚಿಸಬಹುದು.

ಸ್ಥಿರಮಾರ್ಗವನ್ನು ರಚಿಸುವ ಕಾರ್ಯದ ಹೊರತಾಗಿ ಮಿಕ್ಕ ಕೆಲಸಗಳನ್ನೆಲ್ಲ ಸಾಕಷ್ಟು ಹಣಕಾಸಿನ ಅನುಕೂಲವುಳ್ಳ, ಗೌರವಸ್ಥರಾದ ದೇಶೀಯ ಕಂಟ್ರಾಕ್ಟರುಗಳಿಗೆ ಸರ್ಕಾರಕ್ಕೆ ಅನುಕೂಲಕರವಾದ ಕರಾರುಗಳ ಮೇಲೆ ವಹಿಸಲಾಗಿದೆ. ಈ ಕೆಲಸಕ್ಕೆ ಬೇಕಾಗುವ ವಸ್ತುಗಳನ್ನು ಸರಬರಾಜು ಮಾಡಲು ಇಂಗ್ಲಿಷ್ ವಾಣಿಜ್ಯ ಸಂಸ್ಥೆಯೊಂದರೊಂದಿಗೆ ಮೈಸೂರು ಮಾರ್ಗಕ್ಕಿಂತ ಸರ್ಕಾರಕ್ಕೆ ಅನುಕೂಲಕರವಾದ ಷರತ್ತುಗಳ ಮೇಲೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇಲ್ಲಿಯ ತೇಗದ ಕಾಡುಗಳಿಂದ ಲೋಹದ ಕಂಬಿಗಳಿಗೆ ಆಸರೆಯಾಗಿರುವ ಮರದ ದಿಮ್ಮಿಗಳನ್ನು (ಸ್ಲೀಪರ್ಸ್) ಪಡೆಯಲು ಉದ್ದೇಶಿಸಲಾಗಿದೆ.

ರೈಲ್ವೆಮಾರ್ಗಗಳನ್ನು ನಿರ್ಮಿಸುವುದರಿಂದ ಜನಗಳಿಗೆ ತುರ್ತಾಗಿ ಬೇಕಾದ ಸಂಚಾರ, ಸಂಪರ್ಕಾನುಕೂಲತೆಗಳನ್ನು ಕಲ್ಪಿಸುವುದಲ್ಲದೇ, ರೈಲ್ವೆಗಳನ್ನು ಎಳೆಯುವ ಎಂಜಿನ್‌ಗಳನ್ನೂ, ರೈಲ್ವೆಗೆ ಸಂಬಂಧಪಟ್ಟ ಇತರ ಯಂತ್ರಗಳನ್ನೂ ಉಪಯೋಗಿಸುವ ಬಗೆಗೆ ದೇಶೀಯರಿಗೆ ತರಬೇತು ಕೊಡುವುದೂ ಸರ್ಕಾರದ ಉದ್ದೇಶವಾಗಿದೆ. ಜನರಲ್ಲಿ ಇದರಿಂದ ಯಂತ್ರಗಳನ್ನು ಉಪಯೋಗಿಸುವ ಅಭ್ಯಾಸ

ಹೆಚ್ಚಾಗಿ ಹರಡುವಂತೆ ಮಾಡುವುದೂ ಸರ್ಕಾರದ ಉದ್ದೇಶವಾಗಿದೆ. ಈ ದೃಷ್ಟಿಯಿಂದ ನೋಡಿದರೆ ಸರ್ಕಾರ ತುಮಕೂರು ಮಾರ್ಗವನ್ನು ನಿರ್ಮಿಸುವುದಕ್ಕೆ ದೇಶೀಯ ಕಂಟ್ರಾಕ್ಟರುಗಳನ್ನು ಗೊತ್ತು ಮಾಡಿರುವುದು ಸರಿಯಾದ ಕ್ರಮವಾಗಿದೆ. ಇದರಿಂದ ಇತರ ರೈಲುಮಾರ್ಗಗಳನ್ನು ನಿರ್ಮಿಸಲು ಈ ಕಂಟ್ರಾಕ್ಟರುಗಳಿಗೆ ಪ್ರೋತ್ಸಾಹ ದೊರಕುತ್ತದೆ.

ರೈಲ್ವೆ ಎಂಜಿನ್ನು, ಇಂಜನಿಯರಿಂಗ್ ಮತ್ತು ಸಂಚಾರ ಇಲಾಖೆಗಳ ಮೇಲ್ವಿಚಾರಕರಿಗೆ ದೇಶೀಯ ಸಹಾಯಕರನ್ನು ಕೊಡಲಾಗಿದೆ. ಬುದ್ಧಿವಂತರೂ, ಆರೋಗ್ಯದೃಢಕಾಯರೂ ಆದ ದೇಶೀಯ ಯುವಕರಿಗೆ ರೈಲ್ವೆಎಂಜಿನ್ ಕಾರ್ಯಾಲಯದಲ್ಲಿ ತರಬೇತಿ ಕೊಡಲು ಏರ್ಪಾಡು ಮಾಡಲಾಗುತ್ತಿದೆ. ಹೀಗೆ ತರಬೇತು ಹೊಂದಿದ ಯುವಕರನ್ನು ಇನ್ನು ಮುಂದೆ ಈ ಇಲಾಖೆಗಳ ಸಿಬ್ಬಂದಿವರ್ಗಕ್ಕೆ ಹೆಚ್ಚು ಸಂಖ್ಯೆಯಲ್ಲಿ ನಿಯಮಿಸಲು ಸಾಧ್ಯವಾಗುವುದು.

ಪಶ್ಚಿಮ ತೀರಕ್ಕೆ ಸಂಪರ್ಕವೇರ್ಪಡುವಂತೆ ಮೈಸೂರು ರೈಲುಮಾರ್ಗವನ್ನು ವೈನಾಡಿನ ಕಡೆ ವಿಸ್ತರಿಸುವ ಯೋಜನೆಯನ್ನು ಸದ್ಯಕ್ಕೆ ಕೈಬಿಡಬೇಕಾಗಿ ಬಂದಿದೆ. ಆದರೆ ಈ ಮಾರ್ಗದಲ್ಲಿ ನಂಜನಗೂಡಿನವರೆಗೆ 14 ಮೈಲಿಗಳಷ್ಟು ದೂರದ ಮಾರ್ಗವನ್ನು ನಿರ್ಮಿಸಲಾಗುವುದು. ನಂಜನಗೂಡು ಪ್ರಮುಖವಾದ ಪಟ್ಟಣ. ಈ ಕಾರಣದಿಂದಲೂ ಕಾಡಿನಲ್ಲಿ ಕಡಿದು ಕಪಿನಿ ನದಿಯ ಮೇಲೆ ತೇಲಿಬಿಡುವ ಮರದ ದಿಮ್ಮಿಗಳನ್ನು ಸಾಗಿಸಲೂ ಈ ಮಾರ್ಗ ಅಗತ್ಯವಾಗಿದೆ. ಗಾಡಿ ಸಂಚಾರ ವ್ಯವಸ್ಥೆಗೆ ತೊಂದರೆಯಾಗದಂತೆ, ಕೊಡಗು ವೈನಾಡುಗಳ ಕಡೆ ಈಗಿರುವ ರಸ್ತೆಗಳ ಮೇಲೆ ನೂರು ಮೈಲಿ ಉದ್ದದ ಇಪ್ಪತ್ತು ಅಂಗುಲ ಅಗಲದ ಉಗಿ ಟ್ರಾಂವೇಯನ್ನು ಹಾಕಲು ಹತ್ತು ವರ್ಷಗಳ ಕಾಲ ಚಾಲ್ತಿಯಲ್ಲಿರುವ ಅನುಮತಿಯನ್ನು ಸರ್ಕಾರ ಕೊಡುವುದರಲ್ಲಿದೆ. ಈ ಮಾರ್ಗ ಪೂರ್ಣವಾದ ಮೇಲೆ ಸಂಚಾರ ಸೌಲಭ್ಯವನ್ನು ಒದಗಿಸುತ್ತದೆ. ಮೈಸೂರು ರೈಲ್ವೆಯನ್ನು ಆ ದಿಕ್ಕಿನಲ್ಲಿ ವಿಸ್ತರಿಸುವವರೆಗೆ ಅದಕ್ಕೆ ಈ ಮಾರ್ಗ ಪೂರಕಮಾರ್ಗವಾಗಿರುತ್ತದೆ.

ಈಗ ನಾನು ಹಿಂದಿನ ವರ್ಷದ ಹಣಕಾಸಿನ ಲೆಕ್ಕಾಚಾರವನ್ನು ನಿಮ್ಮ ಮುಂದೆ ಇಡುತ್ತೇನೆ. ಅದು ಕೆಳಕಂಡಂತಿದೆ :—

## ಆದಾಯ

| ವಿವರಗಳು | | 1881–82 ರೂಪಾಯಿಗಳು |
|---|---|---|
| ಭೂಕಂದಾಯ | .... | 70,20,842 |
| ಅರಣ್ಯ | ... | 7,05,619 |
| ಅಬ್ಕಾರಿ | ... | 12,73,523 |
| ಮೊಹತರ್ಫ | ... | 2,67,385 |
| ಸಾಯರ್ | ... | 4,42,547 |
| ಉಪ್ಪಿನ ಮೇಲಿನ ತೆರಿಗೆ | ... | 12,950 |
| ಸ್ಟಾಂಪುಗಳು | ... | 4,95,831 |
| ಕಾನೂನು ಮತ್ತು ನ್ಯಾಯ ಇಲಾಖೆ | ... | 1,28,019 |
| ಅಂಚೆ ಇಲಾಖೆಯ ಆದಾಯ | ... | 55,129 |
| ಶಿಕ್ಷಣ | ... | 28,491 |
| ವೈದ್ಯಕೀಯ | ... | 667 |
| ಸೈನ್ಯ ಇಲಾಖೆ | ... | 3,259 |
| ಲೋಕೋಪಯೋಗಿ ಇಲಾಖೆ | ... | 17,531 |
| ರಾಜ್ಯ ರೈಲ್ವೆ ಇಲಾಖೆ | ... | 1,68,907 |
| ಗಣಿಯ ಗುತ್ತಿಗೆ | ... | 1,16,996 |
| ಇತರೆ | ... | 1,13,295 |
| | ಒಟ್ಟು | 1,08,50,991 |

## ವ್ಯಯ

| ವಿವರಗಳು | 1881–82 | ರೂಪಾಯಿಗಳು |
|---|---|---|
| ಬಡ್ಡಿ | .... | 4,52,471 |
| ವಾಪಸಾತಿ | .... | 43,877 |
| **ಭೂಕಂದಾಯ ಇಲಾಖೆಯ ಸಿಬ್ಬಂದಿ** | | |
| ಜಿಲ್ಲಾಧಿಕಾರಿಗಳು, ಅವರ ಸಿಬ್ಬಂದಿ | ... | 2,40,349 |
| ಉಪಜಿಲ್ಲಾಧಿಕಾರಿಗಳು, ಅವರ ಸಿಬ್ಬಂದಿ | .... | 88,197 |
| ತಾಲ್ಲೂಕು ಸಿಬ್ಬಂದಿ | .... | 5,66,678 |
| ಮೋಜಣಿ | ... | 2,41,227 |
| ಇನಾಮ್ ಇಲಾಖೆ | .... | 12,576 |
| ಗ್ರಾಮಾಧಿಕಾರಿಗಳ ಸಂಭಾವನೆ | .... | 2,29,898 |
| ಇತರ ಬಾಬುಗಳು | .... | 24,503 |
| ಅರಣ್ಯ | ... | 2,23,071 |
| ಅಬ್ಕಾರಿ | .... | 31,607 |
| ಸಾಯರ್ | .... | 15,260 |
| ಸ್ಟಾಂಪುಗಳು | ... | 14,413 |
| ಅಂಚೆ ಕಛೇರಿಗಳು | .... | 1,59,661 |
| ಆಡಳಿತ ಮತ್ತು ಸಾರ್ವಜನಿಕ ಇಲಾಖೆಗಳು | ... | 2,11,296 |
| ಪ್ರತಿಷ್ಠಾಪನ ವೆಚ್ಚಗಳು | .... | 1,53,685 |
| ಅರಮನೆ ವೆಚ್ಚ | .... | 10,38,986 |
| ಸಣ್ಣಪುಟ್ಟ ಇಲಾಖೆಗಳು | ... | 89,659 |
| ಕಾನೂನು ನ್ಯಾಯ ಇಲಾಖೆ ರಿಜಿಸ್ಟ್ರೇಷನ್ | ... | 5,93,679 |
| ಪೋಲೀಸ್ | ... | 4,81,750 |
| ಶಿಕ್ಷಣ | ... | 1,58,836 |
| ಮುಜರಾಯಿ | .... | 2,69,763 |
| ವೈದ್ಯಕೀಯ | .... | 1,64,208 |

| | | |
|---|---|---|
| ಮುದ್ರಣ ಮತ್ತು ಬರವಣಿಗೆ ಸಾಮಗ್ರಿಗಳು | .... | 76,299 |
| ಕೌಲುಗಳ ಪ್ರಕಾರ ಕೊಡಬೇಕಾದ ದ್ರವ್ಯ | ... | 25,08,933 |
| ರಜಾ ಭತ್ಯಗಳು | ... | 25,431 |
| ನಿವೃತ್ತಿವೇತನ ಮತ್ತು ಸಂಭಾವನೆ | ... | 2,70,406 |
| ಇತರೆ | ... | 1,22,677 |
| ಸೈನ್ಯ (ಸ್ಥಳೀಯ ಪಡೆಗಳು) | ... | 7,53,420 |
| ಲೋಕೋಪಯೋಗಿ ಇಲಾಖೆ | ... | 10,70,702 |
| **ಸಂಸ್ಥಾನದ ರೈಲ್ವೆ** | | |
| ಬಂಡವಾಳದ ಲೆಕ್ಕ | ... | **14,96,003** |
| ಸಾದಿಲ್ವಾರು ಲೆಕ್ಕ | ... | 1,03,636 |
| | ಒಟ್ಟು | 1,19,33,157 |

ಸರ್ಕಾರದ ಆದಾಯ 108½ ಲಕ್ಷ ರೂಪಾಯಿಗಳಾಗುತ್ತದೆ. ಇದರಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಸ್ವಲ್ಪ ಹೆಚ್ಚು ಚಿನ್ನದ ಗಣಿಗಳ ಗುತ್ತಿಗೆಗಳಿಂದ ಬಂದ ಹಣವೂ ಸೇರಿದೆ. ಈ ಹಣ ಆ ಗಣಿಗಳು ಕೆಲಸ ಮಾಡಿದ್ದರಿಂದ ಬಂದಿದ್ದಲ್ಲ. ಗುತ್ತಿಗೆಗೆ ಕೊಡುವಾಗ ಮಾಡಿದ ಠೇವಣಿಗಳಿಂದ ಮತ್ತು ಒಂದು ಸಂದರ್ಭದಲ್ಲಿ ಗುತ್ತಿಗೆ ಮೊತ್ತವನ್ನು ಒಟ್ಟು ವಸೂಲು ಮಾಡಿದ್ದರಿಂದ ಬಂದ ಆದಾಯ ಇದಾಗಿದೆ. ಈ ಗಣಿಗಳ ಭವಿಷ್ಯ ಅನಿಶ್ಚಿತವಾಗಿದೆ. ಆದ್ದರಿಂದ ಈ ಬಾಬಿನಲ್ಲಿ ಮುಂದಿನ ವರ್ಷಗಳಲ್ಲಿ ಆದಾಯವನ್ನು ನಿರೀಕ್ಷಿಸಲಾಗುವುದಿಲ್ಲ. ಈ ಬಾಬನ್ನು ಮತ್ತು ಮೈಸೂರು ರೈಲ್ವೆ ಇಲಾಖೆಯ ಒಟ್ಟು ಆದಾಯ 1½ ಲಕ್ಷ ರೂಪಾಯಿಗಳನ್ನು ಬಿಟ್ಟರೆ ಸಂಸ್ಥಾನದ ಸಾಮಾನ್ಯ ಆದಾಯ 106ಲಕ್ಷ ರೂಪಾಯಿಗಳಾಗುತ್ತದೆ. ಭೂಕಂದಾಯದ ತೀರ್ಪಾಡಿನಿಂದ ಕಳೆದ ವರ್ಷಕ್ಕಿಂತ ಈ ವರ್ಷ ಒಂದು ಲಕ್ಷ ರೂಪಾಯಿ ಹೆಚ್ಚು ಆದಾಯ ದೊರತಿದೆ.

ಕ್ಷಾಮಕಾಲದಲ್ಲಿ ಸಾಗುವಳಿ ಮಾಡದೇ ಬಿಟ್ಟಿದ್ದ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪುನಃ ಆಬಾದಿಗೆ

ತಂದಿದ್ದರಿಂದ ಈ ಹೆಚ್ಚುವರಿ ಆದಾಯ ಬಂದಿದೆ. ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಇಳುವರಿ ತೋರುತ್ತಿದ್ದ ಹಾಲತ್ ಸುಂಕಕ್ಕೆ ಬದಲಾಗಿ ಎಕರೆವಾರು ಕಂದಾಯ ವನ್ನು ವಿಧಿಸಿದ್ದರಿಂದ ಅರ್ಧಲಕ್ಷದಷ್ಟು ಹೆಚ್ಚಿನ ಆದಾಯ ಬಂದಿದೆ. ಪ್ಲಾಂಟರು ಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ 5 ವರ್ಷಗಳ ಕಾಲ, ರೂಢಿಸ ಬೇಕಾದ ತೋಟಗಳಿಗೆ ಸಂಬಂಧಪಟ್ಟಂತೆ ಕಂದಾಯದ ಅರ್ಧದಷ್ಟು ವಸೂಲ್ಮಾಡ ಲಾಗುತ್ತಿದೆ. ಆದ್ದರಿಂದ ಈ ಬಾಬಿನಿಂದ ಐದು ವರ್ಷಗಳ ಅನಂತರ ಅರ್ಧ ಲಕ್ಷ ರೂಪಾಯಿಯ ಹೆಚ್ಚಿನ ಆದಾಯ ಬರುತ್ತದೆ. ಸರ್ಕಾರ ಹೀಗೆ ಸಹಾನುಭೂತಿ ಯಿಂದ ನಡೆದುಕೊಂಡಿದ್ದರಿಂದ ಕಾಫಿ ತೋಟಗಳು ಪಾಳುಬೀಳುತ್ತಿದ್ದುದನ್ನು ಬಹುಮಟ್ಟಿಗೆ ತಡೆಯಲಾಗಿದೆ.

ಗಂಧದ ಮರ ಮುಂತಾದ ಅರಣ್ಯ ಸಂಪತ್ತನ್ನು ರೂಢಿಸುವ ಕಾರ್ಯಕ್ಕೆ ಎಲ್ಲ ಗಮನ ಕೊಡಲಾಗಿದೆ. ಈ ಬಾಬಿನಲ್ಲಿ ಆದಾಯ ಹೆಚ್ಚಿದೆ.

ಕ್ಷಾಮದಿಂದ ರಾಜ್ಯ ಚೇತರಿಸಿಕೊಳ್ಳುತ್ತಿರುವುದರಿಂದಲೂ, ಕಂಟ್ರಾಕ್ಟರು ಗಳು ಒಟ್ಟುಗೂಡಿ ಕಡಿಮೆ ಬೆಲೆಗೆ ಹೆಂಡದ ಮಾರಾಟದ ಹಕ್ಕನ್ನು ಕೊಳ್ಳುವು ದನ್ನು ತಡೆಯಲಾಗಿರುವುದರಿಂದಲೂ ಅಬ್ಕಾರಿ ಆದಾಯ ಗಣನೀಯವಾಗಿ ಹೆಚ್ಚಿದೆ.

ಕ್ಷಾಮಕಾಲದಲ್ಲಿ ಅಡಕೆಯ ಬೆಳೆಯ ಮೇಲೆ ಹಾಕಿದ್ದ ಸಾಯರ್ ಸುಂಕ ದಿಂದ ಬರುತ್ತಿದ್ದ ಆದಾಯ ತುಂಬಾ ಕಡಿಮೆಯಾಗಿದ್ದುದು ಈಗ ಒಂದು ಲಕ್ಷ ಕ್ಕಿಂತ ಮಿಗಿಲಾಗಿ ಹೆಚ್ಚುವರಿಯನ್ನು ತೋರಿಸುತ್ತಿದೆ.

ಇತರ ಬಾಬುಗಳಲ್ಲಿ ಅಲ್ಪಪ್ರಮಾಣದಲ್ಲಿ ವ್ಯತ್ಯಾಸವಾಗಿರುವುದಕ್ಕೆ ವಿವರಣೆ ಕೊಡಬೇಕಾಗಿಲ್ಲ.

ಈ ವರ್ಷದ ವೆಚ್ಚ 119ಲಕ್ಷ ರೂಪಾಯಿಗಳಾಗಿದೆ. ಅದರಲ್ಲಿ ಮೈಸೂರು ರೈಲ್ವೆಯ ನಿರ್ಮಾಣಕ್ಕೆ 15ಲಕ್ಷ ರೂಪಾಯಿಗಳೂ ಮತ್ತು ರೈಲು ಓಡಿಸುವ ವೆಚ್ಚ ಒಂದು ಲಕ್ಷ ರೂಪಾಯಿಗಳೂ ಸೇರಿವೆ.

ಈ ವೆಚ್ಚವನ್ನೂ ಮತ್ತು 1½ಲಕ್ಷ ರೂಪಾಯಿಗಳ ವಿಶೇಷ ವೆಚ್ಚವನ್ನೂ ಕಳೆದರೆ ವಾರ್ಷಿಕ ವೆಚ್ಚ 101½ಲಕ್ಷ ರೂಪಾಯಿಗಳಾಗುತ್ತದೆ. ಇದರಲ್ಲಿ ಬೆಂಗಳೂರಿನ ಸಿವಿಲ್ ಮತ್ತು ಸೈನ್ಯ ಕ್ಷೇತ್ರದ ಆಡಳಿತ ವೆಚ್ಚವೂ ಸೇರಿದೆ. ಹಿಂದೆ ಸೂಚಿಸಿದ, ಸಿಬ್ಬಂದಿಯ ಪ್ರಮಾಣವನ್ನು ಕಡಿಮೆಮಾಡುವ

ಕಾರ್ಯವನ್ನು ಮುಂದುವರಿಸುವುದರಿಂದ ರೈಲ್ವೆಯ ಅಭಿವೃದ್ಧಿಗಾಗಿ ವರ್ಷಕ್ಕೆ 5 ಲಕ್ಷ ರೂಪಾಯಿಗಳು ಉಳಿತಾಯವಾಗುವುದರಲ್ಲಿ ಸಂಶಯವಿಲ್ಲ. ರೈಲ್ವೆಯಿಂದ ಬರುವ ನಿವ್ವಳ ಆದಾಯವೂ ವಾರ್ಷಿಕ ಆದಾಯಕ್ಕೆ ಸೇರುತ್ತದೆ.

"ಕಳೆದ ವರ್ಷ ನಿಮ್ಮಿಂದ ಸೂಚಿತವಾದ ಹಲವು ವಿಷಯಗಳನ್ನು ಸರ್ಕಾರ ಹೇಗೆ ಪರಿಶೀಲಿಸಿತು ಎಂಬುದನ್ನು ನಿಮ್ಮ ಅವಗಾಹನೆಗೆ ತರುತ್ತೇನೆ". ಈ ವಿಷಯಗಳನ್ನು ಪ್ರಸ್ತಾಪಿಸಿ ಭಾಷಣವನ್ನು ಕೆಳಗೆ ಕಂಡಂತೆ ಮುಕ್ತಾಯ ಗೊಳಿಸಲಾಯಿತು. "ಸಂಸ್ಥಾನದಲ್ಲಿ ಕೈಗಾರಿಕೋದ್ಯಮಗಳನ್ನು ಅಭಿವೃದ್ಧಿ ಪಡಿಸುವುದರ ಪ್ರಾಮುಖ್ಯತೆಯನ್ನು ಹೋದ ವರ್ಷ ನಾನು ಪ್ರಸ್ತಾಪಿಸಿದ್ದೆ. ಕೈಗಾರಿಕೋದ್ಯಮಗಳ ಪ್ರಾಮುಖ್ಯತೆಯನ್ನು ಮತ್ತೆ ಒತ್ತಿ ಹೇಳದೇ ಈ ಭಾಷಣ ವನ್ನು ಮುಕ್ತಾಯಗೊಳಿಸಲಾರೆ. ರಾಜ್ಯದ ಆಡಳಿತ ಯಂತ್ರವನ್ನು ಸುವ್ಯವಸ್ಥಿ ಗೊಳಿಸುವ ಗುರುತರವಾದ ಕಾರ್ಯವನ್ನು ಕೈಗೊಂಡಿದ್ದರಿಂದ ಕೈಗಾರಿಕಾಭಿ ವೃದ್ಧಿಯ ಕಾರ್ಯವನ್ನು ಸರ್ಕಾರ ಕೈಗೊಳ್ಳಲಾಗಲಿಲ್ಲ. ವಿಜ್ಞಾನ ಮತ್ತು ಕೈಗಾರಿಕೆಗಳ ಅಭಿವೃದ್ಧಿಗಾಗಿ ಸ್ಥಾಪಿಸಬೇಕೆಂದಿದ್ದ ಸಂಸ್ಥೆಯನ್ನು ಇನ್ನೂ ಅಸ್ತಿತ್ವಕ್ಕೆ ತಂದಿಲ್ಲ. ಅದನ್ನು ಸ್ಥಾಪಿಸುವ ಕಾರ್ಯವನ್ನು ಇನ್ನು ಮುಂದೂಡುವು ದಿಲ್ಲ. ಯೂರೇಷಿಯನ್ ಸಂಘವು ಜನತೆಯ ಮುಖ್ಯ ವರ್ಗವಾದ ಯುರೇಷಿ ಯನ್ನರಲ್ಲಿ ಕೈಗಾರಿಕಾ ಜೀವನವನ್ನು ರೂಢಿಸಲು ಪ್ರಯತ್ನಿಸುತ್ತಿದೆ. ಮಹಾ ರಾಜರ ಸರ್ಕಾರವು ಹೆಚ್ಚಿನ ಭೂಮಿಕಾಣಿಯನ್ನು, ಅನುಕೂಲಕರವಾದ ಷರತ್ತು ಗಳ ಮೇಲೆ ಸ್ವಲ್ಪ ಕಾಲಾವಧಿಗೆ ಈ ಸಂಸ್ಥೆಗೆ ಕೊಟ್ಟಿದೆ. ಬೇರೆ ಉದ್ಯೋಗ ವನ್ನು ಅರಸುತ್ತಿರುವ ಈ ಪಂಗಡದವರು ನೆಲೆಯನ್ನು ಕಂಡುಕೊಳ್ಳಲಿ, ವ್ಯವಸಾಯವನ್ನು ಕೈಗೊಳ್ಳಲಿ ಎಂಬುದೇ ಇದರ ಉದ್ದೇಶ. ದೈಹಿಕಶ್ರಮದ ಕಾರ್ಯಗಳು ತಮ್ಮ ಘನತೆಗೆ ಕಡಿಮೆ ಎಂದು ಇದುವರೆಗೂ ಈ ಪಂಗಡ ಭಾವಿಸಿರು ವುದರಿಂದ ಈ ಪ್ರಯತ್ನ ಸುಲಭವಾದದ್ದೇನೂ ಅಲ್ಲ. ಈ ಜನವರ್ಗದಲ್ಲಿ ದೇಶಾಭಿ ಮಾನದಿಂದ ಪ್ರೇರಿತರಾಗಿ, ಪ್ರಬುದ್ಧರಾದವರು ಈ ಕಾರ್ಯವನ್ನು ಕೈಗೊಂಡು ಯಶಸ್ವಿಗಳಾದರೆ ದೇಶದ ವ್ಯವಸಾಯ ಕೈಗಾರಿಕೋದ್ಯಮಗಳ ಮೇಲೆ ಅದರಿಂದ ಒಳ್ಳೆಯ ಪರಿಣಾಮವಾಗುವುದು. ಪರದೇಶಗಳಲ್ಲಿ ವ್ಯವಸಾಯದಲ್ಲಿ ಮಾಡಿರುವ ಸುಧಾರಣೆಗಳನ್ನು ಇವರು ಸುಲಭವಾಗಿ ಆಚರಣೆಗೆ ತರಬಲ್ಲರು. ಈ ಸುಧಾರಣೆ ಗಳನ್ನು ಕಾರ್ಯತಃ ಯಶಸ್ವಿಯಾಗಿ ಇವರು ಪ್ರಯೋಗಿಸಿದಾಗ ದೇಶೀಯಜನವರ್ಗ ಅವನ್ನು ಸುಲಭವಾಗಿ ಅನುಸರಿಸುತ್ತದೆ.

ಒಂದು ಖಾಸಗಿ ಸಂಸ್ಥೆಯು ಬೆಂಗಳೂರಿನಲ್ಲಿ ಸಣ್ಣ ಪ್ರಮಾಣದಲ್ಲಿ ಉಣ್ಣೆ ಬಟ್ಟೆ ತಯಾರಿಸುವ ಉದ್ಯಮವನ್ನು ಸ್ಥಾಪಿಸಿದೆ. ಹತ್ತಿ ಬಟ್ಟೆಯ ಮತ್ತು ಕಾಗದ ತಯಾರಿಕೆಯ ಕಾರ್ಖಾನೆಗಳ ಸ್ಥಾಪನೆ, ಗೋಧಿ ಮತ್ತು ಹತ್ತಿ ಬೆಳೆಗಳಲ್ಲಿ ಸುಧಾರಣೆಗಳು, ಉಣ್ಣೆಗಾಗಿ ಕುರಿಗಳನ್ನು ಬೆಳೆಸುವ ಕಾರ್ಯ ಇವೇ ಮುಂತಾದವು ಇನ್ನೂ ಆರಂಭದಿಸೆಯಲ್ಲಿವೆ. ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಯಿಂದ ಆಗುವ ಸಂಪದಭಿವೃದ್ಧಿಗೆ ಹೋಲಿಸಿದರೆ ಈ ಎಲ್ಲಾ ಉದ್ಯಮಗಳು ಅಷ್ಟು ಮುಖ್ಯವಾಗಿ ಕಾಣಿಸುವುದಿಲ್ಲ. ಸಂಸ್ಥಾನದ ಭೂಗುಣ ಮತ್ತು ಹವಾಮಾನಗಳು ಉಪ್ಪು ನೇರಿಳೆ ಸೊಪ್ಪನ್ನು ಬೆಳೆಸುವುದಕ್ಕೂ ರೇಷ್ಮೆ ಹುಳಗಳನ್ನು ಸಾಕುವುದಕ್ಕೂ ಅನುಕೂಲಕರವಾಗಿವೆ. ಫ್ರಾನ್ಸ್, ಇಟಲಿ ಮತ್ತು ಇತರ ಯೂರೋಪಿನ ದೇಶಗಳು ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ರೇಷ್ಮೆಯನ್ನು ತಯಾರಿಸಬಹುದಾದರೆ ವರ್ಷಕ್ಕೆ 10 ಲಕ್ಷ ರೂಪಾಯಿಗಳು ಅಥವಾ ಹೆಚ್ಚಾದ ಆದಾಯವನ್ನು ಸಂಸ್ಥಾನದ ರೇಷ್ಮೆ ಉದ್ಯಮಕ್ಕೆ ತಕ್ಕ ಗಮನವನ್ನು ಕೊಡುವುದರಿಂದ ನಾವು ಪಡೆಯದಿರುವುದಕ್ಕೆ ಕಾರಣವಿಲ್ಲ. ವ್ಯವಹಾರಕುಶಲರಾದ ಕೆಲವು ಇಂಗ್ಲೀಷರು ಈ ವಿಷಯಕ್ಕೆ ಆಗಲೇ ಗಮನಕೊಡುತ್ತಿದ್ದಾರೆ. ಸರ್ಕಾರ ಈ ಉದ್ಯಮಕ್ಕೆ ಎಲ್ಲ ಬೆಂಬಲ ಪ್ರೋತ್ಸಾಹಗಳನ್ನೂ ಕೊಡಲು ಸಿದ್ಧವಾಗಿದೆ. ಆದರೆ ಈ ಉದ್ಯಮವನ್ನು ತಾನೇ ಕೈಗೊಳ್ಳುವುದು ಸೂಕ್ತವೆಂದು ಅದು ಭಾವಿಸುವುದಿಲ್ಲ.

ಪ್ರಗತಿಪಥದಲ್ಲಿ ನಡೆಯಬೇಕೆಂಬ ಉತ್ಸಾಹದಿಂದ ಒಟ್ಟು ಜನಸಮುದಾಯವೇ ಕೈಗಾರಿಕೋದ್ಯಮಗಳನ್ನು ಕೈಗೊಂಡರೆ ಅದು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧಿಸಬಹುದಾದುದಕ್ಕೆ ಹೋಲಿಸಿದರೆ, ಸರ್ಕಾರವಾಗಲಿ, ಹೊರಗಿನವರಾಗಲಿ ಮಾಡಬಹುದಾದುದು ಅಲ್ಪವಾದುದ್ದು.

ಒಟ್ಟು ಪ್ರಪಂಚವೇ ಅದ್ಭುತವಾದ ಪ್ರಗತಿಯನ್ನು ಸಾಧಿಸುತ್ತಿರುವಾಗ ಈ ದೇಶದ 20ಕೋಟಿ ಜನರು 2000 ವರ್ಷಗಳ ಹಿಂದಿನ ತಮ್ಮ ಪೂರ್ವಿಕರ ಪದ್ಧತಿಗಳನ್ನೇ ಅನುಸರಿಸುತ್ತಾ, ದರಿದ್ರರಾಗಿ ಬದುಕುತ್ತಾ, ಕ್ಷಾಮವೋ ಅಥವಾ ಇನ್ನಾವುದಾವದೋ ವಿಪತ್ತು ಒದಗಿದೊಡನೆಯೇ ಕುಗ್ಗಿ ನಿಶ್ಚೇತರಾಗುತ್ತಾ, ಇನ್ನೂ ತಮ್ಮ ದೀರ್ಘ ನಿದ್ರೆಯಿಂದ ಎಚ್ಚೆತ್ತುಕೊಳ್ಳದೇ ಹೆಚ್ಚು ದಿನ ಇರುವುದು ಸಾಧ್ಯವಿಲ್ಲ. ಈ ಶತಮಾನದ ಆದಿಯಿಂದ ಮಾತ್ರವೇ ಯೂರೋಪಿನಲ್ಲಿ ಜನರು ಯಂತ್ರೋದ್ಯಮದ

ಚಾಲಕ ಶಕ್ತಿಯಾಗಿ ಉಗಿಯನ್ನು ಉಪಯೋಗಿಸಲಾರಂಭಿಸಿದರು. ಆಗ ಭಾರತವು ಇಂಗ್ಲೆಂಡಿಗೆ ಬಟ್ಟೆಗಳನ್ನು ರಫ್ತುಮಾಡುತ್ತಿದ್ದಿತು. ಈಗ ಯೂರೋಪ್ ಮತ್ತು ಅಮೆರಿಕಗಳಲ್ಲಿರುವ ಮಿಕ್ಕ ದೇಶಗಳ ತೀವ್ರವಾದ ಸ್ಪರ್ಧೆ ಇದ್ದರೂ, ಇಂಗ್ಲೆಂಡ್ ಪ್ರಪಂಚದ ಬಹುಭಾಗಕ್ಕೆ ಬಟ್ಟೆಯನ್ನೂ, ಇತರ ಸಿದ್ಧ ವಸ್ತುಗಳನ್ನೂ ಪೂರೈಸುತ್ತದೆ.

ಇವೆಲ್ಲಾ ಕೆಲವು ವ್ಯಕ್ತಿಗಳು ಮಾಡಿದ ಭಾರಿ ಸಂಶೋಧನೆಗಳ ಫಲವಲ್ಲ. ಇಂತಹ ಭಾರಿ ಸಂಶೋಧನೆಗಳು ಮಾತ್ರ ಅಧಿಕಾರಿವರ್ಗದ ಮನಸ್ಸನ್ನು ಆಕರ್ಷಿಸ ಬಲ್ಲವು. ಆದರೆ ಅನೇಕ ವ್ಯಕ್ತಿಗಳು ತಮ್ಮ ವಿವಿಧ ಉದ್ಯೋಗಗಳಲ್ಲಿ ದಿನದಿನದ ಕಾರ್ಯವನ್ನು ಮಾಡುವಾಗ, ತಮ್ಮ ಬುದ್ಧಿಯನ್ನು ಉಪಯೋಗಿಸಿ ಮಾಡಿದ ಸಣ್ಣ ಸಂಶೋಧನೆಗಳೂ,ಕಾರ್ಯವಿಧಾನದಲ್ಲಿಯೂ ಯಂತ್ರೋಪಕರಣಗಳಲ್ಲಿಯೂ ಮಾಡಿದ ಮಾರ್ಪಾಡುಗಳೂ ಒಟ್ಟು ಸೇರಿ ಇಂತಹ ಅದ್ಭುತವಾದ ಐಶ್ವರ್ಯಕ್ಕೂ ಒಟ್ಟಿನಲ್ಲಿ ಜನರ ಅಭ್ಯುದಯಕ್ಕೂ ಕಾರಣವಾಗಿವೆ.

ಈ ದೇಶದ ಅಗಾಧ ಜನಸಮುದಾಯ ಇಂತಹ ಪ್ರಗತಿಯ ಮಾರ್ಗದಲ್ಲಿ ಒಮ್ಮೆ ಕಾಲಿಟ್ಟರೆ ಸಾಧಿಸಲಾಗುದುದೇನು ? ಅಧಿಕಾರವರ್ಗದ ಪ್ರಭಾವಕ್ಕೆ ಸಿಕ್ಕಿ ಜನ ತಲೆಯೆತ್ತದಂತಾಗಿದ್ದಾರೆ. ಈ ಪ್ರಭಾವದಿಂದ ಜನರನ್ನು ವಿಮೋಚನೆಗೊಳಿಸಿ ಅವರು ಕೈಗಾರಿಕೋದ್ಯಮಗಳನ್ನು ಸ್ಥಾಪಿಸುವಂತೆ, ಪ್ರಗತಿಪಥದಲ್ಲಿ ನಡೆಯುವಂತೆ ಮಾಡುವುದೇ ಭಾರತೀಯ ರಾಜನೀತಿಜ್ಞರು ಎದುರಿಸಬೇಕಾದ ದೊಡ್ಡ ಸಮಸ್ಯೆ ಯಾಗಿದೆ. ಮಹಾರಾಜರ ಸರ್ಕಾರವು ಈ ದೆಶೆಯಲ್ಲಿ ತನ್ನ ಕೈಲಾದುದನ್ನು ಮಾಡುವುದಕ್ಕೆ ಉತ್ಸುಕವಾಗಿದೆ. ಪ್ರಜಾಪ್ರತಿನಿಧಿ ಸಂಸ್ಥೆಗಳ, ಸ್ವಯಮಾಡಳಿತದ ಹೊಸ ಯುಗ ಪ್ರಾರಂಭವಾಗಿ ದೇಶದಲ್ಲಿ ಹೊಸ ಚೇತನ ಆವಿರ್ಭವವಾಗುತ್ತಿರುವಾಗ ಜನರ ಪ್ರತಿನಿಧಿಗಳಾದ ನೀವು ಈ ವಿಷಯಗಳನ್ನು ಜನಗಳಲ್ಲಿ ಹರಡಿ ಅವರಿಗೆ ಅವರ ನಿಜಹಿತದ, ಅವರ ಪ್ರಾಮುಖ್ಯತೆಯ ಅರಿವನ್ನು ಉಂಟುಮಾಡಿಕೊಡುತ್ತೀ ರೆಂದು ಸರ್ಕಾರವು ನಿರೀಕ್ಷಿಸುತ್ತದೆ. ”

# ಅನುಬಂಧ ೩

## ವರ್ಗಾವಣೆಯ ಷರತ್ತುಗಳು

ಬ್ರಿಟಿಷ್ ಸರ್ಕಾರದ ಸ್ವಾಧೀನದಲ್ಲಿ ಮೈಸೂರು ಸಂಸ್ಥಾನವು ದೀರ್ಘಕಾಲ ದಿಂದಿರುವುದರಿಂದಲೂ, ಆ ಸರ್ಕಾರವು ಉತ್ತಮವಾದ ಆಡಳಿತ ಪದ್ಧತಿಯನ್ನು ಸಂಸ್ಥಾನದಲ್ಲಿ ಜಾರಿಗೆ ತಂದಿರುವುದರಿಂದಲೂ, ಆ ಆಡಳಿತ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಆಗತ್ಯವಾದ ಕಟ್ಟುಪಾಡುಗಳಿಗೂ, ನಿಯಮಗಳಿಗೂ ಒಳಪಟ್ಟು ಗತಿಸಿದ ಮಹಾರಾಜರ ಅನಂತರ ಸಂಸ್ಥಾನವನ್ನು ಭಾರತೀಯ ರಾಜಮನೆತನದ ಆಳ್ವಿಕೆಗೆ ವಹಿಸಬೇಕೆಂಬುದು ಬ್ರಿಟಿಷ್ ಸರ್ಕಾರದ ಅಪೇಕ್ಷೆಯಾಗಿದ್ದರಿಂದಲೂ, ಆ ಅಪೇಕ್ಷೆಗೆ ಅನುಸಾರವಾಗಿ ಗತಿಸಿದ ಮಹಾರಾಜರ ದತ್ತು ಪುತ್ರರಾದ ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವ ರಿಗೆ 18 ವರ್ಷ ವಯಸ್ಸಾದ ಮೇಲೆ ಅವರಿಗೆ ಈ ನಾಡಿನ ಅರಸರಾಗಲು ಅರ್ಹತೆ ಇರುವುದಾದರೆ ಮುಂದೆ ನಿರ್ಧರಿಸಬಹುದಾದ ಕಟ್ಟುಪಾಡುಗಳಿಗೂ ನಿಯಮಗಳಿಗೂ ಒಳಪಟ್ಟು ರಾಜ್ಯಾಡಳಿತವನ್ನು ಅವರಿಗೆ ವಹಿಸುವುದಾಗಿ ಘೋಷಿಸಿರುವುದರಿಂದಲೂ, ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಗೆ ಈಗ 18ವರ್ಷ ಗಳು ಆಗಿರುವುದರಿಂದಲೂ, ಹೇಳ್ಕಂಡ ಸ್ಥಾನಕ್ಕೆ ಅವರು ಅರ್ಹರೆಂದು ಬ್ರಿಟಿಷ್ ಸರ್ಕಾರದ ಅಭಿಪ್ರಾಯವಾಗಿರುವುದರಿಂದಲೂ, ಅವರಿಗೆ ಸಂಸ್ಥಾನದ ರಾಜ್ಯಾಧಿ ಕಾರವನ್ನು ವಹಿಸಲಿರುವುದರಿಂದಲೂ, ಮಹಾರಾಜ ಚಾಮರಾಜೇಂದ್ರ ಒಡೆಯರ್ ರವರಿಗೆ ರಾಜ್ಯಾಧಿಕಾರವನ್ನು ಯಾವ ಷರತ್ತುಗಳಿಗೆ ಒಳಪಟ್ಟು ವಹಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಲಿಖಿತ ಕರಾರು ಪತ್ರವನ್ನು ಕೊಡುವುದು ಸೂಕ್ತ ವಾದುದರಿಂದಲೂ ಈ ಕೆಳಗೆ ಕಂಡಂತೆ ಷರತ್ತುಗಳನ್ನು ನಿರ್ಧರಿಸಲಾಗಿದೆ:—

1) ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಸ್ವಾಧೀನಕ್ಕೆ 25 ನೇ ಮಾರ್ಚಿ 1881ರಂದು ಮೈಸೂರು ಸಂಸ್ಥಾನವನ್ನು ವಹಿಸ ಲಾಗುತ್ತದೆ, ಅದರ ರಾಜ್ಯಾಡಳಿತದಲ್ಲಿ ಅವರನ್ನು ಪ್ರತಿಷ್ಠಾಪಿಸಲಾಗುತ್ತದೆ.

2) ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರೂ, ಈ ಮುಂದೆ ನಮೂದಿಸಿರುವ ನಿಬಂಧನೆಗಳಂತೆ ಅವರ ಅನಂತರ ಉತ್ತರಾಧಿಕಾರಿಗಳಾಗುವರೂ ಈ ಮುಂದೆ ವಿಧಿಸುವ ನಿಯಮಗಳಂತೆ ನಡೆಯುವವರೆಗೆ ಸಂಸ್ಥಾನದ ಸ್ವಾಧೀನಾನುಭವವನ್ನು ಹೊಂದಲೂ, ಆಡಳಿತವನ್ನು ನಡೆಸಲೂ ಹಕ್ಕುಳ್ಳವರಾಗಿರುತ್ತಾರೆ.

3) ರಾಜಮನೆತನದ ನಿಯಮ, ಪದ್ಧತಿಗಳಂತೆ ಜನನದಿಂದಾಗಲಿ, ದತ್ತು ಸ್ವೀಕಾರದಿಂದಾಗಲಿ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರ ನೇರವಾದ ಸಂತತಿ ಯಾವುದೋ ಆ ಸಂತತಿಗೆ ವಂಶಪಾರಂಪರ್ಯವಾಗಿ ಸಂಸ್ಥಾನದ ಆಳ್ವಿಕೆಯು ಪ್ರಾಪ್ತವಾಗತಕ್ಕದ್ದು. ರಾಜ್ಯಾಡಳಿತವನ್ನು ನಿರ್ವಹಿಸಲು ಅನರ್ಹರಾದ ವಂಶೀಕರಿಗೆ ಮಾತ್ರ ಈ ಅಧಿಕಾರವು ಪ್ರಾಪ್ತವಾಗುವುದಿಲ್ಲ.

ಗೌರ್ನರ್-ಜನರಲ್-ಇನ್-ಕೌನ್ಸಿಲ್ ಒಪ್ಪಿಗೆ ಕೊಡದೇ ಯಾರ ಉತ್ತರಾಧಿಕಾರವೂ ಮಾನ್ಯವಾಗತಕ್ಕದ್ದಲ್ಲ.

ಜನನದಿಂದಾಗಲಿ, ದತ್ತುಸ್ವೀಕಾರದಿಂದಾಗಲಿ ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರ ನೇರ ಸಂತತಿಗೆ ಸೇರಿದವರಾರೂ ಇಲ್ಲದೇ ಹೋದರೆ ಅವರ ಮನೆತನದ ಯಾವುದೊಂದು ಭಿನ್ನ ಶಾಖೆಗೆ ಸೇರಿದ ಯಾರನ್ನಾದರೂ ತಮಗೆ ಸೂಕ್ತ ಕಂಡಂತೆ ಉತ್ತರಾಧಿಕಾರಿಯಾಗಿ ಆರಿಸಲು ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಸ್ವಾತಂತ್ರ್ಯವಿರತಕ್ಕದ್ದು.

4) ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಮತ್ತು ಅವರ ಉತ್ತರಾಧಿಕಾರಿಗಳು (ಇನ್ನು ಮುಂದೆ ಅವರನ್ನು ಈ ವರ್ಗಾವಣೆಯ ಷರತ್ತುಗಳಲ್ಲಿ ಮೈಸೂರು ಮಹಾರಾಜರೆಂದು ನಿರ್ದೇಶಿಸಲಾಗುತ್ತದೆ) ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡ್‌ಗಳ ರಾಣಿಯೂ, ಭಾರತದ ಸಾಮ್ರಾಜ್ಞಿಯೂ ಆದ ಘನವೆತ್ತ ವಿಕ್ಟೋರಿಯಾ ಮಹಾರಾಣಿಗೂ, ಅವರ ಉತ್ತರಾಧಿಕಾರಿಗಳಿಗೂ ಸ್ವಾಮಿನಿಷ್ಠರಾಗಿಯೂ, ಅಧೀನತಾನಿಷ್ಠೆಯುಳ್ಳವರಾಗಿಯೂ ಇರತಕ್ಕದ್ದು. ಈ ಸ್ವಾಮಿನಿಷ್ಠೆ ಮತ್ತು ಅಧೀನತೆಗಳಿಂದಾಗಿ ಅವರು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಕೇಳಲಾಗುತ್ತದೋ ಅವರು ಆ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

5) ಬ್ರಿಟಿಷ್ ಸರ್ಕಾರವು ಸಂಸ್ಥಾನವನ್ನು ಹೊರಗಿನ ಎಲ್ಲ ಶತ್ರುಗಳಿಂದ ರಕ್ಷಿಸುವ ಭರವಸೆಯನ್ನಿತ್ತಿದೆ. ಮೈಸೂರು ಮಹಾರಾಜರು ಬ್ರಿಟಿಷ್ ಸೈನ್ಯದೊಂದಿಗೆ ಅವಶ್ಯಕ ಬಿದ್ದಾಗ ಸೇವೆ ಸಲ್ಲಿಸಲು ಸೈನ್ಯವನ್ನು ಇಟ್ಟಿರಬೇಕೆಂಬ ಕರಾರಿನಿಂದ ಅವರನ್ನು ಮುಕ್ತ ಮಾಡುವುದೆಂದು ಭರವಸೆಯನ್ನಿತ್ತಿದೆ. ಆದ್ದರಿಂದ ಸಂಸ್ಥಾನದ ಆದಾಯದಿಂದ ವರ್ಷಕ್ಕೆ 35 ಲಕ್ಷ ರೂಪಾಯಿಗಳನ್ನು ಎರಡು ಅರ್ಧ ವಾರ್ಷಿಕ ಕಂತುಗಳಲ್ಲಿ 25ನೇ ಮಾರ್ಚಿ 1881 ರಿಂದ ಮೈಸೂರು ಮಹಾರಾಜರು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

6) ಮೈಸೂರು ಸಂಸ್ಥಾನವನ್ನು ಮಹಾರಾಜರು ತಮ್ಮ ವಶಕ್ಕೆ ತೆಗೆದುಕೊಂಡ ದಿನದಿಂದ ಶ್ರೀರಂಗಪಟ್ಟಣದ ದ್ವೀಪದ ಮೇಲೆ ಬ್ರಿಟಿಷರಿಗೆ ಇರುವ ಪರಮಾಧಿಕಾರ ಅಂತ್ಯಗೊಳ್ಳುತ್ತದೆ. ಆ ದ್ವೀಪ ಮೈಸೂರು ಸಂಸ್ಥಾನದ ಭಾಗವಾಗುತ್ತದೆ. ಸಂಸ್ಥಾನದ ಇತರ ಭಾಗಗಳು ಯಾವ ಷರತ್ತುಗಳಿಗೆ ಒಳಪಟ್ಟು ಮಹಾರಾಜರ ಅಧೀನದಲ್ಲಿರುವುವೋ ಅದೇ ಷರತ್ತುಗಳಂತೆ ಈ ದ್ವೀಪವೂ ಅವರ ಅಧೀನದಲ್ಲಿರುತ್ತದೆ.

7) ಮೈಸೂರು ಮಹಾರಾಜರು ಗೌರ್ನರ್-ಜನರಲ್-ಇನ್-ಕೌನ್ಸಿಲ್‌ನ ಅನುಮತಿ ಇಲ್ಲದೆ ಹೊಸ ಕೋಟೆಕೊತ್ತಲಗಳನ್ನು ಕಟ್ಟಲಾಗದು, ಈಗ ಅಸ್ತಿತ್ವದಲ್ಲಿರುವ ಕೋಟೆಕೊತ್ತಲಗಳನ್ನು ದುರಸ್ತಿಮಾಡಲಾಗದು.

8) ಮೈಸೂರು ಮಹಾರಾಜರು ಗೌರ್ನರ್-ಜನರಲ್-ಇನ್-ಕೌನ್ಸಿಲ್‌ನ ಅನುಮತಿ ಇಲ್ಲದೆ ಸಂಸ್ಥಾನದೊಳಗೆ ಆಯುಧಗಳನ್ನೂ, ಮದ್ದುಗುಂಡುಗಳನ್ನೂ, ಸೈನ್ಯಸಾಮಗ್ರಿಗಳನ್ನೂ ತರಲಾಗದು, ಇತರರು ತರುವುದಕ್ಕೆ ಅವಕಾಶ ಕೊಡಲಾಗದು. ಗೌರ್ನರ್-ಜನರಲ್-ಇನ್-ಕೌನ್ಸಿಲ್ ಯಾವಾಗ ನಿರ್ದೇಶಿಸಿದರೂ ಆಯುಧಗಳನ್ನೂ, ಮದ್ದುಗುಂಡುಗಳನ್ನೂ, ಸೈನ್ಯ ಸಾಮಗ್ರಿಗಳನ್ನೂ ಸಂಸ್ಥಾನಾದ್ಯಂತವಾಗಲಿ, ನಿರ್ದಿಷ್ಟಸ್ಥಳಗಳಲ್ಲಾಗಲಿ ಎಲ್ಲೂ ತಯಾರಿಸದಂತೆ ನಿಷೇಧಿಸತಕ್ಕದ್ದು.

9) ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಅವಶ್ಯಕ ಎಂದು ಕಂಡುಬಂದಾಗ ಯಾವಾಗಲಾಗಲಿ, ಯಾವ ಸ್ಥಳದಲ್ಲಿಯಾಗಲಿ ಬ್ರಿಟಿಷ್ ಸೈನ್ಯದ ಠಾಣೆಗಳನ್ನು ಸ್ಥಾಪಿಸುವುದಕ್ಕೆ, ನಡೆಸಿಕೊಂಡು ಬರುವುದಕ್ಕೆ ಮೈಸೂರು ಮಹಾರಾಜರು

ಅಡ್ಡಿ ಮಾಡತಕ್ಕದ್ದಲ್ಲ. ಈ ಸೈನ್ಯದ ಠಾಣೆಗಳಿಗೆ ಅಗತ್ಯವಾಗುವ ಭೂಮಿಯನು ಅವರು ಉಚಿತವಾಗಿ ಕೊಡಬೇಕು. ಅಂತಹ ಪ್ರದೇಶಗಳ ಮೇಲೆ ತಮ್ಮ ಎಲ್ಲ ಅಧಿಕಾರವನ್ನು ಅವರು ತ್ಯಜಿಸಬೇಕು. ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಅಗತ್ಯವೆಂದು ಕಂಡುಬಂದ ನಿರ್ಮಲೀಕರಣ ಕಾರ್ಯವನ್ನು ಈ ಸೈನ್ಯದ ಠಾಣೆಗಳ ಅಕ್ಕಪಕ್ಕದ ಪ್ರದೇಶಗಳಲ್ಲಿ ಅವರು ಕೈಕೊಳ್ಳಬೇಕು. ಈ ಪ್ರದೇಶಗಳಲ್ಲಿರುವ ಸೈನ್ಯಕ್ಕೆ ಅಗತ್ಯವಾದ ಎಲ್ಲ ಪದಾರ್ಥಗಳ ಪೂರೈಕೆಗೆ ತಕ್ಕ ಸೌಲಭ್ಯಗಳನ್ನು ಮೈಸೂರು ಮಹಾರಾಜರು ಕಲ್ಪಿಸತಕ್ಕದ್ದು. ಬ್ರಿಟಿಷ್‌ಸರ್ಕಾರದ ಸಮ್ಮತಿಯಿಲ್ಲದೆ ಈ ಉದ್ದೇಶಕ್ಕಾಗಿ ಅವುದು ಮಾಡಿಕೊಂಡ, ಕೊಂಡುಕೊಂಡ ವಸ್ತುಗಳ ಮೇಲೆ ಯಾವ ಬಗೆಯ ಸುಂಕಗಳನ್ನೂ, ತೆರಿಗೆಗಳನ್ನೂ ಅವರು ವಿಧಿಸತಕ್ಕದ್ದಲ್ಲ.

10) ಸಂಸ್ಥಾನದೊಳಗೆ ಶಾಂತಿಪಾಲನೆಗಾಗಿಯೂ, ಮಹಾರಾಜರ ಘನತೆಯನ್ನು ಕಾಪಾಡಲೂ, ಗೌರ್ನರ್-ಜನರಲ್-ಇನ್-ಕೌನ್ಸಿಲ್‌ರವರು ಒಪ್ಪಿರುವ ಇತರ ಉದ್ದೇಶಗಳಿಗಾಗಿಯೂ ಮೈಸೂರು ಸಂಸ್ಥಾನದಲ್ಲಿ ಇಟ್ಟುಕೊಂಡಿರುವ ಸೈನ್ಯದ ಸಂಖ್ಯೆ ಗೌರ್ನರ್-ಜನರಲ್-ಇನ್-ಕೌನ್ಸಿಲ್‌ರವರು ಕಾಲ ಕಾಲಕ್ಕೆ ನಿರ್ಧರಿಸುವ ಮಿತಿಯನ್ನು ಮೀರತಕ್ಕದ್ದಲ್ಲ. ಗೌರ್ನರ್-ಜನರಲ್-ಇನ್-ಕೌನ್ಸಿಲ್‌ರವರು ಸೈನ್ಯಕ್ಕೆ ಸಿಪಾಯಿಗಳನ್ನು ಸೇರಿಸುವ ವಿಷಯದಲ್ಲಿಯೂ, ಅದರ ವ್ಯವಸ್ಥೆಗೂ ಆಯುಧ ಸಾಮಗ್ರಿ ಮುಂತಾದವಕ್ಕೂ, ತರಬೇತಿಗೆ ಸಂಬಂಧಪಟ್ಟಂತೆಯೂ ಕೊಡುವ ಎಲ್ಲ ನಿರ್ದೇಶನಗಳನ್ನೂ ಮೈಸೂರು ಮಹಾರಾಜರು ಪಾಲಿಸತಕ್ಕದ್ದು.

11) ಮೈಸೂರು ಮಹಾರಾಜರು ಬೇರೆ ಯಾವ ಸಂಸ್ಥಾನದ ಅಥವಾ ರಾಜ್ಯದ ವ್ಯವಹಾರಗಳಲ್ಲೂ ಮಧ್ಯೆ ಪ್ರವೇಶಿಸಕೂಡದು. ಯಾವ ಸಂಸ್ಥಾನ ಅಥವಾ ರಾಜ್ಯದೊಡನಾಗಲಿ, ಅಂತಹ ಸಂಸ್ಥಾನ ಅಥವಾ ರಾಜ್ಯಗಳ ಪ್ರತಿನಿಧಿಗಳು ಅಥವಾ ಅಧಿಕಾರಿಗಳೊಂದಿಗಾಗಲಿ, ಗೌರ್ನರ್-ಜನರಲ್-ಇನ್-ಕೌನ್ಸಿಲ್ ಅವರ ಅನುಮತಿ ಇಲ್ಲದೇ ಅವರ ಮೂಲಕವಾಗಿಯಲ್ಲದೇ ಸಂಪರ್ಕವನ್ನು ಇಟ್ಟುಕೊಳ್ಳಲಾಗದು, ಪತ್ರವ್ಯವಹಾರ ನಡೆಸಲಾಗದು.

12) ಮೈಸೂರು ಮಹಾರಾಜರು ಗೌರ್ನರ್-ಜನರಲ್-ಇನ್-ಕೌನ್ಸಿಲ್‌ನ ಅನುಮತಿ ಇಲ್ಲದೆ ಭಾರತದೇಶೀಯರಲ್ಲದವರನ್ನು ನೌಕರರನ್ನಾಗಿ ಇಟ್ಟುಕೊಳ್ಳಕೂಡದು. ಗೌರ್ನರ್-ಜನರಲ್-ಇನ್-ಕೌನ್ಸಿಲ್ ನಿರ್ದೇಶನವಿತ್ತಾಗ ಹಾಗೆ ನೌಕರನಾಗಿರುವ ಪರದೇಶೀಯನನ್ನು ಅವರು ಕೆಲಸದಿಂದ ತೆಗೆದುಹಾಕತಕ್ಕದ್ದು.

13) ಭಾರತಸರ್ಕಾರದ ನಾಣ್ಯಗಳು ಮೈಸೂರು ಸಂಸ್ಥಾನದಲ್ಲಿ ಅಧಿಕೃತ ನಾಣ್ಯಗಳಾಗಿರತಕ್ಕದ್ದು. ಬ್ರಿಟಿಷ್‌ಭಾರತದಲ್ಲಿ ಈ ನಾಣ್ಯಗಳಿಗೆ, ತತ್ಕಾಲದಲ್ಲಿ ಅನ್ವಯವಾಗುವ ಎಲ್ಲ ಕಾನೂನುಗಳೂ, ನಿಯಮಗಳೂ ಈ ಸಂಸ್ಥಾನದಲ್ಲಿ ಅನ್ವಯವಾಗುವುವು. ಬಹಳ ಕಾಲದಿಂದ ಚಾಲ್ತಿಯಲ್ಲಿ ಇಲ್ಲದೇ ಇರುವ ಮೈಸೂರಿನ ಪ್ರತ್ಯೇಕ ನಾಣ್ಯಗಳನ್ನು ಮತ್ತೆ ಚಲಾವಣೆಗೆ ತರಲಾಗದು.

14) ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಸಂಸ್ಥಾನದಲ್ಲಿ ಎಲ್ಲಿ ಅಗತ್ಯವೆಂದು ಕಂಡುಬಂದರೆ ಅಲ್ಲಿ ತಂತಿಮಾರ್ಗಗಳಿಗೆ ಬೇಕಾಗುವ ಭೂಮಿಯನ್ನು ಮೈಸೂರು ಮಹಾರಾಜರು ಉಚಿತವಾಗಿ ಕೊಡತಕ್ಕದ್ದು. ಈ ಮಾರ್ಗಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅಗತ್ಯವಾದ ಸೌಲಭ್ಯಗಳನ್ನು ಅವರು ಕೊಡತಕ್ಕದ್ದು. ಬ್ರಿಟಿಷ್‌ಸರ್ಕಾರದ ಖರ್ಚಿನಿಂದ ನಿರ್ಮಿಸಿರುವ, ನಿರ್ವಹಿಸುವ ತಂತಿ ಮಾರ್ಗಗಳಾಗಲಿ, ಮೈಸೂರು ರಾಜ್ಯಾದಾಯದಿಂದ ನಿರ್ಮಿಸಿರುವ, ನಿರ್ವಹಿಸುವ ತಂತಿಮಾರ್ಗಗಳಾಗಲಿ, ಸಂಸ್ಥಾನದಲ್ಲಿರುವ ಎಲ್ಲ ತಂತಿಮಾರ್ಗಗಳೂ ಬ್ರಿಟಿಷ್ ತಂತಿವ್ಯವಸ್ಥೆಯ ಭಾಗವಾಗಿರತಕ್ಕದ್ದು. ಬ್ರಿಟಿಷ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಮಧ್ಯೆ ಆಗಬಹುದಾದ ಒಪ್ಪಂದದಂತೆ ವಿಶೇಷವಾಗಿ ಮೈಸೂರು ನಿರ್ವಹಿಸಬಹುದೆಂದು ಒಪ್ಪಲಾಗುವ ಮಾರ್ಗಗಳ ಹೊರತಾಗಿ, ಮಿಕ್ಕೆಲ್ಲ ಮಾರ್ಗಗಳನ್ನು ಬ್ರಿಟಿಷ್ ತಂತಿ ಇಲಾಖೆಯೇ ನಿರ್ವಹಿಸತಕ್ಕದ್ದು. ಬ್ರಿಟಿಷ್‌ಭಾರತದಲ್ಲಿ ಈ ಮಾರ್ಗಗಳಿಗೆ ತತ್ಕಾಲದಲ್ಲಿ ಅನ್ವಯವಾಗುವ ಕಾನೂನುಗಳೂ, ನಿಯಮಗಳೂ ಮೈಸೂರಿನಲ್ಲಿರುವ ಈ ತಂತಿ ಮಾರ್ಗಗಳಿಗೂ ಅನ್ವಯವಾಗುವುವು.

15) ಬ್ರಿಟಿಷ್ ಸರ್ಕಾರವು ಯಾವಾಗ ತಾನಾಗಿಯೋ ಅಥವಾ ಇತರರಿಂದಲೋ ಸಂಸ್ಥಾನದಲ್ಲಿ ರೈಲ್ವೆಮಾರ್ಗವನ್ನು ನಿರ್ಮಿಸಲು, ನಿರ್ವಹಿಸಲು ಬಯಸಿದರೆ ಮೈಸೂರು ಮಹಾರಾಜರು ಆ ಉದ್ದೇಶಕ್ಕಾಗಿ ಬೇಕಾಗುವ ಭೂಮಿಯನ್ನು ಉಚಿತವಾಗಿ ಕೊಡತಕ್ಕದ್ದು. ಹೀಗೆ ಕೊಟ್ಟ ಪ್ರದೇಶದ ಮೇಲೆ ಗೌರ್ನರ್-ಜನರಲ್ ಇನ್-ಕೌನ್ಸಿಲ್‌ಗೆ ಸಂಪೂರ್ಣ ಅಧಿಕಾರವನ್ನು ವರ್ಗಾಯಿಸತಕ್ಕದ್ದು. ಇಂತಹ ರೈಲು ಮಾರ್ಗದ ಮೂಲಕ ಸಂಸ್ಥಾನದಲ್ಲಿ ಎಲ್ಲೂ ಇಳಿಸದೇ ಸಾಮಾನುಗಳನ್ನು ಸಾಗಿಸಿದರೆ ಅವುಗಳ ಮೇಲೆ ಯಾವ ಬಗೆಯ ಸುಂಕವನ್ನೂ, ತೆರಿಗೆಯನ್ನೂ ಮೈಸೂರು ಸರ್ಕಾರವು ವಿಧಿಸಲಾಗದು.

16 ಬ್ರಿಟಿಷ್ ಭಾರತದಲ್ಲಿ ಅಪರಾಧವೆಸಗಿದನೆಂಬ ಆಪಾದನೆಗೆ ಗುರಿಯಾದ ವ್ಯಕ್ತಿ ಸಂಸ್ಥಾನದೊಳಗಿದ್ದರೆ ಬ್ರಿಟಿಷ್ ರಾಜಪ್ರತಿನಿಧಿಯೋ ಅವರಿಂದ ನಿಯುಕ್ತರಾದವರೋ, ಅಂತಹ ವ್ಯಕ್ತಿಯನ್ನು ಬಂಧಿಸಿ ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸತಕ್ಕದ್ದೆಂದು ಕೇಳಿದರೆ ಮೈಸೂರು ಮಹಾರಾಜರು ಅವನನ್ನು ಹಾಗೆ ಬಂಧಿಸಿ ಅವರಿಗೆ ಒಪ್ಪಿಸತಕ್ಕದ್ದು. ಅಂತಹ ವ್ಯಕ್ತಿಯ ವಿಚಾರಣೆಗೆ ಸಾಕ್ಷಿಗಳನ್ನು ಬರುವಂತೆ ಮಾಡುವ ಮತ್ತು ಅಗತ್ಯವಾದ ಇತರ ಕ್ರಮಗಳನ್ನು ಕೈಗೊಂಡು ಅವರು ಸರ್ವ ಸಹಾಯವನ್ನು ಕೊಡತಕ್ಕದ್ದು.

17) ಸಂಸ್ಥಾನದಲ್ಲಿರುವ ಯೂರೋಪಿಯನ್ ಬ್ರಿಟಿಷ್ ಪ್ರಜೆಗಳ ಮೇಲೆ ಈಗಿರುವಂತೆಯೇ ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಅಪರಾಧವನ್ನು ವಿಚಾರಣೆ ಮಾಡುವ, ಶಿಕ್ಷಿಸುವ ಸಂಪೂರ್ಣ ಅಧಿಕಾರ ಮುಂದುವರಿಯತಕ್ಕದ್ದು. ಗೌರ್ನರ್-ಜನರಲ್-ಇನ್-ಕೌನ್ಸಿಲ್ ಕಾಲ ಕಾಲಕ್ಕೆ ಮೈಸೂರು ಮಹಾರಾಜರಿಗೆ ಈ ಯೂರೋಪಿಯನ್ ಬ್ರಿಟಿಷ್ ಪ್ರಜೆಗಳ ಮೇಲೆ ವಹಿಸಬಹುದಾದ ಅಧಿಕಾರವನ್ನು ಮಾತ್ರ ಅವರು ಹೊಂದಿರತಕ್ಕದ್ದು.

18) ಗೌರ್ನರ್-ಜನರಲ್-ಇನ್-ಕೌನ್ಸಿಲ್ ಮೈಸೂರಿನೊಳಗೆ ಉಪ್ಪು, ಅಫೀಮುಗಳನ್ನು ತಯಾರಿಸುವುದನ್ನೂ, ಗಸಗಸೆಯನ್ನು ಬೆಳೆಯುವುದನ್ನೂ ನಿಷೇಧಿಸಬೇಕೆಂದು ಅಥವಾ ಆ ಬಗೆಗೆ ಮಿತಿಯನ್ನು ವಿಧಿಸತಕ್ಕದ್ದೆಂದು ಅಪೇಕ್ಷಿಸಿದರೆ ಮೈಸೂರು ಮಹಾರಾಜರು ಹಾಗೆ ಮಾಡತಕ್ಕದ್ದು. ಉಪ್ಪು, ಅಫೀಮು ಗಸಗಸೆಗಳ ಆಮದು ರಫ್ತಿನ ಬಗೆಗೆ ಗೌರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಸೂಕ್ತವೆಂದು ತೋರುವ ಎಲ್ಲ ನಿಬಂಧನೆಗಳನ್ನೂ ಮೈಸೂರು ಮಹಾರಾಜರು ಜಾರಿಗೆ ತರತಕ್ಕದ್ದು.

19) ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ವಶಕ್ಕೆ ಮೈಸೂರು ಸಂಸ್ಥಾನವನ್ನು ಒಪ್ಪಿಸುವಾಗ ಜಾರಿಯಲ್ಲಿರುವ (ಇದರೊಂದಿಗೆ ಅನುಬಂಧದಲ್ಲಿ ತೋರಿಸಿರುವ*) ಕಾನೂನುಗಳೂ, ಕಾನೂನಿನಂತೆ ಅನ್ವಯವಾಗುವ ನಿಯಮಗಳೂ ಇನ್ನು ಮುಂದೆಯೂ ಅನ್ವಯವಾಗತಕ್ಕದ್ದು, ಅವನ್ನು

---

* ಈ ಕಾನೂನುಗಳ ಮತ್ತು ನಿಯಮಗಳ ಪಟ್ಟಿಯನ್ನು ಇಲ್ಲಿ ಬಿಟ್ಟುಬಿಟ್ಟಿದೆ.

ದಕ್ಷತೆಯಿಂದ ನಿರ್ವಹಿಸತಕ್ಕದ್ದು. ಗೌರ್ನರ್–ಜನರಲ್ –ಇನ್ – ಕೌನ್ಸಿಲ್‌ನ ಪೂರ್ವಭಾವಿಯಾದ ಅನುಮತಿಯಿಲ್ಲದೆ ಈ ಕಾನೂನುಗಳನ್ನು ರದ್ದುಮಾಡತಕ್ಕದ್ದಲ್ಲ, ಬದಲಾವಣೆ ಮಾಡತಕ್ಕದ್ದಲ್ಲ. ಮೈಸೂರು ಮಹಾರಾಜರು ಅವುಗಳಿಗೆ ವಿಸಂಗತವಾದ ಕಾನೂನುಗಳನ್ನೂ, ನಿಯಮಗಳನ್ನೂ ಅಸ್ತಿತ್ವಕ್ಕೆ ತರತಕ್ಕದ್ದಲ್ಲ.

20) ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರ ವಶಕ್ಕೆ ಸಂಸ್ಥಾನವನ್ನು ಒಪ್ಪಿಸುವಾಗ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಯಲ್ಲಿ ಗೌರ್ನರ್-ಜನರಲ್ ಇನ್–ಕೌನ್ಸಿಲ್ಲಿನ ಅನುಮತಿ ಇಲ್ಲದೆ ಯಾವ ಮುಖ್ಯವಾದ ಬದಲಾವಣೆಯನ್ನೂ ಮಾಡತಕ್ಕದ್ದಲ್ಲ.

21) ಬ್ರಿಟಿಷ್ ಸರ್ಕಾರ ಸಂಸ್ಥಾನದ ಆಡಳಿತವನ್ನು ನಿರ್ವಹಿಸುತ್ತಿದ್ದಾಗ ಅಸ್ತಿತ್ವಕ್ಕೆ ಬಂದು, 25-3-1881ರಂದು ಚಾಲ್ತಿಯಲ್ಲಿರುವ ಎಲ್ಲ ಹಕ್ಕುಪತ್ರಗಳೂ, ಭೂಕಂದಾಯದ ತೀರ್ಮಾನುಗಳೂ ಮುಂದುವರಿಯತಕ್ಕದ್ದು. ಸೂಕ್ತ ಅಧಿಕಾರವುಳ್ಳ ನ್ಯಾಯಸ್ಥಾನಗಳು ಮಾತ್ರ ಅವುಗಳನ್ನು ರದ್ದು ಮಾಡಬಲ್ಲವು, ಅಥವಾ ಬದಲಾಯಿಸಬಲ್ಲವು. ಇಲ್ಲವೇ ಗೌರ್ನರ್-ಜನರಲ್-ಇನ್–ಕೌನ್ಸಿಲ್‌ನ ಅನುಮತಿ ಪಡೆದು ಅವನ್ನು ರದ್ದುಮಾಡಬಹುದು ಅಥವಾ ಬದಲಾವಣೆಮಾಡಬಹುದು.

22) ಹಣಕಾಸಿನ ಆಡಳಿತಕ್ಕೂ, ಭೂಕಂದಾಯದ ನಿರ್ಧಾರ ಮತ್ತು ವಸೂಲಿಗೂ, ತೆರಿಗೆಗಳನ್ನು ವಿಧಿಸುವುದಕ್ಕೂ, ನ್ಯಾಯಾಡಳಿತಕ್ಕೂ, ವಾಣಿಜ್ಯದ ಬೆಳವಣಿಗೆಗೂ, ವ್ಯಾಪಾರ ವ್ಯವಸಾಯ ಕೈಗಾರಿಕೋದ್ಯಮಗಳ ಪ್ರೋತ್ಸಾಹಕ್ಕೂ, ಮಹಾರಾಜರ ಹಿತಾಸಕ್ತಿಗಳ ಅಭಿವೃದ್ಧಿಗೂ, ಅವರ ಪ್ರಜೆಗಳ ಸಮೃದ್ಧಿಗೂ. ಮಹಾರಾಜರಿಗೂ ಬ್ರಿಟಿಷ್ ಸರ್ಕಾರಕ್ಕೂ ಇರುವ ಸಂಬಂಧದ ಬಗೆಗೂ ಗೌರ್ನರ್ ಜನರಲ್-ಇನ್-ಕೌನ್ಸಿಲ್ ಕೊಡುವ, ಸಲಹೆ ಸೂಚನೆಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಮೈಸೂರು ಮಹಾರಾಜರು ಅನುಸರಿಸತಕ್ಕದ್ದು.

23) ಮೈಸೂರು ಮಹಾರಾಜರು ಮೇಲ್ಕಂಡ ಷರತ್ತುಗಳಲ್ಲಿ ಯಾವುದನ್ನು ಉಲ್ಲಂಘಿಸಿದರೂ, ಪಾಲಿಸದಿದ್ದರೂ ಗೌರ್ನರ್ - ಜನರಲ್ - ಇನ್ - ಕೌನ್ಸಿಲ್ ಸಂಸ್ಥಾನವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು ಅವರ ಆಡಳಿತವನ್ನು

ನೇರವಾಗಿ ವಹಿಸಿಕೊಳ್ಳಬಹುದು, ಅಥವಾ ಮೈಸೂರಿನ ಜನತೆಗೆ ಒಳ್ಳೆಯ ಆಡಳಿತ ದೊರಕಿಸುವುದಕ್ಕಾಗಲೀ, ಪ್ರಾಂತ್ಯದಲ್ಲಿ ಬ್ರಿಟಿಷರ ಹಕ್ಕುಗಳನ್ನೂ ಹಿತಾಸಕ್ತಿಗಳನ್ನೂ ಸಂರಕ್ಷಿಸುವುದಕ್ಕಾಗಲೀ, ಗೌರ್ನರ್–ಜನರಲ್–ಇನ್–ಕೌನ್ಸಿಲ್ ತನಗೆ ತೋರಿದ ಬೇರೆ ಯಾವ ವ್ಯವಸ್ಥೆಯನ್ನಾದರೂ ಮಾಡಬಹುದು.

24) ಮೈಸೂರುಸಂಸ್ಥಾನಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಇರುವ ಸಂಬಂಧದ ವಿಷಯವನ್ನು ಈ ಹಿಂದೆ ನಿರೂಪಿಸಿರುವ ಇತರ ಎಲ್ಲ ಅಧಿಕೃತ ಪತ್ರಗಳನ್ನೂ ಈ ಪತ್ರವು ರದ್ದು ಮಾಡುತ್ತದೆ. ಈ ಮೇಲ್ಕಂಡ ಷರತ್ತುಗಳಲ್ಲಿ ಯಾವುದನ್ನಾದರೂ ಸರಿಯಾಗಿ ಪಾಲಿಸಲಾಗಿದೆಯೇರಾಜ್ಯಾಡಳಿತಕ್ಕೆ ಯಾರು ಉತ್ತರಾಧಿಕಾರಿಯಾಗಲು ಹಕ್ಕುಳ್ಳವರು ಯಾವ ಉತ್ತರಾಧಿಕಾರಿಯಾದರೂ ಪಟ್ಟಕ್ಕೆ ಅರ್ಹನೇ ಎಂಬ ಯಾವ ಪ್ರಶ್ನೆ ಉದ್ಭವಿಸಿದರೂ ಆ ವಿಷಯದಲ್ಲಿ ಗೌರ್ನರ್-ಜನರಲ್-ಇನ್-ಕೌನ್ಸಿಲ್ ಕೊಡುವ ತೀರ್ಮಾನವೇ ಕೊನೆಯದು.

ಫೋರ್ಟ್ ವಿಲಿಯಂ
1 ನೇ ಮಾರ್ಚಿ 1881

(ರುಜು)
ರಿಪ್ಪನ್
ವೈಸ್‌ರಾಯ್ ಮತ್ತು ಗೌರ್ನರ್ ಜನರಲ್

# ರಂಗಾಚಾರ್ಲುರವರ ಜೀವನದಲ್ಲಿನ ಮುಖ್ಯ ಘಟನೆಗಳು

| | |
|---|---|
| 1831 | ಜನನ |
| 1841 | ಪಚ್ಚೈಯ್ಯಪ್ಪ ಶಾಲೆಯ ವಿದ್ಯಾರ್ಥಿಯಾಗಿ ಸೇರಿದುದು. |
| 1843 | ಮದ್ರಾಸ್ ಪ್ರೌಢಶಾಲೆಯನ್ನು ಸೇರಿದುದು, ತಿಂಗಳಿಗೆ 14 ರೂಪಾಯಿ ವಿದ್ಯಾರ್ಥಿ ವೇತನವನ್ನು ಪಡೆದುದು. |
| 1845 | ಅಲಮೇಲಮ್ಮನವರೊಂದಿಗೆ ವಿವಾಹ. |
| 1846 | ಮದ್ರಾಸ್ ಪ್ರೌಢಶಾಲೆಯ ಮುಖ್ಯಸ್ಥರಾದ ಇ. ಬಿ. ಪವೆಲ್ ರವರು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ರಂಗಾಚಾರ್ಲು ರವರು ತಮ್ಮ ಪಾಠ ಪ್ರವಚನಗಳಲ್ಲಿ ತೋರಿಸಿದ ಪ್ರಗತಿ ಯನ್ನು ಕುರಿತು ವರದಿ ಮಾಡಿದುದು. |
| 1849 | ಫಸ್ಟ್ ಪ್ರೊಫಿಷಿಯಂಟ್ ಪರೀಕ್ಷೆಯಲ್ಲಿ ಪ್ರಶಸ್ತಿಗಳಿಸಿದುದು ಮತ್ತು ಎಲ್‌ಫಿನ್‌ಸ್ಟೋನ್ ಸ್ಮಾರಕ ಪ್ರಬಂಧಸ್ಪರ್ಧೆಯಲ್ಲಿ ಬಹುಮಾನವನ್ನು ಗಳಿಸಿದುದು. |
| 6ನೇ ಮೇ 1850 | ಮದ್ರಾಸ್ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ತಾತ್ಕಾಲಿಕ ಹುಜೂರ್ ಉಪಲೆಕ್ಕ ಪರೀಕ್ಷಕರಾಗಿ ನಿಯಮಿತರಾದುದು. |
| 1850 | ಸರ್ಕಾರಿ ಅಧಿಕಾರಿಗಳ ಪರೀಕ್ಷೆಯಲ್ಲಿ ತೇರ್ಗಡೆಯಾದುದು. |
| 20ನೇ ಆಗಸ್ಟ್ 1850 | ಚಂಗಲ್‌ಪೇಟೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಉಪ ಮುನ್ಷಿಯಾಗಿ ಖಾಯಂ ಹುದ್ದೆಗೆ ನಿಯಮಿತ ರಾದುದು. |
| ಸೆಪ್ಟೆಂಬರ್ 1850 | ಸೇಲಂಗೆ ಇಂಗ್ಲೀಷ್ ದಫ್ತರ್ ಅಧಿಕಾರಿಯಾಗಿ ವರ್ಗಾ ವಣೆಯಾದುದು. |
| 11ನೇ ಸೆಪ್ಟೆಂಬರ್ 1851 | ಚೆಂಗಲ್‌ಪೇಟೆಗೆ ಉಪಲೆಕ್ಕಪರೀಕ್ಷಕರಾಗಿ ವರ್ಗಾವಣೆ. |
| ಮೇ 1852 | ಮುಖ್ಯ ಗುಮಾಸ್ತ ಮತ್ತು ಭಾಷಾಂತರಕಾರರಾಗಿ ಬಡತಿ. |
| ಫೆಬ್ರವರಿ 1855 | ಇನ್ನೊಂದು ಸರ್ಕಾರಿ ಅಧಿಕಾರಿಗಳ ಪರೀಕ್ಷೆಯಲ್ಲಿ ಮೊದಲನೆಯ ಸ್ಥಾನವನ್ನು ಗಳಿಸಿದುದು. ಈ ಪರೀಕ್ಷೆ ಯಲ್ಲಿ ವಿಶೇಷ ಅರ್ಹತೆಯನ್ನು ತೋರಿಸಿದ ಕಾರಣ |

| | |
|---|---|
| | 500 ರೂಪಾಯಿಗಳ ಬಹುಮಾನವನ್ನು ಪಡೆದದು. |
| ಜುಲೈ 1855 | ಮದ್ರಾಸ್ ಲಾ ಕಾಲೇಜನ್ನು ಸೇರಿದುದು (ಆದರೆ ಕಾನೂನಿನ ವ್ಯಾಸಂಗವನ್ನು ರಂಗಾಚಾರ್ಲುರವರು ಪೂರ್ಣಮಾಡಲಾಗಲಿಲ್ಲ.) |
| 1856 | ಸಿವಿಲ್ ಕೋರ್ಟ್ ಪ್ಲೀಡರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದುದು. |
| 2ನೇ ಮಾರ್ಚ್ 1856 | ಸೈದಾಪೇಟೆಯ ತಹಶೀಲ್ದಾರರಾಗಿ ನಿಯಮಿತರಾದದು. |
| 1856 | "ಭೂಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಲಂಚ ರುಷವತ್ತುಗಳು" ಎಂಬ ಪುಸ್ತಕವನ್ನೂ "ಚಂಗಲ್‌ಪೇಟೆ ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಮಿರಾಸಿ ಹಕ್ಕುಗಳು" ಎಂಬ ಪುಸ್ತಕವನ್ನೂ ಪ್ರಕಟಿಸಿದುದು. |
| ಜುಲೈ 1857 | ನೆಲ್ಲೂರಿನ ನಾಯಬ್ ಶಿರಸ್ತೇದಾರರಾಗಿ ನೇಮಕ. |
| ಮಾರ್ಚ್ 1859 | ರಾಜಮಹೇಂದ್ರಿಯಉಪಜಿಲ್ಲಾಧಿಕಾರಿಗಳಾಗಿ ನೇಮಕ. |
| 1859 | ಮದ್ರಾಸ್ ಇನಾಂ ಆಯೋಗದ ಅಧ್ಯಕ್ಷರ ಸಹಾಯಕರಾಗಿ ನೇಮಕ. |
| 1864 | ಭಾರತೀಯ ರೈಲ್ವೆ ಆಯೋಗದ ಅಧ್ಯಕ್ಷರ ಸಹಾಯಕರಾಗಿ ನೇಮಕ, ಕಲ್ಕತ್ತಾಗೆ ಸಮುದ್ರ ಪ್ರಯಾಣ. |
| 1864 | ಮದ್ರಾಸ್ ರೈಲ್ವೆ ಕಂಪನಿಯ ಕಮಿಷನರಾಗಿ ನೇಮಕ. |
| 15ನೇ ನವೆಂಬರ್ 1864 | ಕಲ್ಲೀಕೋಟೆಯ ಖಜಾನೆಯ ಉಪಮುಖ್ಯಸ್ಥರಾಗಿ ನೇಮಕ |
| ಜೂನ್ 1868 | ಮೈಸೂರು ಅರಮನೆಯ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಮೇಜರ್ ಇಲಿಯಟ್‌ರವರ ಸಹಾಯಕರಾಗಿ ನೇಮಕ. |

| | |
|---|---|
| ಡಿಸೆಂಬರ್ 1868 | ಮೈಸೂರು ಅರಮನೆಯ ಆಯವ್ಯಯದ ಅಧಿಕಾರಿಯಾಗಿಯೂ, ಮಹಾರಾಜರ ಪೋಷಕರ ಸಹಾಯಕರಾಗಿಯೂ ನೇಮಕ. |
| 1874 | " ಮೈಸೂರಿನಲ್ಲಿ 50 ವರ್ಷಗಳ ಬ್ರಿಟಿಷ್ ಆಡಳಿತ " ಎಂಬ ಪುಸ್ತಕದ ಪ್ರಕಟಣೆ. |
| ಮೇ 1879 | ಭೂಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿ ನೇಮಕ. |
| 1880 | ಭಾರತ ಸರ್ಕಾರದಿಂದ ರಂಗಾಚಾರ್ಲುರವರು ಸಿ.ಐ.ಇ ಬಿರುದನ್ನು ಪಡೆದುದು. |
| 25ನೇ ಮಾರ್ಚ್ 1881 | ಮೈಸೂರಿನ ದಿವಾನರಾಗಿ ನೇಮಕ. |
| 20ನೇ ಜನವರಿ 1883 | ಮರಣ. |

# ಲಘುಶಬ್ದಕೋಶ

| | |
|---|---|
| ಅಮಲ್ದಾರ್ | ಒಂದು ತಾಲ್ಲೂಕಿನ ಆಡಳಿತದ ಮುಖ್ಯಸ್ಥ. ಅಲ್ಲಿಯ ಕಂದಾಯವನ್ನು ವಸೂಲ್ಮಾಡುವ ಮುಖ್ಯಾಧಿಕಾರಿ. |
| ಆಬ್ಕಾರಿ | ಮಾದಕ ಪಾನೀಯಗಳ ತಯಾರಿ ಮತ್ತು ಮಾರಾಟದ ಮೇಲೆ ವಿಧಿಸಿದ ತೆರಿಗೆಗಳಿಂದ ಬರುವ ಆದಾಯ. |
| ಇನಾಂ | ಸರ್ಕಾರದವರು ಮಠ ಇತ್ಯಾದಿ ಧಾರ್ಮಿಕ ಸಂಸ್ಥೆಗಳಿಗಾಗಲಿ ವ್ಯಕ್ತಿಗಳಿಗಾಗಲಿ ದಾನವಾಗಿ ಕೊಟ್ಟ ಭೂಮಿ. |
| ಕಂಠೀರಾಯ ಪಗೋಡ (ಕಂಠೀರಾಯ ವರಹ) | ಮೈಸೂರಿನ ರಾಜರಾಗಿದ್ದ ರಣಧೀರ ಕಂಠೀರವ ನರಸರಾಜ ಒಡೆಯರವರ (1638—1659) ಕಾಲದಲ್ಲಿ ಛಾಪಿಸಿದ ಒಂದು ನಾಣ್ಯ. ಈ ನಾಣ್ಯಕ್ಕೆ ಸುಮಾರು 3 ರೂಪಾಯಿಗಳ ಬೆಲೆ ಇದ್ದಿತು. |
| ಜನಾನಾ | ಸ್ತ್ರೀಯರ ಉಪಯೋಗಕ್ಕಾಗಿಯೇ ಮೀಸಲಾಗಿರುವ ಅರಮನೆ ಮುಂತಾದ ನಿವಾಸಗಳ ಭಾಗ. |
| ಜಿಲ್ಲಾಧಿಕಾರಿ | ಒಂದು ಜಿಲ್ಲೆಯ ಆಡಳಿತದ ಮುಖ್ಯಸ್ಥ. ಅಲ್ಲಿಯ ಕಂದಾಯವನ್ನು ವಸೂಲ್ಮಾಡುವ ಮುಖ್ಯಾಧಿಕಾರಿ. |
| ತಹಶೀಲ್ದಾರ್ | ಒಂದು ತಾಲ್ಲೂಕಿನ ಆಡಳಿತದ ಮುಖ್ಯಸ್ಥ. ಅಲ್ಲಿಯ ಕಂದಾಯವನ್ನು ವಸೂಲ್ಮಾಡುವ ಮುಖ್ಯಾಧಿಕಾರಿ. |
| ದಿವಾನ್ | ಒಂದು ಸಂಸ್ಥಾನದ ಆಡಳಿತದ ಮುಖ್ಯಾಧಿಕಾರಿ. |
| ದಿವಾನ್ ಬಹದ್ದೂರ್ | ಬ್ರಿಟಿಷರು ರಾಜ್ಯವಾಳುತ್ತಿದ್ದಾಗ ವೈಸರಾಯರು ಕೊಡುತ್ತಿದ್ದ ಬಿರುದು, ರಾಜಾ ಎನ್ನುವ ಬಿರುದಿಗಿಂತ ಸ್ವಲ್ಪ ಕಡಿಮೆಯದು. |
| ದಫ್ತರ್ | ದಾಖಲುಗಳು ಅಥವಾ ಕಡತ. ಇಂತಹ ದಾಖಲುಗಳನು ಇಡುವ ಸ್ಥಳ. |

| | |
|---|---|
| ಫನಾವ್ | ಚಿನ್ನ ಅಥವಾ ಬೆಳ್ಳಿಯಿಂದ ಮಾಡಿದ ಒಂದು ಸಣ್ಣ ನಾಣ್ಯ. ಅದರ ಬೆಲೆ ನಾಲ್ಕಾಣೆ ಎಂಟು ಕಾಸುಗಳು. |
| ಮಿರಾಸಿ | ಪಟೇಲಿ, ಶ್ಯಾನುಭೋಗಿಕೆ ಇಂತಹ ಗ್ರಾಮಾಧಿಕಾರಿಗಳ ಸ್ಥಾನಕ್ಕೆ ವಂಶಪಾರಂಪರ್ಯವಾಗಿ ಬಂದಿರುವ ಹಕ್ಕು. |
| ಮೊಹತರ್ಫ | ಮಗ್ಗಗಳು, ಅಂಗಡಿಗಳು ಮತ್ತು ಮನೆಗಳ ಮೇಲಿನ ಕಂದಾಯ. |
| ಮೊಹರ್ | 15 ರೂಪಾಯಿ ಬೆಲೆಯುಳ್ಳ ಚಿನ್ನದ ನಾಣ್ಯ. |
| ರಾಜಾ | ಬ್ರಿಟಿಷ್ ಆಡಳಿತ ಕಾಲದಲ್ಲಿ ವೈಸರಾಯರು ಹಿಂದುಗಳಿಗೆ ಕೊಡುತ್ತಿದ್ದ ಬಿರುದು, ಮಹಾರಾಜಾ ಎಂಬ ಬಿರುದಿಗೆ ಕಡಿಮೆಯಾದದ್ದು. |
| ರಿಸಾಲೆ | ಮೈಸೂರು ಅಶ್ವಪಡೆಯ ಒಂದು ವಿಭಾಗ. |
| ರಿಸಾಲ್ದಾರ್ | ರಿಸಾಲೆಯ ಮುಖ್ಯಾಧಿಕಾರಿ. |
| ಶಿರಸ್ತೇದಾರ್ | ಜಿಲ್ಲಾಧಿಕಾರಿಯ ಕಛೇರಿಯಲ್ಲಿರುತ್ತಿದ್ದ ಮುಖ್ಯ ಭಾರತೀಯ ಅಧಿಕಾರಿ. ಜಿಲ್ಲಾಧಿಕಾರಿಯ ಮುಖ್ಯ ಸಲಹೆಗಾರ (ರಂಗಾಚಾರ್ಲುರವರು ಅಧಿಕಾರದಲ್ಲಿದ್ದ ಕಾಲದಲ್ಲಿ ಜಿಲ್ಲಾಧಿಕಾರಿಗಳು ಯೂರೋಪಿಯನ್ನರೇ ಆಗಿರುತ್ತಿದ್ದರು. ಅವರ ಕಛೇರಿಯಲ್ಲಿ ಇರುತ್ತಿದ್ದ ಮುಖ್ಯ ಭಾರತೀಯ ಅಧಿಕಾರಿಗೆ ಶಿರಸ್ತೇದಾರ್ ಎಂದು ಕರೆಯುತ್ತಿದ್ದರು.) |
| ಶಿಲ್ಲೇದಾರ್ | ಭಲ್ಲೆಯನ್ನು ಹಿಡಿಯುತ್ತಿದ್ದ ಸೈನಿಕ, ಭಲ್ಲೆಯಕಾರ. |
| ಸಾಯರ್ | ಹೊಗೆಸೊಪ್ಪು, ವೀಳ್ಯದೆಲೆ, ತೆಂಗಿನಕಾಯಿ, ಏಲಕ್ಕಿ ಮುಂತಾದವುಗಳ ಮೇಲೆ ವಿಧಿಸುತ್ತಿದ್ದ ತೆರಿಗೆ. |
| ಹಣ | ಒಂದು ಫನಾಮ್. |

# ಈ ಗ್ರಂಥವನ್ನು ಬರೆಯುವುದರಲ್ಲಿ ಪರಿಶೀಲಿಸಿದ ಲೇಖನಗಳ ಮತ್ತು ಗ್ರಂಥಗಳ ಸೂಚಿ


1. ವೈಸೂರು ಸಂಸ್ಥಾನದ ಬ್ರಿಟಿಷ್ ಆಡಳಿತ
(ದಿ ಬ್ರಿಟಿಷ್ ಅಡ್ಮಿನಿಸ್ಟ್ರೇಷನ್ ಆಫ್ ವೈಸೂರ್)
ವೈಸೂರು ದೇಶೀಯನಿಂದ, ಭಾಗ 1 "50 ವರ್ಷಗಳ ಆಡಳಿತ"
ಲಾಂಗ್‌ಮನ್ ಗ್ರೀನ್ ಅಂಡ್ ಕಂಪನಿ, ಲಂಡನ್ (1874)

2. ವೈಸೂರು ಚರಿತ್ರೆ (ಹಿಸ್ಟರಿ ಆಫ್ ವೈಸೂರ್)
ಲೆಫ್ಟಿನೆಂಟ್ ಕರ್ನಲ್ ವಾರ್ಕ್ ವಿಲ್ಕ್ಸ್‌ರವರಿಂದ (ವೊದಲನೆ ಮುದ್ರಣ 1810, ಪುನರ್ಮುದ್ರಣ 1932) ಸರ್ ಮುರ್ರೆ ಹ್ಯಾಮಿಕ್‌ರವರಿಂದ ಸಂಪಾದಿತವಾದದ್ದು (ವೈಸೂರು ಸರ್ಕಾರದ ಶಾಖಾ ಮುದ್ರಣಾಲಯದಲ್ಲಿ ಮುದ್ರಿತವಾದದ್ದು)

3. ವೈಸೂರ್
ಒಂದು ಗ್ಯಾಸೆಟಿಯರ್ ವೈಸೂರು ಸರ್ಕಾರಕ್ಕಾಗಿ ಸಂಕಲಿಸಿದುದು ಬಿ. ಲೂಯಿಸ್ ರೈಸ್, ಸಿ.ಐ.ಇ, ಎಂ.ಆರ್.ಎ.ಎಸ್. ವೈಸೂರು ಮತ್ತು ಕೊಡಗುಗಳ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳು ಅವರಿಂದ (ಎರಡನೆಯ ಆವೃತ್ತಿ 1897) ಆರ್ಕಿಬಾಲ್ಡ್ ಕಾನ್‌ಸ್ಟೇಬಲ್ ಅಂಡ್ ಕಂಪನಿ ಅವರಿಂದ ಪ್ರಕಟವಾದದ್ದು.

4. ವೈಸೂರ್ ಗ್ಯಾಸೆಟಿಯರ್
ಸರ್ಕಾರಕ್ಕಾಗಿ ಸಂಕಲಿತವಾದದ್ದು, ಸಿ. ಹಯವದನರಾವ್‌ರವರಿಂದ ಸಂಪಾದಿತವಾದದ್ದು (ಹೊಸ ಆವೃತ್ತಿ)
ಸರ್ಕಾರಿ ಮುದ್ರಣಾಲಯ, ಬೆಂಗಳೂರಿನಲ್ಲಿ ಮುದ್ರಿತವಾದದ್ದು.
(1930)

5. ಆಧುನಿಕ ಮೈಸೂರು (ಮಾಡರ್ನ್ ಮೈಸೂರ್)
ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾವ್ ಎಂ.ಎ., ಮೈಸೂರು ಸಿವಿಲ್ ಸರ್ವಿಸ್ಸಿನ ನಿವೃತ್ತ ಅಧಿಕಾರಿಗಳು ಅವರಿಂದ, ಹಿಗ್ಗಿನ್ ಬಾಥಂಸ್, ಸೌತ್ ಪರೇಡ್, ಬೆಂಗಳೂರು ಅವರಿಂದ ಪ್ರಕಟಿತವಾದದ್ದು. (1936)

6. ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರುಗಳು ಮಾಡಿದ ಭಾಷಣಗಳು. (ಅಡ್ರೆಸಸ್ ಆಫ್ ದಿ ದಿವಾನ್ಸ್ ಆಫ್ ಮೈಸೂರ್ ಟು ದಿ ದಸರಾ ರೆಪ್ರೆಸೆಂಟಟಿವ್ ಅಸೆಂಬ್ಲಿ) 1881 ರಿಂದ 189. ಭಾಗ–1, ಸರ್ಕಾರಿ ಮುದ್ರಣಾಲಯ, ಬೆಂಗಳೂರಿನಲ್ಲಿ ಮುದ್ರಿತವಾದದ್ದು 1914.

7. ಮೈಸೂರು ಅರಮನೆಯ ಪುನರ್ವ್ಯವಸ್ಥೆ ಮತ್ತು ಮಹಾರಾಜರ ಸಾಲಗಳ ತೀರ್ಪಾಡಿನ ವಿಷಯ ಮೇಜರ್ ಇಲಿಯಟ್‌ರವರು ಮಾಡಿದ ವರದಿ, ಮೇಜರ್ ಇಲಿಯಟ್ ಮೈಸೂರು ಮುಖ್ಯ ಆಡಳಿತಗಾರರು ಮತ್ತು ಭಾರತ ಸರ್ಕಾರದ ಮಧ್ಯೆ ನಡೆದ ಪತ್ರ ವ್ಯವಹಾರಗಳು 1868–69.

8. "ಕರ್ನಾಟಕ ಪ್ರಕಾಶಿಕಾ" ಸಂಚಿಕೆಗಳು (1876 ರಿಂದ 22ನೇ ಜನವರಿ 1883 ರವರೆಗೆ)

9. ಪ್ರಾತಿನಿಧಿಕ ಭಾರತೀಯರು (ರೆಪ್ರೆಸೆಂಟಟಿವ್ ಇಂಡಿಯನ್ಸ್)
ಜಿ. ಪರಮೇಶ್ವರನ್ ಪಿಳ್ಳೈ, ಬಿ.ಎ., ಜಾರ್ಜ್ ರೌಟ್‌ಲೆಡ್ಜ್ ಅಂಡ್ ಸನ್ಸ್ ಲಿಮಿಟೆಡ್, ಬ್ರಾಡ್‌ವೇ, ಲುಡ್‌ಗೇಟ್ ಹಿಲ್, ಮ್ಯಾಂಚೆಸ್ಟರ್ ಅಂಡ್ ನ್ಯೂಯಾರ್ಕ್ 1897.

10. ಭಾರತೀಯರ ಜೀವನ ಚರಿತ್ರೆಗಳು
(ಡಿಕ್ಷನರಿ ಆಫ್ ಇಂಡಿಯನ್ ಬಯಾಗ್ರಫಿ)
ಸಿ.ಇ. ಬಕ್‌ಲ್ಯಾಂಡ್. ಸಿ.ಐ.ಇ. (ಭಾರತ ಸಿವಿಲ್ ಸರ್ವಿಸ್ಸಿನ ನಿವೃತ್ತ ಅಧಿಕಾರಿಗಳು ಅವರಿಂದ) ಸ್ವಾನ್ ಸೊನೆನ್‌ಶೈನ್ ಅಂಡ್ ಕಂಪನಿ ಲಿಮಿಟೆಡ್, 25. ಹೈಸ್ಟ್ರೀಟ್, ಬ್ಲೂಮ್ಸ್‌ಬರಿ, ಲಂಡನ್ (1906.)

11. ಭಾರತ ಚರಿತ್ರೆ (ಹಿಸ್ಟರಿ ಆಫ್ ಇಂಡಿಯಾ)
ಕೆ.ಎ. ನೀಲಕಂಠಶಾಸ್ತ್ರಿ, ಎಂ.ಎ., ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಭಾರತ ಚರಿತ್ರೆ ಮತ್ತು ಪ್ರಾಕ್ತನಶೋಧನ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು ಅವರಿಂದ, ಎಸ್. ವಿಶ್ವನಾಥನ್, ಚಟ್‌ಪಟ್, ಮದ್ರಾಸ್ ಅವರಿಂದ ಪ್ರಕಟಿತವಾದದ್ದು (1952).

12. ದಿವಾನ್ ಸಿ. ರಂಗಾಚಾರ್ಲು (ಇಂಗ್ಲಿಷ್)
ಡಿ. ವಿ. ಗುಂಡಪ್ಪನವರಿಂದ, ಜಿ. ಎ. ನಟೇಶನ್ ಅಂಡ್ ಕಂಪನಿ, ಸುಂಕುರಾಮುಚೆಟ್ಟಿ ಬೀದಿ, ಮದ್ರಾಸ್ ಅವರಿಂದ ಪ್ರಕಟಿತವಾದದ್ದು.

13. ನೆನಪುಗಳು (ರಿವೈವ್ಡ್ ಮೆಮರೀಸ್)
ಕೆ. ಸುಬ್ಬರಾವ್, ಬಿ.ಎ. ಅವರಿಂದ ಗಣೇಶ ಅಂಡ್ ಕಂಪನಿ. ಮದ್ರಾಸ್ (1933).

14. "ಎಂ. ವಿ."
(ಡಾ॥ ಎಂ. ವಿಶ್ವೇಶ್ವರಯ್ಯ) ಶತಮಾನೋತ್ಸವ ಸ್ಮಾರಕ ಗ್ರಂಥ, ವಿಶ್ವೇಶ್ವರಯ್ಯ ಶತಮಾನೋತ್ಸವ ಸಮಿತಿ, ಬೆಂಗಳೂರು ಅವರಿಂದ ಪ್ರಕಟಿತವಾದದ್ದು (1960).

15. ದಿವಾನ್ ಸಿ. ರಂಗಾಚಾರ್ಲು (ಕನ್ನಡ) ಡಿ.ವಿ. ಗುಂಡಪ್ಪನವರಿಂದ, ಕರ್ನಾಟಕ ಪ್ರಕಟನಾಲಯ, ಬೆಂಗಳೂರು ಇವರಿಂದ ಪ್ರಕಟಿತವಾದದ್ದು, 5ನೇ ಆವೃತ್ತಿ (1937).

16. ರಂಗಾಚಾರ್ಲುರವರು (ಕನ್ನಡ)
ಎಂ. ರಾಮರಾಯರಿಂದ, ಸುಬೋಧ ಪ್ರಕಟನಾಲಯ, ಬೆಂಗಳೂರು ಇವರಿಂದ ಪ್ರಕಟಿತವಾದದ್ದು (1930).

17. ಸರ್ ಕೆ. ಶೇಷಾದ್ರಿ ಅಯ್ಯರ್ (ಕನ್ನಡ)
ಎಂ. ರಾಮರಾಯರಿಂದ, ಸುಬೋಧ ಪ್ರಕಟನಾಲಯ, ಬೆಂಗಳೂರು ಇವರಿಂದ ಪ್ರಕಟಿತವಾದದ್ದು (1925).

18. ನೆನಪುಗಳು (ಕನ್ನಡ)

ಕೆ. ವಾಸುದೇವಾಚಾರ್ಯರವರಿಂದ, ಕಾವ್ಯಾಲಯದಿಂದ ಪ್ರಕಟಿತವಾದದ್ದು, ಮೈಸೂರು (1962).

19. ತಾತಯ್ಯ ಸಂಸ್ಮರಣ ಸಂಪು

ವೃದ್ಧಪಿತಾಮಹ ದಯಾಸಾಗರ ಎಂ. ವೆಂಕಟಕೃಷ್ಣಯ್ಯ ಸ್ಮಾರಕ ಸಮಿತಿಯಿಂದ ಪ್ರಕಟಿತವಾದದ್ದು (1969).

20. ಸುಧಾ

ಸ್ವಾತಂತ್ರ್ಯಪೂರ್ವದ ಆರು ದಶಕಗಳು–2 ಭಾರತದ ಪ್ರಪ್ರಥಮ ಪ್ರಜಾರಾಜ್ಯವಾದಿ ರಂಗಾಚಾರ್ಲುರವರು, ಡಿ. ವಿ. ಜಿ. ಯವರಿಂದ (ಜುಲೈ 27, 1969ರ ಸುಧಾ ಸಂಚಿಕೆಯಿಂದ)

21. ಕೀರ್ತಿಶೇಷ ಎಂ. ಎಸ್. ಪುಟ್ಟಣ್ಣನವರು ಬರೆದ ರಂಗಾಚಾರ್ಲುರವರ ಅಪೂರ್ಣ ಜೀವನ ಚರಿತ್ರೆಯ ಹಸ್ತಪ್ರತಿ.

——:0:——

# ಮುಖ್ಯ ವಿಷಯಗಳ ಅಕಾರಾದಿ

ಆ



ಇ

ಈ



ಉ



ಎ



ಐ



ಔ

ಕ

ಚ



ಛ



ಜ

ದ



ಧ



ನ

ಪ



ಫ



ಬ

ಬ

ಬ



ಭ

## ಮ

## ಯ

## ರ

ರ



ಲ



ವ

## ವ



## ಶ

ಶ



ಷ



ಸ

ಸ



ಹ

ಹ

# ದಿವಾನ್ ರಂಗಾಚಾರ್ಲು ಇಂಗ್ಲಿಷ್ ಗ್ರಂಥದ ಮೇಲೆ ಬಂದ ಕೆಲವು ವಿಮರ್ಶೆಗಳು

ಈ ಪ್ರತಿಭಾಶಾಲಿಗಳಾದ ಭಾರತೀಯ ರಾಜನೀತಿಜ್ಞರ ಜೀವನವೃತ್ತಾಂತ ಜನರಿಗೆ ಎಷ್ಟರಮಟ್ಟಿಗೆ ಪರಿಚಯವಾಗಬೇಕೋ ಅಷ್ಟರಮಟ್ಟಿಗೆ ಪರಿಚಯವಾಗಿಲ್ಲ. ಈಗ ಅವರು ಕಾಲವಾಗಿ ಹತ್ತಿರ ಹತ್ತಿರ ಒಂದು ಶತಮಾನ ಕಳೆದಿದ್ದರೂ ಈ ಕಾಲದ ಆಡಳಿತಗಾರರು ಅವರ ಜೀವನದಿಂದ ಕಲಿಯಬೇಕಾದ ಪಾಠಗಳಿವೆ. ಪ್ರಕಾಶಕರು ಈ ಜೀವನ ಚರಿತ್ರೆಯನ್ನು ಭಾರತದ ನಿರ್ಮಾಪಕರ ಗ್ರಂಥಮಾಲೆಯಲ್ಲಿ ಸೇರಿಸಿರುವುದೂ, ಅದನ್ನು ರಚಿಸುವ ಕಾರ್ಯವನ್ನು ತರುಣರೂ, ಮೇಧಾವಿಗಳೂ ಆದ ಮೈಸೂರಿಗರಿಗೆ ವಹಿಸಿರುವುದೂ ಪ್ರಶಂಸನೀಯವಾಗಿದೆ. ಗ್ರಂಥಕರ್ತರ ವಿಶೇಷ ಪರಿಶ್ರಮವೂ, ನಿಷ್ಪಕ್ಷಪಾತ ವಿಮರ್ಶನ ದೃಷ್ಟಿಯೂ ಗ್ರಂಥದಲ್ಲಿ ಅಭಿವ್ಯಕ್ತವಾಗಿವೆ.

—ಡೆಕ್ಕನ್ ಹೆರಾಲ್ಡ್

ರಂಗಾಚಾರ್ಲುರವರು ಆಧುನಿಕ ಭಾರತದ ನಿರ್ಮಾಪಕರ ಸಾಲಿಗೆ ಸೇರಲು ಹೇಗೆ ಅರ್ಹರು? ಚಂದ್ರಶೇಖರ ಅವರು ಬರೆದಿರುವ, ಭಾರತಸರ್ಕಾರದ ಪ್ರಕಟನ ಶಾಖೆ ಪ್ರಕಾಶಿಸಿರುವ ಅವರ ಜೀವನ ಚರಿತ್ರೆಯನ್ನು ಓದುವಾಗ ಸ್ವಾಭಾವಿಕವಾಗಿ ಉದ್ಭವಿಸುವ ಪ್ರಶ್ನೆಯಿದು. ಈ ಗ್ರಂಥ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತದೆ. ಆ ಉತ್ತರವಾದರೋ ಬಹು ಮಹತ್ವವಾದುದು.

ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದರಿಂದ ಬ್ರಿಟಿಷರು ತಾವು ಸೈನ್ಯಬಲದಲ್ಲಿ ಉತ್ತಮರೆಂಬುದನ್ನು ತೋರಿಸಿಕೊಟ್ಟರು. ಆದರೆ ಆಡಳಿತ ನಿರ್ವಹಣೆಯಲ್ಲಿ ಅವರು ಶ್ರೇಷ್ಠರೆಂದು ಸಾಧಿಸುವುದಕ್ಕೆ ಆಗುತ್ತಿದ್ದಿತೇ? ರಂಗಾಚಾರ್ಲುರವರು ಮೊದಲು ಮದ್ರಾಸ್ ಆಧಿಪತ್ಯದಲ್ಲಿ ಅನಂತರ ಮೈಸೂರಿನಲ್ಲಿ ಬ್ರಿಟಿಷ್ ಆಡಳಿತಗಾರರ ಕೈಕೆಳಗಿನ ಅಧಿಕಾರಿಗಳಾಗಿಯೂ, ಅನಂತರ ಮೈಸೂರಿನ ದಿವಾನರಾಗಿಯೂ ಬ್ರಿಟಿಷರು ಆಡಳಿತ ಕ್ಷೇತ್ರದಲ್ಲಿ ಭಾರತೀಯರಿಗಿಂತ ಉತ್ತಮರೆಂಬ ಮಾತಿನಲ್ಲಿ ತಥ್ಯವಿಲ್ಲವೆಂಬುದನ್ನೂ, ಭದ್ರವೂ ದಕ್ಷವೂ ಪ್ರಾಮಾಣಿ

ಕವೂ, ಜನಗಳ ಅಗತ್ಯಗಳೇನೆಂಬುದನ್ನು ಅರಿತು ಅವನ್ನು ಪೂರೈಸುವುದರಲ್ಲಿ ಕೃತ ನಿಶ್ಚಯವುಳ್ಳದ್ದೂ ಆದ ಆಡಳಿತ ಭಾರತದಲ್ಲಿ ರೂಪಗೊಳ್ಳಬೇಕಾದರೆ ದೇಶದ ಆಡಳಿತ ನಿರ್ವಹಣೆ ಸುಶಿಕ್ಷಿತರಾದ ಭಾರತೀಯರ ಕೈಯಲ್ಲಿರಬೇಕೆಂಬುದನ್ನೂ ತೋರಿಸಿಕೊಟ್ಟರು. ತಮ್ಮ ಅಭಿಪ್ರಾಯಗಳನ್ನು ತಾವು ಬರೆದ ಪುಸ್ತಕಗಳಲ್ಲಿ ವ್ಯಕ್ತಪಡಿಸುವ ಧೈರ್ಯ ಅವರಿಗಿದ್ದಿತು. ಆಧುನಿಕ ಭಾರತದ ನಿರ್ಮಾಣ ಭಾರತೀಯರಿಂದ ಮಾತ್ರವೇ ಸಾಧ್ಯ ಎಂಬುದು ಅವರ ಸಿದ್ಧಾಂತವಾಗಿದ್ದಿತು. ಆ ದೆಸೆಯಲ್ಲಿ ಮೊದಲ ಕ್ರಮಗಳನ್ನು ಅವರು ಮೈಸೂರಿನ ದಿವಾನರಾಗಿದ್ದಾಗ ಕೈಗೊಂಡರು.

ಸಂಸ್ಥಾನದಲ್ಲಿ ಪ್ರಾಮಾಣಿಕವೂ, ದಕ್ಷವೂ, ಮಿತವ್ಯಯವುಳ್ಳದ್ದೂ ಆದ ಆಡಳಿತವನ್ನು ಅವರು ಏರ್ಪಡಿಸಿದರಲ್ಲದೇ ಬ್ರಿಟಿಷ್ ಭಾರತದಲ್ಲಿ ಕೂಡ ಪ್ರಜಾಪ್ರತಿನಿಧಿಸಂಸ್ಥೆಗಳಿಲ್ಲದಿದ್ದಾಗ ಪ್ರಭಾವಶಾಲಿಗಳಾದ ಅನೇಕ ಶಕ್ತಿಗಳ ವಿರೋಧವಿದ್ದರೂ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಹೀಗೆ ತಾವು ಅತ್ಯುತ್ತಮ ರಾಜನೀತಿಜ್ಞರೆಂಬುದನ್ನು ಅವರು ತೋರಿಸಿಕೊಟ್ಟರು. ಅವರು ದೂರದೃಷ್ಟಿಯುಳ್ಳವರು. ರಾಜಕೀಯವಾಗಿಯೂ, ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಯಾವ ದೆಸೆಯಲ್ಲಿ ದೇಶ ಮುನ್ನಡೆಯಬೇಕೆಂಬುದನ್ನು ಅವರು ಸ್ಪಷ್ಟವಾಗಿ ಕಂಡುಕೊಂಡಿದ್ದರು. ಈ ಕಾರಣಕ್ಕಾಗಿ ಆಧುನಿಕ ಭಾರತದ ನಿರ್ಮಾಪಕರ ಪಂಕ್ತಿಯಲ್ಲಿ ಸ್ಥಾನವನ್ನು ಹೊಂದಲು ಅವರು ಅರ್ಹರಾಗಿದ್ದಾರೆ. ಈ ಗ್ರಂಥದ ಲೇಖಕರಾದ ಚಂದ್ರಶೇಖರರವರು ಈ ಮಹಾವ್ಯಕ್ತಿಯ ಜೀವನಚರಿತ್ರೆಯನ್ನು ಸಮಗ್ರವಾಗಿ ನಿರೂಪಿಸುವುದರಲ್ಲಿ ಕೃತಕೃತ್ಯರಾಗಿದ್ದಾರೆ.

ಇಲಸ್ಟ್ರೇಟೆಡ್ ವೀಕ್ಲಿ

ಈ ಗ್ರಂಥಕರ್ತರು ಆಧುನಿಕ ಭಾರತದ ನಿರ್ಮಾಪಕರಲ್ಲೊಬ್ಬರೆಂದು ಸಾರ್ವತ್ರಿಕವಾಗಿ ಮನ್ನಣೆಗಳಿಸಿರುವವರೂ, ದೇಶಾಭಿಮಾನ ದೂರದೃಷ್ಟಿಗಳಿಂದ ಪ್ರೇರಿತರಾಗಿದ್ದ ರಾಜನೀತಿಜ್ಞರೂ ಆದ ರಂಗಾಚಾರ್ಲುರವರ ಬಗೆಗೆ ಬಹು ಸ್ವಾರಸ್ಯವೂ ಬೋಧಪ್ರದವೂ ಆದ ಜೀವನಚರಿತ್ರೆಯನ್ನು ಬರೆಯುವುದರಲ್ಲಿ ಯಶಸ್ವಿಯಾಗಿದ್ದಾರೆ.

—ಸ್ವರಾಜ್ಯ

ಸೊಗಸಾಗಿ ಬರೆಯಲ್ಪಟ್ಟಿ. ಪೂರ್ಣ ಮಾಹಿತಿಗಳನ್ನೊಳಗೊಂಡ ಈ ಪುಸ್ತಕವು 'ಆಧುನಿಕ ಭಾರತದ ನಿರ್ಮಾಪಕರು' ಗ್ರಂಥಮಾಲೆಯಲ್ಲಿ ಒಂದಾಗಿದೆ.

ರಂಗಾಚಾರ್ಲು (1831–1883) ರವರ ವ್ಯಕ್ತಿತ್ವ ಮತ್ತು ಮಹತ್ಸಾಧನೆಗಳ ನಿಕಟ ಪರಿಚಯವನ್ನು ಈ ಗ್ರಂಥವು ಸಂಕ್ಷಿಪ್ತವಾಗಿ ಮಾಡಿಕೊಡುತ್ತದೆ. ರಂಗಾಚಾರ್ಲುರವರ ಭಾಷಣಗಳು, ಲೇಖನಗಳಿಂದ ಉದ್ಧೃತವಾಗಿರುವ ಭಾಗಗಳು, ಅದರಲ್ಲಿಯೂ ವಾಚಕರ ಅವಗಾಹನೆಗೆ ಒತ್ತಿ ಪ್ರಕಟಿಸಿರುವ ಭಾಗಗಳು ಅವರ ಗಮನವನ್ನು ಸೆಳೆಯುವುವಲ್ಲದೇ ಮಹಾದೇಶಭಕ್ತರೂ, ದೇಶಿಯ ಸಂಸ್ಥಾನಗಳ ನಿರ್ಮಾಪಕರಿಗೆ ಮಾರ್ಗದರ್ಶಕರೂ ಆದ ಈ ವ್ಯಕ್ತಿಯ ಬಗೆಗೆ ಹೆಮ್ಮೆ ಅಭಿಮಾನಗಳನ್ನು ಮೂಡಿಸುವುವು. ಗಾಂಭೀರ್ಯ, ದೂರದರ್ಶಿತ್ವ, ರಾಷ್ಟ್ರಹಿತಪ್ರಜ್ಞೆ ಅವುಗಳಲ್ಲಿ ಎದ್ದು ಕಾಣುತ್ತವೆ.

ವಿದ್ಯಾರ್ಥಿಗಳು, ಆಡಳಿತಗಾರರು, ರಾಜಕಾರಣಿಗಳು ಆವಶ್ಯಕವಾಗಿ ಅಭ್ಯಾಸಮಾಡಬೇಕಾದ ಗ್ರಂಥವಿದು.

—ಮದ್ರಾಸ್ ಮೈಲ್

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಸಚಿವಾಲಯ
ಭಾರತ ಸರಕಾರ